4413
4896

ಆಸ್ಥಾನ ವಿದ್ವಾನ್ ಧರ್ಮರತ್ನ
ಲಿಂ|| ಉಮಚಗಿ ಶಂಕರಶಾಸ್ತ್ರಿ ವಿರಚಿತ

ಕನ್ನಡ ಶ್ರೀಕರ ಭಾಷ್ಯ

ಭಾವಪ್ರದೀಪಿಕೆ

(ಚತುಸ್ಸೂತ್ರೀ)

R6634,5x1,1:9
33K8

ಪ್ರಕಾಶಕರು :
ಶ್ರೀ ಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನ
ಜ್ಞಾನಗುರು ವಿದ್ಯಾಪೀಠ

CC-0. Jangamwadi Math Collection. Digitized by eGangotri

R6634,5x1,1:9 4896
33K8
Shankarshastri.
Kannada shrikara-
bhasya bhava-
pradipike.
30.7.2019

CC-0. Jangamwadi Math Collection. Digitized by eGangotri

R6634,5x1,1:9 4896
33K8

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI
*****

Please return this volume on or before the date last stamped.
Overdue volume will be charged ten paise per day.

30.7.2019		

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಆಸ್ಥಾನ ವಿದ್ವಾನ್ ಧರ್ಮರತ್ನ
ಲಿಂ|| ಉಮಚಿಗಿ ಶಂಕರಶಾಸ್ತ್ರಿ ವಿರಚಿತ

ಕನ್ನಡ ಶ್ರೀಕರ ಭಾಷ್ಯ

ಭಾವಪ್ರದೀಪಿಕೆ

(ಚತುಸ್ಸೂತ್ರೀ)

ಸಂಪಾದಕ
ಆಸ್ಥಾನ ವಿದ್ವಾನ್
ಎಂ. ಜಿ. ನಂಜುಂಡಾರಾಧ್ಯ
ಪ್ರಾಧ್ಯಾಪಕ, ಶಕ್ತಿವಿಶಿಷ್ಟಾದ್ವೈತ ವಿಭಾಗ
ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು

ಪ್ರಕಾಶಕರು :
ಶ್ರೀ ಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನ
ಜ್ಞಾನಗುರು ವಿದ್ಯಾಪೀಠ

CC-0. Jangamwadi Math Collection. Digitized by eGangotri

(ಮೊದಲ ಮುದ್ರಣ ೧,೦೦೦ ಪ್ರತಿಗಳು)

೧೯೬೮

R6634,5x1,1
33K8
1575

ಬೆಲೆ : ಎರಡು ರೂಪಾಯಿಗಳು

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI.
Acc. No. 4896 1575

ಮುದ್ರಕರು
(ಪು. ೧–೭೯) ಜಯಲಕ್ಷ್ಮೀ ಮುದ್ರಣಾಲಯ, ಚಿತ್ರದುರ್ಗ
(ಪು. ೮೦–೧೮೩) ಪ್ರಬೋಧ, ಮುದ್ರಣಾಲಯ, ಮೈಸೂರು

CC-0. Jangamwadi Math Collection. Digitized by eGangotri



ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ
೧೦೦೮ ಜಗದ್ಗುರು
ಶ್ರೀ ಸಿದ್ಧೇಶ್ವರ ರಾಜದೇಶಿಕೇಂದ್ರ
ಶಿವಾಚಾರ್ಯ ಮಹಾಸ್ವಾಮಿಗಳು

CC-0. Jangamwadi Math Collection. Digitized by eGangotri

ಶಕ್ತಿವಿಶಿಷ್ಟಾದ್ವೈತ ವಿದ್ವಾನ್
ಶ್ರೀ ಶಿವಪ್ರಕಾಶ ಶಿವಾಚಾರ್ಯ ಮಹಾಸ್ವಾಮಿಗಳು

CC-0. Jangamwadi Math Collection. Digitized by eGangotri

ಮುನ್ನುಡಿ

ವೀರಶೈವ ಸಿದ್ಧಾಂತ ಭಾರತೀಯ ದರ್ಶನ ಶಾಸ್ತ್ರಗಳಲ್ಲಿ ಶ್ರೇಷ್ಠವಾಗಿದ್ದರೂ ಪ್ರಚಾರವೃಷ್ಟಿಯಿಂದ ಬಹಳ ಹಿಂದುಳಿದೆ. ಈ ಕೊರತೆಯನ್ನು ನೀಗಿಸಲು ಉಜ್ಜಯಿನಿಯ ಸದ್ಧರ್ಮ ಪೀಠಾಧೀಶ್ವರ ಜಗದ್ಗುರು ಲಿಂಗೈಕ್ಯ ಶ್ರೀ ಸಿದ್ಧಲಿಂಗ ಶಿವಯೋಗಿಗಳವರು ಲಿಂ|| ಪಂ|| ಉಮಚಗಿ ಶಂಕರಶಾಸ್ತ್ರಿಗಳಿಗೆ ಆಶ್ರಯದಾತರಾಗಿದ್ದು ಅವರಿಂದ ಈಶ, ಕೇನ, ಮುಂಡಕ, ಸಿದ್ಧಾಂತಶಿಖೋಪನಿಷತ್ತು, ಬ್ರಹ್ಮಸೂತ್ರಗಳು ಮುಂತಾದವುಗಳಿಗೆ ವೀರಶೈವ ಭಾಷ್ಯಗಳನ್ನು ಬರೆಸಿದ್ದಾರೆ. ಇವೆಲ್ಲ ಮುದ್ರಣವಾಗಿವೆ. ಬ್ರಹ್ಮಸೂತ್ರವೃತ್ತಿ ಮುದ್ರಣವಾಗಬೇಕಾಗಿದೆ. ಸದ್ಯಃ ಶ್ರೀಕರಭಾಷ್ಯ ಚತುಸೂತ್ರೀ (ಕನ್ನಡ ಭಾವಾರ್ಥ) ಗ್ರಂಥವನ್ನು ಮುದ್ರಿಸಿ ಪ್ರಕಟಿಸುತ್ತಿದ್ದೇವೆ. ಈ ಗ್ರಂಥವನ್ನು ನಮ್ಮ ಜ್ಞಾನಗುರು ವಿದ್ಯಾಪೀಠವನ್ನು ಸ್ಥಾಪಿಸಿ ಆಶೀರ್ವದಿಸಿದ ಪೂಜ್ಯ ಜಗದ್ಗುರು ಶ್ರೀ ಸಿದ್ಧೇಶ್ವರ ರಾಜದೇಶಿಕೇಂದ್ರ ಮಹಾಸನ್ನಿಧಿಯವರಿಗೆ ಭಕ್ತಿಯಿಂದ ಅರ್ಪಿಸಲಾಗಿದೆ. ಈ ಗ್ರಂಥ ಮುದ್ರಣಕಾರ್ಯಕ್ಕೆ ಅನೇಕ ದಾನಿಗಳು ಸಹಾಯ ಮಾಡಿದ್ದಾರೆ. ಮತ್ತು ಮುದ್ರಣಕ್ಕೆ ಈ ಗ್ರಂಥವನ್ನು ಹಸ್ತಪ್ರತಿ ಮಾಡಿಕೊಟ್ಟವರು ಧಾರವಾಡ ಜಿಲ್ಲಾ ಮಾಡಳ್ಳಿ ಗ್ರಾಮದ ಶ್ರೀ ಕೆಂಡಪ್ಪ ಮಾಸ್ತರ ಶ್ರೀ ಚೆನ್ನವೀರಪ್ಪ ಕಣವಿ ಇವರು. ಪ್ರಬೋಧ ಮುದ್ರಣಾಲಯದ ಆಸ್ಥಾನವಿದ್ವಾನ್ ಶಕ್ತಿವಿಶಿಷ್ಟಾದ್ವೈತ ಪ್ರೊಫೆಸರ್ ವೇ|| ಎಂ. ಜಿ. ನಂಜುಂಡಾರಾಧ್ಯರು ಪರಿಷ್ಕರಿಸಿ ವಿಮರ್ಶಾತ್ಮಕ ಪ್ರಸ್ತಾವನೆಯನ್ನೂ ಬರೆದು ಮುದ್ರಿಸಿದ್ದಾರೆ. ಇವರು ವೀರಶೈವತತ್ವ ಪ್ರಕಟನೆಗಾಗಿ ಬಹಳವಾಗಿ ಶ್ರಮಿಸುತ್ತಿದ್ದಾರೆ. ಇವರೆಲ್ಲರಿಗೂ ಜಗದಾಚಾರ್ಯರು ಆಯುರಾರೋಗ್ಯಾದಿ ಸಕಲ ಸಂಪದಭಿವೃದ್ಧಿಯನ್ನು ಕರುಣಿಸಲೆಂದು ಹಾರೈಸುತ್ತೇವೆ.

ಕೀಲಕ ನಾಮಸಂವತ್ಸರ ಕಾರ್ತೀಕ ಬಹುಳ ಅಷ್ಟಮಿ
ದಿನಾಂಕ ೧೩–೧೧–೧೯೬೮

ಶಕ್ತಿವಿಶಿಷ್ಟಾದ್ವೈತ ವಿದ್ವಾನ್ ಪಟ್ಟಾಧ್ಯಕ್ಷ
ಶಿವಪ್ರಕಾಶ ಶಿವಾಚಾರ್ಯಸ್ವಾಮಿಗಳು
ಮೈಸೂರು ಅರಮನೆಯ
ಜಪದಕಟ್ಟೆ ಮಠಾಧ್ಯಕ್ಷರು

CC-0. Jangamwadi Math Collection. Digitized by eGangotri

ಈ ಗ್ರಂಥಕ್ಕೆ ಸಹಾಯ ಸಲ್ಲಿಸಿದವರು

೧) ಉಜ್ಜಯಿನೀಮಠದ ಶ್ರೀ ಚನ್ನಬಸವಯ್ಯನವರು, ಚಿತ್ರದುರ್ಗ
೨) ಹೊದಿಗ್ಗೆರೆಮಠದ ಶ್ರೀ ವೇ|| ನಂಜುಂಡಯ್ಯನವರು, ಸೋಮಲಾಪುರ
೩) ಶ್ರೀ ಗುರುಪಾದಯ್ಯ ಮಾಸ್ತರು, ಇಟಗಿ ಹಿರೇಮಠ, ಮಾಡಳ್ಳಿ
೪) ಲಿಂ|| ಗೂಳಯ್ಯಮಾಸ್ತರು, ಚಿಂಚಲಿ ಹಿರೇಮಠ
೫) ಶ್ರೀ ಲಿಂ|| ಯಜಮಾನ್ ನಾಗಪ್ಪನವರು, ಬೆಂಗಳೂರು

ಈ ಐವರು ೧೦೧ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಶಾಂತವೀರಪ್ಪನವರು ಕುದೇರು ಇವರು ತಮ್ಮ ಪುತ್ರ ಚಿ|| ನಾಗರಾಜನ ಶಿವದೀಕ್ಷಾ ಸಂದರ್ಭದಲ್ಲಿ ೫೧ ರೂಪಾಯಿಗಳನ್ನು ಮತ್ತು ಚಳ್ಳಕೆರೆ ತಾಲ್ಲೂಕು ಹೊಟ್ಟೆಪ್ಪನಹಳ್ಳಿ ಲಿಂ|| ಅಂಗಡಿ ಸಿದ್ದಪ್ಪನವರು ೫೧ ರೂಪಾಯಿಗಳನ್ನು ಕೊಟ್ಟಿದ್ದಾರೆ.

—ಪ್ರಕಾಶಕರು

ನಮ್ಮ ಮುಂದಿನ ಪ್ರಕಟನೆ

೧. ಬ್ರಹ್ಮಸೂತ್ರವೃತ್ತಿ

(ಲಿಂ|| ಪಂ|| ಉಮಚಿಗಿ ಶಂಕರಶಾಸ್ತ್ರಿ ವಿರಚಿತ)
ಸಂಸ್ಕೃತ ವೀರಶೈವ ಸಿದ್ಧಾಂತ ಗ್ರಂಥ
ಸಂಪಾದಕರು
ಆಸ್ಥಾನವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು

೨: ಜಗದ್ಗುರು ರೇಣುಕ ಗೀತಾ

(ಸಿದ್ಧಾಂತ ಶಿಖಾಮಣಿಯ ಇಂಗ್ಲಿಷ್ ಭಾವಾನುವಾದ)
ಅನುವಾದಕರು : ಹಸಗೋಡು ಮಠಾಧ್ಯಕ್ಷ
ಶ್ರೀ ಶಿವಕುಮಾರಸ್ವಾಮಿ, ಎಂ.ಎ.
ಶ್ರೀ ಬಸವೇಶ್ವರ ಕಾಲೇಜು, ಬಾಗಲಕೋಟೆ

CC-0. Jangamwadi Math Collection. Digitized by eGangotri



ಶ್ರೀ ಚನ್ನಬಸವಯ್ಯನವರು
ಉಜ್ಜಯಿನೀಮಠ, ಚಿತ್ರದುರ್ಗ.



ಶ್ರೀ ನಂಜುಂಡಯ್ಯವರು
ಹೊದ್ದಿಗ್ಗೆರೆಮಠ, ಸೋಮಲಾಪುರ.

CC-0. Jangamwadi Math Collection. Digitized by eGangotri



ಶ್ರೀ ಗೂಳಯ್ಯ ಮಾಸ್ತರು
ಚಿಂಚಲಿ ಹಿರೇಮಠ, ಧಾರವಾಡಜಿಲ್ಲೆ.

ಶ್ರೀ ಗುರುಪಾದಯ್ಯನವರು
ಇಟಗಿ ಹಿರೇಮಠ, ಮಾಡಳ್ಳಿ, ಧಾರವಾಡಜಿಲ್ಲೆ.

CC-0. Jangamwadi Math Collection. Digitized by eGangotri

ಪ್ರಸ್ತಾವನೆ

ಶ್ರೀಪತಿ ಪಂಡಿತ ಭಗವತ್ಪಾದಾಚಾರ್ಯರು ಮತ್ತು ಅವರು ರಚಿಸಿರುವ ಶ್ರೀಕರ ಭಾಷ್ಯವನ್ನು ಕುರಿತು ಸುಮಾರು ಏಳು ದಶಕಗಳಿಗಿಂತಲೂ ಹೆಚ್ಚು ಕಾಲ ದಿಂದ ವಿದ್ವಲ್ಲೋಕದಲ್ಲಿ ಜಿಜ್ಞಾಸೆ ನಡೆಯುತ್ತಿದೆ.

ಶ್ರೀಪತಿಪಂಡಿತಾರಾಧ್ಯರು ವೀರಶೈವ ಸಾಹಿತ್ಯದಲ್ಲಿ ಸುಪ್ರಸಿದ್ಧರು. "ಪಂಡಿತ ತ್ರಯ" ಎಂದು ಪ್ರಸಿದ್ಧರಾದ ಶ್ರೀಪತಿಪಂಡಿತ, ಮಂಚಣಪಂಡಿತ ಮತ್ತು ಮಲ್ಲಿ ಕಾರ್ಜುನಪಂಡಿತರನ್ನು ಕುರಿತು ವೀರಶೈವ ಕವಿಗಳು ಪ್ರಾಯಿಕವಾಗಿ ತಮ್ಮ ಗ್ರಂಥ ಗಳ ಆದಿಯಲ್ಲಿ ಸ್ತುತಿಸಿದ್ದಾರೆ.

ಶ್ರೀಪತಿಪಂಡಿತಾರಾಧ್ಯರ ಹೆಸರು ಪಾಲ್ಕುರಿಕೆ ಸೋಮನಾಥ ಕವಿಯ "ಮಲ್ಲಿ ಕಾರ್ಜುನ ಪಂಡಿತಾರಾಧ್ಯ ಚರಿತ್ರೆ"ಯ "ಗಣಸಹಸ್ರನಾಮ" ಮತ್ತು "ಬಸವ ಪುರಾಣ"ಗಳಲ್ಲಿ ಉಲ್ಲೇಖವಾಗಿರುವುದಲ್ಲದೆ ಶ್ರೀಪತಿಪಂಡಿತರು ಬೆಜವಾಡದಲ್ಲಿ ಚೀನಾಂ ಬರದಲ್ಲಿ ಅಗ್ನಿಯನ್ನು ಆಹ್ವಾನಿಸಿ ಬನ್ನಿಮರಕ್ಕೆ ಕಟ್ಟಿದ ಪವಾಡವು ಮಲ್ಲಿಕಾರ್ಜುನ ಪಂಡಿತಾರಾಧ್ಯರ "ಶಿವತತ್ತ್ವಸಾರಮು" "ಸಂಸ್ಕೃತ ಬಸವಪುರಾಣ" "ಬಸವೇಶ ವಿಜಯ" ಗುಬ್ಬಿಮಲ್ಲಣಾರ್ಯರ "ಭಾವಚಿಂತಾರತ್ನ" ಕಾಶೀನಾಥುನಿ ವೀರಾರಾಧ್ಯ ಕೃತ "ಧರ್ಮಗುಪ್ತಾಭ್ಯುದಯ" ಮುಂತಾದ ಗ್ರಂಥಗಳಲ್ಲಿ ಪ್ರತಿಪಾದಿತವಾಗಿದೆ. ಮೇಲಾಗಿ ಮದರಾಸು ಶಾಸನ ಇಲಾಖೆಯ M.E.R. 536ನೆಯ ಪಲ್ಲಿಕೇತ ರಾಜನು ಬರೆಯಿಸಿರುವ ಶಾಸನದಲ್ಲಿಯೂ ಸ್ಪಷ್ಟವಾಗಿದೆ. ಈ ಶಾಸನವು ಬೆಜವಾಡದ ಶ್ರೀ ಮಲ್ಲೇಶ್ವರಾಲಯದಲ್ಲಿ ಇಂದಿಗೂ ವಿರಾಜಮಾನವಾಗಿದೆ.

ಕಾಲ :—ಈ ಶಾಸನದ ಕಾಲವು ಕ್ರಿ. ಶ. ೧೨ನೆಯ ಶತಮಾನವೆಂದು ಶಾಸನ ಇಲಾಖೆಯು ನಿರ್ಧರಿಸಿರುವುದರಿಂದ ಶಾಸನೋಕ್ತರಾದ ಶ್ರೀಪತಿಪಂಡಿತಾರಾಧ್ಯರು ೧೧೬೦ ಎಂದು ಸಿದ್ಧವಾಗಿದೆ.

ಹೀಗಿದ್ದರೂ ಶ್ರೀಕರ ಭಾಷ್ಯವನ್ನು ಸಮಗ್ರವಾಗಿ ಸಂಪಾದಿಸಿ ೧೯೩೬ರಲ್ಲಿ ಬೆಂಗಳೂರು ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿರುವ ರಾಜಚರಿತ ವಿಶಾರದ ದಿ|| ಸಿ. ಹಯವದನರಾಯರು ಶ್ರೀಪತಿಯ ಶ್ರೀಕರ ಭಾಷ್ಯದಲ್ಲಿ "ಮಧ್ವ" ಪದವು ಪ್ರಯುಕ್ತ ವಾಗಿರುವುದರಿಂದ ಶ್ರೀಪತಿಪಂಡಿತಾರಾಧ್ಯರು, ಮಧ್ವಾಚಾರ್ಯ (ಕ್ರಿ. ಶ. ೧೪೮೦) ರ ತರುವಾಯ ತಮ್ಮ ಭಾಷ್ಯವನ್ನು ಬರೆದಿರಬೇಕೆಂದು ಸಮರ್ಥಿಸಿದ್ದಾರೆ.

ಆದರೆ ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿರುವ ದಿ|| ಡಾ|| ಚಿಲ ಕೂರಿ ನಾರಾಯಣರಾಯರು ತಾವು ಸಂಪಾದಿಸಿರುವ ಮಲ್ಲಿಕಾರ್ಜುನ ಪಂಡಿತಾ ರಾಧ್ಯ ಚರಿತ್ರೆಯ ಪೀಠಿಕೆ (ಪು. ೫೯-೬೧) ಯಲ್ಲಿ ಶ್ರೀ ಹಯವದನರಾಯರು ಶ್ರೀಪತಿ ಯ ಕಾಲದ ಬಗ್ಗೆ ಮಾಡಿರುವ ವಾದವು ನಿರಾಧಾರವಾದುದೆಂದು ಹೇಳಿ ಶ್ರೀ ಹಯ ವದನರಾಯರಿಗೆ ಶ್ರೀಕರ ಭಾಷ್ಯ ಮೂಲಪ್ರತಿಯನ್ನು ಕೊಟ್ಟಿರುವ ದೇವಿಡೀ

CC-0. Jangamwadi Math Collection. Digitized by eGangotri

ಸಂಸ್ಥಾನದ ಜಮೀನ್‌ದಾರ್ ಅವರು ಮೂಲವನ್ನು ಪರಿಶೋಧಿಸಿ ಆ ಸ್ಥಳದಲ್ಲಿ "ಮಧ್ವ" ಪದಪ್ರಯೋಗವಿಲ್ಲವೆಂದು ಬರೆದಿರುವ ಪತ್ರವನ್ನು ಉಲ್ಲೇಖಿಸಿ ಶ್ರೀಪತಿ ಪಂಡಿತರ ಕಾಲವು ೧೧ನೆಯ ಶತಮಾನವೆಂಬ ತೀರ್ಮಾನಕ್ಕೆ ಬಂದಿದ್ದಾರೆ.

ಇದೇ ವಿಷಯವನ್ನು ಸಮರ್ಥಿಸಿ ಡಾ|| ಎಸ್. ಶ್ರೀಕಂಠಶಾಸ್ತ್ರಿ ಅವರು ಶ್ರೀಕರ ಭಾಷ್ಯದಲ್ಲಿ ೧೦೭೦–೧೧೨೦ರವರೆಗಿದ್ದ ರಾಮಾನುಜಾಚಾರ್ಯರ ಭಾಷ್ಯ ಖಂಡನೆಯು ಇರುವುದರಿಂದಲೂ ಮತ್ತು ಕ್ರಿ. ಶ. ೧೨ನೆಯ ಶತಮಾನದ ಬಸವಾದಿ ಶಿವಶರಣರ ಹಾಗೂ ಮಧ್ವಾಚಾರ್ಯ ಭಾಷ್ಯದ ಪಂಕ್ತಿಗಳನ್ನು ಎಲ್ಲಿಯೂ ಉಲ್ಲೇಖಿಸದಿರುವುದರಿಂದಲೂ ಶ್ರೀಪತಿಪಂಡಿತಾರಾಧ್ಯರ ಕಾಲವು ಕ್ರಿ. ಶ. ೧೦೮೦–೧೧೨೦ ಎಂದು ಬರೆದಿದ್ದಾರೆ.೧

ವಿಮರ್ಶಾಗ್ರೇಸರ ಶ್ರೀ ಬಂಡಾರುತಮ್ಮಯ್ಯನವರು ಸಹ ಶ್ರೀಪತಿಪಂಡಿತನ ಕಾಲವನ್ನು ಕ್ರಿ. ಶ. ೧೦೭೦ ಎಂದು ಹೇಳಿ ಶ್ರೀಕರ ಭಾಷ್ಯವು ಶ್ರೀಪತಿಪಂಡಿತ ಕರ್ತೃಕವೆಂದು ಘೋಷಿಸಿದ್ದಾರೆ.೨

ಶ್ರೀಕರಭಾಷ್ಯದ ಉಲ್ಲೇಖಗಳು

ಶ್ರೀಪತಿಪಂಡಿತಾರಾಧ್ಯರು ಭಾಷ್ಯವೊಂದನ್ನು ಬರೆದಿರುವ ವಿಷಯದಲ್ಲಿ ಸಾಸಲ ಚಿಕ್ಕಣಾರಾಧ್ಯ (ಕ್ರಿ. ಶ. ೧೪೫೦)೩ ಪಂಚಬ್ರಹ್ಮೋದಯ ಭಾಷ್ಯದಲ್ಲಿ ಶ್ರೀಪತಿಯು "ಆರಾಧ್ಯ ಸಂಹಿತೆ" ಎಂಬ ೩೬ ಸಾವಿರ ಗ್ರಂಥ ಪರಿಮಾಣವೂ ೧೬ ಅಧ್ಯಾಯಗಳೂ ಉಳ್ಳ ಭಾಷ್ಯವನ್ನು ಬರೆದಿರುವನು" ಎಂದು ಹೇಳುವ ಭಾಷ್ಯವು ನಾಲ್ಕು ಅಧ್ಯಾಯಗಳ ೧೬ ಪಾದಗಳುಳ್ಳ ಶ್ರೀಕರಭಾಷ್ಯವಲ್ಲದೆ ಬೇರೆ ಅಲ್ಲ.

ಕ್ರಿ. ಶ. ೧೬೦೦ರಲ್ಲಿದ್ದ ನಂದಿಕೇಶ್ವರ ಶಿವಾಚಾರ್ಯರು ತಮ್ಮ ಲಿಂಗಧಾರಣ ಚಂದ್ರಿಕೆಯಲ್ಲಿ ಶ್ರೀಕರ ಭಾಷ್ಯದಿಂದ ಅನೇಕ ವಾಕ್ಯಘಟ್ಟಗಳನ್ನು ಸ್ವೀಕರಿಸಿರುವುದಲ್ಲದೆ "ಸರ್ವಲಿಂಗಗ್ಂ ಸ್ಥಾಪಯತಿ" ಎಂಬ ಮಂತ್ರಕ್ಕೆ ವಿದ್ಯಾರಣ್ಯರು ತಮ್ಮ ವೇದ ಭಾಷ್ಯದಲ್ಲಿ ಲಿಂಗಧಾರಣ ಪರವಾಗಿ ವ್ಯಾಖ್ಯಾನ ಮಾಡದಿದ್ದರೂ

"ತೈರವ್ಯಾಖ್ಯಾತತ್ವೇಽಪಿ ಕಾಲಹಸ್ತಿದೀಕ್ಷಿತ, ಮಂಚಣ್ಣ,
ಪಂಡಿತಾರಾಧ್ಯ ಪ್ರಭೃತಿಭಿಃ ತತ್ಪರತ್ವೇನ ವ್ಯಾಖ್ಯಾತತ್ವಾತ್"೪.

ಎಂದರೆ ಕಾಲಹಸ್ತಿದೀಕ್ಷಿತ, ಮಂಚಣಪಂಡಿತ ಮತ್ತು ಪಂಡಿತಾರಾಧ್ಯರು ಲಿಂಗ

೧The date of Srikara Bhasya Annals of "The Bhandarkar Oriental Research Institute vol. xix Part II P. 153 (1938)" and "Sousces of Karnataka History vol. i 1940"

೨ಚಾಲುಕ್ಯ ಸೋಮನಾಥ ಕವಿ ಪು. ೧೨೪.

೩ಕನ್ನಡ ಕವಿಚರಿತೆ ಭಾಗ III ಪು. ೩೭೯.

೪ಲಿಂಗಧಾರಣ ಚಂದ್ರಿಕಾ (ಕಾಶೀ. ಪು. ೮೩)

CC-0. Jangamwadi Math Collection. Digitized by eGangotri

ಧಾರಣಪರವಾಗಿ ವ್ಯಾಖ್ಯಾನ ಮಾಡಿದ್ದಾರೆ ಎಂದು ಹೇಳಿರುವುದಲ್ಲದೆ ಕ್ರಿ. ಶ. ೧೩ನೆಯ ಶತಮಾನದವರೆಂದು ಹೇಳಲಾಗಿರುವ ಸ್ವಪ್ರಭಾನಂದ ಶಿವಾಚಾರ್ಯರು "ಶಿವಾದ್ವೈತ ಮಂಜರಿ"ಯಲ್ಲಿಯೂ, ೧೪ನೆಯ ಶತಮಾನದ "ಕ್ರಿಯಾಸಾರ"ದಲ್ಲಿಯೂ, ೧೬ನೆಯ ಶತಮಾನದ ಮರಿತೋಂಟದಾರ್ಯರ "ವೀರಶೈವಾನಂದ ಚಂದ್ರಿಕೆ" ಮತ್ತು ವೃಷಭಪಂಡಿತ ವಿರಚಿತ ತೈತ್ತಿರೀಯೋಪನಿಷದ್ಭಾಷ್ಯಗಳಲ್ಲಿ ಶ್ರೀಕರಭಾಷ್ಯದಿಂದ ಅನೇಕ ಅವತರಣಗಳನ್ನು ಸ್ವೀಕರಿಸಿರುವುದು ಈ ಗ್ರಂಥಗಳನ್ನು ಸಾವಧಾನವಾಗಿ ಓದುವುದರಿಂದ ವೇದ್ಯವಾಗುತ್ತದೆ. ತೈತ್ತಿರೀಯೋಪನಿಷದ್ಭಾಷ್ಯದಲ್ಲಂತೂ "ಶ್ರೀಪತಿಪಂಡಿತ ಗುರವೇ ನಮಃ" ಎಂದು ಪದೇಪದೇ ಪ್ರಯೋಗಿಸಲಾಗಿದೆ.

ಹೀಗಿದ್ದರೂ ಕೆಲವರು ಶ್ರೀಕರಭಾಷ್ಯವು ಶ್ರೀಪತಿಪಂಡಿತ ಕರ್ತೃಕವಲ್ಲವೆಂದು ವಾದಿಸತೊಡಗಿದರು. ಆದರೆ ದಿ|| ಚಿ. ನಾರಾಯಣರಾಯರು ಶ್ರೀಕರ ಭಾಷ್ಯವನ್ನು ಶ್ರೀಪತಿಯೇ ಬರೆದಿರುವನು" ಎಂದು ಸಕಾರಣವಾಗಿ ಘೋಷಿಸಿದರು.೧ ಒಟ್ಟಿನಲ್ಲಿ ಮೇಲೆ ಕಂಡ ವಿದ್ವಾಂಸರ ಅಭಿಪ್ರಾಯಗಳಿಂದ ಶ್ರೀಪತಿಯು ಕ್ರಿ. ಶ. ೧೧ನೆಯ ಶತಮಾನದಲ್ಲಿ ಬೆಜವಾಡದಲ್ಲಿದ್ದು ಶ್ರೀಕರ ಭಾಷ್ಯವನ್ನು ರಚಿಸಿರುವನೆಂದು ಇಂದು ಸಿದ್ಧವಾಗಿದೆ.

ಶ್ರೀಪತಿಯ ವಂಶ, ದೇಶ ಮತ್ತು ಗುರು ಪರಂಪರೆ

ಶ್ರೀಪತಿ ಪಂಡಿತ, ಶಿವಲೆಂಕ ಮಂಚಣಪಂಡಿತ ಮತ್ತು ಉದ್ಭಟಾರಾಧ್ಯ ಮುಂತಾದವರು ಮೊದಲು ಆರಾಧ್ಯ ಬ್ರಾಹ್ಮಣವರ್ಗಕ್ಕೆ ಸೇರಿದವರಾಗಿದ್ದು ಋಷಿಗೋತ್ರಗಳನ್ನು ಹೊಂದಿದ್ದ ಬಗ್ಗೆ ಆಧಾರಗಳಿವೆ. ಶ್ರೀಪತಿಯು "ಕೌಶಿಕಗೋತ್ರ ಪವಿತ್ರ ಶ್ರೀಪತಿ ಪಂಡಿತಾರಾಧ್ಯ"೨ ಎಂದೂ, ಮಂಚಣಪಂಡಿತನು "ಅತ್ರಿಗೋತ್ರಸ್ಯ ಶಿವಲೆಂಕ ಮಂಚಣಪಂಡಿತಾರಾಧ್ಯ ಪ್ರವರಸ್ಯ"೩ ಮುಂತಾದ ಉಲ್ಲೇಖಗಳಿಂದ ಇವರು ಕೌಶಿಕ, ಅತ್ರಿ ಮುಂತಾದ ಋಷಿಗೋತ್ರಜರಾಗಿದ್ದರಲ್ಲದೆ ಇವರೆಲ್ಲರೂ ಮೊದಲು ಕಾಶೀ ನಿವಾಸಿಗಳಾಗಿದ್ದು ತರುವಾಯ ಶ್ರೀಶೈಲ ಶಿವಾಚಾರ್ಯರಿಂದ ಶಿವದೀಕ್ಷೆಯನ್ನು ಹೊಂದಿ ದಕ್ಷಿಣಕ್ಕೆ ಆಗಮಿಸಿ ಆಂಧ್ರ, ಕರ್ನಾಟಕ ಪ್ರಾಂತಗಳಲ್ಲಿ ನೆಲೆಸಿದಂತೆಯೂ ತಿಳಿದುಬರುತ್ತದೆ.೪ ಶ್ರೀಪತಿಯು ಶ್ರೀಶೈಲದ ಜಗದ್ಗುರು ವಿರೂ

೧ಮ. ಪಂಡಿತಾರಾಧ್ಯ ಚರಿತ್ರೆ ಪು. ೩೧-೩೨.

೨ವೀರಣಾಮಾತ್ಯ ಕೃತ "ಭಲ್ಲಾತಚರಿತ್ರ" "ಪಟ್ಟಾಭಿರಾಮ ವಿಲಾಸಮು" "ಗುರು ಸ್ತೋತ್ರಮು"

೩ಕಾಶಕೃತ್ಸ್ನ ಶಬ್ದಧಾತುಕಲಾಪ ಡಾ|| ಎ. ಎನ್. ನರಸಿಂಹಯ್ಯ, ಡೆಕ್ಕನ್ ಕಾಲೇಜ ಪೂನಾ, ಪ್ರಕಟಣೆ.

೪ಶ್ರೀಶೈಲ ಪಂಡಿತಾರಾಧ್ಯ ಚರಿತ್ರೆ (ಪುಲ್ಲಕವಿ) ಪೀಠಿಕೆ ಮತ್ತು ಶ್ರೀಕರಭಾಷ್ಯ ಪೀಠಿಕೆ ೧೯೭೩ (ಸಿಕಿಂದ್ರಾಬಾದ್ ಪ್ರಕಟಣೆ).

CC-0. Jangamwadi Math Collection. Digitized by eGangotri

ಪಾಕ್ಷ ದೇಶಿಕೇಂದ್ರ ಶಿವಾಚಾರ್ಯರಿಂದ ಕಾಶಿಯಲ್ಲಿ ನಿಗ್ರಹಿಸಲ್ಪಟ್ಟು ಅವರಿಂದ ದೀಕ್ಷೆ ಹೊಂದಿ "ಯತಿಪರಿವೃಢ"ನೆನಿಸಿ ಬೆಜವಾಡದಲ್ಲಿ ಶ್ರೀಶೈಲಪೀಠದ ಶಿಷ್ಯ ರೆನಿಸಿದ್ದ ತೇಲಿಕ (ಗಾಣಿಗ ಸಜ್ಜನ) ಜನಾಂಗದ ಗುರುವೆನಿಸಿದ ಬಗ್ಗೆ ವಿಪುಲ ವಾದ ಆಧಾರಗಳಿವೆ.೧

ಶ್ರೀಪತಿಯು ಶ್ರೀಕರ ಭಾಷ್ಯದಲ್ಲಿ ಸ್ತುತಿಸಿರುವ ರೇವಣಸಿದ್ಧ, ಮರುಳಸಿದ್ಧ ಮತ್ತು ಏಕೋರಾಮಾಖ್ಯ "ದೇಶಿಕೇಂದ್ರ"ರು ಐತಿಹಾಸಿಕ ವ್ಯಕ್ತಿಗಳು. ಇವರು ಬಸವಣ್ಣನವರ ಅವತಾರಕ್ಕೆ ಮೊದಲೇ ಕರ್ಣಾಟಕಾಂಧ್ರ ಪ್ರದೇಶಗಳಲ್ಲಿ ಅವತರಿಸಿ ಲಿಂಗಾಂಗಿ ಧರ್ಮದ ಹೆಚ್ಚಳಮಾಡಿದ್ದ ಬಗ್ಗೆ ವೀರಶೈವ ಸಾಹಿತ್ಯದಲ್ಲಿ ಉಲ್ಲೇಖ ಗಳಿವೆ. ಬಸವಣ್ಣನವರ ಕಿರಿಯ ಸಮಕಾಲೀನನೆನಿಸಿದ ಆದಯ್ಯನ ವಚನಗಳಲ್ಲಿ ಇವರ ಪ್ರಸ್ತಾಪವಿದೆ.

"ರೇವಣಸಿದ್ದಯ್ಯದೇವರ ನಿಷ್ಠೆ, ಏಕೋರಾಮ ತಂದೆಗಳ ಮಹಿಮೆ, ಮರುಳ ಸಿದ್ಧದೇವರ ಆದೃಷ್ಟ ಪ್ರಸಾದನಿಷ್ಠೆ, ಏಕೋರಾಮಯ್ಯಗಳ ಆಚಾರನಿಷ್ಠೆ, ಪಂಡಿತಾ ರಾಧ್ಯರ ಸ್ವಯಂಪಾಕ"

"ರೇವಣಸಿದ್ಧದೇವರೆನ್ನ ಪುಣ್ಯನೇತ್ರ, ಸಿದ್ಧರಾಮ ತಂದೆಗಳೆನ್ನನೇತ್ರದ ದೃಕ್ಕು, ಮರುಳಸಿದ್ಧದೇವರೆನ್ನ ಶ್ರೋತ್ರ, ಪಂಡಿತಾರಾಧ್ಯರೆನ್ನ ಜಿಹ್ವೆ, ಏಕೋ ರಾಮಯ್ಯಗಳೆನ್ನ ನಾಸಿಕ"೨ ಇತ್ಯಾದಿ.

ಕ್ರಿ. ಶ. ಸುಮಾರು ೧೦-೧೧ನೆಯ ಶತಮಾನಗಳಲ್ಲಿದ್ದರೆಂದು ತಿಳಿದುಬಂದಿರುವ ಶ್ರೀಪತಿಯ ದೀಕ್ಷಾಗುರು ಜಗದ್ಗುರು ವಿರೂಪಾಕ್ಷದೇಶಿಕೇಂದ್ರರು ತಮ್ಮ ಅಮೋಘ ತಪಃಪ್ರಭಾವಗಳಿಂದ "ಏಕೋರಾಮ" "ದೇಶಿಕೇಂದ್ರ" ಮುಂತಾದ ಹೆಸರುಗಳಿಂದ ಪ್ರಖ್ಯಾತರಾಗಿದ್ದ ಬಗ್ಗೆ ನಾನು ಪ್ರಕಟಿಸಿರುವ "ವೈರಾಗ್ಯಸಿದ್ಧ ವಿರೂಪಾಕ್ಷದೇಶಿ ಕೇಂದ್ರ" ಗ್ರಂಥದ ಪೀಠಿಕೆಯಲ್ಲಿ ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ.

ಶ್ರೀಕರಭಾಷ್ಯ ಪ್ರಕಟಣೆಗಳು

ದಿ|| ಹಯವದನರಾಯರ ತರುವಾಯ ಮೈಸೂರಿನಲ್ಲಿ ಲಿಂ|| ಪಂಡಿತ ಕಾಶೀ ನಾಥಶಾಸ್ತ್ರಿಗಳು ೧೯೩೬ರಲ್ಲಿ ಬೆಂಗಳೂರು ಪ್ರೆಸ್ಸಿನ ಶ್ರೀಕರಭಾಷ್ಯವನ್ನು ಪರಿಷ್ಕರಿಸಿ ಅಲ್ಲಲ್ಲಿ ಕೆಲವು ತಿದ್ದುಪಡಿಗಳೊಡನೆ "ಚತುಸ್ಸೂತ್ರಿ"ಯನ್ನು ಕನ್ನಡದಲ್ಲಿ ಪ್ರಕಟಿಸಿ ದರು. ಆ ತರುವಾಯ ವಾರಣಾಸಿಯಲ್ಲಿ ಮಹಾ ಪಂಡಿತರೆನಿಸಿದ್ದ ಲಿಂ|| ಚಿದರೆಮಠ ವೀರಭದ್ರಶರ್ಮರು (ಕಾಶೀವಿಶ್ವಾರಾಧ್ಯ ಜಗದ್ಗುರು ಪೀಠಾಧ್ಯಕ್ಷರು) ಸಂಸ್ಕೃತ ಲಿಪಿ

೧ಹಯವದನರಾಯರ ಶ್ರೀಕರಭಾಷ್ಯ ಉಪೋದ್ಘಾತ ಮತ್ತು ಪಾಲ್ಕುರಿಕೆ ಸೋಮನಾಥನ? — ಪುಲ್ಲಕವಿ ಕೃತ ಶ್ರೀಶೈಲ ಪಂಡಿತಾರಾಧ್ಯ ಚರಿತ್ರೆ (ಆಶ್ವಾಸ ೧)

೨ಆದಯ್ಯನ ವಚನಗಳು, ಉತ್ತಂಗಿ ಚನ್ನಪ್ಪ, ಧಾರವಾಡ ಪ್ರಕಟನೆ ೧೯೩೩

CC-0. Jangamwadi Math Collection. Digitized by eGangotri

ಯಲ್ಲಿ ಅದೇ ಚತುಸ್ಸೂತ್ರಿಯನ್ನು ಪ್ರಕಟಿಸಿದರು. ಈಚೆಗೆ ೧೯೭೩ರಲ್ಲಿ ಮೈಸೂರಿನ ಡಾ|| ಟಿ. ಜಿ. ಸಿದ್ಧಪ್ಪಾರಾಧ್ಯರು ಸಮಗ್ರ ಶ್ರೀಕರಭಾಷ್ಯದ ಮೂಲವನ್ನು ಕನ್ನಡ ಭಾಷಾಂತರದೊಂದಿಗೆ ಎರಡು ಸಂಪುಟಗಳಲ್ಲಿ ಕನ್ನಡ ಲಿಪಿಯಲ್ಲಿ ಪ್ರಕಟಿಸಿದ್ದಾರೆ. ಶ್ರೀಯುತ ಆರಾಧ್ಯರು ಗ್ರಂಥವನ್ನು ಸಂಪಾದಿಸಿರುವ ವೈಖರಿ, ಅವರೆಸಗಿದ ತಿದ್ದುಪಡಿಗಳು ಮುಂತಾದುವನ್ನು "ಶ್ರೀಶೈಲ ಪೀಠದರ್ಶನ ಪುಟ ೧೦೦–೧೩೧ರಲ್ಲಿ ವಿಸ್ತಾರವಾಗಿ ವಿಶ್ಲೇಷಿಸಿರುತ್ತೇನೆ.

ಆಸ್ಥಾನವಿದ್ವಾನ್ ಧರ್ಮರತ್ನಂ ಲಿಂ|| ಉಮಚಿಗಿ ಶಂಕರಶಾಸ್ತ್ರಿಗಳವರು ಕನ್ನಡಿಸಿರುವ ಶ್ರೀಕರಭಾಷ್ಯ ಚತುಸ್ಸೂತ್ರಿಯು ಇಂದು ತತ್ತ್ವಜಿಜ್ಞಾಸುಗಳ ಕರಕಮಲಗಳಲ್ಲಿ ಸಮರ್ಪಿಸಲಾಗುತ್ತಿದೆ. ಇದು ಉಜ್ಜಯಿನಿಯ ಸದ್ಧರ್ಮ ಸಿಂಹಾಸನ ಜ್ಞಾನಗುರು ವಿದ್ಯಾಪೀಠದ ಆಶ್ರಯದಲ್ಲಿ ಪ್ರಕಟವಾಗಿದೆ. ಮೇಲೆ ಕಂಡ ವಿದ್ಯಾಪೀಠದ ಸಂಚಾಲಕರಾದ ಶಕ್ತಿವಿಶಿಷ್ಟಾದ್ವೈತ ವಿದ್ವಾನ್ ಪಟ್ಟಾಧ್ಯಕ್ಷ ಶ್ರೀ ಶಿವಪ್ರಕಾಶಸ್ವಾಮಿಯವರು (ಮೈಸೂರು ಅರಮನೆ ಜಪದಕಟ್ಟೆಮಠದ ಸ್ಥಿರಪಟ್ಟಾಧ್ಯಕ್ಷ ಇಮ್ಮಡಿ ಸದಾಶಿವ ಶಿವಾಚಾರ್ಯಸ್ವಾಮಿಗಳು) ವರ್ಧಿಷ್ಣುಗಳೂ ಅನೇಕ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ವಿದ್ಯಾಪಕ್ಷಪಾತಿಗಳೂ, ಸಮಾಜ ಸಂಸ್ಕೃತಿ ಪ್ರೇಮಿಗಳೂ ಆಗಿದ್ದಾರೆ. ಇವರು ಇದೇ ಲಿಂ|| ಉಮಚಿಗಿ ಶಂಕರಶಾಸ್ತ್ರಿಗಳವರ "ಬ್ರಹ್ಮಸೂತ್ರ ಶಾಂಕರೀವೃತ್ತಿ" (ಅಪೂರ್ಣ) ಎಂಬ ಮತ್ತೊಂದು ಅಮೋಘ ಗ್ರಂಥವನ್ನು ಶುದ್ಧವಾಗಿ ಸಂಪಾದಿಸಲು ನನಗೆ ಅಪ್ಪಣೆ ಮಾಡಿರುತ್ತಾರೆ. ಅದು ಸಹ ಅಚ್ಚಿಗೆ ಅಣಿಯಾಗಿದೆ. ಸಂಸ್ಕೃತ ತತ್ತ್ವಸಾಹಿತ್ಯ ಪ್ರಚಾರದಲ್ಲಿ ಪೀಠಾಧಿಪತಿಗಳು ಆಸಕ್ತಿಯನ್ನು ತೋರಿದಿರುವ ಈ ಸಮಯದಲ್ಲಿ ಶ್ರೀಯವರ ಉದ್ಯಮವು ಒಂದು ಆಶಾಕಿರಣವನ್ನು ಮೂಡಿಸುತ್ತದೆ. ಸಹೃದಯಲೋಕ ಇವರ ಸ್ತುತ್ಯಪ್ರಯತ್ನವನ್ನು ಪ್ರೋತ್ಸಾಹಿಸಿ ಕೃತಕೃತ್ಯವಾಗಲೆಂದು ಹಾರೈಸುತ್ತೇನೆ.

ಲಿಂಗೈಕ್ಯ ಉಮಚಿಗಿ ಶಂಕರಶಾಸ್ತ್ರಿಗಳವರು ಈಶ, ಕೇನ, ಸಿದ್ಧಾಂತಶಿಖಾ ಮತ್ತು ಮುಂಡಕ ಉಪನಿಷತ್ತುಗಳಿಗೆ ವೀರಶೈವ ಸಿದ್ಧಾಂತ ಪರವಾಗಿ ಬರೆದಿರುವ ಭಾಷ್ಯಗಳು ಈಗಾಗಲೆ ಪ್ರಕಟವಾಗಿವೆ. ಅವರು ರಚಿಸಿದ್ದ "ಬ್ರಹ್ಮೋಪದೇಶವಿಧಿ" ಮತ್ತು "ಸಿದ್ಧಾಂತ ಸುಧಾಕರ" (ವಾದಕಾಂಡ) ಗಳೂ ಸಹ ಹಿಂದೆಯೇ ಬೆಳಕು ಕಂಡಿವೆ. ಎಲ್ಲ ದೃಷ್ಟಿಯಿಂದಲೂ ಶ್ರೀ ಶಾಸ್ತ್ರಿಗಳವರ "ಚತುಸ್ಸೂತ್ರಿ"ಯ ಕನ್ನಡ ಭಾಷಾಂತರವು ಸರ್ವೋತ್ಕೃಷ್ಟವಾಗಿದೆ.

ಪ್ರಕೃತ ಗ್ರಂಥವನ್ನು ಶ್ರೀ ಶಿವಪ್ರಕಾಶಸ್ವಾಮಿಗಳು ತಾವು ಪ್ರಕಟಿಸುತ್ತಿದ್ದ "ಸದ್ಧರ್ಮಪ್ರಭಾ" ತ್ರೈಮಾಸಿಕದಲ್ಲಿ ಭಾಗಶಃ ಪ್ರಕಟಿಸುತ್ತಿದ್ದು ಪುಟ, ೮೦ರ ತರುವಾಯ ಅದರ ಸಂಪಾದನೆಯ ಹೊಣೆಯನ್ನು ನನಗೆ ವಹಿಸಿದರು. ಮುಂದೆ ಅದನ್ನು ಯಥಾಮತಿ ಸಂಪಾದಿಸಿದ್ದೇನೆ. ಇಲ್ಲಿ ಓದುಗರ ಸೌಕರ್ಯಕ್ಕಾಗಿ ವಿಷಯಗಳನ್ನು ವಿಂಗಡಿಸಿ ಅಲ್ಲಲ್ಲಿ ಶೀರ್ಷಿಕೆಗಳನ್ನು ಕೊಟ್ಟಿರುವುದಲ್ಲದೆ ವಾದಭಾಗಗಳನ್ನು

CC-0. Jangamwadi Math Collection. Digitized by eGangotri

ಶಂಕಾ ಮತ್ತು ಸಮಾಧಾನ ಎಂದು ಪ್ರತ್ಯೇಕಿಸಲಾಗಿದೆ. ಮೇಲಾಗಿ ಭಾಷ್ಯೋಕ್ತ ಶ್ರುತಿವಾಕ್ಯಗಳಿಗೆ ಆಯಾ ಉಪನಿಷತ್ತುಗಳ ಅಧ್ಯಾಯ, ಮಂತ್ರಗಳ ಸಂಖ್ಯೆಗಳನ್ನು ಸಹ ಗುರ್ತಿಸಲಾಗಿದೆ. ತತ್ವಜಿಜ್ಞಾಸುಗಳು ಗ್ರಂಥವನ್ನು ಸಾವಧಾನವಾಗಿ ಓದಿ ಭಾಷ್ಯಕಾರರ ಹಾಗೂ ಭಾಷಾಂತರಕಾರರ ಶ್ರಮವನ್ನು ಸಾರ್ಥಕಗೊಳಿಸುವರೆಂದು ಭಾವಿಸಿದೆ. ಅವಕಾಶಪೂರ್ವಕದಲ್ಲಿ ಇದರ ಪುನರ್ಮುದ್ರಣದಲ್ಲಿ ಸಮಗ್ರ ಗ್ರಂಥವನ್ನು ಇದೇ ಮಾದರಿಯಲ್ಲಿ ಪರಿಷ್ಕರಿಸಿ ಪ್ರಕಟಿಸುವ ಮನೀಷೆಯಿದೆ.

ಈ ಗ್ರಂಥ ಮುದ್ರಣಕ್ಕಾಗಿ ಉದಾರವಾಗಿ ಸಹಾಯಮಾಡಿರುವ ಉಜ್ಜಯಿನೀ ಮಠದ ಶ್ರೀ ಚನ್ನಬಸವಯ್ಯನವರು, ಚಿತ್ರದುರ್ಗ ; ಹೊದ್ದಿಗ್ಗೆರೆ ಮಠದ ಶ್ರೀ ನಂಜುಂಡಯ್ಯನವರು, ಸೋಮಲಾಪುರ ; ಧಾರವಾಡ ಜಿಲ್ಲೆಯ ಚಿಂಚಲಿ ಹಿರೇಮಠದ ಶ್ರೀ ಗೂಳಯ್ಯ ಮಾಸ್ತರು ಮತ್ತು ಇಟಗಿ ಹಿರೇಮಠದ ಶ್ರೀ ಗುರುಪಾದಯ್ಯನವರು ಮಾಡಳ್ಳಿ, ಇವರಿಗೆ ಜಗದಾಚಾರ್ಯರು ಸರ್ವಸೌಭಾಗ್ಯಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಇಂತು ಸುಜನವಿಧೇಯ

೧–೧೦–೧೯೬೮
ಕೀಲಕ ಸಂ॥
ವಿಜಯದಶಮಿ

ಎಂ. ಜಿ. ನಂಜುಂಡಾರಾಧ್ಯ

CC-0. Jangamwadi Math Collection. Digitized by eGangotri

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ನತ್ವಾ ಸೋಮಂ ಮಹಾದೇವಂ ಲಿಂಗರೂಪಿಣಮವ್ಯಯಂ।
ಕುರ್ವೇ ಶ್ರೀಕರ ಭಾಷ್ಯಸ್ಯ ವ್ಯಾಖ್ಯಾ ಕರ್ಣಾಟ ಭಾಷಯಾ ॥೧॥

ಶ್ರೀಕರ ಭಾಷ್ಯ

ಭಾ. ವ್ಯಾ :— ವೇದಾದ್ಯಂತಗಳಲ್ಲಿ ಪಠಿತವಾಗಿರುವ ಮೂಲ ಪ್ರಣವ ಪ್ರತಿಪಾದ್ಯನೂ, ಲಿಂಗರೂಪಿಯೂ, ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ, ಬಂಧ, ಮೋಕ್ಷಗಳೆಂಬ ಪಂಚ ಕೃತ್ಯಗಳಿಗೆ ಕಾರಣೀಭೂತನೂ, ವೇದಾಗಮರೂಪ, ಶಬ್ದ ಪ್ರಮಾಣಕ್ಕೆ ಮಾತ್ರ ಗೋಚರನೂ, ಭಕ್ತರ ಪ್ರಾರ್ಥನಾನುಗುಣವಾಗಿ ಫಲಸಿದ್ಧಿಯನ್ನುಂಟು ಮಾಡುವವನೂ ಆಗಿರುವ, ಪರಶಿವ ಬ್ರಹ್ಮಕ್ಕೆ ನಮಸ್ಕಾರವು. ॥೧॥

ಭಾ. ವ್ಯಾ :— ''ಭಿದ್ಯತೇ ಹೃದಯ ಗ್ರಂಥಿ ಶ್ಛಿದ್ಯಂತೆ ಸರ್ವ ಸಂಶಯಾಃ ಕ್ಷೀಯಂತೆ ಚಾಸ್ಯಕರ್ಮಾಣಿ ತಸ್ಮಿನ್ ದೃಷ್ಟೆ ಪರಾವರೇ'' ಇಂತೆಂಬ ಮುಂಡಕ ಶ್ರುತಿಯಂತೆ ಯಾವ ಚರಣ ಕಮಲದ ದರ್ಶನ ಮಾತ್ರದಿಂದಲೇ ಭಕ್ತರು ತಮ್ಮ ಸೂಕ್ಷ್ಮ ಸ್ಥೂಲ ಶರೀರಗಳ ಅಭಿಮಾನವನ್ನು ಶಿಥಿಲಗೊಳಿಸಿ, ಭವ ಬಂಧನವನ್ನು ಕತ್ತರಿಸಿ, ನಿತ್ಯ ಸುಖಿಗಳಾಗುವರೋ, ಸೂಕ್ಷ್ಮ ಶರೀರವು ತನ್ಮಾತ್ರ ಪಂಚಕತ್ರಯ ಇವುಗಳಿಂದ ಯುಕ್ತವಾದುದರಿಂದ, ಇದು ಮುಖ್ಯ ವೃತ್ತಿಯಿಂದ ಪುರ್ಯಷ್ಟಕವೆಂದು ಹೇಳಿಸಿಕೊಳ್ಳುವುದು. ಇನ್ನು ಸ್ಥೂಲ ಶರೀರವು ಇದರ ಕಾರ್ಯವಾದುದರಿಂದ, ಇದೂ ಕೂಡ ಗೌಣ ವೃತ್ತಿಯಿಂದ ಪುರ್ಯಷ್ಟಕವೆಂದು ಹೇಳಿಸಿಕೊಳ್ಳುತ್ತದೆ. ಯಾವ ಚರಣ ಕಮಲವು ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಬೌದ್ಧ ಮತಗಳೆಂಬ ಮದೋನ್ಮತ್ತ ಮಹಾ ಗಜಗಳಿಗೆ ಸಿಂಹ ಸದೃಶವೂ, ಶಿವಾದ್ವೈತ ಶಾಸ್ತ್ರದ ಜಿಜ್ಞಾಸೆಗೆ ಸಾರತರವಾದ ಮತ್ತು ಶ್ರೇಷ್ಠವಾದ ಲಿಂಗಾಂಗ ಸಾಮರಸ್ಯವೆಂಬ ಸಿದ್ಧಾಂತದಲ್ಲಿ ಪಕ್ಷಪಾತವುಳ್ಳುದೂ ಹಾಗೂ ಜಗದ್ರಕ್ಷಣ ದಕ್ಷವೂ ಆಗಿರುವದೋ; ಶಿವನೆ ಅಂತಹ ನಿನ್ನ ಚರಣ ಕಮಲವು ಭಯಂಕರವಾದ ಸಂಸಾರ ಸಾಗರದಿಂದ ದಾಟಿಸುವುದಕ್ಕೆ ನೌಕೆಯೆಂದು ನಾನು ತಿಳಿಯುವೆನು.

ಭಾ :—ಶಿವನೇ, ನಿನ್ನ ದಾಸನಿಗೆ ದಾಸನಾವನೋ; ಅವನ ದಾಸನು ನಾನೆಂಬ ಸುಬುದ್ಧಿಯನ್ನು ಜನ್ಮ ಜನ್ಮಾಂತರದಲ್ಲಿಯೂ ಕೊಟ್ಟು ಕಾಪಾಡು. ॥೩॥

CC-0. Jangamwadi Math Collection. Digitized by eGangotri

ಭಾ :— ಶಿವನೇ, ನೀನಲ್ಲದೆ ನಿನ್ನ ಯಥಾರ್ಥ ಸ್ವರೂಪವನ್ನು ಯಾವನೂ ತಿಳಿಯಲಾರನು. ಆದರೆ ನಿನ್ನ ಉಪಾಸನಾ ಬಲದಿಂದುಂಟಾದ ಅನುಗ್ರಹದಿಂದ ನಿನ್ನ ಸ್ವರೂಪರಾಗಿರುವ ನಂದಿಯೂ, ವಿಷ್ಣುವೂ, ಸ್ಕಂದ ಸ್ವಾಮಿಯೂ ತಿಳಿದು ಧನ್ಯರಾದರು. ||೪|| ಇಂತಹ ಶಿವಾಗಮಗಳ ದ್ವಾರಾ ನಿನ್ನ ತತ್ವಜ್ಞಾನಿಗಳಾಗಿ, ಆ ನಿನ್ನ ತತ್ವವನ್ನೇ ಸಚ್ಛಿಷ್ಯರಿಗೆ ಉಪದೇಶ ಮಾಡುವ ನಂದಿ ಮುಖ್ಯರಾದ ಪ್ರಮಥರನ್ನೂ ನಮಸ್ಕರಿಸಿ, ಆ ಪ್ರಮಥರ ಪಾರಂಪರ್ಯವನ್ನೂ ಹೇಳುವೆನು. ||೫||

ಭಾ:— ಸದಾಶಿವ, ಸ್ಕಂದ, ಸುಕೇಶ, ಚಂಡೀಶ್ವರ, ಭೃಂಗಿರಿಟಿ, ಶಿಲಾದ ಮೊದಲಾದ ಪ್ರಮಥರನ್ನೂ, ಶಿವಭಕ್ತ ಶಿಖಾಮಣಿಗಳಾದ ಅಗಸ್ತ್ಯ, ವಾಮದೇವಾದಿ ಋಷಿಗಳನ್ನೂ; ಶ್ರೀ ರೇವಣಸಿದ್ಧಾದಿ ಆಚಾರ್ಯರನ್ನೂ ಆಶ್ರಯಿಸುವೆನು. ||೬||

ಭಾ:— ಶ್ರೇಯಃಕರವಾದ ಶಿವ (ಅಪ್ರಾಕೃತ) ವರ್ಣಾಶ್ರಮಾಚಾರ ವಿಚಾರದಲ್ಲಿ ದೀಕ್ಷಾ ಬದ್ಧನೂ, (ಅಪ್ರಾಕೃತ ವರ್ಣಾಶ್ರಮಗಳ ದಂಡನ, ಖಂಡನ, ಬಹಿಷ್ಕಾರ, ಪ್ರಾಯಶ್ಚಿತ್ತಾದಿ ಕಾರ್ಯಗಳನ್ನು ನೆರವೇರಿಸುವವನೂ) ತನ್ನ ಶಿಷ್ಯನನ್ನು ಸಂತೋಷ ಪಡಿಸುವಲ್ಲಿ ಸಂಪೂರ್ಣ ಸನ್ನದ್ಧನೂ, ನಿವಾರಿಸಲಶಕ್ಯವಾದ ಕಾಮಾದಿ ಅರಿಷಡ್ವರ್ಗ ವನ್ನು ನಾಶಗೊಳಿಸುವಲ್ಲಿ ಅತಿ ಪ್ರಸಿದ್ಧನೂ, ಪರಿಶುದ್ಧ ಹೃದಯವುಳ್ಳ ಭಕ್ತರಿಗೆ ಕಲ್ಪ ವೃಕ್ಷದಂತೆ ಇಷ್ಟಾರ್ಥವನ್ನು ಕೊಡುವ ವಿಷಯದಲ್ಲಿ ಕಟಿಬದ್ಧನೂ ಆಗಿರುವ ಶ್ರೀ ರೇವಣಸಿದ್ಧ ಶಿವಾಚಾರ್ಯನನ್ನು ಭಜಿಸುವೆನು. ||೭||

ಭಾ :— ಯಾವ ಮಹಾ ಮಹಿಮನು ಸಮಸ್ತ ವಿದ್ಯೆಗಳಲ್ಲಿ ವಿಚಕ್ಷಣನೂ, ಗಿರಿಜಾರಮಣನ ಸಂಪೂರ್ಣ ಕೃಪಾವಿಶೇಷದಿಂದ ಪ್ರಾಪ್ತವಾದ ಶಿವತತ್ವ ಜ್ಞಾನದಲ್ಲಿ ಬುದ್ಧಿಯುಳ್ಳವನೂ, ಆಗಿ ಮೆರೆದನೊ, ಅಂತಹ ಪರಶಿವ ಲಿಂಗಾವಧಾನಿಯೂ, ಸಿದ್ಧ ಸಂಘದ ಸ್ತುತಿಗೆ ಪಾತ್ರವಾದ ಪಾದಕಮಲವುಳ್ಳವನೂ, ಪಂಡಿತ ಜನ ಮಾನ್ಯನೂ, ನಿಗ್ರಹಾನುಗ್ರಹ ಸಮರ್ಥನೂ, ಆಗಿರುವ ಶ್ರೀ ಮರುಳಸಿದ್ಧ ಶಿವಾಚಾರ್ಯನನ್ನು ಧ್ಯಾನಿಸುವೆನು. ||೮||

ಶಾಸ್ತ್ರ ಪ್ರಸಿದ್ಧ ಷಡ್ಗುಣೈಶ್ವರ್ಯ ಸಂಪನ್ನನೂ, ಅಸಂಖ್ಯ ಸತ್ಕರ್ಮಗಳ ಫಲರೂಪವಾದ ಪುಣ್ಯರಾಶಿಯಿಂದ ಪ್ರಾಪ್ತವಾದ ಮೋಕ್ಷ ಲಕ್ಷ್ಮಿಯೊಡನೆ ವಿನೋದಿಸು ವವನೂ, ಪಂಡಿತ ಜನಸ್ತೋತ್ರಾರ್ಹಕವಾದ ಚರಿತ್ರವುಳ್ಳವನೂ, ಪ್ರಬಲ ಪ್ರಮಾಣ ಭೂತಗಳಾದ, ವೇದಾಂತ ಸಿದ್ಧಾಂತ ರೂಪಗಳಾದ ಉಭಯ ಶಾಸ್ತ್ರಗಳಿಂದ ಪ್ರತಿ ಪಾದ್ಯವಾದ ವೀರಶೈವ ಮತದ ಸ್ಥಾಪನೆಯಲ್ಲಿ ಸಮರ್ಥನೂ, ಪೂರ್ವಾಚಾರ್ಯ ಪ್ರಸಿದ್ಧನೂ, ಆಗಿರುವ ಏಕೋರಾಮ ಶಿವಾಚಾರ್ಯನನ್ನು ಆಶ್ರಯಿಸುವೆನು. ||೯||

ಯಾವ ಮಹಾಪುರುಷನು ಕಾಮಿಕಾದಿ ವಾತುಲಾಂತಗಳಾದ ೨೮ ಶಿವಾಗಮ ಗಳೆಂಬ ಶಿವಶಾಸ್ತ್ರದ ಜ್ಞಾನದಲ್ಲಿ ಷಣ್ಮುಖಸ್ವಾಮಿಯ ಸ್ವರೂಪನೂ, ಪೂರ್ವೋತ್ತರ

CC-0. Jangamwadi Math Collection. Digitized by eGangotri

ಮೀಮಾಂಸಾ ಶಾಸ್ತ್ರಗಳ ತತ್ವ ಬೋಧಕ ವಾಕ್ಯಗಳ ಅರ್ಥವಿಚಾರದಲ್ಲಿ ಬ್ರಹ್ಮ ಸ್ವರೂಪನೂ, ತರ್ಕ-ವ್ಯಾಕರಣಾದಿ ಶಾಸ್ತ್ರ ಸಮೂಹದಲ್ಲಿ ಸಾಕ್ಷಾತ್ ಶಿವಸ್ವರೂಪನೂ ಆಗಿರುವನೋ; ಅಂತಹ ವೀರಶೈವ ಮತಾಚಾರ್ಯನಾದ ಏಕೋರಾಮನೆಂಬ ಗುರು ಮೂರ್ತಿಗೆ ನಮಸ್ಕಾರವು. ||೧೦||

ಶೋಭಾಯಮಾನಗಳಾದ ದಂಡ, ಶಿಖಾ, ಉಪವೀತ, ಕೃಷ್ಣಾಜಿನಗಳಿಂದ ಅಲಂಕೃತನೂ, ಕಾವಿಬಟ್ಟೆ, ಕುಂಡಿಕೆ, ಪ್ರಣವರೂಪಿಯಾದ ಕಮಂಡಲು, ಛತ್ರಿ, ಮೌಂಜಿ, ಮುಂಜಾ ಹುಲ್ಲಿನಿಂದ ಮಾಡಿದ ಉಡದಾರ ಇವುಗಳನ್ನು ಧರಿಸಿರುವವನೂ, ೨೮ ಶಿವಾಗಮಗಳಿಗೆ ಸಿದ್ಧಾಂತವೆಂದೂ, ಉಪನಿಷತ್ತುಗಳಿಗೆ ವೇದಾಂತವೆಂದೂ ಕರೆ ಯುವರು. ಈ ಉಭಯವಿಧ ಶಾಸ್ತ್ರ ಪ್ರತಿಪಾದ್ಯವಾದ ಭಸ್ಮ ಘಂಟಿಕೆಯುಳ್ಳವನೂ ಆಗಿರುವ, ಏಕೋರಾಮ ಶಿವಾಚಾರ್ಯನು ಯಾವಾಗಲೂ ನಮ್ಮನ್ನು ಕಾಪಾಡಲಿ ||೧೧||

ಶ್ರೀ ವೇದವ್ಯಾಸ ಮುನಿಗಳು ರಚಿಸಿರುವ ಸೂತ್ರಗಳಲ್ಲಿರುವ ವರ್ಣ ಶಬ್ದಗಳ ಮುಖ್ಯಾರ್ಥಗಳನ್ನೇ ಬೋಧಿಸುವದಾಗಿಯೂ, ಸರ್ವರ ದುಃಖವನ್ನೂ ಪರಿಹರಿಸಿ, ಸುಖವನ್ನು ಉಂಟುಮಾಡುವುದಾಗಿಯೂ, ಪ್ರಾಮಾಣಿಕರಾದ ಪಂಡಿತರಿಗೆ ಮಾನ್ಯ ವಾಗಿಯೂ, ತತ್ವಾರ್ಥ ಬೋಧಕವಾಗಿಯೂ, ದುರ್ವಾದಿ ಗರ್ವಾಪಹಾರಕವಾಗಿಯೂ, ಶ್ರೀಕರ ಎಂಬ ಅಭಿದಾನವುಳ್ಳದಾಗಿಯೂ, ಇರುವ ಭಾಷ್ಯವನ್ನು ರಚಿಸುವೆನು ||೧೨||

ಸಮಸ್ತ ಉಪನಿಷತ್ತುಗಳ ಸಾರಭೂತವಾದ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಅಲಂಕಾರವೂ, ಶಿವತತ್ವ ಜ್ಞಾನದಾಯಕವೂ ಆದ, ಬ್ರಹ್ಮಸೂತ್ರ ಭಾಷ್ಯವು ಜಯ ಶೀಲವಾಗಲಿ. ||೧೩|| ಮೋಕ್ಷಾಪೇಕ್ಷಿಗಳೂ, ವೇದಾಗಮಗಳ ತತ್ವಾರ್ಥವನ್ನು ಬಲ್ಲವರೂ, ಶಿವದೀಕ್ಷೆಯಿಂದ ಪರಿಶುದ್ಧರೂ, ವೈದಿಕರೂ ಆಗಿರುವ ವೀರಶೈವರಿಗೆ ಈ ಭಾಷ್ಯವು ಕಲ್ಪವೃಕ್ಷ ಸದೃಶವಾಗಿದೆ. ||೧೪||

ಭಾ :— ದ್ವೈತ, ಅದ್ವೈತ ಮತಗಳು ವೇದಗಳ ಯಾವುದೋ ಒಂದು ಭಾಗ ದಲ್ಲಿ ಮಾತ್ರ ಹೇಳಲ್ಪಟ್ಟಿವೆ. ದ್ವೈತಾದ್ವೈತ ರೂಪವಾದ, ಪವಿತ್ರವಾದ ವಿಶೇಷಾ ದ್ವೈತ ಸಿದ್ಧಾಂತವು ವೇದಗಳ ಎಲ್ಲ ಭಾಗಗಳಲ್ಲಿಯೂ ಹೇಳಲ್ಪಟ್ಟದೆ. ||೧೫||

ವೀರಶೈವರಿಗೆ ಮುಖ್ಯ ಸಿದ್ಧಾಂತವೆನಿಸುವ ಈ ವಿಶೇಷಾದ್ವೈತವೆಂದರೆ 'ವಿ' ಎಂಬ ಶಬ್ದದಿಂದ ಶಿವನೆಂದೂ, 'ಶೇಷ' ಶಬ್ದದಿಂದ ಜೀವನೆಂದೂ, 'ಅದ್ವೈತ' ಶಬ್ದ ದಿಂದ ಯೋಗ (ಸಾಮರಸ್ಯ) ವೆಂದೂ, ಹೇಳಲ್ಪಡುತ್ತದೆ. ಈ ಶಿವತತ್ವ, ಜೀವತತ್ವ ಹಾಗೂ ಇವುಗಳ ಸಾಮರಸ್ಯವು ''ಯಥಾನದ್ಯಃ'' ಹಂಸ ಹಂಸ ''ಯಥಾಗ್ನೇ ರ್ವಿಸ್ಫುಲಿಂಗಾಃ'' ಎಂಬ ಶ್ರುತಿಗಳಿಂದ ಪ್ರತಿಪಾದಿಸಲ್ಪಡುತ್ತದೆ. ||೧೬||

CC-0. Jangamwadi Math Collection. Digitized by eGangotri

ಭಾ :— ಪೂರ್ವದಲ್ಲಿ ಅಗಸ್ತ್ಯ ಮಹರ್ಷಿಗಳು ಬ್ರಹ್ಮಸೂತ್ರಗಳಿಗೆ ಬರೆದ ವೃತ್ತಿಯನ್ನು ಅನುಕೂಲಾಗ್ರವಾಗಿ ಸಮಾಲೋಚನೆಮಾಡಿ, ಈ ಶ್ರೀಕರ ಭಾಷ್ಯವನ್ನು ರಚಿಸುವೆನಲ್ಲದೆ, ಸ್ವ ಕಪೋಲ ಕಲ್ಪಿತವಾಗಿ ರಚಿಸುವುದಿಲ್ಲವಾದುದರಿಂದ, ಈ ನನ್ನ ಭಾಷ್ಯವು ನಿರ್ದುಷ್ಟವಾಗಿದ್ದು ಸರ್ವಾದರಣೀಯವಾಗಿದೆ. ||೧೬||

: ಜಿಜ್ಞಾಸಾಧಿಕರಣವು :

ಭಾ :— ಮಂಗಲಾಚರಣೆಯ ಅನಂತರದಲ್ಲಿ ಉಪನಿಷತ್ತುಗಳ ಆಧಾರದಿಂದ ಹುಟ್ಟಿದ ಬ್ರಹ್ಮಸೂತ್ರಗಳ ವಿಚಾರರೂಪವಾದ, ಬ್ರಹ್ಮ ಮೀಮಾಂಸಾ ಶಾಸ್ತ್ರವನ್ನು ಆರಂಭಿಸಿ, ಮೊದಲು ಭಾಷ್ಯವೆಂದರೇನು? ಎಂಬುದನ್ನು ಹೇಳುತ್ತಿರುವನು. "ವಿಷಯ ಸಂಶಯ, ಪೂರ್ವಪಕ್ಷ ಸಿದ್ಧಾಂತ ಸಂಗತಿ ಕರಣಗಳುಳ್ಳದೂ, ಸೂತ್ರಾನುಕೂಲಗಳಾದ ಶ್ರುತ್ಯಾಗಮಾದಿ ವಾಕ್ಯಗಳಲ್ಲಿ ಇರುವ ಶಬ್ದಗಳಿಂದ ನಿರ್ಣಯಿಸಲ್ಪಟ್ಟ ಸೂತ್ರ ಘಟಕ ಪದ (ಶಬ್ದ) ಗಳುಳ್ಳದೂ, ಶ್ರುತ್ಯಾರ್ಥವನ್ನು ನಿರ್ಣಯಿಸುವ ಉಪಕ್ರಮ, ಉಪ ಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ, ಉಪಪತ್ತಿಗಳೆಂಬ ಷಡ್ವಿಧ ಲಿಂಗ (ಹೇತು) ಗಳುಳ್ಳದೂ ಮಹಾಭಾಷ್ಯವೆನಿಸುವುದು.

ಭಾ :— ಧರ್ಮ ಹಾಗೂ ಬ್ರಹ್ಮ ಇವುಗಳು ಕೇವಲ ನಿಗಮಾಗಮ ಪ್ರಮಾಣ ವೇದ್ಯಗಳಲ್ಲದೆ, ಪ್ರತ್ಯಕ್ಷಾದಿ ಪ್ರಮಾಣ ವೇದ್ಯಗಳಾಗಿಲ್ಲ. ಆದುದರಿಂದ "ಗರ್ಭಾಷ್ಟಮೇಽಬ್ದೇಕುರ್ವೀತ ಬ್ರಾಹ್ಮಣೋಸ್ಯೋಪನಾಯನಂ" ಎಂಬ ಶ್ರುತಿಯಂತೆ ೮ನೆಯ ವರ್ಷದಲ್ಲಿ ಉಪನಯನ ಸಂಸ್ಕಾರವನ್ನು ಹೊಂದಿದ ವಟುವು ಶ್ರುತ್ಯರ್ಥೋಪದೇಶಕನಾದ ಗುರುಮುಖದಿಂದ ತನ್ನಾಶ್ರಮ ನಿಯಮವನ್ನು ತಿಳಿದಾಚರಿಸಲು ಅವನಿಗೆ ವೇದಾರ್ಥ ಸ್ಥೂಲಾರುಂಧತಿ ನ್ಯಾಯದಿಂದ ಜ್ಞಾನವುಂಟಾಗಿ, ಧರ್ಮಜಿಜ್ಞಾಸೆಯು ಕಂಡುಬರುತ್ತದೆಂದಮೇಲೆ, ಉತ್ತರ ಮೀಮಾಂಸೆಗೆ (ಬ್ರಹ್ಮಜಿಜ್ಞಾಸೆಗೆ) ಸ್ವಭಾವತಃ ಯಾವುದು ಪೂರ್ವಭಾವಿಯಾಗಿ ವಿಧಿಸಲ್ಪಡುತ್ತದೆ ? ಯಾವುದು ಪುರುಷ ಪ್ರಯತ್ನಾಧೀನವಾದ ಅಭ್ಯುದಯರೂಪ ಫಲವುಳ್ಳದು ? ಯಾವುದು ಅತಿ ಪ್ರಕಾಶದಲ್ಲಿರುವ ಘಟದಂತೆ ಸಂದೇಹಾಸ್ಪದವಾಗಿಲ್ಲವಾಗಿ ವಿಚಾರಾರ್ಹವಾಗಿಲ್ಲವು; ಯಾವುದು ಕಾಕದಂತದಂತೆ ವಿಚಾರಿಸಲು ಪ್ರಯೋಜನವುಳ್ಳದಾಗಿಲ್ಲವು; ವೇದಾಂತ ಶಾಸ್ತ್ರಕ್ಕೆ ವಿಷಯವಾವುದೋ ಅದು ಸೋಪಾಧಿಕವೊ, ನಿರುಪಾಧಿಕವೊ, ಪ್ರಸಿದ್ಧವೊ, ಅಪ್ರಸಿದ್ಧವೊ' ನೀನು, ನಾನೆಂಬ ವ್ಯವಹಾರ ಗೋಚರರಾದ ಹಾಗೂ ಆರಾಧ್ಯ ಆರಾಧಕರಾದ ಶಿವ; ಜೀವರುಗಳಿಗೆ ಭೇದವೊ, ಅಭೇದವೊ; ಭೇದವೆಂದು ಹೇಳಲು "ಯಥಾನದ್ಯಃ' ಇತ್ಯಾದಿ ಎಷ್ಟೋ ಶ್ರುತಿಗಳ ವಿರೋಧವಾಗುತ್ತದೆ. ಅಭೇದವೆಂದು ಹೇಳಲು "ದ್ವಾಸುಪರ್ಣಾ" ಇತ್ಯಾದಿ ಮಂತ್ರಗಳು ವ್ಯರ್ಥಗಳಾಗಬೇಕಾಗುವುದು. ಕೆಲವು ಶ್ರುತಿಗಳಿಗೆ ಮಾತ್ರ ಪ್ರಮಾಣವೆಂದು ಹೇಳುವಿರೊ ಅಥವಾ ಎಲ್ಲ ಶ್ರುತಿಗಳಿಗೆ ಪ್ರಮಾಣವೆಂದು ಹೇಳುವಿರೊ;

CC-0. Jangamwadi Math Collection. Digitized by eGangotri

ಅಧಿಕಾರಿಯು ಪೂರ್ವಭಾವಿಯಾದ ಯಾವ ಧರ್ಮವಿಶಿಷ್ಟನು; ವಿಶೇಷ ಫಲಾಪೇಕ್ಷೆ ಮೊದಲಾದುವುಗಳು ಯಾವ ಪುರುಷನಲ್ಲಿರಬೇಕು; ಯಾವುದರ ಅನಂತರದಲ್ಲಿ ವೇದಾಂತ ಶಾಸ್ತ್ರಾರಂಭವು, ಈ ಪ್ರಕಾರ ಅನೇಕಾನೇಕ ಸಂಶಯಗಳು ಸಂಭವಿಸಿ, ಮುಮುಕ್ಷುವಿನ ಅತ್ಯಂತ ಶಂಕಾಕಂಟಕದಿಂದ ಯುಕ್ತವಾಗಲು ಅದರ ವಿಧ್ವಂಸಕ್ಕಾಗಿ ಪರಮ ಕಾರುಣಿಕರೂ, ಸರ್ವ ಶಾಸ್ತ್ರ ಜ್ಞಾನಗಳಲ್ಲಿ ಶಿಖಾಮಣಿಗಳೂ, ಮಹಾ ಪಾಶುಪತ ದೀಕ್ಷಾ ಸಂಪನ್ನರೂ ಆಗಿರುವ ವೇದವ್ಯಾಸ ಮಹರ್ಷಿಗಳು ಪುನರಾವೃತ್ತಿರಹಿತವಾದ ಕಡೆಯ ಶಾಶ್ವತ ಪುರುಷಾರ್ಥರೂಪವಾದ ಮೋಕ್ಷ ಫಲವನ್ನುಂಟುಮಾಡುವ ಈ ಮುಂದಿನ ಸೂತ್ರವನ್ನು ನಿರೂಪಿಸುತ್ತಿರುವರು.

ಸೂ॥ ಅಥಾತೋ ಬ್ರಹ್ಮಜಿಜ್ಞಾಸಾ ॥೧॥

ಭಾ :— ಸೂತ್ರಕಾರರು ಈ ಸೂತ್ರದಲ್ಲಿರುವ ಜಿಜ್ಞಾಸಾ ಪದದಿಂದ ಸಂಶಯ ಪ್ರಯೋಜನಗಳನ್ನು ತೋರಿಸುವವರಾಗಿ ಮೀಮಾಂಸಾರಂಭವನ್ನು ಮಾಡುತ್ತಿರುವರು. ಈ ಸೂತ್ರದಿಂದ ಪ್ರತಿಪಾದಿತವಾದ ಬ್ರಹ್ಮವು ಇರುವದೋ ಇಲ್ಲವೋ, ಎಂಬುವುದೇ ಸಂಶಯವು ಹಾಗೂ ಈ ಸಂಶಯವು "ಬ್ರಹ್ಮವಾ ಇದಮಗ್ರ ಆಸೀತ್" "ಅಸದ್ವಾ ಇದಮಗ್ರ ಆಸೀತ್" ಇತ್ಯಾದಿ ಸತ್ವಾಸತ್ವಗಳನ್ನು ಹೇಳುವ ಶ್ರುತಿಗಳಿಂದಲೂ ಸಿದ್ಧವಾಗುತ್ತದೆ. ಘಟ ಪಟಾದಿಗಳಂತೆ ಬ್ರಹ್ಮವು ಕಾರಣವಿರುವುದರಿಂದ, ಬ್ರಹ್ಮವೆಂಬುವದೊಂದು ವಸ್ತುವೇ ಇಲ್ಲವೆಂಬುವುದೇ ಪೂರ್ವಪಕ್ಷ ವೆನಿಸುವದು, ಪರಲೋಕಕ್ಕೆ ಹೋಗಿಬಂದ ಅನುಭವವು ಯಾರಿಗೂ ಇಲ್ಲದಿರುವುದರಿಂದ, ಜೀವರಿಗೆ ಪುನರ್ಜನ್ಮವೂ ಇಲ್ಲ, ಆದುದರಿಂದ ಅಗ್ನಿಯಿಂದ ಭಸ್ಮ (ಬೂದಿ) ವಾಗಿರುವ ದೇಹವೆಂಬ ಆತ್ಮನಿಗೆ ಪುನರಾಗಮನವೆಲ್ಲಿಯುದು ? ದೇಹರೂಪಿಯಾದ ಆತ್ಮನಿರುವಾಗಲೇ ಪ್ರಯತ್ನ ಮಾಡಿ, ಘೃತಾದಿಗಳಿಂದ ದೇಹಪೋಷಣೆ ಮಾಡಬೇಕು. ಒಂದು ಪಕ್ಷ ತನ್ನ ಪ್ರಯತ್ನಕ್ಕೆ ಘೃತಾದಿ ಪದಾರ್ಥಗಳು ಸಾಧ್ಯವಾಗದೇ ಇದ್ದರೆ, ಸಾಲ ತೆಗೆದುಕೊಂಡಾದರೂ, ಘೃತಾದಿ ಉತ್ತಮ ವಸ್ತುಗಳನ್ನು ಸಂಪಾದಿಸಿ ಭೋಗಿಸಬೇಕೆಂದು ಶಾಸ್ತ್ರವೂ ಕೂಡ ಇರುವುದು. ಅರಿಷಣ-ಸುಣ್ಣಗಳ ಸಂಯೋಗದಿಂದ ಕುಂಕುಮದ ಉತ್ಪತ್ತಿಯಾಗುವಂತೆಯೂ, ಗೋಮಯಾದಿ ಅಚೇತನ ವಸ್ತುಗಳಿಂದ, ಚೇತನ ವೃಶ್ಚಿಕಾದಿಗಳ ಉತ್ಪತ್ತಿಯಾಗುವಂತೆಯೂ, ಪೃಥಿವ್ಯಾದಿ ಪಂಚಭೂತಗಳ ಸಂಯೋಗದಿಂದ ಚೇತನಾಚೇತನ ವಸ್ತುಗಳ ಉತ್ಪತ್ತಿಯೂ, ಆ ಪಂಚಭೂತಗಳ ವಿಯೋಗದಿಂದ ಆ ಚೇತನಾಚೇತನ ವಸ್ತುಗಳ ನಾಶವಾಗುತ್ತದೆ. ಆದುದರಿಂದ ದೇಹಾತಿ-ರಿಕ್ತವಾಗಿ ಒಬ್ಬ ಜೀವಾತ್ಮ ಇರುವದಿಲ್ಲವೆಂಬುವದೇ ನಿಶ್ಚಯವೆಂದು ಹೇಳುವದೂ ಸಹ ಪೂರ್ವಪಕ್ಷವಾಗಿರುವದು. ಹಾಗೂ

ಭಾ :— ವೈದಿಕ ಮತದಲ್ಲಿಯೂ ಸಹ ಶರೀರಕ್ಕೆ ಭಿನ್ನವಾಗಿರುವ ಜೀವಾತ್ಮನನ್ನು ಒಪ್ಪಿದರೂ, ಆ ಜೀವಾತ್ಮರಿಗೆ ನಿಯಾಮಕನಾದ ಒಬ್ಬ ಈಶ್ವರನಿರುವುದಿಲ್ಲ

CC-0. Jangamwadi Math Collection. Digitized by eGangotri

ವೆಂದೂ, ಶ್ರುತಿಯು ವಿಧಿವಾದ, ಮಂತ್ರವಾದ, ಅರ್ಥವಾದ ಭೇದದಿಂದ ಮೂರು ಪ್ರಕಾರವಾಗಿರುವದೆಂದೂ, ಇವುಗಳಲ್ಲಿ "ಜ್ಯೋತಿಷ್ಟೋಮೇನ ಸ್ವರ್ಗ ಕಾಮೋಯ ಜೇತ" (ಸ್ವರ್ಗಾಪೇಕ್ಷೆಯುಳ್ಳವನು ಜ್ಯೋತಿಷ್ಟೋಮ ಯಾಗವನ್ನು ಮಾಡಬೇಕು) ಎಂಬುವದೇ ವಿಧಿವಾದ ವೆನಿಸಿ ಮುಖ್ಯವಾಗಿರುವದೆಂದೂ, ಮಂತ್ರವಾದವು ಉಪಾಸ್ಯ ದೇವತಾ ವಿಷಯಕವಾದುದೆಂದೂ, ಅರ್ಥವಾದವು ಸ್ತುತಿ ವಿಷಯಕವಾದುದೆಂದೂ ಸ್ವಕರ್ಮಾನುಸಾರವಾಗಿ ಜೀವರಿಗೆ ಫಲವನ್ನುಂಟುಮಾಡುವುದು ಕರ್ಮಜನ್ಯವಾದ ಅಪೂರ್ವವೆಂದೂ ಹೇಳುವರಲ್ಲದೆ, ಜೀವನಿಯಾಮಕನಾದ ಈಶ್ವರ (ಬ್ರಹ್ಮ) ನನ್ನು ಸ್ವೀಕರಿಸುವಲ್ಲಿ ಪ್ರಯೋಜನವಿಲ್ಲವಾದುದರಿಂದ, ಬ್ರಹ್ಮ ವಿಚಾರ ಶಾಸ್ತ್ರಾರಂಭವನ್ನು ಮಾಡುವುದು ಉಚಿತವಲ್ಲವೆಂಬುವದೂ ಪೂರ್ವಪಕ್ಷ ಕೋಟಿಯಲ್ಲಿ ಸೇರಿದೆ.

ಭಾ :— ಹಾಗೂ ಉಪನಿಷತ್ ಶಾಸ್ತ್ರಾರಂಭವನ್ನು ಮಾಡಬೇಕಾದರೆ, ಮೊದಲು, ಶಾಸ್ತ್ರ ಪ್ರತಿಪಾದ್ಯವಾದ ವಸ್ತುವಿನಲ್ಲಿ ಸಂಶಯ ಪ್ರಯೋಜನಗಳಿರಬೇಕು. ಬ್ರಹ್ಮ ವಿಚಾರ ರೂಪವಾದ ಈ ಉಪನಿಷಚ್ಛಾಸ್ತ್ರಕ್ಕೆ ಪ್ರತಿಪಾದ್ಯ ವಿಷಯುವೆಂದರೆ ಬ್ರಹ್ಮವು ಇದಕ್ಕೆ ಪರಶಿವನೆಂದೂ, ಪರಮಾತ್ಮನೆಂದೂ ಬೇರೆ ನಾಮುಗಳುಂಟು. ಈ ಪರಮಾತ್ಮನಲ್ಲಿಯೂ ಹಾಗೂ ಜೀವಾತ್ಮನಲ್ಲಿಯೂ ಸಂಶಯವು ಸಂಭವಿಸುವುದಿಲ್ಲ. ಸಂದೇಹಾಸ್ಪದವಾದುದೇ ವಿಚಾರಣೀಯವಾಗುನದು. "ಸಂಧಿಗ್ಧೇ ನ್ಯಾಯಪ್ರವರ್ತತೇ" ಇಂತೆಂಬ ನ್ಯಾಯದ ಅಭಿಪ್ರಾಯವಾದರೂ ಇದೇ ಆಗಿರುವದು. ಪರಶಿವನೆಂಬ ಪರಮಾತ್ಮನಾದರೊ "ಸತ್ಯಂ ಜ್ಞಾನಮನಂತ ಬ್ರಹ್ಮ" "ಏಕ ಏವ ರುದ್ರೋನ ದ್ವಿತೀಯಾಯತಸ್ಥೇ" "ರುದ್ರ ಏಕತ್ವ ಮಾಹುಃ" "ರುದ್ರೋ ವೈ ಶಾಶ್ವತಂ ವೈ ಪುರಾಣಂ" ಇತ್ಯಾದ್ಯನಂತ ಶ್ರುತಿಗಳಿಂದ ನಿಶ್ಚಯಿಸಲ್ಪಟ್ಟಿರುವುದರಿಂದಲೂ, ಜೀವಾತ್ಮಸ್ವರೂಪವಾದರೂ "ಅಹಂ ಸುಖಿ" "ಅಹಂ ದುಃಖಿ" ನಾನು ಸುಖಿಯು ನಾನು ದುಃಖಿಯು ಇತ್ಯಾದಿ ಪ್ರತ್ಯಕ್ಷ ಪ್ರತ್ಯಯುಗಳಿಂದ ನಿಶ್ಚಯಿಸಲ್ಪಟ್ಟಿರುವುದರಿಂದಲೂ, ಪರಮಾತ್ಮನಲ್ಲಿ ಸಂಶಯವಿಲ್ಲ, ಜೀವಾತ್ಮನಲ್ಲಿಯೂ ಸಂಶಯವಿಲ್ಲ ಹಾಗೂ ವಿಚಾರಕ್ಕೆ ವಿಚಾರ ವಿಷಯುವಾದ ಪದಾರ್ಥದ ಜ್ಞಾನವೇ ಫಲವು. ಈ ಫಲರೂಪವಾದ ಜ್ಞಾನಕ್ಕೆ ಬ್ರಹ್ಮವು ವಿಷಯವಾಗುವ ಪಕ್ಷದಲ್ಲಿ, ಜ್ಞಾನಕ್ಕೂ, ಬ್ರಹ್ಮಕ್ಕೂ ವಿಷಯ ವಿಷಯಿ ರೂಪದಿಂದ ಭೇದವು ಪ್ರಾಪ್ತವಾಗುವುದರಿಂದ, ಅಭೇದ ವನ್ನು ಹೇಳುವ ಅನಂತ ಶ್ರುತಿಗಳಗೆ ವಿರೋಧವಾಗುವುದು. ಯಾವುದು ಜ್ಞಾನಕ್ಕೆ ವಿಷಯುವೊ ಅದು ನಶ್ವರವೆಂಬುವದು ಲೋಕಾನುಭವ ಸಿದ್ಧವು. ಘಟವು ಜ್ಞಾನಕ್ಕೆ ವಿಷಯವಾದುದರಿಂದಲೇ ಅದು ನಶ್ವರವಾಗಿರುವುದಷ್ಟೆ; ಇನ್ನು ಬ್ರಹ್ಮವು ಜ್ಞಾನಕ್ಕೆ ವಿಷಯುವೇ ಆಗುವುದಿಲ್ಲವೆಂದರೆ ಅದರ ಸಾಕ್ಷಾತ್ಕಾರವೇ ಸಂಭವಿಸುವುದಿಲ್ಲವಾದ್ದರಿಂದ ಬ್ರಹ್ಮವು ಅಪ್ರಸಿದ್ಧವೆನಿಸುವದು. ಇದಲ್ಲದೆ ಬ್ರಹ್ಮವನ್ನು ವಿಚಾರಿಸುವ ವಿಷಯದಲ್ಲಿ ಪ್ರಯೋಜನವಾದರೂ ಇರುವದಿಲ್ಲ. ಇಲ್ಲಿ ಪ್ರಯೋಜನವೆಂದರೆ ಮುಕ್ತಿ. ಈ ಮುಕ್ತಿಯು ಅವಿದ್ಯಾ ರೂಪವಾದ ಪ್ರಕೃತಿಯ ನಾಶವಾಗಿ ಜೀವಭಾವದ ನಿವೃತ್ತಿಯಾದ

CC-0. Jangamwadi Math Collection. Digitized by eGangotri

ಮೇಲಲ್ಲವೆ, ಆಗಬೇಕು. "ಅಜಾಮೇತಾಂ ಲೋಹಿತ ಶುಕ್ಲ ಕೃಷ್ಣಾಂ" "ಜ್ಞಾಜ್ಞೌ ದ್ವಾವಜಾ ವೀಶಾನೀಶೌ" ಇತ್ಯಾದಿ ಶ್ರುತಿವಚನಗಳಿಂದ ಅವಿದ್ಯಾರೂಪವಾದ ಪ್ರಕೃತಿ ಹಾಗೂ ಜೀವ ಇವುಗಳು ಅವಿನಾಶಿಗಳೆಂದು ಕಂಡುಬರುವುದರಿಂದ, ಬ್ರಹ್ಮ ಜ್ಞಾನದಿಂದ ಅವಿದ್ಯಾ ನಿವೃತ್ತಿ ರೂಪವಾದ ಮುಕ್ತಿಯು ಸಂಭವಿಸುವದೇ ಇಲ್ಲವಾದ ಪ್ರಯುಕ್ತ ಪ್ರಯೋಜನವೂ ಇಲ್ಲ. ಈ ರೀತಿಯಾಗಿ ಸಂಶಯವೂ, ಪ್ರಯೋಜನವೂ ಇಲ್ಲದಿರುವುದರಿಂದ, ಬ್ರಹ್ಮ ವಿಚಾರರೂಪವಾದ ವೇದಾಂತ ಶಾಸ್ತ್ರಾರಂಭವು ವ್ಯರ್ಥ ವಾದುದಾಗಿದೆ. "ಅಯಮಾತ್ಮಾ ಬ್ರಹ್ಮ" "ತತ್ವಮಸಿ" ಇತ್ಯಾದಿ ಶ್ರುತಿಗಳಿಂದ ಜೀವ-ಬ್ರಹ್ಮಗಳಿಗೆ ಅಭೇದವು ಕಂಡುಬರುವುದರಿಂದಲೂ, "ಅಹಂಸುಖಿ" "ಅಹಂ ದುಃಖಿ" ಇತ್ಯಾದಿ ಪ್ರತ್ಯಕ್ಷ ಪ್ರತೀತಿಗಳಿಂದ ಭೇದವು ಕಂಡುಬರುವುದರಿಂದಲೂ, ಸಂಶಯುವು ಸಂಭವಿಸಿ, ವೇದಾಂತ ಶಾಸ್ತ್ರಾರಂಭಕ್ಕೆ ಅವಕಾಶವುಂಟು, ಅಂದರೆ ಅವಕಾಶವಿಲ್ಲ. ಯಾಕೆಂದರೆ, ಅಭೇದ ಪ್ರತಿಪಾದಕ ಶ್ರುತಿಗಳು ಅಭಾದಿತವೂ, ಪ್ರತ್ಯಕ್ಷರೂಪವೂ ಆಗಿರುವ ಅಹಂ ಪ್ರತ್ಯಯಕ್ಕೆ ವಿರೋಧಿಗಳಾದುದರಿಂದ ಅವು ದುರ್ಬಲಗಳಾಗಿ, ಗೌಣಗಳಾಗಿವೆಯಾದುದರಿಂದ ಸಂಶಯಕ್ಕೆ ಆಸ್ಪದವೇ ಇಲ್ಲವಾಗಿ, ಶಾಸ್ತ್ರಾರಂಭವು ವ್ಯರ್ಥವೇ ಸರಿ, ಹಾಗೂ ಸ್ವಯಂ ಪ್ರಕಾಶ ರೂಪವಾದ ಬ್ರಹ್ಮದಲ್ಲಿ ಅನಾದ್ಯ ವಿದ್ಯಾ ವಶದಿಂದ "ಮನುಷ್ಯೋಽಹಂ" ಇತ್ಯಾದಿ ಅಧ್ಯಾಸ (ಅವಿದ್ಯಾ)ದ ಅನುಭವವು ಕಂಡುಬರುವುದರಿಂದಲೂ, "ನಹಿದೃಷ್ಟೇಽನುಪಪನ್ನಂ" ಎಂಬ ನ್ಯಾಯ ವಿರುವುದರಿಂದಲೂ, ಅಧ್ಯಾಸವನ್ನು ಸ್ವೀಕರಿಸಿಯೇ ತೀರಬೇಕು. ಸ್ವೀಕರಿಸಿದರೆ ಅವಿದ್ಯಾ ನಿವೃತ್ತಿರೂಪವಾದ ಪ್ರಯೋಜನವೂ ಸಿದ್ಧವಾಗುವದು. ಆಗ ಶಾಸ್ತ್ರಾ ರಂಭವೂ ಯುಕ್ತವಾಗುವದಲ್ಲದೆ, ಅಂದರೆ ಅಂಥ-ಅವಿದ್ಯೆಯು ಮುಂದೆ ಹೇಳುವ ರೀತಿಯಲ್ಲಿ ಶ್ರುತಿ-ಯುಕ್ತಿ ಅನುಭವಗಳಿಂದ ಸಿದ್ಧವಾಗದಿರುವದರಿಂದ, ಅದರ ನಿವೃತ್ತಿಯೂ ಸಂಭವಿಸುವದಿಲ್ಲವಾದುದರಿಂದ ಶಾಸ್ತ್ರಾರಂಭಕ್ಕೆ ಪ್ರಯೋಜನವಿಲ್ಲವಾಗಿ ಶಾಸ್ತ್ರಾರಂಭವು ಯುಕ್ತವಾಗಲಾರದು. ಹಾಗೂ ತಮಃ ಪ್ರಕಾಶಗಳಂತೆ ಭೇದಾಭೇದ ಗಳು ವಿರುದ್ಧಗಳಾದುದರಿಂದ ಜೀವೇಶ್ವರರಿಗೆ ಭೇದಾಭೇದಗಳನ್ನು ಹೇಳುವದು ಯುಕ್ತ ವಲ್ಲ. ಭೇದವೊಂದನ್ನಾಗಲಿ, ಅಭೇದವೊಂದನ್ನಾಗಲಿ ಹೇಳಬೇಕು. ಹಾಗು "ಯತೋವಾಚೋ ನಿವರ್ತಂತೇ" ಇತ್ಯಾದಿ ವಾಕ್ಯಗಳಿಂದ ಬ್ರಹ್ಮವು ವಿಷಯವೇ ಅಲ್ಲ ವೆಂದು ಕಂಡುಬರುವದರಿಂದ ಜ್ಞಾನಕ್ಕೂ, ಬ್ರಹ್ಮಕ್ಕೂ ಅಭೇದವನ್ನೇ ಹೇಳಬೇಕು; ಹೇಳಿದರೆ ಶಾಸ್ತ್ರಜನ್ಯ ಜ್ಞಾನಕ್ಕೆ ವಿಷಯವಾವದೂ ಇಲ್ಲದಿರುವದರಿಂದ ನಿರ್ವಿಷಯಕ ವಾದ ಶಾಸ್ತ್ರದ ಆರಂಭವು ಸಂಭವಿಸುವದಿಲ್ಲವೆಂಬುದೆ ಮೊದಲಾದ ಅನೇಕ ಪೂರ್ವಪಕ್ಷ ಗಳನ್ನು ಮಾಡಿಕೊಂಡು ಭಾಷ್ಯಕಾರರು "ಇತಿ ಪ್ರಾಪ್ತೇಬ್ರೂಮಃ" ಹೀಗೆ ಪೂರ್ವ ಪಕ್ಷಗಳು ಉಂಟಾಗಲು ಸಿದ್ಧಾಂತ ಪಕ್ಷವನ್ನು ಹೇಳುವೆವು ಎಂದು ಸಿದ್ಧಾಂತವನ್ನು "ಸರ್ವೋಪಸನಿಷತ್ಸಿದ್ಧ ದ್ವೈತಾದ್ವೈತ ವಿಧಾಯಕ ಮೀಮಾಂಸಾ ಶಾಸ್ತ್ರಾರಂಭೋ ಯುಕ್ತಃ" ಇತ್ಯಾದಿ ಪಂಕ್ತಿಗಳಿಂದ ನಿರೂಪಿಸುತ್ತಿರುವರು.

CC-0. Jangamwadi Math Collection. Digitized by eGangotri

ಭಾ:— ಸರ್ವೋಪನಿಷತ್ತುಗಳಿಂದ ಸಿದ್ಧಿಸಲ್ಪಡುವ ಭೇದಾಭೇದರೂಪವಾದ ವೀರಶೈವ ಸಿದ್ಧಾಂತವನ್ನು ವಿಧಿಸುವ ಉತ್ತರ ಮೀಮಾಂಸಾ ಶಾಸ್ತ್ರದ ಆರಂಭವು ಯುಕ್ತವಾದುದಾಗಿದೆ ಇಂತೆಂಬುದೇ ಸಿದ್ಧಾಂತವು. ಇನ್ನು ಮೇಲೆ ಹೇಳಿದ ಕ್ರಮದಂತೆ ಪೂರ್ವಪಕ್ಷಗಳನ್ನು ಖಂಡಿಸುವರು. ಬ್ರಹ್ಮವು (ಈಶ್ವರನು) ಇರುವದೆಂಬ ವಿಷಯದಲ್ಲಿ ಪ್ರತ್ಯಕ್ಷ ಅನುಮಾನ ಆಗಮ ಪ್ರಮಾಣಗಳುಂಟು. ಈ ಪ್ರಮಾಣಗಳಲ್ಲಿ "ಏಕ ಏವ ರುದ್ರೋ ನದ್ವಿತೀಯಾಯತಸ್ಥೆ" ಇತ್ಯಾದಿ ಅನಂತಾಗಮ ಪ್ರಮಾಣಗಳುಂಟು. ಇನ್ನು ಲೋಕದಲ್ಲಿ ಧನ, ಧಾನ್ಯ, ವಿದ್ಯಾದಿ ಪೂರ್ಣ ಸಹಾಯ ಸಂಪನ್ನರಾದಾಗ್ಯೂ, ತಮ್ಮ ಇಷ್ಟಾರ್ಥ ಸಿದ್ಧಿಯಾಗದಿರುವುದೂ ಇಂತಹ ಸಹಾಯರಹಿತರಾದಾಗ್ಯೂ, ಒಮ್ಮೊಮ್ಮೆ ದುರ್ಘಟವಾದ ಕಾರ್ಯಸಿದ್ಧಿಯು ಕಂಡುಬರುತ್ತಿರುವುದು, ಈಶ್ವರಸಿದ್ಧಾನೆಂಬ ವಿಷಯದಲ್ಲಿ ಪ್ರತ್ಯಕ್ಷ ಪ್ರಮಾಣವೆನಿಸುವುದಷ್ಟೆ. ಇದೇ ಜೀವರಿಗೆ ಜನ್ಮಾಂತರ ಉಂಟೆಂಬುವ ವಿಷಯದಲ್ಲಿ ಪ್ರತ್ಯಕ್ಷ ಪ್ರಮಾಣ ವೆನಿಸುವುದು. ಲೋಕದಲ್ಲಿ ಸೂರ್ಯ, ಚಂದ್ರ, ಋತು, ಸಮುದ್ರ, ಕಾಲಾದಿಗಳು ತಮ್ಮ ತಮ್ಮ ಧರ್ಮದಲ್ಲಿ ಪ್ರವೃತ್ತರಾಗಿ ಇರುವದನ್ನು ನೋಡಿದರೆ, ಇವುಗಳಿಗೆ ನಿಯಾಮಕನಾದ ಈಶ್ವರನೊಬ್ಬ ಇದ್ದಾನೆಂಬು ವದು ಅನುಮಾನ ಪ್ರಮಾಣ ಸಿದ್ಧವಾಗುತ್ತದೆ. ಹಾಗು ಲೋಕದಲ್ಲಿ ರಥ, ಗೋಪುರ, ಪ್ರಾಸಾದ (ಅರಮನೆ) ಪ್ರಾಕಾರ (ಕೋಟೆ) ಮೊದಲಾದುವುಗಳು ಒಬ್ಬ ಕರ್ತೃವಿಲ್ಲದೆ ಆಗಲಾರವಾದುದರಿಂದ, ಆ ಕಾರ್ಯವನ್ನು ನೋಡಿ ಒಬ್ಬ ಕರ್ತೃವನ್ನು ಕಲ್ಪಿಸುವಂತೆ ಆಕಾಶಾದಿ ಜಡಾಜಡ ಪ್ರಪಂಚರೂಪವಾದ ಕಾರ್ಯವು ಕರ್ತೃವಿಲ್ಲದೆ ಆಗಲಾರದಾದು ದರಿಂದ, ಇವುಗಳಿಗೆ ಕರ್ತೃವಾದ ಪರಮೇಶ್ವರನೊಬ್ಬ ಇದ್ದಾನೆಂಬುವದು ಅನುಮಾನ ಪ್ರಮಾಣದಿಂದ ಸಿದ್ಧವಾಗುವದು. ಆದುದರಿಂದ ಈಶ್ವರನಿಲ್ಲವೆಂದು ಹೇಳುವ ನಾಸ್ತಿಕ ವಾದವು ಅಯುಕ್ತವಾಗಿದೆ. ಇನ್ನು ಸುಧಾ ಹರಿದ್ರಾ-ಚೂರ್ಣ ಸಂಯೋಗದಿಂದ ಕುಂಕುಮೋತ್ಪತ್ತಿಯಾಗುವಂತೆ, ಪೃಥಿವ್ಯಾದಿ ಭೂತಗಳ ಸಂಯೋಗದಿಂದ ಚೇತನಾ ಚೇತನ ರೂಪವಾದ ಪ್ರಪಂಚದ ಸೃಷ್ಟಿಯು ಆಗುವದೆಂದು ಹೇಳುವ ನಾಸ್ತಿಕವಾದವೂ ಕೂಡ ಯುಕ್ತವಾಗುವುದಿಲ್ಲ. ಏಕೆಂದರೆ ಅಲ್ಲಲ್ಲೆ ಪೃಥಿವ್ಯಾದಿಭೂತ ಸಂಯೋಗವು ಕಂಡುಬರುತ್ತಿದ್ದರೂ, ಪಶು-ಪಕ್ಷಿ ಮೃಗಾದಿಗಳ ಉತ್ಪತ್ತಿಯು ಕಾಣುವದಿಲ್ಲವಷ್ಟೆ; ಹಾಗು ಒಂದೇ ಒಂದಾದ ಶರೀರದಲ್ಲಿ ಪೃಥಿವ್ಯಾದಿ ಭೂತ ಸಂಯೋಗವಿದೆ. ಆದರೂ ಆ ಶರೀರದಿಂದ ಮನುಷ್ಯಾದಿ ಪ್ರಾಣಿಗಳ ಉತ್ಪತ್ತಿಯು ಏಕಾಗಬಾರದು? ಪಶು ಶರೀರದಿಂದ ಪಶುವಿನ ಉತ್ಪತ್ತಿಯು, ಮನುಷ್ಯನ ಶರೀರದಿಂದ ಮನುಷ್ಯನ ಉತ್ಪತ್ತಿಯು ಎಂಬುವದೇಕೆ ಇನ್ನೂ ಅಚೇತನ?

ಭಾ:— ಗೋಮಯಾದಿಗಳಿಂದ ಚೇತನ ವೃಶ್ಚಿಕಾದಿಗಳ ಉತ್ಪತಿ ಯಾಗುವಂತೆ ಅಚೇತನ ಪೃಥಿವ್ಯಾದಿ ಭೂತಗಳಿಂದಲೇ ಮನುಷ್ಯಾದಿ ಚೇತನ ಪ್ರಾಣಿಗಳ ಉತ್ಪತ್ತಿ ಯಾಗುವದೆಂದು ಹೇಳುವದೂ ಕೂಡ ಅಯುಕ್ತವಾಗಿದೆ. ಏಕೆಂದರೆ, ಗೋಮಯ

CC-0. Jangamwadi Math Collection. Digitized by eGangotri

ದಲ್ಲಿ ಚೇತನರೂಪವಾದ ಜೀವಭಾವವು ಈಶ್ವರನಿಂದ ಗುಪ್ತವಾಗಿ ಸ್ಥಾಪಿಸಲ್ಪಟ್ಟಿರುವು ದರಿಂದ, ಆ ಗೋಮಯ ಗತವಾದ ಗುಪ್ತ ಚೇತನದಿಂದಲೇ ವೃಶ್ಚಿಕಾದಿ ಚೇತನಗಳು ಹುಟ್ಟುವವೆಂದು ಸಿದ್ಧವಾಗುತ್ತದೆ. ಅದುದರಿಂದಲೂ ಸರ್ವ ಸಹಾಯ ಸಂಪನ್ನ ನಾದ ಮಹಾರಾಜನಿಗೆ, ತನಗನಿಷ್ಟವಾದ ಆಧಿವ್ಯಾಧಿಗಳೂ, ಜರಾಮರಣಗಳೂ, ದಾರಿದ್ರಾದಿಗಳೂ ಕಂಡುಬರುವುದರಿಂದಲೂ, ಜೀವರಿಗೆ ಜನ್ಮಾಂತರಗಳಲ್ಲಿ ಮಾಡಿದ ಪುಣ್ಯಾಪುಣ್ಯ ಕರ್ಮಾನುಸಾರವಾಗಿ ಫಲದಾಯಕನಾದ ಈಶ್ವರನೊಬ್ಬನಿದ್ದಾನೆಂದು ನಿಶ್ಚಯಿಸಲ್ಪಡುತ್ತದೆ. ಲೋಕದಲ್ಲಿ ಒಬ್ಬ ಧನಿಕನು ತನ್ನ ಕೂಲಿಯವರಿಗೆ ಅವರವರ ಉದ್ಯೋಗಾನುಸಾರವಾಗಿ ಫಲವನ್ನು ಕೊಡುವುದು ಸರ್ವಾನುಭವ ಸಿದ್ಧವಷ್ಟೆ.

ಭಾ:— ಪುಣ್ಯಾಪುಣ್ಯ ಸಂಸ್ಕಾರ ರೂಪವಾದ ಅಪೂರ್ವ (ಅದೃಷ್ಟ) ವು ಜಡ ವಾಗಿರುವುದರಿಂದ ಜೀವರು ಅನುಷ್ಠಿಸುವ ಸದ ಸತ್ಕರ್ಮ ಜನ್ಯವಾದ ಸುಖ-ದುಃಖ ರೂಪವಾದ ಫಲವನ್ನು ಕೊಡುವಲ್ಲಿ ಸಮರ್ಥವಲ್ಲ. ಅಜಡವಾದ ಚೇತನವೇ ಫಲ ವನ್ನು ಕೊಡುವಲ್ಲಿ ಸಮರ್ಥವಾಗಿದೆಂಬುವದು ಲೋಕಾನುಭವ ಸಿದ್ಧವು. ಲೋಕ ದಲ್ಲಿ ಕೇವಲ ಸತ್ಕರ್ಮಗಳು ಹಾಗು ಜಾರಚೋರಾದಿ ಕರ್ಮಗಳು ಆ ಸತ್ಪುರುಷರಿಗೆ ಹಾಗು ಜಾರ ಚೋರಾದಿಗಳಿಗೆ ತಾವೇ ಸುಖ–ದುಃಖ ರೂಪವಾದ ಫಲವನ್ನು ಕೊಡುವುದಿಲ್ಲವೆಂಬುವದೂ, ಅಧಿಕಾರಿಗಳಾದ ರಾಜಾದಿಗಳು ಕೊಡುತ್ತಾರೆಬುವದೂ ಆಬಾಲವೃದ್ಧರಿಗೂ ತಿಳಿದ ಸಂಗತಿಯೇ ಆಗಿರುವದು. ಆದುದರಿಂದ ಧರ್ಮಮೀಮಾಂಸಾ ವಾದವೂ ಕೂಡ ಅಯುಕ್ತವಾಗಿದೆ. ಈ ಪೂರ್ವ ಮೀಮಾಂಸಾ ಶಾಸ್ತ್ರವಾದವನ್ನು ಖಂಡಿಸಿದ್ದರಿಂದ ಕಾಪಿಲ (ಸಾಂಖ್ಯ) ಕಾಣಾದ (ನಾಯ) ಕೇವಲಾದ್ವೈತ ವಾದಗಳೂ ಸಹ ಖಂಡಿಸಲ್ಪಟ್ಟವೆಂದು ತಿಳಿಯಬೇಕು. ಯಾಕೆಂದರೆ ಸಾಂಖ್ಯರೂ ಜಡವಾದ ಪ್ರಕೃತಿಯನ್ನೇ ಉಪಾದಾನ ಕರಣವನ್ನಾಗಿಯೂ, ಕಾಣಾದರೂ ಸಹ ಜಡವಾದ ಪರಮಾಣುವನ್ನೇ ಉಪಾದಾನಕಾರಣವನ್ನಾಗಿಯೂ, ಕೇವಲಾದ್ವೈತಿಗಳೂ ಸಹ ಜಡವಾದ ಅವಿದ್ಯೆಯನ್ನೇ ಉಪಾದಾನ ಕಾರಣವನ್ನಾಗಿಯೂ ಹೇಳುವರಷ್ಟೆ!

‘‘ಅಸದೇವಾಗ್ರ ಆಸೀತ್’’ ಎಂಬ ಶ್ರುತಿಯನ್ನವಲಂಬಿಸಿ, ಶೂನ್ಯವೇ ಜಗ ದುಪಾದಾನ ಕಾರಣವೆಂದು ಹೇಳುವ ಶೂನ್ಯವಾದವೂ ಕೂಡ ಸಮಂಜಸವಲ್ಲ; ಯಾಕೆಂದರೆ, ಈ ಶ್ರುತ್ಯುಕ್ತವಾದ ಅಸಚ್ಛಬ್ದದಿಂದ ಸೂಕ್ಷ್ಮತ್ವವು ಉಪದೇಶಿಸಲ್ಪಡುವ ದಲ್ಲದೆ, ಶೂನ್ಯತ್ವವು ಉಪದೇಶಿಸಲ್ಪಡುವದಿಲ್ಲವೆಂದು ಹೇಳಲೇಬೇಕು. ಇಲ್ಲದಿದ್ದರೆ ‘‘ತತೋ ವೈಸದ ಜಾಯತ’’ ಇತ್ಯುತ್ತರ ವಾಕ್ಯದ ವಿರೋಧವು ನಿವಾರಿಸಲಾಗುವು ದಿಲ್ಲ. ಶೂನ್ಯದಿಂದ (ಅಸತ್ತಿನಿಂದ) ಸತ್ಪದಾರ್ಥವು ಹುಟ್ಟಲಾರದಷ್ಟೆ; ಇದಲ್ಲದೆ ಆಕಾಶ, ಕುಸುಮ, ಶಶ ಶೃಂಗಾದಿಗಳಂತೆ ಶೂನ್ಯವನ್ನೇ ಅಸಚ್ಛಬ್ದದಿಂದ ಸ್ವೀಕರಿಸಿದ ಪಕ್ಷದಲ್ಲಿ, ವಂಧ್ಯಾ ಪುತ್ರನಿಂದ ಸತ್ಪುತ್ರೋತ್ಪತ್ತಿಯಾಗಬೇಕಾಗುವದು. ಇದಂತೂ ಅಸಂಭವವು. ಆದುದರಿಂದ ಪೂರ್ವದಲ್ಲಿ ಹೇಳಿದ ಸದ್ರೂಪ ಬ್ರಹ್ಮದಿಂದ ಸದ್ರೂಪ

CC-0. Jangamwadi Math Collection. Digitized by eGangotri

ಪ್ರಪಂಚದ ಉತ್ಪತ್ತಿಯನ್ನೇ ಹೇಳಬೇಕು. ಬಾದರಾಯಣಾ (ವ್ಯಾಸ) ಚಾರ್ಯರು "ಅಸದಿತಿಚೇನ್ನ ಪ್ರತಿಷೇಧ ಮಾತ್ರಾತ್ವಾತ್" ಎಂಬ ಸೂತ್ರದಿಂದ ಶೂನ್ಯವಾದವನ್ನು ಚನ್ನಾಗಿ ಖಂಡಿಸಿರುವರು. ಆದುದರಿಂದ ಶೂನ್ಯದಿಂದ ಪ್ರಪಂಚದ ಉತ್ಪತ್ತಿಯನ್ನು ಹೇಳದೆ, ಸದ್ರೂಪ ಪರಶಿವ ಬ್ರಹ್ಮದಿಂದ ಪ್ರಪಂಚದ ಉತ್ಪತ್ತಿಯನ್ನು ಹೇಳಬೇಕು. ಇನ್ನು ಭಾಷ್ಯಕಾರರು ಈ ಪರಶಿವ ಬ್ರಹ್ಮದ ಲಕ್ಷಣವನ್ನೂ, ಜೀವನ ಲಕ್ಷಣವನ್ನೂ ಹೇಳಿ, ಸಂಶಯ ಪ್ರಯೋಜನಗಳನ್ನು ತೋರಿಸಿ, ಶಾಸ್ತ್ರಾರಂಭದ ಅವಶ್ಯಕತೆಯನ್ನು ತೋರಿಸುತ್ತಿರುವರು.

ಭಾ:— ವೇದಗಳಿಂದಲೂ, ಆಗಮಗಳಿಂದಲೂ ದ್ವೈತವನ್ನು ಪ್ರತಿಪಾದಿಸುವ ಹಾಗು ಅದ್ವೈತವನ್ನು ಪ್ರತಿಪಾದಿಸುವ, ಉಭಯ ವೇದಾಂತವೆನಿಸುವ ಉಪನಿಷತ್ತುಗಳಿಂದಲೂ ಪ್ರತಿಪಾದಿಸಲ್ಪಟ್ಟ ಸ್ವಾಭಾವಿಕವಾದ (ನಿತ್ಯವಾದ) ಅನಂತ ಶಕ್ತಿಯುಕ್ತವಾದುದೂ, ಜಗತ್ತಿಗೆ ನಿಮಿತ್ತಕಾರಣವಾದುದೂ ಹಾಗು ಉಪಾದಾನಕಾರಣವಾದುದೂ ಪಾಶಬದ್ಧರಾದ ಪಶು (ಜೀವ) ಗಳ ಪಾಶಗಳಿಗೆ ನಿಯಾಮಕವಾದುದೂ, ಸಕಲ ನಿಷ್ಕಲ ರೂಪಗಳಾದ ಸ್ಥೂಲ, ಸೂಕ್ಷ್ಮಗಳೆನಿಸುವ ಚಿದ ಚಿತ್ಪ್ರಪಂಚಗಳಿಗೆ ಪ್ರಕಾಶಕವಾದುದೂ, ಸತ್ಯ, ಜ್ಞಾನಾದಿ ಅನಂತ ಕಲ್ಯಾಣ ಗುಣವುಳ್ಳುದೂ ಬ್ರಹ್ಮವೆನಿಸುವುದು. ಇನ್ನು ಜೀವನು ಅನಾದಿಯಾಗಿಯೂ, ಸ್ವಾಭಾವಿಕ (ನಿತ್ಯ) ವಾಗಿಯೂ ಇರುವ ಮಾಯಾಪಾಶದಿಂದ ಬದ್ಧನೂ, ಭಯಂಕರವೂ; ಅಪಾರವೂ ನಿಸ್ಸಾರವೂ ಆಗಿರುವ ಸಂಸಾರದ ವ್ಯಾಪಾರದಿಂದುಂಟಾದ ಆಧ್ಯಾತ್ಮಿಕಾದಿ ತಾಪತ್ರಯವೆಂಬ ಅಗ್ನಿಯಿಂದ ಅತ್ಯಂತ ದಹಿಸಲ್ಪಡುವವನೂ, ನಾನಾ ಶರೀರಗಳಲ್ಲಿ ಪ್ರವೇಶ ಹಾಗೂ ಆ ಶರೀರಗಳಿಂದ ಉತ್ಕ್ರಮಣ ಇವುಗಳುಳ್ಳವನೂ, ವರ್ಣಾಶ್ರಮಾಭಿಮಾನವುಳ್ಳವನೂ, ಕಾಮ ಕ್ರೋಧಾದಿಗಳಿಂದ ಉತ್ಪನ್ನವಾದ ಸುಖ ದುಃಖಗಳುಳ್ಳವನೂ ಆಗಿರುವನು. ಹೀಗೆ ಪರಸ್ಪರ ವಿರುದ್ಧ ಸ್ವಭಾವವುಳ್ಳವರೂ, ಪರಸ್ಪರ ಭೇದವುಳ್ಳವರೂ, ಉತ್ಪತ್ತಿ, ವಿನಾಶ ರಹಿತರೂ ಆಗಿರುವ ಈ ಶಿವಜೀವರುಗಳಿಗೆ "ತತ್ವಮಸಿ" "ಅಹಂ ಬ್ರಹ್ಮಾಸ್ಮಿ" "ಬ್ರಹ್ಮವಿದ್ಬ್ರಹ್ಮೈವ ಭವತಿ" ಇತ್ಯಾದಿ ಶ್ರುತಿವಾಕ್ಯಗಳಿಂದ ಅಭೇದವು ಹೇಳಲ್ಪಡುವುದರಿಂದ ಜೀವನು ಶಿವನಿಗಭಿನ್ನನೋ? ಭಿನ್ನನೋ? ಎಂಬುವ ಸಂಶಯ ಉಂಟಾಗುತ್ತದೆ. ವಿಚಾರಕ್ಕೆ ಆ ವಿಚಾರ ವಿಷಯಕವಾದ ಬ್ರಹ್ಮಜ್ಞಾನವೇ ಫಲವಾಗಿದ್ದರೂ, ಆ ಬ್ರಹ್ಮಜ್ಞಾನಕ್ಕೆ ವಿಷಯವಾದ ಬ್ರಹ್ಮಕ್ಕೆ ಘಟ ಜ್ಞಾನಕ್ಕೆ ವಿಷಯವಾದ ಘಟದಂತೆ ಪರಿಚ್ಛೇದ್ಯತ್ವವೂ ಹಾಗು ಪರಿಚ್ಛೇದ್ಯವಾದ ಘಟದಂತೆ ನಾಶ ಪ್ರಸಂಗವೂ ಬರುವುದಿಲ್ಲ; ಘಟವು ಇದು ಘಟವು ಎಂಬ ಜ್ಞಾನದಿಂದ ಪರಿಚ್ಛೇದ್ಯವಾಗಿರುವುದು. ಆದುದರಿಂದ ಘಟಕ್ಕೆ ನಾಶವನ್ನು ಹೇಳಬಹುದು. ಬ್ರಹ್ಮವು ಹಾಗಲ್ಲ, "ನೇತಿ ನೇತಿ" "ಅಸ್ಥೂಲ ಮನಣ್ವ ದೀರ್ಘಮ ಹ್ರಸ್ವಂ" ಇತ್ಯಾದಿ ವ್ಯಾವರ್ತಕ ಲಕ್ಷಣಜನ್ಯ ಜ್ಞಾನಕ್ಕೆ ವಿಷಯವಾದುದರಿಂದ ಬ್ರಹ್ಮಕ್ಕೆ ನಾಶವಿಲ್ಲವು.

CC-0. Jangamwadi Math Collection. Digitized by eGangotri

ಆದ್ದರಿಂದ ಸಜಾತೀಯ ವಿಜಾತೀಯ ಸ್ಥೂಲ ಸೂಕ್ಷ್ಮ ಪ್ರಪಂಚ ವ್ಯಾವೃತ್ತ (ಭಿನ್ನ) ವಾದ ಬ್ರಹ್ಮವು ವೇದಾಂತ ವಾಕ್ಯಗಳಿಂದ ನಿರೂಪಿಸಲ್ಪಡುತ್ತದೆಯಾದ ಪ್ರಯುಕ್ತ ಶಾಸ್ತ್ರಾರಂಭವು ಯುಕ್ತವಾಗಿದೆ.

ಭಾ;— ಬ್ರಹ್ಮ ವಿಚಾರ ರೂಪವಾದ ಶಾಸ್ತ್ರಾರಂಭಕ್ಕೆ ಸಂಶಯರೂಪವಾದ ಬೀಜವನ್ನು ತೋರಿಸಿ, ಆ ವಿಚಾರ ಪ್ರಯೋಜಕವಾದ ಪ್ರಯೋಜನವನ್ನೂ ಸಹ ತೋರಿಸಲುದ್ಯುಕ್ತರಾದ ಭಾಷ್ಯಕಾರರು "ಬ್ರಹ್ಮವಿದಾಪ್ನೋತಿ ಪರಂ" ಇತ್ಯಾದಿ ಶ್ರುತಿ ವಾಕ್ಯಗಳಿಂದ ಪ್ರಯೋಜನವನ್ನು ತೋರಿಸುತ್ತಿರುವರು. "ಬ್ರಹ್ಮವಿದಾಪ್ನೋತಿ ಪರಂ" (ಬ್ರಹ್ಮಜ್ಞಾನಿಯು ಪರಶಿವ ಬ್ರಹ್ಮವನ್ನು ಹೊಂದುತ್ತಾನೆ) "ಜ್ಞಾತ್ವಾ ಶಿವಂ ಶಾಂತಿ-ಮತ್ಯಂತಮೇತಿ" (ಶಿವನನ್ನು ತಿಳಿದು ಪರಮ ಶಾಂತಿ ಯನ್ನು ಹೊಂದುತ್ತಾನೆ) "ಈಶಂ ಜ್ಞಾತ್ವಾ ಅಮೃತಾಭವಂತಿ" (ಈಶನನ್ನು ತಿಳಿದು ಅಮೃತರಾಗುತ್ತಾರೆ) "ಧ್ಯಾನ ನಿರ್ಮಥನಾಭ್ಯಾಸಾತ್ಪಾಶಂ ದಹತಿ ಪಂಡಿತಃ" (ಶಿವಧ್ಯಾನಾಭ್ಯಾಸದಿಂದ ಪಂಡಿತನು ಪಾಶವನ್ನು ಸುಡುತ್ತಾನೆ) "ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ" (ಶಿವೇತರವಾದ ಸರ್ವವನ್ನೂ ಬಿಟ್ಟು ಮುಕ್ತಿ ಪ್ರಧಾನವಾದ ಶಿವನೊಬ್ಬನೇ ಧ್ಯಾನಿಸಲು ಯೋಗ್ಯನು) "ಕ್ಷರಂ ಪ್ರಧಾನ ಯಮೃತಾಕ್ಷರಂ ಹರಃ ಕ್ಷರಾತ್ಮಾನಾವೀಶತೇ ದೇವ ಏಕಃ" (ಪ್ರಧಾನ (ಪ್ರಕೃತಿ) ವು-ಕ್ಷರ (ನಶ್ವರ) ವೆಂದೂ ಹರನು ನಿತ್ಯನೂ, ಅಕ್ಷರನೂ ಎಂದೂ ಹೇಳಲ್ಪಡುವನು. ಆ ಒಬ್ಬನಾದ ಹರನೆಂಬ ದೇವನು ಈ ಪ್ರಧಾನ ಪುರುಷರನ್ನು ತನ್ನ ಅಧೀನದಲ್ಲಿಟ್ಟು ಕೊಂಡು ಆಳುತ್ತಾನೆ.) "ತಸ್ಯಾಭಿಧ್ಯಾ ಧ್ಯಾನಾದ್ಯೋಜನಾತ್ತತ್ವ ಭಾವಾದ್ಭೂಯ ಸ್ಯಾಂತೇ ವಿಶ್ವಮಾಯಾ ನಿವೃತ್ತಿಃ" (ಆ ಪರಶಿವಲಿಂಗವನ್ನು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಧರಿಸಿರುವುದರಿಂದ ಕಡೆಗೆ ಎಲ್ಲ ಪಾಶಗಳ ನಿವೃತ್ತಿಯಾಗುವುದು) "ತಮಕ್ರತುಂ ಪಶ್ಯತಿ ವೀತ ಶೋಕೋ ಧಾತು ಪ್ರಸಾದಾನ್ಮಹಿಮಾನಮೀಶಂ" (ಶಿವಾನುಗ್ರಹ ಬಲದಿಂದಲೆ ಕರ್ಮರಹಿತನೂ, ಮಹದೈಶ್ವರ್ಯ ಸಂಪನ್ನನೂ ಆದ ಈಶ್ವರನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ. ಆದುದರಿಂದ ದುಃಖನನ್ನು ಕಳೆದು ಕೊಂಡು ಸುಖಿಯಾಗುವನು) "ಜ್ಞಾತ್ವಾ ದೇವಮುಚ್ಯತೆ ಸರ್ವ ಪಾಶೈಃ" (ಮಹಾ ದೇವನನ್ನು ತಿಳಿದು ಸರ್ವ ಪಾಶಗಳಿಂದ ಬಿಡಲ್ಪಡುವನು.) ಇತ್ಯಾದಿ ಅನಂತ ಶ್ರುತಿ ಗಳಲ್ಲಿ ಅದ್ವಿತೀಯ ಪರಶಿವ ಬ್ರಹ್ಮಜ್ಞಾನದಿಂದ ಸ್ವಾಭಾವಿಕವಾದ ಮಲತ್ರಯಾತ್ಮಕ ವಾದ ಮಾಯಾ ಪಾಶದ ಕಾರ್ಯರೂಪವಾದ ದುಃಖದ ನಿವೃತ್ತಿಯಾಗಿ ಪರಮ ಪುರು ಷಾರ್ಥರೂಪ ಪರಶಿವ ತತ್ವಪ್ರಾಪ್ತಿರೂಪವಾದ ಮೋಕ್ಷ ಪ್ರಯೋಜನವು ಕಂಡುಬರುವು ದರಿಂದ ಶಾಸ್ತ್ರಾರಂಭವು ಯುಕ್ತವೇ ಸರಿ! ಲೋಕದಲ್ಲಿ ನಿಂಬ ಕಷಾಯ ನ್ಯಾಯದಂತೆ (ಬೇವಿನ ಕಾಯಿಗೆ ಅಗ್ನಿ ಸಂಸ್ಕಾರಾದಿಗಳನ್ನು ಮಾಡಿ ಕಷಾಯ ತೆಗೆದರೂ, ಅದರ ಸ್ವಾಭಾವಿಕವಾದ ವಿಷದ ನಿವೃತ್ತಿಯಾಗದಿರುವಂತೆ) ಮಲತ್ರಯಾತ್ಮಕವಾದ ಮಾಯಾ

CC-0. Jangamwadi Math Collection. Digitized by eGangotri

ಪಾಶಕ್ಕೆ ಸ್ವಾಭಾವಿಕವೆಂದು ಹೇಳಿದರೆ, ಅದರ ನಿವೃತ್ತಿಯು ಸಂಭವಿಸಲಾರದು. ಆದುದರಿಂದ ಮೋಕ್ಷ ಪ್ರಯೋಜನವೇ ಸಿದ್ಧಿಸಲಾರದ ಪ್ರಯುಕ್ತ, ಶಾಸ್ತ್ರಾರಂಭವು ಅಯುಕ್ತವೆಂದು ಆಶಂಕಿಸಲಾಗದು. ಭ್ರಮರಕೀಟ ನ್ಯಾಯದಂತೆ (ಕೀಟವು (ಕೀಡಿಯು) ಭ್ರಮರವಾದಾಗ ಅದರ ಕೀಟ ಸ್ವಭಾವವು ನಿವೃತ್ತಿಯಾಗುವದು) ಹಾಗು ಲೋಹರಸ ನ್ಯಾಯದಂತೆ (ಲೋಹವು ರಸ ಸಂಪರ್ಕದಿಂದ ಸುವರ್ಣವಾದಾಗ ಅದರ ಲೋಹ ಸ್ವಭಾವವು ನಿವೃತ್ತಿಯಾಗುವದು) ಇದರಂತೆ ಮಾಯಾ ಪಾಶವು ಸ್ವಾಭಾವಿಕವಾಗಿದ್ದರೂ, ಸಾಂಗ ಶಿವಯೋಗದಿಂದ ಅದರ ನಿವೃತ್ತಿಯಾಗುತ್ತದಾದ್ದರಿಂದ ಶಾಸ್ತ್ರಾರಂಭವು ಯುಕ್ತವಾಗಿದೆ! ಹಾಗು ನಿಮ್ಮ ಮತದಲ್ಲಿ "ತತ್ವಮಸಿ" ಇತ್ಯಾದಿ ಅಭೇದ ಪ್ರತಿಪಾದಕ ಶ್ರುತಿ ವಾಕ್ಯಗಳಲ್ಲಿ "ತತ್" "ತ್ವಂ" ಪದಗಳಿಗೆ ಸರ್ವಜ್ಞತ್ವ, ವಿಶಿಷ್ಟ ಚೈತನ್ಯ, ಕಿಂಚಿಜ್ಞತ್ವ ವಿಶಿಷ್ಟ ಚೈತನ್ಯವೆಂದು ಮುಖ್ಯಾರ್ಥವನ್ನು ಸ್ವೀಕರಿಸಿದರೆ "ಅಸಿ" ಪದದಿಂದ ಹೇಳಲ್ಪಡುವ ಅಭೇದವು ಬಾಧಿತವಾಗುವದರಿಂದ "ತತ್" "ತ್ವಂ" ಪದಗಳ ಮುಖ್ಯಾರ್ಥದ ಸರ್ವಜ್ಞತ್ವ, ಕಿಂಚಿಜ್ಞತ್ವಗಳೆಂಬ ಭಾಗಗಳನ್ನು ಬಿಟ್ಟು, ಚೈತನ್ಯಾಂಶಗಳಲ್ಲಿ ಲಕ್ಷಣೆಯನ್ನು ಸ್ವೀಕರಿಸಿ ವಾಕ್ಯಾರ್ಥವನ್ನು ನಿರ್ವಹಿಸಬೇಕಾಗುತ್ತದೆ. ಆದ್ದರಿಂದ ಗೌಣಾರ್ಥ (ಲಕ್ಷಣಾರ್ಥ) ಸ್ವೀಕಾರರೂಪವಾದ ಗೌರವ ದೋಷವು ಪ್ರಾಪ್ತವಾಗುತ್ತದೆ. ಈ ದೋಷವು ನಮ್ಮ ವೀರಶೈವ ಮತದಲ್ಲಿ ಬರುವದಿಲ್ಲ. ಯಾಕೆಂದರೆ "ಕೀಟೋ ಭ್ರಮರ ಯೋಗೇನ ಭ್ರಮರೋ ಭವತಿ ಧೃವಂ। ಮಾನವಃ ಶಿವಯೋಗೇನ ಶಿವೋ ಭವತಿ ಸರ್ವದಾ॥" ಇಂತೆಂಬ ಶಂಕ ಸ್ಮೃತಿ ವಚನದಂತೆ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತಗಳೆಂಬ ಅಂಗಗಳಿಂದ ಯುಕ್ತವಾದ ಶಿವಾರ್ಚನೆಯೆಂಬ ಶಿವಯೋಗದ ದೃಢತರಾಭ್ಯಾಸದಿಂದ ಜೀವಭಾವವು ನಿವೃತ್ತವಾಗಿ, ಶಿವಭಾವವು ಪ್ರಾಪ್ತವಾಗುವುದರಿಂದ, ಶಿವನೇ ತಾನಾಗಿ ಬಿಡುವನು. ಯಾವ ಅವಸ್ಥೆಯಲ್ಲಿ ಜೀವನು ಶಿವನಾಗುವನೋ ಆ ಅವಸ್ಥೆಯಲ್ಲಿ "ತತ್ವಮಸಿ" "ಅಹಂ ಬ್ರಹ್ಮಾಸ್ಮಿ" ಇತ್ಯಾದಿ ವಾಕ್ಯಗಳು ಶಿವಜೀವರಿಗೆ ಅಭೇದವನ್ನು ಹೇಳುತ್ತವೆಯೆಂದು ವೀರಶೈವಾಚಾರ್ಯರಾದ ಭಾಷ್ಯಕಾರರು ಹೇಳುವದರಿಂದ ವೀರಶೈವ ಮತದಲ್ಲಿ ಲಕ್ಷಣಾರ್ಥ ಸ್ವೀಕಾರಕ್ಕೆ ಪ್ರಯೋಜನವಿಲ್ಲವಾದ ಪ್ರಯುಕ್ತ ಗೌರವ ದೋಷವೂ ಇಲ್ಲ. ಅಂದರೆ ವೀರಶೈವಾಚಾರ್ಯರು "ತತ್ವಮಸಿ" ಮುಂತಾದ ಅಭೇದ ವಾಕ್ಯಗಳು ಮುಕ್ತಿ ದೆಸೆಯಲ್ಲಿ ಶಿವಜೀವರಿಗೆ ಅಭೇದವನ್ನು ಹೇಳುತ್ತವೆಂದೂ, "ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೆ ತಯೋರನ್ಯಃ ಪಿಪ್ಪಲಂ ಸಾದ್ವತ್ಯನಶ್ನನ್ನನ್ಯೋಽಭಿ ಚಾಕಸೀತಿ" ಇತ್ಯಾದಿ ಭೇದ ವಾಕ್ಯಗಳು ಬದ್ಧ ದೆಸೆಯಲ್ಲಿ ಶಿವಜೀವರಿಗೆ ಭೇದವನ್ನು ಹೇಳುತ್ತವೆಂದೂ ಹೇಳಿ, ಶ್ರುತಿವಾಕ್ಯಗಳ ಪರಸ್ಪರ ವಿರೋಧವನ್ನು ಪರಿಹರಿಸಿ, ವ್ಯವಸ್ಥೆಗೊಳಿಸಿರುವದರಿಂದ ಯಾವ ಗೌರವ ದೋಷವೂ ಇವರ ಮತದಲ್ಲಿ ಬರುವದಿಲ್ಲವೆಂದು ಭಾವವು! "ಯಥಾ ನದ್ಯಃ ಸ್ಯಂದ

CC-0. Jangamwadi Math Collection. Digitized by eGangotri

ಮಾನಾಃ ಸಮುದ್ರೇ ಅಸ್ತಂಗಚ್ಛಂತಿ ನಾಮರೂಪೇ ವಿಹಾಯ ತಥಾ ವಿದ್ವಾನ್ನಾಮ ರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ'' (ಹೇಗೆ ಗಂಗಾದಿ ನದಿಗಳು ಅತ್ತಿತ್ತ ಪ್ರವಹಿಸುತ್ತ ಹೋಗಿ ಸಮುದ್ರದಲ್ಲಿ ಸಮರಸಗೊಂಡು ತಮ್ಮ ನಾಮರೂಪ ಗಳನ್ನು ಬಿಟ್ಟು, ಸಮುದ್ರ ಸ್ವರೂಪವನ್ನೂ, ಸಮುದ್ರವೆಂಬ ನಾಮವನ್ನೂ ಹೊಂದಿ ಬಿಡಲಿಲ್ಲವೊ ? ಹಾಗೆಯೇ ಶಿವ ತತ್ವಜ್ಞಾನಿಯು ತನ್ನ ಚೈತ್ರ ಮೈತ್ರಾದಿ ನಾಮವನ್ನು ತನ್ನ ಜೀವಭಾವವೆಂಬ ರೂಪವನ್ನು ಬಿಟ್ಟು, ಪರಶಿವ ತತ್ವದಲ್ಲಿ ಸಮರಸಗೊಂಡು ಪರಶಿವ ಸ್ವರೂಪವನ್ನು, ಪರಶಿವ ನಾಮವನ್ನು ಹೊಂದಿ, ಪರಶಿವನೇ ಆಗಿಬಿಡುವನು) ಇಂತೆಂಬ ಮುಂತಾದ ಶ್ರುತಿಗಳಲ್ಲಿ ಸಂಶಯರಹಿತವಾಗಿ ಪ್ರಾಪ್ಯ ಪ್ರಾಪಕ ಭಾವವು ಉಪದೇಶಿಸಲ್ಪಡುವದರಿಂದ ಮಾಯಾ ಪಾಶವು ಸ್ವಾಭಾವಿಕವೆಂದೂ, ಸಾಧನಾಭ್ಯಾಸ ದಿಂದ ಅದನ್ನು ನಿವೃತ್ತಿಗೊಳಿಸಿ, ಶಿವತತ್ವವನ್ನು ಪಡೆಯುವನೆಂದೂ ಹೇಳಬೇಕಲ್ಲದೆ, ಮಾಯಾ ಪಾಶವು (ಅಧ್ಯಾಸವು ಅಥವಾ ಅವಿದ್ಯಾ) ವಾಸ್ತವಿಕವಾಗಿ ಇಲ್ಲವೇ ಇಲ್ಲ ವೆಂದೂ, ಅದರ ನಿವೃತ್ತಿಯೂ ಕೂಡ ಇಲ್ಲವೆಂದೂ, ಆಮೇಲೆ ಬ್ರಹ್ಮತ್ವವನ್ನು ಪಡೆದು ಕೊಳ್ಳುವುದಿವೆಂದೂ ಹೇಳಬಾರದು. ಕಂಠಚಾಮೀಕರ ನ್ಯಾಯದಂತೆ (ತನ್ನ ಕಂಠ ದಲ್ಲಿಯೇ ಬಂಗಾರದ ಸರವಿದ್ದು, ಅದನ್ನು ಮರೆತು ಭಯಪಟ್ಟು, ದುಃಖಪಟ್ಟು ಆಮೇಲೆ, ನಿನ್ನ ಕಂಠದಲ್ಲಿಯೇ ನಿನ್ನ ಚಂದ್ರಹಾರವಿದೆ ನೋಡು ಎಂಬ ಆಪ್ತನ ವಾಕ್ಯ ದಿಂದ ಆ ಚಂದ್ರಹಾರವನ್ನು ನೋಡಿ, ಮೊದಲಿಲ್ಲದ್ದು ದೊರೆಯದೆ, ಇದ್ದುದೇ ದೊರೆ ತಿದ್ದರೂ, ನನ್ನ ಚಂದ್ರಹಾರವು ದೊರೆಯಿತೆಂದು ಅನ್ನುವ ಮನುಷ್ಯನ ವಾಕ್ಯದಂತೆ) ''ಯಥಾ ನದ್ಯಃ'' ಇತ್ಯಾದಿ ವಾಕ್ಯಗಳು ಉಪಚಾರ ವಾಕ್ಯಗಳಾಗಿವೆ ಎನ್ನುವದು ಯುಕ್ತವಾಗಲಾರದು. ಉಪಕ್ರಮಾದಿ ಷಡ್ವಿಧ ಲಿಂಗಗಳಿಂದ ಯುಕ್ತಗಳಾದ ಅನೇಕ ಶ್ರುತಿ ವಾಕ್ಯಗಳಿಗೆ ಉಪಚಾರ ವಾಕ್ಯಗಳೆಂದೆನ್ನುವದು ಅಯೋಗ್ಯವು. ಇದಲ್ಲದೆ ಅಧ್ಯಾಸವಾದಿಯಾದ ನಿನ್ನ ಮತದಲ್ಲಿ ''ಸ ಐಕ್ಷತ ಬಹುಸ್ಯಾಂ'' ಇತ್ಯಾದಿ ಶ್ರುತಿ ಗಳಿಂದ ಹೇಳಲ್ಪಡುವ ಸಂಕಲ್ಪರೂಪವಾದ ಈಕ್ಷಿತಿಯೂ ಕೂಡ ಬ್ರಹ್ಮದಲ್ಲಿ ವಾಸ್ತವ ವಾಗಿರದೆ, ಅಧ್ಯಾಸ ಕಲ್ಪಿತವಾಗಿದೆಯೆಂದೂ ಹೇಳಬೇಕಾಗುವದರಿಂದ ಶ್ರುತಿ ವಾಕ್ಯ ಗಳಿಗೆ ಮುಖ್ಯಾರ್ಥವನ್ನು ಪರಿತ್ಯಾಗಮಾಡಿ, ಗೌಣಾರ್ಥವನ್ನೇ ಹೇಳಬೇಕಲ್ಲವೆ; ಹಾಗೆ ಹೇಳಿದರೆ ''ಈಕ್ಷತೇರ್ನಾ ಶಬ್ದಂ'' ಎಂಬ ಈಕ್ಷತ್ಯಧಿಕರಣಕ್ಕೆ ವಿರೋಧವೇ ಆಗುವದು. ಯಾಕೆಂದರೆ, ಈ ಅಧಿಕರಣದಲ್ಲಿ ಸೂತ್ರಕಾರರು ಬ್ರಹ್ಮದಲ್ಲಿ ಸಂಕಲ್ಪರೂಪವಾದ ಈಕ್ಷತಿಯನ್ನು ವಾಸ್ತವಿಕವಾಗಿ ಸ್ವೀಕರಿಸಿರುವರಷ್ಟೆ, ಆದುದರಿಂದ ಎಂದೆಂದೂ ಇಲ್ಲದ ಅಧ್ಯಾಸವನ್ನು ಸ್ವೀಕರಿಸಿ, ಈ ಅಧ್ಯಾಸಾನುಗುಣವಾಗಿ ''ಯಥಾನದ್ಯಃ'' ''ಸ ಐಕ್ಷತಿ'' ಇತ್ಯಾದಿ ಶ್ರುತಿಗಳಿಗೆ ಗೌಣಾರ್ಥವನ್ನು ಹೇಳದೆ, ಮುಖ್ಯಾರ್ಥವನ್ನೇ ಹೇಳಬೇಕು.

(ಮುಂದುವರಿಯುವದು)

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಎಲೈ ಭೇದಾಭೇದ ವಾದಿಯಾದ ವೀರಶೈವನೆ, ಅಧ್ಯಾಸವನ್ನು ಸ್ವೀಕರಿಸದ ಪಕ್ಷದಲ್ಲಿ ಅದರ ನಿವೃತ್ತಿಯೂ ಇಲ್ಲವಾಗಿ ಹೋಗುವದರಿಂದ ಅವಿದ್ಯಾ ನಿವೃತ್ತಿರೂಪ ವಾದ ಮೋಕ್ಷವೇ ಇಲ್ಲವೆಂದು ಹೇಳುವ ಪ್ರಸಂಗವು ಬರುವುದಲ್ಲವೆ, ಎಂದು ಆಶಂಕಿಸ ಕೂಡದು ಆ ನಿನ್ನ ಮಿಥಾಭೂತವಾದ ಅಧ್ಯಾಸ (ಅವಿದ್ಯೆ) ವಿದೆಯಂಬ ವಿಷಯದಲ್ಲಿ ಪ್ರತ್ಯಕ್ಷ ಶ್ರುತಿಗಳೊಂದೂ ಕಂಡು ಬರದೇ ಇರುವದರಿಂದ ಶ್ರುತಿ ಪ್ರಮಾಣಗಳಲ್ಲವೆಂದು ಸ್ಪಷ್ಟವಾಗುತ್ತದೆ ಇಸ್ನು ''ಅಹಮಜ್ಞಃ'' (ನಾನು ಅಜ್ಞನು) ಎಂಬ ಅನುಭವವೂ ಕೂಡ ಪ್ರಮಾಣವಾಗಲಾರದು. ಈ ಅನುಭವವು ಶರೀರೇಂದ್ರಿಯಾದಿ ವಿಶಿಷ್ಟನಾದ ಜೀವನಸ್ನು ಆಶ್ರಯಿಸಿರುವುದರಿಂದ ಜೀವವಿಷಯಕ ವಾದುದೆಂದು ಹೇಳಬೇಕಲ್ಲದೇ ಬ್ರಹ್ಮ ವಿಷಯಕ ವಾದುದಲ್ಲವೆಂದಮೇಲೆ ಬ್ರಹ್ಮಕ್ಕೆ ಅಜ್ಞಾನವನ್ನು ಹೇಳುವುದು ಹೇಗೆ, ಹೇಳಲಾಗುವುದಿಲ್ಲವಾದುದರಿಂದ ನಿರ್ವಿಶೇಷ ಚಿನ್ಮಾತ್ರ ಬ್ರಹ್ಮಕ್ಕೆ ತನಗೆ ಭಿನ್ನವಾದ ಮಾಯೆಯೆಂಬ ಉಪಾಧಿಯನ್ನು ಹೇಳುವದೂ ಕೂಡ ಯುಕ್ತವಲ್ಲ! "ಯಃ ಸರ್ವಜ್ಞಃ ಸರ್ವವಿತ್ ಪ್ರಜ್ಞಾನಂ ಬ್ರಹ್ಮ" ಇಂತೆಂಬ ಮೊದಲಾದ ಶೃತಿಗಳಲ್ಲಿ ಬ್ರಹ್ಮಕ್ಕೆ ಸರ್ವಜ್ಞತ್ವ ಪ್ರಜ್ಞಾನತ್ವಾದಿ ಧರ್ಮಗಳನ್ನು ಹೇಳುವದರಿಂದ ಬ್ರಹ್ಮಕ್ಕೆ ಜೀವನಂತೆ ಅಜ್ಞಾನವನ್ನು ಹೇಳುವದು ಅತ್ಯಂತ ವಿರುದ್ಧವು! ಅದಕ್ಕೆ (ಬ್ರಹ್ಮಕ್ಕೆ) ಅವಿದ್ಯೆಯನ್ನಂಗೀಕರಿಸಿದರೆ ಅದು ಬ್ರಹ್ಮವೆನಿಸಲಾರದು ಆದುದರಿಂದ ಬ್ರಹ್ಮಕ್ಕೆ ಅವಿದ್ಯೆಯಿದೆಂಬಲ್ಲಿ ಶೃತಿಯೂ ಅನುಭವವೂ ಪ್ರಮಾಣವಾಗಲಾರವು! ಆ ಬ್ರಹ್ಮಕ್ಕೆ ಅವಿದ್ಯೆ ಯಿದೆಂಬಲ್ಲಿ ಅವಿದ್ಯೆಯೇ ಪ್ರಮಾಣವೆಂದು ಹೇಳುವದಾದರೆ ಆತ್ಮಾಶ್ರಯ ಅನ್ಯೋನ್ಯಾಶ್ರಯಾದಿ ದೋಷವು ಪ್ರಾಪ್ತವಾಗುವುದು ಹಾಗೂ "ಅಪ್ರಾಣೋಹ್ಯ ಮನಾಃ ಶುಭ್ರಃ" ಇತ್ಯಾದಿ ಶೃತಿಗಳಲ್ಲಿ ಬ್ರಹ್ಮಕ್ಕೆ ಮನಃ ಪ್ರಾಣಾದಿ ಸಂಬಂಧವೇ ಇಲ್ಲವೆಂದು ಕಂಡು ಬರುವುದರಿಂದ ಮನಃ ಪ್ರಾಣ ಸಂಬಂಧವಿಲ್ಲದ ಬ್ರಹ್ಮಕ್ಕೆ ಭ್ರಾಂತಿಯನ್ನು ಕಲ್ಪಿಸುವದು ಪ್ರಮಾದವು. ಹಾಗು ಜೀವನಂತೆ ಬ್ರಹ್ಮಕ್ಕೆ ಅಜ್ಞಾನವನ್ನು ಕಲ್ಪಿಸುವದಾದರೆ ಆ ಅಜ್ಞಾನ ನಿವರ್ತಕವಾದ ಬ್ರಹಾಂತರವನ್ನು ಅವಶ್ಯವಾಗಿ ಕಲ್ಪಿಸಬೇಕಾಗುವುದು. ಹೀಗೆ ಕಲ್ಪಿಸುತ್ತಾ ಹೋದರೆ ಅನವಸ್ಥಾ ದೋಷವೇ ಪ್ರಾಪ್ತವಾಗುವುದು. ಇದಲ್ಲದೇ ಬ್ರಹ್ಮಕ್ಕೆ ಸ್ವಸ್ವರೂಪ ಜ್ಞಾನಾ ವರಕವಾದ ಅಜ್ಞಾನವನ್ನು ಸ್ವೀಕರಿಸಿದ ಪಕ್ಷದಲ್ಲಿ ಅಜ್ಞಾನದಲ್ಲಿಯೇ ಬ್ರಹ್ಮಕ್ಕಿಂತ ಹೆಚ್ಚಿನ ಶಕ್ತಿಯನ್ನು ಹೇಳಬೇಕು. ಹೇಳಿದರೆ ಅಜ್ಞಾನವೇ ಬ್ರಹ್ಮಕ್ಕಿಂತ ಅಧಿಕ ವಾಗುವದರಿಂದ ಸತ್ಯವಾದ ಬ್ರಹ್ಮಕ್ಕಿಂತ ಅಜ್ಞಾನವು ಅತ್ಯಂತ ಸತ್ಯವಾಗಿ ಹೋಗುವ ದಂದ ಮೇಲೆ ಅಜ್ಞಾನಕ್ಕೆ ಮಿಥ್ಯೆಯೆಂದು ಹೇಳುವದೇಕೆ, ಹೇಳಬಾರದು! "ತಮಸಃ ಪರಸ್ತಾತ್" "ತಮೇವ ವಿದಿತ್ವಾತಿ ಮೃತ್ಯುಮೇತಿ" ''ಬ್ರಹ್ಮ ವಿದಾಪ್ನೋತಿ ಪರಂ''

CC-0. Jangamwadi Math Collection. Digitized by eGangotri

ಇತ್ಯಾದಿ ಶೃತಿಗಳಲ್ಲಿ ಬ್ರಹ್ಮವು ಅಜ್ಞಾನ ರೂಪವಾದ ತಮಸ್ಸಿಗೆ ಮೀರಿದುದೆಂದೂ ಬ್ರಹ್ಮಜ್ಞಾನದಿಂದ ಜೀವರಿಗೆ ಮುಕ್ತಿಯೆಂದೂ ಹೇಳುವದರಿಂದ ಬ್ರಹ್ಮಕ್ಕೆ ಅಜ್ಞಾನ ವನ್ನು ಹೇಳುವದು ಅತಿ ಹೇಯವಾಗಿದೆ.

ಶುಕ್ತಿಗೆ ರಜತ ತನವು ಭ್ರಾಂತಿ ಮಾತ್ರ ಕಲ್ಪೀತ ವಾಗಿರುವಂತೆ ಬ್ರಹ್ಮಕ್ಕೆ ಜೀವ ಭಾವವು ಭ್ರಾಂತಿ ಮಾತ್ರ ಕಲ್ಪಿತವೆಂದು ಹೇಳಲಾಗುವದಿಲ್ಲ. ಮೊದಲು ಭ್ರಾಂತಿ ಯೇ ಸಂಭವಿಸುವದಿಲ್ಲ. ಲೋಕದಲ್ಲಿ ನಾಲ್ಕು ಪದಾರ್ಥಗಳಿದ್ದಲ್ಲಿಯೇ ಭ್ರಾಂತಿಯು ಸಂಭವಿಸುತ್ತದೆ. ಶುಕ್ತಿ ರಜತ ಸ್ಥಲದಲ್ಲಿ ಶುಕ್ತಿ ಶುಕ್ತಿಗೆ ಭಿನ್ನವಾದ ರಜತ, ಈರಜ ತಕ್ಕೆ ಭಿನ್ನವಾದ ರಜತವನ್ನು ನೋಡಿದ ಮನುಷ್ಯ. ಈ ಮೂರಕ್ಕೂ ಭಿನ್ನವಾದ ಚಕ್ಷ ರಿಂದ್ರಿಯ, ಈ ನಾಲ್ಕು ಪದಾರ್ಥಗಳಿರುವುದರಿಂದ ರಜತ ಭ್ರಾಂತಿ ಸಂಭವಿಸುತ್ತದೆ. ನಿನ್ನ ಅದ್ವೈತ ಮತದಲ್ಲಿ ಬ್ರಹ್ಮೇತರ ವಸ್ತುವೇ ಇಲ್ಲದಿರುವದರಿಂದ ಭ್ರಾಂತಿಯು ಉಪ ಪನ್ನ (ಯುಕ್ತ) ವಾಗಲಾರದು. ಬ್ರಹ್ಮೇತರ ವಸ್ತು ವುಂಟೆಂದು ಅಂಗೀಕರಿಸಿದರೆ ನಿನ್ನ ಅದ್ವೈತಕ್ಕೇ ಹಾನಿಯು, ಅಂಗೀಕರಿಸದಿದ್ದಲ್ಲಿ ಭ್ರಾಂತಿಯ ನಿರ್ವಾಹವಾಗುವದಿಲ್ಲ. ಸ್ವಪ್ನ ಪ್ರಪಂಚದಂತೆ ಪ್ರಪಂಚಕ್ಕೆ ಮಿಥ್ಯಾತ್ವವನ್ನು ಹೇಳಲಾಗುವದಿಲ್ಲ. ಸ್ವಪ್ನದಲ್ಲಿ ಅರ್ಥಸಿದ್ಧಿ, ಕ್ರಿಯಾಸಿದ್ಧಿಗಳು ಕಾಣದಿರುವದೂ ಜಾಗ್ರತ್ಪ್ರಪಂಚದಲ್ಲಿ ಅವುಗಳು ಕಂಡು ಬರುವದೂ ಅನುಭವಸಿದ್ಧವಾಗಿದೆಯಷ್ಟೆ, ಅಂದರೆ ಸ್ವಪ್ನದಲ್ಲಿ ವಿಷ ಪೀಯೂಷ ಪಾನ ಗಳಿಂದ ಸಾಯುವದೂ ಚಿರಕಾಲ ಬದುಕುವದೂ ಹಾಗೂ ಕ್ರಿಯಾ ಸಿದ್ಧಿಯನ್ನು ಪಡೆ ದಿರುವದೂ ಅನುಭವ ಸಿದ್ಧವೆಂದೂ ಯಾರೂ ಹೇಳಲಾರರು. ಜಾಗ್ರತ್ಪ್ರಪಂಚದಲ್ಲಿ ಯಾದರೋ ಅನುಭವ ಸಿದ್ಧವೆಂದು ಆಬಾಲವೃದ್ಧರೂ ಹೇಳುವರು ಆದುದರಿಂದ ಸ್ವಪ್ನ ದಂತೆ ಪ್ರಪಂಚಕ್ಕೆ ಮಿಥ್ಯೆಯೆಂದು ಹೇಳಕೂಡದು ವಿಧಿ ನಿಷೇಧ ವಿಧಾಯಕ ಶಾಸ್ತ್ರ ಹಾಗೂ ಈ ಶಾಸ್ತ್ರ ಬೋಧಕ ಆಚಾರ್ಯ, ಇವನ ಉಪದೇಶ, ಇವೆಲ್ಲವೂ ಮಿಥ್ಯೆಯಾಗಿ ನಿರುಪಯುಕ್ತಗಳಾಗಿ ಹೋಗುವದರಿಂದ ಬುದ್ಧಮತ ಪ್ರವೇಶವೇ ಆಗಿ ಹೋಗುವದಾ ದುದರಿಂದ ವಿಧಿ ನಿಷೇಧ ವಿಧಾಯಕ ಶಾಸ್ತ್ರಾದಿ ಪ್ರಪಂಚಕ್ಕೆ ಮಿಥ್ಯೆಯೆಂದು ಹೇಳಕೂ ಡದು. ಹಾಗೂ ಶ್ರೀ ವ್ಯಾಸಮಹರ್ಷಿಗಳು ದ್ವಿತೀಯಾಧ್ಯಾಯದಲ್ಲಿ "ನಾಭಾವ ಉಪಲಬ್ಧೇಃ" "ವೈಧರ್ಮ್ಯಾಚ್ಚ ನಸ್ವಪ್ನಾದಿವತ್" ಇಂತೆಂಬ ಸೂತ್ರಗಳಿಂದ ಸ್ವಪ್ನ ಇಂದ್ರಜಾಲದಂತೆ ಪ್ರಪಂಚವು ಮಿಥ್ಯೆಯೆಂಬ ವಾದವನ್ನು ಚನ್ನಾಗಿ ಖಂಡಿಸಿರುವರು. ಆದುದರಿಂದ ಪ್ರಪಂಚಕ್ಕೆ ಮಿಥ್ಯೆಯೆಂದೆನ್ನ ಕೂಡದು. ಇದಲ್ಲದೆ ಕೃಷ್ಣ ಗೀತೆಯಲ್ಲಿಯೂ "ಅಸತ್ಯಮ ಪ್ರತಿಷ್ಠಂತೇ ಜಗದಾಹುರ್ನಿರೀಶ್ವರಾಃ" ಎಂಬ ಶ್ಲೋಕದಿಂದ ಈ ವಾದವು ಖಂಡಿಸಲ್ಪಟ್ಟಿರುವುದು. ಹಾಗೂ ವಸ್ತು ಸಿದ್ಧಿಯು ಲಕ್ಷಣ ಪ್ರಮಾಣಗಳ ಅಧೀನ ವಾಗಿರುವದಲ್ಲವೆ' ನಿರ್ವಿಶೇಷ ಬ್ರಹ್ಮವೆಂಬ ಒಂದು ವಸ್ತುವಿದೆ ಎಂಬಲ್ಲಿ ಪ್ರಮಾಣವಾ ವುದು, ಶೃತಿಯು ಪ್ರಮಾಣವೆಂದರೆ ಅದೂ ಕೂಡ ಜಗದಂತಃ ಪಾತಿ ಯಾಗುವದರಿಂದ ಆ ಶೃತಿ ಪ್ರತಿ ಪಾದ್ಯವಾದ ಬ್ರಹ್ಮವು ಕೂಡ ಮಿಥ್ಯೆಯಾಗಿ ಹೋಗುವದು. ಇನ್ನು

CC-0. Jangamwadi Math Collection. Digitized by eGangotri

ಶೃತಿಯು ಮಿಥ್ಯೆಯಲ್ಲ ಸತ್ಯವಾಗಿದೆಯಂದರೆ ಅದ್ವೈತ ಹಾನಿಯು ಶೃತಿಯು ಅಸತ್ಯವೆಂದರೆ ಬ್ರಹ್ಮದ ಇರುವಿಕೆಯಲ್ಲಿ ಸತ್ಯವಾದ ಬೇರೆ ಪ್ರಮಾಣವಿಲ್ಲದಿರುವದರಿಂದ ವಂಧ್ಯಾಪುತ್ರನಂತೆ ಬ್ರಹ್ಮಕ್ಕೂ ಅಸತ್ಯತ್ವವು ಪ್ರಾಪ್ತವಾಗುವುದು! ಹಾಗೂ ಅಧ್ಯಾಸವನ್ನು ಸ್ವೀಕರಿಸದಿದ್ದಲ್ಲಿ ಮುಕ್ತಿಗೆ ಬಾಧಕವೇನೂಇಲ್ಲವೇಇಲ್ಲವಷ್ಟೆ ಅಂದಮೇಲೆ ಅಧ್ಯಾಸವನ್ನು ಏಕೆ ಸ್ವೀಕರಿಸಬೇಕು, ಇದಲ್ಲದೇ ಅದನ್ನು ಸ್ವೀಕರಿಸಿದರೆ ಎಲ್ಲಾ ಶೃತಿಗಳಿಗೂ ಸ್ವಾಭಾವಿಕವಾಗಿ ಸಮನ್ವಯವಾಗಲಾರದು. ಆದುದರಿಂದ ಅಧ್ಯಾಸವಿದೆಂಬಲ್ಲಿ ಪ್ರಮಾಣವಿಲ್ಲ! ಬ್ರಹ್ಮವಿದೆಂಬಲ್ಲಿ ಅವಿದ್ಯೆಯೇ ಪ್ರಮಾಣವೆಂದರೆ ಬ್ರಹ್ಮವು ತನ್ನ ಸದ್ಭಾವದಲ್ಲಿ ತನಗನ್ಯವಾದ ಅವಿದ್ಯೆಯಂಬ ಪ್ರಮಾಣವನ್ನು ಅಪೇಕ್ಷಿಸಿಕೊಳ್ಳುವದರಿಂದ ಅದಕ್ಕೆ ನೀನು ಸ್ವೀಕರಿಸಿದ ಸ್ವ ಪ್ರಕಾಶತ್ವದ ಭಂಗವಾಗುವದು. ಇನ್ನು ಅವಿದ್ಯಾ ವಿಶಿಷ್ಟ ಚೈತನ್ಯವೇ ಪ್ರಮಾಣವೆಂದರೆ ಬ್ರಹ್ಮರೂಪ ಚೈತನ್ಯ ಸಿದ್ಧಿಗಾಗಿ ಅವಿದ್ಯಾ ವಿಶಿಷ್ಟ ಚೈತನ್ಯವನ್ನು ಆಶ್ರಯಿಸಬೇಕು. ಅವಿದ್ಯಾ ವಿಶಿಷ್ಟ ಚೈತನ್ಯ ಸಿದ್ಧಿಗಾಗಿ ಚೈತನ್ಯವನ್ನಾಶ್ರಯಿಸಬೇಕು. ಹೀಗೆ ಅನ್ಯೋನ್ಯಾಶ್ರಯದೋಷವು ಬರುವುದು! ಇದಲ್ಲದೆ ಅವಿದ್ಯಾ ವಿಶಿಷ್ಟ ಚೈತನ್ಯ (ಜೀವರೂಪ ಚೈತನ್ಯ) ವು ಶುದ್ಧ ಚೈತನ್ಯ ರೂಪ ಪರಮೇಶ್ವರ ಸದ್ಭಾವದಲ್ಲಿ ಪ್ರಮಾಣವೆನಿಸಲಾರದು. ಪ್ರಮಾಣ ವೆನಿಸುವದೆಂದರೆ ಜೀವರ ನಾನು ಮನುಷ್ಯನು, ಎಂಬುದೇ ಮುಂತಾದ ಭ್ರಾಂತಿ ಪ್ರತ್ಯಯಾದಿಗಳೂ ಪರಮೇಶ್ವರಾಧೀನಗಳಾಗದೇ ಹೋಗಬೇಕು. ''ಏಷಾ ಏವ ಸಾಧುಕರ್ಮ್ಮಕಾರಯತಿ'' ಇತ್ಯಾದಿ ಶೃತಿಗಳಲ್ಲಿ ಜೀವರ ಸರ್ವ ಕರ್ಮಗಳೂ ಪರಮೇಶ್ವರಾಧೀನಗಳೆಂದೂ ಕಂಡು ಬರುತ್ತದಾದುದರಿಂದಾ ಪರತಂತ್ರವಾದ ಅವಿದ್ಯಾ ವಿಶಿಷ್ಟ ಚೈತನ್ಯವು (ಜೀವ ಚೈತನ್ಯವು) ಸ್ವತಂತ್ರವಾದ ಬ್ರಹ್ಮರೂಪ ಪರಮೇಶ್ವರ ಸದ್ಭಾವದಲ್ಲಿ ಪ್ರಮಾಣವಾಗಲಾರದು! ಹಾಗೂ "ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ। ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿಮಾಯಯಾ॥" ಇಂತೆಂಬ ಕೃಷ್ಣ ಗೀತೆಯ ಶ್ಲೋಕವೂ ಕೂಡಾ ಪರಮೇಶ್ವರಾಧೀನಗಳೇ ಸರ್ವ ಕರ್ಮಗಳೆಂದು ಸಾರುತ್ತದೆ. ಆದ್ದರಿಂದ ಸ್ವತಂತ್ರ ಪರಮೇಶ್ವರನು (ಬ್ರಹ್ಮವು) ತನ್ನ ಅಸ್ತಿತ್ವ ವಿಷಯದಲ್ಲಿ ಪರತಂತ್ರವಾದ ಅವಿದ್ಯಾ ವಿಶಿಷ್ಟವಾದ ಜೀವ ಚೈತನ್ಯವನ್ನು ಅಪೇಕ್ಷಿಸಿಕೊಳ್ಳಲಾರದು.

''ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ'' ಇಂತೆಂಬ ಶೃತಿಯಲ್ಲಿ ಪ್ರಪಂಚಕ್ಕೆ ಅಪವಾದವು ಕಂಡುಬರುವದರಿಂದಲೂ, ಈ ಅಪವಾದವು ಅಧ್ಯಾಸವನ್ನು ಸ್ವೀಕರಿಸದಿದ್ದಲಿ ಸಂಗತವಾಗಲಾರದಾದುದರಿಂದಲೂ ಅಧ್ಯಾಸವನ್ನು ಅಂಗೀಕರಿಸಿಯೇ ತೀರಬೇಕಾಗುತ್ತಿದೆಯಲ್ಲವೆ? ಅಂಗೀಕರಿಸಬೇಕಾದ ಅವಶ್ಯಕತೆಯಿರುವುದಿಲ್ಲ. ಯಾಕೆಂದರೆ ಈ ಶೃತಿಯ ಅಭಿಪ್ರಾಯವನ್ನೇ ನೀನು ತಿಳಿದಿರುವದಿಲ್ಲ. ಈ ಶೃತಿಯಿಂದ ಶಿವನೆಂಬ ಉಪಾದಾನ ಕಾರಣವುಳ್ಳ ಜಗತ್ತಿಗೆ ಶಿವಾಭಿನ್ನತ್ವವು ವಿಧಿಸಲ್ಪಡುತ್ತದೆಯಲ್ಲದೇ ಮಿಥ್ಯಾತ್ವವು ವಿಧಿಸಲ್ಪಡುವದಿಲ್ಲ! ಈ ವಿಷಯದಲ್ಲಿ ''ವಾ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಚಾರಂಭಣ ವಾಕ್ಯಾನಿ ತದನನ್ಯತ್ವ ಬೋಧನಾತ್। ನಮಿಥ್ಯಾತ್ವಾಯ ಕಲ್ಪಂತೆ ಎಗತಃ ಶಿವರೂಪತಃ'' ಎಂಬ ಸ್ಮೃತಿ ವಾಕ್ಯವೂ ಕೂಡ ಪ್ರಮಾಣವಾಗಿದೆ. ಯಾವ ಕಾರಣ ದಿಂದಲೇ ಭಗವಾನ್ ವ್ಯಾಸ ಮಹರ್ಷಿಯು ''ತದನನ್ಯತ್ವ ಮಾರಂಭಣ ಶಬ್ದಾದಿಬ್ಯಃ'' ಎಂಬ ಸೂತ್ರದಿಂದ ಶಿವನಿಂದ ಹುಟ್ಟಿದ ಪ್ರಪಂಚಕ್ಕೆ ಶಿವಸ್ವರೂಪವೆಂದು ಹೇಳಿದ್ದಾನೆ. ಎಲೈ ಅದ್ವೈತಿಯೇ ಅಧ್ಯಾರೋಪವನ್ನು (ಅಧ್ಯಾಸವನ್ನು) ಬ್ರಹ್ಮಕ್ಕೆ ಹೇಳುವೆಯೋ? ಅಥವಾ ಬ್ರಹ್ಮೇತರಕ್ಕೆ ಹೇಳುವಿಯೋ? ಬ್ರಹ್ಮಕ್ಕೆ ಶರೀರೇಂದ್ರಿಯಾದಿಗಳಿಲ್ಲದಿರುವದ ರಿಂದ ಅದಕ್ಕೆ ಹೇಳಲಾಗುವದಿಲ್ಲ. ಇನ್ನು ''ಸದೇವ ಸೌಮ್ಯೇದಮಗ್ರ ಆಸೀತ್'' ಎಂಬ ಶೃತಿಯಿಂದ ಬ್ರಹ್ಮೇತರ ವಸ್ತುವೇ ಇಲ್ಲವೆಂದು ಕಂಡುಬರುವದರಿಂದ ಅದಕ್ಕೆ ಹೇಳುವದಂತೂ ದೂರೇ ಉಳಿಯಿತು. ಆಗ ಬ್ರಹ್ಮೇತರ ವಸ್ತುವನ್ನು ಅಂಗೀಕರಿಸಿದರೆ ಶುದ್ಧಾದ್ವೈತ ಭಂಗವಾಗುವದು ಆದುದರಿಂದ ಭೇದಾ ಭೇಧಾಗಳಿಗೆ ತಮಃ ಪ್ರಕಾಶ ದಂತೆ ವಿರೋಧವಿಲ್ಲದಿರುವದರಿಂದ ಪ್ರಪಂಚಕ್ಕೂ ಬ್ರಹ್ಮಕ್ಕೂ ಭೇದಾ ಭೇದಗಳನ್ನೇ ಹೇಳಬೇಕು.

ದ್ವೈತಾ ದ್ವೈತ ರೂಪವಾದ ಶರೀರ, ಜೀವಾತ್ಮಾ, ಪರಮಾತ್ಮಾ ಇವರು ಗಳಿಗೆ ಅತ್ಯಂತ ಅಭೇದವನ್ನೇ ಹೇಳಿದರೆ ಯಾವ ವ್ಯವಹಾರವೂ ಸಂಭವಿಸಲಾರದು ಆದುದರಿಂದ ಅದ್ವೈತಿಗಳ ಅಧ್ಯಾಸವು ಸಂಭವಿಸುವುದಿಲ್ಲ! ಬ್ರಹ್ಮಜ್ಞಾನವಾಗುವ ವರಿಗೂ ಪ್ರಪಂಚಕ್ಕೆ ಸತ್ಯತ್ವವನ್ನು ಹೇಳುತ್ತೇವೆ. ಬ್ರಹ್ಮಜ್ಞಾನವಾದ ಮೇಲೆ ಅದಕ್ಕೆ ಮಿಥ್ಯಾತ್ವವನ್ನು ಹೇಳುತ್ತೇವೆ. ಶುಕ್ತಿಯು ಪ್ರತ್ಯಕ್ಷವಾಗುವವರಿಗೂ ರಜತಕ್ಕೆ ಸತ್ಯ ವೆಂದರೂ ಶುಕ್ತಿಯು ಪ್ರತ್ಯಕ್ಷವಾದ ಮೇಲೆ ರಜತವು ಸತ್ಯವಾಗದೇ ಮಿಥ್ಯೆಯಾಗಿ ಹೋ ಗುವದಲ್ಲವೇ ಎಂದು ಹೇಳಲಾಗುವದಿಲ್ಲ ಯಾಕೆಂದರೆ ಬ್ರಹ್ಮಜ್ಞಾನವಾದ ಮೇಲೆ ಯಾದರೂ ಜನಕಾದಿಗಳಿಗೆ ಕ್ಷುತ್ಪಿಪಾಸಾದಿ ದ್ವೈತ ಕರ್ಮಗಳಿದ್ದವೆಂದು ಕಂಡುಬರುತ್ತದೆ. ಆದುದರಿಂದ ಕೇವಲಾದ್ವೈತ ಪಕ್ಷವು ಯುಕ್ತವಲ್ಲ ಕಿಂತು ದ್ವೈತಾದ್ವೈತ ಪಕ್ಷವೇ ಯುಕ್ತವಾಗಿದೆ.

ಕೇವಲಾದ್ವೈತ (ಅಭೇದ) ವನ್ನೇ ಸ್ವೀಕರಿಸಿದರೆ ''ದ್ವಾಸುಪರ್ಣಾ ಸಮು ಜಾಸಖಾಯನಂ ವೃಕ್ಷಂ ಪರಿಷ ಸ್ವಜಾತೆ ತಯೋರನ್ಯಃ ಸಾದ್ವತ್ಯನ ಸ್ನನ್ನನ್ಯೋಽ ಭಿಚಾಕ ಸೀತಿ'' ಇತ್ಯಾದಿ ಭೇಧ ಶ್ರುತಿಗಳಿಗೆ ವಿರೋಧವಾಗುವದು. ಕೇವಲ ಬೇಧ ವನ್ನೇ ಸ್ವೀಕರಿಸಿದರೆ ''ತತ್ವಮಸಿ'' ಇತ್ಯಾದಿ ಅಭೇದಶೃತಿಗಳಿಗೆ ವಿರೋಧವಾಗುವದು. ಆದುದರಿಂದ ದ್ವೈತಾದ್ವೈತ (ಭೇಧಾಭೇದ) ಪಕ್ಷದಲ್ಲಿಯೇ ಸರ್ವ ಶೃತಿಗಳಿಗೆ ಸಹಜ ವಾಗಿ ಸಮನ್ವಯ ವಾಗುವದರಿಂದ ದ್ವೈತಾದ್ವೈತವೆಂಬ ವೀರಶೈವ ಮತವೇ ಗ್ರಾಹ್ಯ ವಾಗಿರುವದು! ಇನ್ನು ಅಭೇದ ಪ್ರತಿಪಾದಕ ಶೃತಿಗಳಿಗೆ ಆಗಲಿ ಭೇಧ ಪ್ರತಿಪಾದಕ ಶೃತಿಗಳಿಗೆ ಆಗಲಿ ಅರ್ಥ ಸಂಕೋಚಮಾಡುವಲ್ಲಿ ಪ್ರಮಾಣವಿಲ್ಲ. ಹಾಗೂ ಭೇದ ಶೃತಿ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಗಳಿಗೆ ಮಾತ್ರ ಪ್ರಮಾಣವೆಂದು ಹೇಳಿ ಅಭೇದ ಶೃತಿಗಳಿಗೆ ಅಪ್ರಮಾಣವೆಂದರೆ ಅಥವಾ ಅಭೇವ ಶೃತಿಗಳಿಗೆ ಪ್ರಮಾಣವೆಂದು ಹೇಳಿ ಭೇದ ಶೃತಿಗಳಿಗೆ ಅಪ್ರಮಾಣವೆಂದು ಹೇಳಿದರೆ ಬೌದ್ಧಾದಿಗಳಂತೆ ವೇದ ಬಾಹ್ಯರಾಗಬೇಕಾಗುವದು. "ಯತೋ ವಾಯಿಮಾನಿ ಭೂತಾನಿ ಜಾಯಂತೆ" ಇತ್ಯಾದಿ ಶೃತಿಗಳಲ್ಲಿ ಬ್ರಹ್ಮವು ಪ್ರಪಂಚಕ್ಕೆ ಕಾರಣವೆಂದೂ ಪ್ರಪಂಚವು ಬ್ರಹ್ಮದ ಕಾರ್ಯವೆಂದೂ ಕಂಡುಬರುವದರಿಂದ ಸೃಷ್ಟಿದೆಶೆಯಲ್ಲಿ ಬ್ರಹ್ಮ ಪ್ರಪಂಚಗಳಿಗೆ ದ್ವೈತವೆಂದೂ ಸೃಷ್ಟಿ ಪೂರ್ವದಲ್ಲಿ ಬ್ರಹ್ಮ ಪ್ರಪಂಚಗಳಿಗೆ ಅದ್ವೈತವೆಂದೂ ಸಿದ್ಧವಾಗುತ್ತದೆ. ಸೂತ್ರಕಾರರು "ಪ್ರತಿಜ್ಞಾ ಸಿದ್ಧೇರ್ಲಿಂಗ ಮಾಶ್ಮರಥ್ಯಃ" ಇತ್ಯಾದಿ ಮೂರು ಸೂತ್ರಗಳಿಂದ ದ್ವೈತ, ಅದ್ವೈತ, ದ್ವೈತಾದ್ವೈತ ಎಂಬ ಮೂರು ಮತಗಳನ್ನು ತೋರಿಸಿ ಆ ಮೇಲೆ "ಉಭಯ ವ್ಯಪದೇಶಾತ್ವಹಿ ಕುಂಡಲವತ್" ಇಂತೆಂಬ ಸೂತ್ರದಿಂದ ಸರ್ಪಕ್ಕೂ ಸರ್ಪದ ಕುಂಡಲಾಕಾರಕ್ಕೂ ಭೇದಾಭೇದಗಳು ಅವಿರುದ್ಧವಾಗಿರುವಂತೆ ಬ್ರಹ್ಮ ಪ್ರಪಂಚಗಳಿಗೆ ಭೇದಾಭೇದಗಳು ಅವಿರುದ್ಧವಾಗಿರುವದರಿಂದ ಭೇದಾಭೇದ ಮತವೇ ಗ್ರಾಹ್ಯವಾಗಿರುವದೆಂದೂ ಅಭಿಪ್ರಾಯವನ್ನು ತೋರಿಸಿರುವರು.! ಇದಲ್ಲದೆ "ಭೇದಾಭೇದ ಸ್ತಥಾ ಭೇದೋಭೇದ ಏತಾ ಮತಾಸ್ತ್ರಯಾಃ" ಎಂದು ಸೂತ್ರ ಸಂಹಿತೆಯಲ್ಲಿಯೂ "ಧೃವಂ ಕಶ್ಚಿದ್ಭೂತ್ರಿತೆ ಸಕಲ ಮಪರಸ್ತ್ವ ದ್ಧೃವಮಿದಂ ಪರೋ ಧ್ರೌವ್ಯೇ" ಎಂದು ಮಹಿಮ್ನ ಸ್ತೋತ್ರದಲ್ಲಿಯೂ ದ್ವೈತಮತ, ಅದ್ವೈತಮತ, ದ್ವೈತಾದ್ವೈತಮತ ಈ ಮೂರು ಮತಗಳು ಮಾತ್ರ ಪ್ರತಿಪಾದಿಸಲ್ಪಟ್ಟಿರುವದರಿಂದ ಈ ಮೂರೇ ಮತಗಳು ಆ ಕಾಲದಲ್ಲಿದ್ದವೆಂದು ಸ್ಪಷ್ಟವಾಗುತ್ತದೆ। ಇನ್ನು "ಯತೋ ವಾಚೋ ನಿವೃತ್ತಂತೇ ಅಪ್ರಾಪ್ಯ ಮನಸಾಸಹ" ಇತ್ಯಾದಿ ಶೃತಿಗಳಿಂದ ಬ್ರಹ್ಮವು ಶಾಸ್ತ್ರಕ್ಕೆ (ಶಾಸ್ತ್ರಜನ್ಯಜ್ಞಾನಕ್ಕೆ) ವಿಷಯವೇ ಆಗುವುದಿಲ್ಲವೆಂದು ಕಂಡುಬರುವದರಿಂದ ಶಾಸ್ತ್ರಾರಂಭವೇ ಯುಕ್ತವಲ್ಲವೆಂದು ಹೇಳಲಾಗದು "ಯತೋವಾಚೋ ನಿವರ್ತಂತಿ" ಇತ್ಯಾದಿ ಶೃತಿಗಳು ಗುರುಕಟಾಕ್ಷರಹಿತ ಪ್ರಾಕೃತ ಜೀವ(ಪಶು) ರನ್ನುದ್ದೇಶಿಸಿ ಅವರ ವಾಕ್ಕುಗಳೂ ಅವರ ಮನಸ್ಸೂ ಬ್ರಹ್ಮವನ್ನು ವಿಷಯೀಕರಿಸುವದಿಲ್ಲವೆಂದು ಹೇಳುತ್ತವೆಯಲ್ಲದೇ ಎಲ್ಲರನ್ನೂ ಉದ್ದೇಶಿಸಿ ಹೇಳುವದಿಲ್ಲವೆಂದು ಶೃತಿ ತಾತ್ಪರ್ಯವನ್ನು ಹೇಳಬೇಕು। ಹೀಗೆ ಹೇಳದಿದ್ದರೆ "ಆನಂದಂ ಬ್ರಹ್ಮಣೋ ವಿದ್ವಾನ್ನ ಬಿಭೇತಿ ಕದಾಚನ" ಇಂತೆಂಬ ಉತ್ತರ ವಾಕ್ಯಕ್ಕೆ ವಿರೋಧವೇ ಆಗುವದು ಅಥವಾ "ಯತೋ ವಾಚೋ ನಿವರ್ತಂತೇ" ಎಂಬ ಶೃತಿಯು ಬ್ರಹ್ಮವನ್ನು ತಿಳಿಯುವದು ಸುಲಭ ಸಾಧ್ಯವಲ್ಲ. ಕಿಂತು ಅತಿ ಕಷ್ಟಸಾಧ್ಯವಾದುದೆಂದು ಬ್ರಹ್ಮದ ಮಹತ್ವವನ್ನು ತೋರಿಸುವಲ್ಲಿ ತಾತ್ಪರ್ಯ ವುಳ್ಳುದಾಗಿದೆಯೆಂದು ಹೇಳಬೇಕು। "ಯತೋ ವಾಚೋ ನಿವರ್ತಂತೇ" ಎಂಬ ಶೃತಿಯು ಸಾಮಾನ್ಯವಾಗಿ ಗುರುಕಟಾಕ್ಷ ಸಂಪನ್ನರಾದ ಲಿಂಗಧಾರಣ ದೀಕ್ಷಾ ಸಂಸ್ಕೃತರಾದ ಎಲ್ಲರನ್ನೂ ಉದ್ದೇಶಿಸಿ ವಾಕ್ಕು ಮನಸ್ಸುಗಳಿಗೆ ಬ್ರಹ್ಮವು ಅವಿಷಯವಾಗಿರುವದೆಂದು ಹೇಳುತ್ತದೆಂದರೆ 'ಬ್ರಹ್ಮವಿದಾಪ್ನೋತಿ ಪರಂ' 'ಬ್ರಹ್ಮ ವಿದ್ಬ್ರಹ್ಮೈವ ಭವತಿ' ಇತ್ಯಾದಿ ಶೃತಿಗಳು ಬ್ರಹ್ಮಾನು

CC-0. Jangamwadi Math Collection. Digitized by eGangotri

ಭವ ವಿಧಾಯಕಗಳಾಗಿರುವುದರಿಂದ ವಾಕ್ಕು ಮನಸ್ಸುಗಳಿಗೆ ಬ್ರಹ್ಮವು ವಿಷಯವೇ ಆಗಿರುವದೆಂದು ಹೇಳಬೇಕು. ಇಲ್ಲದಿದ್ದರೆ ಈ ಬ್ರಹ್ಮಾನುಭವ ವಿಧಾಯಕಗಳಾದ ಬಹು ಶೃತಿಗಳಿಗೆ ವಿರೋಧವೇ ಪ್ರಾಪ್ತವಾಗುವದು। ಹಾಗೂ "ನಾವೇದ ವಿನ್ಮನುತೇ ತಂ ಬೃಹಂತಂ" ''ನೈಷಾ ತರ್ಕೇಣ ಮತಿ-ರಾಪನೇಯಾ'' ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" ''ಶಾಸ್ತ್ರಯೋ ನಿತ್ವಾತ್'' ಇತ್ಯಾದಿ ಶೃತಿ ಸೂತ್ರಗಳಲ್ಲಿ ಬ್ರಹ್ಮವು ವೇದೇತರ ಪ್ರಮಾಣಕ್ಕೆ ವೇದ್ಯವಲ್ಲವೆಂದೂ ವೇದ ಪ್ರಮಾಣಕ್ಕೆ ಮಾತ್ರ ವೇದ್ಯವೆಂದೂ ಕಂಡು ಬರುವದರಿಂದ ಶಾಸ್ತ್ರಕ್ಕೆ ವಿಷಯವೇ ಬ್ರಹ್ಮವಾಗುವದರಿಂದ ಸರ್ವ ಶೃತಿಗಳಿಂದ ಸಮನ್ವಯ ಗೊಳಿಸಲ್ಪಟ್ಟ ಭೇದಾಭೇದ ಪ್ರತಿಪಾದಕವಾದ ಬ್ರಹ್ಮ ಮೀಮಾಂಸ ಶಾಸ್ತ್ರವು ಆರಂಭಿಸಲು ಯೋಗ್ಯವಾದುದಾಗಿದೆ। 'ಅಥಾತೋ ಬ್ರಹ್ಮ ಜಿಜ್ಞಾ ಸಾ' ಎಂಬಲ್ಲಿ ಜಿಜ್ಞಾ ಸಾ ಪದಕ್ಕೆ ವಿಚಾರವೆಂದು ಅರ್ಥ ಮಾಡಿರುವದರಿಂದ 'ಅಥಾ ಶಬ್ದಾ ನು ಶಾಸನಂ' 'ಅಥ ಯೋಗಾನು ಶಾಸನಂ' 'ಅಥ್ವೆಷ ಜ್ಯೋತಿಃ' "ಅಥ್ವೆಷ ವಿಶ್ವಜ್ಯೋತಿಃ" ಎಂಬಲ್ಲಿರುವ ಅಥ ಶಬ್ದಕ್ಕೆ ಆರಂಭವೆಂಬ ಅರ್ಥವನ್ನು ಮಾಡಿರುವಂತೆ "ಅಥಾತೊ ಬ್ರಹ್ಮ ಜಿಜ್ಞಾಸಾ" ಎಂಬಲ್ಲಿರುವ ಅಥ ಶಬ್ದಕ್ಕೆ ಆರಂಭವೆಂಬ ಅರ್ಥವನ್ನು ಮಾಡಲಿಕ್ಕೆ ಬರುವುದಿಲ್ಲ ವಿಚಾರವು ಆರಂಭಿಸಲು ಅಯೋಗ್ಯವಾಗಿರುವುದಷ್ಟೆ; ಸೂತ್ರಕಾರರು ಪ್ರತಿಯೊಂದು ಅಧಿಕರಣದಲ್ಲಿಯೂ ವಿಚಾರವನ್ನು ಮಾಡುತ್ತಿರುವದರಿಂದ ವಿಚಾರಕ್ಕೆ ಆರಂಭವೆಂಬುದು ಸಂಭವಿಸಲಾರದು ಅಂದಮೇಲೆ "ಅಥ" ಶಬ್ದವು ಆನಂತರ್ಯವೆಂಬ ಅರ್ಥವನ್ನು ತೋರಿಸುವಂಥಾದ್ದಾಗಿ ವಿಧಿಯು ಅಪೇಕ್ಷಿಸುವ ಒಬ್ಬಾನೊಬ್ಬ ಅಧಿಕಾರಿಯನ್ನು ಸಾಧಕನನ್ನಾಗಿ ಹೇಳುತ್ತದೆ. ವಿಧಿಯಿಂದ ಅಪೇಕ್ಷಿಸಲ್ಪಡದಿರುವ ಆರಂಭಾರ್ಥವನ್ನು ಹೇಳುವುದು ಅಯುಕ್ತವು ಈ ವೇದಾಂತ ಶಾಸ್ತ್ರಕ್ಕೆ ವಿಧ್ಯಪೇಕ್ಷಿತ ಅಧಿಕಾರಿಯು ಯಾವನೆಂಬುದನ್ನು ಮುಂದೆ ತೋರಿಸಲಾಗುತ್ತದೆ.

''ಅಥ ಶಬ್ದಾನು ಶಾಸನಂ'' ಇತ್ಯಾದಿ ಸೂತ್ರದಲ್ಲಿರುವ ಅಥ ಶಬ್ದವು ಅಪೇಕ್ಷಿಸಲ್ಪಡುವ ಅಧಿಕಾರಿಯನ್ನು ಅಪೇಕ್ಷಿಸುವುದಿಲ್ಲ ಶಬ್ದ ಶಾಸ್ತ್ರವು ವಿಧಿ ಮೂಲಕವಾಗಿಲ್ಲವಷ್ಟೆ; ಇನ್ನು ''ಅಥಾತೋ ಬ್ರಹ್ಮಜಿಜ್ಞಾ ಸಾ" ಎಂಬ ಸೂತ್ರದಲ್ಲಿರುವ ಅಥ ಶಬ್ದಕ್ಕೆ ಮಂಗಲಾರ್ಥವನ್ನು ಯೇಳಲೂ ಆಗುವುದಿಲ್ಲ. ಯಾಕೆಂದರೆ ಮುಂದಿರುವ ಜಿಜ್ಞಾಸೆಯಲ್ಲಿ ಆ ಮಂಗಲಾರ್ಥಕ್ಕೆ ಅನ್ವಯವೇ ಆಗುವುದಿಲ್ಲ. ಇನ್ನು ಗ್ರಂಥಾರಂಭದಲ್ಲಿ ಶಿಷ್ಟರಾದ ವ್ಯಾಸಮಹರ್ಷಿಗಳು ಮಂಗಲವನ್ನು ಮಾಡಬೇಕಾಗಿತ್ತಲ್ಲವೆ; ಎಂದು ಆಶಂಕಿಸಕೂಡದು. "ಅಥ" ಎಂಬ ವರ್ಣಧ್ವನಿ ಮಾತ್ರದಿಂದ ಮಂಗಲವನ್ನು ಮಾಡಿರುವರೆಂದು ತಿಳಿಯಬೇಕು. ಈ ವಿಷಯದಲ್ಲಿ ''ಓಂಕಾರಶ್ಚಾಥ ಶಬ್ದಶದ್ವಾವೇತೌ ಬ್ರಹ್ಮಣಃ ಪುರಾ । ಕಂಠಂಭಿತ್ವಾ ವಿನಿರ್ಯಾತೌ ತಸ್ಮಾನ್ಮಾಂಗಲ ಕಾವು ಭೌ" ॥ ಇಂತೆಂಬ ಶ್ರುತಿಯು ಪ್ರಮಾಣವಾಗಿದೆ. ಇನ್ನು "ಅಥಾತಃ ಶೇಷ ಲಕ್ಷಣಂ" ಎಂಬಲ್ಲಿ ಅಥ ಶಬ್ದಕ್ಕೆ ಪಕ್ಷಾಂತರ ರೂಪವಾದ ಅರ್ಥವನ್ನು ಹೇಳುವಂತೆ ಇಲ್ಲಿ (ಬ್ರಹ್ಮಸೂತ್ರದಲ್ಲಿ) ಹೇಳಲಿಕ್ಕಾ

CC-0. Jangamwadi Math Collection. Digitized by eGangotri

ಗುವದಿಲ್ಲ. ಇದೇ ಮೊದಲಿನ ಸೂತ್ರವಾಗಿರುವದರಿಂದಲೂ ಇದಕ್ಕಿಂತಲೂ ಪೂರ್ವದಲ್ಲಿ ಏನನ್ನು ಹೇಳದೇ ಇರುವದರಿಂದಲೂ ಪಕ್ಷಾಂತರ ರೂಪವಾದ ಅರ್ಥವು ಸಂಭವಿಸುವ ದಿಲ್ಲ. । ಲಿಂಗಧಾರಣ ದೀಕ್ಷಾ ರಹಿತ ನಾದವನಿಗೆ ಮಲತ್ರಯ ಧ್ವಂಸವಿಲ್ಲದೇ ಇರುವದ ರಿಂದ ಅಥ ಶಬ್ದಕ್ಕೆ ಸಾಧನ ಚತುಷ್ಟಯಾನಂತರ್ಯರೆಂಬ ಅರ್ಥವನ್ನು ಹೇಳಲಾಗುವದಿಲ್ಲ. ಇನ್ನು ಪೂರ್ವೋತ್ತರ ಮೀಮಾಂಸಾ ಶಾಸ್ತ್ರಗಳು ಭಿನ್ನ ಭಿನ್ನಗಳಾದ ಕರ್ತೃಕರ್ಮ ಫಲಗಳನ್ನು ಹೇಳುವದರಿಂದ ಧರ್ಮ ಜಿಜ್ಞಾಸಾನಂತರ್ಯವೆಂಬ ಅರ್ಥವನ್ನು ಸಹ ಹೇಳ ಲಾಗುವದಿಲ್ಲ. । ಹಾಗು ಪ್ರಾಕೃತ ಕ್ರಿಯಾ (ಪಶುಕರ್ಮ) ರೂಪವಾದ ಧರ್ಮವನ್ನು ಪ್ರತಿ-ಪಾದಿಸುವ ಪೂರ್ವ ಮೀಮಾಂಸಾ ಶಾಸ್ತ್ರವು ಸಿದ್ಧ ಬ್ರಹ್ಮವನ್ನು ಪ್ರತಿ-ಪಾದಿಸು ವದಿಲ್ಲವಾದ್ದರಿಂದಲೂ ಪೂರ್ವ ಮೀಮಾಂಸೆಯು ಉತ್ತರ ಮೀಮಾಂಸೆಗೆ ಪೂರ್ವ ಭಾವಿ ಯಾಗದಿರುವದರಿಂದಲೂ ಸುತರಾಂ ಧರ್ಮ ಜಿಜ್ಞಾಸಾನಂತರ್ಯವೆಂಬ ಅರ್ಥವು ಸಂಗತ ವಾಗುವದಿಲ್ಲ. ಹಾಗಾದರೆ ಅನಿಯತ ಭೋಜನಗಮನಾದಿಗಳಂತೆ ಬ್ರಹ್ಮ ಜಿಜ್ಞಾಸಾ ಸಾಸ್ತ್ರಕ್ಕೆ ಯಾವದಾದರೊಂದನ್ನು ಪೂರ್ವ ಭಾವಿಯನ್ನಾಗಿ ಹೇಳಿ ಆ ಯಾವದಾದ ರೊಂದರ ಆನಂತರ್ಯವೆಂಬ ಅರ್ಥವನ್ನು ಹೇಳಬಹುದಲ್ಲವೆ; ಹೀಗೆ ಹೇಳುವುದಕ್ಕೂ ಆಗುವದಿಲ್ಲ ಯಾಕೆಂದರೆ ನಿಯಮ ವಿಧಿಯು ಕಂಡು ಬರುತ್ತದಷ್ಟೆ; ನಿಯತವಾಗಿ ಮುಮುಕ್ಷುಗಳ ಮಲತ್ರಯ ವಿಧ್ವಂಸದಲ್ಲಿ ಬ್ರಹ್ಮ ಜಿಜ್ಞಾಸಾ ಶಾಸ್ತ್ರಕ್ಕೆ ಯಾವದು ನಿಯಮದಿಂದ ಪೂರ್ವ ಭಾವಿಯಾಗಿ ವಿಧಿಸಲ್ಪಡುವದೋ; ಅದರ ಆನಂತರ್ಯವೆಂಬ ಅರ್ಥ ವನ್ನು ಹೇಳಬೇಕು; ಅದೇ ಲಿಂಗಧಾರಣಾತ್ಮಕವಾದ ಶಿವದೀಕ್ಷೆಯು. ಇದೇ ಮಲ ತ್ರಯ ವಿಧ್ವಂಸದಲ್ಲಿ ಸಮರ್ಥವಾದುದೆಂದು ವಿಧಿಸಲ್ಪಡುತ್ತದೆ. ಆದ್ದರಿಂದಲೇ ಈ ವಿಷ ಯವು ತೈತ್ತಿರೀ ಶಾಖೆಯಲ್ಲಿ ಸ್ಪಷ್ಟವಾಗಿರುವದು. ಬ್ರಹ್ಮ ಮೇಧಾ (ಜ್ಞಾನ) ಕಾಮು ನಿಗೆ ಆ ಬ್ರಹ್ಮಜ್ಞಾನ ಸಾಧನ ಯಾವುದೆಂದು ಆಕಾಂಕ್ಷೆಯಾಗಲಾಗಿ "ಯಶ್ಛಂದ ಸಾಮಿತಿ" ಎಂದು ಹೇಳಲ್ಪಡುತ್ತದೆ.

ಭಾ :— "ಯಶ್ಛಂದಸಾಮೃಷಭೋ ವಿಶ್ವರೂಪಾಯಃ ಛಂದೇಭ್ಯೋ ದ್ಯಮೃತಾತ್ಸಂಬಭೂವ। ಸಮೇಂದ್ರೋ ಮೇಧಯಾ ಸ್ಪೃಣೋತು। ಅಮೃತಸ್ಯ ದೇವ ಧಾರಣೋ ಭೂಯಾಸಂ। ಶರೀರಂ ಮೇ ವಿಚರ್ಷಣಂ ಜಿಹ್ವಾಮೇ ಮಧು ಮತ್ತಮಾ। ಕರ್ಣಾಭ್ಯಾಂ ಭೂರಿವಿಶ್ರುವಂ ಬ್ರಹ್ಮಣಃ ಕೋಶೋಽಸಿ ಮೇಧಯಾಪಿ ಹಿತಃ ಶ್ರುತಯೋ ಗೋಪಾಯ" ಈ ಮಂತ್ರಾರ್ಥವೇನೆಂದರೆ 'ಯಃ' ಯಾವ ಶಿವನು 'ಛಂದಸಾಂ' ಸರ್ವ ವಿದ್ಯಗಳಿಗೆ 'ಪ್ರಭುಃ' ಸ್ವಾಮಿಯಾಗಿರುವನೊ, ಈ ವಿಷಯದಲ್ಲಿ 'ಈಶಾನಃ ಸರ್ವ ವಿದ್ಯಾನಾಂ' ಎಂಬ ಬೇರೆ ಶ್ರುತಿಯು ಪ್ರಮಾಣವಾಗಿದೆ. 'ವಿಶ್ವರೂಪಃ' ಪ್ರಪಂಚ ಮಯನೂ ಆಗಿರುವನೋ; ಈ ವಿಷಯದಲ್ಲಿ 'ಸರ್ವೋಹ್ಯೇಷ ರುದ್ರಃ' ಎಂಬ ಬೇರೆ ಶ್ರುತಿಯೂ ಪ್ರಮಾಣವಾಗಿದೆ. 'ಯಃ' ಯಾವ ಶಿವನು 'ಅಮೃತಾತ್' ಅಮೃತ ಸ್ವರೂಪಗಳಾದ (ನಿತ್ಯಗಳಾದ) ವಚನ ವ್ಯತ್ಯಾಸವು ಛಾಂದಸವಾಗಿರುವುದರಿಂದ ಸಾಧು

CC-0. Jangamwadi Math Collection. Digitized by eGangotri

ವೆನಿಸಿರುವುದು, ''ಛಂದೇಭ್ಯಃ" ವೇದಗಳಿಂದ ''ಅಧಿಸಂಬಭೂವ" ಪ್ರತಿಪಾದಿ ಸಲ್ಪಟ್ಟವನಾಗಿರುವನೊ, ''ಸ" ಆ ಪ್ರಸಿದ್ಧನಾದ ''ಇಂದ್ರ" ಪರಮೈಶ್ವರ್ಯಶಾಲಿ ಯಾದ ಶಿವನೂ ''ಮಾ'' ನನ್ನನ್ನೂ, ''ಮೇಧಯಾ" ಪ್ರಜ್ಞೆಯಿಂದ ''ಸ್ಪೃ ಣೋತು" ಸಂತೋಷಪಡಿಸಲಿ. ''ಬಲಯತು'' 'ವಾ' ಸಮರ್ಥನನ್ನಾಗಿ ಮಾಡಲಿ. ಆ ಬ್ರಹ್ಮಜ್ಞಾನಕ್ಕಾಗಿ ಬುದ್ಧಿ ಸಾಮರ್ಥ್ಯವು ಪ್ರಾರ್ಥಿಸಲ್ಪಡುತ್ತದೆ. ''ಅಮೃತಸ್ಯ" ಮೋಕ್ಷಕ್ಕೋಸ್ಕರ ''ದೇವಧಾರಣಂ" ದೇವದೇವರೂಪವಾದ ಶಿವಲಿಂಗದ ''ಧಾರಣಃ" ಧಾರಣೆಯುಳ್ಳವನು ''ಭೂಯಾಸಂ" ಆಗುವೆನು. ಚಿಚ್ಛಕ್ತಿಯಿಂದ ಪ್ರಕಟಿಸಲ್ಪಟ್ಟ ಪರಶಿವೇಷ್ಟ ಲಿಂಗಧಾರಿಯಾಗುವೆನೆಂದು ತಾತ್ಪರ್ಯಾರ್ಥವು। ಆದುದರಿಂದ ''ಮೇ" ನನ್ನ ''ಶರೀರಂ" ದೇಹವು ''ವಿಚರ್ಷಣಂ" ಪಾಪರಹಿತವಾದುದಾಗಲಿ. ''ಮೇ'' ನನ್ನ ''ಜಿಹ್ವಾ" ಜಿಹ್ವೆಯು ''ಮಧುಮತ್ತಮಾ'' ಅತ್ಯಂತ ಮಧುರವಾದುದು ''ಭೂಯಾತ" ಆಗಲಿ. (ಅತಿ ಮಧುರವಾಗಿ ಸಂಭಾಷಿಸುವಂಥಾದ್ದಾಗಲಿ) ''ಕರ್ಣ ಭ್ಯಾಂ'' ಶ್ರೋತ್ರಗಳಿಂದ ''ಭೂರಿವಿಶ್ರುವಂ" ಶಿವಜ್ಞಾನಕ್ಕೆ ಯೋಗ್ಯವಾದ ಕಾರ್ಯ ಕಾರಣ ಸಮೂಹವುಳ್ಳವನಾಗಬೇಕು. ಶ್ರೋತ್ರಸಾಮರ್ಥ್ಯವೂ ಕೂಡ ಆ ಶಿವ ಜ್ಞಾನಕ್ಕಾಗಿಯೇ ಪ್ರಾರ್ಥಿಸಲ್ಪಡುತ್ತದೆ. ''ಬ್ರಹ್ಮಣಃ" ಪಾರ್ವತೀ ಪತಿಯ ''ಕೋಸೋಽಸಿ" ಹತಾರಕ್ಕೆ ವರಿಯಂತೆ ಸಾಕ್ಷಾತ್ಕಾರಕ್ಕೆ ಅಧಿಷ್ಠಾನಸ್ವರೂಪನಾಗಿದ್ದಿ। ''ದೇಧಯಾ'' ಲೌಕಿಕ ಪ್ರಜ್ಞೆಯಿಂದ ''ಪಿಹಿತಃ'' ಮುಚ್ಚಲ್ಪಟ್ಟವನಾಗಿರುವೆನು. (ಸಾಮಾನ್ಯ ಜ್ಞಾನದಿಂದ ತಿಳಿಯಲ್ಪಡದಿರುವ ಸತ್ವವುಳ್ಳವನಾಗಿರುವೆನು) ''ನಾವೇದ ವಿನ್ಮನುತೆ ತಂ ಬೃಹಂತಂ'' ''ನೈಷಾತರ್ಕೇಣ ಮತಿ- ರಾಪನೇಯಾ" ಇಂತೆಂಬ ಶ್ರುತಿ ಗಳು ಶ್ರುತೀತರ ಪ್ರಮಾಣಗಳಿಂದ ಪರಶಿವ ಬ್ರಹ್ಮವು ಗಮ್ಯವಲ್ಲೆಂದು ಸಾರುತ್ತವೆ। ''ಮೆ" ನನಗೆ 'ಶ್ರುತಂ' ಶ್ರವಣಪೂರ್ವಕವಾದ ಭಕ್ತಿ ಜ್ಞಾನಾದಿಗಳನ್ನು 'ಗೋಪಾಯ' ರಕ್ಷಿಸು (ನನಗೆ ಭಕ್ತಿ ಜ್ಞಾನಾದಿಗಳ ಪ್ರಾಪ್ತಿಯ ವಿಸ್ಮೃತಿಯಾಗದಿರುವಂತೆ ಕೃಪೆ ಯನ್ನು ಮಾಡು) ''ದೇವ ಧಾರಣೋ ಭೂಯಾಸಂ" ಎಂಬಲ್ಲಿ ಬಾಹ್ಯ ಲಿಂಗ ಧಾರಣವೊ ? ಅಂತರ್ಲಿಂಗಧಾರಣವೊ ? ಅಥವ ಪ್ರಣವ ಧಾರಣವೊ ? ಎಂದು ಸಂಶಯ ಪ್ರಾಪ್ತವಾಗುತ್ತದೆ. ''ತ್ವಂ ದೇವಾನಾಂ ಪರಮಂಚ ದೈವತಂ" ''ತಸ್ಮಾ ದ್ದೇವಃ ಶಿವಃ ಸ್ಮೃತಃ" ''ದೇವ್ಯಾಯುತಂ ದೇವತಸಂ ಯುವಾನಂ" ಇತ್ಯಾದಿ ವಾಕ್ಯಗಳಲ್ಲಿ ದೇವ ಶಬ್ದಕ್ಕೆ ಪರಶಿವನೆಂದು ಅನೇಕ ಪ್ರಯೋಗಗಳು ಕಂಡುಬರುವು ದರಿಂದಲೂ, ಶಿವಲಿಂಗೇತರ ದೇವತೆಗಳ ಧಾರಣವನ್ನು ವಿಧಿಸುವ ಶಾಸ್ತ್ರವಿಲ್ಲದಿರುವು ದರಿಂದಲೂ, ಲೋಕದಲ್ಲಿಯಾವರೂ ಅನ್ಯದೇವತೆಗಳನ್ನು ಧರಿಸುವ ಸಂಪ್ರದಾಯ ವಿಲ್ಲದಿರುವುದರಿಂದಲೂ, ಧಾರಣ ಶಬ್ದಕ್ಕೆ ''ಕರ್ತವಿಲುಡಂ ತತ್ವೇನ'' ''ದೇವಂ ಧರತಿ" ಕರ್ತೃರ್ಥ ಲುಡಂತ ಪ್ರತ್ಯಯದಿಂದ (ದೇವನನ್ನು ಧರಿಸುತ್ತಾನೆ) ಎಂಬ ಅರ್ಥವು ಸಿದ್ಧವಾಗಲು ಯಾವ ಕಾರಣದಿಂದ ಮುಕ್ತಿಗಾಗಿ ಶಿವಲಿಂಗಧಾರಣೆ ಯುಳ್ಳವನಾಗುತ್ತಾನೆಯೋ; ಆ ಕಾರಣದಿಂದ ನನ್ನನ್ನು ಶಿವತತ್ವಜ್ಞಾನ ಯೋಗ್ಯ

CC-0. Jangamwadi Math Collection. Digitized by eGangotri

ವಾದ ಬುದ್ಧಿಯುಳ್ಳವನನ್ನಾಗಿ ಮಾಡಲಿ ಎಂಬ ಮಂತ್ರ ತಾತ್ಪರ್ಯಾರ್ಥವು ಹೊರಡುವುದರಿಂದ ಬಾಹ್ಯ ಲಿಂಗಧಾರಣವು ಈ ಮಂತ್ರದಿಂದ ಪ್ರತೀತ (ಅಳಿಯಲ್ಪಡುವಂಥಾದ್ದು) ವಾಗುತ್ತದೆ. "ಭೂಯಾಸಂ" ಎಂಬಲ್ಲಿ ಲಿಜ ಲಕಾರವೂ ಕೂಡ ಇರುವುದರಿಂದ ವಿಧ್ಯರ್ಥವೂ ಕೂಡ ಉಪಪನ್ನವಾಗುತ್ತದೆ. ಆದುದರಿಂದ ಯಾವನಿಗೆ ಮುಕ್ತಿಗಾಗಿ ಪರಶಿವ ತತ್ವಜ್ಞಾನವು ಬೇಕಾಗಿದೆಯೋ; ಅವನು ಆವಶ್ಯಕವಾಗಿ ಶಿವಲಿಂಗವನ್ನು ಧರಿಸಿಯೇ ತೀರಬೇಕಲ್ಲದೆ ಬೇರೆ ಮಾರ್ಗವೇ ಇಲ್ಲವೆಂದು ಈ ಮಂತ್ರದಿಂದ ಸ್ಪಷ್ಟವಾಗುತ್ತದೆ. ಇದಲ್ಲದೆ "ಯೋ ವೇದಾದೌಸ್ವರಃ ಪ್ರೋಕ್ತಃ" ಇತ್ಯಾದಿ ವಾಕ್ಯಗಳಿಂದ ಪ್ರಣವವು ವೇದ ಶಿಖಾಮಣಿಯೆಂದು ಕಂಡುಬರುವುದರಿಂದ "ಯಶ್ಛಂದಸಾಮೃಷಭಃ" ಎಂಬುದರಿಂದ ಹೇಳಲ್ಪಡುವ ಛಂದೋ ಋಷಭತ್ವವು ಪ್ರಣವಕ್ಕೆ ಉಪಪನ್ನವಾಗುವದು- ಹಾಗೂ "ಓಂ ತತ್ಸರ್ವಂ" ಎಂಬುದರಿಂದ ವಿಶ್ವರೂಪತ್ವವು ಪ್ರಣವಕ್ಕೆ ಹೇಳಲ್ಪಡುವದರಿಂದ "ವಿಶ್ವರೂಪಃ" ಎಂದು ಈ ಮಂತ್ರದಲ್ಲಿರುವದರಿಂದ ಪ್ರಣವವು ನಿರ್ಧರಿಸಲ್ಪಡುತ್ತದೆ. ಹಾಗೂ "ಬ್ರಹ್ಮಣ ಕೋಸೋಽಸಿ" ಎಂಬುದರಿಂದ ಹೇಳಲ್ಪಡುವ ಪರಬ್ರಹ್ಮಾಧಿಷ್ಠಾನತ್ವವೂ ಕೂಡ ಪ್ರಣವಕ್ಕೆ ಯುಕ್ತವಾಗುವದು ಪ್ರಣವ ಧಾರಣವು (ಪ್ರಣವಾಭ್ಯಾಸವು) ಈ ಶ್ರುತಿ ಸಿದ್ಧವಾಗುತ್ತದೆ. ಹಾಗೂ ಯಮಾದ್ಯಷ್ಟಾಂಗ ಯೋಗಗಳಲ್ಲಿ ವೈದಿಕರಿಗೆ ಅಂತರ್ಲಿಂಗ ಧಾರಣವು ವಿಧಿಸಲ್ಪಡುವದರಿಂದ, ಈ ಮಂತ್ರವು ಅಂತರ್ಲಿಂಗ ಧಾರಣವೂ, ವಿಧಾಯಕವೂ ಆಗಿದೆಯೆಂದು ಸೂಚಿತವಾಗುತ್ತದೆ. ಈ ಪ್ರಕಾರವಾಗಿ ಭಾಷ್ಯಕಾರರು ಈ ಮಂತ್ರಕ್ಕೆ ಲಿಂಗಧಾರಣಪರವಾದ ಅರ್ಥವನ್ನು ಮಾಡಿ "ಪೂರ್ವ ಪಕ್ಷಸ್ತು" ಎಂಬ ಗ್ರಂಥದಿಂದ ಪೂರ್ವ ಪಕ್ಷವನ್ನು ಮಾಡುತ್ತಿರುವರು. ಈ ಮಂತ್ರದಲ್ಲಿರುವ "ವಿಶ್ವರೂಪಃ" ಎಂಬ ಪದವೂ ಉಪಪದರಹಿತವಾದ "ಬ್ರಹ್ಮಣಃ" ಎಂಬ ಬ್ರಹ್ಮ ಪದವೂ ಅಪರಿಚ್ಛಿನ್ನವಾದ ಅರ್ಥವನ್ನು ಬೋಧಿಸುವದರಿಂದ, ಪರಿಚ್ಛಿನ್ನವಾದ ಧಾರಣಯೋಗ್ಯವಾದ ಲಿಂಗವನ್ನು ಬೋಧಿಸಲಾರವಾದುದರಿಂದಲೂ, ದೇವಧಾರಣ ಎಂಬಲ್ಲಿ "ಹೇ ದೇವ" ಎಲೈ ದೇವನೆ ಎಂದು ಪದಚ್ಛೇದವನ್ನು ಮಾಡದಿದ್ದರೆ, ಮುಂದಿನ "ಗೋಪಾಯ" ಎಂಬ ಪದಕ್ಕೆ ಅನ್ವಯವು ಸಂಭವಿಸುವುದಿಲ್ಲವಾದುದರಿಂದಲೂ, "ಭೂಯಾಸಂ" ಎಂಬಲ್ಲಿ ಆಶೀರ್ಲಿಂಗವಿರುವದರಿಂದ ವಿಧ್ಯರ್ಥವೇ ಇಲ್ಲವಾದುದರಿಂದಲೂ, ಹಾಗೂ "ಲಿಂಗಿನಂ ಚಕ್ರಿಣಂ ದೃಷ್ಟ್ವಾ ಸಚೇಲಂ ಸ್ನಾನಮಾಚರೇತ್" ಇತ್ಯಾದಿ ಸ್ಮೃತಿವಾಕ್ಯಗಳಿಂದ ಲಿಂಗ ಧಾರಣವು ನಿಷಿದ್ಧವೆಂದು ಕಂಡುಬರುವದರಿಂದಲೂ ಹಾಗೂ "ಲಿಂಗಮಧ್ಯೇ ಜಗತ್ ಸರ್ವಂ ತ್ರೈಲೋಕ್ಯಂ ಸಚರಾಚರಂ" "ತತ್ಪ್ರಾಣೇಷ್ವಂತರ್ಮನ ಲಿಂಗವರಾಹುಃ" "ಜ್ಯೋತಿರ್ಲಿಂಗಂ ಭ್ರುವೋರ್ಮಧ್ಯೇ ನಿತ್ಯಂಧ್ಯಾಯೇತ್ಸದಾಯತಿಃ" 'ಲಿಂಗಂ ಬ್ರಹ್ಮೈವ ಕೇವಲಂ" ಇಂತೆಂಬ ಅಥರ್ವಣ, ಸಾಮ, ರುದ್ರ, ಕಠವಲ್ಲೀ ಮೊದಲಾದ ಉಪನಿಷತ್ತುಗಳಲ್ಲಿ ಪರಶಿವಬ್ರಹ್ಮವು ಲಿಂಗರೂಪವೆಂದು ಉಪದೇಶವಿರುವುದರಿಂದಲೂ,

CC-0. Jangamwadi Math Collection. Digitized by eGangotri

ತೈತ್ತಿರೀಯ, ಕೈವಲ್ಯ, ಕಠವಲ್ಯಾದಿಗಳಲ್ಲಿ "ದಹರಂ ವಿಪಾಪ್ಮಂ" "ಹೃತ್ಪುಂಡರೀಕಂ ವಿರಜಂವಿಶುದ್ಧಂ" ಇತ್ಯಾದಿ ವಾಕ್ಯಗಳಿಂದ ಬಾಹ್ಯಲಿಂಗ ಧಾರಣವು ಉಕ್ತವಾಗಿರದೆ, ಕೇವಲ ಅಂತರ್ಲಿಂಗ ಧಾರಣವೇ ಉಕ್ತವಾಗಿರುವುದರಿಂದಲೂ, ಶಾಖಾಂತರಗಳಲ್ಲಿಯೂ ಬಾಹ್ಯಲಿಂಗ ಧಾರಣವು ಕಾಣಬರುವದಿಲ್ಲವಾದುದರಿಂದಲೂ, ಮುಮುಕ್ಷುಗಳಿಗೆ ಬಾಹ್ಯ ಲಿಂಗಧಾರಣದ ಅವಶ್ಯಕತೆಯಿಲ್ಲವೆಂದು ಹೇಳಕೂಡದು. ಯಾಕೆಂದರೆ "ವಿಶ್ವಾಧಿಕೋ ರುದ್ರೋ ಮಹರ್ಷಿಃ" "ತ್ವಂ ದೇವೇಷು ಬ್ರಾಹ್ಮಣಃ" 'ತ್ವಂ ದೇವಾನಾಂ ಬ್ರಾಹ್ಮಣಾ ನಾಮಧಿಪತಿರ್ವಿಷ್ಣು ಕ್ಷತ್ರಿಯಾಣಾ ಮಧಿಪತಿಃ' ಇತ್ಯಾದಿ ಶ್ರುತಿಗಳಲ್ಲಿ ಅದ್ವಿತೀಯ ನಾದ ಶಿವನು ವಿಶ್ವಾಧಿಕನೂ, ಬ್ರಾಹ್ಮಣನೂ, ಬ್ರಾಹ್ಮಣಾಧಿಪತಿಯೂ ಎಂದು ಹೇಳುವುದರಿಂದ ಶಿವನೇ ಸರ್ವೋತ್ಕೃಷ್ಟ.

ಭಾ :— ನೆಂದು ಸ್ಪಷ್ಟವಾಗುವುದರಿಂದಲೂ, ಮನ್ವಾದಿ ಸ್ಮೃತಿ ಪುರಾಣಗಳು ಕಾಮಿಕಾದಿ ವಾತುಲಾಂತಗಳಾದ ಶಿವಾಗಮಗಳಿಗೆ ವಿರುದ್ಧಗಳಾಗಿರುವುದರಿಂದ, ಅವು ಗಳಲ್ಲಿ ಲಿಂಗಧಾರಣವಿಲ್ಲದಿದ್ದರೂ ಅವು ಪ್ರಮಾಣಗಳೇ ಆಗಿರುವುದಿಲ್ಲವಾದುದರಿಂದಲೂ ಹಾಗೂ ಯಜುರ್ವೇದ ಷಷ್ಠಾಷ್ಟಕದ ತ್ರಿಪುರ ಸಂಹಾರದಲ್ಲಿ "ತೇಷಾಮಸುರಾಣಾಂ ತಿಸ್ರಃ ಪುರಾ ಆಸನ್" ಹೀಗೆ ಆರಂಭಿಸಿ "ಸೋಽಬ್ರ ವೀದ್ವರಂ ವೃಣಾ ಅಹಮೇವ ಪಶೂನಾಮಧಿಪತಿ ರಸಾನಿ" ಇತ್ಯಾದಿಯಿಂದ ಬ್ರಹ್ಮವಿಷ್ಣಾದಿ ದೇವತೆಗಳಿಗೆ ಪಶು ಗಳೆಂತಲೂ, ಶಿವನಿಗೆ ಪಶುಪತಿಯೆಂತಲೂ, ಆ ಬ್ರಹ್ಮಾದಿ ದೇವತೆಗಳಿಗೆ ಶಿವಲಿಂಗ, ಭಸ್ಮ, ರುದ್ರಾಕ್ಷಾದಿ ಶೈವ ಲಾಂಛನಗಳ ಧಾರಣವೂ ಉಕ್ತವಾಗಿರುವುದರಿಂದಲೂ, ಶಿವನೇ ಸರ್ವ ದೇವತೆಗಳಿಗೆ ಪ್ರಭುವೆಂಬುವುದು ನಿರ್ವಿವಾದವಾಗಿರುವುದರಿಂದಲೂ, ಲೋಕದಲ್ಲಿ ಆರಾಧ್ಯ ಆರಾಧಕರಾದ ಪ್ರಭು ಭೃತ್ಯರಲ್ಲಿ, ಪ್ರಭುವಿನ ಲಾಂಛನಗಳನ್ನು ಭೃತ್ಯರು ಧರಿಸುತ್ತಿರುವುದು ಪ್ರಸಿದ್ಧವಾಗಿರುವುದರಿಂದಲೂ, ಸರ್ವ ದೇವತಾ ಸಾರ್ವ ಭೌಮನಾದ ಶಿವನ ಲಾಂಛನರೂಪವಾದ ಲಿಂಗಧಾರಣವು ಆ ಶಿವನ ಕಿಂಕರರೆನಿಸುವ ಸರ್ವ ಬ್ರಹ್ಮಾದಿ ದೇವತೆಗಳಿಗೂ ಅತ್ಯವಶ್ಯವಾದುದೆಂಬುದು ಘಂಟಾಘೋಷವಾಗಿರು ವುದು. ಹೀಗಿರುವಲ್ಲಿ "ಸರ್ವಲಿಂಗಂ ಸ್ಥಾಪಯತಿ" ಇತ್ಯಾದಿ ವಿಧಿ ವಾಕ್ಯಗಳಿಂದ ಬಾಹ್ಯ ಲಿಂಗಧಾರಣವು ವಿಹಿತವಾಗಿರಲು, ರಾಗದ್ವೇಷಾದಿ ಪಾಶಬದ್ಧರೂ, ಪಶು ಭಾವಾನ್ವಿತರೂ, ಮುಮುಕ್ಷುಗಳೂ, ಭಕ್ತರೂ ಆದ ನಮ್ಮಗಳಿಗೆ ಪತಿ (ಶಿವ) ಲಾಂಛ ನಾತ್ಮಕವಾದ ಪರಶಿವೇಷ್ಟ ಲಿಂಗಧಾರಣವು ಕೈಮುತಿಕ ನ್ಯಾಯಸಿದ್ಧವಾದುದಾಗಿದೆ ಯೆಂದು ಸಿದ್ಧಾಂತಿಯು ಹೇಳಲಾಗಿ, ಪೂರ್ವ ಪಕ್ಷಿಯು "ಇತಿಚೇನ್ನ" (ಹೀಗನ್ನ ಕೂಡದು) ಪುನಃ ಆಶಂಕಿಸುತ್ತಿರುವನು. ಲಿಂಗಧಾರಣವು ಕಾಮಿಕಾದಿ ಶಿವಾಗಮ ಗಳಲ್ಲಿ ಜೀವವಿರುವವರೆಗೂ (ಸಾಯುವವರೆಗೂ) ಇರಬೇಕೆಂದು ವಿಧಾನವಿರುವು ದರಿಂದಲೂ, ಈ ಲಿಂಗಧಾರಣವೆಂಬ ಕರ್ಮವಿರಲು, ಮತ್ತೊಂದು ಕರ್ಮವನ್ನು ಆರಂಭಿಸ ಬಾರದೆಂದು "ನಹಿ ಕರ್ಮಣಿ ಕರ್ಮಾಂತರಂಭಃ" ಎಂಬ ನ್ಯಾಯವಿರುವುದರಿಂದಲೂ

CC-0. Jangamwadi Math Collection. Digitized by eGangotri

ವೈದಿಕರಿಂದನುಷ್ಠೇಯುಗಳಾದ ನಿತ್ಯೌಪಸನಾದಿ ಪೌಂಡರೀಕಾಂತ ಕರ್ಮಗಳಿಗೆ ಅವ ಕಾಶವೇ ಇಲ್ಲದಿರುವುದರಿಂದಲೂ, ಲಿಂಗಧಾರಣ ದೀಕ್ಷಾಸಂಪನ್ನನಿಗೆ ಸೂತಕಾದಿಗಳ ನಿಷೇಧವು ಕಂಡುಬರುವುದರಿಂದ. ಸಾಪಿಂಡ್ಯಾದ್ಯುತ್ತರ ಕರ್ಮಗಳು ವ್ಯರ್ಥಗಳಾಗಿ ಹೋಗುವುದರಿಂದಲೂ, ಹಾಗೂ ಶೈವದೀಕ್ಷಾನಂತರದಲ್ಲಿ ಜೀವತ್ವ, ಪ್ರೇತತ್ವಗಳಿಲ್ಲ ದಿರುವುದರಿಂದ ಸ್ವಜಾತ್ಯಾಶ್ರಮ ಧರ್ಮಗಳಾಚರಣೆಗೆ ಪ್ರಯೋಜನವಿಲ್ಲದಿರುವು ದರಿಂದಲೂ, ''ನಕುರ್ಯಾನ್ನಿಷ್ಫಲಂ ಕರ್ಮ'' ಎಂಬ ನ್ಯಾಯಾನುಸಾರವಾಗಿ ವಿಧಿ ನಿಷೇಧಗಳಿಗೆ ಅವಕಾಶವಿಲ್ಲವಾಗಿ, ವೇದ ಬಾಹ್ಯಮತವು ಪ್ರವೇಶವೇ ಆಗಿ ಹೋಗುವು ದರಿಂದಲೂ, ಮುಕ್ತಾತ್ಮರೂ, ಬ್ರಹ್ಮನಿಷ್ಠರೂ, ಆದ ವಶಿಷ್ಠಾದಿಗಳೂ ಕೂಡ ಜ್ಯೋತಿ ಷ್ಠೋಮಾದಿ ಸರ್ವ ವೈದಿಕ ಕರ್ಮಾಚರಣೆಯನ್ನು ಮಾಡಿರುವುದರಿಂದ, ದೀಕ್ಷಿತನು ಅಕರ್ಮಾಚರಣೆಯನ್ನು ಬಿಡಲಾಗುವುದಿಲ್ಲವಾದುದರಿಂದಲೂ, ಹಾಗೂ ಯದ್ವೈಕಿಂಚ ಮನುರವದತ್ತದ್ಭೇಷಜಂ" ಇತ್ಯಾದಿ ಶ್ರುತಿಯಲ್ಲಿ ಮನ್ವಾದಿ ಸ್ಮೃತಿಗಳು ಔಷಧದಂತೆ ಗ್ರಾಹ್ಯಗಳಾಗಿವೆಯೆಂದು ಕಂಡುಬರುವುದರಿಂದ, ಈ ಮನ್ವಾದಿ ಸ್ಮೃತಿಗಳಲ್ಲಿ ಲಿಂಗ ಧಾರಣ ವಿಷಯದಲ್ಲಿ ಪ್ರಮಾಣವಿಲ್ಲವಾದುದರಿಂದಲೂ, ಇದಲ್ಲದೆ ಬ್ರಹ್ಮಾದಿ ದೇವತೆ ಗಳಿಗೆ ಲಿಂಗಧಾರಣ ವಿಧಾಯಕಗಳಾದ ಶ್ರುತಿ, ಸ್ಮೃತಿ, ಆಗಮ, ಪುರಾಣ, ಉಪ ಬೃಂಹಣಗಳಿಲ್ಲದಿರುವುದರಿಂದ, ಆ ದೇವತೆಗಳಿಗೆ ಶಿವಲಿಂಗಧಾರಣವಿತ್ತೆಂದು ಹೇಳಲು ಪ್ರಮಾಣವಿಲ್ಲದಿರುವುದರಿಂದಲೂ, ಇದಲ್ಲದೆ ''ಶ್ರದ್ಧಾ ಭಕ್ತಿ ಧ್ಯಾನಯೋಗಾದಿ ವೇಹಿ'' ಇಂತೆಂಬ ಕೈವಲ್ಯೋಪನಿಷತ್ತಿನಲ್ಲಿ ಲಿಂಗಧಾರಣವು ಮೋಕ್ಷಾಂಗವೆಂದು ಹೇಳದೆ, ಶ್ರದ್ಧಾ ಭಕ್ತಿಯಿಂದ ಕೂಡಿದ ಧ್ಯಾನಯೋಗವೇ ಮೋಕ್ಷಾಂಗವೆಂದು ಹೇಳಿರುವುದರಿಂದ ಮುಮುಕ್ಷುಗಳು ಧ್ಯಾನಯೋಗಾಸಕ್ತರಾಗಿರಬೇಕಲ್ಲದೆ, ಲಿಂಗಧಾರಣಾಸಕ್ತರಾಗಿರ ಕೂಡದೆಂದು ತಿಳಿದುಬರುವುದರಿಂದಲೂ, ಮೋಕ್ಷಾಕಾಂಕ್ಷಿಗಳಾದ ವೈದಿಕರಿಗೆ ಲಿಂಗ ಧಾರಣದ ಆವಶ್ಯವಿಲ್ಲ. ಹಾಗೂ ''ತಮೇವ ವಿದಿತ್ವಾತಿ ಮೃತ್ಯುಮೇತಿ ನಾನ್ಯಃಪಂಥಾ ವಿದ್ಯತೇಽಯನಾಯ'' ''ಜ್ಞಾನಾದೇವತು ಕೈವಲ್ಯಂ ನಾನ್ಯಃ ಪಂಥಾ ವಿಮುಕ್ತಯೇ" ಎಂಬ ಶ್ರುತಿಗಳಲ್ಲಿ ಮೋಕ್ಷಕ್ಕೆ ಜ್ಞಾನವೇ ಕಾರಣವಲ್ಲದೆ, ಲಿಂಗಧಾರಣವು ಕಾರಣವಲ್ಲ ವೆಂದು ಸಿದ್ಧವಾಗುವುದರಿಂದ, ಮೋಕ್ಷವನ್ನು ಬಯಸುವವರು ಜ್ಞಾನವನ್ನು ಸಂಪಾದಿಸ ಬೇಕಲ್ಲದೆ, ಲಿಂಗವನ್ನು ಧರಿಸಕೂಡದು. ಇದಲ್ಲದೆ ''ಐಶ್ವರ್ಯಮೀಶ್ವರಾದಿಚ್ಛೆನ್ಮುಕ್ತಿ ಮಿಚ್ಛೇಜ್ಜನಾರ್ದನಾತ್" ಇತ್ಯಾದಿ ಸ್ಮೃತಿಗಳಲ್ಲಿ ಜನಾರ್ದನ (ವಿಷ್ಣು) ನೇ ಮೋಕ್ಷ ಪ್ರದಾಯಕನಲ್ಲದೆ, ಶಿವನಲ್ಲವೆಂದು ಕಂಡುಬರುವುದರಿಂದ, ಶಿವಲಿಂಗಧಾರಣಕ್ಕೆ ಪ್ರಯೋಜನವಿಲ್ಲವಾದುದರಿಂದ ''ನ ಕುರ್ಯಾ ನ್ನಿಷ್ಫಲಂ ಕರ್ಮ'' ಎಂಬ ನ್ಯಾಯಾನು ಸಾರವಾಗಿ ಪ್ರಯೋಜನವಿಲ್ಲದ ಲಿಂಗಧಾರಣ ಕರ್ಮದಲ್ಲಿ ಮೂಢರೂ ಕೂಡ ಪ್ರವರ್ತಿಸ ಲಾರರಾದುದರಿಂದ, ಲಿಂಗಧಾರಣವು ಮೋಕ್ಷವೆಂಬ ಪ್ರಯೋಜನವನ್ನು ಇಚ್ಛಿಸು ವವರಿಂದ ಗ್ರಾಹ್ಯವಲ್ಲ, ಇದಲ್ಲದೆ ''ಸರ್ವಲಿಂಗಂ ಸ್ಥಾಪಯತಿ" ಎಂಬಲ್ಲಿ ''ಸ್ಥಾಪ ಯತಿ" ಎಂಬುವದು ಲಡಂತವಾಗಿರುವುದರಿಂದ, ಲಿಂಗಧಾರಣದಲ್ಲಿ ವಿಧಿವಾಕ್ಯ

CC-0. Jangamwadi Math Collection. Digitized by eGangotri

ವೆನಿಸುವುದಿಲ್ಲವಾದುದರಿಂದಲೂ ಹಾಗೂ ವಿನಿಗಮನೆಯಿಲ್ಲದಿರುವುದರಿಂದ ಭೂಮಿ ಯಲ್ಲಿಯೂ, ಶರೀರದಲ್ಲಿಯೂ ಸ್ಥಾಪಿಸಬೇಕೆಂದು ಅನೇಕ ವಿಧಾನವನ್ನು ಹೇಳಲು ವಾಕ್ಯ ಭೇದ ದೋಷವು (ಭಿನ್ನ ಭಿನ್ನ ವಾಕ್ಯಗಳಾಗಬೇಕೆಂಬ ದೋಷವು) ಪ್ರಾಪ್ತ ವಾಗುವುದರಿಂದಲೂ, "ಸ್ಥಾಪಯತಿ" ಎಂಬ ಧಾತ್ವರ್ಥವನ್ನು ವಿಚಾರಿಸಿದರೆ, ಈ ಶೃತಿಯು ಸ್ಥಾವರಲಿಂಗಸ್ಥಾಪನ ಪದಕವಾದುದಲ್ಲದೆ; ಇಷ್ಟಲಿಂಗಧಾರಣ ಪದಕವಾದು ದಲ್ಲವೆಂದು ಸ್ಪಷ್ಟವಾಗುವುದರಿಂದಲೂ, ಆ ಲಿಂಗವು ಹಸ್ತದಿಂದ ಪೂಜಿಸಲ್ಪಡತಕ್ಕು ದೆಂದು ಸಿದ್ಧವಾಗುತ್ತಿರುವುದರಿಂದಲೂ, ಲಿಂಗಧಾರಣವು ವೈದಿಕ ಗ್ರಾಹ್ಯವಲ್ಲ.

ಇದಲ್ಲದೆ ನಿರ್ಮಲಾಂತಃಕರಣವುಳ್ಳವನಿಗೆ ಬಾಹ್ಯಲಿಂಗಧಾರಣಾದಿ ಕರ್ಮಾಚರಣೆ ಯಲ್ಲಿ ಪ್ರಯೋಜನವಿಲ್ಲದಿರುವುದರಿಂದ ಮುಮುಕ್ಷುಗಳಿಗೆ ಲಿಂಗಧಾರಣವು ಅನವಶ್ಯಕ ವಾಗಿದೆ. ಹಾಗೂ ಲೋಕದಲ್ಲಿ ರಾಜನಲ್ಲಿರುವ ಶ್ವೇತಚ್ಛತ್ರಾದಿ ಲಾಂಛನಗಳು ಭೃತ್ಯ ರಲ್ಲಿಲ್ಲವಾದುದರಿಂದ ಪ್ರಭುವಿನ ಲಾಂಛನಗಳನ್ನು ಧರಿಸಿಯೇ ತೀರಬೇಕೆಂಬ ನಿಯ ಮವೂ ಇಲ್ಲ. ಅದರಂತೆ ಪರಮೇಶ್ವರನಲ್ಲಿರುವ ಭುಜಗ ಭೂಷಣ, ಗರಲ ಭಕ್ಷಣಾದಿ ಧರ್ಮಗಳು ಭಯಪ್ರದಗಳಾದುದರಿಂದ ಧರಿಸಲಯೋಗ್ಯಗಳಾಗಿರುವವು. ಅಂದಮೇಲೆ ಈ ಎಲ್ಲಾ ಶಿವಲಾಂಛನಗಳನ್ನು ಧರಿಸಲೇಬೇಕೆಂಬ ನಿಯಮವಿಲ್ಲದಿರುವುದರಿಂದ ಶಿವಲಾಂಛನವೆನಿಸುವ ಶಿವಲಿಂಗವನ್ನಾದರೂ ಧರಿಸಕೂಡದು. ಇದೂ ಅಲ್ಲದೆ ಮಂಗಲಾಚರಣೆಯಲ್ಲಿ ಶ್ರುತ್ಯಾದಿ ಪ್ರಮಾಣವಿಲ್ಲದಿದ್ದರೂ, ನಿಖಿಲ ಶಿಷ್ಟಾಚರಣೆ ಇರುವುದರಿಂದ, ಮಂಗಲಾಚರಣೆಯು ಹೇಗೆ ಶಿಷ್ಟಗ್ರಾಹ್ಯವಾಗಿದೆಯೋ, ಅದರಂತೆ ಲಿಂಗಧಾರಣೆಯಲ್ಲಿ ಶ್ರುತ್ಯಾದಿ ಪ್ರಮಾಣಗಳಿಲ್ಲದಿದ್ದರೂ, ಶಿಷ್ಟಗ್ರಾಹ್ಯವಾಗಿರುವದೆಂದು ಹೇಳಲು ಬರುವುದಿಲ್ಲ. ಯಾಕೆಂದರೆ ವೇದವನ್ನು ಮಾನಿಸುವ ಎಲ್ಲಾ ಶಿಷ್ಯರೂ ಲಿಂಗಧಾರಣ ಕರ್ಮವನ್ನಾಚರಿಸುವುದಿಲ್ಲವಾದುದರಿಂದ ಲಿಂಗಧಾರಣವು ಶಿಷ್ಟಗ್ರಾಹ್ಯ ವಲ್ಲ, ಹಾಗೂ ಲಿಂಗವು ಸಗುಣವಾಗಿರುವುದರಿಂದ ಇದರ ಉಪಾಸನೆಯು ನಿರ್ಗುಣ ವಾದ ಸಾಕ್ಷಿ ಚೈತನ್ಯರೂಪವಾದ ಬ್ರಹ್ಮದೊಡನೆ ಐಕ್ಯ (ಅಭೇದ) ವನ್ನು ಹೊಂದಿಸ ಲಾರದಾದುದರಿಂದ, ಸಗುಣ ಶಿವಲಿಂಗದ ಉಪಾಸನೆ (ಧ್ಯಾನ) ಯಾಗಲಿ ಅಥವಾ ಅದರ ಧಾರಣವಾಗಲಿ ನಿರ್ಗುಣ ಬ್ರಹ್ಮೈಕ್ಯರೂಪ ಮೋಕ್ಷಾಪೇಕ್ಷಿಗಳಿಗೆ ಅಂಗೀಕಾರ್ಯ ವಲ್ಲ.

(ಮುಂದುವರಿಯುವುದು)

CC-0. Jangamwadi Math Collection. Digitized by eGangotri

ಕಾಮಿಕಾದ್ಯಾಗಮಗಳು ಆಲಯ, (ದೇವಾಲಯ) ರಥೋತ್ಸವ, ಲಿಂಗ ಪ್ರತಿಷ್ಠಾದಿ ಕಾರ್ಯಗಳಲ್ಲಿ ಪ್ರಮಾಣವೆನಿಸಿಸುವುವಲ್ಲದೆ, ಲಿಂಗಧಾರಣದಲ್ಲಿ ಪ್ರಮಾಣಗಳೆನಿಸುವದಿಲ್ಲವಾದುದರಿಂದ, ಪ್ರತ್ಯಕ್ಷ ಶ್ರುತಿ, ಸ್ಮೃತಿ, ಆಚಾರ ವಿರುದ್ಧವಾದ ಲಿಂಗಧಾರಣವು ಸ್ಮೃತ್ಯನವಕಾಶ ನ್ಯಾಯದಿಂದ ಸಾಂಖ್ಯ ಸ್ಮೃತಿಯು ಅಪ್ರಮಾಣವೆನಿಸಿ, ಅಲ್ಲಿ ಪ್ರಕೃತಿಗೆ ಉಪಾದಾನಕಾರಣವೆಂದು ಹೇಳುವುದು ವೇದಾಂತಗಳಿಂದ ಹೇಗೆ ಗ್ರಾಹ್ಯವಲ್ಲವೋ ಅದರಂತೆ ಶ್ರುತಿ ವಿರುದ್ಧ ಶಿವಾಗಮಗಳು ಅಪ್ರಮಾಣಗಳಾಗುವುದರಿಂದ ಆ ಶಿವಾಗಮಗಳಲ್ಲಿ ಹೇಳಿದ ಲಿಂಗಧಾರಣವೂ ಕೂಡ ವೈದಿಕರಿಂದ ಗ್ರಾಹ್ಯವಲ್ಲ! ಹೀಗೆ ಪೂರ್ವ ಪಕ್ಷವು ಪ್ರಾಪ್ತವಾಗಲು, "ಲಿಂಗಧಾರಣ ಸಿದ್ಧಾಂತಸ್ತು" ಎಂದು ಭಾಷ್ಯಕಾರರು ಪೂರ್ವಪಕ್ಷಿಯ ಎಲ್ಲ ಆಶಂಕೆಗಳಿಗೆ ಕ್ರಮವಾಗಿ ಉತ್ತರವನ್ನು ಹೇಳಿ ಲಿಂಗಧಾರಣವೇ ಮೋಕ್ಷಾಂಗವೆಂತಲೂ, ಅದುಳ್ಳವನೇ ಬ್ರಹ್ಮ ಜಿಜ್ಞಾಸಾರೂಪವಾದ ವೇದಾಂತ ಶಾಸ್ತ್ರಕ್ಕೆ ಅಧಿಕಾರಿಯಲ್ಲದೆ; ಲಿಂಗಧಾರಿಯಾಗದವನು ಅಧಿಕಾರಿಯಲ್ಲವೆಂತಲೂ, ಲಿಂಗಧಾರಣ ಸಿದ್ಧಾಂತವನ್ನು ಸ್ಥಾಪಿಸುತ್ತಿರುವರು.

ಲಿಂಗಧಾರಣವು ಪ್ರತ್ಯಕ್ಷ ಶ್ರುತಿ, ಸ್ಮೃತಿ, ಆಗಮ, ಪುರಾಣ, ಇತಿಹಾಸಗಳಲ್ಲಿ ವಿಹಿತವಾಗಿರುವುದರಿಂದ, ಅಗ್ನಿಹೋತ್ರಾದಿ ಕರ್ಮಗಳಂತೆ ವೈದಿಕರಿಂದ ಗ್ರಾಹ್ಯವಾಗಿರುವುದು. ಆದುದರಿಂದ ಲಿಂಗಧಾರಣ ದೀಕ್ಷಾನಂತರದಲ್ಲಿ ಬ್ರಹ್ಮ ಜಿಜ್ಞಾಸೆಯು ವಿಧಿಸಲ್ಪಡುತ್ತದೆ. ಇನ್ನು ಪೂರ್ವ ಪಕ್ಷಿಯ ಆಶಂಕೆಗಳಿಗೆ ಸಮಾಧಾನವನ್ನು ಹೇಳುತ್ತಾರೆ. "ಯಚ್ಛಂದಸಾಮೃಷ ಭೋ ವಿಶ್ವರೂಪಃ" ಈ ಮಂತ್ರದಲ್ಲಿ ಶಿವನು ಅಪರಿಚ್ಛಿನ್ನನೆಂದು ಹೇಳಿದ್ದರೂ, ಭಕ್ತೋಪಾಸನಾರ್ಥವಾಗಿ ಪರಿಚ್ಛಿನ್ನ ಲಿಂಗ ಸ್ವರೂಪವು ಯುಕ್ತವೇ ಆಗುತ್ತದೆ. ನಾರಾಯಣೋಪನಿಷತ್ತಿನಲ್ಲಿ "ನಿಧನ ಪತಯೇ ನಮಃ" ಇತ್ಯಾದಿಯಿಂದ ಲಿಂಗಕ್ಕೆ ಸರ್ವಾತ್ಮಕತ್ವ (ಅಪರಿಚ್ಛಿನ್ನತ್ವ) ವನ್ನು ಹೇಳಿ "ಸರ್ವ ಲಿಂಗಂ ಸ್ಥಾಪಯತಿ" ಎಂಬುದರಿಂದ ಆ ಲಿಂಗಕ್ಕೇನೆ ಪರಿಚ್ಛಿನ್ನರೂಪವನ್ನು ಹೇಳುವುದರಿಂದ "ನಿಧನ ಪತಯೇ ನಮಃ" ಎಂಬ ಮಂತ್ರವು ಲಿಂಗಧಾರಣ ವಿಧಾಯಕವೆಂದು ಕಂಡುಬರುವುದರಿಂದ, "ಯಚ್ಛಂದಸಾಮೃಷ ಭೋ ವಿಶ್ವರೂಪಃ" ಎಂಬ ಮಂತ್ರವೂ ಕೂಡ ಲಿಂಗಧಾರಣ ವಿಧಾಯಕವೇ ಆಗಿರುವದೆಂದು ಸಿದ್ಧವಾಗುತ್ತದೆ. "ಸರ್ವಾನನ ಶಿರೋಗ್ರೀವ ಭೂತಗುಹಾಶಯಃ ಸರ್ವವ್ಯಾಪೀಚ ಭಗವಾನ್ ತಸ್ಮಾ ಸರ್ವಗತಃ ಶಿವಃ" ಪ್ರಾಂಚೋಽಹಂ ಪ್ರತ್ಯಂಚೋಽಹಂ" ಇತ್ಯಾದಿ ಶ್ವೇತಾಶ್ವತರ, ಅಥರ್ವ ಶಿರಃ ಪ್ರಭೃತಿ ಉಪನಿಷತ್ತುಗಳಲ್ಲಿಯೂ ಕೂಡ ಶಿವನು ಅಪರಿಚ್ಛಿನ್ನನೂ ಹಾಗೂ ಪರಿಚ್ಛಿನ್ನನೂ ಆಗಿರುವನೆಂದು ಕಂಡುಬರುತ್ತದೆ. ಆದುದರಿಂದ "ಯಚ್ಛಂದ ಸಾಮೃಷಭಃ" ಎಂಬ ಮಂತ್ರವು ಪರಿಚ್ಛಿನ್ನ ಲಿಂಗಧಾರಣ ವಿಧಾಯಕವಲ್ಲವೆಂದು

CC-0. Jangamwadi Math Collection. Digitized by eGangotri

ಹೇಳಕೊಡೆನು ! "ತತ್ರಾಣೇಷ್ವಂತರ್ಮನಸೋ ಲಿಂಗಮಾಹುಃ" "ಲಿಂಗೇ ಸುಷುಪ್ತಿಃ "ಲಿಂಗಂ ಬ್ರಹ್ಮ ಸನಾತನಂ" ಇಂತೆಂಬ ಕಠವಲ್ಲೀ, ಹಂಸೋಪನಿಷತ್, ಲಿಂಗ ಪುರಾಣಾದಿಗಳಲ್ಲಿ ಬ್ರಹ್ಮ ಪದವು ಹಸ್ತ, ಕರ, ಪಾಣಿ ಶಬ್ದಗಳಂತೆ, ಲಿಂಗ ಪರ್ಯಾಯ ನಾಮವೆಂದು ಸಿದ್ಧವಾಗುವುದರಿಂದ, ಆ ಅಪರಿಚ್ಛಿನ್ನವಾದ ಪರಶಿವಲಿಂಗರೂಪವಾ ಪರಬ್ರಹ್ಮವೇ ಭಕ್ತರ ಉಪಾಸನೆಗಾಗಿ ಪರಚ್ಛಿನ್ನ ಇಷ್ಟಾದಿ ಲಿಂಗರೂಪದಿಂದ ವರ್ತಿ ಸುವುದರಿಂದ "ಯಚ್ಛಂದಸಾಂ" ಎಂಬ ಮಂತ್ರವು ಪರಿಚ್ಛಿನ್ನೇಷ್ಟ ಲಿಂಗಧಾರಣ ವಿಧಾಯಕವಾಗಿರುವದು. "ದೇವಧಾರಣಃ" ಎಂಬಲ್ಲಿ ಹೇ ದೇವ ಎಂದು ಪದವಿಭಾ ಮಾಡಿ "ಗೋಪಾಯ" (ರಕ್ಷಿಸು) ಎಂಬ ಪದದೊಡನೆ ದೇವ ಪದದ ಅನ್ವಯವನ್ನು ಮಾಡುವುದು "ಅಪರಿಮಿತಾಧಿಕರಣ" ವಿರೋಧವಾಗುವುದು. ಯಾಕೆಂದರೆ, ಅತಿ ಸಮೀಪದಲ್ಲಿರುವ ಧಾರಣ ಶಬ್ದದೊಡನೆ ಅನ್ವಯ ಮಾಡುವುದನ್ನು ಬಿಟ್ಟು ವ್ಯವಹಿತ (ಅತಿ ದೂರಸ್ಥವಾದ) "ಗೋಪಾಯ" ಎಂಬ ಪದದೊಡನೆ ಅನ್ವಯ ಮಾಡುವುದು ಯುಕ್ತವಲ್ಲವಷ್ಟೆ; ಹಾಗಾದರೆ "ಗೋಪಾಯ" ಪದಕ್ಕೆ ಯಾವ ಪದದೊಡನೆ ಅನ್ವಯ ಮಾಡಬೇಕೆಂದರೆ "ಬ್ರಹ್ಮಣಃ" ಎಂಬ ಪದವು "ಗೋಪಾಯ" ಪದಕ್ಕೆ ಸನ್ನಿಹಿತ ವಾಗಿರುವುದರಿಂದ, "ಬ್ರಹ್ಮಣಃ" ಎಂಬ ಷಷ್ಠೀ ವಿಭಕ್ತಿಯನ್ನು ವಿಪರಿಣಾಮ (ವ್ಯತ್ಯಾಸ) ವನ್ನು ಮಾಡಿಕೊಂಡು ಹೇ ಬ್ರಹ್ಮ ಎಂದು ಸಂಬೋಧನ ವಿಭಕ್ತಿ ಯನ್ನಾಗಿ ಮಾಡಿಕೊಂಡು ಅನ್ವಯವನ್ನು ಮಾಡಬೇಕು. ಧಾರಣ ಶಬ್ದಕ್ಕೆ ಸಂಯೋಗವೆಂದು ಅರ್ಥವಾಗುವುದರಿಂದಲೂ, ಲಿಂಗ ಸಂಯೋಗವು ಮೋಕ್ಷಕ್ಕೆ ಕಾರಣವಾಗಿರುವದರಿಂದಲೂ, ಅಮೃತ ಪದವಾಚ್ಯವಾದ ಮೋಕ್ಷರೂಪ ಅರ್ಥಕ್ಕೆ ಬೇರೆ ರೀತಿಯಿಂದ ಅನ್ವಯಿಸಲು ಬರುವುದಿಲ್ಲವಾದುದರಿಂದಲೂ, ಲಿಂಗಧಾರಣವು ಮೋಕ್ಷಕ್ಕೆ ಕಾರಣವೆಂದು ಸ್ಪಷ್ಟವಾಗುತ್ತದೆ. ಆದ್ದರಿಂದಲೆ "ಲಿಂಗಾಂಗ ಸಂಗಿನೋವತ್ಸ ಪುನರ್ಜನ್ಮ ನವಿದ್ಯತೆ। ಯುಗಪದ್ ಜ್ಞಾನಸಿದ್ಧಿಃ ಸ್ಯಾತ್ ತತೋ ಮೋಕ್ಷಮವಾಪ್ನು ಯಾತ್" ಎಂಬ ಶಂಕರ ಸಂಹಿತಾ ವಚನವೂ ಕೂಡ, ಲಿಂಗಧಾರಣವೇ ಮೋಕ್ಷ ಸಾಧನವೆಂದು ಸಾರುತ್ತದೆ.

"ಶರೀರಂ ಮೇ ವಿಚರ್ಷಣಂ" ಎಂಬುದರಿಂದ ಬಾಹ್ಯ ಶರೀರ ಶುದ್ಧಿರೂಪವಾದ ವಿಶೇಷ ಫಲದ ವಿಧಾನವಾಗುತ್ತದೆ. ಈ ಪಾಪರಾಹಿತ್ಯ ರೂಪವಾದ ಶರೀರ ಶುದ್ಧಿಯು ಕಠಿಣ ವ್ರತಾಚರಣೆಯಿಲ್ಲದೆ ಉಂಟಾಗಲಾರದಾದುದರಿಂದಲೇ "ಅತ್ಯಾಶ್ರಮಸ್ಥ ಸಕಲೇಂದ್ರಿಯಾಣಿ ನಿರುಧ್ಯ ಭಕ್ತ್ಯಾ ಸ್ವ ಗುರುಂ ಪ್ರಣಮ್ಯ" "ಅತ್ಯಾಶ್ರಮೀ ಸರ್ವ ದಾಸ ಕೃದ್ವಾಜಪೇತ" "ವ್ರತಮೇ ತತ್ಪಾಶುಪತಂ ಪಶುಪಾಶ ವಿಮೋಕ್ಷಾಯ" "ವ್ರತಮೇ ತಚ್ಛಾಂ ಭವಂ" "ತತ್ಸಮಾಚರೇನ್ಮುಮುಕ್ಷುರ್ನ ಪುನರ್ಭವಾಯ" "ತೇಷಾ ಮೇ ವೈತಾಂ ಬ್ರಹ್ಮವಿದ್ಯಾಂ ವದೇತ್ ಶಿರೋವ್ರತಂ ವಿಧಿ ವದ್ಯಸ್ತು ಜೀರ್ಣಂ" "ತಸ್ಮೈತೆ ಕಥಿತಾ ಹ್ಯರ್ಥಾಃ ಪ್ರಕಾಶಂತೆ ಮಹಾತ್ಮಾನಾಂ" ಇಂತೆಂಬ ಕೈವಲ್ಯ

CC-0. Jangamwadi Math Collection. Digitized by eGangotri

ಅಥರ್ವಣಶಿರಸ್ಸು, ಕಾಲಾಗ್ನಿರುದ್ರ, ಮುಂಡಕ ಮೊದಲಾದ ಉಪನಿಷತ್ತುಗಳಲ್ಲಿ ಪಾಶುಪತ ವ್ರತಸಂಪನ್ನನೇ ಬ್ರಹ್ಮವಿದ್ಯಾಧಿಕಾರಿಯೆಂದು ಸ್ಪಷ್ಟವಾಗಿ ತಿಳಿಯುವದರಿಂದ ಲಿಂಗಧಾರಣ ದೀಕ್ಷಾಸಂಪನ್ನನೇ ಬ್ರಹ್ಮ ವಿದ್ಯಾಧಿಕಾರಿಯೆಂಬುವದು ಸಿದ್ಧಾಂತವು. ಕೈವಲ್ಯ ಶ್ವೇತಾಶ್ವತ ರುದ್ಯುಪನಿಷತ್ತುಗಳಲ್ಲಿ ಲಿಂಗಧಾರಣ ವಿಧಾಯಕ ವಾಕ್ಯಗಳು ಕಂಡುಬರುವುದಿಲ್ಲವಾದುದರಿಂದ, ಪಾಶುಪತ ವ್ರತವೆಂದರೆ ಭಸ್ಮಧಾರಣ ವ್ರತವಲ್ಲದೆ, ಲಿಂಗಧಾರಣ ವ್ರತವಲ್ಲವೆಂದು ಆಶಂಕಿಸಕೂಡದು. ಆ ಪಾಶುಪತ ವ್ರತ ರೂಪವಾದ ಲಿಂಗಧಾರಣ ದೀಕ್ಷೆಯ ಅಂಗ ಸ್ವರೂಪದಿಂದ ಭಸ್ಮಧಾರಣ ವಿಧಾಯಕಗಳೇ ಆ ಕೈವಲ್ಯ ಶ್ವೇತಾಶ್ವತರೋಪನಿಷದ್ವಾಕ್ಯಗಳೆಂಬುವದು ಘಂಟಾ ಘೋಷವು. ಅಂದರೆ ಪಾಶುಪತ ವ್ರತವೆಂದರೂ, ಲಿಂಗಧಾರಣ ವ್ರತವೆಂದರೂ, ಮಹಾವ್ರತವೆಂದರೂ, ಶಿರೋವ್ರತವೆಂದರೂ, ಶಾಂಭವ ವ್ರತವೆಂದರೂ, ಅತ್ಯಾಶ್ರಮ ವ್ರತವೆಂದರೂ, ಒಂದೇ ಅರ್ಥವಲ್ಲದೆ, ಬೇರೆ ಅರ್ಥವಿಲ್ಲ. ಆದುದರಿಂದಲೆ, "ಲಿಂಗಾಂಗ ಸಂಗಿನಾಂ ವತ್ಸ ಪುನರ್ಜನ್ಮ ನವಿದ್ಯತೆ। ಏಷ ಪಾಶುಪತೋ ಯೋಗಃ। ಪಶುಪಾಶ ನಿವೃತ್ತಯೇ॥ ಸರ್ವ ವೇದಾಂತ ಸಾರೋಽಯಮತ್ಯಾಶ್ರಮ ಇತಿ ಶ್ರುತಿಃ। ಪರಬ್ರಹ್ಮಾಭಿಧಂ ಲಿಂಗಂ ಪಶು ಪಾಶ ವಿಮೋಚಕಂ। ಯೋ ಧಾರಯತಿ ಸದ್ಭಕ್ತ್ಯಾ ಸ ಪಾಶುಪತ ಉಚ್ಯತೆ॥ ಶರೀರ ತ್ರಿತಯೇ ಭಕ್ತ್ಯಾ ಲಿಂಗಂ ಪರಶಿವಾತ್ಮಕಂ। ಯೋಧೃತ್ವಾವಿಚರೇ ದ್ಭೂ ಮೌಸ ಪಾಶುಪತ ಉಚ್ಯತೆ॥ ಲಿಂಗಂ ಶಿವೋಭವೇತ್ ಕ್ಷೇತ್ರ ಮಂಗಂ ಸಂಯೋಗ ಆಶ್ರಯಃ। ತಸ್ಮಾಲ್ಲಿಂಗಾಂಗ ಸಂಯುಕ್ತೋಪಿ ಸೋಽತ್ಯಾಶ್ರಮೀ ಭವೇತ್॥ ಬ್ರಹ್ಮಚಾರೀ ಗೃಹಸ್ಥೋವಾ ವಾನಪ್ರಸ್ಥೋ ಯತಿಸ್ತುವಾ। ಯಸ್ತು ಲಿಂಗಾಂಗ ಸಂಯುಕ್ತಃ ಸ ಏವಾತ್ಯಾಶ್ರಮೀ ಭವೇತ್॥" ಇಂತೆಂಬ ಆದಿತ್ಯ, ಲೈಂಗ, ಸ್ಕಾಂದ, ಕೂರ್ಮ, ಪುರಾಣಗಳಲ್ಲಿ ಪಾಶುಪತ, ಅತ್ಯಾಶ್ರಮಿ ಶಬ್ದಗಳು ಲಿಂಗಧಾರಿ ಶಬ್ದಕ್ಕೆ ಪರ್ಯಾಯ ಗಳೆಂದು ಸ್ಪಷ್ಟವಾದ ಉಪದೇಶವಿರುವುದು. ಇದರಿಂದ ಪಾಶುಪತವ್ರತ ಶಬ್ದವು ಭಸ್ಮ ಧಾರಣ ಪರವಾಗಿರದೆ, ಲಿಂಗಧಾರಣ ಪರವಾದುದೆಂಬುವದು ಸಿದ್ಧವಾಯಿತು, ಹಾಗು ಸಾಮ ಜೈಗೀಷೀಯ ಶಾಖೆಯ ಸದಾನಂದೋಪನಿಷತ್ತಿನಲ್ಲಿ "ಅಂತರ್ಧಾರಣ ಶಕ್ತೋ ವಾಹ್ಯ ಶಕ್ತೋವಾ ದ್ವಿಜೋತ್ತಮಃ। ಸಂಸ್ಕೃತ್ಯ ಗುರುಣಾದತ್ತಂ ಶೈವಂ ಲಿಂಗ ಮುರಸ್ಥಿತಿ। ಧಾರ್ಯ ವಿಪ್ರೇಣ ಮುತ್ತ್ಯರ್ಥಮೇವಂ ವೇದಾಂತಿನೋವಿದುಃ॥" ಅಥರ್ವಣ ವೇದದ ಐಶ್ವರ್ಯ ಶಾಖೆಯಲ್ಲಿ "ಯೋ ವಾಮಹಸ್ತಾರ್ಚಿತ ಲಿಂಗಮೇಕಂ ಪರಾತ್ಪರಂ ಧಾರಯತೇ ಸತತಂ ವಿಪ್ರಃ ಕ್ಷತ್ರಿಯೋವಾ। ತಸ್ಮೈವ ಲಭ್ಯಃ ಪರ ಮೇಶ್ವರೋಽಸೌ ನಿರಂಜನಂ ಪರಮಂ ಸಾಮ್ಯ ಮುಪೈತಿ ದಿವ್ಯಂ॥" ಇತ್ಯಾದಿ ಶ್ರುತಿ ಗಳಲ್ಲಿ ಪರಮೇಶ್ವರನ ಧ್ಯಾನ, ಧಾರಣಗಳೇ ಮುಮುಕ್ಷುಗಳಿಗೆ ಗ್ರಾಹ್ಯಗಳೆಂದು ತಿಳಿ ಯಲ್ಪಡುತ್ತದೆ. ಹಾಗು ರುದ್ರಾಧ್ಯಾಯದಲ್ಲಿಯೂ ಕೂಡ "ಅಧ್ಯವೋಚ ದಧಿ ವಕ್ತಾ ಪ್ರಥಮೋ ದೈವ್ಯೋಭಿಷಕ್" ಎಂಬ ಮಂತ್ರದಿಂದ ಪರಶಿವನೇ ಜನನ-ಮರಣ ಪ್ರವಾಹರೂಪವಾದ ಸಂಸಾರವೆಂಬ ರೋಗದ ನಿವಾರಣ ಮಾಡುವಲ್ಲಿ ಉತ್ತಮ ವೈದ್ಯ

CC-0. Jangamwadi Math Collection. Digitized by eGangotri

ನಾಗಿರುವನೆಂದು ಸೂಚಿಸಲ್ಪಡುತ್ತದೆ. ಆದ್ದರಿಂದಲೇ ವೇದಪುರುಷನಿಂದಲೂ ಕೂಡ ಲಿಂಗಧಾರಣವೇ ಪಶು (ಜೀವ) ಪಾಶ ವಿಮೋಚಕವಾಗಿದೆಯೆಂದು ಋಗ್ವೇದ, ಯಜುರ್ವೇದ, ಸಾಮವೇದ ಮೊದಲಾದುವುಗಳಲ್ಲಿ ಉಪದೇಶಿಸಲ್ಪಡುತ್ತದೆ.

ಋಗ್ವೇದದಲ್ಲಿ "ಅಯಂ ಮೇ ಹಸ್ತೋಭಗವಾನ್ ಅಯಂ ಮೇ ಭಗವತ್ತರಃ" ಇಂತೆಂಬ ಮಂತ್ರದಿಂದ ವೇದ ಪುರುಷನಿಗೆ ಹಸ್ತದಲ್ಲಿ ಲಿಂಗಧಾರಣವು ತೋರಿಸಲ್ಪಡುತ್ತದೆ. "ಶಿವಾಭಿ ಮರ್ಶನಃ" ಎಂಬ ಈ ಪದದಿಂದ ಸ್ಥಾವರಲಿಂಗ ಸ್ಪರ್ಶವೆಂದು ಅರ್ಥಮಾಡಿ, ಈ ಮಂತ್ರವು ಸ್ಥಾವರ ಲಿಂಗ ಪರವಾದುದೆಂದು ಹೇಳಲಾಗುವುದಿಲ್ಲ. ಯಾಕೆಂದರೆ "ಶಿವಭಿಮತಃ ಸರ್ವದಾಸ್ಪೃಶತಿ" (ಶಿವನನ್ನು ಎಲ್ಲ ಕಾಲದಲ್ಲಿಯೂ ಮುಟ್ಟುತ್ತಾನೆ) ಸ್ಥಾವರ ಲಿಂಗದಲ್ಲಿ ಸಾರ್ವಕಾಲಿಕವಾದ ಸ್ಪರ್ಶವು ಸಂಭವಿಸುವುದಿಲ್ಲವಾದುದರಿಂದ, ಈ ಮಂತ್ರವು ಇಷ್ಟಲಿಂಗ ಪರವಾದುದೆಂಬುದು ಘಂಟಾ ಘೋಷವು. ಇದೇ ವಿಷಯವು ವಾತುಲದಲ್ಲಿ ಉಕ್ತವಾಗಿದೆ. "ಧಾರಮೇದ್ಯಸ್ತು ಹಸ್ತೇನ ಲಿಂಗಾಕಾರಂ ಶಿವಂ ಸದಾ| ತಸ್ಯ ಹಸ್ತ ಸ್ಥಿತಂವಿದ್ಧಿ ಮತ್ಪದಂ ಸಂಪದಾಂ ಪದಂ||" ಅಗ್ನಿ ಸಂತಪ್ತವಾದ ಆಯಃ ಪಿಂಡದಲ್ಲಿ ದಾಹಕತ್ವ (ಸುಡೋಣ), ಪ್ರಕಾಶಕತ್ವ ಧರ್ಮಗಳು ತೋರುವಂತೆ, ಲಿಂಗಧಾರಣದಿಂದ ಹಸ್ತವು ಭಗವತ್ತರತ್ವವುಳ್ಳದ್ದು, ವಿಶ್ವಭೇಜತ್ವ ಧರ್ಮ ಉಳ್ಳದೂ ಎಂದು ಹಸ್ತದಲ್ಲಿ ಪರಮೇಶ್ವರ ಧರ್ಮಗಳು ಪ್ರತಿಪಾದಿಸಲ್ಪಡುತ್ತವೆ. ಕಾಮಿಕಾಗಮದಲ್ಲಿಯೂ ಸಹ "ಅಯಂ ಮೇ ಹಸ್ತೋ ಭಗವಾನ್" ಎಂಬ ಮಂತ್ರದಿಂದ ವೇದ ಪುರುಷರಿಗೆ ಸರ್ವದಾ ಹಸ್ತದಲ್ಲಿ ಲಿಂಗಧಾರಣವು ವಿಹಿತವಾಗಿದೆಂದು ಹೇಳಲ್ಪಡುವದು. ಹಾಗು ಯಜುರ್ವೇದದಲ್ಲಿ "ಯಾತೇ ರುದ್ರ ಶಿವಾತನೂರ ಘೋರಾ ಪಾಪಕಾಶಿನೀ" "ತ್ರ್ಯಂಬಕಂ ಯಜಾಮಹೇ" ಯಜುರ್ವೇದದ ಪ್ರಥಮಾಷ್ಟಕ ಚರಮ ಪ್ರಶ್ನಿದಲ್ಲಿ "ಸೋಮಾರುದ್ರಯುವ ಮೇಚಾನ್ಯಸ್ಮೈ" ಈ ಮಂತ್ರವು ಲಿಂಗಧಾರಣವನ್ನು ಬೋಧಿಸುತ್ತವೆಂಬ ವಿಷಯದಲ್ಲಿ ಈ ಮಂತ್ರಗಳ ಉಪ ಬೃಂಹಣ ವಾಕ್ಯಗಳು ಲಿಂಗ ಪುರಾಣದಲ್ಲಿ ದೊರೆಯುತ್ತವೆ. "ಯಾತೇ ಶಿವಾತನೂ ರುದ್ರ ಲಿಂಗ ಮಂಗಲ ದಾಯಕಂ" ಇತ್ಯಾದಿಯಾದ ಆ ಎಲ್ಲ ವಾಕ್ಯಗಳು, ಮೇಲೆ ಭಾಷ್ಯದಲ್ಲಿ ಉದಾಹರಿಸಲ್ಪಟ್ಟಿವೆ. "ಸೋಮಾರುದ್ರಾ" "ದೇವತಾ ದ್ವಂದ್ವೇಚ" ಎಂಬುದರಿಂದ ಪೂರ್ವ ಸೋಮ ಪದಕ್ಕೆ ಸೋಮಾ ಎಂದು ದೀರ್ಘವಾಗಿವೆ. "ಸುಪಾಂಸು ಲುಕ್" ಇದರಿಂದ ಅನಜ್ ಪ್ರತ್ಯಯವಾಗಿದೆ. ಇದೇ ಯಜುರ್ವೇದದಲ್ಲಿ ಪರಮೇಶ್ವರನಿಗೆ "ರುದ್ರೋರ್ಣಾ ಏಮದಷಗ್ನಿಃ ತಸ್ಮೈತೆ ತನುವೌ ಘೋರಾನ್ಯಾ ಶಿವಾನ್ಯಾ" ಎಂದು ಎರಡು ಮೂರ್ತಿಗಳು ಹೇಳಲ್ಪಡುತ್ತವೆ. ಈ ಮಂತ್ರದಲ್ಲಿರುವ "ಯುದಂ" "ಯುವಾಂ" ಎಂದು ಮಾಡಿ ನೀವಿಬ್ಬರೂ ಎಂತಲೂ. "ಅಸ್ಮೆ" ಎನ್ನುವುದಕ್ಕೆ "ಅಸ್ಮಭ್ಯಂ" ತಮಗೋಸ್ಕರ "ಸುಪಾಂ ಸುಲುಕ್" ಇತ್ಯಾದಿಯಿಂದ ಅಸೆ ಪ್ರತ್ಯಯವಾಗಿದೆ. ವಿಶ್ವಾ ಎಂಬುದಕ್ಕೆ ವಿಶ್ವಾನಿ (ವಿಶ್ವಗಳು) ಎಂಬ ಅರ್ಥದಲ್ಲಿ ಟಾ ಬಂತ

CC-0. Jangamwadi Math Collection. Digitized by eGangotri

ವಾಗಿದೆ. "ಏತಾನಿ" ಈ ಇಷ್ಟ, ಪ್ರಾಣ, ಭಾವ, ಭಸ್ಮ ರುದ್ರಾಕ್ಷಾದಿ ಶಿವಲಾಂಛನ ಗಳು "ಭೇಷಜಾನಿ" ಭವರೋಗ ನಿವಾರಕಗಳಾಗಿವೆ. ಇವುಗಳನ್ನು "ಅಸ್ಮೆ" (ಅಸಭ್ಯಂ) ನಮ್ಮಗಳಿಗೋಸ್ಕರ "ತನುಷು" ಮೂರು ಶರೀರಗಳಲ್ಲಿ "ಧತ್ತಂ" ಧಾರಣಮಾಡಿ "ಸರಿತರನಃ" ನಮ್ಮಗಳ "ತನುಷು" ಮೂರು ಶರೀರಗಳಲ್ಲಿ "ಬದ್ಧಂ" ಅನಾದಿಯಾದ ಅವಿದ್ಯೆಯಿಂದ ವಾಸಿಸಲ್ಪಟ್ಟ ಪೂರ್ವದಲ್ಲಿ ಸಂಚಿತವಾದ "ಏನಂ" ಪಾಪವು "ಯತ್ ಅಸ್ತಿ (ಯಾವುದಿರುವದೋ) ತತ್" (ಅದನ್ನು) "ಅಸ್ಮತ್" ನಮ್ಮ ದೆಸೆಯಿಂದ "ಯುವಾಂ" ನೀವಿಬ್ಬರು "ಅವಶ್ಯತಂ" ಮುಖ್ಯವಾಗಿ "ಮುಂಚತಂ" (ಮೂಚಯತಂ) ಬಿಡುಗಡೆಮಾಡಿಸರಿ, ಇದಲ್ಲದೆ "ಉಮಾ ಸಹಾಯಂ ಪರಮೇಶ್ವರಂ" "ಪ್ರಭುಂ ತ್ರಿಲೋಚನಂ ನೀಲಕಂಠಂ ಪ್ರಶಾಂತಂ" ಎಂಬ ವಾಕ್ಯದಿಂದ ಉಭಯ ಮೂರ್ತಿಗಳ ಪ್ರತಿಪಾದನೆ ಇರುವದು 'ಉಮಯಾ ಸಹಿತಃ ಸೋಮಃ' (ಉಮೆಯಿಂದ ಕೂಡಿದವನು) ಅಂದರೆ ಪಂಚ ಬ್ರಹ್ಮಮಯವಾದ ದಿವ್ಯ ಮಂಗಲುಗ್ರಹವುಳ್ಳವನು, ಭಕ್ತರ ಸಂಸಾರ ದುಃಖವನ್ನು ಪರಿಹರಿಸುವವನಾದು ದರಿಂದ, ರುದ್ರನು ಹೀಗೆ ಸೋಮ-ರುದ್ರ ರೂಪರಾದ ನೀವಿಬ್ಬರೂ ನಮ್ಮ ಶರೀರಗಳಲ್ಲಿ ಇಷ್ಟ, ಪ್ರಾಣ, ಭಾವಲಿಂಗ ಸ್ವರೂಪದಿಂದ ವಾಸಮಾಡಿ, ನಮ್ಮ ಸ್ಥೂಲ, ಸೂಕ್ಷ್ಮ, ಕಾರಣ ಶರೀರ ರೂಪಗಳಾದ ಕಾರ್ಮ, ಮಾಯೀಯ, ಆಣವ, ಮಲತ್ರಯವೆಂಬ ಕಲುಷವನ್ನು ನಾಶಮಾಡಿರೆಂದು ಈ ಮಂತ್ರದ ಭಾವವಾಗಿದೆ. ಇದಲ್ಲದೆ;

"ವಿಶ್ವದೇವಂ ವಿದುಷಾ ವೇದಿತವ್ಯಂ ಶೈವಂ ಲಿಂಗಂ ಪ್ರಧೃತಂ ಸರ್ವ ವೇದ್ಯೈಃ। ತದಾತ್ಮಸಿಧ್ಯೈ ಮುನಿಭಿರ್ಮುಕ್ತಿಕಾಮ್ಯೈಃ ಕಂಠೇ ಹಸ್ತೇ ಮಸ್ತಕೇವಾ ಭವತು ಧಾರ್ಯಂ" ಇಂತೆಂಬ ಸಾಮ ಶ್ರುತಿಯಲ್ಲಿಯೂ ಲಿಂಗಧಾರಣವು ವಿಹಿತವಾಗಿರುವುದರಿಂದ ಭವರೋಗ ನಿವಾರಕವಾದ ಲಿಂಗಧಾರಣವು ಮುಮುಕ್ಷುಗಳಿಗೆ ಅವಶ್ಯಕವಾಗಿದೆ. ಹಾಗು "ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ। ಪವಿತ್ರಂ ತದ್ಧಿ ಚಾಖ್ಯಾತಂ ತತ್ಸಂಪರ್ಕಾತ್ತನುಃ ಶುಚಿಃ॥ ಋಗಿತ್ಯಾಹ ಪವಿತ್ರಂತೇ ವಿತತಂ ಬ್ರಹ್ಮಣಸ್ಪತೇ। ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಂ॥ ಅತಪ್ತ ತನು ರಜ್ಞೋ ವೈಹ್ಯಾಮಃ ಸಂಸ್ಕಾರ ವರ್ಜಿತಃ। ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾತ್ಪದ ಮುತ್ತಮಂ॥" ಸಿದ್ಧಾಂತ ಶಿಖಾಮಣಿಯಲ್ಲಿ ಈ ಶ್ಲೋಕಗಳಿಂದ ರೇಣುಕ ಭಗವತ್ ಪಾದಾಚಾರ್ಯರು "ಪವಿತ್ರಂತೇ' ಎಂಬ ಋಗ್ವೇದ ಮಂತ್ರವು ಲಿಂಗಧಾರಣ ಪರವಾದು ದೆಂದು ಅಪ್ಪಣೆ ಕೊಡಿಸಿರುವುದರಿಂದ, ಲಿಂಗಧಾರಣವು ಮುಮುಕ್ಷು ಗ್ರಾಹ್ಯವಾಗಿರು ವದು. ಇದಲ್ಲದೆ ಲಿಂಗಧಾರಣ ರಹಿತರಾಗಿರಕೂಡದೆಂದು, ಲಿಂಗಧಾರಣ ರಹಿತರಿಗೆ ಪ್ರತ್ಯವಾಯವು ವಿಧಿಸಲ್ಪಡುವದರಿಂದ, ಲಿಂಗಧಾರಣವು ಸಂಧ್ಯಾವಂದನದಂತೆ ನಿತ್ಯ ಕರ್ಮವೆನಿಸಿರುವದು. "ಭಕ್ತಸ್ಯಾ ಬಿಭ್ರತೋ ಲಿಂಗಂ ಯಾವತ್ಪ್ರಾಣ ವಿಧಾರಣಂ। ಶ್ವ ಮಾಂಸ ಭಕ್ಷಣಂ ತಾವದನ್ನೇನ ರಣಿತಂ ಭವೇತ್ ॥ ಲಿಂಗಸ್ಯ ಧಾರಣಂ ಯಸ್ಯ

CC-0. Jangamwadi Math Collection. Digitized by eGangotri

ಸ್ಥೂಲದೇಹೇ ಸವಿದ್ಯತೆ। ತದ್ದೇಹಂ ನಿಷ್ಫಲಂ ಜ್ಞೇಯಂ ಜೀವತ್ಯಕ್ತ ಶರೀರವತ್॥ ತಸ್ಮಾತ್ತದ್ಧಾರಣಂ ಪ್ರೋಕ್ತಂ ಯಾವಜ್ಜೀವಾಗ್ನಿ ಹೋತ್ರವತ್। ಯಥಾ ಸ್ಮಶಾನಗು ಕಾಷ್ಠ ಮನರ್ಹಂ ಸರ್ವ ಕರ್ಮಸು ತಥಾ ಲಿಂಗ ವಿಹೀನಸ್ತು ಸರ್ವ ಕರ್ಮ ಬಹಿಷ್ಕೃತಃ॥" ಇಂತೆಂಬ ವಾತುಲ, ಸ್ಕಾಂದ, ಲೈಂಗಾದಿಗಳಲ್ಲಿ ಲಿಂಗಧಾರಣವಿಲ್ಲದವರಿಗೆ ಪ್ರತ್ಯವಾಯ (ಪಾಪವಿಶೇಷ) ವು ವಿಧಿಸಲ್ಪಟ್ಟಿದೆ. ಹಾಗು "ಭೂಯಾಸಂ" ಎಂಬಲ್ಲಿಯೂ ಕೂಡ "ಮೇಧಾವಿ ಭೂಯಾಸಂ" "ಬ್ರಹ್ಮ ವರ್ಚಸ್ವೀ ಭೂಯಾಸಂ" "ಅಹಮೇಕಃ ಪ್ರಥಮ ಮಾಸಂ" ಎಂಬಲ್ಲಿ ಹೇಗೋ ಹಾಗೆ ವಿಧ್ಯರ್ಥವು ಉಪಪನ್ನವಾಗುವದು. ಇನ್ನು ಶಿವಲಿಂಗೇತರ ದೇವತಾ ಧಾರಣ ವಿಧಾಯಕವಾದ ಪ್ರಮಾಣ ವಿಲ್ಲದಿರುವು ದರಿಂದಲೂ, 'ಲೋಕದಲ್ಲಿ ಶಿವಲಿಂಗವನ್ನು ಬಿಟ್ಟು, ಇತರ ದೇವಧಾರಣೆ ಮಾಡುವಲ್ಲಿ ಶಿಷ್ಟಾಚಾರವೂ ಕೂಡ ಇಲ್ಲದಿರುವುದರಿಂದಲೂ, ಸರ್ವ ವೈದಿಕರೂ ಶಿವಲಿಂಗವನ್ನೇ ಧರಿಸಬೇಕು. ಹಾಗು ಲಿಂಗಧಾರಣಾತ್ಮಕವಾದ ದೀಕ್ಷೆಯಿಲ್ಲದಿದ್ದರೆ, ಸ್ಥೂಲಾದಿ ಶರೀರ ತ್ರಯ ರೂಪವಾದ ಮಲತ್ರಯದ ನಾಶವಾಗದೇ ಚಿತ್ತಶುದ್ಧಿಯಿಲ್ಲವಾಗಿ, ಜ್ಞಾನೋದಯವೂ ಕೂಡ ಸಿದ್ಧಿಸದೆ ಹೋಗಿ, ಮುಕ್ತಿಯು ಸಂಭವಿಲಾರದಾದು ದರಿಂದ ಮುಮುಕ್ಷುಗಳಾದ ವೈದಿಕರು ಅವಶ್ಯವಾಗಿ ಲಿಂಗಧಾರಣ ದೀಕ್ಷೆಯನ್ನು ಪಡೆಯಬೇಕು. "ವೈದಿಕತ್ವಂ ಯಥಾ ವಕ್ಷ್ಯೇ ಸರ್ವ ವೇದ ಪ್ರಮಾಣತಃ। ವೇದ ವೇದಾಂತ ಸಿದ್ಧತ್ವಾದ್ವೈದಿಕಂ ಲಿಂಗಧಾರಣಂ॥ ವೇದ ವೇದಾಂತ ಶಾಸ್ತ್ರೇಷು ಪುರಾಣೇಷ್ವಾಗಮೇಷುಚ। ಬ್ರಾಹ್ಮಣಸ್ಯ ಸಮಾಖ್ಯಾತಂ ಲಿಂಗಧಾರಣ ಮುತ್ತಮಂ" ಎಂದು ಆರಂಭಿಸಿ "ವೇದೋಕ್ತ ಮೇ ಯಜುರ್ವೇದೇ ತೈತ್ತಿರೀಯೇ ವಿಶೇಷತಃ। ಮೋಕ್ಷಾರ್ಥಿನಾಂ ಮುಕ್ತಿ ಹೇತುರ್ಲಿಂಗಧಾರಣ ಮೀರ್ಯತೆ" ಇಂತೆಂಬ ಲಿಂಗಪುರಾಣ ದಲ್ಲಿರುವ ಶ್ಲೋಕಗಳಿಂದ ಲಿಂಗಧಾರಣವು ವೈದಿಕವೆಂತಲೂ, ವೈದಿಕ ಬ್ರಾಹ್ಮಣರಿಂದ ಅವಶ್ಯ ಗ್ರಾಹ್ಯವೆಂದೂ, ಮುಕ್ತಿಗೆ ಮುಖ್ಯ ಕಾರಣವೆಂದೂ ಹೇಳಲ್ಪಟ್ಟು, "ಛಂದೇ ಭ್ಯಃ ಸರ್ವ ವೇದೇಭ್ಯೋ ಹ್ಯಮೃತಾತ್ಸಂಬಭೂವಹಿ। ಇಂದ್ರಸ್ತು ಪರಮೈಶ್ವರ್ಯ ಶಾಲೀ ಸಾಂಪಸ್ತ್ರಿಲೋಚನಃ॥ ಮಾಂ ಮೇಧಯಾ ಪ್ರಜ್ಞಯಾಚ ಸ್ಪೃಹೋತು ಪ್ರೀಣ ಯತ್ವಥ। ಅಮೃತಸ್ಯ ಮೋಕ್ಷಲಾಭಾಯ ಸರ್ವದೇಹೇಷು ಸರ್ವದಾ॥ ದೇವಸ್ಯ ಲಿಂಗ ರೂಪಸ್ಯ ಶಿವಸ್ಯ ಪರಮಾತ್ಮನಃ। ಧಾರಣಂ ತದ್ಧೃತಿರ್ಯಸ್ಯ ದೇವ ಧಾರಣ ಇಷ್ಯತೇ॥ ತಸ್ಮಾಚ್ಛರೀರಂ ಮೇ ಲೋಕೇ ವಿಚರ್ಷಣಮ ಕಿಲ್ಬಿಷಂ। ಜಿಹ್ವಾಮೇ ರಸನಾ ಭೂಯಾನ್ಮಧುರಾಲಾಪ ಭಾಷಿಣೀ॥ ಕರ್ಣಾಭ್ಯಾಂ ಶ್ರೋತ್ರ ಯುಗ್ಮೇನ ಭೂರಿವ್ಯಶ್ರುವಮಸ್ಮ್ಯಹಂ। ಬ್ರಹ್ಮಣಃ ಪಾರ್ವತೀಶಸ್ಯ ಕೋಸೋಽಧಿಷ್ಠಾನ ಮೇವಹಿ॥ ಅಪೇರಿವಯದಾ ಲೋಕೇ ಪ್ರಜ್ಞಯಾ ಮೇಧಯಾವೃತಃ। ಶ್ರುತಂ ತಚ್ಛ್ರವಣಾದೀ ನಿಮೇ ಗೋಪಾಯ ಪ್ರಯತ್ನತಃ" ಎಂಬ ಉಪ ಬೃಂಹಣ ಶ್ಲೋಕಗಳಿಂದ "ಯಶ್ಛಂದ ಸಾಮೃಷ ಭೋ ವಿಶ್ವರೂಪಃ" ಎಂಬ ಮಂತ್ರವು ಲಿಂಗಧಾರಣ ಪರವಾಡುದೆಂದು ಹೇಳಲ್ಪಟ್ಟಿದೆ. "ಬಿಭೇತ್ಯಲ್ಪಶ್ರುತಾದ್ವೇದೋ ಮಾ ಮಯಂ ಪ್ರತರಿಷ್ಯತಿ। ಇತಿಹಾಸ

CC-0. Jangamwadi Math Collection. Digitized by eGangotri

ಪುರಾಣಾಭ್ಯಾಂ ವೇದಾರ್ಥ ಮುಪಬೃಂಹಣಾತ್ (ಉಪಬೃಂಹಯೇತ್) ॥ ವೇದಾರ್ಥೋऽಯಂ ಸ್ವಯಂ ಜ್ಞಾತ್ವಾ ತತ್ರಾಜ್ಞಾನಂ ಭವೇದಪಿ। ಋಷಿಭಿರ್ನಿಶ್ಚಿತೇ ತಸ್ಮಿನ್ ಕಾಶಂಕಾಸ್ಯಾನ್ಮಹಾತ್ಮನಾಂ'' ಇತ್ಯಾದಿ ಸ್ಮೃತಿಯಲ್ಲಿ ಸ್ವತಂತ್ರವಾಗಿ ವೇದ ಮಂತ್ರಾರ್ಥವನ್ನು ಮಾಡಲಾಗದೆಂದೂ, ಋಷಿಗಳು ಯಾವ ವೇದ ಮಂತ್ರಕ್ಕೆ ಯಾವ ಅರ್ಥವನ್ನು ಮಾಡಿರುವರೋ, ಆ ಮಂತ್ರಕ್ಕೆ ಅದೇ ಅರ್ಥವನ್ನು ಮಾಡಬೇಕೆಂದು ಹೇಳಿರುವುದರಿಂದಲೂ, ''ಯಶ್ಛಂದ ಸಾಮೃಷಭಃ'' ಎಂಬ ಮಂತ್ರಕ್ಕೆ ಶ್ರೀ ವೇದವ್ಯಾಸ ಮಹರ್ಷಿಗಳು ಲಿಂಗ ಪುರಾಣದಲ್ಲಿ ಲಿಂಗಧಾರಣ ಪರವಾದ ಅರ್ಥವನ್ನು ನಿಶ್ಚಯಿಸಿರುವುದರಿಂದ ಈ ಮಂತ್ರಕ್ಕೆ ಬೇರೆ ಅರ್ಥವನ್ನು ಮಾಡುವದು ಯುಕ್ತವಲ್ಲ. ''ಲಿಂಗಿನಂ ಚಕ್ರಿಣಂ ದೃಷ್ಟ್ವಾ ಸಚೇಲಃ ಸ್ನಾನ ಮಾಚರೇತ್'' (ಲಿಂಗಿಯನ್ನೂ, ಚಕ್ರಧಾರಿಯನ್ನೂ ನೋಡಿದರೆ ಸಚೇಲ ಸ್ನಾನ ಮಾಡತಕ್ಕದ್ದು) ಎಂಬುದಾಗಿ ಲಿಂಗಧಾರಣವನ್ನು ನಿಷೇಧಿಸುವ ಸ್ಮೃತಿಯು ಪ್ರತ್ಯಕ್ಷ ವೇದ ಮೂಲಕ ವಾಗದಿರುವದರಿಂದ, ಸಾಂಖ್ಯ ಸ್ಮೃತಿಯಂತೆ ಅಂಗೀಕರಿಸಲರ್ಹವಾಗಿಲ್ಲ. ಯಾಕೆಂದರೆ, ಶ್ರೌತ ವಿಧಿಯು ಬಲಿಷ್ಠವಾಗಿರುವದಷ್ಟೆ; ಅಥವಾ ''ಉದಿತೇಜು ಹೋತಿ ಅನುದಿತೇಜು ಹೋತಿ'' ಎಂಬೆರಡು ವಾಕ್ಯಗಳಿಗೆ ವಿರೋಧವುಂಟಾಗಲು ಬೇರೆ ಶಾಖೆಯವರಿಗೆ ಉದಿತ ಹೋಮವೂ ಪುತ್ತೆ ಬೇರೆ ಶಾಖೆಯವರಿಗೆ ಅನುದಿತ ಹೋಮವೂ, ಎಂದು ವ್ಯವಸ್ಥೆಗೊಳಿಸಿ, ಆ ವಿರೋಧವನ್ನು ಪರಿಹರಿಸಿ, ಆ ಪರಸ್ಪರ ವಿರುದ್ಧ ವಾಕ್ಯಗಳಿಗೆ ಪ್ರಾಮಾಣ್ಯವನ್ನು ಹೇಳಿರುವಂತೆ, ಮೂಲಭೂತವಾದ ವೇದ ವಾಕ್ಯಗಳಿಗೆ ವಿರುದ್ಧಗಳಾಗಿರುವ ಧೂರ್ತರಾದ ಸ್ಮಾರ್ತರೆನಿಸುವ ಮಾಯಾವಾದಿಗಳಿಂದ ಕಲ್ಪಿಸಲ್ಪಟ್ಟ, ಆ ನಿಷೇಧ ವಾಕ್ಯಗಳು ಪ್ರಮಾಣಗಳಲ್ಲವಾದರೂ, ಗಗನಾರವಿಂದದಂತೆ ಪ್ರಮಾಣಗಳೆಂದು ಅಂಗೀಕರಿಸಿದರೆ, ಚಕ್ರಿ ಪದ ಸಾಹಚರ್ಯವಿರುವದರಿಂದ, ಅವೈದಿಕ ತಪ್ತ ಲಿಂಗಧಾರಿಗಳಾಗಿರುವವರನ್ನು ಉದ್ದೇಶಿಸಿರುವವೆಂದು ತಿಳಿಯತಕ್ಕದ್ದು.

ಇನ್ನು ವೈದಿಕ ಲಿಂಗಧಾರಿಯನ್ನೇ ಉದ್ದೇಶಿಸಿರುವವೆಂದೇ ಹೇಳಿದರೆ, ಶ್ರೌತ ಲಿಂಗಧಾರಿಯು ಉತ್ತಮಾಧಿಕಾರಿಯೆಂದು ವ್ಯವಸ್ಥೆಗೊಳಿಸುವ ಶ್ರುತಿ, ಸ್ಮೃತಿ, ಪುರಾಣ, ಆಗಮ ಮೊದಲಾದ ಪ್ರಮಾಣ ವಾಕ್ಯಗಳಿಗೆ ತಿಲಾಂಜಲಿ ಬಿಟ್ಟಂತಾಗಿ, ವೇದ ಬಾಹ್ಯ ಮತ ಪ್ರವೇಶವಾಗಿ ಹೋಗುವದು. ಆದುದರಿಂದ ಆ ನಿಷೇಧ ವಾಕ್ಯಗಳು ಶ್ರೌತ ಲಿಂಗಧಾರಿಯನ್ನು ಉದ್ದೇಶಿಸಿರದೇ ಅಶ್ರೌತತಪ್ತ ಲಿಂಗಧಾರಿಯನ್ನು ಉದ್ದೇಶಿಸಿರುವದೆಂದು ಹೇಳಿಯೇ ತೀರಬೇಕು. ಇನ್ನು ಶ್ರೌತ ಲಿಂಗವಾವುದು, ಅಶ್ರೌತ ಲಿಂಗವಾವುದೆನ್ನುವಲ್ಲಿ ''ಶ್ರೌತಾಶ್ರೌತ ವಿಭೇದೇನ ದ್ವಿಧಾ ಲಿಂಗಸ್ಯ ಧಾರಣಂ। ಷಡಧ್ವ ಶುದ್ಧ ಲಿಂಗಂತು ಶ್ರೌತಮಿತ್ಯಭಿಧೀಯತೆ॥ ಅಶ್ರೌತಂ ತಪ್ತ ಲಿಂಗಾದಿ ಧಾರಣಂ ಪ್ರೋಚ್ಯತೇ ಶಿವೇ। ಶ್ರೌತಾನಾಂ ವೀರಶೈವಾನಾಂ ವೇದ ಮಾರ್ಗೈಕ ವರ್ತಿನಾಂ। ತಪ್ತ ಲಿಂಗ ಪರಿಗ್ರಾಹೇ ಪ್ರತ್ಯವಾಯೋ ಮಹಾನ್ ಭವೇತ್'' ಎಂಬ ಸಿದ್ಧಾಂತಾಗಮ ವಾಕ್ಯಗಳಿರುತ್ತವೆ. ಲಿಂಗವು ಶ್ರೌತ

CC-0. Jangamwadi Math Collection. Digitized by eGangotri

ವೆಂತಲೂ, ಅಶ್ರೌತವೆಂತಲೂ ಎರಡು ಪ್ರಕಾರವಾಗಿರುವದು. ಷಡಧ್ವ ಶುದ್ಧಪ
ಲಿಂಗವು ಶ್ರೌತವು; ತಪ್ತ ಲಿಂಗಾದಿಗಳು ಅಶ್ರೌತಗಳಾಗಿವೆ. ಶ್ರೌತ ಲಿಂಗಧ
ಗಳಾದ ಕೇವಲ ವೇದ ಮಾರ್ಗದಲ್ಲಿರುವ ವೀರಶೈವರು ತಪ್ತ ಲಿಂಗಧಾರಣವ
ಮಾಡಕೂಡದು. ಮಾಡಿದರೆ ದೊಡ್ಡ ಪ್ರತ್ಯವಾಯಕ್ಕೆ ಗುರಿಯಾಗುವರು ಎಂದು
ಶ್ಲೋಕಗಳ ಭಾವವು.

ವಿಧಿ ವಿಹಿತ ಯಾವ ಯಾವಜ್ಜೀವಾಗ್ನಿಹೋತ್ರ ಕರ್ಮದಲ್ಲಿ ದಿಕ್ಷಾ
ನಾದವನಿಗೆ ಆ ಅಗ್ನಿಹೋತ್ರ ಕರ್ಮಕ್ಕೆ ಇತರಗಳಾದ ಜ್ಯೋತಿಷ್ಟೋಮಾದಿ ಶ್ರೌ
ಯಾಗ ದೀಕ್ಷೆಯು ಅವಿರುದ್ಧವಾಗಿರುವಂತೆ ಲಿಂಗಧಾರಣ ದೀಕ್ಷೆಯಾದರೂ ನಿತ್ಯಕರ್
ವಾಗಿರುವದರಿಂದ, ಈ ಲಿಂಗಧಾರಣ ದೀಕ್ಷಾಬದ್ಧನಿಗೂ ಕೂಡ ಆ ಜ್ಯೋ
ಷ್ಟೋಮಾದಿ ಸರ್ವ ವೈದಿಕ ಕರ್ಮಗಳನ್ನು ಆಚರಿಸಬೇಕು. ಹಾಗಾದರೆ "ಸ
ಕರ್ಮಣಿ ಕರ್ಮಾಂತರಾರಂಭಃ" ಎಂಬ ನ್ಯಾಯವು ಒಂದು ಕರ್ಮಾಚರಣೆಯ
ಪ್ರವೃತ್ತನಾದವನು, ಮತ್ತೊಂದು ಕರ್ಮಾಚರಣೆಯನ್ನು ಆರಂಭಿಸಕೂಡದೆಂದು
ಹೇಳುತ್ತದೆ. ಇದರ ಗತಿಯೇನು ? ಈ ನ್ಯಾಯವು ಸಾವಕಾಶ (ನಿಷಿದ್ಧ) ದೀಕ್ಷ
ವಿಷಯವುಳ್ಳುದಾಗಿದೆ. ಶೈವ ದೀಕ್ಷೆ (ಲಿಂಗಧಾರಣ ದೀಕ್ಷೆ) ಯು ಅಗ್ನಿಷ್ಟೋಮ
ದೀಕ್ಷೆಯಂತೆ ಇತರ ಯಾಗ ದೀಕ್ಷೆಗೆ ಅವಿರುದ್ಧವಾಗಿರುವುದರಿಂದ ಲಿಂಗಧಾರಣ ದೀಕ್ಷೆ
ಯೆಂಬ ನಿತ್ಯ ಕರ್ಮಕ್ಕೂ ಇತರ ಜ್ಯೋತಿಷ್ಟೋಮಾದಿ ಶ್ರೌತ ಯಾಗ ಕರ್ಮಕ್ಕೂ
ಸಮುಚ್ಚಯವು ಉಪಪನ್ನ (ಯುಕ್ತ) ವಾಗುವದು. ಆದ ಕಾರಣ ನಿತ್ಯಕರ್ಮ
ವೆನಿಸುವ ಲಿಂಗಪೂಜಾ, ಲಿಂಗಧಾರಣಗಳುಳ್ಳ ವೀರಶೈವರಿಗೆ ಜ್ಯೋತಿಷ್ಟೋಮಾ
ಯಾಗಾನುಷ್ಠಾನವು ಅವಶ್ಯಕವಾಗಿದೆ. ಯಾಕೆಂದರೆ ಆ ಲಿಂಗಧಾರಣ ಹಾಗೂ
ಜ್ಯೋತಿಷ್ಟೋಮಾದಿಗಳೂ ಕೂಡ ಶ್ರೌತಗಳಾಗಿವೆಯಷ್ಟೆ; ಹಾಗಾದರೆ ಲಿಂಗಧಾರಣ
ದೀಕ್ಷೆಯುಳ್ಳವನು ಇತರ ಕರ್ಮಗಳನ್ನು ಆಚರಿಸಬಾರದೆಂದು ಹೇಳುವ ನಿಷೇಧ ವಾಕ್ಯ
ಗಳಿಗೆ ಗತಿಯೇನು ? ಅಂದರೆ ಆ ನಿಷೇಧ ವಾಕ್ಯಗಳು ಅವೈದಿಕ ಪಂಚರಾತ್ರಾದಿ
ದೀಕ್ಷಾ ವಿಷಯಕಗಳೆಂದು ತಿಳಿಯತಕ್ಕದ್ದು. ತಪ್ತ ಲಿಂಗಧಾರಣಾದಿ ವೈಷ್ಣವಾದಿ
ದೀಕ್ಷೆಯು ವೀರಶೈವನಿಗೆ ವಿರುದ್ಧವಾಗಿದೆಯಲ್ಲದೆ, ಶ್ರೌತ ಜ್ಯೋತಿಷ್ಟೋಮಾದಿಗಳು
ವಿರುದ್ಧಗಳಲ್ಲ. ಜಾತಾ ಶೌಚ, ಮೃತಾ ಶೌಚಾದಿಗಳಲ್ಲಿ ಯಾವಜ್ಜೀವವೂ ಅಗ್ನಿ
ಹೋತ್ರ ಕರ್ಮದಲ್ಲಿ ದೀಕ್ಷಿತನಾದ ಪುರುಷನಿಗೆ ತನ್ನ ನಿತ್ಯವಾದ ಉಪಾಸನಾ ಕರ್ಮ
ದಲ್ಲಿ ಅಧಿಕಾರವಿರುವಂತೆ, ಯಾವಜ್ಜೀವವೂ ಲಿಂಗಧಾರಣ ದೀಕ್ಷಾ ಸಂಪನ್ನನಾದ
ವೀರಶೈವನಿಗೆ ಜಾತಾಶೌಚ, ಮೃತಾಶೌಚಗಳು ಪ್ರಾಪ್ತವಾದರೂ ತನ್ನ ನಿತ್ಯಕರ್ಮ
ವೆನಿಸುವ ಶಿವಪೂಜಾ ಕರ್ಮದಲ್ಲಿ ಅಧಿಕಾರವುಂಟು. ಆದುದರಿಂದಲೇ "ಸರ್ವಲಿಂಗ
ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ" ಎಂಬಲ್ಲಿ ಪವಿತ್ರ ಶಬ್ದದಿಂದ ಲಿಂಗಕ್ಕೆ ಸರ್ವ
ಕಾಲದಲ್ಲಿಯೂ ಧಾರಣ ಪೂಜಾದಿಗಳಿರಬೇಕೆಂದು ಸೂಚಿಸಲ್ಪಡುತ್ತದೆ. ಹಾಗೂ

CC-0. Jangamwadi Math Collection. Digitized by eGangotri

"ಶೈವಲಿಂಗಾರ್ಚನಂ ಯಸ್ಯ ಯಸ್ಯಚಾಗ್ನಿ ಪರಿಗ್ರಹಃ। ಬ್ರಹ್ಮಚಾರೀ ಯತೀನಾಂಚ ಶರೀರ ನಾಸ್ತಿ ಸೂತಕಂ" "ಲಿಂಗಾರ್ಚನ ರತಂ ನಾರೀ ಸೂತಕೀ ನಾ ರಜಸ್ವಲಾ। ರವಿರಗ್ನಿರ್ಯಥಾ ವಾಯುಃ ಕೋಟಿ ಕೋಟಿ ಗುಣಃ ಶುಚಿಃ। ಜಾತಕೇ ಸೂತಕೇ ವಾಪಿ ಸತ್ಯಾಜ್ಯಂ ಶಿವಪೂಜನಂ" ಇತ್ಯಾದಿ ಪರಾಶರ ಸ್ಮೃತಿ, ಸಿದ್ಧಾಂತ ಶಿಖಾಮಣಿ ಮೊದಲಾದುವುಗಳಲ್ಲಿ ಲಿಂಗಾಂಗಿ ದೇಹವು ಪವಿತ್ರವಾದುದೆಂದು ಹೇಳಿರುವದರಿಂದ, ಅಶೌಚಕಾಲದಲ್ಲಿಯೂ ಸಹ ಶಿವಲಿಂಗ ಧಾರಣ, ಶಿವಲಿಂಗಾರ್ಚನಾದಿಗಳನ್ನು ಬಿಡದೇ ಆಚರಿಸುತ್ತಿರಬೇಕೆಂದು ಸಿದ್ಧವಾಗುತ್ತದೆ. ಅಶೌಚಕಾಲದಲ್ಲಿ ಶಿವಾರ್ಚನಾದಿಗಳನ್ನು ಬಿಡಕೂಡದೆಂದು ಪ್ರಮಾಣವೂ ಹಾಗು ಆಚಾರವೂ ಇದ್ದರೂ, ಪ್ರತ್ಯಕ್ಷವಾಗಿ ಲೋಕವಿರುದ್ಧವಾದುದರಿಂದ, ಸೂತಕಿಯಾದ ರಜಸ್ವಲಾ ಸ್ತ್ರೀಯಳಿಗೆ ಶಿವಾರ್ಚನಾದಿಗಳು ಯುಕ್ತಗಳಲ್ಲವೆಂದು ಶಂಕಿಸಕೂಡದು. ಯಾಕೆಂದರೆ ಜ್ಯೋತಿಷ್ಟೋಮ, ಅತಿರಾತ್ರ, ಪೌಂಡರೀಕ, ಮೊದಲಾದ ಯಾಗಗಳಲ್ಲಿ ಪಶುಹಿಂಸೆ, ಮಾಂಸ ಭಕ್ಷಣ, ಸುರಾಪಾನ, ಬ್ರಹ್ಮಚಾರಿಯಿಂದ ಮಾಡಲ್ಪಡುವ ದಿನಾ ದಾಸೀಸಂಗ ಮೊದಲಾದ ಶ್ರೌತಾಚಾರಗಳು ಪ್ರತ್ಯಕ್ಷ ಲೋಕವಿರುದ್ಧವಾಗಿರುವದರಿಂದ ಇವುಗಳಿಗೆ ಭಂಗವೇ ಪ್ರಾಪ್ತವಾಗಿರುವದಷ್ಟೆ; ಆದುದರಿಂದ ಅಶೌಚ ಕಾಲದಲ್ಲಿಯೂ ಕೂಡ ಶಿವಾರ್ಚನಾದಿ ಶ್ರೌತಾಚಾರಿಗಳಿಗೆ ವಿರೋಧವಿಲ್ಲ. ವೀರಶೈವರಿಗೆ ಪಂಚ ಸೂತಕಗಳೇ ಇಲ್ಲವೆಂದರೆ, ಇವರಿಗೆ ನಾಲ್ಕು ವರ್ಣಗಳೇ ಇಲ್ಲವೆಂದು ಹೇಳಬೇಕಾಗುವುದು, ಹಾಗು ಇವರಿಂದ ಮಾಡಲ್ಪಡುವ ಪಾಕ ಸ್ಪರ್ಶಾದಿಗಳನ್ನೂ ಅಂಗೀಕರಿಸಬೇಕಾಗುವದು. ಇನ್ನು ವೀರಶೈವರಿಗೆ ಪಂಚಸೂತಕಗಳುಂಟೆಂದರೆ, ಶೈವ ಶಾಸ್ತ್ರದಲ್ಲಿ ಹೇಳಲ್ಪಡುವ ಪೂಜಾದಿಗಳಲ್ಲಿ ಸೂತಕಗಳಿಲ್ಲವೆನ್ನುವ ಸೂತಕ ನಿಷೇಧ ವಾಕ್ಯಗಳಿಗೆ ವಿರೋಧವು ಬರುವದು. ಆದುದರಿಂದ ವೈದಿಕರಿಗೆ ಲಿಂಗಧಾರಣವೇ ಅಯುಕ್ತವು ಎಂದು ಆಕ್ಷೇಪಿಸಕೂಡದು. "ಸ್ವೇಷ್ಟ ಲಿಂಗೈಕ ಪೂಜಾಯಂ ನೈವಾ ಶೌಚಂ ವಿಧೀಯತೆ। ಪೌಂಡರೀಕೆ ರಜಃ ಸ್ತ್ರೀಣಾಂ ಸ್ವಾಗ್ನಿಹೋತ್ರೇ ಯಥಾ ತಥಾ। ಅಶರಸ್ಪರ್ಶ್ಯಯೋಗ್ಯಾಪಿ ಯಥಾ ಜಿಹ್ವಾ ಮಹೇಶ್ವರಿ ಮಂತ್ರೋಚ್ಚಾರಣ ಮಾತ್ರಸ್ಯ ಪೂತಾ ಭವತಿ ಭೂತತೀ॥ ತಥಾ ಸೂತಕೇ ನಃ ಶೈವಾಃ ಪೂಜಾ ಮಾತ್ರ ಸುನಿರ್ಮಲಾಃ। ನಾಸ್ಯ ಸ್ಪರ್ಶ್ಯಾನುಕೂಲಾಃ ಸ್ಯುರೀತಿ ವೇದಾನುಶಾಸನಂ" ಇತ್ಯಾದಿ ಸಿದ್ಧಾಂತಾಗಮಾದಿ ವಾಕ್ಯಗಳಲ್ಲಿ ಸೂತಕವುಳ್ಳ ವೀರಶೈವರು ಶಿವಾರ್ಚನಾದಿಗಳಲ್ಲಿ ಮಾತ್ರ ಪರಿಶುದ್ಧರೇ ಹೊರತು; ಅನ್ಯ ಸ್ಪರ್ಶ-ಪಾಕಾದಿಗಳಲ್ಲಿ ಪರಿಶುದ್ಧರಲ್ಲವೆಂದು ಸ್ಪಷ್ಟವಾಗಿ ಹೇಳಿರುವುದರಿಂದ, ವೀರಶೈವರು ಪಂಚ ಸೂತಕ ರಹಿತರೆಂದು ಹೇಳಲಿಕ್ಕೆ ಬರುವದಿಲ್ಲ. ಲಿಂಗಧಾರಣಾತ್ಮಕವಾದ ಶೈವ ದೀಕ್ಷಾನಂತರದಲ್ಲಿ ಪ್ರೇತತ್ವ, ಜೀವತ್ವಗಳಲ್ಲದಿದ್ದರೂ, ಶಿವಾಗಮಗಳಲ್ಲಿ ವೀರಶೈವರು ತಮ್ಮ ತಮ್ಮ ವರ್ಣಾಶ್ರಮೋಚಿತ ಕರ್ಮಗಳನ್ನು ಆಚರಿಸುತ್ತಲೇ ಇರಬೇಕೆಂದೂ, ಆಚರಿಸದಿದ್ದಲ್ಲಿ, ಪ್ರತ್ಯವಾಯವು ಪ್ರಾಪ್ತವಾಗುವದೆಂದು ಹೇಳಿರುವದರಿಂದ, ವಿಧಿ ವಿಹಿತಗಳಾದ ಎಲ್ಲ ಕರ್ಮಗಳನ್ನೂ ಆಚರಿಸಿಯೇ ತೀರಬೇಕು.

CC-0. Jangamwadi Math Collection. Digitized by eGangotri

"ಸ್ವ ಜಾತಿ ವಿಹಿತಂ ಧರ್ಮಂ ಕುರ್ವಂತಃ ಪೂಜಯಂತಿಯೇ। ಭಕ್ತ್ಯಾ ಶ್ರೀಕಂಠ ಮಸಿಶಂತೇ ವೈ ಮಾಹೇಶ್ವರಾಃ ಸ್ಮೃತಾಃ॥ ಕರ್ಮ ವಿಧ್ಯುಕ್ತ ಮುತ್ಸೃಜ್ಯ ಸ್ವಜಾತಿ ವಿಹಿತಂ ನರಾಃ। ಯೇಽರ್ಚಯಂತಿ ಶಿವಂತೇಷಾಂ ಪೂಜಾಂ ಗೃಹ್ಣಾತಿ ನೇಶ್ವರಃ॥ ವರ್ಣಾಶ್ರಮ ಸದಾಚಾರಾಃ ಶಿವೇನಾ ಕಥಿತಾಃ ಪುರಾ। ಯೇತಾನುಲ್ಲಂಘ್ಯ ವರ್ತಂತೇ ಶಿವಸ್ಯಾಜ್ಞಾ ಪಲಾಪಿನಃ। ರಾಜಾಜ್ಞಾ ಭಂಗ ಕೃನ್ನೄಣಾಂ ದಂಡೋಹಿ ನರಕಸ್ತಥಾ॥ ಸಾಂಬೇನಾ ಶಂಭುನಾಜ್ಞಪ್ತಂ ಧರ್ಮಂತ್ಯಕ್ತ್ವರ್ಜಮೇಚ್ಛಿವಂ। ಸ ತಸ್ಮೈ ಕುಪ್ಯತೆ ಶಂಭುಃ ಸ್ವಾಜ್ಞಾ ಭಂಗ ನಿಮಿತ್ತತಃ। ಚೋದನಾ ಲಕ್ಷಣಂ ಧರ್ಮಂ ಶಿವೇನಾಜ್ಞಪ್ತಮ ತ್ಯಜನ್! ಶಂಕರಂ ಪೂಜಯೇದ್ಯಸ್ತು ತಸ್ಮೈ ಸಾಂಬಃ ಪ್ರಸೀದತಿ॥ ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ। ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹ ಪಾತನಾತ್॥ ಜ್ಞಾನ ಸಿದ್ಧೇಽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೆ। ಫಲಾಭಿ ಸಂಧಿ ರಹಿತಂ ತಸ್ಮಾತ್ಕರ್ಮನ ಸಂತ್ಯಜೇತ್॥ ಆಚಾರ. ಏವ ಸರ್ವೇಷಾ ಮಲಂಕಾರಾಯ ಕಲ್ಪತೆ। ಆಚಾರ ಹೀನಃ ಪುರುಷೋ ಲೋಕೇ ಭವತಿ ನಿಂದಿತಃ॥ ಅಂಧ ಪಂಗು ವದನ್ಯೋಽನ್ಯಂ ಸಾಪೇಕ್ಷೇ ಜ್ಞಾನ ಕರ್ಮಣೀ। ಫಲೋತ್ಪತ್ತಾ ವಿರಕ್ತಾನಾಂ ತಸ್ಮಾತ್ತದ್ವಯ ಮಾಚರೇತ್॥ ಶಿವಾಜ್ಞಾ ಪಾಲನಾರ್ಥಾಯ ಶಿವಭಕ್ತಃ ಶಿವಪ್ರತೀ ಶಿವಾರ್ಪಣಧಿಯಾ ಕರ್ಮ ಕುರ್ಯಾದ್ವೇದೋದಿತಂ ಬುಧಃ" ಇಂತೆಂಬ ಶಂಕರ ಸಂಹಿತಾ ಸಿದ್ಧಾಂತ ಶಿಖಾಮಣಿಗಳ ಶ್ಲೋಕಗಳು, ವೀರಶೈವರು ತಮ್ಮ ತಮ್ಮ ವರ್ಣಾಶ್ರಮೋಚಿತಗಳಾದ ಕರ್ಮಗಳನ್ನು ಆಚರಿಸುತ್ತಿರಬೇಕೆಂದು ಹೇಳಿರುವದರಿಂದ, ಲಿಂಗ ಧಾರಣ ದೀಕ್ಷಾ ಸಂಪನ್ನರಾದ ತಮಗೆ ಪ್ರಯೋಜನವಿಲ್ಲದಿದ್ದರೂ, ಭೃತ್ಯರು ರಾಜಾಜ್ಞಾ ಭಂಗವಾದರೆ, ನಮಗೆ ದಂಡಿಸುವನೆಂಬ ಭಯದಿಂದ, ಅವನು ಅಪ್ಪಣೆ ಮಾಡಿದ ಎಲ್ಲ ಕರ್ಮಗಳನ್ನೂ ಮಾಡುವಂತೆ; ತ್ರಿಲೋಕಾಧಿಪತಿಯಾದ ಶಿವನ ಆಜ್ಞೆಗೆ ಭಂಗ ಬರಬಾರದೆಂಬ ಬುದ್ಧಿಯಿಂದಲೂ, ಭಂಗವಾದರೆ ನಮಗೆ ದಂಡಿಸುವನೆಂಬ ಭಯದಿಂದಲೂ, ಶಿವನ ಆಜ್ಞಾರೂಪಗಳಾದ ವಿಧಿವಾಕ್ಯಗಳಿಂದ ವಿಹಿತಗಳಾದ ಎಲ್ಲ ಕರ್ಮಗಳನ್ನು ಆಚರಿಸಬೇಕು. "ಭೀಷಾಸ್ಮಾದ್ವಾತಃ ಪವತ್ಯೇ" ಇತ್ಯಾದಿ ಶ್ರುತಿಗಳಲ್ಲಿ ಶಿವಜ್ಞಾನದಲ್ಲಿ ಶ್ರೇಷ್ಠರೆನಿಸುವ ಪವನ, ಪ್ರಭಾಕರರಾದಿ ದೇವತೆಗಳೂ ಕೂಡ ಪರಮೇಶ್ವರಾಜ್ಞೆಗೆ ಭಂಗ ಬಂದೀತೆಂಬ ಭಯದಿಂದ, ಸಕಲ ಜಗತ್ತಿಗೆ ಅನುಕೂಲವಾಗಿ ತಮಗುಚಿತವಾದ ಕರ್ಮಗಳನ್ನು ಆಚರಿಸುತ್ತಲೇ ಇರುತ್ತಾರೆಂದು ಹೇಳುವದರಿಂದ, ಅಲ್ಪ ಜ್ಞಾನಿಗಳಾದ ಮಾನವರ ಪಾಡೇನು ? ಇವರು ಅವಶ್ಯವಾಗಿ ವಿಧಿ ವಿಹಿತಗಳಾದ ಎಲ್ಲ ಕರ್ಮಗಳನ್ನೂ ಆಚರಿಸಿಯೇ ತೀರಬೇಕು. ಹಾಗೂ "ವಯಂ ಬ್ರಹ್ಮಾದಯೋ ದೇವಾಃ ಪಶುವಃ ಪರಿಕೀರ್ತಿತಾಃ। ತ್ವಮಸ್ಮಾಕಂ ಪತಿರ್ಯಸ್ಮಾತ್ ಸ್ಮಾತ್ಪಶುಪತಿಃ ಶಿವಃ॥ ಇತ್ಯುಕ್ತ್ವಾ ದೇವತಾಃ ಸರ್ವಾಃ ಶಿವಲಿಂಗಾದಿ ಧಾರಣಂ। ಕೃತ್ವಾ ಪಾಶುಪತಃ ಸರ್ವೇ ತಸ್ಮಾತ್ಪಶುಪತಿಃ ಶಿವಃ॥ ಅತೋ ಬ್ರಹ್ಮಾದಿ ದೇವಾನಾಮುಪಾಸ್ಯಃ

CC-0. Jangamwadi Math Collection. Digitized by eGangotri

ಶಿವ ಏವಹಿ। ತದಾದಿ ಭೂತ ರುದ್ರಾಕ್ಷಾ ಲಿಂಗಧಾರಣ ದೇಹಿನಃ॥ ಶುದ್ಧ ಸ್ಫಟಿಕ ಮಾಲಾಭಿಸ್ಬದ್ಧ ಹಸ್ತಾಂಬುಜಾನಪಿ॥ ಬ್ರಹ್ಮ ವಿಷ್ಣ್ವಾದಿ ದೇವಾಂಶ್ಚ ದೃಷ್ಟ್ವಾ ಸಾಂಬ ಸ್ತ್ರಿಲೋಚಃ॥ ತ್ರಿಪುರಾಪುರ ಸಂಹಾರ ಮಕರೋದ್ಭಕ್ತ ವತ್ಸಲಂ" ಇತ್ಯಾದಿ ಲಿಂಗ ಪುರಾಣದ ಉಪ ಬೃಂಹಣ ವಾಕ್ಯಗಳಲ್ಲಿ ಬ್ರಹ್ಮ ವಿಷ್ಣ್ವಾದಿ ದೇವತೆಗಳಿಗೆ ಶಿವಲಿಂಗ ಧಾರಣವು ಕಂಡುಬರುತ್ತದೆ. ಹಾಗು "ಬ್ರಹ್ಮ ವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ॥ ಧಾರಯಂತೀ ಸದಾ ಲಿಂಗಮುತ್ತಮಾಂಗ್ಯೇ ವಿಶೇಷತಃ॥ ಉರಃ ಸ್ಥಲೇ ಹರಿರ್ಲಿಂಗಂ ಧೃತ್ವಾ ಮೂರ್ಧ್ನಿ ಪಿತಾಮಹಃ। ಲಿಂಗಸ್ಥ ಯಾಂ ಸಮಾರಾಧ್ಯ ಸ್ವಂ ಸ್ವಂ ಪದ ಮವಾಪತುಃ" ಇತ್ಯಾದಿ ಸ್ಕಾಂದ, ಶಂಕರ ಸಂಹಿತಾ ವಾಕ್ಯಗಳಲ್ಲಿಯೂ ಬ್ರಹ್ಮ ವಿಷ್ಣ್ವಾದಿ ದೇವತೆಗಳಿಗೆ ಲಿಂಗಧಾರಣವು ಕಂಡುಬರುತ್ತದೆ. ಈ ಎಲ್ಲ ಪ್ರಮಾಣಗಳೂ ಹಾಗಿರಲಿ, ಆಪರೆ ಲೋಕದಲ್ಲಿ ಅನಂತ, ಪದ್ಮನಾಭ, ತಲೇಶ್ವರ, ಪಂಡರಪುರ ಮೊದಲಾದ ವೈಷ್ಣವ ಕ್ಷೇತ್ರಗಳಲ್ಲಿ ನಾರಾಯಣನ ಹಸ್ತದಲ್ಲಿಯೂ, ಮಸ್ತಕದಲ್ಲಿಯೂ ಶಿವಲಿಂಗ ಧಾರಣವು ಪ್ರತ್ಯಕ್ಷವಾಗಿ ಕಂಡುಬರುವದರಿಂದ ಬ್ರಹ್ಮ ವಿಷ್ಣ್ವಾದಿ ದೇವತೆಗಳಿಗೆ ಶಿವಲಿಂಗಧಾರಣವಿದೆಯೆಂಬುವಲ್ಲಿ ಶಂಕಾ ಕಲಂಕವೇ ಇಲ್ಲ. "ಶ್ರದ್ಧಾ ಭಕ್ತಿ ಧ್ಯಾನ ಯೋಗಾದಿ ದೇಹಿ:" ಇತ್ಯಾದಿ ಶ್ರುತಿ ವಾಕ್ಯಗಳಲ್ಲಿ ಧ್ಯಾನ, ಜ್ಞಾನಗಳೇ ಮುಕ್ತಿಗೆ ಹೇತುಗಳೆಂದು ಕಂಡುಬರುವದರಿಂದ, ಬಾಹ್ಯ ಶಿವಲಿಂಗ ಧಾರಣದಿಂದ ಎಷ್ಟು ಪ್ರಯೋಜನವಿಲ್ಲವೆಂದು ಆಶಂಕಿಸಕೂಡದು. "ತಸ್ಯಾಭಿ ಧ್ಯಾನಾದ್ಯೋಜನಾ ತ್ತತ್ತ್ವ ಭಾವಾದ್ಭೂಯಶ್ಚಾಂತೇ ವಿಶ್ವ ಮಾಯಾ ನಿವೃತ್ತಿಃ" ಇಂತೆಂಬ ಶ್ರುತಿಯಲ್ಲಿ ಆ ಹರನನ್ನು ಅಂತರಂಗದಲ್ಲಿ ಅನುಸಂಧಾನ ಮಾಡುವದರಿಂದಲೂ, ಆ ಶಿವಲಿಂಗ ವನ್ನು ಸಾಕ್ಷಾತ್ಕಾರ (ಪ್ರತ್ಯಕ್ಷ) ಮಾಡಿಕೊಳ್ಳುವುದರಿಂದಲೂ ಸಕಲ ಮಾಯಾಪಾಶ ನಿವೃತ್ತಿಯಾಗುವದೆಂದು ಉಪದೇಶವಿರುವದರಿಂದ, ಬಾಹ್ಯ ಲಿಂಗಧಾರಣವನ್ನು ಮಾಡಿಯೇ ತೀರಬೇಕು. ಇಲ್ಲದಿದ್ದರೆ ಈ ಶ್ರುತಿಯಲ್ಲಿರುವ "ಯೋಜನಾತ್" ಎಂಬ ಪಂಚಮ್ಯಂತ ಪದವು ವ್ಯರ್ಥವಾಗಿ ಹೋಗುವದು. ಆದುದರಿಂದ ಯಥಾ ಶ್ರುತವಾಗಿರುವ ಹೇತ್ವರ್ಥ ಬೋಧಕಗಳಾದ ಪಂಚಮ್ಯಂತಗಳಾದ ಮೂರು ಪದಗಳು ಸಾರ್ಥಕವಾಗಬೇಕಾದರೆ ಮೇಲೆ ಹೇಳಿದಂತೆಯೇ ಅರ್ಥವನ್ನು ಮಾಡಬೇಕು. ಶ್ರುತ್ಯರ್ಥ ವನ್ನು ಸಂಕೋಚಗೊಳಿಸುವಲ್ಲಿ ಪ್ರಮಾಣವೂ ಸಹ ಇಲ್ಲವಾದ್ದರಿಂದ, ಶ್ರುತ್ಯುಕ್ತವಾದ ಬಾಹ್ಯ ಲಿಂಗಧಾರಣವು ವೈದಿಕರಿಗೆ ಇದ್ದೇ ಇರಬೇಕು. ಹಾಗೂ "ಜೀವ ಮುಖ್ಯ ಪ್ರಾಣಲಿಂಗಾನ್ನೇತಿ ಚೇನ್ನೋಪಾಸಾ ತ್ರೈವಿಧ್ಯಾದಾಶ್ರಿತತ್ವಾದಿಹ ತದ್ಯೋಗಾತ್" ಇಂತೆಂಬ ಸೂತ್ರದಿಂದ ಭಗವಾನ್ ವ್ಯಾಸ ಮುನಿಯು ತ್ರಿವಿಧೋಪಾಸನೆಯನ್ನೇ ಹೇಳಿರುವನು. ಇದರಂತೆ ಸ್ಕಾಂದ ಪುರಾಣದಲ್ಲಿ "ಮಾನಸೋಪಾಸನಂ ಕುರ್ಯಾ ದ್ಧೃದಯೇ ದಹರೇಽಪಿವಾ। ಪಂಚಾಕ್ಷರ್ಯಾ ಚ ಗಾಯತ್ರ್ಯಾ ರುದ್ರ ಸೂಕ್ತಾದಿಭಿಃ। ವಾಚಕೋಪಾಸನಂ ಪ್ರೋಕ್ತಂ ಧೃತಲಿಂಗೇ ಶಿವಾತ್ಮಕೇ। ಪಾಣಿ ಪೀಠೇ ತಥಾ ವಹ್ನೌ ಸ್ಥಂಡಿಲೇಽಪಿವಾ ವಿಧಾತನತಃ॥ ಕಾಯಿಕೋಪಾಸನ- ಕಾರ್ಯ್ಯ ಶ್ರದ್ಧಾ ಭಕ್ತಿ

CC-0. Jangamwadi Math Collection. Digitized by eGangotri

ಸಮನ್ವಿತಃ। ಏವಂ ತ್ರಿಕರಣೈರ್ನಿತ್ಯ ಮೀಶ್ವರೋಪಾಸನಂ ದ್ವಿಜಃ। ಕುರ್ವನ್ಮುಕ್ತಿ ಮವಾಪ್ನೋತಿ ವೈದಿಕೋನಾನ್ಯ ಹೇತುನಾ। ಎಂದು ಕಾಯಿಕ, ಮಾನಸಿಕ, ವಾಚಕ ಗಳಾದ ತ್ರಿವಿಧೋಪಾಸನೆಗಳು ಹೇಳಲ್ಪಟ್ಟವೆ. ಈ ಮೂರು ಉಪಾಸನೆಗಳಲ್ಲಿ ಹಸ್ತ ಪೀಠದಲ್ಲಿ ತನ್ನ ಇಷ್ಟವನ್ನು ಇಟ್ಟು ಪೂಜಿಸುವುದೇ ಕಾಯಿಕೋಪಾಸನೆ ಎನಿಸುವು ದೆಂದು ಹೇಳುವದರಿಂದ ಬಾಹ್ಯವಾದ ಲಿಂಗಧಾರಣವು ಅವಶ್ಯವಾಗಿರಬೇಕೆಂದು ಸಿದ್ಧ ವಾಗುತ್ತದೆ. "ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ" ಎಂಬ ನ್ಯಾಯಾನುಸಾರವಾಗಿ, ಮನಸ್ಸಿನಿಂದ ಮಾಡುವಂತೆ ವಾಕ್ಯದಿಂದಲೂ, ವಾಕ್ಯದಿಂದ ಮಾಡುವಂತೆ ಕಾಯದಿಂದಲೂ ಶಿವೋಪಾಸನೆಯನ್ನು ಮಾಡುವವರೇ ಮಹಾತ್ಮ ರೆನಿಸುವರು. ಈ ಪ್ರಕಾರ ತ್ರಿಕರಣಗಳಿಂದ ಶಿವೋಪಾಸನೆಯನ್ನು ಮಾಡದೇ ಕೇವಲ ಮನಸ್ಸಿನಿಂದಾಗಲಿ, ಕೇವಲ ವಾಕ್ಯದಿಂದಾಗಲಿ, ಕೇವಲ ಕಾಯದಿಂದಾಗಲಿ, ಉಪಾ ಸನೆಯನ್ನು ಮಾಡುವವರು ಮಹಾತ್ಮರೆನಿಸದೆ, ಅಲ್ಪರೆನಿಸುವರಾದಕಾರಣ, ಬಾಹ್ಯೇಷ್ಟ ಲಿಂಗ ಧಾರಣವೆಂಬ ಕಾಯಿಕೋಪಾಸನೆಯೂ ವೀರಶೈವರಿಗೆ ಅತ್ಯವಶ್ಯವು. ಇದಲ್ಲದೆ ಅಂತರ್ಲಿಂಗವೇ ಸಾಕು, ಬಾಹ್ಯೇಷ್ಟ ಲಿಂಗಧಾರಣವೇತಕ್ಕೆಂದು ಶಂಕಿಸಕೂಡದು. ಬಾಹ್ಯದಲ್ಲಿ ಇಷ್ಟಲಿಂಗವನ್ನು ಧರಿಸದಿದ್ದರೆ, ಬಾಹ್ಯವಾದ ಸ್ಥೂಲ ಶರೀರವೇ ವ್ಯರ್ಥ ವಾಗುವದು. ಆ ಪರಮೇಶ್ವರನನ್ನು ಧ್ಯಾನಿಸುವದಕ್ಕಲ್ಲವೆ ನಮಗೆ ಮನಸ್ಸೆಂಬ ಇಂದ್ರಿಯವಿಂದ ಕೂಡಿದ ಸೂಕ್ಷ್ಮ ಶರೀರವಿರುವದು; ಆ ಪರಮೇಶ್ವರನನ್ನು ಸ್ತುತಿ ಸುವದಕ್ಕಲ್ಲವೆ ನಮಗೆ ವಾಗಿಂದ್ರಿಯವಿರುವದು; ಆ ಪರಮೇಶ್ವರನನ್ನು ಧರಿಸಿ ಪೂಜಿ ಸುವದಕ್ಕಲ್ಲವೆ ನಮಗೆ ಸ್ಥೂಲವಾದ ಬಾಹ್ಯ ಶರೀರವಿರುವದು; ಅಂದಮೇಲೆ ಬಾಹ್ಯಾಂಗ ದಲ್ಲಿ ಇಷ್ಟಲಿಂಗ ಧಾರಣವೇ ಇಲ್ಲದಿದ್ದರೆ, ಆ ಬಾಹ್ಯಾಂಗವೇ ನಿಷ್ಫಲವಾಗುತ್ತದೆ. ಹಾಗೂ ಬಾಹ್ಯಾಂಗದಲ್ಲಿ ಕ್ರಿಯಾ ದೀಕ್ಷಾರೂಪವಾದ ಇಷ್ಟಲಿಂಗ ಧಾರಣವಿಲ್ಲದಿದ್ದರೆ ಆ ಬಾಹ್ಯಾಂಗದಲ್ಲಿರುವ ಕಾರ್ಮಿಕ ಮಲವೇ ನಾಶವನ್ನು ಹೊಂದುವುದಿಲ್ಲ. ಅದು ನಷ್ಟವಾಗದಿದ್ದರೆ ಮುಮುಕ್ಷುವು ಕರ್ಮಬದ್ಧನಾಗಿಯೇ ಬಿದ್ದಿರಬೇಕಾಗುತ್ತದೆಂದಮೇಲೆ ಮುಕ್ತನಾಗುವದಂತೂ ದೂರೇ ಉಳಿಯಿತು. (ಭಾಷ್ಯಕಾರರು "ತದ್ಗತಾಣವಮಲ ಧ್ವಂಸಾಭಾವಾಚ್ಚ" ಎಂದು ಯಾತಕ್ಕೆ ಹೇಳಿರುವರೆಂಬುದು ಅವರಿಗೆ ಮಾತ್ರ ಗೊತ್ತು. ಯಾಕೆಂದರೆ ಅನೇಕ ಪ್ರಮಾಣಗಳು ಆಣವ ಮಲವು ಕಾರಣ ಶರೀರಗತವಲ್ಲದೆ, ಸ್ಥೂಲ ಶರೀರಗತವಲ್ಲವೆಂದೂ, ಕಾರ್ಮಿಕ ಮಲವು ಮಾತ್ರ ಸ್ಥೂಲ ಶರೀರಗತವೆಂದೂ ಹೇಳು ತ್ತಿರುವವು); ಆದುದರಿಂದ ಶ್ರೀ ಗುರುಮೂರ್ತಿಯು ಇಷ್ಟಲಿಂಗ ಧಾರಣಾತ್ಮಕವಾದ ಕ್ರಿಯಾ ದೀಕ್ಷೆಯಿಂದ ಬಾಹ್ಯಾಂಗದ ಕಾರ್ಮಿಕ ಮಲವನ್ನೂ, ಭಾವಲಿಂಗಧಾರಣ ರೂಪ ವೇಧಾ ದೀಕ್ಷೆಯಿಂದ ಕಾರಣ ಶರೀರ ಗತವಾದ ಆಣವ ಮಲವನ್ನೂ ನಾಶಗೊಳಿಸಿ, ಶಿಷ್ಯನನ್ನು ಮುಕ್ತನನ್ನಾಗಿ ಮಾಡುವನು ಬಾಹ್ಯಾಂಗದಲ್ಲಿ ಇಷ್ಟಲಿಂಗ ಧಾರಣವೇ ಇಲ್ಲದಿದ್ದರೆ ಮುಕ್ತಿಯಾಗಲಾರದು ಇದಲ್ಲದೆ ಪೂರ್ವದಲ್ಲಿ ಉಪನಯನ ದೀಕ್ಷಿತ

CC-0. Jangamwadi Math Collection. Digitized by eGangotri

ನಾದವನಿಗೆ "ಸ್ವಾಧ್ಯಾಯೋಽಧ್ಯೇತವ್ಯಃ" "ಅಹಂ ಹಃ ಸಂಧ್ಯಾಮುಪಾಸೀತ" ಇತ್ಯಾದಿ ವಾಕ್ಯಗಳಿಂದ ವಿಹಿತಗಳಾದ ಸ್ವಾಧ್ಯಾಯಧ್ಯಯನ, ಸಂಧ್ಯಾವಂದನ ಮೊದಲಾದ ಕರ್ಮಾಧಿಕಾರವಿರುವಂತೆ, ಲಿಂಗಧಾರಣ ದೀಕ್ಷಿತನಿಗೆ ಮಾತ್ರ ಶಿವಾರ್ಚನೆ, ಶಿವಧ್ಯಾನ, ಶಿವಜ್ಞಾನಗಳಲ್ಲಿ ಅಧಿಕಾರವಲ್ಲದೆ, ಅದೀಕ್ಷಿತನಿಗೆ ಅಧಿಕಾರವೇ ಇಲ್ಲದಿರುವುದರಿಂದ, ಬಾಹ್ಯಾಂಗದಲ್ಲಿ ಲಿಂಗಧಾರಣ ದೀಕ್ಷೆಯು ಅವಶ್ಯವಾಗಿರಬೇಕು. ಅಂತರ್ಧ್ಯಾನ ಬೇಕಿಲ್ಲವೇನಂತಲ್ಲ; ಅವು ಬೇಕು. ಆದರೆ ಅವು ಪಾಕಕ್ಕೆ ಕಾಷ್ಠಾದಿಗಳು ಪರಂಪರಾ ಸಾಧನಗಳಾಗುವಂತೆ, ಮೋಕ್ಷಕ್ಕೆ ಪರಂಪರಾ ಸಾಧನಗಳೆಂದು ತಿಳಿಯತಕ್ಕದ್ದು. ಇನ್ನು ಇಷ್ಟಲಿಂಗ ಧಾರಣ ರೂಪವಾದ ದೀಕ್ಷೆಯಾದರೋ, ಪಾಕಕ್ಕೆ ಅಗ್ನಿಯಂತೆ, ಮೋಕ್ಷಕ್ಕೆ ಮುಖ್ಯ ಸಾಧನ (ಸಾಕ್ಷಾತ್ಕರಣ) ವೆಂದು ತಿಳಿಯತಕ್ಕದ್ದು. ಈ ದೀಕ್ಷೆಯನ್ನೇ ಸ್ವೀಕರಿಸದಿದ್ದರೆ, ಪೂರ್ವದಲ್ಲಿ ಉದಾಹರಿಸಿದ ಶ್ರುತಿ, ಸ್ಮೃತಿ, ಪುರಾಣ, ಆಗಮಗಳಿಗೆ ವಿರುದ್ಧವಾಗುವದು.

ಈ ಲಿಂಗಧಾರಣವನ್ನು ಹೇಳುವ ಶ್ರುತ್ಯಾದಿಗಳನ್ನೇ ಸ್ವೀಕರಿಸದಿದ್ದರೆ, ವೇದಬಾಹ್ಯನೆನಿಸಬೇಕಾಗುವದು. ಆದುದರಿಂದ ಬಾಹ್ಯದಲ್ಲಿ ಲಿಂಗಧಾರಣ ಸಂಪನ್ನನಾಗಿಯೇ ಅಂತರ್ಧ್ಯಾನಾದಿಗಳನ್ನು ಆಚರಿಸಬೇಕು. ಇದೇ ಅಭಿಪ್ರಾಯವನ್ನೇ ಮನು, ಗೌತಮ, ಸ್ಮೃತಿಗಳೂ ಸಹ ವಿಶದೀಕರಿಸುತ್ತವೆ. "ಶಿವಧ್ಯಾನ ಪರೋಭೂತ್ವಾ ಶಿವಲಿಂಗಾಂಗ ಸಂಯುತಃ। ಶಿವೇತರ ಪರಿತ್ಯಾಗೀ ಧ್ಯಾನಯೋಗೀ ಸ ಉಚ್ಯತೇ" ಶಿವಲಿಂಗವೆಂಬ ಅಂಗವುಳ್ಳವನೂ, ಶಿವಧ್ಯಾನಾಪರನೂ, ಶಿವೇತರ ದೇವತೆಗಳನ್ನು ಪರಿತ್ಯಜಿಸಿದವನೂ ಆಗಿ ಯಾವನಿರುವನೋ ಅವನೇ ಧ್ಯಾನ ಯೋಗಿಯೆಂದು, ಮನು ಸ್ಮೃತಿಯೂ, "ಮುಖೇ ಮಂತ್ರಂ ಹೃದಿ ಧ್ಯಾನಂ ಮಸ್ತಕೆ ಲಿಂಗಧಾರಣಂ। ಶಿಖಾ ಸೂತ್ರಂ ತಥಾ ಭಸ್ಮ ಚೈತದ್ಬ್ರಾಹ್ಮಣ ಲಕ್ಷಣಂ॥" ಮುಖದಲ್ಲಿ ಪಂಚಾಕ್ಷರ ಮಂತ್ರವೂ, ಹೃದಯದಲ್ಲಿ ಶಿವಧ್ಯಾನವೂ, ಮಸ್ತಕದಲ್ಲಿ ಶಿವಲಿಂಗಧಾರಣವೂ, ಹಾಗೂ ಶಿಖೆಯೂ (ಜುಟ್ಟು), ಯಜ್ಞೋಪವೀತವೂ, ಭಸ್ಮವೂ ಎಂಬ ಷಡ್ವಿಧ ಧರ್ಮಗಳುಳ್ಳವನೇ ಬ್ರಾಹ್ಮಣನೆಂದು ಗೌತಮ ಸ್ಮೃತಿಯೂ ಹೇಳುತ್ತದೆ. ಇಲ್ಲಿ ಬಾಹ್ಯಲಿಂಗಧಾರಣವಿಲ್ಲದವನಿಗೆ ಶಿವಧ್ಯಾನಾದಿಗಳು ಹೇಳಲ್ಪಡದೆ, ಲಿಂಗಧಾರಿಗೇನೇ ಹೇಳಲ್ಪಟ್ಟಿರುವದರಿಂದ, ಲಿಂಗಧಾರಣ ದೀಕ್ಷಾರಹಿತನಿಗೆ ಶಿವಧ್ಯಾನ ಜ್ಞಾನಾಧಿಕಾರವೇ ಇಲ್ಲವೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಲಿಂಗಧಾರಣವು ವೈದಿಕರಿಗೆ ಅವಶ್ಯವಾಗಿ ಆದರಣೀಯವಾಗಿದೆ. "ಐಶ್ವರ್ಯ ಮೀಶ್ವರಾದಿಚ್ಛೇನ್ಮೋಕ್ಷ ಮಿಚ್ಛೇಜ್ಜನಾರ್ದನಾತ್" ಇಂತೆಂಬ ಸ್ಮೃತಿಯಲ್ಲಿ ನಾರಾಯಣನೇ ಮೋಕ್ಷ ಪ್ರದಾಯಕನಾಗಿರುವನೆಂದು ಕಂಡು ಬರುವದರಿಂದ, ಮೋಕ್ಷಾಪೇಕ್ಷಿಗಳು ನಾರಾಯಣನ ಉಪಾಸನೆಯನ್ನೇ ಮಾಡುವುದು ಉಚಿತವೆಂದು ಆಶಂಕಿಸಕೂಡದು. ಈ ಸ್ಮೃತಿ ವಾಕ್ಯಕ್ಕೆ ಅನುಕೂಲವಾದ ಶ್ರುತಿ ವಾಕ್ಯವಿದ್ದರೆ, ಸ್ಮೃತಿ ವಾಕ್ಯವು ಪ್ರಮಾಣವೆನಿಸುವದಲ್ಲದೆ, ಸ್ಮೃತಿಗೆ ಸ್ವತಂತ್ರವಾಗಿ

CC-0. Jangamwadi Math Collection. Digitized by eGangotri

ಪ್ರಾಮಾಣ್ಯವೇ ಇಲ್ಲ, ಶ್ರುತಿಗಳಾದರೋ, ಶಿವನೇ ಮೋಕ್ಷಪ್ರದಾಯಕನೆಂದು ಉದ್ಘೋಷಿಸುತ್ತವೆ. "ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಾಜ್ಯ" (ಎಲ್ಲ ದೇವತೆಗಳನ್ನು ಬಿಟ್ಟು, ಮೋಕ್ಷ ಪ್ರದಾಯಕನೂ, ಅದ್ವಿತೀಯನೂ ಆದ ಶಿವನೊಬ್ಬನೇ ಉಪಾಸನೆಗೆ ಯೋಗ್ಯನು) "ಈಶಂ ಜ್ಞಾತ್ವಾ ಅಮೃತತ್ವಮೇತಿ" (ಶಿವನನ್ನು ತಿಳಿದು ಮೋಕ್ಷವನ್ನು ಹೊಂದುತ್ತಾನೆ.) "ಜ್ಞಾತ್ವಾ ಶಿವಂ ಶಾಂತಿ ಮತ್ಯಂತಮೇತಿ" (ಶಿವನನ್ನು ತಿಳಿದು ಮುಕ್ತರಾಗುತ್ತಾರೆ.) "ಧ್ಯಾನ ನಿರ್ಮಥನಾಭ್ಯಾಸಾತ್ಪಾಶಂ ದಹತಿ ಪಂಡಿತಃ" (ಶಿವಧ್ಯಾನಾಭ್ಯಾಸವೆಂಬ ಮಥನದಿಂದ ಶಿವತತ್ವಜ್ಞಾನಿಯು ಮಾಯಾ ಪಾಶವನ್ನು ದಹಿಸುತ್ತಾನೆ.) "ಕ್ಷರಂ ಪ್ರಧಾನ ಮಮೃತಾಕ್ಷರಂ ಹರಃ ಕ್ಷರಾತ್ಮನಾವಿಶತೇ ದೇವ ಏಕಃ" (ಪ್ರಧಾನವು ನಶ್ವರವಾದುದು, ಹರನು ನಾಶರಹಿತನೂ ಅಮೃತನೂ ಆಗಿರುವನು. ಆ ಮಹಾದೇವನೊಬ್ಬನೇ ಪ್ರಧಾನ ಪುರುಷರನ್ನು ಆಳುತ್ತಾನೆ.) "ತಸ್ಯಾಭಿ ಧ್ಯಾನಾದ್ಯೋಜನಾತ್ತತ್ತ್ವಭಾವಾ ದ್ಭೂಯಶ್ಚಾಂತೇ ವಿಶ್ವ ಮಾಯಾ ನಿವೃತ್ತಿಃ" (ಆ ಶಿವಲಿಂಗದ ಧ್ಯಾನದಿಂದಲೂ, ಆ ಶಿವಲಿಂಗದ ಧಾರಣೆಯಿಂದಲೂ, ಆ ಶಿವಲಿಂಗದ ಪ್ರತ್ಯಕ್ಷದಿಂದಲೂ, ಅಂತತಃ ಅತ್ಯಂತವಾಗಿ ಸಕಲ ಮಾಯಾ ನಿವೃತ್ತಿಯಾಗುವದು.) ಈ ಶ್ರುತಿಗಳು ಶಿವನು ತನ್ನ ಭಕ್ತರಿಗೆ ಸ್ವಜ್ಞಾನ ದ್ವಾರಾ ಮೋಕ್ಷ ಪ್ರದಾಯಕನೆಂದು ಹೇಳುತ್ತವೆ. ಚತುರ್ವಿಧ ಪುರುಷಾರ್ಥಗಳಲ್ಲಿ ಪರಮ ಪುರುಷಾರ್ಥವೇ ಮೋಕ್ಷವು. ಇದನ್ನು ಕೊಡತಕ್ಕವನಾದರೋ, ದೇವತಾ ಸಾರ್ವಭೌಮನೇ ಆಗಬೇಕು; ಸಾಮಾನ್ಯ ದೇವತೆಗಳು ಮೋಕ್ಷವನ್ನು ಕೊಡಲಾರವು. ತಾವೇ ಮಾಯಾ ಪಾಶದಿಂದ ಒದ್ದರಾಗಿರುವಾಗ, ಅನ್ಯರನ್ನು ಮುಕ್ತರನ್ನಾಗಿ ಮಾಡುವ ಬಗೆ ಹೇಗೆ ? ಶಿವನಿಗಾದರೋ ಶಂಕರ (ಮೋಕ್ಷವನ್ನುಂಟುಮಾಡುವವನು.) ರುದ್ರ (ಭಕ್ತರ ಸಂಸಾರ ದುಃಖವನ್ನು ಪರಿಹರಿಸುವವನು.) ಎಂದು ಮೊದಲಾದ ನಾಮಗಳೇ ಶಿವನು ಮೋಕ್ಷದಾಯಕನೆಂಬುವಲ್ಲಿ ನಿದರ್ಶನಗಳಾಗಿವೆ. "ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೆ" (ಭಕ್ತರ ಸಂಸಾರ ದುಃಖವನ್ನು ಪರಿಹರಿಸುವವನು ಒಬ್ಬನೇ ಒಬ್ಬ ರುದ್ರನಲ್ಲದೆ, ಮತ್ತೊಬ್ಬನಿಲ್ಲ) "ವಿಶ್ವಾಧಿಕೋ ರುದ್ರೋ ಮಹರ್ಷಿ" (ವೇದ ಪ್ರಣೇತೃವಾದುದರಿಂದ ಮಹರ್ಷಿಯೆನಿಸುವ ರುದ್ರನು ವಿಶ್ವಾಧಿಕನಾಗಿರುವನು) "ಯೋ ದೇವಾನಾಂ ಪ್ರಥಮ ಪುರಸ್ತಾದ್ವಿಶ್ವಾಧಿಕೋ ರುದ್ರೋ ಮಹರ್ಷಿ" (ಯಾವ ದೇವನು ದೇವತೆಗಳಿಗೆ ಮೊದಲೂ; ಆಮೇಲೆಯೂ ಇರುವನೋ, ವಿಶ್ವಾಧಿಕನೂ, ಮಹರ್ಷಿಯೂ, ರುದ್ರನೂ ಆಗಿದ್ದಾನೆ) "ತಮಕ್ರತುಂ ಪಶ್ಯತಿ ವೀತ ಶೋಕೋ ಧಾತು ಪ್ರಸಾದಾನ್ಮಹಿಮಾನ ಮೀಶಂ" (ಯಾವನು ಶಿವಾನುಗ್ರಹದಿಂದ ಅನಂತ ಮಹಿಮಾಸ್ಪದನೂ, ಪರಮೈಶ್ವರ್ಯಶಾಲಿಯೂ, ಕರ್ಮರಹಿತನೂ ಆಗಿರುವ ಶಿವನನ್ನು ಸಾಕ್ಷಾತ್ಕರಿಸುವನೋ; ಅವನು ಕಳೆಯಲ್ಪಟ್ಟ ಶೋಕವುಳ್ಳವನಾಗುವನು. ಅಂದರೆ ಮುಕ್ತನಾಗುವನು.) ಶಿವನೇ ಮೋಕ್ಷದಾಯಕನೆಂದು ಹೇಳುವ ಈ ಅನೇಕ ಶ್ರುತಿ ವಾಕ್ಯಗಳು ಜನಾರ್ದನನೇ ಮೋಕ್ಷದಾಯಕನೆಂದು ಹೇಳುವ ಸ್ಮೃತಿ ವಾಕ್ಯಗಳ

CC-0. Jangamwadi Math Collection. Digitized by eGangotri

ಗಿಂತಲೂ ಬಲಿಷ್ಠಗಳಾಗಿರುವದರಿಂದ, ಆ ಸ್ಮೃತಿ ವಾಕ್ಯವು ಬಾಧಿತವಾಗುತ್ತದೆ. ಇದಲ್ಲದೆ, ನಾರಾಯಣನು ಬ್ರಾಹ್ಮಣ ದೇವತೆಯೇ ಅಲ್ಲವೆಂದಮೇಲೆ ಬ್ರಾಹ್ಮಣರಿಗೆ ಅವನು ಉಪಾಸ್ಯನೂ ಅಲ್ಲ; ಅವರ ಉಪಾಸನೆಗೆ ಫಲವನ್ನು ಕೊಡಲು ಸಮರ್ಥನೂ ಅಲ್ಲ. ಹೀಗಿದ್ದೂ ಮೋಕ್ಷಪ್ರದಾಯಕನು ನಾರಾಯಣನೆಂದು ಹೇಳುವ ಸ್ಮೃತಿಯು ಪ್ರಮಾಣವೆನಿಸಲಾರದು. ಶ್ರುತಿ ವಿರುದ್ಧವಾದ ಸ್ಮೃತಿಗೆ ಯಾರೂ ಪ್ರಾಮಾಣ್ಯವನ್ನು ಒಪ್ಪುವುದಿಲ್ಲವಾದುದರಿಂದ, ಶಿವನೇ ಸರ್ವೋತ್ತಮನು. ಅವನೇ ಉಪಾಸ್ಯನು, ಅವನೇ ಮೋಕ್ಷದಾಯಕನು. ಆದುದರಿಂದ ಶಿವಲಿಂಗಧಾರಣವು ಅವಶ್ಯವಾದುದಾಗಿದೆ. ಒಂದು ಪಕ್ಷದಲ್ಲಿ ಆ ಸ್ಮೃತಿ ವಾಕ್ಯಕ್ಕೆ ಪ್ರಮಾಣವೆನ್ನಬೇಕೆಂದರೆ, ಸಮುಕ್ಷ ಜಲನ್ಯಾಯದಿಂದ, (ಜಲದಲ್ಲಿ ಬಿದ್ದಿರುವ ನೊಣವನ್ನು ತೆಗೆದೊಗೆದು, ಕುಡಿದು ತೃಪ್ತಿ ಪಡುವನು. ಇಲ್ಲಿ ನೊಣವುಳ್ಳ ನೀರು ತೃಪ್ತಿಗೆ ಸಾಕ್ಷಾತ್ಕಾರವಾಯಿತು, ಆ ನೊಣವುಳ್ಳ ನೀರು ಪರಂಪರಾ ಕಾರಣವಾಯಿತು.) ಹಾಗೆ ನಾರಾಯಣೋಪಾಸನೆಯಿಂದ ಶಿವೋಪಾಸನೆಗೆ ಯೋಗ್ಯರಾಗಿ, ಆ ಶಿವೋಪಾಸನೆಯಿಂದ ಮುಕ್ತಿ ಸುಖವನ್ನು ಪಡೆವರು. ಅಂದರೆ ಶಿವೋಪಾಸನೆಯೇ ಮುಕ್ತಿಗೆ ಮುಖ್ಯ ಕಾರಣವಾಯಿತು. ಆ ನಾರಾಯಣೋಪಾಸನೆಯು ಪರಂಪರಾ ಕಾರಣವಾಗುವದು ಎಂದು ಭಾವವು. ಈ ವಿಷಯದಲ್ಲಿ "ಸಾಂಖ್ಯ ಯೋಗ ಸಹಸ್ರೇಣ ಜನ್ಮನಾ ದ್ವೈತಗೋ ಭವೇತ್। ತನ್ಮತಸ್ಯ ಸಹಸ್ರೇಣ ಸಾರವಯ ತರುಶ್ಶುತೇ॥ ತತ್ಸಹಸ್ರ ಸಮುಭ್ಯಾ ಸಾದ್ಗಾಣಪತ್ಯ ಮತೋಭವೇತ್। ತತ್ಸಹಸ್ರೇಣ ಭೂಲೋಕೇ ವೈಷ್ಣವಂ ಮತ ಮೀರ್ಯತೆ॥ ತದ್ವೈಷ್ಣವ ಸಹಸ್ರೇಣ ಶಾಕ್ತೋ ಭವತಿ ಸರ್ವದಾ। ತತ್ಸಹಸ್ರಾನ್ಮಾಹಾಭಾಗ ಶೈವ ಸಾಮಾನ್ಯ ಉಚ್ಯತೆ॥ ತತ್ಸಹಸ್ರೇಣ ವಿಪ್ರೇಂದ್ರಾ ವೀರಶೈವ ಮತೋ ಭವೇತ್। ತೇ ನೈವ ಮುಕ್ತಿಮಾಪ್ನೋತಿ ನಾನ್ಯಥಾ ಬಹುಯತ್ನತಃ॥ ಇತಿ ಸ್ಕಾಂದೇ ದರ್ಶನಾತ್॥" ಇಂತೆಂಬ ಸ್ಕಂದ ಪುರಾಣದ ಶ್ಲೋಕಗಳು ಪ್ರಮಾಣಗಳಾಗಿವೆ.

ಹಾಗೂ ವಿಷ್ಣು ಸಾರೂಪ್ಯವನ್ನು ಹೊಂದಿ ವಿಷ್ಣುಲೋಕ ವಾಸಿಗಳಾಗಿರುವ ಶಿವ ಕರ್ಮಾದಿಗಳಿಗೆ ಶಿವೋಪಾಸನೆಯಿಂದ ಮೋಕ್ಷಪ್ರಾಪ್ತಿಯಾಯಿತೆಂದು ಕಾಶೀ ಖಂಡದಲ್ಲಿ ಸ್ಪಷ್ಟವಾಗಿರುವದು. ಇದಲ್ಲದೆ ಮಹಿಮ್ನ ಸ್ತೋತ್ರದಲ್ಲಿಯೂ "ತ್ರಯೀ ಸಾಂಖ್ಯ" ಎಂದು ಆರಂಭಿಸಿ "ತ್ವಮಸಿ ಪಯಸಾಮರ್ಣವ ಇವ" ಇತ್ಯಂತ ಗ್ರಂಥದಿಂದ ಸ್ವಮತ ಹಾಗು ಅನ್ಯ ಮತಗಳಿಗೆ ಕ್ರಮದಿಂದ ಋಜು ಕುಟಿಲ ಭಾವವನ್ನು ನಿರೂಪಿಸಿ, ಶಿವನೇ ಸರ್ವ ಮತಗಳಿಗೆ ಪ್ರಾಪ್ಯಸ್ಥಾನನಾಗಿರುವನೆಂದು ಉಪದೇಶವಿರುವದರಿಂದ ಸರ್ವ ಮತೀಯರೂ ಕೂಡ ಶಿವೋಪಾಸನೆಯನ್ನು ಮಾಡಿಯೇ ಮೋಕ್ಷವನ್ನು ಹೊಂದುವರೆಂಬುದು ಸಿದ್ಧಾಂತವು. ಶ್ರೀ ವ್ಯಾಸ ಮಹರ್ಷಿಯೂ ಸಹ ಸ್ವಭುಜ ಸ್ತಂಭನಾನಂತರದಲ್ಲಿ ಶಿಷ್ಯರೊಡನೆ ಲಿಂಗಧಾರಣಾತ್ಮಕವಾದ ಶಾಂಭವ ದೀಕ್ಷೆಯನ್ನು ಹೊಂದಿ ಮೋಕ್ಷಾಧಿಕಾರಿಯಾದನೆಂದು ಕಾಶೀ ಖಂಡದಲ್ಲಿ ಉಲ್ಲೇಖವಿದೆ. ಅದು

CC-0. Jangamwadi Math Collection. Digitized by eGangotri

ದರಿಂದ ಜನಾರ್ದನನ ಉಪಾಸನೆಯ ಅನಂತರ ಶಿವೋಪಾಸನೆಯನ್ನು ಮಾಡಿ ಮುಕ್ತಿಯನ್ನು ಹೊಂದುವರೆಂಬಲ್ಲಿಯೇ ನಾರಾಯಣೋಪಾಸನ ಪರವಾದ ಸ್ಮೃತಿ ವಾಕ್ಯಗಳ ತಾತ್ಪರ್ಯವೆಂದು ತಿಳಿಯಬೇಕು.

"ಸರ್ವ ಲಿಂಗಂ ಸ್ಥಾಪಯತಿ" ಎಂಬಲ್ಲಿ ಸ್ಥಾಪಯತಿ" ಎಂಬುದು ಲಕ್ಷಣ ವಾಗಿದ್ದರೂ, "ವ್ರೀಹೀನ್ ಪ್ರೋಕ್ಷತಿ'' "ವ್ರೀಹೀನ್ ವಹಂತಿ" ಎಂಬಲ್ಲಿ ಹೇಗೆ ಹಾಗೆ ವಿಧ್ಯರ್ಥವು ಉಪಪನ್ನವಾಗುವದು. "ಆಗ್ನೆಯೋಽಷ್ಟಾಕ ಪಾತೋಽಮಾ ವಾಸ್ಯಾಯಾಮ್" ಎಂಬಲ್ಲಿ ಹೇಗೊ ಹಾಗೆ ಎಲ್ಲವೂ ಅಪ್ರಾಪ್ತಗಳಾದುದರಿಂ ಅವೆಲ್ಲವೂ ವಿಧೇಯಗಳೇ ಆಗಿರುವವು. "ಅಪ್ರಾಪ್ತತ್ವೇ ವಿಧೀಯಂತೆ ಬಹವೋಪ್ಯೇ ಯತ್ನತಃ" ಎಂಬ ಸ್ಮೃತಿಯು, ಕರ್ಮಗಳು ಅನೇಕಗಳಾದಾಗ್ಯೂ ಅವೆಲ್ಲವಕ್ಕೆ ಮೊದಲು ಪ್ರಾಪ್ತಿಯಿಲ್ಲದಿದ್ದ ಪಕ್ಷದಲ್ಲಿ ಅವೆಲ್ಲವೂ ವಿಧೇಯಗಳೇ ಆಗುವವೆಂದು ಹೇಳುತ್ತದೆ. ಪ್ರಕೃತದಲ್ಲಿ "ಸ್ಥಾಪಯತಿ'' (ಸ್ಥಾಪಿಸಬೇಕು) ಇಷ್ಟನ್ನು ಮಾತ್ರ ಮಂತ್ರವು ಹೇಳುತ್ತದಲ್ಲದೆ, ಲಿಂಗವನ್ನು ಭೂಮಿಯಲ್ಲಿ ಸ್ಥಾಪಿಸಬೇಕೆಂದಾಗಲಿ ಶರೀರದಲ್ಲಿ ಸ್ಥಾಪಿಸಬೇಕೆಂದಾಗಲಿ ಹೇಳುವದಿಲ್ಲ ಎಂದಮೇಲೆ, ಶರೀರದಲ್ಲಿ ಲಿಂಗ ಸ್ಥಾಪನೆಯನ್ನು ಮಾಡಬೇಕೋ ಅಥವಾ ಭೂಮಿಯಲ್ಲಿ ಲಿಂಗಸ್ಥಾಪನೆಯನ್ನು ಮಾಡ ಬೇಕೋ ಎಂದು ಸಂಶಯ ಪಡುವ ಕಾರಣವೇ ಇಲ್ಲ. ಭೂಮಿಯಲ್ಲಿಯೂ, ಶರೀರ ದಲ್ಲಿಯೂ ಕೂಡ ಲಿಂಗಸ್ಥಾಪನೆಯೆಂಬ ಕರ್ಮವನ್ನು ಮಾಡಬಹುದು. ಭೂಸ್ಥಾಪನ ಶರೀರಸ್ಥಾಪನ ಕರ್ಮಗಳೆರಡೂ-ಈ ಹಿಂದೆ ಅಪ್ರಾಪ್ತಗಳೇ ಆಗಿರುವವಾದುದರಿಂದಲೂ, ಶರೀರವೊಂದರಲ್ಲಿಯೇ, ಭೂಮಿಯೊಂದರಲ್ಲಿಯೇ ಸ್ಥಾಪಿಸಬೇಕೆಂಬುವಲ್ಲಿ ಬಲವಾದ ಯುಕ್ತಿಯು ಇಲ್ಲವಾದುದರಿಂದಲೂ, "ಸ್ಥಾಪಯತಿ" (ಸ್ಥಾಪಿಸಬೇಕು) ಎಂದು ಸಾಮಾನ್ಯವಾಗಿ ಹೇಳುವ ಶ್ರುತಿಯು ಭೂಮಿ-ಯೊಂದರಲ್ಲಿಯೇ ಅಥವಾ ಶರೀರವೊಂದ ರಲ್ಲಿಯೇ ಸ್ಥಾಪಿಸಬೇಕೆಂಬ ಅರ್ಥ ಸಂಕೋಚವನ್ನು ಸೂಚಿಸಲಾರದಾದುದರಿಂದಲೂ ಭೂಮಿ, ಶರೀರಗಳೆರಡರಲ್ಲಿಯೂ ಸ್ಥಾಪಿಸುವದು ಲೋಕಾಚಾರ ಸಂಪ್ರದಾಯ ಸಿದ್ಧ ವಾಗಿ ಪರಂಪರೆಯಿಂದ ನಡೆದು ಬಂದುದಾಗಿರುವದರಿಂದಲೂ, ಹಾಗೂ ಅನೇಕ ಶ್ರುತಿ, ಸ್ಮೃತಿ, ಆಗಮ ಪ್ರಮಾಣಗಳು ಭೂಮಿಯಲ್ಲಿ, ಶರೀರದಲ್ಲಿ ಲಿಂಗಸ್ಥಾಪನೆಯನ್ನು ವಿಧಿಸುವದರಿಂದಲೂ "ಸ್ಥಾಪಯತಿ'' ಎಂಬುದರಿಂದ ಭೂಮಿಯಲ್ಲಿಯೂ ಸ್ಥಾಪಿಸ ಬೇಕು; ಶರೀರದಲ್ಲಿಯೂ ಸ್ಥಾಪಿಸಬೇಕೆಂದು ಸಿದ್ಧವಾಗುತ್ತದೆ.

"ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ" ಎಂಬಲ್ಲಿರುವ "ಪಾಣಿ ಮಂತ'' ಪದದಿಂದ ಶರೀರದಲ್ಲಿ ಲಿಂಗಧಾರಣ ಸಿದ್ಧಿಯಾಗುವದಿಲ್ಲ; ಹಸ್ತಗಳಿಂದ ಮಾಡುವ ಪೂಜೆಯಿಂದ ಭಕ್ತರನ್ನು ರಕ್ಷಿಸುವಂಥ (ಲಿಂಗವು) ಎಂದು ಆ ಪದದ ಅರ್ಥ ವಾಗುತ್ತದೆ. ಪಾಣಿ ಪೀಠದಲ್ಲಿಟ್ಟು ಪೂಜಿಸಲ್ಪಡುವ ಇಷ್ಟಲಿಂಗಕ್ಕಾದರೋ ಎರಡೂ ಕೈಗಳಿಂದ ಪೂಜಿಸಲಿಕ್ಕೆ ಬರುವದಿಲ್ಲವೆಂದಮೇಲೆ ಎರಡು ಕೈಗಳಿಂದ ಪೂಜಿಸಲು ಯೋಗ್ಯವಾದ ಸ್ಥಾವರಲಿಂಗ ಸ್ಥಾಪನೆಯೇ ಈ ಮಂತ್ರದಿಂದ ವಿಹಿತವಾಗುವದೆಂದು

CC-0. Jangamwadi Math Collection. Digitized by eGangotri

"ಪಾಣಿಮಂತ್ರ" ಎಂಬ ಪದದಿಂದ ವ್ಯಕ್ತವಾಗುತ್ತದೆಂದು ಆಶಂಕಿಸಕೂಡದು. ಯಾಕೆಂದರೆ "ಪಾಣಿಮಂತ್ರ" ಪದಕ್ಕೆ ಕೈಗಳಿಂದ ಮಾತ್ರ ಪೂಜಿಸಲ್ಪಡುವ ಲಿಂಗವು ಭಕ್ತರನ್ನು ರಕ್ಷಿಸುವದಾಗುತ್ತದೆ ಮನಸ್ಸಿನಿಂದ ಪೂಜಿಸಲ್ಪಡುವ ಲಿಂಗವು ಭಕ್ತರನ್ನು ರಕ್ಷಿಸುವದಿಲ್ಲವೊ ? ರಕ್ಷಿಸುವದೆಂದಮೇಲೆ ಈ ನಿಮ್ಮ ಸಂಕುಚಿತವಾದ ಅರ್ಥವು ಅಯುಕ್ತವು. ಮನಸ್ಸಿಗೂ ಸಹ ಪೂಜಾಕರಣತ್ವವು ಅನೇಕ ಶ್ರುತ್ಯಾದಿಗಳಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ ಪೂಜೆಯಿಂದ ರಕ್ಷಿಸುವದು ಎಂದು ಹೇಳಲೇಬೇಕು. ಆಗ ಪಾಣಿ ಶಬ್ದವು ವ್ಯರ್ಥವಾಗುವದು. ಆದುದರಿಂದ ಈ "ಪಾಣಿಮಂತ್ರ" ಪದ ದಿಂದ ಇಷ್ಟಲಿಂಗ ಧಾರಣವೇ ಈ ಮಂತ್ರದಿಂದ ವಿಹಿತವಾಗುತ್ತದೆಂದು ತಿಳಿದುಬರು ತ್ತದೆ. "ಪಾಣಿ ಮನನಾತ್ ಲಿಂಗ ಪೂಜನಾತ್ ತ್ರಾಯತೆ ಇತಿ ಪಾಣಿ ಮಂತ್ರಂ" ಅಂದರೆ ಹಸ್ತದಲ್ಲಿ ಲಿಂಗಪೂಜೆಯಿಂದ ರಕ್ಷಿಸುವ ಎಂದು ಅರ್ಥವನ್ನು ಮಾಡಬೇಕಾಗು ತ್ತದಲ್ಲವೇ; ಸ್ಥಾವರ ಲಿಂಗಕ್ಕಂತೂ ಪಾಣಿ ಪೀಠದಲ್ಲಿ ಪೂಜೆಯೇ ಸಂಭವಿಸುವದಿಲ್ಲ. ಇನ್ನು ಇಷ್ಟಲಿಂಗಕ್ಕೆ ಮಾತ್ರ ಸಂಭವಿಸುತ್ತದೆಂದಮೇಲೆ ಈ "ಪಾಣಿಮಂತ್ರ" ಎಂಬ ಪದದಿಂದ ಈ ಮಂತ್ರವು ಶರೀರದಲ್ಲಿ ಮಾತ್ರ ಲಿಂಗ ಸ್ಥಾಪನೆಗೆ ವಿಧಾಯಕವೆಂದು ಸ್ಪಷ್ಟವಾಗುತ್ತದೆ. ವೀರಶೈವ ಪಾಣಿಯಲ್ಲಿ ಎಂದು ಅರ್ಥಮಾಡಿದರೆ ಲಿಂಗ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುವದು. ಅಂದರೆ ಪೂರ್ವ ಪಕ್ಷಿಯೆ, ನೀನು ಮಾಡುವ ಅರ್ಥದಿಂದಾದರೂ ಸ್ಥಾಪ ಲಿಂಗಪದವನ್ನು ಅಧ್ಯಾಹಾರ ಮಾಡಿಕೊಳ್ಳ ಬೇಕಾಗುವದು. ಹಾಗಾದರೆ ಈ ಅಧ್ಯಾಹಾರ ದೋಷ ಪರಿಹಾರಕ್ಕಾಗಿ "ಪಾಣಿ ಮಂತ್ರ" ಎಂಬ ಪದಕ್ಕೆ "ಪಾಣಿಭ್ಯಾಂ ಅಭಿಮಂತ್ರಿತಂ" ಅಂದರೆ ಹಸ್ತಗಳಿಂದ ಮಾಡಲ್ಪಡುವ ಪೂಜೆಗೆ ವಿಷಯುವಾದುದಾಗಿರುವ ಎಂದು ಅರ್ಥವನ್ನು ಮಾಡುವದು ಯುಕ್ತವಾಗಿದೆ. ಎಂದಮೇಲೆ ಭೂಮಿಯಲ್ಲಿ ಸ್ಥಾವರಲಿಂಗ ಸ್ಥಾಪನೆಗೆ ಈ ಮಂತ್ರವು ವಿಧಾಯಕವೆಂದು ಸಿದ್ಧಿಸುತ್ತದೆಂದು ಸ್ಪಷ್ಟವಾಗುತ್ತದಲ್ಲವೆ; ಎಂದು ಆಶಂಕಿಸಕೂಡದು ಯಾಕೆಂದರೆ ಮಂತ್ರ ಶಬ್ದಕ್ಕೆ ಮಂತ್ರ ವಿಷಯವೆಂದ: ನೀನು ಅರ್ಥಮಾಡಿ, ಮುಖ್ಯ ಅರ್ಥವನ್ನು ಬಿಟ್ಟು ಗೌಣಾರ್ಥವನ್ನು ಸ್ವೀಕರಿಸುವದರಿಂದ ಗೌರವ ದೋಷವು ಬರುವದಷ್ಟೆ; ಹಾಗೂ ಈ ಕ್ಷತ್ಯಧಿಕರಣಕ್ಕೂ ವಿರೋಧವಾಗುವದು. ನಾನು, ನೀನು ಮಾಡುವ ಅರ್ಥದಲ್ಲಿ ಅಧ್ಯಾಹಾರ ದೋಷವು ಸಮಾನವಾಗಿದೆಯೆಂದು ತಿಳಿದು, ಹಸ್ತ ಗಳಿಂದಾಗುವ ಪೂಜಾ ವಿಷಯುವಾದದ್ದು ಎಂದು ಅರ್ಥಮಾಡಿ, ಈ ಮಂತ್ರವು ಸ್ಥಾವರ ಲಿಂಗಸ್ಥಾಪನ ಪರವಾದುದೆಂದು ಹೇಳಿದರೆ, ಮಂತ್ರ ಶಬ್ದಕ್ಕೆ ಗೌಣಾರ್ಥ ಸ್ವೀಕಾರ ದೋಷವು ಬರುವದು. ಹಾಗಾದರೆ ಈ ಮಂತ್ರಕ್ಕೆ ಯಾವರೀತಿಯಾಗಿ ಅರ್ಥಮಾಡಬೇಕು, ಅಂದರೆ ಯಾವ ಮಂತ್ರಕ್ಕಾದರೂ ಸ್ವತಂತ್ರವಾಗಿ ಅರ್ಥವನ್ನು ಮಾಪಕೂಡದು ಉಪಬೃಂಹಣ ವಾಕ್ಯಾನುಸಾರವಾಗಿಯೇ ಅರ್ಥವನ್ನು ಮಾಡ ಬೇಕು. ಈ ಮಂತ್ರಾರ್ಥವು ವ್ಯಾಸ ಮಹರ್ಷಿಗಳಿಂದ ಲಿಂಗಪುರಾಣದ ಉತ್ತರ ಭಾಗದ ೨೧ನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ಉಪದೇಶಿಸಲ್ಪಟ್ಟಿರುವದು. ಅದರಂತೆ

CC-0. Jangamwadi Math Collection. Digitized by eGangotri

ಎಲ್ಲರೂ ಅನುಸರಿಸಲೇಬೇಕು. "ಯಜುರಪ್ಯಾಹ ಸರ್ವಂ ಪೈ ಲಿಂಗಂ ಸ್ಥಾಪಯತೀತಿಚ| ತಸ್ಮಾದ್ಧಾರ್ಯಂ ಮಹಾಲಿಂಗಂ ಪಾಣಿ ಮಂತ್ರೇತಿ ಮಂತ್ರತಃ || ಪಾಣೌ ಲಿಂಗಂ ವಿನಿಕ್ಷಿಪ್ಯ ದೀಕ್ಷಾಕಾಲೇ ಗುರುಃ ಶಿವಃ| ಯೇನ ಸ್ಮರತಿ ತನ್ಮಂತ್ರಂ ಪಾಣಿ ಮಂತ್ರಾ ವದಂತಿಹಿ|| ಪವಿತ್ರತ್ವಾನ್ಮಹೇಶಸ್ಯ ಶಿವಸ್ಯ ಪ್ರತಿಪಾದನಾತ್| ಪವಿತ್ರೀ ಕರಣಾತ್ ಪುಂ. ಸಾಂ. ಪವಿತ್ರಮಿತಿ ಕಥ್ಯತೇ|| ಅತಃ ಸರ್ವೇಷು"

"ಧಾರಯೇಲ್ಲಿಂಗ ಮುತ್ತಮಂ| ಗಚ್ಛನ್ ತಿಷ್ಠನ್ ಉಪವಿಶನ್ ಯಾನೋ ಪ್ಯನ್ಯಥಾ ಪಿವಾ|| ಶುಚಿರ್ವಾಪ್ಯ ಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್| ಲಿಂಗ ಧಾರೀ ಸದಾ ಶುದ್ಧೋ ನಿಜಲಿಂಗಂ ಮನೋಹರಂ|| ಅರ್ಚ್ಯಮೇದ್ಗಂಧ ಪುಷ್ಪಾದ್ಯೈಃ ಕರಪೀಠೇ ಸಮಾಹಿತಃ| ನಿತ್ಯಾನಿ ಕರ್ಮವೃಂದಾನಿ ತಥಾ ನೈಮಿತ್ತಿಕಾನಿಚ|| ಶಿವಾರ್ಪಣ ಧೀಯಾ ಕುರ್ಯಾತ್ಸಮ್ಯಗ್ ಜ್ಞಾನಾಭಿವೃದ್ಧಯೇ||" ಈ ಪ್ರಕಾರವಾಗಿರುವ ಉಪ ಬೃಂಹಣ ವಾಕ್ಯಗಳಿಂದ "ಸರ್ವಲಿಂಗಂ ಸ್ಥಾಪಯತಿ" ಎಂಬ ಮಂತ್ರವು ಲಿಂಗಧಾರಣ ಪರವಾದುದೆಂದು ನಿಶ್ಚಯಿಸಲ್ಪಡುತ್ತದೆ. ವೃಶ್ಚಿಕಾದಿ (ಚೇಳು) ಗಳ ವಿಷದಿಂದಲೇ ಮರಣವನ್ನು ಹೊಂದುವ ಮನುಷ್ಯರಿಗೆ, ಶಿವನಂತೆ ಕಾಲಕೂಟ ವಿಷಭಕ್ಷಣ ಮಾಡುವ ಸಾಮರ್ಥ್ಯವಿಲ್ಲವಾದುದರಿಂದಲೂ, ಹಗ್ಗವನ್ನು ನೋಡಿ ಹಾವೆಂದು ಭ್ರಮಿಸಿ, ಪಲಾಯನ ಮಾಡತಕ್ಕ ಮನುಷ್ಯರಿಗೆ ಶಿವನಂತೆ ಸರ್ಪಧಾರಣದಲ್ಲಿ ಶಕ್ತಿಯಿಲ್ಲದಿರುವುದರಿಂದಲೂ, ಹಾಗೂ ಕಾಲಕೂಟ ವಿಷ, ಸರ್ಪಗಳೆಂಬ ಶಿವಲಾಂಛನಗಳನ್ನು ಬಿಟ್ಟು ಕೆಲವು ಶಿವಲಾಂಛನಗಳನ್ನು ಧರಿಸಲೇಬೇಕೆಂಬುವಲ್ಲಿ ಪ್ರಮಾಣವಿಲ್ಲದಿರುವುದರಿಂದಲೂ ಮುಮುಕ್ಷುಗಳಿಗೆ ಶಿವಲಿಂಗ, ಭಸ್ಮ, ರುದ್ರಾಕ್ಷಾದಿಗಳು, ಭೃತ್ಯರಿಗೆ ರಾಜಚಿನ್ಹೆಗಳು ಧರಿಸಲರ್ಹಗಳಾದಂತೆ, ಧರಿಸಲರ್ಹಗಳಲ್ಲವೆಂದು ಆಶಂಕಿಸಕೂಡದು. ತದ್ಭಕ್ತರಿಗೆ ಶಿವಸಾಯುಜ್ಯ ಸಿದ್ಧಿಗಾಗಿ ತನ್ನ ಭಸ್ಮ, ರುದ್ರಾಕ್ಷಿ, ಶಿವಲಿಂಗಗಳೆಂಬ ಲಾಂಛನಗಳನ್ನೇ ಧರಿಸಬೇಕು. ಧರಿಸದಿದ್ದಲ್ಲಿ ಪ್ರತ್ಯವಾಯುವು ಬರುವದೆಂದು ಆ ಪರಮೇಶ್ವರನೇ ಉಪದೇಶಿಸಿರುವುದರಿಂದಲೂ, ಲೋಕದಲ್ಲಿಯಾದರೂ ಯಾವ ರಾಜ ಚಿನ್ಹೆಗಳನ್ನು ಧರಿಸಬೇಕೆಂದು ರಾಜಾಜ್ಞೆಯಾಗಿರುವದೋ, ಅದೇ ಚಿನ್ಹೆಗಳನ್ನು ಭೃತ್ಯರು ಧರಿಸುತ್ತಾರಲ್ಲದೆ, ಬೇರೆ ಚಿನ್ಹೆಗಳನ್ನು ಧರಿಸುವುದಿಲ್ಲವಾದುದರಿಂದಲೂ, ಶಿವಾಜ್ಞೆ ಗಳೆನಿಸುವ ಪೂರ್ವೋಕ್ತ ವೇದಶಾಸ್ತ್ರ (ಸ್ಮೃತಿ) ಪುರಾಣಾಗಮಾದಿಗಳಲ್ಲಿ ಶಿವಲಿಂಗ, ಭಸ್ಮ, ರುದ್ರಾಕ್ಷ ಧಾರಣವನ್ನು ವಿಧಿಸುವ ಪ್ರಮಾಣ ವಾಕ್ಯಗಳಿರುವುದರಿಂದಲೂ,, ಭುಜಂಗ (ಸರ್ಪ) ಧಾರಣ, ಕಾಲಕೂಟ ಭಕ್ಷಣವನ್ನು ವಿಧಿಸುವ ಪ್ರಮಾಣ ವಾಕ್ಯಗಳಿಲ್ಲದಿರುವುದರಿಂದಲೂ, ಬ್ರಹ್ಮ-ವಿಷ್ಣ್ವಾದಿ ಸಮಸ್ತ ಭಕ್ತರಿಗೂ ಶಿವಲಿಂಗ ಧಾರಣವು ಕಂಡು ಬರುವುದರಿಂದಲೂ ಹಾಗೂ "ಶಿವಾಜ್ಞಾ ಪಾಲನಾರ್ಥಾಯ ಶಿವಭಕ್ತಃ ಶಿವಪ್ರತೀ ಲಿಂಗ ರುದ್ರಾಕ್ಷ ಭಸ್ಮಾನಿ ಶಿವ ಚಿನ್ಹಾನಿ ಧಾರಯೇತ್| ರಾಜಾಜ್ಞೋಲ್ಲಂಘನಾ ಲೋಕೇ ಯಥಾ ದಂಡಾ ವಿಧೀಯತೇ| ಶಿವಾಜ್ಞಾಲ್ಲಂಘನ ದಂಡೋ ರೌರವ ನರಕಂ ತಥಾ" ಇಂತೆಂಬ ಲಿಂಗ ಪುರಾಣವು ಶಿವಭಕ್ತನಾದ ಶಿವಪ್ರತಿಯು ಶಿವಾಜ್ಞಾ ಪಾಲನೆ

CC-0. Jangamwadi Math Collection. Digitized by eGangotri

ಗಾಗಿ ಲಿಂಗ, ರುದ್ರಾಕ್ಷ, ಭಸ್ಮಗಳನ್ನು ಧರಿಸಬೇಕೆಂಬುದೂ, ರಾಜಾಜ್ಞೆಯನ್ನು ಉಲ್ಲಂಘಿಸಿದರೆ ಹೇಗೆ ದಂಡವು ವಿಧಿಸಲ್ಪಡುತ್ತದೆಯೋ, ಹಾಗೆ ಶಿವಾಜ್ಞೆಯನ್ನು ಉಲ್ಲಂಘಿಸಿದರೆ ರೌರವ ನರಕವೆಂಬ ದಂಡವು ವಿಧಿಸಲ್ಪಡುತ್ತದೆಂದು ಹೇಳಿರುವು ದರಿಂದಲೂ, ಶಿವಲಿಂಗ, ರುದ್ರಾಕ್ಷ, ಭಸ್ಮಗಳೆಂಬ ಶಿವಲಾಂಛನಗಳನ್ನೇ ಶಿವಭಕ್ತರು ಧರಿಸತಕ್ಕದ್ದು. ಕಾಲಕೂಟ ವಿಷಭಕ್ಷಣ, ಸರ್ಪಧಾರಣವನ್ನು ಮಾಡಕೂಡದು.

ವೀರಶೈವನೇ ! ಸಗುಣಬ್ರಹ್ಮ (ಲಿಂಗ)ವು ಅದ್ವೈತ ಸಿದ್ಧಾಂತದಲ್ಲಿ ಮಿಥ್ಯಾ ಭೂತವಾಗಿರುವುದರಿಂದ, ಇಂತಹ ಮಿಥ್ಯಾಭೂತವಾಗಿರುವ ಲಿಂಗಧ್ಯಾನ, ಧಾರಣಾದಿ ಗಳಿಂದ ನಿರ್ಗುಣ ಚೈತನ್ಯರೂಪನಾದ ಬ್ರಹ್ಮ ಪ್ರಾಪ್ತಿಯಾಗಲಾರದೆಂದು ಆಶಂಕಿಸ ಕೂಡದು. ಯಾಕೆಂದರೆ, "ಉಮಾ ಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ ನೀಲಕಂಠಂ ಪ್ರಶಾಂತಂ" "ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ ಸಮಸ್ತ ಸಾಕ್ಷಿಂ ತಮಸಃ ಪರಸ್ತಾತ್" ಇಂತೆಂಬ ಕೈವಲ್ಯ ಶ್ವೇತಾಶ್ವತರಾದಿ ಶ್ರುತಿಗಳಲ್ಲಿ ಸಗುಣೋ ಪಾಸನೆಯಿಂದ ನಿರ್ಗುಣ ಸರ್ವ ಸಾಕ್ಷಿ ಚೈತನ್ಯರೂಪವಾದ ಬ್ರಹ್ಮದ ಪ್ರಾಪ್ತಿಯು ಹೇಳಲ್ಪಟ್ಟಿರುವುದರಿಂದಲೂ, "ಸ್ಥಿರೇಭಿರಂಗೈಃ ಪರುರೂಪ ಉಗ್ರಃ" ಇಂತೆಂಬ ರುದ್ರ ಸೂಕ್ತಾದಿಗಳಲ್ಲಿ ಪರಮೇಶ್ವರನ ಮಂಗಲಮಯವಾದ ಹಾಗೂ ಶಾಂತವಾದ ಶರೀರವು ನಿತ್ಯವೆಂದು ಹೇಳುವುದರಿಂದಲೂ, ಶಿವನ ಅಘೋರ (ಶಾಂತ) ಮೂರ್ತಿಯೆನಿಸುವ ಲಿಂಗಧ್ಯಾನ, ಧಾರಣದಿಂದ ನಿರ್ಗುಣ(ಪ್ರಾಕೃತ ಗುಣರಹಿತ) ಬ್ರಹ್ಮ ಪ್ರಾಪ್ತಿರೂಪವಾದ ಮೋಕ್ಷವೂ ಸಿದ್ಧಿಸುತ್ತದೆಂಬುವುದು ಘಂಟಾ ಘೋಷವು. ಹೀಗಿದ್ದು ಶಿವನ ಸಾಕಾರ ಸಗುಣ ಮೂರ್ತಿಗಳಿಗೆ ಮಿಥ್ಯಾ (ಅಸತ್ಯ) ಭೂತಗಳೆಂದೂ, ಅವುಗಳ ಉಪಾಸನೆ ಯಿಂದ ಫಲವಿಲ್ಲವೆಂದೂ ಹೇಳುವ ಅದ್ವೈತ ವಾದವು ಶ್ರುತಿ ವಿರುದ್ಧವಾಗಿದೆ. ಶಿವಾ ಗಮಗಳಿಗೆ ಆಲಯ (ದೇವಾಲಯ) ಉತ್ಸವ (ರಥೋತ್ಸವ) ಪ್ರತಿಷ್ಠಾ (ದೇವತಾ ಪ್ರತಿಷ್ಠಾ) ಇವುಗಳಲ್ಲಿ ಮಾತ್ರ ಪ್ರಾಮಾಣ್ಯವನ್ನು ಹೇಳಬೇಕಲ್ಲದೆ, ಲಿಂಗಧಾರಣದಲ್ಲಿ ಪ್ರಾಮಾಣ್ಯವನ್ನು ಹೇಳಕೂಡದೆಂದು ಆಶಂಕಿಸಕೂಡದು. ಯಾಕೆಂದರೆ, ಗಾಯತ್ರೀ ಮೊದಲಾದ ಸರ್ವ ಮಂತ್ರಗಳಿಗೆ ಅವಶ್ಯವಾಗಿ ಬೇಕಾಗುವ ಅಂಗನ್ಯಾಸ, ಕರನ್ಯಾಸ, ಧ್ಯಾನ, ಮುದ್ರಾ, ಕುಂಡ, ಮಂಟಪ ಮೊದಲಾದುವುಗಳನ್ನು ಹೇಗೆ ಮಾಡಬೇಕೆಂಬ ಕ್ರಮವು ಕೇವಲ ಆಗಮಗಳಲ್ಲಿಯೇ ವಿಹಿತವಾಗಿರುತ್ತದೆ. ಇಂತಹ ಕ್ರಮವನ್ನು ವಿಧಿಸುವ ಆಗಮಗಳೇ ಅಪ್ರಮಾಣಗಳೆಂದು ಹೇಳಿದರೆ, ಆ ಎಲ್ಲ ಗಾಯತ್ರಾದಿ ಯಾಗ ಮಂತ್ರಗಳು ವ್ಯರ್ಥಗಳಾಗುವುದರಿಂದ, ಆ ಯಾಗ ಕರ್ಮಗಳೂ ವ್ಯರ್ಥಗಳಾಗಿ, ಹೋಗುವವು. ಅವು ವ್ಯರ್ಥಗಳಾದರೆ, ಅವುಗಳನ್ನು ಪ್ರತಿಪಾದಿಸುವ ವೇದಗಳೂ ವ್ಯರ್ಥಗಳಾಗಿ ಅಪ್ರಮಾಣಗಳೆನಿಸುವುವು. ಆದುದರಿಂದ ಆಗಮಗಳ ಎಲ್ಲ ಭಾಗ ಗಳಿಗೂ ವೇದಗಳಂತೆ ಪ್ರಾಮಾಣ್ಯವನ್ನು ಸ್ವೀಕರಿಸಿಯೇ ತೀರಬೇಕು. ಅಂದಮೇಲೆ ವೇದಾನುಕೂಲವಾಗಿ ಲಿಂಗಧಾರಣವನ್ನು ಹೇಳುವ ಆಗಮ ಭಾಗಕ್ಕೂ ಪ್ರಾಮಾಣ್ಯ

CC-0. Jangamwadi Math Collection. Digitized by eGangotri

ವನ್ನು ಒಪ್ಪಿಕೊಳ್ಳಲೇಬೇಕು. ಆದುದರಿಂದ ಲಿಂಗಧಾರಣ ರೂಪವಾದ ಶಾಂಭವ ದೀಕ್ಷಾ ಸಂಪನ್ನನೇ ಬ್ರಹ್ಮ ವಿದ್ಯಾಧಿಕಾರಿಯಲ್ಲದೆ ಮತ್ತೊಬ್ಬನಲ್ಲವೆನ್ನುವದು ನಿಶ್ಚಿ ವಾದವು. "ಯಸ್ಯೈತೇಽಷ್ಟಾ ಚತ್ವಾರಿಂಶತ್ಸಂಸ್ಕಾರಾಃ" ಇದು ಮೊದಲುಗೊಂಡು "ಬ್ರಹ್ಮಣಃ ಸಾಯುಜ್ಯಂ ಸಲೋಕತಾಂ (ಸಾಲೋಕ್ಯಂ) ಮಾಪ್ನೋತಿ" ಇದು ಅಂತ ವಾಗಿರುವ ಶ್ರುತಿಯಿಂದ ಗರ್ಭದಾನಾದಿ ಸಕಲ ಕರ್ಮಗಳೂ ದುರಿತವನ್ನು ನಾಶಗೊಳ್ಳಿ ಮುಕ್ತಿಗೆ ಸಾಧನಗಳಾಗುವವೆಂದು ವಿಧಿಸಲ್ಪಡುವದರಿಂದಲೂ, "ವಿದ್ಯಾಂಚಾ ವಿದ್ಯಾಂಚ ಯಸ್ತದ್ವೇದೋಭಯಂ ಸಹ" "ತೇನೈತಿ ಬ್ರಹ್ಮವಿತ್ಪುಣ್ಯ ಕೃತ್ತೈಜಸಶ್ಚ" "ಸವೇನಲಭ್ಯಸ್ತಪನಾಹೇಷ್ಯ ಆತ್ಮಾ ಸಮ್ಯಕ್ ಜ್ಞಾನೇನ ಬ್ರಹ್ಮಚರ್ಯಣಿ ನಿತ್ಯಂ" ಇತ್ಯಾದಿ ಶ್ರುತಿಗಳೂ ಸಹ ಜ್ಞಾನ-ಕರ್ಮಗಳೆರಡೂ ಮುಕ್ತಿ ಸಾಧನಗಳೆಂದು ಹೇಳಿರುವ ದರಿಂದಲೂ, ಧರ್ಮ ಜಿಜ್ಞಾಸಾನಂತರದಲ್ಲಿಯೇ ಬ್ರಹ್ಮ ಜಿಜ್ಞಾಸೆಯನ್ನು ಮಾಡ ಬೇಕೆಂದು ಹೇಳಬೇಕಲ್ಲದೆ, ಲಿಂಗಧಾರಣ ನಂತರದಲ್ಲಿ ಬ್ರಹ್ಮ ಜಿಜ್ಞಾಸೆಯನ್ನು ಮಾಡ ಬೇಕೆಂದು ಹೇಳಬಾರದು. ಹಾಗು "ತದ್ಯತೇಹ ಕರ್ಮಚಿತೋ ಲೋಕಃ ಕ್ಷೀಯತೇ ಏವ ಮೇಲಾ ಮುತ್ರ ಪುಣ್ಯಚಿತೊ ಲೋಕಃ ಕ್ಷೀಯತೆ" ಇತ್ಯಾದಿ ಶ್ರುತಿಗಳಿಂದ ಕರ್ಮ ಫಲಗಳು ಅನಿತ್ಯಗಳೆಂದೂ "ಪರಿಕ್ಷ್ಯಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇಮಾಯಾ ನಾಸ್ತ್ಯಕೃತಃ ಕೃತೇನ' ಇತ್ಯಾದಿ ಶ್ರುತಿಯಿಂದ ಹೇಳಲ್ಪಡುವ ಅನಿತ್ಯ ಗಳಾದ ಕರ್ಮಫಲಗಳನ್ನು ವೈರಾಗ್ಯವನ್ನು ಹೊಂದಬೇಕೆಂದು "ಶಾಂತೋದಾಂತಃ" ಇತ್ಯಾದಿ ಶ್ರುತಿಗಳಿಂದ ಹೇಳಲ್ಪಡುವ ಶಾಂತ್ಯಾದಿಗಳನ್ನು ಸಾಧಿಸಬೇಕೆಂದೂ, "ನಚ ಪುನರಾವರ್ತತೆ" ಇತ್ಯಾದಿ ಶ್ರುತಿಯಿಂದ ಮೋಕ್ಷವು ನಿತ್ಯವೆಂದು ತಿಳಿಯುವುದರಿಂದ ಆ ಮೋಕ್ಷದಲ್ಲಿ ಇಚ್ಛೆಯು ಹುಟ್ಟುವುದರಿಂದ ಸಹಜವಾಗಿ ಮುಮುಕ್ಷುತ್ವವನ್ನು ಹೊಂದುವನೆಂದೂ ಸಿದ್ಧವಾಗುವುದರಿಂದ, ಸಾಧನ ಚತುಷ್ಟ ಸಂಪತ್ಯನಂತರದಲ್ಲಿಯೇ ಬ್ರಹ್ಮ ಜಿಜ್ಞಾಸೆಯನ್ನು ಮಾಡಬೇಕಲ್ಲದೆ, ಲಿಂಗಧಾರಣಾನಂತರದಲ್ಲಿ ಬ್ರಹ್ಮ ಜಿಜ್ಞಾಸೆ ಯನ್ನು ಮಾಡಕೂಡದು. ಯಾಕೆಂದರೆ, "ನಾಸ್ತ್ಯಕೃತಃ ಕೃತೇನ" ಎಂಬ ಶ್ರುತಿ ಯಿಂದ ಮೋಕ್ಷವು ಕರ್ಮದಿಂದ ಲಭಿಸುವುದಿಲ್ಲವೆಂದು ಕಂಡುಬರುತ್ತದೆ. ಲಿಂಗ ಧಾರಣವೆಂಬುದೂ ಕೂಡ ಕರ್ಮವೇ ಆಗಿರುವುದರಿಂದ, ಆ ಲಿಂಗಧಾರಣ ಕರ್ಮದಿಂದ ಪ್ರಯೋಜನವಿಲ್ಲವಷ್ಟೆ; ಹೀಗೆ ಸರ್ವಥಾ ತಿಳಿಯಕೂಡದು. "ಸಾಸ್ತ್ಯಿ ಕೃತಃ ಕೃತೇನ" ಎಂಬ ಶ್ರುತಿಯಿಂದ ಪ್ರಾಕೃತ (ಪಶು) ಕರ್ಮಗಳು ಮೋಕ್ಷಸಾಧನಗಳಲ್ಲ ವೆಂದು ನಿಷೇಧಿಸಲ್ಪಡುವವಲ್ಲದೆ, ಅಪ್ರಾಕೃತ (ಪತಿ) ಕರ್ಮಗಳು ನಿಷೇಧಿಸಲ್ಪಡುವು ದಿಲ್ಲವೆಂದು ಹೇಳಲೇಬೇಕು. ಇಲ್ಲದಿದ್ದರೆ "ಅಮೃತಸ್ಯ ಜೀವಧಾರಣೋ ಭೂಯಾಸಂ" "ತಸ್ಯಾಭಿ ಧ್ಯಾನಾದ್ಯೋಜನಾತ್ತತ್ವ ಭಾವಾದ್ಭೂಯಶ್ಚಾಂತೆ ವಿಶ್ವಮಾಯಾ ನಿವೃತ್ತಿಃ" "ವೃತಮೇ ತಚ್ಛಾಂಭವಂ ತತ್ಸಾಮಾಚರೇ ನ್ಮುಮುಕ್ಷುನ್ ಪುನರ್ಭವಾಯ" "ಸರ್ವ ಲಿಂಗಂ ಸ್ಥಾಪಯತೀ ಪಾಣಿ ಮಂತ್ರಂ ಪವಿತ್ರಂ" ಇತ್ಯಾದಿ ತೈತ್ತಿರೀಯ ಶ್ವೇತಾಶ್ವತರಾದಿ ಶ್ರುತಿಗಳಿಗೆ ವಿರೋಧವೇ ಪ್ರಾಪ್ತವಾದೀತು. ಈ ಶ್ರುತಿಗಳು ಶಿವಲಿಂಗ

CC-0. Jangamwadi Math Collection. Digitized by eGangotri

ಧ್ಯಾನ, ಧಾರಣಾದಿ ಅಪ್ರಾಕೃತ ಕರ್ಮಗಳು ಮೋಕ್ಷಸಾಧನಗಳೆಂದು ಉಪದೇಶಿಸುತ್ತ ವಷ್ಟೆ? ಹಾಗಾದರೆ ಗರ್ಭದಾನಾದಿ ಸಕಲ ಪ್ರಾಕೃತ ಕರ್ಮಗಳೂ ಮೋಕ್ಷಸಾಧನ ಗಳೆಂದು ಹೇಳುವ ಶ್ರುತಿ, ಸ್ಮೃತಿ ವಾಕ್ಯಗಳಿಗೆ ಗತಿಯೇನು? ಹಾಗೂ ಸಾಧನ ಚತುಷ್ಟಯವು ಮೋಕ್ಷಸಾಧನವೆಂದು ಹೇಳುವ ಶ್ರುತಿಗಳಿಗೆ ಗತಿಯೇನು? ಅಂದರೆ ಆ ಶ್ರುತಿ, ಸ್ಮೃತಿ ವಾಕ್ಯಗಳು "ಅನ್ನಂ ಬ್ರಹ್ಮ" ಇತ್ಯಾದಿ ವಾಕ್ಯಗಳಂತೆ ಸ್ಥೂಲಾ ರುಂಧತೀ ನ್ಯಾಯದಂತೆಯೂ, ಸಮುಕ್ಷ ಜಲನ್ಯಾಯದಂತೆಯೂ ಶುಭ ಶೋಭನ ಕಾರ್ಯಗಳಲ್ಲಿ ಅರುಂಧತೀ ನಕ್ಷತ್ರದ ದರ್ಶನ ಮಾಡಿಸುವದಕ್ಕಾಗಿ ಮೊದಲು ಸೂಕ್ಷ್ಮ ವಾದ ಆ ಅರುಂಧತೀ ನಕ್ಷತ್ರವನ್ನು ತೋರಿಸುವುದಾಗುವುದಿಲ್ಲವೆಂದು ತಿಳಿದು, ಅದರ ಸಮೀಪದಲ್ಲಿರುವ ಸ್ಥೂಲ ನಕ್ಷತ್ರಕ್ಕೇನೇ ಅರುಂಧತೀ ನಕ್ಷತ್ರವೆಂದು ತೋರಿಸಿ, ಅದನ್ನು ಚೆನ್ನಾಗಿ ನೋಡಿದಮೇಲೆ ಅದನ್ನು ಬಿಡಿಸಿ, ಅತಿ ಸಮೀಪದಲ್ಲಿರುವ ಮತ್ತೊಂದಕ್ಕೇನೇ ಅರುಂಧತೀ ಎಂದು ತೋರಿಸುವರು. ಅದನ್ನೂ ಸಹ ಗ್ರಹಿಸಿದಮೇಲೆ ಆ ನಿಜವಾದ ಅರುಂಧತೀ ನಕ್ಷತ್ರವನ್ನೇ ತೋರಿಸಿಬಿಡುವರು. ಸಮುಕ್ಷ ಜಲನ್ಯಾಯದಂತೆಯೂ ಆ ಸಾಧನ ಚತುಷ್ಟಯ ಹಾಗೂ ಪ್ರಾಕೃತ ಕರ್ಮಗಳು ಪರಂಪರಾ ಮೋಕ್ಷಸಾಧನ ಗಳೆಂದು ಹೇಳುವ ವಾಕ್ಯಗಳಲ್ಲದೆ, ಸಾಕ್ಷಾತ್ ಮೋಕ್ಷಸಾಧನವೆಂದು ಹೇಳುವ ವಾಕ್ಯ ಗಳಲ್ಲವೆಂದು ಸ್ಪಷ್ಟವಾಗಿ ತಿಳಿಯಬೇಕು.

"ಸಂಧಿಗ್ಧೇ ವಾಕ್ಯಶೇಷಾತ್" (ಸಂದೇಹಾಸ್ಪದವಾದ ವಿಷಯವನ್ನು ನಿರ್ಣಯಿಸಬೇಕಾದರೆ ಮುಂದಿನ ವಾಕ್ಯಶೇಷದಿಂದ ನಿರ್ಣಯಿಸಬೇಕಾಗುತ್ತದೆ) ಎಂಬ ನ್ಯಾಯದಿಂದ "ಅಮೃತಸ್ಯ ದೇವಧಾರಣೋ ಭೂಯಾಸಂ" ಎಂಬ ವಾಕ್ಯದಲ್ಲಿ ನಿಸ್ಸಂಶಯವಾಗಿ ಲಿಂಗಧಾರಿಯೇ ಬ್ರಹ್ಮ ವಿದ್ಯಾಧಿಕಾರಿಯೆಂಬುವದು ಸ್ಪಷ್ಟವಾಗಿರುವು ದರಿಂದ, ಪೂರ್ವೋದಾಹೃತಗಳಾದ ಜ್ಞಾನ, ಕರ್ಮ ಸಮುಚ್ಚಯವನ್ನೂ ಹಾಗೂ ಸಾಧನ ಚತುಷ್ಟಯವನ್ನೂ ಪ್ರತಿಪಾದಿಸುವ ಶ್ರುತಿ ವಾಕ್ಯಗಳಿಗೆ ಸಂದೇಹಾಸ್ಪದ ಗಳೆಂದು ಹೇಳಬೇಕು. ಈ ವಿಷಯವು ಶಂಕರ ಸಂಹಿತೆಯಲ್ಲಿ ಹೇಳಲ್ಪಟ್ಟಿದೆ. "ನಿತ್ಯಾ ನಿತ್ಯ ವಿವೇಕ ವಾಸಿಡ ಪರತ್ರಾಪೇಕ್ಷತಾರ್ಥಾರತಿಃ" ಇಂತೆಂಬುದು ಮೊದಲುಗೊಂಡು ನತ್ಯಜ ಪ್ರಾಣ ಲಿಂಗಂ ತ್ವಂ ಯಾವಜ್ಜೀವಂ ಪ್ರತಿಜ್ಞಯಾ। ಪುನರ್ಭವೋನತೇ ವತ್ಸ ವಿದ್ಯತೇ ಮಾತೃಯೋನಿಷು'' ಇದು ಕಡೆಯಾದ ಶ್ಲೋಕದಿಂದ ಸಾಧನ ಚತುಷ್ಟಯ ಸಂಪದ್ವಿಶಿಷ್ಟನಾದವನಿಗೆ ಲಿಂಗಧಾರಣವನ್ನು ಹೇಳಿದ ನಂತರ ಬ್ರಹ್ಮಜ್ಞಾನೋಪದೇಶ ವಿಧಿಯು ತೋರಿಸಲ್ಪಟ್ಟಿದೆ. ಅಂದರೆ ಬ್ರಹ್ಮೋಪದೇಶಕ್ಕೆ ಅಧಿಕಾರಿಯು ಲಿಂಗಧಾರಣ ದೀಕ್ಷಾ ಸಂಪನ್ನನೆಂದೂ, ಆ ಲಿಂಗ ಧಾರಣಕ್ಕೆ ಅಧಿಕಾರಿಯು ಸಾಧನ ಚತುಷ್ಟಯ ಸಂಪನ್ನನೆಂದೂ ಸಿದ್ಧವಾಗುವುದರಿಂದ, ಸಾಧನ ಚತುಷ್ಟಯವು ಮುಕ್ತಿಗೆ ಪರಂಪರ ಸಾಧನವೆಂದೂ, ಲಿಂಗಧಾರಣವು ಸಾಕ್ಷಾತ್ಸಾಧನವೆಂದೂ ಸಿದ್ಧವಾಗುತ್ತದೆ. ಸಿದ್ಧಾಂತ ಶಿಖಾಮಣಿಯಲ್ಲಿ "ಪಿಂಡತಾಪಿಂಡ, ವಿಜ್ಞಾನಮ್" ಎಂದು ಆರಂಭಿಸಿ, "ಏತಾನಿ

CC-0. Jangamwadi Math Collection. Digitized by eGangotri

ಶಿವಭಕ್ತಸ್ಯ ಕರ್ತವ್ಯಾನಿ ಪ್ರಯತ್ನತಃ" ಹೀಗೆ ಅಂತವಾಗಿರುವ ಶ್ಲೋಕದಿಂದ ಶ್ರೀ ರೇಣುಕ ಭಗವತ್ಪಾದಾಚಾರ್ಯರೂ ಸಹ ಇದೇ ವಿಷಯವನ್ನೆ ಉಪದೇಶಮಾಡಿದ್ದಾರೆ. ಅಂದರೆ ಲಿಂಗಧಾರಣವೇ ಮುಖ್ಯ ಕಾರಣವೆಂಬುವಲ್ಲಿ, ಆಚಾರ್ಯರ ಅಭಿಪ್ರಾಯ ವ್ಯಕ್ತವಾಗುತ್ತದೆ. ಲಿಂಗಧಾರಣವೇ ಮುಖ್ಯ ಕಾರಣವೆಂದಮೇಲೆ ಅದೊಂದೇ ಮುಕ್ತಿಗೆ ಸಾಕು. ಉಪನಿಷತ್ ಶಾಸ್ತ್ರ ವಿಚಾರದಲ್ಲಿ ಕಷ್ಟವೇಕೆ ಪಡಬೇಕು ? ಎಂದು ಆಶಂಕಿಸಕೂಡದು. ಆತ್ಮಾವಾರೆ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" "ವೇದಾಂತ ಶ್ರವಣಂ ಕುರ್ಯಾತ್" "ಯೋಗಂ ಸಮಾರಭೇತ್" ಇತ್ಯಾದಿ ವಿಧಿವಾಕ್ಯಗಳೆನಿಸುವ ಪರಮೇಶ್ವರಾಜ್ಞಾ ಪಾಲನೆಯನ್ನು ಅವಶ್ಯವಾಗಿ ಮಾಡಬೇಕಾಗಿರುವುದರಿಂದಲೂ, ಮಾಯಾಪಾಶ ವಿಮುಕ್ತರಾದವರೂ ಸಹ ತಮ್ಮ ಪ್ರಾರಬ್ಧ ಕರ್ಮದ ನಾಶವಾಗುವ ವರೆಗೂ, ಪರಮೇಶ್ವರನ ಆಜ್ಞಾ ಪಾಲನವನ್ನು ಮಾಡಿರುವುದರಿಂದ ಎಲ್ಲ ಮುಮುಕ್ಷುಗಳೂ ವೇದಾಂತಶಾಸ್ತ್ರ ಶ್ರವಣ (ವಿಚಾರ) ವನ್ನು ಮಾಡುತ್ತಲೇ ಇರಬೇಕೆಂದು ಸಿದ್ಧವಾಗುತ್ತದೆ. ಲಿಂಗಧಾರಣ ದೀಕ್ಷಾ ಸಂಪನ್ನನು ವೇದಾಂತ ಶಾಸ್ತ್ರ ವಿಚಾರವನ್ನು ಮಾಡದೆ ಬಿಟ್ಟು ಕೊಟ್ಟರೆ, ಲಿಂಗಾಂಗ ಸಾಮರಸ್ಯದ ಧೃಢವಾದ ಜ್ಞಾನವಾಗದೇ ಹೋಗುವುದರಿಂದ ಪುನಃ ಕಾಮ-ಕ್ರೋಧಾದಿಗಳು ಅಂತಃಕರಣದಲ್ಲಿ ಪ್ರವೇಶಮಾಡಲು ಅವಕಾಶವಾಗುವದು. ಆದುದರಿಂದಲೇ "ಆ ಸುಪ್ತೇರಾ ಮೃತೇಃ ಕಾಲಂ ನ ಯೇದ್ವೇದಾಂತ ಚಿಂತಯಾ। ದದ್ಯಾನ್ನಾವಸರಂ ಕಿಂಚಿತ್ಕಾಮಾದೀನಾಯ ನಾಗಪಿ" ತನಗೆ ನಿದ್ರೆ ಬರುವವರೆಗೂ, ಪುತ್ತು ಪುರಾಣವಾಗುವವರೆಗೂ ವೇದಾಂತ ಚಿಂತನದಲ್ಲಿಯೇ ಕಾಲವನ್ನು ಕಳೆಯಬೇಕಲ್ಲದೆ, ಕಾಮಾದಿಗಳಿಗೆ ಅವಕಾಶವನ್ನೇ ಕೊಡಲಾಗದೆಂದು ಶ್ರುತಿಯು ಹೇಳುತ್ತದೆ-

(ಕರಣ ರೂಪದಿಂದ ಸ್ವತಂತ್ರವಾದ ಬೇರೆ ವಿಧಿಯಿಂದ ರಹಿತಗಳಾದ ಸೌತ್ರಾಮಣಿ, ಬೃಹಸ್ಪತಿ, ಸವನಗಳು ಅಗ್ನಿ ಚಯನ ವಾಜಪೇಯಂಗಳಿಗೆ ಅಂಗಗಳಾಗಿರುವುದರಿಂದಲೇ, ಈ ಅಗ್ನಿ ಚಯನ ವಾಜಪೇಯೋಭಯ ವಿಧಿ ಬಲದಿಂದ ಸೌತ್ರಾಮಣಿ, ಬೃಹಸ್ಪತಿ ಸವನ (ಯಾಗ) ಉಭಯ ಸಿದ್ಧಿಯಂತೆ ಬ್ರಹ್ಮಜಿಜ್ಞಾಸಾ ಲಿಂಗಧಾರಣಗಳಿಗೆ ವಿರೋಧವಿಲ್ಲ.) ಜ್ಯೋತಿಷ್ಟೋಮಾದಿ ಯಜ್ಞಗಳು ಕರ್ಮಗಳಾಗಿರುವಂತೆ ಲಿಂಗಧಾರಣವೂ ಕೂಡ ಕರ್ಮವಾಗಿರುವುದರಿಂದ, ಜ್ಯೋತಿಷ್ಟೋಮಾದಿ ಕರ್ಮಗಳಿಗೆ ಪರಂಪರೆಯಿಂದ ಮುಕ್ತಿ ಕಾರಣತ್ವವನ್ನು ಹೇಳಕೂಡದು. ಯಾಕೆಂದರೆ ಪೂರ್ವದಲ್ಲಿ ಉದಾಹರಿಸಿದ "ಅಮೃತಸ್ಯ ದೇವ ಧಾರಣೋ ಭೂಯಾಸಂ" ಇದು ಮೊದಲಾದ ಮುಕ್ತಿಗೆ ಲಿಂಗಧಾರಣವು ಸಾಕ್ಷಾತ್ಕಾರಣವೆಂದು ಹೇಳುವ ಅನೇಕ ಪ್ರತ್ಯಕ್ಷ ಶ್ರುತಿಗಳಿಗೆ ವಿರೋಧವಾಗುವುದಷ್ಟೆ ? ಕರ್ಮಗಳೆನಿಸುವವೆಲ್ಲವೂ ಮುಕ್ತಿಗೆ ಸಾಕ್ಷಾತ್ಕಾರಣಗಳೇ ಅಲ್ಲ; ಕಿಂತು ಪರಂಪರಾ ಕಾರಣಗಳೆಂದು ಹೇಳಿದರೆ ಶ್ರವಣ, ಮನನ, ನಿದಿಧ್ಯಾಸನಗಳೂ ಕೂಡ ಕರ್ಮಗಳೆನಿಸುವದರಿಂದ ಇವುಗಳಿಗೂ ಸಹ ಸಾಕ್ಷಾತ್ಕಾರಣಗಳೆಂದು

CC-0. Jangamwadi Math Collection. Digitized by eGangotri

ಹೇಳದೆ, ಪರಂಪರಾ ಕಾರಣಗಳೆಂದು ಹೇಳಬೇಕಾಗುವುದು. ಹೀಗೆ ಹೇಳಿದರೆ ಮಾಯಾ ಪಾಶ ನಿವೃತ್ತಿಯೆಂಬ ಮುಕ್ತಿಯಲ್ಲಿ ಮುಖ್ಯ (ಸಾಕ್ಷಾತ್) ಕಾರಣವಾವುದೂ ಇಲ್ಲದಿರುವುದರಿಂದ, ಬ್ರಹ್ಮ ಜಿಜ್ಞಾಸಾ ಶಾಸ್ತ್ರವೇ ವ್ಯರ್ಥವಾಗಿ ಹೋಗುವದು. ಆ ಶಾಸ್ತ್ರವಾದರೂ ಯಾರಿಗೆ ಬೇಕು? ಅದೂ ವ್ಯರ್ಥವಾಗಲಿ ಎಂದು ನೀನೆನ್ನುವದಾದರೆ ಮೂಲೋಚ್ಛೇದಿಯಾದ ನಿನ್ನ ಪಾಂಡಿತ್ಯಾತಿಶಯಕ್ಕೆ ಧಿಃಕ್ಕಾರವನ್ನೀಯಬೇಕಾಗುತ್ತದೆ. ಆದುದರಿಂದ ವ್ರೀಹಿ ಪ್ರೋಕ್ಷಣವೆಂಬ ಸಂಸ್ಕಾರವು ದರ್ಶಪೂರ್ಣಮಾಸ ಯಜ್ಞವೆಂದು ಅಪೂರ್ವವನ್ನು ಹುಟ್ಟಿಸುವುದರಿಂದ, ಅದು ಸ್ವರ್ಗಕ್ಕೆ ಪರಂಪರಾ ಕಾರಣವಾಗುವಂತೆ, ಪುರಾಕೃತಗಳಾದ ಈಶ್ವರಾರ್ಪಿತಗಳಾದ ಜ್ಯೋತಿಷ್ಟೋಮಾದಿಗಳು ಹಾಗು ಸಾಧನ ಚತುಷ್ಟಯವೂ ಸಹ ಶಿವಧ್ಯಾನ ಲಿಂಗಧಾರಣಗಳಿಗೆ ಪ್ರಯೋಜಕಗಳಾಗುವುದರಿಂದ ಮೋಕ್ಷಕ್ಕೆ ಪರಂಪರಾ ಕಾರಣಗಳಾಗುವವು. ಮೋಕ್ಷಕ್ಕೆ ಮುಖ್ಯ ಕಾರಣವು ಲಿಂಗಧಾರಣವಾಗುವುದು. ಅಂದರೆ ವ್ರೀಹಿ (ನೆಲ್ಲು) ಗಳಿಗೆ ಪ್ರೋಕ್ಷಣ ಸಂಸ್ಕಾರವಿಲ್ಲದಿದ್ದರೆ, ಮುಂದೆ ದರ್ಶಪೂರ್ಣಮಾಸ ಯಜ್ಞವೇ ಸಂಭವಿಸುವುದಿಲ್ಲ. ಈ ದರ್ಶಪೂರ್ಣ ಮಾಸವಿಲ್ಲದಿದ್ದರೆ ಸ್ವರ್ಗವೇ ಇಲ್ಲ. ಸ್ವರ್ಗ ಸುಖಕ್ಕೆ ದರ್ಶಪೂರ್ಣ ಮಾಸವು ಮುಖ್ಯ ಕಾರಣವು. ಇದಕ್ಕೆ ವ್ರೀಹಿ ಪ್ರೋಕ್ಷಣವು ಬೇಕು. ಇದರಂತೆ ಶಿವಾರ್ಪಿತಗಳಾದ ಜ್ಯೋತಿಷ್ಟೋಮಾದಿ ಅಶ್ವಮೇಧಾಂತ ಯಜ್ಞಗಳೂ ಹಾಗು ಸಾಧನ ಚತುಷ್ಟಯವೂ ಇಲ್ಲದಿದ್ದರೆ ಮೋಕ್ಷವು ಇಲ್ಲ. ಮೋಕ್ಷಕ್ಕೆ ಮುಖ್ಯ ಕಾರಣವು ಶಿವಲಿಂಗ ಧಾರಣವೂ, ಶಿವಜ್ಞಾನವೂ ಇವುಗಳಿಗೆ ಕಾರಣವು ಶಿವಾರ್ಪಿತಗಳಾದ ಜ್ಯೋತಿಷ್ಟೋಮಾದಿಗಳೂ ಸಾಧನ ಚತುಷ್ಟಯವು.

ಲಿಂಗಧಾರಣವು ನಿತ್ಯಕರ್ಮವೆನಿಸಲಿ, ಆದರೆ ಸೂತ್ರ ವಿಹಿತಗಳಾದ ಮೂರು ವಿಧಿಗಳಲ್ಲಿ ಯಾವ ವಿಧಿಯನ್ನು ಆಶ್ರಯಿಸುತ್ತೀರಿ? ಅಂತರಧಾರಣ ವಿಷಯದಲ್ಲಿ ಅಪೂರ್ವ ವಿಧಿಯನ್ನೋ? ನಿಯಮ ವಿಧಿಯನ್ನೋ? ಪರಿಸಂಖ್ಯಾ ವಿಧಿಯನ್ನೋ ಆಶ್ರಯಿಸಲೇ ಬೇಕಲ್ಲವೆ? ''ಪವಿತ್ರಂತೆ ವಿತತ ಬ್ರಹ್ಮಣಸ್ಪತೆ'' ಇತ್ಯಾದಿ ಬಹು ಶ್ರುತಿ ವಿಹಿತವಾಗಿರುವದರಿಂದ ಲಿಂಗಧಾರಣವು ''ವ್ರೀಹೀನ್ ಪ್ರೋಕ್ಷತಿ'' (ವ್ರೀಹಿಗಳಿಗೆ ಪ್ರೋಕ್ಷಣ ಮಾಡುತ್ತಾನೆ) ಎಂಬಲ್ಲಿ ವ್ರೀಹಿ ಪ್ರೋಕ್ಷಣವು ಅಪೂರ್ವ ವಿಧಿಯಿಂದ ಸಿದ್ಧವಾಗಿರುವಂತೆ, ಅಪೂರ್ವ ವಿಧಿಯಿಂದ ಸಿದ್ಧವಾಗುವುದಿಲ್ಲ. ಹಾಗೂ ''ವ್ರೀಹೀನ ವಹಂತಿ'' (ಬತ್ತಗಳನ್ನು ಕುಟ್ಟುತ್ತಾನೆ) ಎಂಬಲ್ಲಿ ನಖವಿದಲನ ಕರ್ಮವನ್ನು ವ್ಯಾವೃತ್ತಿಗೊಳಿಸಿ ಬತ್ತಗಳಿಗೆ ಅವಹನನ (ಕುಟ್ಟೋಣ) ವನ್ನು ವಿಧಿಸುವದರಿಂದ ನಿಯಮ ವಿಧಿಯು ಇರುವಂತೆ ಲಿಂಗಧಾರಣದಲ್ಲಿ ನಿಯಮ ವಿಧಿಯೂ ಇಲ್ಲ. ಯಾಕೆಂದರೆ ಶಿವಲಿಂಗೇತರ ಶಿಖಾ, ಯಜ್ಞೋಪವೀತ, ಭಸ್ಮಧಾರಣಗಳೂ ವಿಹಿತಗಳಾಗಿರುವುದರಿಂದ ಇವುಗಳನ್ನು ವ್ಯಾವೃತ್ತಗೊಳಿಸಿ ಲಿಂಗಧಾರಣ ಕರ್ಮವನ್ನೇ ವಿಧಿಸುವುದಿಲ್ಲವಷ್ಟೆ? ಲಿಂಗಧಾರಣವು ಕರ್ತವ್ಯವೋ, ಕರ್ತವ್ಯವಲ್ಲವೊ ಎಂದು ಒಂದೇ ಕಾಲದಲ್ಲಿ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

JAGADGURU ... SIMHASAN JNANAMANDIR
LIBRARY
Jangamawadi Math, Varanasi
Acc. No. ....4896..........

ಪ್ರಾಪ್ತಿಯಿಲ್ಲದಿರುವದರಿಂದ "ಪಂಚ ಪಂಚನಖಾ ಭಾಕ್ಷ್ಯಾಃ" (ಪಂಚ ನಖಗಳುಳ್ಳ ಮೃಗಗಳನ್ನು ಭಕ್ಷಿಸಬೇಕು.) ಎಂಬಲ್ಲಿ ಪರಿಸಂಖ್ಯಾ ವಿಧಿಯನ್ನು ಹೇಳುವಂತೆ ಲಿಂಗ ಧಾರಣದಲ್ಲಿ ಪರಿಸಂಖ್ಯಾ ವಿಧಿಯನ್ನು ಹೇಳಲಿಕ್ಕೆ ಬರುವದಿಲ್ಲ. ಆದ್ದರಿಂದ ಲಿಂಗ ಧಾರಣವು ವೈದಿಕವಲ್ಲವೆಂದು ಆಶಂಕಿಸಕೂಡದು. ಮೇಲೆ ಹೇಳಿದ ಮೂರು ವಿಧಿ ಗಳಿಂದಲೂ ಲಿಂಗಧಾರಣವು ಸಿದ್ಧಿಸುತ್ತದೆ. ಅದು ಹೇಗೆಂದರೆ "ಅಮೃತಸ್ಯ ದೇವ ಧಾರಣೋಭೂಯಾಸಂ" ಎಂಬಲ್ಲಿ ಅಪೂರ್ವ ವಿಧಿಯುಂಟು. ಲಿಂಗಧಾರಣವು "ಸರ್ವ ಲಿಂಗಂಸ್ಥಾಪಯತಿ " ಇತ್ಯಾದಿ ಬಹು ಶೃತಿಗಳಿಂದ ಪ್ರಾಪ್ತವಾಗಿರುವದರಿಂದ ಲಿಂಗಧಾರಣ ವಿಷಯದಲ್ಲಿ ಅಪೂರ್ವ ವಿಧಿಯನ್ನು ಹೇಳಲವಕಾಶವಿಲ್ಲವೆಂದು ಆಶಂ ಕಿಸಕೂಡದು."ಅಮೃತಸ್ಯದೇವ ಧಾರಣೋ ಭೂಯಾಸಂ" "ಸರ್ವಲಿಂಗಂ ಸ್ಥಾಪಯತಿ" ಎಂಬ ವಾಕ್ಯಗಳಿಗೆ ಉಪಜವೋಪ್ಯಕ ನ್ಯಾಯವಿರುವದರಿಂದ ದೋಷವಿಲ್ಲ ಹೇಗೆಂದರೆ "ಸರ್ವಲಿಂಗಂ ಸ್ಥಾಪಯತಿ" ಎಂಬ ವಾಕ್ಯದಲ್ಲಿ ಲಿಂಗಧಾರಣದಿಂದಾಗತಕ್ಕ ಫಲವನ್ನು ಹೇಳುವ ಶಬ್ದವೂ ಹಾಗೂ ಧಾರಣ ಶಬ್ದವೂ ಇಲ್ಲದಿರುವದರಿಂದ ಈ ವಾಕ್ಯವು ಉಪ ಜೀವಿಯೆನಿಸುವದು. "ಅಂಮೃತಸ್ಯದೇವ ಧಾರಣೋ ಭೂಯಾಸಂ" ಎಂಬ ವಾಕ್ಯದಲ್ಲಿ ಮೋಕ್ಷಫಲವಾಚಕವಾದ ಅಮೃತ ಶಬ್ದವೂ ಹಾಗೂ ಧಾರಣಶಬ್ದವೂ ಇರುವದರಿಂದ ಈ ವಾಕ್ಯವು ಉಪಜೀವಕವೆನಿಸುವದು. ಲಿಂಗಧಾರಣ ಕರ್ಮದಲ್ಲಿ ತಾಂತ್ರಿಕ ತಪ್ತ ಲಿಂಗ, ಶೂಲ, ಡಮರುಗ ಹಾಗೂ ಶಂಖ ಚಕ್ರಾಂಕಗಳನ್ನು ನಿಷೇಧಿಸಿ ಶ್ರೌತ, ಭಸ್ಮ, ರುದ್ರಾಕ್ಷ, ಶಿವಲಿಂಗ ಇವುಗಳ ಧಾರಣವನ್ನು ಸ್ವೀಕರಿಸಿರುವದರಿಂದ ನಿಯಮ ವಿಧಿಯೂ ಸಿದ್ಧವಾಗುತ್ತದೆ. "ಹರಿ ಕೇಶಾಯೋಪ ವೀತನೇ ರುದ್ರಶ್ರಿಖಾ" ಇತ್ಯಾದಿಶೃತಿಗಳಲ್ಲಿ ಭಸ್ಮರುದ್ರಾಕ್ಷಾಗಳಂತೆ ಶಿಖಾ ಸೂತ್ರಗಳು ಶಿವನಿಗೆ ಹೇಳಿರುವದ ರಿಂದ ಇವುಗಳೂ ಸಹ ಶಿವಲಾಂಛನಗಳೆಂದು ಸಿದ್ಧವಾಗುವದರಿಂದ ಸ್ವೀಕರಿಸಲು ಯೋಗ್ಯಗಳಾಗಿವೆ.

"ಯಶ್ಛಂದಸಾಂ"ಇತ್ಯಾದಿ ಲಿಂಗಧಾರಣ ವಿಧಾಯಕ ಶೃತಿಗಳಿಗೆ ಪರಮೇಶ್ವರನ ಅನುಗ್ರಹ ಬಲದಿಂದ ಸರ್ವ ವೇದಾರ್ಥವನ್ನು ಬಲ್ಲಂಥ ಸರ್ವಜ್ಞ, ವ್ಯಾಸ, ದೂರ್ವಾಸ, ರೇಣುಕ, ಶ್ವೇತ, ಉಪಮನ್ಯು, ದಧೀಚಿ, ಅಗಸ್ತ್ಯ ಮೊದಲಾದ ಪೂರ್ವಾಚಾರ್ಯರು ಲಿಂಗಧಾರಣ ಪರವಾಗಿ ವ್ಯಾಖ್ಯಾನ ಮಾಡಿರುವುದರಿಂದ ಲಿಂಗಧಾರಣ ಪರವಾದ ಅರ್ಥ ವನ್ನು ಮಾಡುವುದೇ ಉತ್ತಮ ಮಾರ್ಗವು. ನಾವುಗಳಾದರೂ ಶೃತಿ, ಯುಕ್ತಿ, ಅನುಭವ ಇವುಗಳ ಅನುಸಾರವಾಗಿ ವಾಕ್ಯಾರ್ಥವನ್ನು ಹೇಳುವೆವಲ್ಲದೇ ಬೌದ್ಧಾದಿ ಗಳಂತೆ ಕೇವಲ ಯುಕ್ತಿಗನುಸಾರವಾಗಿ ವಾಕ್ಯಾರ್ಥವನ್ನು ಅಪಲಪಿಸುವವರಲ್ಲ. ಇಲ್ಲಿಯವರೆಗೆ ಮೋಕ್ಷಕ್ಕೆ ಲಿಂಗಧಾರಣವು ಸಾಕ್ಷಾತ್ಕಾರಣವೆಂದು ಹೇಳಿ ಈಗ ಭಾಷ್ಯ ಕಾರನು ಅಥಶಬ್ದಾರ್ಥವನ್ನು ವಿಶದೀಕರಿಸುತ್ತಾನೆ. ವೇದಗಳೂ ಆಗಮಗಳೂ, ದ್ವೈತ ಅದ್ವೈತಗಳನ್ನು ಪ್ರತಿಪಾದಿಸತಕ್ಕವುಗಳಾದುದರಿಂದ ಉಭಯ ವೇ

CC-0. Jangamwadi Math Collection. Digitized by eGangotri

ದಾಂತಗಳೆನಿಸುವ ಉಪನಿಷತ್ತುಗಳಿಂದ ಹಾಗೂ ಆಗಮಗಳಿಂದ ಪ್ರತಿಪಾದಿಸಲ್ಪಡು
ದಾಗಿಯೂ, ಭಕ್ತಿಕಾಂಡ, ಜ್ಞಾನಕಾಂಡ ಕ್ರಿಯಾಕಾಂಡಗಳಲ್ಲಿ ವಿಧಿಸಲ್ಪಡುವದಾ
ಯೂ, ಸ್ಥೂಲ ಸೂಕ್ಷ್ಮ ಚಿದ ಚಿತ್ಪ್ರಪಂಚಗಳನ್ನು ಪ್ರಕಾಶಪಡಿಸುವ ಷಟ್‌ಸ್ಥಲ ಪ
ಶಿವ ಬ್ರಹ್ಮ ಸಾಕ್ಷಾತ್ಕಾರಕ್ಕೆ ಕಾರಣೀಭೂತವಾಗಿಯೂ, ಶಿವಾರ್ಪಣ ಮಾಡಿ
ಬಹುಜನ್ಮಗಳಲ್ಲಿ ಅನುಷ್ಠಿಸಲ್ಪಟ್ಟ ಯಜನ, ಯಾಜನ, ತಪಸ್ಸು, ಧ್ಯಾನ ಮೊದಲಾ
ಅನೇಕ ಪುಣ್ಯಕರ್ಮಗಳ ಫಲ (ವನ್ನುಂಟು ಮಾಡುವದಾಗಿಯೂ) ರೂಪವಾಗಿಯೂ,
ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳೆಂಬ ಮೂರು ಮಲಗಳನ್ನು ನಾಶಮಾಡುವದಾ
ಗಿಯೂ. ಕಾರುಣ್ಯ, ಕಲ್ಯಾಣ, ಕೈವಲ್ಯಗಳೆಂಬ ವಿಭೂತಿ ತ್ರಯವನ್ನುಂಟು ಮಾಡು
ವದಾಗಿಯೂ, ಅಷ್ಟಾವರಣ, ಪಂಚಾಚಾರ ಸದ್ಗುರು ಕರುಣಾ ಕಟಾಕ್ಷ ಇವುಗಳಿಂ
ಸಾಧ್ಯವಾದುದಾಗಿಯೂ, ಶಕ್ತಿ ಪಾತಾದಿಗಳಿಂದ ವಿಶಿಷ್ಟವಾದುದಾಗಿಯೂ. ಲಿಂ
ಧಾರಣಾತ್ಮಕವಾಗಿಯೂ ಇರುವ ಯಾವ ಪಾಶುಪತ ದೀಕ್ಷೆಯಿರುವದೋ ಅಂತಹ
ದೀಕ್ಷೆಯು ಅನಂತರ್ಯವೆಂಬುವದೇ "ಅಥ" ಶಬ್ದದ ಅರ್ಥವೆಂದು ನಿರ್ಣಯಿಸಲ್ಪಡುತ್ತದೆ
ಇಲ್ಲಿಯ ವರೆಗೆ ಅಥ ಶಬ್ದಾರ್ಥವನ್ನು ನಿರ್ಣಯಿಸಿ ಇನ್ನು ಭಾಷ್ಯಕಾರರು "ಅತಃ" ಎಂ
ಶಬ್ದಾರ್ಥವನ್ನು ನಿರೂಪಿಸಲುದ್ಯುಕ್ತರಾಗಿರುವರು. "ಅಥಾತೋಬ್ರಹ್ಮಜಿಜ್ಞಾಸಾ"
ಎಂಬ ಸೂತ್ರದಲ್ಲಿರುವ ಅಥ ಶಬ್ದದ ಅರ್ಥವೆನಿಸುವ ಲಿಂಗಧಾರಣ ದೀಕ್ಷಾನಂತರದಲ್ಲಿ
ಬ್ರಹ್ಮ ವಿಚಾರವೆಂದು ಹೇಳುವದರಿಂದಲೇ ಮೋಕ್ಷಕ್ಕೆ ಲಿಂಗಧಾರಣವು ಹೇತುವಾಗಿ
ರುವದೆಂದು ಸಿದ್ಧಿಸುತ್ತಿರಲು ಪುನಃ "ಅತಃ" ಎಂಬ ಶಬ್ದದಿಂದ ಆ ಹೇತ್ವರ್ಥವನ್ನು
ಪ್ರಯೋಜನವಿಲ್ಲವೆಂದೂ ಆಶಂಕಿಸಕೂಡದು. ಯಾಕೆಂದರೆ "ಅಪಾಮ ಸೋಮಮ
ಮೃತಾ ಅಭೂಮ" ಇತ್ಯಾದಿ ಶ್ರುತಿಗಳಿಂದ ಪ್ರಾಕೃತ (ಪಶು) ಕರ್ಮ ಫಲವೂ ಕೂಡ
ನಿತ್ಯವೆಂದು ಕಂಡುಬರುತ್ತದೆ. ಹಾಗು "ಓಂ ಇತ್ಯೇಕಾಕ್ಷರಂ ಬ್ರಹ್ಮ" "ಅಸಾವಾ
ದಿತ್ಯೋ ಬ್ರಹ್ಮ" "ನಾರಾಯಣ ಪರಂಬ್ರಹ್ಮ" ಅನ್ನಂ ಬ್ರಹ್ಮ" ಇತ್ಯಾದಿ ಶ್ರುತಿ ವಾಕ್ಯ
ಗಳಿಂದ ನಾನಾ ದೇವತೆಗಳ ಉಪಾಸನೆಯು ಕಂಡು ಬರುತ್ತದೆ. ಅಂದಮೇಲೆ ಪ
ಶಿವೇಷ್ಟ ಲಿಂಗಧಾರಣದಿಂದಲೇ ನಿತ್ಯವಾದ ಮೋಕ್ಷವನ್ನು ಹೇಗೆ ಹೇಳುವದು.? ಎಂ
ಆಕ್ಷೇಪದ ನಿರಸನವನ್ನು ಸ್ಪಷ್ಟಗೊಳಿಸುವದಕ್ಕೋಸ್ಕರ "ಅತಃ" ಹೇತ್ವರ್ಥ ಬೋಧ
ವಾದ ಶಬ್ದವು ನಿರ್ದೇಶಿಸಲ್ಪಟ್ಟಿರುವದು: "ಪುಣ್ಯಚಿತೋಲೋಕಃ ಕ್ಷೀಯತೆ" ಇತ್ಯಾ
ಶ್ರುತಿಯಿಂದ ಪ್ರಾಕೃತ ಕರ್ಮಫಲವು ಅನಿತ್ಯವೆಂದು ಸಿದ್ಧವಾಗುವದು. ಹಾಗೂ ಕ
ಪ್ರಕರಣ ಪಠಿತವಾದ "ಅಪಾಮ ಸೋಮಮಮೃತಾ ಅಭೂಮ" ಎಂಬ ಶ್ರು
ವಾಕ್ಯಕ್ಕಿಂತಲೂ ಬ್ರಹ್ಮಪ್ರಕರಣ ಪಠಿತವಾದ ಅಮೃತಸ್ಯ ದೇವ ಧಾರಣೋ ಭೂ
ಯಾಸಂ" ಎಂಬ ಶ್ರುತಿವಾಕ್ಯವು ಪ್ರಬಲವಾಗಿರುವದು. ಆದುದರಿಂದ ಆ ಕರ್ಮ
ಪ್ರಕರಣ ಪಠಿತವಾದ "ಅಪಾಮ ಸೋಮಮಮೃತಾ ಅಭೂಮ" ಎಂಬ ವಾಕ್ಯ
ದುರ್ಬಲವಾಗಿರುವದರಿಂದ ಬಾಧಿತವಾಗುತ್ತದೆ ಹಾಗಾದರೆ ಸೋಮ ಯಾಗದಲ್ಲಿ
ಸೋಮ ರಸವನ್ನು ಕುಡಿದೆವು ಅಮೃತರಾದೆವು ಎಂದು ಹೇಳುವ ಶ್ರುತಿ ವಾಕ್ಯದಲ್ಲಿರು

CC-0. Jangamwadi Math Collection. Digitized by eGangotri

ಅಮೃತ ಪದಕ್ಕೆ ಗತಿಯೇನು? ಅಂದರೆ “ ಆಭೂತ ಸಂಪ್ಲವಂ ಸ್ಥಾನ ಮಮೃತತ್ವಂ ಭಾವ್ಯತೆ ” (ಭಾಷ್ಯತೆ) ಎಂಬ ಸ್ಮೃತಿ ವಾಕ್ಯದಂತೆ ಪ್ರಾಕೃತ್ಯ ಕರ್ಮವೆನಿಸುವ ಸೋಮ ಯಾಗವನ್ನು ಮಾಡಿದವನು ಚಿರಕಾಲ ಸ್ವರ್ಗ ಸುಖವನ್ನು ಅನುಭವಿಸಿ ಪುನಃ ಮರ್ತ್ಯ ಲೋಕದಲ್ಲಿ ಹುಟ್ಟುವನೆಂಬುವಲ್ಲಿಯೇ ಆ ಅಮೃತ ಪದದಿಂದ ಕೂಡಿದ ರಾಸ್ಯದ ತಾತ್ಪರ್ಯವು. ಹೀಗೆ ಆ ವಾಕ್ಯದ ತಾತ್ಪರ್ಯವನ್ನು ಹೇಳದಿದ್ದರೆ “ ಪುಣ್ಯ ಚಿತೋ ಲೋಕಃ ಕ್ಷೀಯತೆ” ಎಂಬ ಪಾಕೃತ ಕರ್ಮ ಫಲಕ್ಕೆ ಅನಿತ್ಯತವನ್ನು ಹೇಳುವ ವಾಕ್ಯ ವೇ ಅ ಪ್ರಮಾಣವಾಗಬೇಕಾದೀತು? ಆ ಪ್ರಾಕೃತ ಲಿಂಗ ಧಾರಣ ಕರ್ಮಕ್ಕೆ ಅನಿತ್ಯ ಫಲವನ್ನು ವಿಧಿಸುವ ಯಾವ ಬಾಧಕ ವಾಕ್ಯವೂ ಇಲ್ಲದಿರುವದರಿಂದಲೂ ನಿತ್ಯಮೋಕ್ಷ ಫಲವನ್ನು ವಿಧಿಸುವ “ ಅಮೃತಸ್ಯ ದೇವ ಧಾರಣೋ ಭೂಯಾಸಂ ” ಇತ್ಯಾದ್ಯನೇಕ ವಾಕ್ಯಗಳಿರುವದರಿಂದಲೂ, ಲಿಂಗಧಾರಣ ಕರ್ಮ ಫಲವು ನಿತ್ಯ ಮೋಕ್ಷವೆಂದು ಸಿದ್ಧ ವಾಗುತ್ತದೆ. ಶಿವೇತರ ನಾನಾ ದೇವತೋಪಾಸನೆಯಿಂದಲೂ ಸತ್ಯವಾದ ಮೋಕ್ಷ ಫಲವು ಲಭಿಸುವದಿಲ್ಲವೆಂಬುವಲ್ಲಿ “ ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯ ತ್ಪರಿತ್ಯಜ್ಯ ”

ಭಾ :— “ ಏಕ ಏವ ರುದ್ರೋನ ದ್ವಿತೀಯಾಯತಸ್ಥುಃ ಅಸಂಖ್ಯಾತ ಸ್ಸಹ ಸ್ರಾಣಿ ಸ್ಮರ್ಯತೇ ನಚ ದೃಶ್ಯತೆ ” “ ತ್ವಂ ದೇವಾನಾಂ ಬ್ರಾಹ್ಮಣಾ ನಾಮಾಧಿಪತಿ ರ್ವಿಷ್ಣುಃ ಕ್ಷತ್ರಿಯಾಣ ಮಧಿಪತಿಃ । ಬ್ರಾಹ್ಮಣಾನಾಂ [ಬ್ರಾಹಣೋವೈ] ಬ್ರಾಹ್ಮಣ್ವೆ ರಾಶ್ರಯತ ” ಇತ್ಯಾದಿ ಶೃತಿಗಳು ಪ್ರಮಾಣಗಳಾಗಿವೆ. ಹಾಗೂ ಬ್ರಾಹ್ಮಣರಿಗೆ ಶಿವೋಪಾಸನೆಯನ್ನೆ ವಿಧಿಸುತ್ತಾನೆ. ಇದಲ್ಲದೆ “ ಯೋ ವೈಸ್ವಾಂ ದೇವತಾಮತಿಯ ಜತೇ ಪ್ರಸ್ವಾಯೈ ದೇವತಾಯೈ ಚ್ಯವತೇ ನ ಪರಾಂ ಪ್ರಾಪ್ನೋತಿ ಪಾಪೀಯಾನ್ ಭವತಿ ” ಇಂತೆಂಬ ಶೃತಿಯಲ್ಲಿ ಬ್ರಾಹ್ಮಣರು ತಮ್ಮ ದೇವತೆಯನ್ನು ಬಿಟ್ಟರೆ ಪ್ರತ್ಯ ವಾಯು ಬದ್ಧರಾಗುವರೆಂದು ವಿಧಿಸಲ್ಪಡುತ್ತದೆ. “ಬ್ರಾಹ್ಮಣಾನಾಂ ಶಿವೋ ದೇವಃ ಕ್ಷತ್ರಿಯಾಣಾಂತು ಮಾಧವಃ । ವೈಶ್ಯಾನಾಂತು ತಥಾ ಬ್ರಹ್ಮಾ ಶೂದ್ರಾಣಾಂ ಸುರ ನಾಯಕಃ ॥ ಬ್ರಾಹ್ಮಣೋ ಭಗವಾನ್ ರುದ್ರಃ ಕ್ಷತ್ರಿಯಃ ಪರಮೋ ಹರಿಃ । ಪಿತಾ ಮಹಸ್ತಥಾ ವೈಶ್ಯೋ ವೃಷಲಸ್ತು ಪುರಂದರಃ” ಇತ್ಯಾದಿ ಮನು ಪರಾಶರ ಸ್ಮೃತಿ ಗಳಲ್ಲಿ ವೈದಿಕಬ್ರಾಹ್ಮಣರಿಗೆ ಶಿವನೇ ದೇವರೆಂದು ಹೇಳಲ್ಪಟ್ಟಿದೆ. ಇದರಿಂದ ಪ್ರಾಕೃತ ಕರ್ಮಗಳಿಂದ ನಿತ್ಯ ಮೋಕ್ಷ ಫಲವು ಸಿದ್ಧಿಸುವದಿಲ್ಲವಾದುದರಿಂದಲೂ ಶಿವಲಿಂಗ ಧಾರಣದಿಂದ ಮೋಕ್ಷ ಫಲವು ಸಿದ್ಧಿಸುತ್ತದೆಂದು ಸಿದ್ಧವಾಯಿತು. ಇನ್ನು “ ಅತಃ ” ಶಬ್ದಾರ್ಥವನ್ನು ತೋರಿಸಲುದ್ಯುಕ್ತರಾಗಿ “ ಯತೋಽಸಾಧಾರಣ ಕಾರಣತ್ವೇನ ” ಎಂದು ಹೇಳುತ್ತಾರೆ. ಯಾವ ಕಾರಣದಿಂದ ಮುಕ್ತಿಗೆ ಪರಶಿವಲಿಂಗ ಧಾರಣವು ಅಸಾಧಾರಣ ಕಾರಣವಾಗಿ “ ಅಮೃತಸ್ಯ ದೇವ ಧಾರಣೋ ಭೂಯಾಸಂ ” ಎಂಬ ಶೃತಿಯಿಂದ ವಿಧಿಸಲ್ಪಡುತ್ತದೆಯೋ ಆ ಕಾರಣ ಪಶುಪತಿ ಸ್ವರೂಪ ಬ್ರಹ್ಮಜ್ಞಾನ

CC-0. Jangamwadi Math Collection. Digitized by eGangotri

ಕ್ಕೋಸ್ಕರ ವೇದಾಂತ ವಿಚಾರವನ್ನು ಮಾಡತಕ್ಕದ್ದೆಂದು "ಅತಃ" ಶಬ್ದದಿ ವ್ಯಕ್ತವಾಗುತ್ತದೆ. "ಸತ್ಯ ಕಾಮಃ" "ಸತ್ಯ ಸಂಕಲ್ಪಃ" ಸೋऽನ್ವೇಷ್ಟಿತವ್ಯಃ ಸ ಜಿಜ್ಞಾಸಿತವ್ಯಃ "ಆತ್ಮಾವಾರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾತವ್ಯಃ" ಇತ್ಯಾದಿ ಶೃತಿಗಳಿಂದ ಬ್ರಹ್ಮ ಜಿಜ್ಞಾಸಾ ವಿಧಿಯು ಹೇಳಲ್ಪಡುತ್ತ "ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆ ಸ ವಿಜ್ಞೇಯಃ" ಇತ್ಯಾದಿ ಶೃತಿಗಳಲ್ಲಿ ಆತ್ಮನ್ ಶಬ್ದವು ಪರಶಿವ ವಾಚಕವಾದುದ ಸ್ಪಷ್ಟವಾಗಿರುವದರಿಂದ ಆತ್ಮನ್ ಶಬ್ದಕ್ಕೆ ಬೇರೆ ಅರ್ಥವನ್ನು ತಿಳಿಯಕೂಡ ಆದುದರಿಂದ "ಆತ್ಮಾವಾರೇ" ಇತ್ಯಾದಿ ಶೃತಿಯಿಂದ ಹೇಳಲ್ಪಡುವ ವಿಧಿಯು ಪ ಬ್ರಹ್ಮ ವಿಷಯಕವಾದುದೆಂದು ಘಂಟಾಘೋಷವು.

ಈಸೂತ್ರದಲ್ಲಿರುವ "ಬ್ರಹಜಿಜ್ಞಾಸಾ" ಎಂಬ ಸಮಸ್ತಪದದಿಂದ ಬ್ರಹ್ಮಣಃಜಿಜ್ಞಾಸಾ ಎಂದು ಕರ್ಮಾರ್ಥದಲ್ಲಿ ಷಷ್ಠೀವಲ್ಲದೆ ಶೇಷಾರ್ಥದಲ್ಲಿ ಷಷ್ಠೀವಲ್ಲವು. ಏಕೆಂ ಜಿಜ್ಞಾಸೆಯೆಂಬುದು ಜಿಜ್ಞಾಸ್ಯವಾದ ಬ್ರಹ್ಮವನ್ನೇ ಅಪೇಕ್ಷಿಸುತ್ತದೆ. ಶೇಷಾರ್ಥ (ಬ್ರಹ್ಮಸಂಬಂಧಿ ಸಾಮಾನ್ಯದಲ್ಲಿ) ಷಷ್ಠೀ ತತ್ಪುರುಷ ಸಮಾಸವನ್ನು ಮಾಡಿದ ಕೂಡ ಬ್ರಹ್ಮಕ್ಕೆ ಜಿಜ್ಞಾಸಾ ಕರ್ಮತ್ವವು ಬಂದೇ ಬರುವದಾದುದರಿಂದ ಶೇಷೇ ಷ ಸಮಾಸ ಮಾಡಿದರೆ ಬ್ರಹ್ಮ ಸಂಬಂಧಿ ಸಾಮಾನ್ಯ ಪದಾರ್ಥಗಳು ಅನೇಕಗಳ ಅವುಗಳ ಪೈಕಿ ಕರ್ಮತ್ವವೂ ಕೂಡ ಒಂದಾಗುವದರಿಂದ ಬ್ರಹ್ಮಕ್ಕೆ ಕರ್ಮತ್ವ ಗ್ರಹಣವಾಗುತ್ತದೆ. ಅಂದರೆ ಶೇಷೇ ಷಷ್ಠೀ ಸಮಾಸ ಮಾಡಿದರೆ ಬ್ರಹ್ಮದಲ್ಲಿ ಕರ್ಮತ್ವವು ಪರೋಕ್ಷವಾಗುವದು. ಇಂತಹ ಪರೋಕ್ಷವಾಗಿರುವ ಕರ್ಮತ್ವವನ್ನು ಹೇ ವದಕ್ಕಿಂತಲೂ ಕರ್ಮಾರ್ಥದಲ್ಲಿ ಷಷ್ಠೀಸಮಾಸ ಮಾಡಿ ಅಪರೋಕ್ಷವಾ ಕರ್ಮತ್ವವನ್ನೇ ಹೇಳುವದು ಅನಾಯಾಸವಲ್ಲವೇ ? ಸಂಬಂಧ ಸಾಮಾನ್ಯ ರ್ಥದಲ್ಲಿ ಷಷ್ಠೀ ಸಮಾಸ ಮಾಡಿದರೂ ಕೂಡ ಪ್ರಯಾಸವೇನೋ ಆಗುತ್ತದೆ ಆದರೂ ಆಪ್ರಯಾಸ ವ್ಯರ್ಥವಾದುದಲ್ಲ. ಏಕೆಂದರೆ ಬ್ರಹ್ಮಾಶ್ರಿತವಾದ ಪ್ರಮಾಣ ವಿಚಾರದ ಪ್ರತಿಜ್ಞೆಯೆಂಬ ಪ್ರಯೋಜನವುಂಟು. ಆದರೂ ಬ್ರಹ್ಮವೆಂಬ ಪ್ರಧಾ ವಸ್ತುವಿನ ವಿಚಾರದ ಪ್ರತಿಜ್ಞೆಯನ್ನು ಹೇಳಿದರೆ ಬ್ರಹ್ಮಾಪೇಕ್ಷಿತಗಳಾದ ಪ್ರಮಾಣ ದಿಗಳ ವಿಚಾರ ಪ್ರತಿಜ್ಞೆಯು ಅರ್ಥಾತ್ ಸಿದ್ಧವೇ ಆಗುತ್ತದೆಂದಮೇಲೆ ಶೇಷಾರ್ ದಲ್ಲಿ ಷಷ್ಠೀ ಸಮಾಸ ಮಾಡುವದು ಅಯುಕ್ತವೇ ಸರಿ.

ಈಸೂತ್ರದಲ್ಲಿ "ಕರ್ತವ್ಯಃ" ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ ಅಂದರೆ ಬ್ರಹ್ಮವಿಚಾರವು ಮಾಡಲು ಯೋಗ್ಯವು ಎಂಬ ಅರ್ಥವು ಬ್ರಹ್ಮವಿಚಾರವನ್ನು ಮಾಡಬೇಕೆಂಬುವದೇ ಪುರುಷ ವ್ಯಾಪಾರವು. (ಕೃತಿಯು) ಇದು ಬ್ರಹ್ಮವೆಂಬ ವಿಷಯ ಜ್ಞಾನದಿಂದಲೂ ಮೋಕ್ಷ ಕಾರಣವಾದ ಬ್ರಹ್ಮಜ್ಞಾನ [illegible] ವಿಷಯ ಜ್ಞಾನ

CC-0. Jangamwadi Math Collection. Digitized by eGangotri

ದಿಂದಲೂ ಮೋಕ್ಷಕಾರಣವಾದ ಬ್ರಹ್ಮಜ್ಞಾನವೆಂಬ ವಿಷಯ ಜ್ಞಾನದಿಂದಲೂ ಉಂಟಾಗುತ್ತಿರಲು ಈಪುರುಷ ವ್ಯಾಪಾರ ಸಿದ್ಧಿಗಾಗಿ ಈ ಸೂತ್ರದಲ್ಲಿಲ್ಲದ "ಕರ್ತವ್ಯಃ" ಎಂಬ ಪದವನ್ನು ಅಧ್ಯಾಹಾರ ಮಾಡುವುದು ವ್ಯರ್ಥವು ಹಾಗೂ ಕರ್ತವ್ಯ ಪದ ಬೋಧಿತವಾದ ಕಾರ್ಯಾನ್ವಿತವಾದ ಅರ್ಥದಲ್ಲಿ ಪದ ಶಕ್ತಿಯನ್ನಂತೂ ಸಿದ್ಧಾಂತದಲ್ಲಿ ಸ್ವೀಕರಿಸಿಯೇ ಇಲ್ಲವಾದ್ದರಿಂದ ಕರ್ತವ್ಯ ಪದವನ್ನು ಅಧ್ಯಾಹರಿಸಕೂಡದು. ಇದಲ್ಲದೆ "ಶ್ರೋತವ್ಯಃ" ಎಂಬ ಶ್ರವಣ ವಿಧಿಯಿಂದ ಪ್ರಾಪ್ತವಾದ ವಿಚಾರವೇ ಈ ಸೂತ್ರಕ್ಕೆ ಪ್ರಯೋಜನವಾಗಿರುವದರಿಂದ "ಶ್ರೋತ್ರವ್ಯಃ" ಎಂಬ ಶೃತಿ ಹಾಗೂ ಸೂತ್ರ ಇವುಗಳಿಗೆ ಏಕಾರ್ಥವನ್ನು ಹೇಳುವದಕ್ಕಾಗಿ ಸೂತ್ರದಲ್ಲಿ ಕರ್ತವ್ಯ ಪದವನ್ನು ಅಧ್ಯಾಹರಿಸಬೇಕೆಂದು ಹೇಳಲವಕಾಶವಿಲ್ಲ. ಯಾಕೆಂದರೆ ಶ್ರವಣ ವಿಧಿಯನ್ನೇ ಅಂಗೀಕರಿಸುವದಿಲ್ಲವಷ್ಟೆ; ಹೇಗೆಂದರೆ ಶ್ರವಣ ಶಬ್ದಿತವಾದ ನಿರ್ಣಯಕ್ಕೆ ಹೇತುವಾದ ವಿಚಾರವು ಲೋಕಸಿದ್ಧವಾಗಿರುವದರಿಂದ ವಿಚಾರ ವಿಷಯದಲ್ಲಿ ಅಪೂರ್ವ ವಿಧಿಯು ಸಂಭವಿಸುವದಿಲ್ಲ. ಸಾಮಾನ್ಯವಾಗಿ ನಿರ್ಣಯಕ್ಕೆ ಹೇತುವಾದ ವಿಚಾರವು ಲೋಕ ಪ್ರಾಪ್ತವಾಗಿಲ್ಲವಾದ್ದರಿಂದ ವಿಚಾರ ವಿಷಯದಲ್ಲಿ ಅಪೂರ್ವ ವಿಧಿಯನ್ನು ಹೇಳಬಹುದಲ್ಲವೆ. ಹೇಳಲಿಕ್ಕೆ ಬರುವುದಿಲ್ಲ. ಏಕೆಂದರೆ ವಿಚಾರ ಮಾತ್ರವೇ ವಿಚಾರಾರ್ಹವಾದ ವಸ್ತುವಿನ ನಿರ್ಣಯಕ್ಕೆ ಹೇತುವಾಗಿದೆಯೆಂಬುದು ಲೋಕಸಿದ್ಧವಾಗಿರುವದರಿಂದ ಬ್ರಹ್ಮವೂ ಕೂಡ ವಿಚಾರಾರ್ಹವಾಗಿರುವದರಿಂದ ಇದರ ನಿರ್ಣಯಕ್ಕೆ ಹೇತುವಾದ ವಿಚಾರವೂ ಕೂಡ ಲೋಕಸಿದ್ಧವೇ ಆಗುವದು ಆದ್ದರಿಂದ ಅಪೂರ್ವ ವಿಧಿಯನ್ನು ಹೇಳಲಿಕ್ಕೆ ಬರುವದಿಲ್ಲ.

ತಂಡುಲ ನಿಷ್ಪತ್ತಿಗೆ ಸಾಧನವಾದ ನಖವಿದಲನವನ್ನು ವ್ಯಾವೃತ್ತಿಗೊಳಿಸಿ ಅವಹನನವನ್ನು ವಿಧಿಸುವಂತೆ ವಿಚಾರ ವಿಷಯದಲ್ಲಿ ಸಾಧನವಾದ ಮತ್ತೊಂದರ ವ್ಯಾವೃತ್ತಿಯಿಲ್ಲದಿರುವದರಿಂದ ನಿಯಮ ವಿಧಿಯನ್ನು ಹೇಳಲಿಕ್ಕೆ ಬರುವದಿಲ್ಲ. ಗುರುವಿರಹಿತವಾದ ವಿಚಾರದ ವ್ಯಾವೃತ್ತಿಯಿರುವದರಿಂದ ಬ್ರಹ್ಮ ವಿಚಾರ ವಿಷಯದಲ್ಲಿ ನಿಯಮ ವಿಧಿಯನ್ನು ಹೇಳಬಹುದು. "ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಹ್ಮಣೋ ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ" "ತದ್ವಿಜ್ಞಾನಾರ್ಥಂ ಸಗುರುವೇವಾಭಿಗ-ಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ" ಇಂತೆಂಬ ಶೃತಿಯಿಂದ ವಿಧಿಯಿಂದ ವಿಧಿಸಲ್ಪಡುವ ಗುರೂಪಸತ್ತಿಯು ದೃಷ್ಟದ್ವಾರಾ ಸಂಭವಿಸುತ್ತಿರಲು "ಶ್ರೋತವ್ಯಃ" ಎಂಬಲ್ಲಿ ಅದೃಷ್ಟವಾಗಿರುವ ಗುರೂಪಸದನವನ್ನು ನಿಯಮ ವಿಧಿಯಿಂದ ಕಲ್ಪಿಸುವದು ಅಯುಕ್ತವಾಗುತ್ತದೆ. ಅಂದರೆ "ಅಭಿಗಚ್ಛೇತ್" ಎಂಬ ಉಪಗಮವಿಧಿಯಿಂದಲೇ ಗುರುವಿರಹಿತವಾದ ವಿಚಾರದ ವ್ಯಾವೃತ್ತಿಯಾಗುತ್ತಿರಲು "ಶ್ರೋತವ್ಯಃ" ಎಂಬಲ್ಲಿ ಗುರುವಿರಹಿತವಾದ ವ್ಯಾವೃತ್ತಿಪೂರ್ವಕವಾಗಿ ಗುರು ಸಹಿತವಾದ ಬ್ರಹ್ಮ ವಿಚಾರದಲ್ಲಿ ನಿಯಮ ವಿಧಿಯೂ ಇಲ್ಲ.

CC-0. Jangamwadi Math Collection. Digitized by eGangotri

ಭಾ :– ಆದ್ದರಿಂದ "ತತ್ವಮಸಿ" ಎಂಬ ಮಹಾ ವಾಕ್ಯದಿಂದ ಪ್ರತಿಪಾದಿಸ್ಪಡುವ ಭೇದಾಭೇದಗಳ ವಿಚಾರವು ಯುಕ್ತವಾಗುತ್ತದೆ. "ಯಥಾನದ್ಯಃ ಸ್ಯಂದಮಾನಾಃ ಸಮುದ್ರೇ" "ಬ್ರಹ್ಮವಿಪ್ರ್ರಹ್ಮೈವ ಭವತಿ" "ಜ್ಞಾತ್ವಾ ಶಿವಂ ಶಾಂತಿಮತ್ಯಂತ ಮೇತಿ" "ನಾನ್ಯಃ ಪಂಥಾ ವಿದ್ಯತೇಯನಾಯ" ಇತ್ಯಾದಿ ಶ್ರುತಿಗಳ ಜೀವ ಬ್ರಹ್ಮೈಕ್ಯವೂ ಮುಖ್ಯ ವೃತ್ತಿಯಿಂದ ಉಪದೇಶವಾಗುತ್ತಿರಲು "ತತ್ವಮಸಿ" ಎಂಬ ಮಹಾ ವಾಕ್ಯದಲ್ಲಿ ಲಕ್ಷಣಾವೃತ್ತಿಯಿಂದ ಜೀವ ಬ್ರಹ್ಮೈಕ್ಯವನ್ನು ಹೇಳುವ ಅವೈದಿಕವೆನಿಸುವದು. ಮುಖ್ಯಾರ್ಥವನ್ನು ಬಿಟ್ಟು ಲಕ್ಷಣಾವೃತ್ತಿಯಿಂದ ಜೀವ ಬ್ರಹ್ಮೈಕ್ಯ (ಜೀವ ಬ್ರಹ್ಮರುಗಳ) ಅಭೇದವನ್ನು ಹೇಳುವ ಶುದ್ಧಾದ್ವೈತಿಗಳ ಮತ ವಿರುದ್ಧವಾಗಿದೆ. ಹಾಗೂ "ತ ಮೇವಂ ವಿದಿತ್ವಾಂ ಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಯನಾಯ" (ಆ ಆತ್ಮವನ್ನು ತಿಳಿದು ಮುಕ್ತಿಯನ್ನು ಹೊಂದುತ್ತಾನೆ ಮುಕ್ತಿಗೆ ಜ್ಞಾನವನ್ನು ಬಿಟ್ಟು ಮತ್ತೊಂದು ಮಾರ್ಗವಿಲ್ಲವು.) "ಧ್ಯಾತ್ವಾ ಮುನಿಗಚ್ಛತಿಭೂತಯೋನಿಂ ಸಮಸ್ತ ಸಾಕ್ಷಿ ತಮಸಃ ಪರಸ್ತಾತ್" (ಮಾನವನು ಸಮಸ್ತ ಆ ಪರಶಿವ ಬ್ರಹ್ಮವನ್ನು ಧ್ಯಾನಿಸಿ ಸಮಸ್ತ ಭೂತಗಳಿಗೆ ಕಾರಣವೂ ಸಾಕ್ಷಿಭೂತವೂ ತಾಮಸೀ ಮಾಯೆಗೆ ಮೂರವೂ ಆಗಿರುವ ಪರಶಿವ ಬ್ರಹ್ಮವನ್ನು ಹೊಂದುತ್ತಾನೆ ಇತ್ಯಾದಿ ಶ್ರುತಿಗಳಲ್ಲಿ ತನಗಿಂತಲೂ ಭಿನ್ನವಾಗಿರುವ ಪರಮಾತ್ಮೋಪಾಸಕನಿಗೆ ತತ್ವ ಪ್ರಾಪ್ತಿ ರೂಪವಾದ ಮುಕ್ತಿಯು ಹೇಳಲ್ಪಟ್ಟಿರುವದರಿಂದ ಜೀವ ಬ್ರಹ್ಮರುಗಳ ಯಥಾರ್ಥವಾದ ಭೇದವಿರುವದೆಂದು ಸ್ಪಷ್ಟವಾಗುತ್ತದೆ. "ತರತಿ ಶೋಕಮಾತ್ಮವಿತ್" (ಆತ್ಮ ಜ್ಞಾನಿಯು ಶೋಕವನ್ನು ದಾಟುತ್ತಾನೆ.) "ಆತ್ಮಾವಾಽರೇದ್ರಷ್ಟವ್ಯ ಯಶೋ ಮೈತೇಯೀ ಆತ್ಮವನ್ನು ಸಾಕ್ಷಾತ್ಕರಿಸತಕ್ಕದ್ದು.

ಇತ್ಯಾದಿ ಶ್ರುತಿಗಳಲ್ಲಿ ವಿಹಿತವಾಗಿರುವ ಆತ್ಮೋಪಾಸನೆಯು ಭಿನ್ನವಾದ ಆತ್ಮವನ್ನೇ ವಿಷಯೀಕರಿಸುತ್ತದೆಂದು ಸಿದ್ಧಿಸಲ್ಪಡುತ್ತದೆ. ಇನ್ನು ಬ್ರಹ್ಮ ವಿಚಾರವು ಪರಿಸಂಖ್ಯಾವಿಧಿ ವಿಷಯವು ಆಗುವದಿಲ್ಲ. ಮುಮುಕ್ಷುವಿಗೆ ಮೋಕ್ಷ ಸಾಧನವಾದ ವೇದಾಂತ ವಿಚಾರವಲ್ಲದೇ ಮತ್ತೊಂದು ಸಾಧನವು ಇಲ್ಲವಷ್ಟೆ; ಯಾವಜ್ಜೀವಪರ್ಯಂತ ವೇದಾಂತ ವಿಚಾರವೇ ಕರ್ತವ್ಯವಾಗಿರುವುದರಿಂದ ಮುಮುಕ್ಷುವಿಗೆ ಮತ್ತೊಂದು ವ್ಯಾಪಾರವೇ ಇಲ್ಲವೆಂದು ನಿಷೇಧಿಸುವದರಿಂದ ಪರಿಸಂಖ್ಯಾವಿಧಿಯನ್ನು ಹೇಳಬಹುದಲ್ಲವೆ, ಎಂದು ಆಶಂಕಿಸಕೂಡದು. ಯಾಕೆಂದರೆ ಹಾಗೆ ಹೇಳಲು ಬರುವದಿಲ್ಲ. ಮುಮುಕ್ಷುವಿಗೆ ವ್ಯಾಪಾರಾಂತರವನ್ನು (ಬೇರೆ ಕೆಲಸವನ್ನು) ನಿಷೇಧಿಸಿ ಬ್ರಹ್ಮವಿಚಾರವೇ ಕರ್ತವ್ಯವೆಂದು ನೀವು ಹೇಳಬೇಕಲ್ಲವೆ, ಮುಮುಕ್ಷುವಾದ ಸನ್ಯಾಸಿಗೆ ಬ್ರಹ್ಮವಿಚಾರವಲ್ಲದೆ ಮತ್ತೊಂದು ಕೆಲಸವಿಲ್ಲವೆಂದು ಹೇಳುವರೋ ? ಅಥವಾ ಸನ್ಯಾಸಿಯಾಗದ ಮುಮುಕ್ಷುವಿಗೆ ಬ್ರಹ್ಮವಿಚಾರವನ್ನು ಬಿಟ್ಟು ವ್ಯಾಪಾರಾಂತರ (ಬೇರೆ ಕೆಲಸವ) ನಿಷೇಧವನ್ನು ಹೇಳುತ್ತೀರೊ? ಸನ್ಯಾಸಿಯಾದವನಿಗಂತೂ ವ್ಯಾಪಾರಾಂತರ ನಿಷೇಧವನ್ನು

CC-0. Jangamwadi Math Collection. Digitized by eGangotri

ಹೇಳುವದು ಅಶಕ್ಯವು. ಯಾಕೆಂದರೆ ಇವನು ತನ್ನ ಆಶ್ರಮ ಧರ್ಮವನ್ನು ಕಾಪಾಡುವದ ಕ್ಕೋಸ್ಕರ ಬೇರೆ ಕೆಲಸವನ್ನು ಮಾಡಬೇಕಾಗುತ್ತದೆ. ಇನ್ನು ಸನ್ಯಾಸಿಗೆ ವ್ಯಾಪಾರಾಂತರ ನಿಷೇಧವನ್ನು ಹೇಳುತ್ತೇವೆಂದರೆ ಇದಕ್ಕೆ "ಶ್ರೋತವ್ಯಃ" ಎಂಬ ಶ್ರವಣ (ವಿಚಾರ) ಬೋಧಕ ವಾಕ್ಯದಿಂದ ಪರಿಸಂಖ್ಯಾವಿಧಿಯನ್ನು ಕಲ್ಪಿಸುವದೇಕೆ? ಕೇವಲ ಸನ್ಯಾಸ ವಿಧಾಯಕ ವಾಕ್ಯದಿಂದಲೆ ವ್ಯಾಪಾರಾಂತರ ನಿಷೇಧವು ಸಿದ್ಧಿಸುತ್ತದಷ್ಟೆ; "ಬ್ರಹ್ಮ ಸಂಸ್ಥೋಽಮೃತತ್ವ ಮೇತಿ" ಎಂಬ ಛಾಂದೋಗ್ಯ ಶೃತಿಯಲ್ಲಿ ಕಾರ್ಯಾಂತರಪಿಲ್ಲದ ಕೇವಲ ಬ್ರಹ್ಮ ವಿಚಾರವೇ ಮುಕ್ತಿ ಸಾಧನವೆಂದು ಹೇಳಲ್ಪಡುತ್ತದೆ. ಬ್ರಹ್ಮ ಸಂಸ್ಥ ಶಬ್ದಕ್ಕೆ ಬ್ರಹ್ಮದಲ್ಲಿ ಸಮಾಪ್ತಿಯೆಂಬ ಅರ್ಥವಾಗುತ್ತದೆ. ಸಮ್‌ಪೂರ್ವಕ ಸ್ಥಾ ಧಾತುವಿಗೆ ಸಮಾಪ್ತಿ ಎಂಬ ಅರ್ಥವು "ಅಗ್ನಿಷ್ಟೋಮೇನ ಸಂಸ್ಥಃ" ಇತ್ಯಾದಿ ಸ್ಥಲದಲ್ಲಿ ಕಂಡು ಬರುತ್ತದೆ. ಬ್ರಹ್ಮ ಸಂಸ್ಥ ಶಬ್ದಾರ್ಥವೆನಿಸುವ ಬ್ರಹ್ಮದಲ್ಲಿ ಸಮಾಪ್ತಿಯು ಶ್ರವಣ, ಮನನ, ನಿದಿಧ್ಯಾಸನ ರೂಪವಾಗಿರುವದಲ್ಲದೇ ಬೇರೆ ಯಾವ ವ್ಯಾಪಾರ ರೂಪವೂ ಆಗಿಲ್ಲವಾದ್ದರಿಂದ ಮುಮುಕ್ಷುವಾದ ಸನ್ಯಾಸಿಗೆ ವ್ಯಾಪಾರಾಂತರ ನಿಷೇಧವು ಸನ್ಯಾಸ ವಿಧಾಯಕ ವಾಕ್ಯದಿಂದಲೇ ಸಿದ್ಧಿಸುತ್ತದೆ. ಇದಲ್ಲದೇ "ತಮೇ ವೈಕಂ ಜಾನಥಾತ್ಮಾನ ಮನ್ಯಾವಾ ಚೋವಿ ಮುಂಚಥ" ಇಂತೆಂಬ ಆಥರ್ವಣ ಶೃತಿಯಿಂದ ವ್ಯಾಪಾರಾಂತರ ನಿಷೇಧವು ಕಂಠತಃ ಪ್ರತಿಪಾದಿಸಲ್ಪಡುತ್ತದೆ. ಹಾಗೂ "ಆಸುಪ್ತೇರಾಮೃತೇಃ ಕಾಲಂ ನಯೇದ್ವೇದಾಂತ ಚಿಂತಯಾ" ಎಂಬ ಶೃತಿಯಿಂದಲೂ, ವ್ಯಾಪಾರಾಂತರ ನಿಷೇಧವು ಕಂಡು ಬರುತ್ತದೆಂದ ಮೇಲೆ ಬೇರೆ ವಿಧಿಯಿಂದ ಸಿದ್ಧವಾದ ವ್ಯಾಪಾರಾಂತರ ನಿಷೇಧವನ್ನು "ಶ್ರೋತವ್ಯಃ" ಎಂಬ ವಾಕ್ಯದಿಂದ ಹೇಳಲ್ಪಡುವ ಶ್ರವಣ ವಿಷಯ ದಲ್ಲಿ ಕಲ್ಪಿಸುವದು ಅಯುಕ್ತವಲ್ಲವೇ,

ಆದುದರಿಂದಲೇ ಕೈವಲ್ಯ ಚಂದ್ರೋದಯದಲ್ಲಿ ಪರಮಾರಾಧ್ಯರು ಬ್ರಹ್ಮವಿಚಾರದಲ್ಲಿ ಪ್ರಾಪ್ತಿ ಇರುವದರಿಂದ ಅಪೂರ್ವ ವಿಧಿಯಿಲ್ಲ. ಬೇರೆ ಉಪಾಯವಿಲ್ಲದಿರುವದರಿಂದ ನಿಯಮ ವಿಧಿಯೂ ಇಲ್ಲ ಅತ ಏವ ಪರಿಸಂಖ್ಯಾ ವಿಧಿಯೂ ಇಲ್ಲವೆಂದು ಹೇಳಿರುವರು. ಆದುದರಿಂದ ಶ್ರವಣ ವಿಧಿಯನ್ನೇ ಅಂಗೀಕರಿಸುವದಿಲ್ಲವಾದ್ದರಿಂದ "ತತ್ಬ್ರಹ್ಮ ತದ್ವಿಜಿಜ್ಞಾಸಸ್ವ" "ಶ್ರೋತವ್ಯಃ" "ಅಥಾತೋಽಬ್ರಹ್ಮಜಿಜ್ಞಾಸಾ" ಎಂಬ ಶೃತಿ ಸೂತ್ರಗಳಿಂದ ಏಕಾರ್ಥವನ್ನು ಹೇಳುವದಕ್ಕಾಗಿ ಸೂತ್ರಘಟಕವಾದ ಜಿಜ್ಞಾಸ ಪದಕ್ಕೆ ವಿಚಾರದಲ್ಲಿ ಲಕ್ಷಣಾವೃತ್ತಿಯನ್ನೂ "ಕರ್ತವ್ಯಃ" (ಬ್ರಹ್ಮ ವಿಚಾರ ಮಾಡಲು ಯೋಗ್ಯವು.) ಎಂಬ ಪದದ ಅಧ್ಯಾಹಾರವನ್ನೂ ಅಂಗೀಕರಿಸುವದು ಸಮಂಜಸವಲ್ಲ

ಭಾ :— ಒಂದು ಪಕ್ಷದಲ್ಲಿ ಶ್ರವಣ ವಿಧಿಯು ಇದ್ದರೂ ಇದ್ದುಕೊಳ್ಳಲಿ. ಆದರೂ ವಿಚಾರದಲ್ಲಿ ಲಕ್ಷಣಾವೃತ್ತಿಯು ಹಾಗೂ ಅಧ್ಯಾಹಾರವೂ ಬೇಕಾಗಿಲ್ಲ. ಎಲ್ಲಾ ಕಡೆ ಯಲ್ಲಿ ಶೃತಿ ಸೂತ್ರಗಳಿಗೆ ಏಕಾರ್ಥವು ಅನ ಮಾನದಿಂದ ಪ್ರಸ್ತವಾಗುತ್ತದೆ. ಆದ್ದರಿಂದ ಈ ಸೂತ್ರವು ಶ್ರವಣ (ವಿಚಾರ) ವಿಧಿಯನ್ನು ಪ್ರಕಾಶಪಡಿಸುವದಕ್ಕಿರದೆ ವಿಷಯ

CC-0. Jangamwadi Math Collection. Digitized by eGangotri

ಪ್ರಯೋಜನಗಳನ್ನು ಪ್ರಕಾಶ ಪಡಿಸುವದಕ್ಕಾಗುವದು. ಮೋಕ್ಷ ಸಾಧವಾದ ಬ್ರ ಜ್ಞಾನನೇ ಪ್ರಯೋಜನವಾಗಿರುವದು. ಬ್ರಹ್ಮವು ವಿಷಯವೆಂಬುದು ಶೃತಿ ಸಿದ್ಧ ರುವದು. ಇಚ್ಛೆಗೆ ವಿಷಯವಾದ ಬ್ರಹ್ಮಜ್ಞಾನವು ವಿಚಾರವಿಲ್ಲದೆ ಸಂಭವಿಸು ವಾದ್ದರಿಂದ ವಿಚಾರವು ಕರ್ತವ್ಯವಾಗಿರುವದೆಂದು ಈ ಸೂತ್ರದಿಂದ ಉಪದೇಶಿ ಡುತ್ತವೆ. ಬ್ರಹ್ಮವು ಯಾವಾಗಲೂ ನಿರ್ವಿಶೇಷವಾಗಿರದೆ ಸವಿ ಶೇಷವಾಗಿರುವದು. ವಿಷಯದಲ್ಲಿ"ಪರಾಸ್ಯಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಎಂಬ ಶೃತಿಯು ಬ್ರಹ್ಮದಲ್ಲಿ ಸ್ವಾಭಾವಿಕವಾದ ಒಂದು ಶಕ್ತಿ ವಿಶೇಷವಿರುವದ ಹೇಳುವದರಿಂದ ಈ ಶೃತಿಯು ಪ್ರಮಾಣವಾಗಿದೆ. ಹಾಗೂ ಈ ಸೂತ್ರ ಘಟಕವಾ ಜಿಜ್ಞಾಸೆ (ವಿಚಾರ) ಗೆ ವಿಷಯವಾದ ಬ್ರಹ್ಮವು ಯಾವಾಗಲೂ ಮೂರ್ತಾಮೂ ಸ್ವರೂಪವಾಗಿದೆ. ಈವಿಷಯದಲ್ಲಿ "ದ್ವೇವಾ ಬ್ರಹ್ಮಣೋ ರೂಪೇ" "ತದಾದಿ ಮಧ್ಯಾ ತವಿಹೀನಮೇಕಂವಿಭುಂ ಚಿದಾನಂದಮರೂಪಮದ್ಭುತಂ । ಉಮಾಸಹಾಯಂ ಮೇಶ್ವರಂ ಪ್ರಭುಂ ತ್ರಿಲೋಚನಂ ನೀಲಕಂಠಂ ಪ್ರಶಾಂತಂ" "ಧ್ಯಾತ್ವಾ ಮನಿರ್ಗಚ್ಛ ಭೂತ ಯೋನಿಂ ಸಮಸ್ತ ಸಾಕ್ಷಿಂತಮಸಃ ಪರಸ್ತಾತ್" ಇಂತೆಂಬ ಶೃತಿಗಳು ಬ್ರಹ್ಮ ಮೂರ್ತಾಮೂರ್ತ ಸ್ವರೂಪಗಳನ್ನು ಪ್ರತಿಪಾದಿಸುವದರಿಂದ ಇವು ಪ್ರಮಾಣಗಳಾ ಶೃತಿಗಳಿಗೆ ಅರ್ಥ ಸಂಕೋಚಮಾಡುವ ವಿಷಯದಲ್ಲಿ ಪ್ರಮಾಣವಿಲ್ಲದಿರುವದ ಶೃತಿಗಳ ಅಭಿಪ್ರಾಯದಂತೆ ಜಿಜ್ಞಾಸ್ಯವಾದ ಬ್ರಹ್ಮವು ಮೂರ್ತಾಮೂರ್ತೋಭ ಸ್ವರೂಪವೇ ಆಗಿರುವದೆಂದು ತಿಳಿಯಬೇಕು.

ಭಾ :- ನಿರ್ವಿಶೇಷ ಬ್ರಹ್ಮಜ್ಞಾನವೇ ತತ್ವಜ್ಞಾನವೆನಿಸುವದರಿಂದ ಅ ಪಶು (ಜೀವ) ಪಾಶಗಳನ್ನು ನಾಶಮಾಡತಕ್ಕದಾಗಿದೆಯಲ್ಲದೆ ಸವಿಶೇಷ ಬ್ರ ಜ್ಞಾನವು ಆತ್ಮಜ್ಞಾನವೂ ಅಲ್ಲ. ಅದು ಪಶು ಪಾಶವಿಮೋಚಕವೂ ಅಲ್ಲ. ಬ್ರಹ್ಮ ಯಾವದಾದರೊಂದು ಧರ್ಮ ವಿಶೇಷವೇ ಆಗಲಿ ಇರುವದಿಲ್ಲವಾದುದರಿಂದ ಬ್ರಹ್ಮ ನಿರ್ವಿಶೇಷವಾಗಿದೆ. "ಅಥಾತ ಆದೇಶೋ ನೇತಿ ನೇತಿ" "ಏತದ್ವೈತದಕ್ಷರಂಗಾರ್ಗ ಸ್ಥೂಲಮನಣ್ವಹ್ರಸ್ವಂ" ಇತ್ಯಾದಿ ಶೃತಿಗಳು ಬ್ರಹ್ಮದಲ್ಲಿ ಯಾವಧರ್ಮವಿಶೇಷ ಇಲ್ಲವೆಂದು ಹೇಳುತ್ತವೆ. "ಏಕಮೇವಾದ್ವಿತೀಯಂ ಬ್ರಹ್ಮ" "ನೇಹನಾನಾಸ್ತಿಕಿಂಚನ ಇತ್ಯಾದಿ ಶೃತಿಗಳು ಬ್ರಹ್ಮದಲ್ಲಿ ಯಾವದೊಂದು ಭೇದ ವಿಶೇಷವೂ ಇಲ್ಲವೆಂದು ಪ್ರ ಪಾದಿಸುತ್ತವೆ "ಸಾಕ್ಷಿ ಚೇತಾ ಕೇವಲೋ ನಿರ್ಗುಣಶ್ಚ" ಇತ್ಯಾದಿ ಶೃತಿಗಳು ಬ್ರಹ್ಮ ಯಾವಗುಣ ವಿಶೇಷವೂ ಇಲ್ಲವೆಂದು ಹೇಳುತ್ತವೆ. ಆದುದರಿಂದ ಬ್ರಹ್ಮವು ಸವಿಶೇಷ ವಾಗಿರದೆ ನಿರ್ವಿಶೇಷವಾಗಿರದು ಎಂದು ಅದ್ವೈತಿಯು ಆಶಂಕಿಸಲು ಭಾಷ್ಯಕಾರು ಸಮಾಧಾನವನ್ನು ಹೇಳುತ್ತಾರೆ. ಏನೆಂದರೆ "ನೇತಿ ನೇತಿ" ಇತ್ಯಾದಿ ಶೃತಿ ವಾಕ್ಯಗ ಬ್ರಹ್ಮದಲ್ಲಿ, ಯಾವದೊಂದು ಧರ್ಮ ವಿಶೇಷನಿಲ್ಲವೆಂದು ಹೇಳುವದಿಲ್ಲ. ಆದ ಪೂರ್ವ ವಾಕ್ಯದಲ್ಲಿ ಪ್ರಾಪ್ತವಾಗಿರುವ ಮೂರ್ತಾಮೂರ್ತೋಭಯ ಪ್ರಪಂಚ

CC-0. Jangamwadi Math Collection. Digitized by eGangotri

ಇಲ್ಲವೆಂದು ಹೇಳುತ್ತವೆ. "ಯಃ ಸರ್ವಜ್ಞಃ ಸರ್ವವಿತ್" ಇತ್ಯಾದಿ ಶೃತಿಗಳಿಂದ ಪ್ರತಿಪಾದಿಸಲ್ಪಡುವ ಸರ್ವಜ್ಞತ್ವಾದಿ ಬ್ರಹ್ಮ ಧರ್ಮಗಳೂ ಕೂಡ ಬ್ರಹ್ಮದಲ್ಲಿಲ್ಲವೆಂದು ಯಾವ ಶೃತಿಯೂ ನಿಷೇಧಿಸುವದಿಲ್ಲ. ಸೂತ್ರಕಾರರೂ ಕೂಡ "ಪ್ರಕೃತೈತಾವತ್ವಂ ಹಿ ನಿಷೇಧತಿ ತತೋ ಬ್ರವೀತಿಚ ಭೂಯಃ" ಎಂಬುವ ಸೂತ್ರದಿಂದ ಅಭಿಪ್ರಾಯವನ್ನೇ ತೋರಿಸಿರುವರು. ಹೀಗಲ್ಲದೆ ಸರ್ವಜ್ಞತ್ವಾದಿ ಬ್ರಹ್ಮಧರ್ಮಗಳೂ ಕೂಡ "ನೇತಿ ನೇತಿ" ಎಂಬ ಶೃತಿವಾಕ್ಯದಿಂದ ನಿಷೇಧಿಸಲ್ಪಡುತ್ತವೆಂದು ಹೇಳುವದಾದರೆ ಆನಂದಾದಿ. ಧರ್ಮಗಳ ನಿಷೇಧವನ್ನು ಹೇಳಬೇಕಾದೀತು. ಆದುದರಿಂದ ಸರ್ವಜ್ಞತ್ವಾದಿ ಬ್ರಹ್ಮ ಧರ್ಮಗಳನ್ನು ನಿಷೇಧಿಸುವದಿಲ್ಲ. ಇನ್ನು "ಏಕಮೇವಾದ್ವಿತೀಯಂಬ್ರಹ್ಮ" ಇತ್ಯಾದಿ ವಾಕ್ಯಗಳು "ಸದೇವ ಸಾಮ್ಯೇದಮಗ್ರ ಆಸೀತ್" ಎಂಬ ಪೂರ್ವವಾಕ್ಯದೊಡನೆ ಏಕವಾಕ್ಯತೆಯನ್ನು ಹೇಳಬೇಕಾದುದರಿಂದ ಸೃಷ್ಟಿ ಪೂರ್ವಕಾಲದಲ್ಲಿ ಬ್ರಹ್ಮೈತರವಾದ ಯಾವುದೂ ಇಲ್ಲದಿರುವದರಿಂದ ಆ ಕಾಲದಲ್ಲಿ ಬ್ರಹ್ಮದಲ್ಲಿ ಯಾವ ಭೇದವೂ ಇಲ್ಲವೆಂದು ಹೇಳುವ ವಾಕ್ಯಗಳಾಗಿವೆಯೆಂದು ತಿಳಿಯಬೇಕು. "ಕೇವಲೋ ನಿರ್ಗುಣಶ್ಚ" ಇಂತೆಂಬ ನಿರ್ಗುಣ ಶೃತಿಯು ಸರ್ವಜ್ಞತ್ವಾದಿಗಳಲ್ಲಿ ಗುಣ ಶಬ್ದಪ್ರಯೋಗವಿಲ್ಲದಿರುವದರಿಂದ ಬ್ರಹ್ಮದಲ್ಲಿ ಸತ್ವಾದಿ ಗುಣತ್ರಯವಿಲ್ಲವೆಂದು ಹೇಳುವದಲ್ಲದೆ ಸರ್ವಜ್ಞತ್ವಾದಿ ಧರ್ಮಗಳೂ ಇಲ್ಲವೆಂದು ಹೇಳುವದಿಲ್ಲ. ಸರ್ವಜ್ಞತ್ವಾದಿಗಳನ್ನೂ ಸಹ ನಿಷೇಧಿಸುತ್ತದೆಂದು ಹೇಳುವದಾದರೆ "ಯಃ ಸರ್ವಜ್ಞಃ ಸ್ಸರ್ವವಿತ್" ಇವೇ ಮೊದಲಾದ ಸರ್ವಜ್ಞತ್ವಾದಿಗಳನ್ನು ವಿಧಿಸುವ ವಾಕ್ಯದೊಡನೆ ವಿರೋಧವು ಸಂಭವಿಸುವದು. ಆದುದರಿಂದಲೆ ಸೃಷ್ಟಿಪೂರ್ವಕಾಲದಲ್ಲಿ ವ್ಯಕ್ತಾವ್ಯಕ್ತ ಪ್ರಪಂಚದ ಉತ್ಪತ್ತಿಯಿಲ್ಲದಿರುವದರಿಂದ ಅದ್ವೈತ ಬ್ರಹ್ಮವಾಕ್ಯಗಳು ಸೃಷ್ಟಿಗಿಂತಲೂ ಪೂರ್ವಕಾಲವನ್ನು ವಿಷಯೀಕರಿಸುತ್ತವೆ. (ಸೃಷ್ಟಿಗಿಂತಲೂ ಪೂರ್ವಕಾಲದಲ್ಲಿ ಮತ್ತೊಂದು ಯಾವದೂ ಇಲ್ಲವೆಂದು ಹೇಳುತ್ತವೆ.) ಎಂದು ಪರಮ ವೈದಿಕರಾದ ರೇವಣಸಿದ್ಧ, ಮರುಳಸಿದ್ಧಾದಿ ಪೂರ್ವಾಚಾರ್ಯರ ತಾತ್ಪರ್ಯವಾಗಿರುವದು. "ಯದಾ ತಮಸ್ತನ್ನ ದಿವಾನ ರಾತ್ರಿರ್ನಾಸನ್ನಚಾಸಚ್ಛಿವ ಏವ ಕೇವಲಃ" "ಅಹಮೇಕಃ" "ಪ್ರಥಮಮಾಸಂ ವರ್ತಾಮಿಚ ಭವಿಷ್ಯಮಿಚ ನಾನ್ಯಃ ಕಶ್ಚಿನ್ಮತ್ತೋವ್ಯತಿರಿಕ್ತಃ ನಾನ್ಯತ್ಕಿಂಚನಮಿಷತ್" ಇತ್ಯಾದಿ ಶ್ವೇತಾಶ್ವತರ, ಅಥರ್ವಶಿರಸ್ಸು ಮೊದಲಾದ ಉಪನಿಷತ್ತುಗಳು ಸೃಷ್ಟಿ ಪೂರ್ವಕಾಲದಲ್ಲಿಯೇ ಅದ್ವೈತವನ್ನು ಹೇಳುವದರಿಂದ ಗತಿ ಸಾಮಾನ್ಯ ನ್ಯಾಯದಿಂದ ಎಲ್ಲ ಅದ್ವೈತವಾಕ್ಯಗಳು ("ಏಕಮೇವಾದ್ವಿತೀಯಂಬ್ರಹ್ಮ") ಇತ್ಯಾದಿ ವಾಕ್ಯಗಳು. ಸೃಷ್ಟಿ ಪೂರ್ವ ಕಾಲದಲ್ಲಿಯೇ ಅದ್ವೈತವನ್ನು ಹೇಳುವವೆಂದು ತಿಳಿಯಬೇಕು. ಇದು "ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯ" ಎಂಬಶೃತಿಯು ಸೃಷ್ಟ್ಯುನ್ಮುಖವಾದ ಬ್ರಹ್ಮಕ್ಕೆ ಬಹುಭಾವವನ್ನು ಹೇಳುವದರಿಂದ ಸ್ಪಷ್ಟವಾಗುತ್ತದೆ. "ಐತದಾತ್ಮ್ಯಮಿದಂ ಸರ್ವಂ" "ಸರ್ವೋಽಪ್ಯೇಷರುದ್ರಃ" "ಆತ್ಮೈವೇದಂ ಸರ್ವಂ" ಇತ್ಯಾದಿ ವಾಕ್ಯಗಳು ಸ್ವೇಚ್ಛೆಯಿಂದ ಬಹುಸ್ವರೂಪವನ್ನು ಹೊಂದಿದ ಬ್ರಹ್ಮಕ್ಕೆ

CC-0. Jangamwadi Math Collection. Digitized by eGangotri

ವಿಶ್ವಾಭೇದವನ್ನು ಹೇಳತಕ್ಕವುಗಳಾಗಿವೆ. ಕಾರ್ಯರೂಪವಾದ ಪ್ರಪಂಚಕ್ಕೂ ಕಾರಣ ರೂಪವಾದ ಬ್ರಹ್ಮಕ್ಕೂ ಅಭೇದವು "ಯಥಾ ಸಾಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ" ಇಂತೆಂಬ ಶೃತ್ಯುಕ್ತವಾದ ಮೃದಾದಿ ದೃಷ್ಟಾಂತದಿಂದಲೂ ಏಕ ವಿಜ್ಞಾನ ಪ್ರತಿಜ್ಞಾ ವಾಕ್ಯದಿಂದಲೂ ಸಿದ್ಧಿಸುತ್ತದೆ.

ಭಾ :– "ಸ್ಸಾಂ ಯೋ ವೇದ ಸರ್ವಾನ್ ವೇದ" ಹೀಗೆಂಬುವ ಅಥರ್ವ ಶಿರಸ್ಸಿನ ವಾಕ್ಯದಿಂದ ಸರ್ವೋಪಾದಾನ ಕಾರಣೀಭೂತವಾದ ಶಿವತತ್ವಜ್ಞಾನದಿಂದ ಸರ್ವವಿಜ್ಞಾನ ಸಿದ್ಧಿಯೆಂಬುದು ಸಿದ್ಧವಾಯಿತು.

ಸೃಷ್ಟಿಗಿಂತಲೂ ಪೂರ್ವದಲ್ಲಿ ಜಗತ್ತಿಗೆ ಉಪಾದಾನ ಕಾರಣೀಭೂತವಾದ ಪ್ರಕೃತಿತತ್ವವು ಬ್ರಹ್ಮಕ್ಕೆ ಭಿನ್ನವಾಗಿರುವದರಿಂದ ಸೃಷ್ಟಿಪೂರ್ವದಲ್ಲಿ ಅದ್ವೈತವನ್ನು ಹೇಳಲಾಗುವದಿಲ್ಲವೆಂದು ಆಶಂಕಿಸಕೂಡದು. ಜಗದುಪಾದಾನ ಕಾರಣವಾದ ಪ್ರಕೃತಿ ತತ್ವವೇ ಈಶ್ವರ ಶಕ್ತಿರೂಪವಾಗಿರುವದರಿಂದ ಅದು ಈಶ್ವರನಿಗೆ (ಬ್ರಹ್ಮಕ್ಕೆ) ಅಭಿನ್ನವಾಗಿಯೇ ಇರುವದು. ಅಯಸ್ಕಾಂತಕ್ಕೆ ಲೋಹಾಕರ್ಷಣ ಶಕ್ತಿಯು ಹೇಗೆ ಅಭಿನ್ನವೋ; ವಹ್ನಿಗೆ ದಾಹಾನುಕೂಲಶಕ್ತಿಯು ಹೇಗೆ ಅಭಿನ್ನವೋ; ಹಾಗೆ ಜಗದುಪಾದಾನ ಕಾರಣಶಕ್ತಿಯು ಬ್ರಹ್ಮಕ್ಕೆ ಅಭಿನ್ನವಾಗಿಯೇಇರುವದರಿಂದ ಸೃಷ್ಟಿಗಿಂತಲೂ ಪೂರ್ವದಲ್ಲಿ ಅದ್ವೈತವೇ ಸಿದ್ಧಿಸುತ್ತದಲ್ಲದೆ ಆ ಶಕ್ತಿಯಿಂದ ದ್ವೈತವು ಸಿದ್ಧಿಸುವದಿಲ್ಲ. ಜಗದುಪಾದಾನ ಕಾರಣವಾದ ಶಕ್ತಿಯು ಬ್ರಹ್ಮಕ್ಕೆ ಅಭಿನ್ನವಾಗಿರುವದೆಂಬುದಕ್ಕೆ "ತದಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ" "ಪರಾಸ್ಯಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀಜ್ಞಾನ ಬಲಕ್ರಿಯಾಚ" ಎಂಬ ಶೃತಿಗಳು ಪ್ರಮಾಣಗಳಾಗಿವೆ ಪರಾಶಕ್ತಿಯು ಈಶ್ವರನೊಬ್ಬನಲ್ಲಿಯೇ ಇರುವದೆಂಬುವದು ಶೃತ್ಯಾಗಮ ಪುರಾಣಾದಿಗಳಲ್ಲಿ ಪ್ರಸಿದ್ಧವಾಗಿರುವದು. ಆದುದರಿಂದ ಮುಮುಕ್ಷುಗಳು ಅವೈದಿಕವಾದ ಜಗನ್ಮಿಥ್ಯಾದ್ವೈತವಾದವನ್ನು ಅಂಗೀಕರಿಸಕೂಡದು. "ನೇತಿ ನೇತಿ" ಇತ್ಯಾದಿ ಶೃತಿಗಳು ಕೇವಲ ನಿರವಯವ ಬ್ರಹ್ಮವೆ ನಿತ್ಯವೆಂದು ಬೋಧಿಸುವದಿಲ್ಲ. "ಸ್ಥಿರೇಭಿ ರಂಗೈಃ ಪುರ ರೂಪ ಉಗ್ರಃ" ಇತ್ಯಾದಿ ಶೃತಿಗಳಲ್ಲಿ ಅಪ್ರಾಕೃತಗಳಾದ ಪರಶಿವ ಲೀಲಾ ದಿವ್ಯಮಂಗಲ ವಿಗ್ರಹಗಳೂ ನಿತ್ಯಗಳೆಂದು ತಿಳಿದು ಬರುವದರಿಂದ ಸಾವಯವ ಬ್ರಹ್ಮವೂ ಕೂಡ ನಿತ್ಯವೆಂದು ಸಿದ್ಧಿಸುತ್ತದೆ. ಸದಾಶೇಷಶೇಷಿ ಭಾವವನ್ನು ಹೇಳುವ ವಿಶಿಷ್ಟಾದ್ವೈತಿಗಳಾನ ಪಾಂಚರಾತ್ರರಂತೆ ನಾವು ಅಂಗಾಂಗಿಭಾವದಿಂದ ಬ್ರಹ್ಮಕ್ಕೆ ಸಾವಯವವೆಂದು ಹೇಳುವದಿಲ್ಲ. ಕಿಂತು ಶುದ್ಧ ಶಿವಾಂಶಕ್ಕೂ (ಶುದ್ಧಾತ್ಮನಿಗೂ) ಶಿವನಿಗೂ ಪ್ರಭಾಕರ ಪ್ರಭೆಗಳಂತೆ ಚಂದ್ರ ಚಂದ್ರಿಕೆಗಳಂತೆಯೂ ಅಂಗಾಂಗಿ ಭಾವದಿಂದ ಬ್ರಹ್ಮಕ್ಕೆ ಸಾವಯುವ (ಸಾಂಶ)ವೆಂದು ಹೇಳುತ್ತೇವೆ. ದೀಕ್ಷಾತ್ರಯದಿಂದ ಮಲತ್ರಯವನ್ನು ಕಳೆದುಕೊಳ್ಳದ ಜೀವಾತ್ಮರು ಬ್ರಹ್ಮದ ಅವಯುವ(ಅಂಶ)ಗಳೆಂದುಹೇಳಿದರೆ ಘಂಟಾಂಶ

CC-0. Jangamwadi Math Collection. Digitized by eGangotri

ದಲ್ಲಿರುವ ನೀಲಪೀತಾದಿಗುಣಗಳು ಘಟದಲ್ಲಿ ತೋರುವಂತೆ ಜೀವಾತ್ಮರಲ್ಲಿರುವ ಸುಖ ದುಃಖಾದಿ ಗುಣಗಳು ಬ್ರಹ್ಮದಲ್ಲಿ ತೋರಿ ಜೀವರಂತೆ ಬ್ರಹ್ಮಕ್ಕೂ ಕೂಡ ನಾನು ಸುಖೀ ನಾನು ದುಃಖೀ ಎಂಬುವ ಸುಖ ದುಖಾಃನುಭವ ರೂಪವಾದ ಭೋಗವು ಉಂಟಾಗ ಬೇಕಾಗುವದು. ಶುದ್ಧ ಶಿವಾಂಶ ರೂಪನಾದ ಆತ್ಮನು (ಐಕ್ಯಸ್ಥಲಾಂಗನು) ಸಮ ಸ್ತೋಪಾಧಿ ನಿರ್ಮುಕ್ತನಾಗಿರುವದರಿಂದ ಇವನಿಗೆ ಪ್ರಾಕೃತ ಸುಖ ದುಃಖ ಮೋಹಾದಿ ಗಳೂಇಲ್ಲ. ಇವನಿಗೆ ಅವುಗಳಭೋಗವೂ ಇಲ್ಲ. ಈ ಶುಧಾತ್ಮನೆಂಬ ಅಂಗಿಯಿಂದ ಅಂಗಿಯೆನಿಸುವ ಮಹಲಿಂಗ ರೂಪವಾದ ಬ್ರಹ್ಮಕ್ಕೆ ಐಕ್ಯವೇ ಸಿದ್ಧಿಸುವದರಿಂದ ಯಾವ ದೋಷವೂ ಇಲ್ಲ. ಶುದ್ಧಾತ್ಮನು ಪರಾಹಂತಮಯ ಚಿಚ್ಛಕ್ತಿ(ವಿಮರ್ಶಶಕ್ತಿ)ಯಲ್ಲಿಯೇ ಅಂತರ್ಗತವಾಗಿರುವದರಿಂದ ಇವನಿಗೆ ಯಾವ ಪ್ರಕೃತಿಗುಣಗಳ ಸಂಬಂಧವಿಲ್ಲ ಇಂ ತಹ ಅಂಶರೂಪದಿಂದ ಅಂಶಿಯಾದ ಬ್ರಹ್ಮಕ್ಕೂ ಆಗುಣಗಳ ಸಂಬಂಧವಿಲ್ಲ. ಆದ್ದರಿಂದ ಜೀವಂತರಂತೆ ಸುಖ ದುಃಖ ಭೋಗವು ಇಲ್ಲ ವಿಶಿಷ್ಟಾದ್ವೈತಿಗಳ ಮತದಲ್ಲಿ ಸದಾ ಶೇಷಿಶೇಷ ಭಾವವನ್ನು ಹೇಳುವದರಿಂದ ಜೀವರಂತೆ ಬ್ರಹ್ಮಕ್ಕೆ ಸುಖ ದುಃಖ ಭೋಗ ಉಂಟಾಗಬೇಕಾಗುವದು. ಆದುದರಿಂದ ವಿಶಿಷ್ಟಾದ್ವೈತಿಗಳ ಮತವು ಅನಾದರಣೀಯ ವಾಗಿದೆ. ಶಕ್ತಿವಿಶಿಷ್ಟಾದ್ವೈತಿಗಳಾವ ಭೇದಾಭೇದವಾದಿಗಳ ಮತದಲ್ಲಿ ಬದ್ಧಧಾರೆ ಯಲ್ಲಿರುವ ಅಶುದ್ಧ ಜೀವನಿಗೂ ಶಿವನಿಗೂ ಅಂಗಾಂಗಿಭಾವವನ್ನು ಹೇಳುವದಿಲ್ಲ. ಭೇದವನ್ನು ಹೇಳುತ್ತಾರೆ. ಆದ್ದರಿಂದ ಯಾವ ದೋಷಕ್ಕೂ ಆಸ್ಪದವಿಲ್ಲ "ಆಕಾಶವತ್ಸ ರ್ವ ಗತಶ್ಚ ಪೂರ್ಣಃ" ಎಂಬ ಶೃತಿಯಿಂದ ಹೇಳಲ್ಪಡುವ ಸರ್ವತತ್ವವೂಕೂಡ ಬ್ರಹ್ಮದಲ್ಲಿ ಉಪಪನ್ನವಾಗಿರುವದರಿಂದ ಅಂತಹ ಅನೇಕ ಶೃತಿಗಳಿಗೆ ಭಂಗವೇ ಪ್ರಾಪ್ತವಾಗು ವದು. ದ್ವೈತಿಗಳು ಘಟಪಟಗಳಿಗೆ ಯಾವಾಗಲೂ ಹೇಗೆ ದ್ವೈತವೋ; ಹಾಗೆ ಚೇ ತನಾಚೇತನ ಪ್ರಪಂಚಕ್ಕೂ ಬ್ರಹ್ಮಕ್ಕೂ ದ್ವೈತವೇ (ಭೇದವೇ) ಇರುವದೆಂದು ಹೇಳು ವಂತೆ ನಾವು ಹೇಳುವದಿಲ್ಲ. ದ್ವೈತಿಗಳು ಹಾಗೆ ಭೇದವನ್ನು ಹೇಳುವದು "ಯೇನಾ ಶೃತಂ ಭವತಿ" (ಕೇಳಲ್ಪಡದೇ ಇರುವದೂ ಕೇಳಲ್ಪಡುವದು.) ಬ್ರಹ್ಮರೂಪವಾದ ಏಕ ತತ್ವದ ಜ್ಞಾನದಿಂದ ಎಲ್ಲ ಪ್ರಪಂಚ ಜ್ಞಾನನಾಗುವದೆಂಬ ಪ್ರತಿಜ್ಞಾ ಶೃತಿಗೆ ವಿರೋಧ ವಾಗುವದಲ್ಲದೇ "ಯಥಾ ಸೌಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ" ಎಂಬ ದೃಷ್ಟಾಂತಶೃತಿಗೂ ವಿರೋಧವಾಗುವದು. ಹೇಗೆಂದರೆ ಮೃತ್ಪಿಂಡವೆಂಬ ಉಪಾ ದಾನ ಕಾರಣಕ್ಕೂ ಅದರ ಕಾರ್ಯವಾದ ಮೃಣ್ಮಯ ಘಟಕರಣಾದಿಗಳಿಗೆ ಅಭೇದವಿಲ್ಲದೆ ಕೇವಲ ಘಟಪಟಗಳಂತೆ. ಭೇದವೇ ಇದ್ದ ಪಕ್ಷದಲ್ಲಿ ಘಟಜ್ಞಾನವಾದರೂ ಪಟಜ್ಞಾನ ವಾಗದಿರುವಂತೆ ಮೃತ್ಪಿಂಡ ಜ್ಞಾನವಾದರೂ ಅದರ ಕಾರ್ಯವಾದ ಮೃಣ್ಮಯ (ಘಟಾದಿ) ದಜ್ಞಾನವಾಗದೇ ಹೋಗುವದರಿಂದ ಮೃತ್ಪಿಂಡವೆಂಬ ಉಪಾದಾನ ಕಾರಣಜ್ಞಾನ ದಿಂದ ಮೃಣ್ಮಯಗಳೆಂಬ ಉಪಾದೇಯ (ಕಾರ್ಯ) ದ ಜ್ಞಾನವಾಗುತ್ತದೆಂದು ಹೇಳುವ ದೃಷ್ಟಾಂತ ಶೃತಿಗೆ ವಿರೋಧವು. ಇದರಂತೆ ಪ್ರತಿಜ್ಞಾ ಶೃತಿಗೂ ವಿರೋಧವು. ಆದುದ ರಿಂದ ಉಪಾದಾನ ಕಾರಣವಾದ ಬ್ರಹ್ಮಕ್ಕೂ ಉಪಾದೇಯವಾದ ಸರ್ವಪ್ರಪಂಚಕ್ಕೂ

CC-0. Jangamwadi Math Collection. Digitized by eGangotri

ದ್ವೈತಿಗಳಂತೆ ನಾವೂ ಅತ್ಯಂತ ಭೇದವನ್ನು ಹೇಳುವದಿಲ್ಲ ಕಿಂತುಸೂತ್ರಕಾರರ ಮ
ದಂತೆ ಭೇದವನ್ನೂ ಅಭೇದವನ್ನೂ ಹೇಳುತ್ತೇವೆ. ಈ ದ್ವೈತಿಗಳ ಮತದಲ್ಲಿ ಕೇವ
ಶೃತಿ ವಿರೋಧವಷ್ಟೇ ಅಲ್ಲ. ಲೋಕಾನುಭವ ವಿರೋಧವೂಕೂಡ ಉಂಟು. ಹೇ
ದರೆ ಘಟವು ಪಟಕ್ಕೆ ಅತ್ಯಂತ ಭಿನ್ನವಾಗಿರುವದರಿಂದ ಘಟವು ಪಟಕ್ಕೆ ಆಶ್ರವೂ ಆಗಿ
ಹಾಗೂ ಪಟಾಕಾರವೂ ಆಗಿಲ್ಲ. ಇದರಂತೆ ಅತ್ಯಂತ ಭಿನ್ನವಾದಾ ಕಪಾಲಾದಿ
ಘಟಕ್ಕೆ ಆಶ್ರಯವೂ ಕಪಾಲಾಕಾರವೂ ಆಗಿರಕೂಡದಲ್ಲವೆ; ಆಗಿರುವದೆಂಬುವ
ಲೋಕಾನುಭವ ಸಿದ್ಧವಲ್ಲವೆ; "ಇಹ ತಂತುಷು ಪಟಃ" "ಇಹ ಕಪಾಲೇ ಘಟಃ"ಎ
ಪ್ರತೀತಿಯಿಂದ ಉಪಾದಾನೋಪಾದೇಯಗಳಿಗೆ ಆಶ್ರಯಾಶ್ರಯಿ ಭಾವವಿ
ದೆಂಬುವದು ಪ್ರಸಿದ್ಧವೇ ಆಗಿದೆ. ಹಾಗೂ "ನಪಟಸ್ತಂತುಭ್ಯೋಭಿದ್ಯತೇ ತಂತು ಧ
ರ್ಮಾತ್" ಎಂಬ ಅನುಮಾನದಿಂದ ಉಪಾದಾನೋಪಾದೇಯಗಳಿಗೆ ಅತ್ಯಂತ ಭೇ
ವಿಲ್ಲೆಂದು ಸಿದ್ಧವಾಗುತ್ತದೆ. ಸೂತ್ರಾಕಾರರು ಚೇತನಾಚೇತನ ಪ್ರಪಂಚಕ್ಕೂ ಈ
ಪಂಚಕ್ಕೆ ಉಪಾದಾನ ಕಾರಣವಾದ ಬ್ರಹ್ಮಕ್ಕೂ ಭೇದಾಭೇದಗಳನ್ನು ಸ್ವೀಕರಿ
ವದು ಈ ಕಾಶಕೃತ್ಸ್ನ ಮತದಲ್ಲಿಯೇ ಸೂತ್ರಾಕಾರರಾದ ಶ್ರೀ ವ್ಯಾಸ ಮಹರ್ಷಿ
ಅಭಿಪ್ರಾಯವಿದೆಂಬುವದೂ ಸಹ ಪಾತಂಜಲ ದರ್ಶನದ ತಮ್ಮ ಭಾಷ್ಯದಲ್ಲಿ "ಭೂ
ಸೂಕ್ಷ್ಮಾತ್ರಾಣಾಂ ಸಾಧಾರಣೋಧರ್ಮಃ ಆತ್ಮಭೂತಃ" ಎಂಬ ಭಾಷ್ಯಸಂಕ್ತಿಯಿಂದ
"ತಸ್ಮಾತ್ಸಥಂ ಚಿದ್ಭಿನ್ನಃ ಕಥಂಚಿದಭಿನ್ನಶ್ಚಾ ಸ್ಥೇಯಃ ತಥಾಚ ಸರ್ವಮುಪಪನ್ನ
ಭೂತ ಸೂಕ್ಷ್ಮಾಣಾ ಮಿತಿ ಷಷ್ಠ್ಯಾಕಥಂಚಿದ್ಭೇದಂ ಸೂಚಯತಿ ಆತ್ಮಭೂತ ಇ
ಚಾಭೇಧಂ". ಹೀಗೆಂಬ ಆಭಾಷ್ಯದ ಟೀಕೆಯಿಂದಲೂ ಸ್ಪಷ್ಟವಾಗುತ್ತದೆ.

ಇದಲ್ಲದೇ ದ್ವೈತಿಗಳು ಘಟ ಕಪಾಲಗಳಿಗೆ ಉಪಾದಾನೋಪಾದೇಯ ಭಾ
ವನ್ನು ಸ್ವೀಕರಿಸಿ ಉಪಾದಾನಕಾರಣ ನಾಶದಿಂದ ಉಪಾದೇಯ (ಕಾರ್ಯ) ನಾಶವ
ಸ್ವೀಕರಿಸುವರು ಇವರು ಹೀಗೆ ಸ್ವೀಕರಿಸುವದು ಘಟಪಟ ದೃಷ್ಟಾಂತದಿಂದ ಸಂಗತ
ಗಲಾರದು. ಘಟಕ್ಕೆ ಅತ್ಯಂತ ಭಿನ್ನವಾದ ಘಟನನಾಶದಿಂದ ಘಟದ ನಾಶವಾಗುವದಿ
ಇದರಂತೆ ಘಟಕ್ಕೆ ಅತ್ಯಂತ ಭಿನ್ನವಾದ ಕಪಾಲ ನಾಶದಿಂದಲೂ ಘಟದ ನಾಶವ
ಬಾರದಷ್ಟೆ; ಆಗುವದೆಂಬುದು ಪ್ರತ್ಯಕ್ಷ ಸಿದ್ಧವಾದ್ದರಿಂದ ಉಪಾದಾನೋಪಾದೇ
ಗಳಿಗೆ ಅತ್ಯಂತ ಭೇದವನ್ನು ಹೇಳದೇ ಭೇದಾಭೇದಗಳನ್ನು ಹೇಳಬೇಕು. ಇದ
ಅಂಶಾಂಶಿಗಳಿಗೆ ಅತ್ಯಂತ ಭೇದವನ್ನೇ ಹೇಳುವ ದ್ವೈತಿಗಳ ಮತದಲ್ಲಿ ಅಗ್ನಿಯಿಂ
ಗುವ ದಾಹಾದಿ ಕಾರ್ಯಗಳು ಅಗ್ನಿಕಿಡಿಯಿಂದಾಗಬಾರದಾಗುವದು. ಅಗ್ನಿಗೆ ಅತ್ಯ
ಭಿನ್ನವಾದ ಜಲದಿಂದ ತೃಣ ತೂಲಾದಿಗಳ ದಾಹವಾಗುವದಿಲ್ಲವಷ್ಟೇ; ಅಂಶಾಂ
ಳಿಗೆ ಅತ್ಯಂತ ಭೇದವನ್ನು ಹೇಳಕೂಡದು. ಕಿಂತು ಭೇದಾಭೇದಗಳನ್ನು ಹೇಳಬೇಕು

ಇನ್ನು ಕೇವಲಾದ್ವೈತಿಗಳು ರಜ್ಜು ಸರ್ಪಗಳಲ್ಲಿ ಯಾವವಾದರೊಂದ

CC-0. Jangamwadi Math Collection. Digitized by eGangotri

ಮಿಥ್ಯೆಯನ್ನುವಂತೆ ಬ್ರಹ್ಮ ಪ್ರಪಂಚಗಳಲ್ಲಿ ಯಾವದಾದರೊಂದಕ್ಕೆ (ಪ್ರಪಂಚಕ್ಕೆ) ಮಿಥ್ಯೆಯೆಂದು ನಾವುಹೇಳುವದಿಲ್ಲ. ಬ್ರಹ್ಮವೊಂದೇ ಸತ್ಯವೆಂದೂ ಪ್ರಪಂಚವು ಮಿಥ್ಯೆ ಯೆಂದೂ ಹೇಳುವದಾದರೆ "ಸತ್ಯಕಾಮಃ ಸತ್ಯಸಂಕಲ್ಪಃ" "ಯಃಸರ್ವಜ್ಞಃ ಸರ್ವವಿತ್" ಇತ್ಯಾದಿ ಶೃತಿಗಳಿಂದ ಹೇಳಲ್ಪಡುವ ಸ್ವಾಭಾವಿಕಾನಂತ ಕಲ್ಯಾಣಗುಣಗಳಿಗೆ ಭಂಗ ಪ್ರಸಂಗವೇ ಬರುವದು. ಯಾಕೆಂದರೆ ಕೇವಲಾದ್ವೈತಿಗಳ ಮತದಲ್ಲಿ ಬ್ರಹ್ಮವು ನಿರ್ವಿ ಶೇಷವಾಗಿರುವದು.(ಸ್ವಗತಭೇದ ಸಜಾತೀಯಭೇದ ವಿಜಾತೀಯ ಭೇದಗಳಿಲ್ಲದಿರುವ ದಾಗಿರುವದು.) ಅಂದರೆ ಮಾವಿನಹಣ್ಣಿನಲ್ಲಿ ಆಮ್ಲಾದಿ ಗುಣಗಳಿರುವಂತೆ ಬ್ರಹ್ಮದಲ್ಲಿ ಸ್ವಗತ (ಗುಣಗಳು) ಇಲ್ಲವೆಂಬಮೇಲೆ ಬ್ರಹ್ಮದಲ್ಲಿ ಸತ್ಯ ಕಾಮಾದಿ ಶೃತಿಗಳಿಂದ ಹೇಳಲ್ಪಡುವ ಅನಂತ ಕಲ್ಯಾಣಗುಣಗಳಿಗೆ ಭಂಗವನ್ನೇ ಹೇಳಬೇಕಾಗುವದು. ಹೇಳಿದರೆ "ದ್ವಾಸುಪರ್ಣಾ" "ದ್ವೇಬ್ರಹ್ಮಣೇ" ಆತ್ಮಾಸಾಹಿ ತದ್ಧರ್ಮನಾತ್" ಇತ್ಯಾದಿ ಶೃತಿ ಸೂತ್ರಗಳಿಗೆ ವಿರೋಧವಾಗುವದು. ವಿಜಾತೀಯವಾದ ಜಡಮಾಯಾ ಪ್ರಕೃತಿ ಯಿರಲು ಇವರ ಭೇದವಿಲ್ಲೆಂದು ಹೇಳಲಾಗುವದಿಲ್ಲ. ಹೇಳಿದರೆ"ವಿದ್ಯಾವಿದ್ಯಾಕ್ಷರತೇ" "ಅವಿದ್ಯಯಾ ಮೃತ್ಯುಂತೀರ್ತ್ವಾ" ಇತ್ಯಾದಿ ಶೃತಿಗಳಿಗೆ ವಿರೋಧವಾಗುವದು.

ಭಾ: ಈರೀತಿಯಾಗಿ ವಸ್ತುತಃ ಸ್ವಃಶಕ್ತಿ ಕ್ಷೋಭಾವಸ್ಥೆಯಲ್ಲಿ (ಸೃಷ್ಟಿದೆಶೆಯಲ್ಲಿ) ಸ್ವಗತ ಸಜಾತೀಯ ವಿಜಾತೀಯ ಭೇದಗಳಿಂದ ಯುಕ್ತವಾದ ಬ್ರಹ್ಮದಲ್ಲಿ ಅಭೇದ ಗಳಿಲ್ಲವಾದ್ದರಿಂದ ಬ್ರಹ್ಮವು ನಿರ್ವಿಶೇಷವೆಂದು ಹೇಳುವದು ಅಯುಕ್ತವಾಗಿದೆ. ಇದಲ್ಲದೆ "ಯತೋ ವಾ ಇಮಾನಿ ಭೂತಾನಿ ಜಾಯಂತೇ ಯತ್ಪ್ರಯಂತ್ಯಭಿ ವಿಶಂತಿ ತದ್ಬ್ರಹ್ಮ ತದ್ವಿ ಜಿಜ್ಞಾಸ ಸ್ವೈ" ಇತ್ಯಾದಿ ಶೃತಿಗಳಿಂದ ಹೇಳಲ್ಪಡುವ ಜಗಜ್ಜನ್ಮಾದಿ ಗಳಿಗೆ ವಸ್ತುತಃ ಕಾರಣವೇಇಲ್ಲ. ಜಗತ್ತು ಇದ್ದರಲ್ಲವೆ ಬ್ರಹ್ಮವು ಅದಕ್ಕೆ ಕಾರಣವಾಗ ಬೇಕು. ಜಗತ್ತೇಮಿಥ್ಯೆಯಾಗಿರುವಾಗ ತತ್ಕಾರಣತ್ವ ವಿಶೇಷವು ಬ್ರಹ್ಮದಲ್ಲಿ ಇಲ್ಲವೇ ಇಲ್ಲ. ಆದ್ದರಿಂದ ಬ್ರಹ್ಮವು ನಿರ್ವಿಶೇಷವು ಆಗಿರುವದೆಂದರೆ ಜಗತ್ಕಾರಣವನ್ನು ಪ್ರತಿಪಾ ದಿಸುವ "ಯತೋವಾ ಜನ್ಮಾದ್ಯಸ್ಯಯತಃ" ಇತ್ಯಾದಿ ಶೃತಿಸೂತ್ರಗಳಿಗೆ ವಿರೋಧವಾ ಗುವದಲ್ಲದೇ ಏಕಜ್ಞಾನದಿಂದ ಸರ್ವಜ್ಞಾನವನ್ನು ವಿಧಿಸುವ ಪ್ರತಿಜ್ಞಾಶೃತಿಗೆ ವಿರೋಧ ವಾಗುವದು. ಮಣ್ಣು ಮಡಿಕೆಗಳಿಗೆ ಕಾರ್ಯಕಾರಣ ಭಾವವಿರುವದರಿಂದ ಕಾರಣ (ಮಣ್ಣಿನ) ಜ್ಞಾನದಿಂದ ಮಡಿಕೆಗಳ ಜ್ಞಾನವಾಗುತ್ತದೆ. ಹೀಗೆ ಜಗತ್ತು ಬ್ರಹ್ಮಗಳಿಗೆ ಕಾರ್ಯಕಾರಣ ಭಾವವೆ ಇಲ್ಲದಿರುವದರಿಂದ ಬ್ರಹ್ಮಜ್ಞಾನವಾದರೂ ಜಗತ್ತಿನ ಜ್ಞಾನ ವಾಗಲಾರದು ಆದ್ದರಿಂದ ಆಪ್ರತಿಜ್ಞಾ ವಾಕ್ಯಕ್ಕೆ ಭಂಗವೇ ಪ್ರಾಪ್ತವಾಗುವದು.

ಭಾ :– ಇದಲ್ಲದೆ ಈ ಜಗನ್ಮಿಥ್ಯಾವಾದಿಗಳಾದ ಅದ್ವೈತಿಗಳ ಮತದಲ್ಲಿ ಮೂರ್ತ (ಸಗುಣ) ಬ್ರಹ್ಮೋಪಾಸನೆಯೂ ಹಾಗೂ ಅಮೂರ್ತ (ನಿರ್ಗುಣ) ಬ್ರಹ್ಮೋ ಪಾ ಸ ನೆ ಯೂ ನಿರರ್ಥಕಗಳೇ ಆ ಗಿ ಹೋ ಗು ವ ವು ಯಾ ಕೆಂ ದ ರೆ ಇವರ ಮತದಲ್ಲಿ ಸಗುಣಬ್ರಹ್ಮವು (ಈಶ್ವರನು) ಮಿ ಥ್ಯೆ ಯಾ ಗಿ ರು ವ ದ ರಿಂ ದ

CC-0. Jangamwadi Math Collection. Digitized by eGangotri

ತನ್ನ ಉಪಾಸಕರಿಗೆ ಸತ್ಯವಾದ ಫಲವನ್ನು (ಮೋಕ್ಷವನ್ನು) ಕೊಡಲಾರದು. ತಾ
ಸತ್ಯವಾಗಿಲ್ಲದಿರಲ್ಲವೇ ಅನ್ಯರಿಗೆ ಸತ್ಯವಾದ ಫಲವನ್ನು ಕೊಡುವದು. ಲೋಕದಲ್ಲಿ
ವವನು ಅನ್ಯರಿಗೆ ಇಷ್ಟಾರ್ಥವನ್ನು ಕೊಡಬಲ್ಲನು. ಲೋಕದಲ್ಲಿಲ್ಲದವನು (ಮಿಥ್ಯ
ಭೂತಸ್ಥಾಣು ಪುರುಷನು) ಇಷ್ಟಾರ್ಥವನ್ನು ಕೊಡಬಲ್ಲನೆ ? ಎಂದೂ ಕೊಡಲಾ
ವಸ್ತುತಃ ಇವರ ಮತದಲ್ಲಿ ಅಸತ್ತಾದ ಸಗುಣಬ್ರಹ್ಮವು ತನ್ನ ಉಪಾಸಕರಿಗೆ ಇ
ಫಲವನ್ನು ಕೊಡಲಾರದಾದ ಕಾರಣ ಸಗುಣ ಬ್ರಹ್ಮೋಪಾಸನೆಯು ವಿಫಲವಾ
ಪ್ರಸಂಗವು ಬರುವದು. ಇನ್ನು ನಿರ್ಗುಣ ಬ್ರಹ್ಮವಂತೂ ಉಪಾಸನೆಗೆ ವಿಷಯ
ಅಲ್ಲ. "ಉಪಾಸನಾಯಾಃ ಕಿಂಚಿದ್ಗುಣ ವಿಷಯಕತ್ವ ನಿಯಮಾತ್" ಉಪಾಸನೆ
ಯಾವದಾದರೊಂದು ಗುಣವನ್ನು ವಿಷಯಮಾಡಿಕೊಂಡೇ ಇರಬೇಕಾಗುವ
ನಿರ್ಗುಣ ಬ್ರಹ್ಮದಲ್ಲಿ ಗುಣವೇ ಇಲ್ಲದಿರುವಾಗ ಇದರ ಉಪಾಸನೆಯೇ ಯುಕ್ತವಾ
ವದಿಲ್ಲ. ಆದುದರಿಂದ ನಿರ್ಗುಣ ಬ್ರಹ್ಮೋಪಾಸನೆಯು ವ್ಯರ್ಥವಾಗುವದು. ಉಪ
ದಾದಿ ಶಾಸ್ತ್ರೋಕ್ತವಾದ ಉಪಾಸನೆಯು ವ್ಯರ್ಥವಾಗಬಾರದೆಂದು ಸಗುಣ ಬ್ರಹ್ಮ
ಸತ್ತ್ಯತ್ವವನ್ನು ಒಪ್ಪಿದರೆ ಸ್ವಗತಭೇದವನ್ನು ಒಪ್ಪಿಕೊಳ್ಳಲೇ ಬೇಕಾದುದರಿ
ಅದ್ವೈತಿಗಳು ಹೇಳುವಂತೆ ನಾವು ಕೇವಲ ಅಭೇದವೊಂದಕ್ಕೇನೇ.

ಭಾ :– ಪಾರಮಾರ್ಥಿಕವೆಂದು ಹೇಳದೆ ಭೇದವೂಕೂಡ ಪಾರಮಾರ್ಥಿಕವೆಂ
ಹೇಳುವೆವು. ಹೀಗೆ ಹೇಳೋಣದರಿಂದ "ದ್ವಾಸುಪರ್ಣಾ" ಇತ್ಯಾದಿ ಭೇದ ಪ್ರತಿಪಾ
ಶೃತಿಗಳಿಗೆ ಸಮನ್ವಯವು ಆಗುವದು. ಕೇವಲಾದ್ವೈತಿಗಳ ಮತದಲ್ಲಿ ಆಗುವದಿ
ವಾದುದರಿಂದ ಸರ್ವ ಶೃತಿ ಸಮನ್ವಯ ವಿರಹಿತ ಕೇವಲ ಅಭೇದನಾದಿಗಳಾಗದೆ ಸ
ಶೃತಿ ಸಮನ್ವಯವುಳ್ಳ ಭೇದಾಭೇದನಾದಿಗಳಾಗಿರುವವೆಂದು ಭಾಷ್ಯಕಾರ
" ತಸ್ಮಾದ್ವಯಂ ಸರ್ವಶೃತಿ ಸಮನ್ವಯ ಭೇದಾಭೇದನಾದಿನಃ " ಈ ಪಕ್ತಿಯಿ
ತಮ್ಮ ದ್ವೈತಾದ್ವೈತ ಮತವನ್ನು ತೋರಿಸಿ "ಇತಿರಾದ್ಧಾಂತಃ" ಎಂಬ ಗ್ರಂಥದಿ
ಈ ದ್ವೈತಾದ್ವೈತ ಮತವೇ ವೇದಾಂತ ಸಿದ್ಧಾಂತವಲ್ಲದೆ ಕೇವಲಾದ್ವೈತ ಮತ
ವೇದಾಂತ ಸಿದ್ಧಾಂತವಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. "ಜ್ಞಾ ಜ್ಞಾ ದ್ವಾವ
ವೀಶಾನೀಶಾ" "ಪ್ರಧಾನ ಕ್ಷೇತ್ರಜ್ಞ ಪತಿರ್ಗುಣೇಶಃ" ಈ ಮುಂತಾದ ಶೃತಿಗಳ
ಅದ್ವಿತೀಯನಾದ ಪರಬ್ರಹ್ಮ ಪರಶಿವನಿಗೆ ಸರ್ವಜ್ಞತ್ವಾದಿ ಅಸಾಧರಣ ಧರ್ಮ
ಉಪದೇಶವಿರುವದರಿಂದ ಪರಶಿವನು ಶುದ್ಧ ಚಿದ್ರೂಪನೆಂದೂ (ಶಿವನಿಗೆ ಜಡನಾ
ಮಾಯಾಪಾಶದ ಸಂಬಂಧವೇ ಇಲ್ಲವೆಂದೂ "ಆತ್ಮಾಯಂ ಕೇವಲಃ ಶುದ್ಧ
ಶಿವಸ್ಯಾಂಶಃ ಸದಾಮಲಃ" ಎಂಬ ಅನುಭವ ಸೂತ್ರೋಕ್ತಿಯಂತೆ ಶುದ್ಧ ಶಿವಾ
ರೂಪನಾದ ಆತ್ಮನು ತನ್ನ ಸೇನಾಬಲ ವಿರಹಿತನಾದ ರಾಜನು ಶತ್ರುವಿಗೆ ಆಧೀನನಾ
ಅವನಿಂದ ಬಂಧಿತನಾಗುವಂತೆ ಮಾಯಾವಶನಾಗಿ ಮಾಯೆಯಿಂದ ಬಂಧಿತನಾಗಲು
ತನ್ನ ಪೂರ್ವ ಶಿವರೂಪವನ್ನು ಮರೆತು ನಾನು

CC-0. Jangamwadi Math Collection. Digitized by eGangotri

ಭಾ:– ಅಜ್ಞನು ಎಂದು ಅಜ್ಞತ್ವ (ಜಡತ್ವ) ವುಳ್ಳವನಾಗಿ ಜೀವನೆನಿಸುವನು. "ವಿಕಲ್ಪ ಕ್ಷಯ ಶಕ್ತಿ ಸಂಕೋಚ ವಿಕಾರ್ಸವಾಹಚ್ಛೇದಾದ್ಯಂತ ಕೋಟಿ ನಿಭಾಲ ನಾಪಯಃ" ಇಂತೆಂಬಶಕ್ತಿ ಸೂತ್ರದಂತೆ ಶಿವಯೋಗೋಪಾಯುಗಳನ್ನು "ಗುರು ರೂಪಾಯಃ" ಎಂಬ ಶಿವಸೂತ್ರನಂತೆ ಗುರುಮುಖದಿಂದ ತಿಳಿದು ಆಚರಿಸಿ ತನ್ನಚಿತ್ತ ಜಾಡ್ಯವನ್ನು- ಕಳೆದುಕೊಂಡು ಆ ಚಿತ್ತವನ್ನು ಅಜಡ ಚಿತಿಯನ್ನಾಗಿ ಮಾಡಿ ಕೊಳ್ಳಲು ಆಗ ಆಜಡತ್ವವುಳ್ಳವನಾಗಿ ಅಜಡ ಶಿವನೆನಿಸುವನು. ಮುಕ್ತಿ ದೆಶೆಯಲ್ಲಿ ಜೀವನಿಗೆ ಅಜಡತ್ವವೂ ಇರುವದರಿಂದ ಇವನಿಗೆ ಜಡಾಜಡತ್ವಗಳನ್ನು ಭಾಷ್ಯ ಕಾರರು ಉಪದೇಶಿಸಿರುವರು. ಹಾಗೂ ಈ ಜೀವನಜಡಾ ಜಡತ್ವಗಳು "ಜಾನಾಮಿ ನ ಜಾನಾಮಿ" ಇತ್ಯಾದಿ ವ್ಯವಹಾರದಿಂದ ಸರ್ವರ ಅನುಭವ ಸಿದ್ಧಗಳೇ ಆಗಿರುವ ವೆಂಬುವನ್ನು ಸಹ "ಸರ್ವಾನುಭವ ಸಿದ್ಧಂ" ಎಂಬುದರಿಂದ ತೋರಿಸಿದ್ದಾರೆ.

ಈ ಪ್ರಕಾರವಾಗಿ ಕೇವಲ ಅಜಡ, ಜಡಾಜಡ ಪದಾರ್ಥಗಳನ್ನು ನಿರೂಪಿಸಿ ಇನ್ನು ಕೇವಲ ಜಡ ಪದಾರ್ಥವನ್ನು ಮಹದಾದಿಲ ಎಂಬ ಗ್ರಂಥದಿಂದ ನಿರೂಪಿಸಲುದ್ಯುಕ್ತ ರಾಗಿರುವರು. " ಪ್ರಕೃತೇರ್ಮಹಂಸ್ತತೋಽಹಂಕಾರಸ್ತಸ್ಮಾದ್ಗಣಶ್ಚ ಷೋಡಶಕಃ । ತಸ್ಮಾದಪಿ ಷೋಡಶಕಾತ್ಪಂ ಪಂಚಭ್ಯಃ ಪಂಚ ಭೂತಾನಿ"॥ ಎಂಬ ಸಾಂಖ್ಯೋಕ್ತಿ ಯಂತೆ ಮಹತ್ತತ್ವ (ಬುದ್ಧಿ) ಮೊದಲು ಮಾಡಿಕೊಂಡು ಪೃಥವೀ ತತ್ವದವರೆಗಿರುವ ೨೩ ತತ್ವಗಳಿಗೆ ಉಪಾದಾನ ಕಾರಣವಾಗಿರುವ ಪ್ರಕೃತಿ ತತ್ವ(ಪ್ರಧಾನ)ವೇ ಸತ್ವ ರಜಸ್ತಮೋ ಗುಣಗಳ ಸೌಮ್ಯಾವಸ್ಥಾರೂಪವಾದ ಪ್ರಕೃತಿಯೇ ಕೇವಲ ಜಡ ಪದಾ ರ್ಥವು ಇದೇ ಪಾಶವು ಜಡಾ ಜಡವೇ ಪಶು ಅಜಡವೇ.

ಭಾ:– ಪತಿತತ್ವವಾಗಿರುಪದು. ಹೀಗೆ ಭಾಷ್ಯಕಾರರು ಪತಿ, ಪಶು, ಪಾಶಗಳೆಂಬ ಮೂರು ತತ್ವಗಳನ್ನು ನಿರೂಪಿಸಿ ಪತಿ (ಶಿವ) ತತ್ವದಲ್ಲಿ ಮೂರ್ತತ್ವ (ಪರಿಚ್ಛಿನ್ನತ್ವ) ಅಮೂರ್ತತ್ವ (ಅಪರಿಚ್ಛಿನ್ನತ್ವ) ಗಳು ಪರಸ್ಪರ ವಿರುದ್ಧಗಳಾಗಿರುವದರಿಂದ ಸಂಭವಿಸ ಲಾರವೆಂದು ಆಶಂಕಿಸಿ ದೃಷ್ಟಾಂತ ಪುರಃಸ್ಸರವಾಗಿ ಸಂಭವಿಸುವವೆಂದು. "ಸರ್ವಾ ಧಿಷ್ಠಾನಸ್ಯ" ಇತ್ಯಾದಿ ಪಂಕ್ತಿಯಿಂದ ಹೇಳುತ್ತಾರೆ.

ಸರ್ವಾಧಿಷ್ಠಾನನೂ ಸರ್ವ ವ್ಯಾಪಕನೂ ಆಗಿರುವ ಪರಶಿವನಲ್ಲಿ ಪರಸ್ಪರ ವಿರುದ್ಧ ಗಳಾದ ಪರಿಚ್ಛಿನ್ನತ್ವಾಪರಿಚ್ಛಿನ್ನತ್ವಗಳನ್ನು ಹೇಗೆ ಹೇಳುವಿರಿ ? ಪರಿಚ್ಛಿನ್ನತ್ವವೆಂದರೆ ಅಲ್ಪ ಪರಿಮಾಣವು. ಅಪರಿಚ್ಛಿನ್ನವೆಂದರೆ ಅಪರಿಮಿತ ಪರಿಮಾಣವೆಂದು ಅರ್ಥವು. ಅಲ್ಪ ಪರಿಮಾಣವಿದ್ದಲ್ಲಿ ಇದಕ್ಕೆ ವಿರುದ್ಧವಾದ ಅಪರಿಮಿತ ಪರಿಮಾಣವಿರಲಾರದಷ್ಟೆ? ಹೀಗೆ ಆಶಂಕಿಸುವದು. ಯುಕ್ತವಲ್ಲ. ಯಾಕೆಂದರೆ ವಾಯುವು ಈ ದಿಕ್ಕಿನಲ್ಲಿ ಬೀಸು ತ್ತದೆ. ಈ ದಿಕ್ಕಿನಿಂದ ಬೀಸುತ್ತ ಬರುತ್ತದೆ. ಎಂಬ ವ್ಯವಹಾರದಿಂದ ವಾಯುವಿಗೆ

CC-0. Jangamwadi Math Collection. Digitized by eGangotri

ಒಂದೊಂದು ದಿಕ್ಕಿನಲ್ಲಿರುತನದಿಂದ ಪರಿಚ್ಛಿನ್ನತ್ವವನ್ನೂ ನಿಖಿಲ ಲೋಕಗಳಲ್ಲಿ ಸಂಚ್ಚ ಸುವ ತನದಿಂದಲೂ ಅಪರಿಚ್ಛಿನ್ನತ್ವವನ್ನೂ ಹೇಳಲೇಬೇಕು. ಹಾಗೂ ಪ್ರಧಾ (ಪ್ರಕೃತಿಗೆ) ಮಹತ್ತತ್ವ, ಅಹಂಕಾರ, ಕಲಾ ಕಲರೂಪದಿಂದ ಅಪರಿಚ್ಛಿನ್ನತ್ವವ ತೇಜಃಸ್ಸಲಿಲ ಪೃಥವೀರೂಪದಿಂದ ಪರಿಚ್ಛಿನ್ನತ್ವವನ್ನೂ ಹೇಳಲೇಬೇಕು. ಹೀಗೆ ಹೇ ದಿದ್ದರೆ ಸರ್ವಾನುಭವ ವಿರೋಧವಾಗುವದು. ಈವಿರೋಧ ಪರಿಹಾರಕ್ಕಾಗಿ ವಾ ಪ್ರಕೃತಿಗಳೆಂಬ ಅಚೇತನ ಪದಾರ್ಥಗಳಿಗೇನೇ ಪರಿಚ್ಛಿನ್ನತ್ವ ಪರಿಚ್ಛಿನ್ನತ್ವಗಳ ಹೇಳಬೇಕಾಗುವದೆಂದ ಮೇಲೆ ಅನಂತ ಶಕ್ತಿವಿಶಿಷ್ಟನೂಘನಾ ಅಘಟಿನಾ ಸಮರ್ಥ ಆಗಿರುವ ಪರಶಿವನಲ್ಲಿ ಪರಿಚ್ಛಿನ್ನತ್ವಾಪರಿಚ್ಛಿನ್ನತ್ವಗಳುಂಟೆಂಬುವಸು ಕೈಮುತಿ ನ್ಯಾಯ ಸಿದ್ಧವಾಗಿರುವದು. ಭಕ್ತರ ಉಪಾಸನೆಗಾಗಿ ಪರಿಚ್ಛಿನ್ನ ಇಷ್ಟಾದಿ ಲಿ ಸ್ವರೂಪನೂ ಆಗಿರುವನು. ಅಪರಿಚ್ಛಿನ್ನ (ಸರ್ವ ವ್ಯಾಪಕನೂ) ನೂ ಆಗಿರುವ ಆದುದರಿಂದ ಶ್ರೀ ರೇಣುಕ ಭಗವತ್ಪಾದರೂ ಕೂಡ "ಉಪಾಸನಾರ್ಥ ಮಂತಸ್ಯ ಪರಿಚ್ಛಿನ್ನ ಸ್ವರೂಪಿಣಾ" ಎಂದು ಅಪ್ಪಣೆ ಕೊಡಿಸಿರುವರು ಹಾಗು "ಸರ್ವಂ ಖಲ್ವಿದ ಬ್ರಹ್ಮ" "ವಿಶ್ವಾಧಿಕೋರುದ್ರೋ ಮಹರ್ಷಿಃ" ಇತ್ಯಾದಿ ಶೃತಿಗಳೂ ಸಹ ಪರಶಿ ಬ್ರಹ್ಮವು ವಸ್ತುತಃ ವಿಶ್ವಾತ್ಮಕವೂ ವಿಶ್ವಾಧಿಕವೂ ಆಗಿರುವದೆಂದು "ವಿಶ್ವರೂಪಾಯೈ ಕ್ಷವೈ ನಮೋ ನಮಃ" ಇತ್ಯಾದಿ ಶೃತಿಗಳು ವಿಶ್ವರೂಪನೂ ವಿಶ್ವ ವಿಲಕ್ಷಣನೂ ರುವನೆಂದೂ ಹಾಗೂ ಯೋಗಿಯಂತೆ ಏಕಾನೇಕ ರೂಪದಿಂದ ಇರುವನೆಂದೂ ಹೇಳು ವಾದ್ದರಿಂದ ಕೇವಲ ಚಿದ್ರೂಪನಾದ ಶಿವನಲ್ಲಿ ವಿರುದ್ಧ ಧರ್ಮಗಳು ಇರಲು ಬಾಧಕವಿಲ್ಲ ವಿರುದ್ಧ ಧರ್ಮಗಳ ಜ್ಞಾನದಲ್ಲಿ ವಿರುದ್ಧ ಧರ್ಮಗಳು ಇದ್ದೇಇರುವವಷ್ಟೇ; ಇಲ್ಲದಿದ್ದ ಶಿನಗೆ ಈ ವಿರುದ್ಧ ಧರ್ಮಗಳುಎನ್ನುವ ಜ್ಞಾನವೇ ಆಗಲಾರದು ಆದುದರಿಂದ ಜ್ಞಾ ರೂಪಿಯು ಜ್ಞಾನವದ್ರೂಪಿಯೂ ಆಗಿರುವ ಪರಶಿವನಲ್ಲಿ ಪರಿಚ್ಛಿನ್ನತ್ವಾ ಪರಿಚ್ಛಿನ್ನ ಗಳು ಕೂಡಿರುವದಕ್ಕೆ ಸಂಶಯವಿಲ್ಲ.

ಭಾ :– ಮಹೇಶ್ವರನು ಸೃಷ್ಟಿಗಿಂತಲೂ ಪೂರ್ವದಲ್ಲಿ ತನ್ನ ಶಕ್ತಿ ಸಂಕೋಚ ರೂಪದಿಂದ ನಿರಂಶನೆಂದೂ ನಿರ್ಗುಣನೆಂದೂ ಸೃಷ್ಟಿಯ ನಂತರದಲ್ಲಿ ಶಕ್ತಿ ವಿಕಾಸಭಾ ದಿಂದ ಸಾಂಶನೆಂದೂ ಸಗುಣನೆಂದೂ ವೇದಾಂತಗಳಲ್ಲಿ ಹೇಳಲ್ಪಡುವನೆಂದೂ ಮೂ ಮೂರ್ತ ರೂಪದಿಂದ ವಾಯುವು ಶೋಭಿಸುತ್ತಿರುವಂತೆ ಸದಾಶಿವನೂ ಶೋಭಿಸು ನೆಂದೂ ಮೂರ್ತಾ ಮೂರ್ತ ಸ್ವರೂಪವಾದ ಜಗತ್ತು ಮಾಯೆಯಿಂದ (ಶಕ್ತಿಯಿಂ ಹುಟ್ಟದುದರಿಂದ ಆ ಜಗದ್ರೂಪವಾಗಿರುವ ಮಾಯೆಯಂತೆಯೇ ಶಿವನೂ ಸಹ ಜಗದ್ರೂಪನೇ ಆಗಿರುವನೆಂದೂ ವೇದಾಂತ ಡಿಂಡಿಮವೂ (ವೇದಾಂತವೆ ಭೇರಿಯು) ಸಾರುತ್ತದೆಂದೂ ಈ ವೇದಾಂತ ರಹಸ್ಯವನ್ನು ತಿಳಿಯದೆ ಕೆಲ ಪಂಡಿತ ಮನುಷ್ಯರು ಮೋಹಿತರಾಗಿರುವರೆಂದೂ ಶೃತಿಗೆ ಅಪಾರ್ಥವನ್ನು ಕೊಡುವ

CC-0. Jangamwadi Math Collection. Digitized by eGangotri

ರೆಂದೂ ಶೈವಾಗಮಗಳಲ್ಲಿ ವೇದೈಕ ದೇಶಿಗಳಾದವರ ಮತಕ್ಕೆ ನಿಂದೆಯು ಕಂಡು ಬರುವದರಿಂದ ಆ ಮತವು ವಿದ್ವಾಂಸರಿಂದ ಪರಿಗ್ರಹಿಸಲು ಯೋಗ್ಯವಲ್ಲವೆಂದು ಭಾಷ್ಯಕಾರರು ಮುಮುಕ್ಷುಗಳಾದ ವಿದ್ವಾಂಸರಿಗೆ ಕನಿಕರದಿಂದ ಬೋಧಿಸಿರುವರು.

ಭಾ :– ದ್ವೈತಾದ್ವೈತ (ಭೇದಾಭೇದ)ವಾದಿಯೇ ನೀನು ಹೇಳುವ ಭೇದಾ ಭೇದಗಳು ತಮಃ ಪ್ರಕಾಶಗಳಂತೆ ಪರಸ್ಪರಾದಿ ವಿರುದ್ಧಗಳಾದ್ದರಿಂದ ಅಭೇದಾಭೇದ ಗಳನ್ನು ಒಂದು ಕಡೆಯಲ್ಲಿ ಹೇಳಲು ಬರುವದಿಲ್ಲ ತಮಸ್ಸಿದ್ದಲ್ಲಿ ಪ್ರಕಾಶವನ್ನೂ ಪ್ರಕಾಶವಿದ್ದಲ್ಲಿ ತಮಸ್ಸನ್ನೂ ಹೇಳಲಾಗುವದಿಲ್ಲವಷ್ಟೇ? ಎಂದು ಆಶಂಕಿಸಲು ಭಾಷ್ಯಕಾರರು"ನತಮಃಪ್ರಕಾಶವತ್" ಎಂಬುದು ಮೊದಲಾದ ಪಂಕ್ತಿಯಿಂದ ವಾರಣ ಮಾಡುತ್ತದೆ. ಕೇವಲಾದ್ವೈತಿಯೇ ತಮಃ (ಕತ್ತಲೆ) ಪ್ರಕಾಶ (ಬೆಳಕು) ಗಳಂತೆ ಭೇದಾಭೇದಗಳು ಪರಸ್ಪರ ವಿರುದ್ಧಗಳಲ್ಲ ಅವುಗಳಿಗೆ ವಿರೋಧವೆನ್ನುವ ನೀನು ಏಕ ಕಾಲದಲ್ಲಿ ಅವೆರಡೂ ಕೂಡಿರಲಾರವೆಂಬ ಕಾರಣದಿಂದ ವಿರೋಧವನ್ನು ಹೇಳುವಿಯೋ ಅಥವಾ ದಿವಾ ರಾತ್ರಿಗಳಂತೆ ಕಾಲ ಭೇದದಿಂದ ವಿರೋಧವನ್ನು ಹೇಳುವಿಯೋ ರೂಪ, ಜಾತಿ, ಶಬ್ದಾರ್ಥ, ಗುಣ, ಗುಣಮಣಿ ಪ್ರಕಾಶಾದಿಗಳಲ್ಲಿ ಒಂದೇ ಕಾಲದಲ್ಲಿ ಆ ಭೇದಾಭೇದಗಳು ಅವಿರುದ್ಧಗಳಾಗಿ ಶಬ್ದಾದಿಗಳಲ್ಲಿ ಕಂಡುಬರುತ್ತವೆ. ರೂಪದ ಜಾತಿಯು (ರೂಪತ್ವವು) ಎಂಬುವ ವ್ಯವಹಾರದಿಂದ ರೂಪಕ್ಕೂ ಜಾತಿಗೂ ವಿಭಾಗ ರೂಪವಾದ ಭೇದವೂ ರೂಪ ಜಾತಿಗಳಿಗೆ ಪರಸ್ಪರ ಅವಿನಾಭಾವ (ಅವಿಭಾಗ) ವಿರುವ ದರಿಂದ ಅವಿಭಾಗ ರೂಪವಾದ ಅಭೇದವೂ ಒಂದೇ ಕಾಲದಲ್ಲಿ ಒಂದೇ ರೂಪದಲ್ಲಿ ಕಂಡುಬರುವವು ಇದರಂತೆ ಈ ಶಬ್ದಕ್ಕೆ ಅರ್ಥವು ಈ ಘಟಕ್ಕೆ ಈ ನೀಲಗುಣವು ಈ ರತ್ನಕ್ಕೆ ಈಪ್ರಕಾಶವು ಇತ್ಯಾದಿ ಭೇದ (ವಿಭಾಗ) ಪ್ರತ್ಯಕ್ಷ ವ್ಯವಹಾರವಾಗುವದರಿಂದ ಭೇದವೂ ಹಾಗೂ ಶಬ್ದಾರ್ಥಗಳಿಗೂ ಗುಣ ಗುಣಿಗಳಿಗೂ ಮಣಿ ಪ್ರಕಾಶಗಳಿಗೂ ಪರಸ್ಪರ ವಿಭಾಗವಿಲ್ಲ. ಶಬ್ದವನ್ನು ಬಿಟ್ಟು ಅರ್ಥವೂ ಅರ್ಥವನ್ನು ಬಿಟ್ಟು ಶಬ್ದವೂ ಗುಣವನ್ನುಗುಣಿ (ಘಟ)ಯು ಗುಣಿಯನ್ನು ಬಿಟ್ಟು ಗುಣವೂ ಮಣಿಯನ್ನು ಬಿಟ್ಟು ಪ್ರಕಾಶವೂ ಪ್ರಕಾಶವನ್ನು ಮಣಿ (ರತ್ನ) ಯೂ ಇರುವದಿಲ್ಲವಾದ್ದರಿಂದ ಅಭೇದವು ಲೋಕಾನುಭವ ಸಿದ್ಧವೇ ಆಗಿರುವದರಿಂದ ಏಕಕಾಲದಲ್ಲಿ ಭೇದಾಭೇದಗಳಿಗೆ ವಿರೋಧವನ್ನೂ ಹೇಳಲು ಬರುವದಿಲ್ಲ. ಇದಲ್ಲದೆ ಈ ದ್ವೈತ ರೂಪವಾದ ಪ್ರಪಂಚ ದಲ್ಲಿ ಇರತಕ್ಕ ಘಟಾದಿಗಳಲ್ಲಿಯೂ ಘಟವು ಎಂಬ ನಾಮವೂ ಘಟವಿದೆ ಘಟವು ತೋರುತ್ತದೆ ಘಟವು ಪ್ರಿಯವಾಗಿದೆ ಎಂಬ ವ್ಯವಹಾರವು ಕಂಡು ಬರುವದರಿಂದ ಒಂದೇಕಾಲದಲ್ಲಿ ಒಂದೇ ಘಟದಲ್ಲಿ ನಾಮ ರೂಪ (ಅರ್ಥ) ಅಸ್ತಿಭಾತಿ ಪ್ರಿಯಗಳು ಪರಸ್ಪರ ಭಿನ್ನಗಳಾಗಿದ್ದರೂ ಅಭಿನ್ನ (ಅವಿಭಕ್ತ) ಗಳಾಗಿ ತೋರುತ್ತಿರುವದರಿಂದ ಭೇದಾಭೇದಗಳಿಗೆ ಏಕ ಕಾಲಾವಚ್ಛೇದೇನ ವಿರೋಧವಿಲ್ಲ.

CC-0. Jangamwadi Math Collection. Digitized by eGangotri

ಭಾ :– ಸದ್ರೂಪವೂ ಚಿದ್ರೂಪವೂ ಆನಂದ ರೂಪವೂ ಅದ್ವೈತ
ಉಳ್ಳ ಬ್ರಹ್ಮದಲ್ಲಿ ಅನಿತ್ಯ (ಅಸತ್) ರೂಪವೂ ಜಡ ರೂಪವೂ ದುಃಖ
ಆಗಿರುವ ಪ್ರಕೃತಿಯು ಕಾರ್ಯ ಕಾರಣ ಭಾವದಿಂದ ತೋರುತ್ತದೆ. ಒಂದೇ
ಕಾಲದಲ್ಲಿ ಒಂದೇ ಬ್ರಹ್ಮದಲ್ಲಿ ಸದ್ರೂಪವಿರುವದರಿಂದ ಸದ್ರೂಪಾ ಭೇ
ಅನಿತ್ಯವಾದ ಪ್ರಕೃತಿಯು ತೋರುವದರಿಂದ ಸದ್ರೂಪ ಭೇದವನ್ನೂ
ಚಿದ್ರೂಪ ಆನಂದಾದಿ ರೂಪಗಳು ತೋರುವುದರಿಂದ ಅವುಗಳ ಅಭೇ
ಈ ರೂಪಗಳಿಗೆ ವಿರುದ್ಧಗಳಾದ ಜಡ ದುಃಖಾದಿ ರೂಪವಾದ ಪ್ರಕೃತಿಯು
ವದರಿಂದ ಅವುಗಳ ಭೇದವನ್ನೂ ಒಪ್ಪಿಕೊಂಡೇತೀರಬೇಕು. ಇಲ್ಲವಾದರೆ
ಪ್ರಕೃತಿಗೆ ಅಧಿಷ್ಠಾನವೇ ಇಲ್ಲದಾಗುವುದು. ಹಾಗೂ “ ನಹಿ ದೃಷ್ಟೇಽನು
ನಾಮ ” ಎಂಬ ನ್ಯಾಯಕ್ಕೆ ವಿರೋಧವಾಗುವದು. ಸರ್ವಾಧಾರವಾದ ಬ್ರ
ಪ್ರಕೃತಿದ ಸ್ಥಿತಿಯನ್ನು ಹೇಳುವದು ಸಹ ಸರ್ವಾನುಭವ ಸಿದ್ಧವೇ ಆಗಿದೆ.
ಪರಿಚ್ಛಿಂತೆ ಬ್ರಹ್ಮದಲ್ಲಿ ಪ್ರಕೃತಿಯೂ ಇದರ ಇರುವಿಕೆಯೂ ಭ್ರಾಂತಿ
ವಿಷಯವಲ್ಲದೆ ವಸ್ತುತ ಇಲ್ಲವೆಂದರೆ ಅರ್ಥಸಿದ್ಧಿ, ಕ್ರಿಯಾ ಸಿದ್ಧಿಗಳಿಗೆ ವಿ
ವಾಗುವುದು. ನಿರ್ಜಲ ಪ್ರದೇಶಗಳಲ್ಲಿ ಸೂರ್ಯ ಕಿರಣಗಳನ್ನು ನೋಡಿ ಬಾಯಾ
ಮನುಷ್ಯನು ಅಲ್ಲಿ ನೀರಿದೆ ಎಂದು ಭ್ರಾಂತಿಪಡುವನು. ಆದರೆ ಅಲ್ಲಿ ಅರ್ಥದ (ನ
ಸಿದ್ಧಿ (ಪ್ರಾಪ್ತಿ) ಯಾಗುವದೇನು ? ಇಲ್ಲ. ಹಾಗೂ ಆ ಜಲವನ್ನು ಪಾನ ಮ
ವನೇನು? ಇಲ್ಲ. ಜಲ ಪದಾರ್ಥವು ಜಲಪಾನಗಳೆಂಬ ಅರ್ಥಸಿದ್ಧಿ, ಕ್ರಿಯಾಸಿದ್ಧಿ
ಆ ಮರುಭೂಮಿಯಲ್ಲಿ ಇಲ್ಲದಿರುವದು ಸರ್ವಾನುಭವ ಸಿದ್ಧವಾಗಿದೆ. ಹೀಗೆ ಪ್ರ
ಯೂ ಪ್ರಕೃತಿ ಕಾರ್ಯಗಳೂ ಬ್ರಹ್ಮದಲ್ಲಿ ಭ್ರಾಂತಿ ಕಲ್ಪಿತಗಳಾದ ಪಕ್ಷದಲ್ಲಿ ಪ್ರ
ಯೂ ಇದರ ಕಾರ್ಯಗಳಾದ ಮಹಾ ತತ್ವಾದಿ ೨೩ ತತ್ವಗಳೂ ಹಾಗೂ ಇವು
ದಾಗತಕ್ಕ ಸರ್ವ ಕ್ರಿಯೆಗಳೂ ಸಿದ್ಧಿಸದೇ ಹೋಗಬೇಕು. ಈ ರೀತಿಯಾಗಿ ಪ್ರಕೃ
ದಿಗಳಿಗೆ ಭ್ರಾಂತಿ ಕಲ್ಪಿತವೆಂದರೆ ಅರ್ಥಸಿದ್ಧಿ ಕ್ರಿಯಾಸಿದ್ಧಿಗಳಿಗೆ ವಿರೋಧವೇ ಸ
ಸುವದು. ಹೀಗೆ ಏಕ ಕಾಲದಲ್ಲಿ ಭೇದಾ ಭೇದಗಳಿಗೆ ವಿರೋಧವೆನ್ನುವ ಪ್ರ
ವಿಕಲ್ಪವನ್ನು ಖಂಡಿಸಿ ಇನ್ನು ಕಾಲಭೇದದಿಂದ ವಿರೋಧವೆನ್ನುವ ದ್ವಿತೀ
ವಿಕಲ್ಪವನ್ನು “ನದ್ವಿತೀಯಃ” ಎಂದು ಖಂಡಿಸುತ್ತಾರೆ. “ದ್ವಾಸುಪರ್ಣಾ” ಇತ್ಯಾ
ಶೃತಿಗಳಿಂದ ಭೇದಾನುಭವವು ಕಂಡು ಬರುವದರಿಂದ ಸಂಸಾರ ದೆಸೆಯಲ್ಲಿ
ಬ್ರಹ್ಮಗಳಿಗೆ ವಸ್ತುತಃ ಭೇದವನ್ನೂ “ತತ್ವಮಸಿ” “ಅಹಂಬ್ರಹ್ಮಾಸ್ಮಿ” ಇತ್ಯಾದಿ
ಗಳಿಂದುಂಟಾದ, ಅನುಭವವು ಕಂಡುಬರುವದರಿಂದ ಮೋಕ್ಷದೆಸೆಯಲ್ಲಿ. ವಸ್ತು
ಅಭೇದವನ್ನು ಒಪ್ಪಿಕೊಂಡೇತೀರಬೇಕು. ಇಲ್ಲವಾದರೆ ಶೃತ್ಯನುಭವಕ್ಕೆ ವಿರೋಧ
ಗುವದಾದ್ದರಿಂದ ಕಾಲ! ಭೇದದಿಂದ ಭೇದಾ ಭೇದಗಳಿಗೆ ವಿರೋಧವೆನ್ನುವ ದ್ವಿತೀ
ವಿಕಲ್ಪವೂ ಅಯುಕ್ತವಾಗಿದೆ.

CC-0. Jangamwadi Math Collection. Digitized by eGangotri

ಭಾ :– "ಸತ್ಯಕಾಮ ಸತ್ಯ ಸಂಕಲ್ಪಃ" ಇವೇಮೊದಲಾದ ಶೃತಿಗಳಲ್ಲಿ ಪರಶಿವ ಬ್ರಹ್ಮವು ಸೃಷ್ಟಿ, ಸ್ಥಿತಿ, ಸಂಹಾರ ತಿರೋಭಾವ, (ಬಂಧ) ಅನುಗ್ರಹ (ಮೋಕ್ಷ) ಗಳೆಂಬ ಪಂಚ ಕೃತ್ಯಗಳ ಸಂಕಲ್ಪವುಳ್ಳುದೆಂದು ಹಾಗೂ ಈ ಬ್ರಹ್ಮವು ತ್ರಿಕಾಲ ಬಾಧ್ಯವೆಂದೂ ಸಿದ್ಧವಾಗುವದರಿಂದ ಇಂದ್ರಜಾಲ ಶುಕ್ತಿರಜತಾದಿಗಳಂತೆ ಪ್ರಪಂಚವು ಕೇವಲ ತೋರಿಕೆ ಮಾತ್ರವಲ್ಲದೆ ವಸ್ತುತಃ ಇರತಕ್ಕದ್ದಾಗಿರುವದು ಹಾಗೂ ಈ ಪರಶಿವ ಬ್ರಹ್ಮವೆಂಬ ಕಾರಣವು ಮೂರು ಕಾಲಗಳಲ್ಲಿಯೂ ಸತ್ಯವಾಗಿರುವದರಿಂದ ಇದರ ಕಾರ್ಯನಾದ ಪ್ರಪಂಚವೂಕೂಡ ಮೂರುಕಾಲಗಳಲ್ಲಿಯೂ ಸತ್ಯವಾಗಿಯೇ ಇರುವದು. ಆದಕಾರಣ ಕೇವಲ ವ್ಯವಹಾರತಃ ಸತ್ಯವೆನ್ನುವದಕ್ಕೂ ಅವಕಾಶವಿಲ್ಲ. ಅದ್ದರಿಂದಲೇ ಮೂಲಾಧ್ಯಾಸವು ಯುಕ್ತವಾಗಲಾರದು ಯಾಕೆಂದರೆ ಕಾರಣವು ಸತ್ಯವಾದರೆ ಕಾರ್ಯವುಕೂಡ ಸತ್ಯವೇಆಗುವದೆಂಬ ನಿಯಮವುಂಟು. "ಜನ್ಮಾದ್ಯಸ್ಯ ಯತಃ" ಉಕ್ತವಾಗಿದ್ದುಇದೇ "ಅಥಾತೋ ಬ್ರಹ್ಮ ಜಿಜ್ಞಾಸಾ" ಎಂಬ ಸೂತ್ರದಿಂದ ಜಿಜ್ಞಾಸ್ಯ (ವಿಚಾರಯೋಗ್ಯ) ವೆಂದು ಪ್ರತಿಪಾದಿಸಲ್ಪಟ್ಟಿದೆ. ಆದುದರಿಂದ ನಿರ್ವಿಶೇಷ (ಸ್ವಗತ ಸ್ವಜಾತೀಯ ವಿಜಾತೀಯ ಬೇಧಗಳೆಂಬ ರಹಿತ)ವೂ (ಸೃಷ್ಟ್ಯಾದಿ ಕ್ರಿಯಾ ರಹಿತ) ವೂಆದ ಬ್ರಹ್ಮಕ್ಕೆ ಜಿಜ್ಞಾಸತ್ವವೇ ಸಂಭವಿಸುವದಿಲ್ಲ. ಆಬ್ರಹ್ಮದಲ್ಲಿ ಆರೋಪಿ ತವಾದ ಪ್ರಕೃತಿಯ ಸತ್ವಗುಣದಲ್ಲಿ ಪ್ರತಿ ಬಿಂಬಿಸಲ್ಪಟ್ಟ ಮಿಥ್ಯಾಭೂತ ಈಶ್ವರನೆಂಬ ಸಬಲ (ಸಗುಣ) ಬ್ರಹ್ಮಕ್ಕೆ ಜಿಜ್ಞಾಸತ್ವವು ಯುಕ್ತವೇಆಗಿದೆ- ಆದುದರಿಂದಲೇ "ಯನ್ಮನಸಾನ ಮನುತೆ ಯೇನಾಹುರ್ಮನೋಮತಂ ತದೇವ ಬ್ರಹ್ಮತ್ವಂ ವಿಧಿನೇದಂಯ ದಿದ ಮುಪಾಸತೆ" ಇಂತೆಂಬ ಕೇನೋಪನಿಷನ್ಮಂತ್ರವು ಉಪಾಸನೆಗೆ ವಿಷಯವಾದುದು ಬ್ರಹ್ಮವಲ್ಲ. ನಿರ್ವಿಶೇಷವಾದುದೇ ಬ್ರಹ್ಮವೆಂದು ಪ್ರತಿಪಾದಿಸುತ್ತದೆ. ಹೀಗೆ ಆಶಂಕೆ ಯಾಗಲು ಭಾಷ್ಯಕಾರರು "ಪೂರ್ವ ವಾಕ್ಯೋಪಾತ್ತ" ಇತ್ಯಾದಿ ಭಾಷ್ಯ ಪಂಕ್ತಿಯಿಂದ ವಾರಣ ಮಾಡುತ್ತಾರೆ ಹೇಗೆಂದರೆ ಈ ಮಂತ್ರವು ಸರ್ವೇಂದ್ರಿಯಗಳಿಗೆ ಸಾಕ್ಷಿಭೂತ ವಾದಂಥ ಬ್ರಹ್ಮಸ್ತುತಿ ಪರವಾಗಿದೆಯಲ್ಲದೆ, ಬ್ರಹ್ಮವು ವಾಙ್ಮನಸಾತೀತ ವಾದು ದಲ್ಲವೆಂಬುದನ್ನೇ ಪ್ರತಿಪಾದಿಸುತ್ತದೆ. ಸಗುಣಬ್ರಹ್ಮವೇ ಈ ಉಪನಿಷತ್ತಿನ ಉಪ ಕ್ರಮೋಪ ಸಂಹಾರ ಮಧ್ಯ ವಾಕ್ಯಗಳಿಂದ ಉಪಾಸ್ಯವೆಂದೂ ಸಿದ್ಧವಾಗುತ್ತದೆ. ಅದ್ದರಿಂದ ಸಗುಣ ಬ್ರಹ್ಮವೇ ಜಿಜ್ಞಾಸ್ಯವಾಗಿರುವದು, ಲೋಕದಲ್ಲಿ ಗಾರುಡಿಗರೂ ಮಾಂತ್ರಿಕರೂ ಪ್ರಸಿದ್ಧರಾಗಿರುವರಷ್ಟೇ ಗರುಡ ಮಂತ್ರಸಿದ್ಧಿಯನ್ನುಪಡೆದು ಲೋಕ ವಿಲಕ್ಷಣ ಕಾರ್ಯವನ್ನು ಮಾಡಲು ಸಮರ್ಥರಾದವರೇ ಮಾಂತ್ರಿಕರು. ಸಗುಣ ಮೂರ್ತಿ ಯನ್ನೇ ಮಂತ್ರದ್ವಾರಾಧ್ಯಾಸಿಸಿ ಸಾಕ್ಷಾತ್ಕರಿಸಿ ಮಂತ್ರ ಸಿದ್ಧರಾಗಿರುವ ಇವರು ಹಿಂದಿನ ಚರಿತ್ರೆಗಳಿಂದ ಹಿಂದೆ ಇದ್ದರೆಂದೂ ಈಗಲೂ ಅಲ್ಲಲ್ಲಿರುವರೆಂದೂ ಕೇಳುತ್ತೇ ವಲ್ಲವೆ. ಸಗುಣ ಮೂರ್ತಿಯೇ ಮಿಥ್ಯೆಯಾದಮೇಲೆ ಇವನ್ನು ಮಂತ್ರದ್ವಾರಾ ಧ್ಯಾಸಿಸುವ ಗಾರುಡಿಗರೂ ಮಾಂತ್ರಿಕರೂ ಕೂಡ ಮಿಥ್ಯಾಭೂತರೇ ಆಗಿಹೋದರು ಅಂದಮೇಲೆ ಲೋಕದಲ್ಲಿ ಅವರು ಕಾಣಿಸಿಕೊಳ್ಳುವದೇ ಸಂಭವಿಸಲಾರದು ಅದ್ದರಿಂದ ಸಗುಣವು ಸುಳ್ಳಲ್ಲ.

CC-0. Jangamwadi Math Collection. Digitized by eGangotri

ಭಾ :– ಬ್ರಹ್ಮದಲ್ಲಿ ಸರ್ವಜ್ಞತ್ವಾದಿ ಗುಣಗಳೂ ಈಶ್ವರನೂ ಅವಿದ್ಯಾಕಲ್ಪಿ
ಳೆಂದು ಹೇಳಿದರೆ ಆ ಈಶ್ವರೋಪಾಸನೆಯನ್ನು ವಿಧಿಸುವ ಈಗ ಕಂಡುಬರುವ ಶ್ರು
ವೇದಾಂತ, ಇತಿಹಾಸ, ಪುರಾಣ, ಆಗಮ ಮೊದಲಾದ ಭಕ್ತಿ, ಕ್ರಿಯಾ, ಜ್ಞಾನಶಾ
ಗಳಿಗೆ ಜಲಾಂಜಲಿಯನ್ನು ಬಿಡುವ ಪ್ರಸಂಗವೇ ಬಂದೊದಗುವದು. ಹಾಗೂ ಶು
ತತ್ವಪ್ರಧಾನ ಮಾಯಾರೂಪವಾದ ಅವಿದ್ಯೆಯಲ್ಲಿ ಬ್ರಹ್ಮದ ಪ್ರತಿ-ಬಿಂಬರೂಪನಾ
ಈಶ್ವರನು ದರ್ಪಣದಲ್ಲಿ ಪ್ರತಿ-ಬಿಂಬಿಸಿದ ಮುಖದಂತೆಯೂ ಕೃತಿಮ (ಸತ್ಯವಲ್ಲ
ಸಾಲಿಗ್ರಾಮದಂತೆಯೂ ಅಸದ್ರೂಪವಾಗಿರುವದರಿಂದ ಅಂತಹ ಅಸದ್ರೂಪನಾ
ಈಶ್ವರನಲ್ಲಿ ಯಾರಿಗೆ ತಾನೇ ಭಕ್ತಿ, ಶ್ರದ್ಧಾ, ವಿಶ್ವಾಸಗಳು ಉಂಟಾಗಲಾರ್ವ
ಮತ್ತು ಅಸದ್ರೂಪನಾದ ಈಶ್ವರನು ನಾನಾವಿಧ ಕರ್ಮಗಳಿಂದ ಆರಾಧಿತನಾಗಿ ಆಕರ
ಕ್ಕನುಗುಣವಾದ ನಾನಾವಿಧ ಫಲಗಳನ್ನಾದರೂ ಹೇಗೆ ಕೊಟ್ಟಾನು ? ಆದ್ದರ
ಮಿಥ್ಯಾವಾದಿಗಳು ಹೇಳುವಂತೆ ಈಶ್ವರನು ಮಿಥ್ಯಾಭೂತನಲ್ಲ. ಹಾಗೂ ಈ ಮಿಥ್
ವಾದಿಗಳ ಮತದಲ್ಲಿ "ಮಾತೃದೇವೋಭವ, ಪಿತೃದೇವೋಭವ ಆಚಾರ್ಯದೇವೋ
ಭವ" ಇತ್ಯಾದಿ ವಿಧಿವಾಕ್ಯಗಳೂ ಕೂಡ ಅಸತ್ಯಗಳಾಗುವದರಿಂದ ಗುರು ಶಿ
ಮೊದಲಾದವರ ಸಂವಾದಾದಿ ಸರ್ವ ವ್ಯವಹಾರಕ್ಕೂ ಬಾಧೆ ಬರುವದರಿಂದ ಲೋ
ದಲ್ಲಿ ಎಲ್ಲರೂ ಮೂಕರೂ ಮೂಢರೂ ಆಗುವ ಪ್ರಸಂಗವು ಬರುವದು. ಇದಲ್ಲ
"ಭೀಷಾಸ್ಮಾದ್ವಾತಃ ಪವತೇ ಭೀಷೋದೇತಿಸೂರ್ಯಃ" ಇತ್ಯಾದಿ ಶೃತಿಗಳಲ್ಲಿ ಜಗ
ಯಾಮಕನಾದ ಈಶ್ವರನಿಂದ ಬ್ರಹ್ಮವನ್ನು ಸಾಕ್ಷಾತ್ಕರಿಸಿ ಜೀವನ್ಮುಕ್ತರಾದ ಸೂರ್
ಗಳಿಗೂ ಭಯವಿರುವದರಿಂದ ತಮ್ಮ ತಮ್ಮ ಕಾರ್ಯಗಳನ್ನು ಜಾಗರೂಕರಾಗಿ ನಿಯ
ದಿಂದ ಮಾಡುತ್ತಾರೆಂಬುವದು ಗೊತ್ತಾಗುತ್ತದಲ್ಲವೆ ಈ ಶೃತ್ಯುಕ್ತವಾದ ಈಶ್ವರ
ಭಯವೂ ಕೂಡ ಮುಕ್ತವಾಗಲಾರದು. ಹಗ್ಗದಲ್ಲಿ ಕಲ್ಪಿತವಾದ ಹಾವಿನಿಂದ ಯಾ
ಗೂ ಭಯವುಂಟಾಗುವದಿಲ್ಲವಷ್ಟೆ, ಹಗ್ಗದಲ್ಲಿ ಹಾವು ಕಲ್ಪಿತವೆಂದು ತಿಳಿದವನು ಆಹ
ದಿಂದ ಭಯಪಡಲಾರನು. ಇದರಂತೆ ಬ್ರಹ್ಮದಲ್ಲಿ ಈಶ್ವರನು ಕಲ್ಪಿತನಾಗಿರುವನೆಂ
ತಿಳಿದ ಸೂರ್ಯಾದಿಗಳು ಆ ಈಶ್ವರನಿಂದ ಭಯ ಪಡಲಾರರು. ಆದುದರಿಂದಲ
"ದ್ವಾವಜಾ" "ಅಜೋಹ್ಯೇಕ" ಈ ಮುಂತಾದ ಶೃತಿಗಳಲ್ಲಿ ಜೀವೇಶ್ವರರು ಅಜನ್ಯರ
(ಕಲ್ಪಿತರಲ್ಲ)ವೆಂದು ಹೇಳುವದರಿಂದಲೂ ಕಲ್ಪಿತರೆಂದು ಹೇಳುವ ಈ ಅಧ್ಯಾಸವಾ
ಗಳ ವಾದವು ಶೃತಿ ಸಿದ್ಧವಲ್ಲ ಕಿಂತು ಶೃತಿ ವಿರುದ್ಧವಾಗಿದೆ. ಹಾಗೂ ನಿರ್ವಿಶೇ
ಬ್ರಹ್ಮವಿದೆ ಎಂಬ ವಿಷಯದಲ್ಲಿ ಯಾವದಾದರೊಂದುಪ್ರಮಾಣವು ಬೇಕಲ್ಲವೆ. ಅದಾ
ಪ್ರಮಾಣವನ್ನು ಹೇಳುವಿ ? ಶಬ್ದ ಪ್ರಮಾಣವನ್ನು ಹೇಳುವಿಯಾ ? ಅಥವ
ಅನುಮಾನ ಪ್ರಮಾಣವನ್ನು ಹೇಳುವಿಯೋ ? ಶಬ್ದ ಪ್ರಮಾಣವು ತನ್ನ ಶಕ್ತಿ
ಅಥವಾ ತನ್ನಲಕ್ಷಣಾ ವೃತ್ತಿಯಿಂದ ಪ್ರವರ್ತಿಸುತ್ತಿದೆ. ಅರ್ಥದಲ್ಲಿ ಶಬ್ದ
ಶಕ್ತಿಯಂದರೆ ಈ ಪದದಿಂದ ಈ ಅರ್ಥದ ಬೋಧವಾಗಲಿ ಎಂಬ ಈಶ್ವರೇಚ್ಛಾಸ್ವರೂ
ಪವೇಆಗಿದೆ. ಘಟ ಪದದ ಶಕ್ತಿಯು ಘಟರೂಪದ ಅರ್ಥದಲ್ಲಿದೆ. ಅದ್ದರಿಂದ ಶಕ್ಯ

CC-0. Jangamwadi Math Collection. Digitized by eGangotri

ಘಟವು ಈಘಟವೆಂಬ ಅರ್ಥದ ಜ್ಞಾನವಾಗಬೇಕಾದರೆ ಮೊದಲು ಶೃಕ್ಯತಾವಚ್ಛೇದಕ (ಘಟತ್ವ) ಜ್ಞಾನವಾಗಬೇಕು. ಆಮೇಲೆ ಘಟ ಪದಾರ್ಥದ ಜ್ಞಾನವಾಗುವದು ಸರ್ವಾನುಭವ ಸಿದ್ಧವು. ಇದರಂತೆ ಎಲ್ಲಿ ಶಕ್ಯಾರ್ಥಕ್ಕೆ ಬಾಧೆಯುಂಟೋ ಅಲ್ಲಿ ಲಕ್ಷಣಾ ವೃತ್ತಿಯನ್ನು ಸ್ವೀಕರಿಸಬೇಕಾಗುವದು. ಗಂಗಾಯಾಂ ಘೋಷಃ (ಗಂಗಾನದಿಯಲ್ಲಿ ಬೇಡರಹಳ್ಳಿಯು) ಇಲ್ಲಿಗಂಗಾ ಪದಕ್ಕೆ ಶಕ್ಯಾರ್ಥವು (ಪ್ರವಾಹವು) ಈ ಪ್ರವಾಹದಲ್ಲಿ ಆ ಹಳ್ಳಿಯು ಇರಲಾರದಾದ್ದರಿಂದ ಗಂಗಾಪದಕ್ಕೆ ಶಕ್ಯಾರ್ಥ ಸಂಬಂಧವುಳ್ಳ ತೀರದಲ್ಲಿ ಲಕ್ಷಣಾವೃತ್ತಿಯನ್ನು ಸ್ವೀಕರಿಸಬೇಕಾಗುವದು. ಅಂದರೆ ಗಂಗಾಪದಕ್ಕೆ ಗಂಗಾತೀರವು ಲಕ್ಷ್ಯಾರ್ಥವಾಗುವದು ಗಂಗಾತೀರದಲ್ಲಿ ಘೋಷವೆಂಬ ಜ್ಞಾನವಾಗಬೇಕಾದರೆ ಮೊದಲು ಲಕ್ಷತಾವಚ್ಛೇದಕವೆನಿಸುವ ತೀರತ್ವದ ಜ್ಞಾನವಾಗಬೇಕಾಗುವದು. ಇದರಂತೆ ನಿರ್ವಿಶೇಷಬ್ರಹ್ಮನಲ್ಲಿ ಶಬ್ದಪ್ರಮಾಣವನ್ನು ಹೇಳಿದರೆ ಶಕ್ಯತಾವಚ್ಛೇದಕ ಧರ್ಮವಾಗಲಿ ಅಥವಾ ಲಕ್ಷ್ಯತಾವಚ್ಛೇದಕ ಧರ್ಮವಾಗಲಿ ಇಲ್ಲದಿರುವದರಿಂದ ಶಬ್ದ ಪ್ರಮಾಣವು ಆನಿಮ್ಮ ನಿರ್ಧರ್ಮಕ ಬ್ರಹ್ಮದಲ್ಲಿ ಪ್ರವರ್ತಿಸಲಾರದು ಆದ್ದರಿಂದ ಶಬ್ದ ಪ್ರಮಾಣವನ್ನು ಹೇಳುವ ಅಸಂಗತವು. ಇದರಂತೆ ಅನುಮಾನ ಪ್ರಮಾಣವಾದರೂ ಪಕ್ಷತಾವಚ್ಛೇದಕ ಜ್ಞಾನಪೂರ್ವಕವಾಗಿಯೇ ಪ್ರವರ್ತಿಸುವದು. ಹೇಗೆಂದರೆ ಪರ್ವತೋ ವಹ್ನಿಮಾನ್ ಧೂಮಾತ್ (ಧೂಮವಿರುವದರಿಂದ ಪರ್ವತವು ವಹ್ನಿಯುಳ್ಳದ್ದು) ಇಲ್ಲಿ ಪರ್ವತವು ಪಕ್ಷವೂ ಪರ್ವತದಲ್ಲಿ "ಶಿಷಾಧೈಷಾ ವಿರಹ ವಿಶಿಷ್ಟ ಸಿದ್ಧ್ಯಭಾವಃ ಪಕ್ಷತಾ"ಪರ್ವತದಲ್ಲಿವಹ್ನಿಯಜ್ಞಾನದ ಇಚ್ಛೆಯು ವಹ್ನಿಯಜ್ಞಾನವು ಇಲ್ಲದಿರುವಿಕೆಯು ಪಕ್ಷತಾವೆನಿಸುವದು. ಪಕ್ಷತಾವಚ್ಛೇದಕವು ಪರ್ವತತ್ವವಾಗುವದು ಈ ಪರ್ವತತ್ವಜ್ಞಾನ ಇಲ್ಲದೆ "ಪರ್ವತೋ ವಹ್ನಿಮಾನ್" ಎಂಬ ಅನುಮಿತಿರೂಪ ಸಿದ್ಧಿಯಾಗಲಾರದು. ಇದರಂತೆ ನಿರ್ವಿಶೇಷಬ್ರಹ್ಮನನ್ನು ಪಕ್ಷವನ್ನಾಗಿ ಮಾಡಿಕೊಂಡು ಅಲ್ಲಿ ಅನುಮಾನದಿಂದ ಸದ್ಭಾವವನ್ನು ಸಾಧಿಸಬೇಕಲ್ಲವೆ ಯಾವದೊಂದೂ ಧರ್ಮನಿಲ್ಲದ ಆ ನಿಮ್ಮ ಬ್ರಹ್ಮದಲ್ಲಿ ಪಕ್ಷತಾವಚ್ಛೇದಕ ಧರ್ಮವೂ ಆ ಧರ್ಮಜ್ಞಾನವೂ ಇಲ್ಲದಿರುವದರಿಂದ ಅನುಮಾನ ಪ್ರಮಾಣವೂಕೂಡ ಆ ನಿಮ್ಮ ಬ್ರಹ್ಮದಲ್ಲಿ ಪ್ರವರ್ತಿಸಲಾರದು. ಇದಲ್ಲದೆ ಲೋಕದಲ್ಲಿ ಸಮಾನಪ್ರಕಾರಕ :ಸಮಾನ ವಿಷಯಕ ನಿಶ್ಚಯವೇ ಸಂಶಯ ವಿಪರೀತ ಭಾವನೆ ಅಸಂಭಾವನೆಗಳನ್ನು ನಿವೃತ್ತಿಗೊಳಿಸುತ್ತದೆ ಈಮನೆಯಲ್ಲಿ ಘಟವಿದೆಎಂಬ ನಿಶ್ಚಯವು ಇಲ್ಲಿ ಘಟವಿದೆಯೋ ಇಲ್ಲವೋ ಇಲ್ಲಿ ಘಟವೇ ಇಲ್ಲಎಂಬ ಸಂಶಯ ವಿಪರ್ಯೇಯಾದಿಗಳನ್ನು ನಿವೃತ್ತಿಗೊಳಿಸುತ್ತದೆ ಎಂಬುದು ಲೋಕಾನುಭವ ಸಿದ್ಧವು. ಮನೆಯಲ್ಲಿ ದ್ರವ್ಯವಿದೆಎಂಬ ನಿಶ್ಚಯವು ನಿವೃತ್ತಿಗೊಳಿಸಲಾರದು ಆದ್ದರಿಂದ ಸಮಾನವಾದ ವಿಶೇಷಣವುಳ್ಳ ಸಮಾನವಾದ ವಿಶೇಷ್ಯವುಳ್ಳ ನಿಶ್ಚಯಕ್ಕೇನೇ ಶಾಸ್ತ್ರಕಾರರು ವಿಪರ್ಯಾದಿಗಳಿಗೆ ನಿವರ್ತಕವೆಂದು ಹೇಳಿರುವರು.

CC-0. Jangamwadi Math Collection. Digitized by eGangotri

ನಿಮ್ಮ ಮತದಲ್ಲಾದರೋ ತತ್ವ ಜ್ಞಾನವೆಂದರೆ ನಿರ್ವಿಶೇಷಜ್ಞಾನವಲ್ಲವೆ. ಕ್ಷ
ಜ್ಞಾನದಲ್ಲಿ ವಿಶೇಷಣ ರೂಪ ಧರ್ಮವಾವುದೂ ಇಲ್ಲದಿರುವುದರಿಂದ "ನಾಹಂ
(ನಾನು ಬ್ರಹ್ಮನಲ್ಲವು) "ಬ್ರಹ್ಮಾಹಂಸವಾ" (ನಾನು ಬ್ರಹ್ಮನು ಆಹುದೋ
ಇಂತೆಂಬ ವಿಪರ್ಯ್ಯಯವೇ ಆಗಲಿ ಸಂಶಯವೇ ಆಗಲಿ ಇವು ಒಂದುಧರ್ಮವನ್ನು
ಣವನ್ನಾಗಿಯೂ ಮತ್ತೊಂದನ್ನು ವಿಶೇಷ್ಯವನ್ನಾಗಿಯೂ ಮಾಡಿಕೊಂಡು ಉ
ತ್ತವೆಯಾದ್ದರಿಂದ ನಿಮ್ಮ ಆ ತತ್ವ ಜ್ಞಾನವು ಸಂಶಯಾದಿಗಳಿಗೆ ನಿವರ್ತ
ಲಾರದು. ಅದೇ ನಿರ್ವಿಶೇಷತತ್ವಜ್ಞಾನವೇ ನಿವರ್ತಕವಾಗುವದೆಂದು ಹಠದಿಂದ
ದಾದರೆ ಮನೆಯಲ್ಲಿ ಘಟವಿದೆಯೋ ಇಲ್ಲವೋಎಂಬ ಸಂಶಯವು ಉಂಟಾ
ದಾಗುವದು. ಆದುದರಿಂದ ಮೇಲೆಹೇಳಿದ ಶಾಸ್ತ್ರಕಾರರ ನಿಂದುಮವನ್ನು
ಕೊಂಡೇತೀರಬೇಕು.

ಭಾ:– ಈಶ್ವರನಿಷ್ಠ ಸತ್ಯ ಕಾಮ ಸರ್ವಜ್ಞತ್ವಾದಿ ಧರ್ಮಗಳು ಜ್ಞಾನದಿಂದ
ಗಳಲ್ಲವೆಂಬ ವಿಷಯದಲ್ಲಿ ಅನುಮಾನ ಪ್ರಮಾಣವನ್ನು ತೋರಿಸುತ್ತಾರೆ. ಈ
ಆತ್ಮನಾಗಿರುವದರಿಂದಲೂ ಧರ್ಮಿಯಾಗಿರುವದರಿಂದಲೂ ಬಾಧ್ಯ ಧರ್ಮಾತಿರಿಕ್ತ
ಧರ್ಮಕ್ಕಾಶ್ರಯನೆಂದೂ ತನ್ನಜ್ಞಾನದಿಂದ ಅಬಾಧ್ಯವಾದ ಧರ್ಮಕ್ಕಾಶ್ರಯನೆಂದೂ
ಬೇಕು. ಘಟದಲ್ಲಿ ಅಥವಾ ದೇವದತ್ತನಲ್ಲಿ ಘಟತ್ವವಾಗಲಿ ಅಥವಾ ದೇವ
ವಾಗಲಿ ಘಟಜ್ಞಾನ ಅಥವಾ ದೇವದತ್ತ ಜ್ಞಾನಗಳಿಂದ ಬಾಧ್ಯಗಳಾಗಿಲ್ಲ
ಹಾಗೂ ಆ ಘಟತತ್ವಕ್ಕಾಶ್ರಯವು ಘಟವು ದೇವದತ್ತತ್ವಕ್ಕಾಶ್ರಯವು ದೇವದ
ಆಗಿರುವವು. ಬ್ರಹ್ಮನಲ್ಲಿರುವ ಸತ್ಯ ಕಾಮಾದಿ ಧರ್ಮಗಳು ಈಶ್ವರತ್ವದಂತೆ ಈಶ್ವ
ಬಿಟ್ಟು ಬೇರೆ ಕಡೆಯಲ್ಲೆಲ್ಲದಿರುವದರಿಂದ ಬ್ರಹ್ಮ ಸಾಕ್ಷಾತ್ಕಾರದಿಂದ ಬಾಧ್ಯಗ
ವದಿಲ್ಲ. ಆದುದರಿಂದ ಸತ್ಯಕಾಮ ಸರ್ವಜ್ಞತ್ವಾದಿ ಧರ್ಮಗಳು ಬ್ರಹ್ಮನಲ್ಲಿ ನಿತ್ಯ
ಗಳಾಗಿವೆಯಲ್ಲದೆ ಮಿಥ್ಯಾ ಭೂತಗಳಲ್ಲ.

ಭಾ :– ಭೇದ ಭೇದನಾದಿಯಾದ ನಿನ್ನ ಧರ್ಮಿತ್ವ (ಧರ್ಮವುಳ್ಳತನ) ಈ
ಹೇತುಗಳು ಅಪ್ರಯೋಜಕಗಳಾಗಿವೆ (ವಿಪಕ್ಷವನ್ನು ಬಾಧಿಸಲು ಅಸಮರ್ಥಗಳ
ಯಾಕೆಂದರೆ ನಮ್ಮಬ್ರಹ್ಮವೆ ನಿರ್ವಿಶೇಷವೆಂದು ಮೊದಲೇ ಹೇಳಿದ್ದೇವೆಂದಮೇಲೆ ಈ
ಹೇತುವೂಕೂಡ ಪಕ್ಷರೂಪವಾದ ಬ್ರಹ್ಮದಲ್ಲಿ ಇರಲಾರದು. ಅಂದಮೇಲೆ ಆ ಹೇ
ನಿಂದ ನಿನ್ನ ಸಾಧ್ಯವು ಸಿದ್ಧಿಸಲಾರದು. ಅಂದರೆ ಕೇವಲಾದ್ವೈತವಾದಿಯಾದ ನ
ನಿರ್ವಿಶೇಷ ಬ್ರಹ್ಮವನ್ನು ಸಿದ್ಧಗೊಳಿಸಬೇಕಲ್ಲದೆ ಆ ಬ್ರಹ್ಮದಲ್ಲಿ ಪ್ರಮಾಣವು
ಇಲ್ಲವೂ ಉಂಟೆಂದರೆ ಆ ನಿನ್ನ ನಿರ್ಧರ್ಮಕತ್ವಕ್ಕೆ ಭಂಗಬರುವದು ಇಲ್ಲವೆಂದರೆ ನಿನ್ನ
ನಿರ್ವಿಶೇಷ ಬ್ರಹ್ಮವು ಅಪ್ರಮಾಣಿಕವಾಗುವದು. ಹೀಗೆ ಪ್ರಮಾಣದ ಸತ್ವದಿಂದ

CC-0. Jangamwadi Math Collection. Digitized by eGangotri

ಅಸತ್ವದಿಂದಲೂ "ನನ್ನತಾಯಿ ಬಂಜೆ" ಎಂಬಮಾತು ವ್ಯಾಘಾತ ದೋಷದಿಂದ ಕೂಡಿರುವಂತೆ ಆನಿನ್ನ ಬ್ರಹ್ಮದಲ್ಲಿ ಪ್ರಮಾಣವನ್ನು ಹೇಳುವದು ವ್ಯಾಘಾತ ದೋಷದಿಂದ ಮುಕ್ತವಾಗಿ ಪ್ರಮಾಣ ಪ್ರಮೇಯಾದಿ ಸರ್ವ ವ್ಯವಹಾರಕ್ಕೂ ಉಚ್ಛೇದ ಪ್ರಸಂಗವೇ ಬರುವದು. ಆದ್ದರಿಂದ ಈ ಉಚ್ಛೇದ ಪ್ರಸಂಗವೇ ನನ್ನ ಹೇತುಗಳು ನಿರ್ದಿಷ್ಟಗಳೆಂದು ಸಾಧಿಸಿ ನಿನ್ನ ಪಕ್ಷಕ್ಕೆ ಬಾಧಕವಾಗಿದೆ ಆದಕಾರಣದಿಂದ ಧರ್ಮಿತ್ವ ಆತ್ಮತ್ವಗಳೆಂಬ ಹೇತುಗಳು ಅಪ್ರಯೋಜಕಗಳೆಂಬ ನಿನ್ನ ಆ ಶಂಕೆಯು ಅಯುಕ್ತವಾಗಿದೆ.

ಭಾ :– ಕೇವಲಾದ್ವೈತಿಗಳ ಮತವನ್ನು ಇಲ್ಲಿಯವರೆಗೆ ನಿರಾಕರಿಸಿ ಮತಾಂತರವನ್ನು ವಿಚಾರಿಸಲುದ್ಯುಕ್ತರಾದ ಭಾಷ್ಯಕಾರರು ಶ್ರವಣವು, ವಿಧೇಯವಲ್ಲವೆಂದು ಹೇಳುತ್ತಾರೆ. "ಆತ್ಮವಾರೇಽ ದ್ರಷ್ಟವ್ಯಃ" ಇಂತೆಂಬ ಶ್ರುತಿಯಲ್ಲಿ ಪರಮಾತ್ಮ ಸಾಕ್ಷಾತ್ಕಾರ ರೂಪವಾದ ಫಲವನ್ನುದ್ದೇಶಿಸಿ ಆ ಫಲಕ್ಕೆ ಸಾಧಕವಾಗಿ " ಶ್ರೋತವ್ಯಃ " ಎಂದು ಶ್ರವಣವು ವಿಧಿಸಲ್ಪಡುವದೆಂದು ಹೇಳುವದು ಯುಕ್ತವಲ್ಲ. ಏಕೆಂದರೆ "ಶ್ರು ಶ್ರವಣೇ" ಎಂಬ ಧಾತುವು ಶಬ್ದವೇ ಕರ್ಮವಾಗಿವುಳ್ಳ ಶ್ರವಣೇಂದ್ರಿಯಜನ್ಯ ಜ್ಞಾನವೆಂಬ ಅರ್ಥವುಳ್ಳುದಾಗಿದೆ. ಈ ಶ್ರಾ ವ ಣ ಪ್ರತ್ಯಕ್ಷವೆಂಬ ಜ್ಞಾನವು "ಸ್ವಾಧ್ಯಾಯೋಽಧ್ಯೇತವ್ಯಃ" ಇಂತೆಂಬ ಅಧ್ಯಯನ ವಿಧಿಯಿಂದಲೇ ಪ್ರಾಪ್ತವಾಗಿ ಹೋಗಿರುವದರಿಂದ ಇದಕ್ಕಾಗಿ ಶ್ರವಣ ವಿಧಿಯನ್ನು ಕಲ್ಪಿಸಲು ಪ್ರಯೋಜನವಿಲ್ಲ. ವೇದಾರ್ಥವನ್ನು ಕೇಳುತ್ತಾನೆಯೆಂದು ಪ್ರಯೋಗವು ಕಂಡು ಬರುವದರಿಂದ ಅರ್ಥ ಜ್ಞಾನದಲ್ಲಿಯೂ ಧಾತುವಿನ ಶಕ್ತಿಯನ್ನು ಹೇಳಿ ಈಜ್ಞಾನವು ವಿಧೇಯವಾಗುವದೆಂದು ಹೇಳಬಹುದಲ್ಲವೆ, ಅಂದರೆ ಹೇಳಲಿಕ್ಕೆ ಬರುವದಿಲ್ಲ. ಅರ್ಥ ಜ್ಞಾನದಲ್ಲಿಯೂ ಶಬ್ದ ಜ್ಞಾನದಲ್ಲಿಯೂ ಎರಡು ಶಕ್ತಿಗಳನ್ನು ಹೇಳುವದು ಗೌರವ ದೋಷವು. "ವೇದಾರ್ಥಂ ಶೃಣೋತಿ" ಎಂಬ ಪ್ರಯೋಗವಾದರೂ ಅರ್ಥ ಜ್ಞಾನದಲ್ಲಿ ಲಕ್ಷಣಾವೃತ್ತಿಯ ಸ್ವೀಕಾರದಿಂದಲೇ ನಿರ್ವಹಿಸಲ್ಪಡುತ್ತದೆ. ಆದೇಕೆ ಶಬ್ದಜ್ಞಾನದಲ್ಲಿಯೇ ಲಕ್ಷಣಾ ವೃತ್ತಿಯು ಇರಲಿ ಅರ್ಥಜ್ಞಾನದಲ್ಲಿ ಶಕ್ತಿಯನ್ನೇ ಸ್ವೀಕರಿಸಿ ಇದಕ್ಕೆ ವಿಧೇಯವೆಂದು ಹೇಳಬೇಕು. ಅಂದರೆ ಎಲ್ಲಿ "ಶ್ರು"ಎಂಬ ಧಾತುವಿಗೆ ಅರ್ಥ ಜ್ಞಾನವೆಂಬ ಶಕ್ಯಾರ್ಥವೇ ಇಲ್ಲವೋ ಅಲ್ಲಿ ಶಬ್ದಜ್ಞಾನವೇ ಶಕ್ಯಾರ್ಥವೆಂದು ಹೇಳಬೇಕಾಗುವದು. ಹೇಗೆಂದರೆ "ವೀಣಾನಾದಂ ಶೃಣೋತಿ" (ವೀಣಾನಾದವನ್ನು ಕೇಳುತ್ತಾನೆ.) ಎಂಬಲ್ಲಿ ಅರ್ಥ ಜ್ಞಾನವಿಲ್ಲ ಶಬ್ದಜ್ಞಾನವುಂಟು. ಆದುದರಿಂದ ನಿನ್ನವೈಪರೀತ್ಯ ಶಂಕಗೆ ಅವಕಾಶವಿಲ್ಲ ಶಬ್ದಜ್ಞಾನವೆಂಬಶ್ರಾವಣ ಪ್ರತ್ಯಕ್ಷವೇ ಶಕ್ಯಾರ್ಥವಲ್ಲದೆ ಅರ್ಥಜ್ಞಾನವಲ್ಲ. ಒಂದು ಪಕ್ಷದಲ್ಲಿ ಅರ್ಥ ಜ್ಞಾನದಲ್ಲಿ ಶಕ್ತಿಯನ್ನು ಮಾನಿಸಿದರೂ ಆ ಅರ್ಥಜ್ಞಾನವು ವಿಧೇಯವಾಗುವದಿಲ್ಲ. ಯಾಕೆಂದರೆ ಸಾಂಗವಾಗಿ ವೇದಾಧ್ಯಾಯನವನ್ನು ಮಾಡಿದವನಾದರೂ ಅವನಿಗೆ ಪದಪದಾರ್ಥಗಳ:ಸಂಬಂಧವು ತಿಳಿಯದೇ ಇರುವದರಿಂದ " ಸತ್ಯಂ ಜ್ಞಾನಮನಂತಂ ಬ್ರಹ್ಮ" ಇವೇ ಮೊದಲಾದ ವ್ಯಾಕ್ಯಗಳ ವಿಧಾನವು ತಿಳಿಯಲಾರದು

CC-0. Jangamwadi Math Collection. Digitized by eGangotri

ಆದುದರಿಂದ ಶಬ್ದಜ್ಞಾನವೆಂಬುವದು ವಿಧೇಯವಲ್ಲ. ಅಧ್ಯಯನದಿಂದ ಈವಾಕ್ಯ ಆ ಪಾತ (ಸಾಮಾನ್ಯಜ್ಞಾನವಾಗುವದು) ನಿಶ್ಚಯಾತ್ಮಕವಾದ ಜ್ಞಾನವು ಅಧ್ಯ ಮಾತ್ರದಿಂದ ಆಗಲಾರದು. ಇದು ವಿಧಿಯಿಂದಲೇ (ಅನುಷ್ಠಾನದಿಂದಲೇ) ಬೇಕಲ್ಲವೆ? ಅವಿದ್ಯಾ ನಿವೃತ್ತಿಯಾದನಂತರ ತತ್ವ ನಿಶ್ಚಯಾತ್ಮಕ ಜ್ಞಾನವೂ ಕೀಟ ಭೃಮರ ನ್ಯಾಯದಂತೆ ಗುರೂಪದೇಶವನ್ನುಪಡೆದು ಆ ಗುರುಕರುಣಾ ನಾಗಿ ಬ್ರಹ್ಮಚಿಂತನಾಸಕ್ತನಾದ ಪುರುಷನಿಗೆ ಗುರುಕೃಪೆಯಿಂದಲೇ ಪ್ರಾಪ್ತ ಹೋಗುವದರಿಂದ ವಿಧಿಯೋಗ್ಯವಲ್ಲ.

ಭಾ :– ಶ್ರವಣಶಬ್ದಕ್ಕೆ ವಿಚಾರವೆಂಬ ಅರ್ಥವೇ ವಿವಕ್ಷಿತವಾಗಿದೆಯಲ್ಲ ಈ ವಿಚಾರವೇ "ಶ್ರೋತವ್ಯಃ" ಎಂಬ ವಿಧಿ ವಾಕ್ಯಕ್ಕೆ ವಿಷಯವಾಗಿದೆಯೆಂದು ಬಹುದಲ್ಲವೆ "ತದ್ವಿಧಾಪರಃ ಶಬ್ದಾರ್ಥಃ" ಎಂಬ ಶಾಬರ ಭಾಷ್ಯದಿಂದ ವಿಧಿವಾಕ್ಯ ಲಕ್ಷಣಾವೃತ್ತಿಯ ಸ್ವೀಕಾರವಿಲ್ಲೆಂದು ಸ್ಪಷ್ಟವಾಗುತ್ತದಲ್ಲವೆ. ಈಗ "ಶ್ರೋತವ್ಯ ಎಂಬ ವಿಧಿಗೆ ವಿಚಾರದಲ್ಲಿ ಲಕ್ಷಣಾವೃತ್ತಿಯನ್ನು ಸ್ವೀಕರಿಸಿದರೆ ಪೂರ್ವಮೀಮಾಂಸೆ ವಿರೋಧವಾಗುವದು. "ನವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ" ಎಂಬುದು ಮೊದಲುಗೊಂಡು "ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ" ಎಂಬುದು ಕಡೆಯಾಗಿರುವ ವಾಕ್ಯದಿಂದ ಆತ್ಮ ತತ್ವವೇ ನಿರತಿಶಯ ಸು ರೂಪವೆಂದೂ ಆತ್ಮ ತತ್ವವೇ ಪರಮಪುರುಷಾರ್ಥವೆಂದೂ ಹೇಳಿ "ಆತ್ಮನಿ ವಿಜ್ಞಾ ಇದಂ ಸರ್ವಂ ವಿದಿತಂ" "ಏತಾವದರೇ ಖಲ್ವಮೃತತ್ವಂ" ಎಂಬ ಉಪಸಂಹಾ (ಸಮಾಪ್ತಿ) ವಾಕ್ಯದಿಂದ ಆ ಪರಮ ಪುರುಷಾರ್ಥ (ಮೋಕ್ಷ) ಕ್ಕೆ ಆತ್ಮ ತ ಜ್ಞಾನವೇ ಉಪಾಯವೆಂದು ನಿಶ್ಚಯಿಸಲ್ಪಡುವದು. ಅಂತೂ ಇಂಥ ಜ್ಞಾನವ "ದ್ರಷ್ಟವ್ಯಃ" ಎಂಬುದರಿಂದ ತೋರಿಸಿ ಈ ಜ್ಞಾನರೂಪ ಸಾಧನವಾವುದೆಂ ಆಕಾಂಕ್ಷೆಯಾಗಲು "ಶ್ರೋತವ್ಯ" ಇತ್ಯಾದಿಯಾಗಿ ಸಾಧನ ವಿಧಿಯು ತೋರಿಸ ಡುವದೆಂಬುವದೇ ನಿಶ್ಚಯವು. ಶಬ್ದ ಬೋಧಕ್ಕೆ ಅಸಾಧಾರಣ ಕಾರಣವಾಗಿರು ವಿಚಾರವೇ "ಶ್ರೋತವ್ಯಃ" ಎಂಬಲ್ಲಿರುವ ಧಾತುವಿಗೆ ಲಕ್ಷ್ಯಾರ್ಥವು ಹಾಗೂ ವಿಧೇ ಯವು ಆಗಿರುವದೆಂದು ಸ್ಪಷ್ಟವಾಗುತ್ತದೆ. "ತ್ವಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" "ನಾವೇದ ವಿನ್ಮನುತೇ ತಂ ಬೃಹಂತಂ" ನೈಷಾತರ್ಕೇಣ ಮತಿರಾ ನೇಯಾ"ಇತ್ಯಾದಿಶ್ರುತಿಗಳಿಂದ ಬ್ರಹ್ಮವು ಕೇವಲ ಉಪನಿಷತ್ ಪ್ರಮಾಣ ವೇದ್ಯವಲ್ಲ ಮತ್ತಾವ ಪ್ರಮಾಣಗಳಿಂದಲೂ ವೇದ್ಯವಲ್ಲೆಂದು ತಿಳಿದುಬರುವದರಿಂದ "ದ್ರಷ್ಟವ್ಯ ಎಂಬಲ್ಲಿರುವ ದರ್ಶನ (ಬ್ರಹ್ಮ ಸಾಕ್ಷಾತ್ಕಾರಕ್ಕೆ) ಸಾಧನದ ಆಕಾಂಕ್ಷೆಯಾಗಲು ವೇದಾಂತ ವಾಕ್ಯವೇ ಸಾಧನವೆಂದೂ ಈ ವೇದಾಂತ ವಾಕ್ಯವು ಅವಿಚಾರಿತವಾ (ವಿಚಾರಿಸಲ್ಪಡದಿದ್ದ)ರೆ ಆ ಸಾಕ್ಷಾತ್ಕಾರಕ್ಕೆ ಸಾಧನವಾಗಲಾರದಾದುದರಿಂದಲೂ ಮನನ ನಿದಿಧ್ಯಾಸಗಳಿಂದ ಸಹಿತವಾಗಿರುವ ವಿಚಾರಕ್ಕೆ ವಿಷಯವಾದ ವೇದಾಂ

CC-0. Jangamwadi Math Collection. Digitized by eGangotri

ವಾಕ್ಯವೇ ಬ್ರಹ್ಮ (ಆತ್ಮ) ಸಾಕ್ಷಾತ್ಕಾರಕ್ಕೆ ಹೇತುವು ಎಂಬುದು ಸಿದ್ಧವಾಗುವದು. "ಶ್ರೋತವ್ಯ" ಎಂಬಲ್ಲಿರುವ ಶ್ರೂ ಧಾತುವಿಗೆ ವಿಚಾರದಲ್ಲಿ ಲಕ್ಷಣಾವೃತ್ತಿಯನ್ನು ಸ್ವೀಕರಿಸಿದರೆ ನಿಧಿ ವಾಕ್ಯದಲ್ಲಿ ಲಕ್ಷಣಾವೃತ್ತಿಯನ್ನು ಸ್ವೀಕರಿಸಿದಂತಾಗುವದು. ಹೀಗೆ ಅಸ್ವೀಕೃತವಾಗುವದು ಎಲ್ಲಿಯೂ ಕಂಡು ಬರುವದಿಲ್ಲೆಂದು ಆಶಂಕಿಸಕೂಡದು.

ಭಾ:– "ಅರ್ಧ ಮಂತರ್ವೇದಿ ಮಿನೋತಿ ಅರ್ಧಂ ಬಹಿರ್ವೇದಿ" ಎಂಬಲ್ಲಿ ದೇಶಿಕ ವ್ಯಕ್ತಿ ವಿಶೇಷದಲ್ಲಿ ಲಕ್ಷಣಾವೃತ್ತಿಯೂ "ಜಾತಾ ಪುತ್ರಃಕೃಷ್ಣಕೇಶೋಗ್ನಿನಾದಧೀತ" ಎಂಬಲ್ಲಿ ವಯೋವಿಶೇಷದಲ್ಲಿ ಲಕ್ಷಣಾವೃತ್ತಿಯೂ ಉಚ್ಚೈರ್ ಋಚಾಕ್ರಿಯತೆ" ಎಂಬಲ್ಲಿ ಋಕ್ ಪದಕ್ಕೆ ವೇದ ಸಾಮಾನ್ಯದಲ್ಲಿ ಲಕ್ಷಣಾವೃತ್ತಿಯೂ "ಯಾವತೋಽಶ್ವಾನ್ ಪ್ರತಿಗೃಹ್ಣಿಯಾತ್" ಎಂಬಲ್ಲಿ ತನ್ನ ಅಶ್ವದಲ್ಲಿ ಮಾತ್ರ ಲಕ್ಷಣಾವೃತ್ತಿಯೂ "ನೇಕ್ಷೇತೋದ್ಯಂತಮಾದಿತ್ಯಂ" "ನಾಸ್ತೀಪಮಂ ವೃಣೀಣ" ಎಂಬಲ್ಲಿ ಉದಾಸೀನತ್ವದಲ್ಲಿ ಲಕ್ಷಣಾವೃತ್ತಿಯೂ "ಸಕಲಂ ಜಂಭಕ್ಷಯಾತ್" ಎಂಬಲ್ಲಿ ಬಲವದನಿಷ್ಟಕ್ಕೆ ಸಾಧನವಾವದೋ ಅದರಲ್ಲಿ ಲಕ್ಷಣಾವೃತ್ತಿಯೂ ಕಂಡು ಬರುತ್ತವೆ. ಬಹುಕಡೆ ವಿಧಿವಾಕ್ಯಗಳಲ್ಲಿ ಲಕ್ಷಣಾವೃತ್ತಿಯು ಸ್ವೀಕರಿಸಲ್ಪಟ್ಟಿರುವುದರಿಂದ "ಶ್ರೋತವ್ಯಃ" ಎಂಬ ವಿಧಿಯಲ್ಲಿಯೂ "ಶ್ರೂಶ್ರವಣೇ" ಎಂಬಧಾತುವಿಗೆ ವಿಚಾರದಲ್ಲಿ ಲಕ್ಷಣಾವೃತ್ತಿಯನ್ನು ಸ್ವೀಕರಿಸುವದು ಯುಕ್ತವೇ ಆಗಿದೆ. ವಿಚಾರವಾದರೂ ವಿಚಾರಾರ್ಹವಾದ ಘಟಾದಿ ಪದಾರ್ಥಗಳ ನಿರ್ಣಯಕ್ಕೆ ಹೇತುವಾಗಿರುವದರಿಂದ ಲೋಕಸಿದ್ಧವೇ ಆಯಿತು ಅಂದಮೇಲೆ ವಿಧಿ ವಿಷಯವಾಗಲಾರದು. ವಿಚಾರವು ಲೋಕಸಿದ್ಧವಾಗಿರುವದರಿಂದ ಅಪೂರ್ವವಿಧಿಯು ಸಂಭವಿಸದಿದ್ದರೂ ಅಲ್ಲಿ ನಿಯಮ ವಿಧಿಗೆ ಅವಕಾಶವುಂಟು. ಅದು ಹೇಗೆಂದರೆ ಮೂರು ವಿಧ ವಿಧಿಗಳುಂಟು ಅಪೂರ್ವ ವಿಧಿ, ನಿಯಮ ವಿಧಿ, ಪರಿಸಂಖ್ಯಾವಿಧಿ ಇವುಗಳಲ್ಲಿ "ವ್ರಿಹೀನ್ ಪ್ರೋಕ್ಷತಿ" ಎಂಬ ವಿಧಿಯನ್ನು ಬಿಟ್ಟು ಕಾಲತ್ರಯದಲ್ಲಿಯೂ ವ್ರೀ ಪ್ರೋಕ್ಷಣವು ಬೇರೆ ಪ್ರಮಾಣದಿಂದ ಪ್ರಾಪ್ತವಾಗಿಲ್ಲವು ಇಂತಹ ಅಪ್ರಾಪ್ತವಾದ ಪ್ರೋಕ್ಷಣದ ಪ್ರಾಪ್ತಿಯೆಂಬ ಫಲವುಳ್ಳದೇ ಅಪೂರ್ವ ವಿಧಿಯು ಇನ್ನು "ವ್ರಿಹೀನವಹಂತಿ" ಎಂಬಲ್ಲಿ ಪುರೋಡಾಶಕ್ಕಾಗಿ ಭತ್ತಗಳಿಂದ ಅಕ್ಕಿಯನ್ನು ಮಾಡಬೇಕಾಗಿದೆ. ಅಕ್ಕಿಯನ್ನು ತಯಾರಿಸಬೇಕಾದರೆ ಒನಕೆಯಿಂದಾದರೂ ಕುಟ್ಟಿ ತಯಾರಿಸಬಹುದು ಉಗುರಿನಿಂದಾದರೂ ತಯಾರಿಸಬಹುದು. ಯಾವುದರಿಂದ ತಯಾರಿಸಬೇಕು ಎಂದು ಅಪೇಕ್ಷೆಯುಂಟಾಗಲು "ಅವಹನಂತಿ" ಎಂಬ ವಿಧಿಯಿಂದ ನಖವಿದಲನರೂಪ ಉಪಾಯವನ್ನು ಬಿಟ್ಟು "ಅವಹನನ" ಎಂಬ ಉಪಾಯದಿಂದಲೇ ತಯಾರಿಸಬೇಕೆಂಬುವದೇ ನಿಯಮ ವಿಧಿಯು ಇನ್ನು "ಯಿ ಮಾಮ ಗೃಜ್ಣನ್ರನಾಮೃತ ಸ್ಯೇತ್ಯಶ್ವಾಭಿಧಾನೀ ಮಾಧತ್ತೇ" ಈ ರೀತಿಯಾಗಿ ಮೂರು ವಿಧಿಗಳುಂಟು ಇವುಗಳಲ್ಲಿ "ವ್ರಿಹೀನ ವಹಂತಿ" ಎಂಬಲ್ಲಿ ಹೇಗೋ ಹಾಗೆ "ಶ್ರೋತವ್ಯಃ" ಎಂಬಲ್ಲಿ ನಿಯಮ ವಿಧಿಯನ್ನು ಹೇಳಬಹುದು. ಅಲ್ಲಿ ತಂಡುಲ ನಿಷ್ಪತ್ತಿಗೆ ಸಾಧನವಾದ ನಖ ವಿದಲನವನ್ನು ಪರಿತ್ಯಜಿಸಿ ಅವಹನನವನ್ನು ವಿಧಿಸುವದರಿಂದ ನಿಯಮ ವಿಧಿಯನಿಸಿತು. ಇಲ್ಲಿ ಆತ್ಮಜ್ಞಾನಕ್ಕೆ ಮತ್ತಾವ ಸಾಧನವು? ಆತ್ಮವಿಚಾರವೇ ಸಾಧನವಲ್ಲವೇ ? ಯಾವ ಸಾಧನವನ್ನು ಪರಿತ್ಯಜಿಸಿ ಆತ್ಮ ವಿಚಾರವನ್ನು ವಿಧಿಸುತ್ತದೆ ? ಶರೀರಾತ್ಮ ವಿಚಾರವನ್ನು ಪರಿತ್ಯಜಿಸುತ್ತದೆಂದು ಹೇಳುವೆವು ಅಂದರೆ ಈ ವಿಚಾರಕ್ಕೆ ಮೋಕ್ಷಸಾಧಕ ಜ್ಞಾನದಲ್ಲಿ ಪ್ರಾಪ್ತಿಯೇ ಇಲ್ಲವಲ್ಲ "ದ್ವಾ ಸುಪರ್ಣಾ" "ದ್ವೇ ಬ್ರಹ್ಮಣೀ" ಈ ಮುಂತಾದ ವಾಕ್ಯಗಳಿಂದ ಸಾಮಾನ್ಯತಾಃ ಆತ್ಮಜ್ಞಾನದಲ್ಲಿ ಶರೀರಾತ್ಮ ವಿಚಾರಕ್ಕೆ [illegible] ಪ್ರಾಪ್ತಿ ಇರುವ ಮೂಲಕ ಶರೀರಾತ್ಮ ವಿಚಾರಕ್ಕೆ

CC-0. Jangamwadi Math Collection. Digitized by eGangotri

ಪರಿತ್ಯಾಗವನ್ನು ಹೇಳಿ ಶ್ರವಣ ಶಬ್ದಿತವಾದ ಆತ್ಮವಿಚಾರಕ್ಕೆ ನಿಯಮ ವಿಧಿಯನ್ನು ಹೇಳುವೆವು. ವಾಸ್ತವವಾಗಿ ಬೇರೊಂದು ಸಾಧನವಿದ್ದಲ್ಲಿಯೇ ನಿಯಮ ವಿಧಿಯೆಂದು ಹೇಳಲು ಸಾಧ್ಯವಿಲ್ಲ. ಅಪೂರ್ವ (ನೂತನ) ಭತ್ತಗಳಲ್ಲಿ ನಖವಿದಲನಕ್ಕೆ ಪ್ರಾಪ್ತಿಯೇ ಇಲ್ಲದಿರುವದರಿಂದ ನಿಯಮ ವಿಧಿಯು ಸಂಭವಿಸದೆ ಹೋದೀತು. ಏನೋ ಒಂದು ತರಹ ತಂಡುಲೀಭಾವಕ್ಕೆ (ಅಕ್ಕಿಯಾಗುವಿಕೆಗೆ) ನಖವಿದಲನಕ್ಕೆ ಪ್ರಾಪ್ತಿಯಿರುವದರಿಂದ ಅಲ್ಲಿ ನಿಯಮ ವಿಧಿಯನ್ನು ಹೇಳುವಂತೆ "ಶ್ರೋತವ್ಯಃ" ಎಂಬಲ್ಲಿಯೂ ಸಹ ಆತ್ಮಜ್ಞಾನ ಸಾಮಾನ್ಯದಲ್ಲಿ ಜೀವಾತ್ಮ ವಿಚಾರಕ್ಕೂ ಪ್ರಾಪ್ತಿಯಿರುವದರಿಂದ ಈ ಜೀವಾತ್ಮವಿಚಾರವನ್ನೂ ಪರಿತ್ಯಜಿಸಿ ಪರಮಾತ್ಮ ವಿಚಾರದಲ್ಲಿ ನಿಯಮ ವಿಧಿಯನ್ನು ಹೇಳಲು ಬಾಧಕವಿಲ್ಲ. "ಆತ್ಮಾವಾರೇ ದೃಷ್ಟವ್ಯಃ ಶ್ರೋತವ್ಯಃ" ಎಂಬ ವಿಧಿವಾಕ್ಯಗಳಲ್ಲಿರುವ ಆತ್ಮನ್‌ಶಬ್ದವು "ಇದಂ ಸರ್ವಂ ಯದಯಮಾತ್ಮಾ" "ಆತ್ಮನಿವಿಜ್ಞಾತೆ ಇದಂ ಸರ್ವಂ ವಿಜ್ಞಾತೆ" ಈ ಮೊದಲಾದ ಶೃತಿವಾಕ್ಯಗಳನ್ನು ಪರ್ಯಾಲೋಚಿಸುತ್ತಿರಲಾಗಿ ಪರಮಾತ್ಮ ಪರವೆಂದು ಸ್ಪಷ್ಟವಾಗುತ್ತದೆ.

ಭಾ :– ಸಮನ್ವಯಾಧಿಕರಣ ಭಾಷ್ಯದಲ್ಲಿ ಏಕೋರಾಮ ಸಿದ್ಧ ಭಗವತ್ಪಾದಾಚಾರ್ಯರು ಶ್ರೋತವ್ಯಃಎಂಬಲ್ಲಿ ಆತ್ಮಜ್ಞಾನ ವಿಧಿಯನ್ನು ನಿರಾಕರಿಸಿರುವರಲ್ಲದೆ. ಆತ್ಮಜ್ಞಾನವನ್ನುದ್ದೇಶಿಸಿರುವ(ಆತ್ಮಜ್ಞಾನಕ್ಕೆಸಾಧನವಾಗಿರುವ) ವಿಚಾರ ವಿಧಿಯನ್ನು ನಿರಾಕರಿಸಿಲ್ಲವು. ವಿಚಾರ ವಿಧಿಯನ್ನುಬಿಟ್ಟು ಆತ್ಮಜ್ಞಾನ ವಿಧಿಯನ್ನು ಒಪ್ಪುವದಾದರೆ ಆ ಭಗವತ್ಪಾದರ ಭಾಷ್ಯಕ್ಕೆ ವಿರೋಧವು ಆಗುವದು. ಆದುದರಿಂದ ಈ ಹಿಂದೆ ನಾವು ಹೇಳದಂತೆ "ಶ್ರೋತವ್ಯ" ಎಂಬಲ್ಲಿ ವಿಚಾರ ವಿಧಿಯನ್ನೇ ಅಂಗೀಕರಿಸಬೇಕು ಹೀಗೆ ಅಂಗೀಕರಿಸಿದರೆ ಆ ಭಗವತ್ಪಾದರ ಭಾಷ್ಯಕ್ಕೆ ವಿರೋಧವಾಗುವದಿಲ್ಲ. ಆದ್ದರಿಂದ ವಿಚಾರವೇ ನಿಯಮ ವಿಧಿಸಿದ್ಧವಾಗುತ್ತದೆ. ಹೀಗಿರಲು ಶ್ರವಣ (ವಿಚಾರ) ವಿಧಿಯಿಂದ ಅಪೇಕ್ಷಿಸಲ್ಪಡುವ ಅಧಿಕಾರಿ, ವಿಷಯ, ಫಲ ಈಮೂರನ್ನು ನಿರ್ಣಯಿಸುವ "ಅಥಾತೋ ಬ್ರಹ್ಮ ಜಿಜ್ಞಾ ಸಾ" ಎಂಬೀಸೂತ್ರವನ್ನು ಬಾದರಾಯಣಾಚಾರ್ಯರು ನಿರೂಪಿಸಿರುವರು.

ಭಾ :– "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಸೂತ್ರದಲ್ಲಿ ಅನುವಾದವಾದ ದೋಷ ಪರಿಹಾರಕ್ಕಾಗಿಯೂ ಶಾಸ್ತ್ರದಲ್ಲಿ ಪುರುಷಪ್ರವೃತ್ತಿಗಾಗಿಯೂ "ಕರ್ತವ್ಯಾ" (ಮಾಡತಕ್ಕದ್ದು) ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಸೂತ್ರದಲ್ಲಿರುವ ಜಿಜ್ಞಾಸಾ ಎಂಬ ಪದದಿಂದ ವಿಚಾರದಲ್ಲಿ ಲಕ್ಷಣಾ ವೃತ್ತಿಯನ್ನು ಸ್ವೀಕರಿಸತಕ್ಕದ್ದು. ಜಿಜ್ಞಾಸಾಎಂಬಲ್ಲಿ ಪ್ರಕೃತಿ ಪ್ರತ್ಯಯ ಸಮುದಾಯಕ್ಕೆ ಒಂದುಶಕ್ತಿಯು ಇಲ್ಲದಿರುವದರಿಂದ ಶಕ್ಯಸಂಬಂಧ ರೂಪವಾದ ಲಕ್ಷಣಾವೃತ್ತಿಯನ್ನು ಜಿಜ್ಞಾಸಾ ಪದದಿಂದ ಹೇಳಲು ಬರುವದಿಲ್ಲೆಂದು ಆಶಂಕಿಸಕೂಡದು. "ಜ್ಞಾತುಮಿಚ್ಛಾ ಜಿಜ್ಞಾಸಾ" ಎಂಬಲ್ಲಿ

CC-0. Jangamwadi Math Collection. Digitized by eGangotri

ಇಚ್ಛಾರ್ಥಕವಾದ ಸನ್ ಪ್ರತ್ಯಯದಿಂದ ವಿಚಾರದಲ್ಲಿ ಜಹಲ್ಲಕ್ಷಣಾವೃತ್ತಿಯನ್ನೂ "ಜ್ಞಾ" ಎಂಬ ಪ್ರಕೃತಿಯಿಂದ ಸಾಧ್ಯ ಜ್ಞಾನದಲ್ಲಿ ಅಜಹಲ್ಲಕ್ಷಣಾ ವೃತ್ತಿಯನ್ನೂ ಸ್ವೀಕರಿಸಿ "ಜಿಜ್ಞಾಸಾ" ಪದದಿಂದ ಸಾಧ್ಯಜ್ಞಾನ ವಿಷಯಕವಾದವಿಚಾರವು ಬೋಧಿಸಲ್ಪಡುತ್ತಡುತ್ತದೆ ಅಂದರೆ ಮೋಕ್ಷ ಸಾಧನವಾದ ಜ್ಞಾನವು (ತತ್ವಜ್ಞಾನವು) ವೇದಾಂತ ವಿಚಾರ ಸಾಧ್ಯವು ಎಂಬ ಬೋಧವಾಗುತ್ತದೆ.

ಭಾ :– ಕೆಲವರು "ಜಿಜ್ಞಾಸಾ" ಎಂಬಲ್ಲಿರುವ "ಜ್ಞಾ" ಎಂಬ ಪ್ರಕೃತಿಗೆ ಸಿದ್ಧ ಜ್ಞಾನವೇ ಅರ್ಥವೆಂದು ಅಂಗೀಕರಿಸಿ ಸನ್ ಪ್ರತ್ಯಯಕ್ಕೆ ವಿಚಾರದಲ್ಲಿ ಜಹಲ್ಲಕ್ಷಣಾ ವೃತ್ತಿಯೆಂದೂ ಸಾಧ್ಯ ಜ್ಞಾನದಲ್ಲಿಯೂ ಜಹಲ್ಲಕ್ಷಣಾವೃತ್ತಿಯೆಂದೂ ಹೇಳುವರು. ಹೀಗೆ ಹೇಳಿದರೆ ಸನ್ ಪ್ರತ್ಯಯಕ್ಕೆ ಲಕ್ಷ್ಯಾರ್ಥವಾದ ವಿಚಾರವೆಂಬ ಸಾಧನದಲ್ಲಿ ಸಿದ್ಧ ಜ್ಞಾನಕ್ಕೆ ಅನ್ವಯವಾಗುವದಲ್ಲವಾದ್ದರಿಂದ ಜ್ಞಾ ಎಂಬ ಪ್ರಕೃತಿಗೆ ಸಿದ್ಧಜ್ಞಾನವೆಂದು ಅರ್ಥಮಾಡದೆ ಸಾಧ್ಯ ಜ್ಞಾನವೆಂದು ಜಹಲ್ಲಕ್ಷಣಾ ವೃತ್ತಿಯಿಂದ ಅರ್ಥಮಾಡಿ ಪ್ರಕೃತಿ ಪ್ರತ್ಯಯಗಳೆರಡರಲ್ಲಿಯೂ ಲಕ್ಷಣಾದ್ವಯವನ್ನು ಹೇಳಬೇಕೆಂದು ಶಾಂಭವಾನಂದ ಶಿವಾನಂದರ ಅಭಿಪ್ರಾಯವಾಗಿದೆ. ಇಲ್ಲಿ ಕೆಲವರು ಪ್ರಕೃತಿ ಪ್ರತ್ಯಯ ಸಮುದಾಯ ದಲ್ಲಿ ಒಂದೇ ಲಕ್ಷಣಾವೃತ್ತಿಯೆಂದು ಹೇಳುವರು. ಅಂತಹ ಸಮುದಾಯರೂಪವಾದ ವಾಕ್ಯದಲ್ಲಿಯೂ ಲಕ್ಷಣಾವೃತ್ತಿಯು ಕಂಡುಬರುವದಿಲ್ಲವಲ್ಲಾ ಎಂದು ಶಂಕಿಸಕೂಡದು "ಅರ್ಧ ಮಂತರ್ವೇದಿ ಮಿನೋತಿ" "ವಿಷಭುಂಂಕ್ತಿ" ಈ ಮುಂತಾದಕಡೆಯಲ್ಲಿ ಲಕ್ಷಣಾ ವೃತ್ತಿಯು ಕಂಡು ಬರುತ್ತದೆಯಷ್ಟೆ.

ಭಾ :– "ಶಕ್ಯ ಸಂಬಂಧೋಹಿ ಲಕ್ಷಣಾ" ಎಂಬಂತೆ ಪ್ರಕೃತಿ ಸಮುದಾಯ ಕ್ಕೊಂದು ಶಕ್ಯಾರ್ಥವಿರಬೇಕು ಆ ಶಕ್ಯಾರ್ಥ ಸಂಬಂಧವು ಲಕ್ಷಣಾ ಲಕ್ಷಣಾವೃತ್ತಿ ಯೆನಿಸಬೇಕು. ಪ್ರಕೃತದಲ್ಲಿ ಆಸಮುದಾಯಕ್ಕೆ (ಒಟ್ಟು ಜಿಜ್ಞಾಸಾ ಪದಕ್ಕೆ) ನಿಯ ಮಿತವಾದ ಶಕ್ಯಾರ್ಥವೇ ಇಲ್ಲದಿರುವದರಿಂದ ಶಕ್ಯಾರ್ಥ ಸಂಬಂಧ ರೂಪವಾದ ಲಕ್ಷಣಾ ವೃತ್ತಿಯನ್ನು ಹೇಳಲಾಗುವದಿಲ್ಲೆಂದು ಶಂಕಿಸಕೂಡದು. ಸಮುದಾಯಕ್ಕೊಂದು ಶಕ್ಯಾರ್ಥವಿಲ್ಲದಿದ್ದರೂ ಆ ಸಮುದಾಯ ಘಟಕ ಪದಗಳ ಶಕ್ಯಾರ್ಥ ಸಂಬಂಧದಿಂದಲೇ ಸಮುದಾಯದಲ್ಲಿ ಲಕ್ಷಣಾವೃತ್ತಿಯನ್ನು ಹೇಳುವೆವು ಈ ಲಕ್ಷಣಾವೃತ್ತಿಯು ಶಕ್ಯಾರ್ಥ ವನ್ನು ಬಿಡದೆ ಲಕ್ಷ್ಯಾರ್ಥವಾದ ಸಮುದಾಯವನ್ನು ಬೋಧಿಸುತ್ತದೆ. ಆದ ಕಾರಣ ದಿಂದಇದಕ್ಕೆ ಅಜಹಲ್ಲಕ್ಷಣಾವೃತ್ತಿಯೆಂದು ನಾಮವುಂಟಾಗಿದೆ. ಸಮುದಾಯದಲ್ಲಿ ಏಕ ರೂಪ ದಿಂದ ಏಕ ಕ್ರಿಯಾನ್ವಯ ವಿಲ್ಲದಿರುವದರಿಂದ ಸಮುದಾಯದಲ್ಲಿ ಲಕ್ಷಣಾವೃತ್ತಿ ಯನ್ನು ಹೇಳಲಾಗುವದಿಲ್ಲವೆಂದು ಆಶಂಕಿಸಕೂಡದು. ಏಕರೂಪದಿಂದ ಏಕ ಕ್ರಿಯಾ ನ್ವಯವೇ ಇರಬೇಕೆಂಬುವಲ್ಲಿ ಪ್ರಮಾಣವಿಲ್ಲ.

CC-0. Jangamwadi Math Collection. Digitized by eGangotri

ಭಾ :– "ಛತ್ರಿಣೋ ಗಚ್ಛಂತಿ" (ಕೈಯಲ್ಲಿ ಕೊಡೆಯನ್ನು ಹಿಡಿದವರೂ ಕೊಡೆಯಿಲ್ಲದವರೂ ಮುಂದೆ ಹೋಗುವಾಗ ಕೊಡೆಯುಳ್ಳವರು ಹೋಗುತ್ತಾರೆ.) ಎಂಬಲ್ಲಿಯಾದರೂ ಏಕರೂಪದಿಂದ ಏಕಕ್ರಿಯಾನ್ವಯವಿಲ್ಲ. ಛತ್ರಿ ಸಹಿತತ್ವ ಹಾಗೂ ಛತ್ರಿರಹಿತ್ವಗಳೆಂಬ ನಾನಾರೂಪದಿಂದಲೆ ಅನ್ವಯವಲ್ಲದೆ ಏಕರೂಪದಿಂದಲ್ಲ. ಗಮನ ಕರ್ತೃವೆಂಬ ಒಂದೇ ರೂಪದಿಂದ ಅನ್ವಯ (ಶಬ್ದಬೋಧ) ವನ್ನು ಹೇಳುವದಾದರೆ "ಛತ್ರಿಣೋಗಚ್ಛಂತಿ" ಎಂಬುದಕ್ಕೆ ಬದಲಾಗಿ "ಗಂತಾರೋಗಚ್ಛಂತಿ" ಎಂಬಪ್ರಯೋಗ ವಾಗುವ ಪ್ರಸಂಗ ಬರುವದು. ಶಾಬ್ದ ಬೋಧದಲ್ಲಿ ಆಬೋಧವಿಷಯತಾವಚ್ಛೇದ ಧರ್ಮ ವಾವುದೋ ಅದೇ ಪ್ರಕಾರವಾಗುವದೆಂಬ ನಿಯಮವುಂಟು. "ಛತ್ರಿಣೋಯಾಂತಿ" ಎಂಬಲ್ಲಿಯಾದರೋ ಅಂತಹ ಧರ್ಮವು ಛತ್ರಿತ್ವವೇ ಆಗಿರುವದು. ಗಮನಕರ್ತೃತ್ವವಾಗಿಲ್ಲ ಗಮನ ಕರ್ತೃತ್ವವೇ ಅಂತಹ ಧರ್ಮವೆಂದರೆ ಛತ್ರಿ ಎಂಬ ಪದಕ್ಕೆ ಮುಖ್ಯಾರ್ಥವಾದ ಛತ್ರಧಾರಿಯಂಬುದೂ ಕೂಡ ಲಕ್ಷ್ಯಾರ್ಥವೆನಿಸುವ ಪ್ರಸಂಗ ಬರುವದು. ಗಂತೃ (ಗಮನಸಾಧನ) ನೇ ಮುಖ್ಯಾರ್ಥವಾಗಲಿ ಛತ್ರಧಾರಿಯೇ ಲಕ್ಷ್ಯಾರ್ಥವಾಗಿ ಬಾಧಕವೇನು ? ಯಾವದಾದರೊಂದಕ್ಕೆ ಲಕ್ಷ್ಯಾರ್ಥವೆಂದು ಹೇಳಬೇಕಾದರೆ ಅದಕ್ಕೆ ಮುಖ್ಯಾರ್ಥ ಸಂಬಂಧವಿರಬೇಕು "ಗಂಗಾ ಯಾಂ ಘೋಷಃ" ಎಂಬಲ್ಲಿ ಲಕ್ಷ್ಯಾರ್ಥ ವಾದ ತೀರಕ್ಕೆ ಮುಖ್ಯಾರ್ಥವಾದ ಪ್ರವಾಹದ ಸಾಮೀಪ್ಯ ಸಂಬಂಧವುಂಟು. "ಛತ್ರಿಣೋಯಾಂತಿ" ಎಂಬಲ್ಲಿ ಛತ್ರಿ (ಛತ್ರಿವುಳ್ಳವನು) ಎಂಬರ್ಥವೇ ಲಕ್ಷ್ಯಾರ್ಥವು ಗಂತೃವೇ ಮುಖ್ಯಾರ್ಥವೆಂದು ಹೇಳುವದಾದರೆ ಈ ಮುಖ್ಯಾರ್ಥ ಸಂಬಂಧವನ್ನು ಛತ್ರಿವುಳ್ಳವರಲ್ಲಿ ಹೇಳಬೇಕಲ್ಲವೆ? ಛತ್ರಧಾರಿಯಾದ ಮನುಷ್ಯನಿಗೆ ಗಂತೃ (ಹೋಗು ವವನು) ಎಂಬ ಮುಖ್ಯಾರ್ಥದ ಸಂಬಂಧವಿಲ್ಲದಿರುವದರಿಂದ ಗಂತೃತ್ವಕ್ಕೆ ಶಾಬ್ದ ಬೋಧಕ್ಕೆ ವಿಷಯತಾವಚ್ಛೇದಕ ಧರ್ಮವೆಂದು ಹೇಳಲು ಬರುವದಿಲ್ಲ ಛತ್ರಿಯೆಂಬ ಮುಖ್ಯಾರ್ಥವನ್ನುಬಿಟ್ಟು ಮತ್ತೊಂದಕ್ಕೆ ಮುಖ್ಯಾರ್ಥ ಕಲ್ಪನಾ ಪ್ರಸಂಗವು ಬರು ವದು. ಆದ್ದರಿಂದ "ಛತ್ರಿಣೋಯಾಂತಿ" ಎಂಬಲ್ಲಿ ಏಕರೂಪದಿಂದ ಏಕ ಕ್ರಿಯಾನ್ವಯ ವಿಲ್ಲ. ಕಿಂತು ಛತ್ರ ಸಹಿತತ್ವ ಛತ್ರ ರಹಿತತ್ವಗಳೆಂಬ ನಾನಾರೂಪದಿಂದಲೇ ಕ್ರಿಯಾ ನ್ವಯವನ್ನು ಹೇಳಬೇಕು ಕಾಗಿ, ಬೆಕ್ಕು ಮೊದಲಾದ ಪ್ರಾಣಿಗಳಿಂದ ಮೊಸರನ್ನು ರಕ್ಷಣೆ ಮಾಡಬೇಕೆಂಬ ಅಭಿಪ್ರಾಯದಿಂದ "ಕಾಕೇಭ್ಯೋದಧಿ ರಕ್ಷ್ಯತಾಂ" ಎಂದು ಹೇಳುತ್ತಾನೆ. ಇಲ್ಲಿ ಕಾಕ ಪದಕ್ಕೆ ದಧ್ಯುಪಘಾತಕ (ಮೊಸರು ಕೆಡಿಸುವ) ಪ್ರಾಣಿ ಗಳಲ್ಲಿ ಲಕ್ಷಣಾವೃತ್ತಿಯನ್ನು ಸ್ವೀಕರಿಸಿದರೂ ಕಾಕತ್ವವೇ ಶಾಬ್ದ ಬೋಧ ವಿಷಯತಾ ವಚ್ಛೇದಕ ಧರ್ಮವಲ್ಲದೆ ದಧ್ಯುಪ ಘಾತಕವಲ್ಲ. (ಕಾಕತ್ವಾಕಾರೇಣ ರಕ್ಷಣಕ್ರಿಯಾದಲ್ಲಿ ಅನ್ವಯವು) ಮುಖ್ಯಾರ್ಥದಲ್ಲಿ ಲಕ್ಷಣಾವೃತ್ತಿಯಿಲ್ಲದಿರುವದರಿಂದ ಅಜಹಲ್ಲಕ್ಷಣಾ ಸ್ಥಲದಲ್ಲಿ ವೃತ್ತಿಗಳೆರಡನ್ನು (ಶಕ್ತಿವೃತ್ತಿ ಹಾಗೂ ಲಕ್ಷಣಾ ವೃತ್ತಿಗಳನ್ನು) ಸ್ವೀಕರಿಸಲೇಬೇಕು.

ಭಾ :– ಸಕೃದುಚ್ಚರಿತ ಶಬ್ದಃ ಸಕೃದರ್ಥಂಗಮಯೀತ್ ಎಂಬುವಂತೆ ಲೋಕದಲ್ಲಿ ಘಟ ಘಟಾದಿ ಶಬ್ದಗಳು ಒಂದೇ ಉಚ್ಚರಿತವಾದ ... ಒಂದೊಂದರ್ಥವನ್ನುಂಟು

CC-0. Jangamwadi Math Collection. Digitized by eGangotri

ಮಾಡಿಕೊಡುವುದು ಪ್ರಸಿದ್ಧವಾಗಿರಲು ಜಿಜ್ಞಾಸಾ ಎಂಬ ಪದಕ್ಕೆ ವೃತ್ತಿದ್ವಯವನ್ನು ಹೇಳುವುದು ಅಪ್ರಸಿದ್ಧವಲ್ಲವೆ ಅಂದರೆ ಜ್ಞಾನದಲ್ಲಿ ಶಕ್ತಿವೃತ್ತಿಯನ್ನೂ ವಿಚಾರದಲ್ಲಿ ಲಕ್ಷಣಾವೃತ್ತಿಯನ್ನೂ ಹೇಗೆ ಹೇಳುವಿರಿ? ಎಂದು ಆಕ್ಷೇಪಿಸಕೂಡದು. 'ಗಂಗಾಯಾಂ ಘೋಷಮತ್ಸ್ಯೌ ಸ್ತಃ' (ಗಂಗೆಯಲ್ಲಿ ಗೊಲ್ಲರ ಹಳ್ಳಿಯೂ ಮೀನೂ ಇರುತ್ತವೆ) ಎಂಬ ವ್ಯವಹಾರವಿರುವುದರಿಂದ ಪ್ರವಾಹದಲ್ಲಿ ಶಕ್ತಿವೃತ್ತಿಯನ್ನೂ ತೀರದಲ್ಲಿ ಲಕ್ಷಣಾವೃತ್ತಿಯನ್ನೂ ಸ್ವೀಕರಿಸುವುದು ಲೋಕಪ್ರಸಿದ್ಧವಾಗಿದೆಯಷ್ಟೆ. ಗಂಗೆಯಲ್ಲಿ ಗೊಲ್ಲರಹಳ್ಳಿ ಮತ್ತು ಮೀನುಗಳಿರುವನೆಂಬ ಸ್ಥಲವಲ್ಲಿ ತೀರ-ಪ್ರವಾಹಗಳಲ್ಲಿ ವಕ್ತೃವಿನ ತಾತ್ಪರ್ಯವು ಪರ್ಯವಸಾನವನ್ನು ಹೊಂದಿರುವುದರಿಂದ ಅಲ್ಲಿ ವೃತ್ತಿದ್ವಯವನ್ನು ಸ್ವೀಕರಿಸಬಹುದು. ಜಿಜ್ಞಾಸಾ ಎಂಬಲ್ಲಿ ವೃತ್ತಿದ್ವಯವನ್ನು ಸ್ವೀಕರಿಸುವುದು ಹೇಗೆಂದು ಆಕ್ಷೇಪಿಸಕೂಡದು. ಇಲ್ಲಿಯೂ ಕೂಡ ಬಾದರಾಯಣಾಚಾರ್ಯರ ತಾತ್ಪರ್ಯವು ವೃತ್ತಿಭೇದದಲ್ಲಿ (ಶಕ್ತಿವೃತ್ತಿ, ಲಕ್ಷಣಾವೃತ್ತಿಗಳಲ್ಲಿ) ಪರ್ಯವಸಾನವನ್ನು ಹೊಂದಿರುವುದು. ಆದ್ದರಿಂದ ಪ್ರಕೃತಿ ಪ್ರತ್ಯಯ ಸಮುದಾಯದಲ್ಲಿ ಅಜಹಲ್ಲಕ್ಷಣೆಯನ್ನು ಸ್ವೀಕರಿಸಲು ಬಾಧಕವಿಲ್ಲವು ಎಂದರೆ ಜಿಜ್ಞಾಸಾ ಎಂಬಲ್ಲಿರುವ ಜ್ಞಾ ಎಂಬುವ ಪ್ರಕೃತಿಗೆ ಜ್ಞಾನದಲ್ಲಿ ಶಕ್ತಿವೃತ್ತಿಯೂ ಮುಂದೆ ಇರುವ ಸನ್ ಪ್ರತ್ಯಯಕ್ಕೆ ಲಕ್ಷಣಾವೃತ್ತಿಯೂ ಸ್ವೀಕರಿಸಲ್ಪಡುವುದೆಂಬುದೇ ತಾತ್ಪರ್ಯವು. ವಾಸ್ತವಿಕವಾಗಿ ಜಿಜ್ಞಾಸಾ ಎಂಬ ಪದವು "ಯತೋ ವಾ ಇಮಾನಿ ಭೂತಾನಿ ಜಾಯಂತೇ–ಯೇನ ಜಾತಾನಿ ಜೀವಂತಿ ಯತ್ಪ್ರಯಂತ್ಯಭಿಸಂವಿಶಂತಿ ತದ್ಬ್ರಹ್ಮ ತದ್ವಿಜಿಜ್ಞಾಸಸ್ವ" ಎಂಬುವ ವೇದಾಂತ ಶಾಸ್ತ್ರ ವಾಕ್ಯದಿಂದ ಪ್ರಾಪ್ತವಾದುದಾಗಿದೆ. ಆದ್ದರಿಂದ ಸನ್ ಪ್ರತ್ಯಯಕ್ಕೆ ವಿಚಾರದಲ್ಲಿ ಜಹಲ್ಲಕ್ಷಣಾವೃತ್ತಿಯೂ ಪಕೃತಿಗೆ ಜ್ಞಾನದಲ್ಲಿ ಶಕ್ತಿವೃತ್ತಿಯೂ ಬೋಧಿಸಲ್ಪಡುವುದು. ಆದ್ದರಿಂದ ಯಾವ ಅನುಪಪತ್ತಿಯೂ ಇಲ್ಲವು.

ಈ ಪ್ರಕಾರವಾಗಿ ಜಿಜ್ಞಾಸಾ ಎಂಬಲ್ಲಿ ಒಂದೇ ಲಕ್ಷಣಾವೃತ್ತಿಯಿಂದ ಉಪಪತ್ತಿಯಾಗುತ್ತಿರಲು ಪ್ರಕೃತಿಗೂ ಪ್ರತ್ಯಯಕ್ಕೂ ಎರಡು ಲಕ್ಷಣಾವೃತ್ತಿಗಳನ್ನು ಹೇಳುವುದು ಗೌರವ ದೋಷಗ್ರಸ್ತವಾಗುವುದು. ಅಲ್ಲದೆ ಪ್ರತ್ಯಯಕ್ಕೆ ಲಕ್ಷಣಾವೃತ್ತಿಯನ್ನು ಸ್ವೀಕರಿಸುವುದು ಎಲ್ಲಿಯೂ ಕಂಡು ಬರುವುದಿಲ್ಲವಾದ್ದರಿಂದ ಅಪ್ರಸಿದ್ಧವು. ಹಾಗೂ ಪ್ರಕೃತಿಸಿದ್ಧ ಜ್ಞಾನವೆಂದು ಶಕ್ಯಾರ್ಥವನ್ನು ಮಾಡಿ ಪುನಃ ಸಾಧ್ಯಜ್ಞಾನದಲ್ಲಿ ಲಕ್ಷಣಾವೃತ್ತಿಯನ್ನು ಸ್ವೀಕರಿಸುವುದು ವಾಂತಭೋಜನ ನ್ಯಾಯವನ್ನು ಅನುಸರಿಸುವದು. ಹಾಗೂ "ಜಿಜ್ಞಾಸಾ" ಎಂಬಲ್ಲಿರುವ ಜ್ಞಾನವೇ ಫಲವಾಗಿರುವುದರಿಂದಲೂ ಅದು ಶ್ರವಣ ಶಬ್ದದಿಂದ ಹೇಳಲ್ಪಡುವ ವಿಚಾರಕ್ಕೆ ಫಲವಾಗುವಲ್ಲಿ ಅನುಪಪತ್ತಿ (ದೋಷ)ಇದ್ದರೆ ಸಾಧ್ಯವಾಗದೆ ಲಕ್ಷ್ಯಾರ್ಥವೂ ಆಗುವುದಿಲ್ಲವಾದ್ದರಿಂದಲೂ ಮೋಕ್ಷಕ್ಕೆ ಸಾಧನವಾದ ಜ್ಞಾನವೇ ಫಲವಾಗುವುದರಿಂದಲೂ ಆ ಫಲಾಂಶವೂ ಕೂಡ ಲಕ್ಷ್ಯಾರ್ಥವೆನಿಸಬೇಕಾದೀತು. ಆದ್ದರಿಂದಸಾಧ್ಯಾಂಶವು ಲಕ್ಷ್ಯವಲ್ಲ. ಜ್ಞಾನವಲ್ಲಿರುವ ಫಲಾಂಶವು

CC-0. Jangamwadi Math Collection. Digitized by eGangotri

ಲಕ್ಷ್ಯವಾಗುವುದು. ನಮಗೆ ಇಷ್ಟವೇ ಆಗಿದೆ. ಎಂದರೆ ಜ್ಞಾನಕ್ಕೆ ಆಚಾರ್ಯರ ಆರ್ಥಿಕತ್ವ ಕಥನದಲ್ಲಿ ವಿರೋಧವಾಗುವುದು. ಹೇಗೆಂದರೆ ಜಿಜ್ಞಾಸಾಪದಕ್ಕೆ ವಿಚಾರವೆಂಬ ಲಕ್ಷ್ಯಾರ್ಥವಾಗಲು ಈ ವಿಚಾರವೇ ವಿಧೇಯವಾಯಿತು. ವಿಧಿಗಾದರೋ ಪುರುಷ ಪ್ರವೃತ್ತಿಯಲ್ಲಿ ಪರ್ಯವಸಾನವು, ಪುರುಷಪ್ರವೃತ್ತಿಯಾದರೂ ನಿಷ್ಫಲವಾಗಿರಲಾರದು. ಆದ್ದರಿಂದ ಫಲಸಿದ್ಧಿಗಾಗಿ ಮೋಕ್ಷ ಸಾಧನತನವು ಜ್ಞಾನಕ್ಕೆ ಅರ್ಥಾತ್ ಕಲಿಸಲ್ಪಡುವುದೆಂಬುದೇ ಆರ್ಥಿಕತ್ವವೆನಿಸುವುದು.

ಪ್ರತ್ಯಯಗಳು ಪ್ರಕೃತ್ಯರ್ಥದಲ್ಲಿ ಅನ್ವಿತವಾದ ಸ್ವಾರ್ಥಕ್ಕೆ ವಾಚಕಗಳಾಗುವವೆಂಬ ಶಾಸ್ತ್ರ ನಿಶ್ಚಯವಿರುವುದರಿಂದ ಜಿಜ್ಞಾಸಾ ಎಂಬಲ್ಲಿ ಸರ್ವಪ್ರತ್ಯಯಕ್ಕೆ ಲಕ್ಷ್ಯಾರ್ಥವಾದ ವಿಚಾರಕ್ಕೆ ಪ್ರಕೃತ್ಯರ್ಥವಾದ ಜ್ಞಾನದಲ್ಲಿ ಅನ್ವಯವಿಲ್ಲದೇ ಇರುವುದರಿಂದ ಪ್ರಕೃತಿ ಪ್ರತ್ಯಯಗಳ ಸಮುದಾಯದಲ್ಲಿ ಲಕ್ಷಣಾವೃತ್ತಿಯನ್ನು ಸ್ವೀಕರಿಸಲು ಬರುವುದಿಲ್ಲ. ಹಾಗೂ ಜಿಜ್ಞಾಸಾ ಎಂಬುವುದೊಂದೆ ಪದಕ್ಕೆ ಪ್ರಕೃತಿ ಪ್ರತ್ಯಯಗಳಲ್ಲಿ ಲಕ್ಷಣಾವೃತ್ತಿಗಳನ್ನು ಸ್ವೀಕರಿಸಲು ಜಿಜ್ಞಾಸಾ ಎಂಬ ಗ್ರಂಥಕ್ಕೆ ವಿರೋಧವಾಗುವುದೆಂದು ಹೇಳುವರು. ವಾಕ್ಯದಲ್ಲಾದರೋ ಒಂದು ಲಕ್ಷಣಾವೃತ್ತಿಯೂ ಸಂಭವಿಸುವುದಿಲ್ಲವು. ಶಕ್ಯ ಸಂಬಂಧವೇ ಲಕ್ಷಣಾವೃತ್ತಿಯೆನಿಸುವುದರಿಂದ ಜಿಜ್ಞಾಸಾ ಎಂಬಲ್ಲಿ ಪ್ರಕೃತಿ ಪ್ರತ್ಯಯಗಳ ಸಮುದಾಯ ರೂಪವಾದ ವಾಕ್ಯಕ್ಕೆ ನಿಯಮಿತವಾದ ಒಂದು ಶಕ್ಯಾರ್ಥವಿಲ್ಲದ್ದರಿಂದ ಶಕ್ಯಾರ್ಥ ಸಂಬಂಧವೂ ಇಲ್ಲ. ಶಕ್ಯ ಸಂಬಂಧವಾದ ಲಕ್ಷಣಾವೃತ್ತಿಯೂ ಇಲ್ಲ. ಶಬ್ದಗಳ ಅನ್ವಯದಲ್ಲಿ ಬಾಧೆಯಿದ್ದಲ್ಲಿ ಶಬ್ದದಿಂದ ಉಪಸ್ಥಿತವಾದ ಅರ್ಥವೇ ವಿಷಯವಾಗುವ ಪ್ರಸಕ್ತಿ ಇರುವ ಕಾರಣ ಸರ್ವ ಶಬ್ದಗಳಿಗೂ ಶಕ್ತಿ ಕಲ್ಪನೆಯಲ್ಲಿ ಗೌರವ ದೋಷ ಉಂಟಾಗುವುದರಿಂದ ಅನನ್ವಿತವಾದ (ಒಂದು ಶಬ್ದದಲ್ಲೊಂದು ಅನ್ವಯವನ್ನು ಹೊಂದದಿರುವ) ಅರ್ಥವೇ ಶಬ್ದಾರ್ಥವೆನಿಸುವುದು. ಆದ್ದರಿಂದ ಶಕ್ಯಸಂಬಂಧದಿಂದ ಉಪಸ್ಥಿತವಾದ ಅರ್ಥವು ತಾತ್ಪರ್ಯ ವಶದಿಂದ ವಿಷಯವಾಗಿ ಅಂಗೀಕರಿಸಲ್ಪಟ್ಟಿಲ್ಲವು. ಈ ಕಾರಣದಿಂದ ಶಕ್ಯಾರ್ಥಗಳ ಬೇಧವಿರುತ್ತಿರಲು ಅವುಗಳ ಸಂಬಂಧಗಳಿಗೂ ಬೇಧವು ಸಿದ್ಧವಾಗಿಯೇ ಇರುವುದಾದ್ದರಿಂದ ವಾಕ್ಯದಲ್ಲಿ ಒಂದು ಲಕ್ಷಣಾವೃತ್ತಿಯನ್ನು ಸ್ವೀಕರಿಸಲು ಬರುವುದಿಲ್ಲ. ಅರ್ಥವಾದ ವಾಕ್ಯಸ್ಥಲದಲ್ಲಿಯೂ ಕೂಡ ಪದಗಳಿಗೆ ವಾಕ್ಯಾರ್ಥ ದ್ವಾರಾ ಪ್ರಾಶಸ್ತ್ಯಾದಿ ಅರ್ಥದಲ್ಲಿ ಲಕ್ಷಣಾವೃತ್ತಿ ಇರುವುದಲ್ಲದೆ ವಾಕ್ಯದಲ್ಲಿಲ್ಲವು. ಉಭಯಾರ್ಥಗಳಲ್ಲಿ ಲಕ್ಷಣಾವೃತ್ತಿಯುಳ್ಳ ಕೆಲವು ಪದಗಳಿಗೂ ಪದಾರ್ಥಗಳಿಗೂ ಆ ಪದ ಮತ್ತು ಪದಾರ್ಥಗಳ ಸಂಬಂಧಗಳಿಗೂ ನಾನಾತ್ವವಿರುವ ಮೂಲಕ ಒಂದು ಲಕ್ಷಣಾವೃತ್ತಿಗೆ ಸಂಬಂಧವೇ ಇಲ್ಲವು. ಏವಂಚ ವಾಕ್ಯಾರ್ಥ ಸಂಬಂಧದಿಂದ ಯಾವ ಸ್ಥಲದಲ್ಲಿ ಬೇರೆ ಪದಾರ್ಥವು ಪದಗಳಿಂದ ಲಕ್ಷಿಸಲ್ಪಡುತ್ತದೆ (ಲಕ್ಷಣಾವೃತ್ತಿಯಿಂದ ಬೋಧಿಸಲ್ಪಡುತ್ತದೆ) ಯೋ ಅಲ್ಲಿ ವಾಕ್ಯದಲ್ಲಿ ಲಕ್ಷಣಾವೃತ್ತಿಯನ್ನು ಸ್ವೀಕರಿಸಬಹುದು. "ಅರ್ಥಮಂತರ್ನ್ವೇದಿ ಮಿಸೋಳಿ"

CC-0. Jangamwadi Math Collection. Digitized by eGangotri

ಎಂಬ ವಾಕ್ಯಕ್ಕೆ ಒಬ್ಬಾನೊಬ್ಬ ದೇಶಿಕನಲ್ಲಿ ಲಕ್ಷಣಾವೃತ್ತಿಯು ಸ್ವೀಕರಿಸಲ್ಪಟ್ಟಿರುತ್ತದೆ. ಇಂತಹ ವಾಕ್ಯ ಲಕ್ಷಣಾವೃತ್ತಿಗೆ ಭಿನ್ನವಾದುದೇ ಪದಲಕ್ಷಣವೃತ್ತಿಯೆಂದು ಶಾಸ್ತ್ರ ವ್ಯವಹಾರವುಂಟು. ಹೀಗಿರುತ್ತಿರಲು ಸಮುದಾಯ ಘಟಕ ಶಕ್ಯಾರ್ಥಗಳು ನಾನಾ ಇರುವುದರಿಂದ ಅವುಗಳ ಸಂಬಂಧಗಳೂ ಕೂಡ ಅನೇಕಾನೇಕಗಳಾಗುವುದರಿಂದ ಸಮುದಾಯವಲ್ಲಿ ಒಂದು ಲಕ್ಷಣವೃತ್ತಿಯನ್ನು ಹೇಳಲಾಗುವುದಿಲ್ಲ. ಸಮುದಾಯ ಘಟಕ ಶಕ್ಯಾರ್ಥಗಳೂ, ಅವುಗಳ ಸಂಬಂಧಗಳೂ ಅನೇಕಗಳಾದಾಗ್ಯೂ ಆ ಶಕ್ಯಾರ್ಥಸಂಬಂಧಗಳು (ಲಕ್ಷ್ಣಾವೃತ್ತಿಗಳು) ಒಂದೇ ಪ್ರತೀತಿಯನ್ನುಂಟು ಮಾಡುವುದರಿಂದ ಅವೆಲ್ಲ ಒಟ್ಟು ಕೂಡಿ ಒಂದೇ ಆಗುವುವೆಂದು ಅವುಗಳಿಗೆ ಏಕತ್ವವನ್ನು ಹೇಳುತ್ತೀವೆ. ಅಂದರೆ ಪ್ರಕೃತಿ ಪ್ರತ್ಯಯಗಳೆರಡಕ್ಕೂ ಲಕ್ಷಣಾವೃತ್ತಿಗಳನ್ನು ಹೇಳುವುದಕ್ಕಿಂತಲೂ ಯಾವುದಾದರೊಂದಕ್ಕೆ ವಿಚಾರದಲ್ಲಿ ಲಕ್ಷಣಾವೃತ್ತಿಯನ್ನು ಹೇಳಿಬಿಟ್ಟರೆ ಸಾಕು. ಪ್ರಕೃತಿ ಪ್ರತ್ಯಯಗಳೆರಡಕ್ಕೂ ವಿಚಾರದಲ್ಲಿ ಲಕ್ಷಣಾವೃತ್ತಿಗಳನ್ನು ಅಂಗೀಕರಿಸುವುದು ವ್ಯರ್ಥವಾಗುವುದು.

"ಛತ್ರಿಗಳು ಹೋಗುತ್ತಾರೆ" ಎಂಬಲ್ಲಿ 'ಛತ್ರವುಳ್ಳವರು' ಎಂಬುದರಿಂದಲೇ ಅನ್ವಯ ಬೋಧವಾಗುತ್ತದೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಅಲ್ಲಿ 'ಛತ್ರವುಳ್ಳವರು ಛತ್ರವಿಲ್ಲದವರು' ಎಂಬ ಸಮುದಾಯ ಬೋಧವಾಗುವುದೇ ಎಲ್ಲರ ಅನುಭವದಲ್ಲಿದೆ. ಹಾಗಾದರೆ ಸಮುದಾಯವು ಒಂದು. ಆದರಿಂದ 'ಗಚ್ಛಂತಿ' ಎಂಬಲ್ಲಿ ಬಹುವಚನಕ್ಕೆ ಬದಲಾಗಿ ಏಕವಚನ ಬರಬೇಕಲ್ಲವೆ? ಎಂದು ಕೇಳಬಾರದು. ಏಕೆಂದರೆ 'ಗಂಗೆಯಲ್ಲಿ ಘೋಷ ಮತ್ಸ್ಯಗಳು' ಎಂಬಲ್ಲಿ ಶಕ್ತಿ ಮತ್ತು ಲಕ್ಷಣಾವೃತ್ತಿಗಳೆರಡೂ ಬೇರೆ ಬೇರೆ ಸಂಭವಿಸುದರಿಂದ ಅಲ್ಲಿ 'ಗಂಗೆಯಲ್ಲಿ ಹಳ್ಳಿಯೂ ಮತ್ಸ್ಯವೂ ಇರುವುದು' ಎಂದು ಏಕವಚನವನ್ನೇ ಹೇಳಬೇಕು. ಆದರೆ ಪ್ರಕೃತ ಒಂದೇ ವೃತ್ತಿಯಿಂದ ಬೋಧವಾಗುವ 'ಛತ್ರಿಣೋ ಗಚ್ಛಂತಿ' ಎಂಬುವಲ್ಲಿ ಏಕವಚನವು ಬರುವುದಿಲ್ಲ. ಇಲ್ಲವೆ 'ಅದಿತಿಃ ಪಾಶಾನ್' ಎಂಬಲ್ಲಿ ಅವಯವಗಳ ಬಹುತ್ವವನ್ನು ಅನುಸರಿಸಿ ಬಹುವಚನ ಬಂದಿರುವಂತೆ ಪ್ರಕೃತ 'ಛತ್ರವುಳ್ಳ ಸಮುದಾಯದಲ್ಲಿ ಬಹುಜನರಿರುವುದರಿಂದ ಇಲ್ಲಿ ಬಹುವಚನವಿರಬಹುದು' ಎಂದು ಬೇಕಾದರೂ ಸಮರ್ಥಿಸಬಹುದು.

ಇನ್ನು ಒಟ್ಟು ಸಮುದಾಯದಲ್ಲಿ ಶಕ್ಯ ಸಂಬಂಧವು ಹೇಗೆ ಬರುತ್ತದೆ ಎಂದು ಕೇಳಬಾರದು. ಏಕೆಂದರೆ ಸಮುದಾಯಕ್ಕೂ ಅದರಲ್ಲಿರುವ ವಸ್ತುಗಳಿಗೂ ಅಬೇಧವಿರುವುದರಿಂದ ಅಂಥ ವಸ್ತುಗಳ ಸಮುದಾಯಕ್ಕೂ ಶಕ್ಯ ಸಂಬಂಧವಿರಬಹುದು. ಎರಡೂ ಅಭಿನ್ನವಾದರೂ ಆಯಾ ಪ್ರತೀತಿಗಳಲ್ಲಿ ವ್ಯತ್ಯಾಸವಿದೆ ಎಂಬುದು ಎಲ್ಲರ ಅನುಭವದಲ್ಲಿವೆ ಶಕ್ಯಕ್ಕಿಂತಲೂ ಬೇರೆಯಾಗಬೇಕಾದರೆ ಅಲ್ಲಿ ಶಕ್ಯತಾವಚ್ಛೇದಕಕ್ಕಿಂತಲೂ ಬೇರೆ ಧರ್ಮ ತೋರಬೇಕು. ಹಾಗೆ ಬೇರೆ ಧರ್ಮವು ತೋರಿದರೆ ಜಹಲ್ಲಕ್ಷಣೆಗೂ

CC-0. Jangamwadi Math Collection. Digitized by eGangotri

ಇದಕ್ಕೂ ವ್ಯತ್ಯಾಸವೇನು? ಎಂದರೆ ಎಲ್ಲಿ ಬೇರೆ ಧರ್ಮಪುರಸ್ಸರವಾಗಿ ಪದಾರ್ಥಗಳು ತೋರಿ ಶಕ್ಯಾರ್ಥಕ್ಕೂ ಕ್ರಿಯಾನ್ವಯವು ಬರುವುದೋ ಅಲ್ಲಿ ಅಜಹಲ್ಲಕ್ಷಣೆ ಹೇಳಬೇಕು. 'ಕಾಗೆಗಳಿಂದ ಮೊಸರನ್ನು ರಕ್ಷಿಸು' ಎಂಬಲ್ಲಿ 'ಕಾಗೆ' ಎಂಬುದಕ್ಕೆ ಮೊಸರನ್ನು ಕೆಡಿಸುವವುಗಳು' ಎಂಬ ಧರ್ಮದಿಂದ ಬೆಕ್ಕು ಮುಂತಾದ ಪ್ರಾಣಿಗಳ ಬೋಧವಾಗುತ್ತದೆಯಾದರೂ ಅಲ್ಲಿ ಶಕ್ಯಾರ್ಥವಾದ ಕಾಗೆಗೂ ಬೋಧವುಂಟು. ಜಹಲ್ಲಕ್ಷಣೆಯಲ್ಲಿ ಹೀಗಾಗುವುದಿಲ್ಲ. ಅಲ್ಲಿ ಶಕ್ಯಾರ್ಥಕ್ಕೆ ಬೋಧವಿಲ್ಲ.

ನಿಜವಾಗಿ ಹೇಳಬೇಕಾದರೆ—ಎಲ್ಲಿ 'ಛತ್ರವುಳ್ಳವರು ಛತ್ರವಿಲ್ಲದವರು' ಎಂಬ ಸಮುದಾಯಕ್ಕೆ ಗಮನದಲ್ಲಿ ಅನ್ವಯವಾಗಲೆಂಬ ಉದ್ದೇಶದಿಂದ ಛತ್ರಿಣೋ ಗಚ್ಛಂತಿ ಎಂದು ಪ್ರಯೋಗಿಸಲಾಗಿದೆಯೋ ಅಂಥಲ್ಲಿ ಶಕ್ಯಾರ್ಥಲಕ್ಷ್ಯಾರ್ಥಗಳೆರಡೂ ಕೂಡ ಅಜಹಲ್ಲಕ್ಷಣೆಯಿಂದಲೇ ತೋರುತ್ತವೆ. ಆದ್ದರಿಂದಲೇ ಮಂಚಣ ಪಂಡಿತಾರಾಧ್ಯ ವಿರಚಿತ ಸೂತ್ರ ಭಾಷ್ಯದ ಗುಹಾಧಿಕರಣದಲ್ಲಿ 'ಋತಂ ಪಿಬಂತೌ' ಎಂಬಲ್ಲಿ 'ಕುಡಿಯುವವನು ಕುಡಿಯದಿರುವವನು' ಎಂಬ ಸಮುದಾಯದಲ್ಲಿಯೇ ಲಕ್ಷಣೆಯು ಉಕ್ತವಾಗಿದೆ. ಇದನ್ನೇ ಲಿಂಗಸಮವಾಯಾಧಿಕರಣದಲ್ಲಿ ಉಪಧಾನಯೋಗಿಯಾಗಿ ಗಣದಲ್ಲಿ ಸ್ವಾರ್ಥವು ಅಂತರ್ಭಾವವಾಗುವುದರಿಂದ ವೃತ್ತಿದ್ವಯ ವಿರೋಧವಿಲ್ಲ ಎಂದು ಪರಮಶಿವಾರಾಧ್ಯರು ತಮ್ಮ ಕೈವಲ್ಯ ಪ್ರಕಾಶದಲ್ಲಿ ಸಮರ್ಥಿಸಿದ್ದಾರೆ.

ಇನ್ನು ಒಮ್ಮೆ ಉಚ್ಚರಿಸಿದ ಶಬ್ದಕ್ಕೂ ತಾತ್ಪರ್ಯಬಲದಿಂದ ವೃತ್ತಿದ್ವಯವನ್ನು ಒಪ್ಪಿ 'ಛತ್ರಿತ್ವ–ಅಛತ್ರಿತ್ವ' ಎಂಬ ಧರ್ಮದ್ವಯಪೂರ್ವಕವಾಗಿ ಬೋಧವಾಗಲಿ ಎಂಬ ಉದ್ದೇಶದಿಂದ 'ಛತ್ರಿಣೋ ಗಚ್ಛಂತಿ' ಎಂದು ಪ್ರಯೋಗಿಸಲಾಗಿದೆ ಎಂದು ಭಾವಿಸಿದರೂ 'ಗಂಗೆಯಲ್ಲಿ ಘೋಷ ಮತ್ತು ಮತ್ಸ್ಯಗಳು' ಎಂಬಲ್ಲಿ ಇರುವಂತೆ ಶಕ್ತಿ ಮತ್ತು ಲಕ್ಷಣೆಗಳೆರಡನ್ನೂ ಒಪ್ಪುವುದಾದರೆ ಆಗಬಹುದು. ಆದರೆ ಅಷ್ಟರಿಂದಲೇ 'ಶ್ರೋತವ್ಯಃ' ಎಂಬಲ್ಲಿ ಕೇವಲ ಲಕ್ಷಣೆಯಿಂದಲೇ ಶಕ್ಯಾರ್ಥ ಲಕ್ಷ್ಯಾರ್ಥಗಳೆರಡೂ ಒಟ್ಟಿಗೆ ಬೋಧವಾಗುವುದು ಸಾಧ್ಯವಿಲ್ಲ. ಆಗ ಅಜಹಲ್ಲಕ್ಷಣೆಯನ್ನು ನಿರಾಕರಿಸುವ ಆಯಾಸಕ್ಕೂ ಫಲವಿಲ್ಲವೆಂದಾಗುತ್ತದೆ.

ಹೀಗಿರುವಾಗ ಅಜಹಲ್ಲಕ್ಷಣೆಯಿಂದ 'ಶ್ರೋತವ್ಯಃ' ಎಂಬಲ್ಲಿ ವಿಚಾರ ಮತ್ತು ಜ್ಞಾನಗಳ ಬೋಧವನ್ನು ಅಂಗೀಕರಿಸಿದ್ದಲ್ಲಿ ಯಾಗದಲ್ಲಿ 'ವಷಟ್ಕಾರ ಮಾಡುವವನಿಗೆ ಮೊದಲು ಭಕ್ಷ್ಯ ಸಲ್ಲಬೇಕು' ಎಂಬಲ್ಲಿ ಒಂದೇ ವೃತ್ತಿಯಿಂದ ತೋರುವ ಎರಡು ಪದಾರ್ಥಗಳಿಗೆ ಉದ್ದೇಶ್ಯ ವಿಧೇಯ ಭಾವದಿಂದ ಅನ್ವಯವೇ ಆಗದೆ ಹೋದೀತು! ಆದರಿಂದಲೇ ಶ್ರೀ ಪರಮಶಿವಾನಂದಾರಾಧ್ಯರು ತಮ್ಮ ಶಿವಜ್ಞಾನಚಂದ್ರೋದಯದಲ್ಲಿ 'ಜ್ಞಾನಾಯ ವಿಚಾರಃ ಕರ್ತವ್ಯಃ' ಎಂದು ವಿಚಾರ ಮತ್ತು ಜ್ಞಾನಗಳಿಗೆ ಉದ್ದೇಶ್ಯ ವಿಧೇಯ ಭಾವದಿಂದ ಅನ್ವಯವನ್ನು ಹೇಳಿದ್ದಾರೆ. ಆದರೆ ಇಲ್ಲಿ ವೃತ್ತಿದ್ವಯವನ್ನೆ

CC-0. Jangamwadi Math Collection. Digitized by eGangotri

ಒಪ್ಪೋಣ. ಅಜಹಲ್ಲಕ್ಷಣೆ ಎಂದು ಹೇಳಬಾರದು. ಏಕೆಂದರೆ ಇಲ್ಲಿ ಅಜಹಲ್ಲಕ್ಷಣೆಯನ್ನು ಹೇಳಿರುವುದೇ ತಪ್ಪಾಗುತ್ತದೆ. ಅಲ್ಲದೆ 'ಗಂಗಾಯಾಂ ಘೋಷಮತ್ಸ್ಯೌ' ಎಂಬ ವೃತ್ತಿದ್ವಯ ಸ್ಥಲದಲ್ಲಿ ಅಜಹಲ್ಲಕ್ಷಣೆಯ ವ್ಯವಹಾರವೇ ಇಲ್ಲ.

ಈ ಜಹಲ್ಲಕ್ಷಣಾ ಅಜಹಲ್ಲಕ್ಷಣಾ ಎಂಬ ವಿಚಾರವು ಹಾಗಿರಲಿ. ವೃತ್ತಿದ್ವಯವನ್ನು ಒಪ್ಪಿದಲ್ಲಿ ಪ್ರಕೃತಿಗೆ ಲಕ್ಷಣೆಯೊಂದನ್ನೇ ಹೇಳಿದರೂ ನಿರ್ವಾಹವಾಗುವುದಿಲ್ಲ. ಹೇಗೆಂದರೆ ಪ್ರಕೃತ್ಯರ್ಥವಾದ ಜ್ಞಾನದಲ್ಲಿ ಸಾಧ್ಯವೆಂಬ ಅಂಶವು ತೋರದಿದ್ದರೆ ಅದಕ್ಕೆ ಸಾಧ್ಯಾಂಶದಿಂದ ಅನ್ವಯ ಬರುವುದಿಲ್ಲ. ಇಚ್ಛೆಯಲ್ಲಿ ವಿಷಯವಾಗುವ ಮಾತ್ರಕ್ಕೆ ಅದು ಸಾಧ್ಯವಾಗುವುದಿಲ್ಲ. ಆಗ ಇಚ್ಛಾವಿಷಯವಲ್ಲದ ದುಃಖವೂ ಸಾಧ್ಯವೇ ಆಗುತ್ತದೆ. ಅಸಾಧ್ಯವಾದುದೂ ಇಚ್ಛೆಗೆ ವಿಷಯವಾಗಬೇಕಾಗುತ್ತದೆ. ಆಗ ಹೆಂಡತಿ ಕಳೆದುಕೊಂಡ ವಿಧುರನಿಗೂ ಕಳೆದುಹೋದ ಹೆಂಡತಿಯಲ್ಲಿ ಉತ್ಕಟೇಚ್ಛೆಯಾಗಬೇಕಾದೀತು. ಇಷ್ಟ ಮತ್ತು ಸಾಧ್ಯಪದಗಳು ಪರ್ಯಾಯಪದಗಳಲ್ಲ. ಆದ್ದರಿಂದಲೇ ಇಷ್ಟವಾದುದೆಲ್ಲವೂ ಸಾಧ್ಯವಾಗಲೇಬೇಕು ಎಂದು ಭಾವಿಸುವುದು ತರವಲ್ಲ. ಒಂದು ವೇಳೆ ಸಾಧ್ಯತ್ವಾನುಮಾನವನ್ನು ಒಪ್ಪಿದರೂ ಅದರಿಂದ ಯಾವ ಉಪಯೋಗವೂ ಇಲ್ಲ. ಶಬ್ದದಿಂದ ಸ್ಪಷ್ಟವಾಗಿ ತೋರುವ ಅರ್ಥವೇ ಶಾಬ್ದಬೋಧಕ್ಕೆ ವಿಷಯವೇ ಹೊರತು ಅನುಮಾನದಿಂದ ತೋರುವ ಅರ್ಥದಿಂದ ಶಾಬ್ದಬೋಧವಾಗುವುದಿಲ್ಲ. ಇಲ್ಲದಪಕ್ಷದಲ್ಲಿ ವಿಚಾರದಲ್ಲಿಯೂ ಲಕ್ಷಣೆ ಬೇಕಾಗದೇ ಹೋದೀತು! ಏಕೆಂದರೆ ಇಚ್ಛೆಗೆ ವಿಷಯವಾದ ಜ್ಞಾನಕ್ಕೆ ವಿಚಾರವೇ ಫಲವಾದ್ದರಿಂದಲೂ, ಅನುಮಾನದಿಂದ ವಿಚಾರವೆಂಬುದು ತೋರುವುದರಿಂದಲೂ ವಿಚಾರದಲ್ಲಿಯೂ ಲಕ್ಷಣೆಯು ಬೇಕಿಲ್ಲವೆಂದಾಗುತ್ತದೆ.

ಇನ್ನು ಪ್ರತ್ಯಯಾರ್ಥದಲ್ಲಿ ವಿಶೇಷಣವಾಗಿ ತೋರುವ ಜ್ಞಾನಕ್ಕೆ ಸ್ವತಂತ್ರವಾಗಿ ಉಪಸ್ಥಿಯಿರುವುದಿಲ್ಲ. "ಗೌರ್ನಿತ್ಯಾ" ಎಂಬಲ್ಲಿ ಗೋತ್ವವು ಸ್ವತಂತ್ರವಾಗಿ ತೋರುವುದಿಲ್ಲವಾದ್ದರಿಂದ ಅಲ್ಲಿ ಲಕ್ಷಣೆ ಬೇಕು. ಪ್ರಕೃತಿಯು ಸಾಧ್ಯಜ್ಞಾನವನ್ನು ಲಕ್ಷಣೆಯಿಂದಲೇ ಬೋಧಿಸುವುದರಿಂದ ಪ್ರಕೃತಿ ಮತ್ತು ಪ್ರತ್ಯಯಗಳೆರಡಕ್ಕೂ ಪ್ರತ್ಯೇಕ ಲಕ್ಷಣೆ ಆವಶ್ಯಕ. ಆದರೆ ಸಮುದಾಯದಲ್ಲಿ ಲಕ್ಷಣೆ ಆವಶ್ಯಕ. ಆದರೆ ಸಮುದಾಯದಲ್ಲಿ ಲಕ್ಷಣೆ ಹೇಳುವಂತಿಲ್ಲ. ಒಟ್ಟಿನಲ್ಲಿ ಒಂದು ಪದಕ್ಕೆ ವಿಚಾರದಲ್ಲಿಯೂ ಮತ್ತೊಂದು ಪದಕ್ಕೆ ಸಾಧ್ಯಜ್ಞಾನದಲ್ಲಿಯೂ ಲಕ್ಷಣೆಯನ್ನು ಹೇಳಬೇಕಾಗಿರುವುದರಿಂದ ಬೇರೆಬೇರೆ ಎರಡು ಪದಗಳನ್ನು ಕಲ್ಪಿಸಿ ಎರಡು ಲಕ್ಷಣೆಗಳನ್ನು ಹೇಳುವುದಕ್ಕಿಂತ ಇರುವ ಒಂದೇ ಪದದಲ್ಲಿ ಪ್ರಕೃತಿ ಪ್ರತ್ಯಯಗಳಿಗೆ ಲಕ್ಷಣೆಯನ್ನು ಹೇಳುವುದೇ ಲಾಘವ. ವಿಚಾರದಲ್ಲಿ ಲಕ್ಷಣೆ ಹೇಳಿದರೂ ಸಮುದಾಯದಲ್ಲಿ ಲಕ್ಷಣೆ ಹೇಳುವುದು ಸರಿಯಲ್ಲ. ಇದೇ ನ್ಯಾಯದಿಂದ ಪ್ರಕೃತಿಗೆ ಅಥವಾ ಸಮುದಾಯಕ್ಕೆ ಸಮುದಾಯ

CC-0. Jangamwadi Math Collection. Digitized by eGangotri

ಲಕ್ಷಣೆ ಹೇಳುವುದಾದರೆ ಆಗ ಪ್ರಕೃತಿ ಮತ್ತು ಪ್ರತ್ಯಯಗಳಲ್ಲಿ ಒಂದು ವ್ಯರ್ಥವಾಗ ಬೇಕಾಗುತ್ತದೆ.

ಪ್ರತ್ಯಯದಲ್ಲಿ ಲಕ್ಷಣೆ ಇಲ್ಲವೆಂದು ಹೇಳಬಾರದು. ಏಕೆಂದರೆ "ಸಕ್ತೂನ ಜುಹೋತಿ" ಎಂಬಲ್ಲಿ ದ್ವಿತೀಯಾವಿಭಕ್ತಿಗೆ ಕರಣಾರ್ಥದಲ್ಲಿಯೂ "ಪ್ರಯಾಜ ಶೇಷೇಣ ಹವೀಂಷ್ಯಭಿಘಾರಯತಿ" ಎಂಬ ಮಂತ್ರದಲ್ಲಿ ತೃತೀಯಾವಿಭಕ್ತಿಗೆ ಕರ್ಮಾರ್ಥ ದಲ್ಲಿಯೂ, ದ್ವಿತೀಯಾವಿಭಕ್ತಿಗೆ 'ಆಧಾರ' ಎಂಬ ಅರ್ಥದಲ್ಲಿಯೂ 'ರಥೋ ಗಚ್ಛತಿ' ಎಂಬಲ್ಲಿ ಆಖ್ಯಾತಕ್ಕೆ ವ್ಯಾಪಾರದಲ್ಲಿಯೂ, 'ಜಾನಾತಿ-ಇಚ್ಛತಿ-ದ್ವೇಷ್ಟಿ-ಯತತೇ' ಎಂಬಲ್ಲಿ ಆಖ್ಯಾತಕ್ಕೆ ಆಶ್ರಯದಲ್ಲಿಯೂ, 'ನಶ್ಯತಿ' ಎಂಬಲ್ಲಿ 'ನಾಶಪ್ರತಿಯೋಗಿ' ಎಂಬ ಅರ್ಥದಲ್ಲಿಯೂ ಲಕ್ಷಣೆಯನ್ನು ಎಲ್ಲರೂ ಒಪ್ಪಿದ್ದಾರೆ. ಆದ್ದರಿಂದ ಪ್ರತ್ಯಯ ದಲ್ಲಿ ಲಕ್ಷಣೆ ಹೇಳುವುದು ತಪ್ಪೇನಲ್ಲ.

ಗುಹಾದಿಕರಣದ ದೂರ್ವಾಸಪ್ರೋಕ್ತ ಪೂರ್ವಪಕ್ಷದಲ್ಲಿ 'ಋತಂ ಪಿಬಂತೌ' ಎಂಬಲ್ಲಿ ಬುದ್ಧಿ ಮತ್ತು ಕ್ಷೇತ್ರಜ್ಞ ಎಂಬ ಅರ್ಥಬೋಧಕವಾದ ಕರ್ತೃತ್ವ ಶಕ್ತಿಯುಳ್ಳ ಶತೃಪ್ರತ್ಯಯಕ್ಕೆ 'ಸಾಮಾನ್ಯ ಕಾರಕ' ಎಂಬ ಅರ್ಥದಲ್ಲಿ ಲಕ್ಷಣೆಯನ್ನು ಪ್ರತಿಪಾದಿಸ ಲಾಗಿದೆ. ಇತರ ಪ್ರತ್ಯಯಗಳಿಗೆ ಲಕ್ಷಣೆ ಹೇಳಿದರೂ 'ಸನ್' ಪ್ರತ್ಯಯಕ್ಕೆ ಲಕ್ಷಣೆ ಎಲ್ಲಿಯೂ ಕಂಡಿಲ್ಲವೆಂದು ಹೇಳಬಾರದು. ಏಕೆಂದರೆ "ಶ್ವಾ ಮುಮೂರ್ಷತಿ" "ಕೂಲಂ ಪಿಪತಿಷತಿ" ಎಂಬಲ್ಲಿ 'ಸನ್' ಪ್ರತ್ಯಯಕ್ಕೆ ವ್ಯಾಪಾರ ಸಾಮಾನ್ಯದಲ್ಲಿ ಲಕ್ಷಣೆ ಹೇಳಿರುವುದು ಕಂಡಿದೆ.

ಆದುದರಿಂದಲೇ "ಧಾತೋಃ ಕರ್ಮಣಸ್ಸಮಾನ ಕರ್ತೃಕಾದಿಚ್ಛಾಯಾಂ ವಾ" (ಅಷ್ಟಾ. ೩-೧-೭) ಎಂಬ ಸೂತ್ರದಲ್ಲಿ 'ನ ವಾತುಲ್ಯಕಾರಣ' ಎಂಬ ವಾರ್ತಿಕದಿಂದ ಇಚ್ಛೆಗೆ ಕಾರ್ಯವಾದ ವ್ಯಾಪಾರದಲ್ಲಿ ಲಕ್ಷಣೆ ಹೇಳಿದೆ. ಇಲ್ಲಿ ಅಚೇತನದಲ್ಲಿ ಇಚ್ಛೆ ಯಿಲ್ಲವಾದ್ದರಿಂದ ಇಚ್ಛೆಯ ಕಾರ್ಯವಾದ ವ್ಯಾಪಾರವೂ ಇಲ್ಲವಾದ್ದರಿಂದ ವ್ಯಾಪಾರದಲ್ಲಿ ಲಕ್ಷಣೆ ಹೇಳಲು ಸಾಧ್ಯವಿಲ್ಲವೆಂದು ಆಶಂಕೆಮಾಡಿಕೊಂಡು ಅಲ್ಲಿ 'ಋಚಾ-ಉಪಮಾ ನಾದ್ವಾ' ಎಂಬ ವಾರ್ತಿಕದಿಂದ ಇಚ್ಛೆಗೆ ಅನುಗುಣವಾದ ವ್ಯಾಪಾರದಲ್ಲಿ ಗೌಣವಾಗಿ ಪ್ರಯೋಗಿಸಬಹುದೆಂದು ಪಾತಂಜಲ ಮಹಾಭಾಷ್ಯದಲ್ಲಿ ವಿಸ್ತಾರವಾಗಿ ಹೇಳಿದೆ. ಕೈಯಟರೂ ಕೂಡ—ಗೌಣ ಮತ್ತು ಮುಖ್ಯಗಳೆರಡರಲ್ಲಿ ಮುಖ್ಯವೇ ಸಂಗ್ರಾಹ್ಯವೆಂಬ ನ್ಯಾಯದಿಂದ ಗೌಣಾರ್ಥವನ್ನು ಹೇಳುವುದು ಅಯುಕ್ತವೆಂದು ಆಶಂಕಿಸಿ ಗೌಣ ಮುಖ್ಯ ನ್ಯಾಯವನ್ನು ಆಯಾ ಪ್ರಕರಣಾನುಗುಣವಾಗಿಯೇ ಅನ್ವಯಿಸಬೇಕು ಎಂದು ಸಮಾಧಾನ ಮಾಡಿದ್ದಾರೆ.

ಈ ಕ್ಷತ್ರ್ಯಧಿಕರಣದಲ್ಲಿ "ಕೂಲಂ ಪಿಪತಿಷತಿ" ಎಂಬಲ್ಲಿ ದೂರ್ವಾಸ ಭಗವತ್ಪಾ

CC-0. Jangamwadi Math Collection. Digitized by eGangotri

ದಾಚಾರ್ಯರು ಲಕ್ಷಣೆಯನ್ನು ಒಪ್ಪಿದ್ದಾರೆ. ಆದ್ದರಿಂದ ಸನ್‌ಪ್ರತ್ಯಯಕ್ಕೆ ಲಕ್ಷಣೆಯಿಲ್ಲನೆಂಬುದು ಅರ್ಥಹೀನ. ಇನ್ನು ವಾಂತಭೋಜನ ನ್ಯಾಯಕ್ಕೆ ಇಲ್ಲಿ ಸಂಬಂಧವೇ ಇಲ್ಲ. ಏಕೆಂದರೆ ಪ್ರತ್ಯಯಕ್ಕೆ ವಿಚಾರದಲ್ಲಿ ಲಕ್ಷಣೆಯನ್ನು ಹೇಳುವುದರಿಂದ ಅದು ಸಾಧ್ಯವೆನಿಸುವುದಿಲ್ಲ. ಆದರೆ ಪ್ರಕೃತಿಗೆ ಲಕ್ಷಣೆ ಹೇಳುವುದರಿಂದಲೇ ಆ ಅರ್ಥವು ಲಭಿಸುವುದರಿಂದ ಬೋಧಕಭೇದಸ್ವೀಕಾರ ಮಾತ್ರದಿಂದಲೇ ವಾಂತಭೋಜನ ನ್ಯಾಯವನ್ನು ಹೇಳಲು ಅವಕಾಶವಿಲ್ಲ. ಏಕೆಂದರೆ ಸಾಧ್ಯವಾದ ಜ್ಞಾನವನ್ನು ಬಿಡುವುದರಿಂದ ಬಿಟ್ಟದ್ದನ್ನು ಮತ್ತೆ ಸ್ವೀಕರಿಸುವ ಪ್ರಮೇಯವೇ ಇಲ್ಲ.

ಇನ್ನು ಜ್ಞಾನವೇ ಮೋಕ್ಷಸಾಧನ ಎಂಬ ಅರ್ಥ ಸಿದ್ಧಿಸುವುದೆಂಬ ಪಕ್ಷದಲ್ಲಿ ಹೇಳಿದ ದೋಷವೂ ಕೂಡುವುದಿಲ್ಲ. ಏಕೆಂದರೆ "ಜ್ಞಾನಕ್ಕಾಗಿ ವಿಚಾರ ಮಾಡಬೇಕು" ಎಂಬಲ್ಲಿ ಜ್ಞಾನವು ಸಾಧ್ಯವೆಂದೂ, ವಿಚಾರವು ಅದಕ್ಕೆ ಸಾಧನವೆಂದೂ ಹೇಳಲಾಗಿದೆ. ಅಲ್ಲಿ ವಸ್ತು ಸಿದ್ಧಿಸಿದಮೇಲೆ ಅದಕ್ಕೆ ಸಾಧನಾಕಾಂಕ್ಷೆಯೇ ಇಲ್ಲವಾದ್ದರಿಂದ ಸಾಧ್ಯತೆಯು ಮಾತ್ರವೇ ಲಕ್ಷಣೆಯಿಂದ ಬೋಧವಾಗುತ್ತದೆ. ಎಲ್ಲಿ ಎಷ್ಟು ಅಂಶಕ್ಕೆ ಲಕ್ಷಣೆಯಿಲ್ಲದೆ ನಿರ್ವಾಹವಾಗುವುದಿಲ್ಲವೋ ಅಲ್ಲಿ ಅಷ್ಟು ಅಂಶಕ್ಕೆ ಮಾತ್ರ ಲಕ್ಷಣೆ ಹೇಳಬೇಕು. ಜ್ಞಾನವು ಸಿದ್ಧವಾದಮೇಲೆ ಅದು ಪುರುಷನಿಗೆ ಪ್ರವೃತ್ತಿ ಹುಟ್ಟಿಸುವುದಕ್ಕಾಗಿಯೇ ಇರುವುದರಿಂದ, ಫಲವಿಲ್ಲದಿದ್ದಲ್ಲಿ ಪುರುಷನಿಗೆ ಪ್ರವೃತ್ತಿಯೇ ಬರುವುದಿಲ್ಲವಾದ್ದರಿಂದ ಮೋಕ್ಷಕ್ಕೆ ಜ್ಞಾನವು ಸಾಧನವೆಂದು ಸ್ವಯಂಸಿದ್ಧವಾಗುತ್ತದೆ. ಅಲ್ಲಿ ನಿಮಗೆ ಮಾತ್ರ ಈ ದೃಷ್ಟಿಯಿಂದ ದೋಷ ಕಾಣುತ್ತದೆ. ಸನ್ ಪ್ರತ್ಯಯಕ್ಕೆ ಅರ್ಥವೆನಿಸಿರುವ ಇಚ್ಛೆಯಲ್ಲಿ ಜ್ಞಾನವು ವಿಷಯವೆಂದಮೇಲೆ, ಎಲ್ಲ ಜ್ಞಾನವೂ ಪ್ರಾಮಾಣಿಕವೇ ಆಗದಿರುವುದರಿಂದ ಎಲ್ಲವೂ ವಿಷಯವೆನಿಸಲಾರದು. ಆದುದರಿಂದ ಮೋಕ್ಷಕ್ಕೆ ಸಾಧನವಾದ ಬ್ರಹ್ಮಜ್ಞಾನವೇ ಇಚ್ಛಾವಿಷಯವಾದ್ದರಿಂದ ಜ್ಞಾನವು ಮೋಕ್ಷಕ್ಕೆ ಸಾಧನವೆಂದು ಸಿದ್ಧವಾಗುತ್ತದೆ.

ಒಟ್ಟಿನಲ್ಲಿ ಸನ್‌ಪ್ರತ್ಯಯಕ್ಕೆ ವಿಚಾರದಲ್ಲಿ ಲಕ್ಷಣೆ ಹೇಳಲು ಇದೂ ಒಂದು ಕಾರಣ. ಇಲ್ಲದಲ್ಲಿ ಈ ಅರ್ಥವು ಶಬ್ದದಿಂದಲೇ ಲಭಿಸಬೇಕಾಗುತ್ತದೆ. ಇನ್ನು "ಪ್ರತ್ಯಯಗಳು ಪ್ರಕೃತ್ಯರ್ಥದೊಂದಿಗೆ ಸೇರಿ ಶಾಬ್ದಬೋಧವನ್ನುಂಟುಮಾಡುತ್ತವೆ" ಎಂಬ ನಿಯಮಕ್ಕೂ ವಿರೋಧ ಬರುವುದಿಲ್ಲ. ಏಕೆಂದರೆ ಅಪೇಕ್ಷಿತಾರ್ಥವೆನಿಸಿರುವ ವಿಚಾರವು ಪ್ರಕೃತಿಯ ಅರ್ಥವಾದ ಜ್ಞಾನದಲ್ಲಿ ಸಾಧನವೆನಿಸಿರುವುದರಿಂದ ಆ ನಿಯಮಕ್ಕೆ ಬಾಧವಿಲ್ಲ. ಇಚ್ಛೆ ಮತ್ತು ಜ್ಞಾನಗಳಿಗೆ ವಿಷಯ-ವಿಷಯಿ ಭಾವಸಂಬಂಧವಿದೆ. ವಿಚಾರಕ್ಕೂ ಜ್ಞಾನಕ್ಕೂ ಸಾಧ್ಯ-ಸಾಧನಭಾವಸಂಬಂಧವಿದೆ. ಆದುದರಿಂದ ಈ ನಿಯಮಕ್ಕೆ ಬಾಧವಿಲ್ಲ. ಅಲ್ಲದೆ ಜಿಜ್ಞಾಸಾಪದದಲ್ಲಿ ಪ್ರಕೃತಿ ಪ್ರತ್ಯಯಗಳೆರಡಕ್ಕೂ ಲಕ್ಷಣೆ ಇರುವುದರಿಂದ ಎರಡನ್ನೂ ಬೇರೆಬೇರೆ ಜಿಜ್ಞಾಸಾಪದದಿಂದ ಗ್ರಹಿಸಬಹುದಾದ್ದರಿಂದ

CC-0. Jangamwadi Math Collection. Digitized by eGangotri

ಏಕವಚನದ ವಿರೋಧವೂ ಬರುವುದಿಲ್ಲ. ಸನ್‌ಪ್ರತ್ಯಯಕ್ಕೆ ವಿಚಾರದಲ್ಲಿ ಲಕ್ಷಣೆಯನ್ನು ಅಂಗೀಕರಿಸುವುದರಿಂದಲೇ ಪ್ರಕೃತ್ಯರ್ಥವಾದ ಜ್ಞಾನಕ್ಕೆ ಸಾಧ್ಯಾಂಶದಲ್ಲಿ ಲಕ್ಷಣೆಯು ಸಿದ್ಧವಾಗುವುದರಿಂದ ಅದನ್ನು ಹೇಳದೆ ಕೇವಲ ವಿಚಾರದಲ್ಲಿ ಲಕ್ಷಣೆಯನ್ನು ಹೇಳುವುದು ಉಚಿತವೇ ಆಯಿತು. ಆದುದರಿಂದಲೇ ಪರಮಾನಂದಾರಾಧ್ಯರು ಪ್ರಕೃತಿಪ್ರತ್ಯಯಗಳೆರಡಕ್ಕೂ ಲಕ್ಷಣೆ ಹೇಳಬೇಕೆಂದು ನಿರ್ಧರಿಸಿದ್ದಾರೆ. ಇದನ್ನೇ ಏಕೋರಾಮಸಿದ್ಧ ಭಗವತ್ಪಾದರೂ ಸ್ವೀಕರಿಸಿರುವುದರಿಂದ ಇದೇ ಯುಕ್ತವಾದದ್ದು.

ಶಿವನೇ ಪರಬ್ರಹ್ಮವು.

"ಅಸದ್ವಾ ಇದಮಗ್ರ ಆಸೀತ್, ತತೋ ವೈ ಸದಜಾಯತ" (ತೈ. ಆ. ೭) "ಅಮೂಲಮನಾಧಾರಮಿಮಾಃ ಪ್ರಜಾಃ ಪ್ರಜಾಯಂತೇ" "ನ ಕದಾಚಿದನೀದೃಶಂ ಜಗತ್" ಇತ್ಯಾದಿ ಶ್ರುತಿಗಳಿಂದ ಜಗತ್ತು ಅಸತ್ (ಶೂನ್ಯ) ವಸ್ತುವಿನಿಂದ ಹುಟ್ಟಿದುದೆಂದು ಕಂಡುಬರುವುದರಿಂದಲೂ ಜಗತ್ತು ಅನಾದಿಯೆಂದು ತಿಳಿದು ಬರುವುದರಿಂದಲೂ ಆ ಜಗತ್ತಿಗೆ ಒಬ್ಬ ಕರ್ತನಿರುವನೆಂದು ಹೇಳಲಾಗುವುದಿಲ್ಲ. ಇದಲ್ಲದೆ "ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ" ಇತ್ಯಾದಿ ಶ್ರುತಿಗಳಲ್ಲಿ ಜೀವರಿಂದ ಕರ್ತರುಳ್ಳವುಗಳು ಸ್ವರ್ಗಾದಿಫಲ ಕೊಡತಕ್ಕವುಗಳು ಯಾಗಾದಿಕರ್ಮಗಳು ಎಂದು ಕಂಡುಬರುವುದರಿಂದ ಚೇತನರೂಪ ಜೀವರಿಗೆ ಭಿನ್ನವಾದ ಈಶ್ವರನನ್ನು ಒಪ್ಪುವ ವಿಷಯದಲ್ಲಿ ಪ್ರಮಾಣವಿಲ್ಲ. ಹಾಗೂ ಪ್ರಯೋಜನವೂ ಇಲ್ಲ. ಜೀವರ ಅದೃಷ್ಟ ವಶದಿಂದ ಅವರ ಭೋಗಕ್ಕಾಗಿ ಆಯಾ ಪದಾರ್ಥಗಳು ಉತ್ಪನ್ನವಾಗಿ ಜಗತ್ತಾಗಿರುವುದೆಂದು ಹೇಳುವುದು ವಿಹಿತವಲ್ಲವೆ? ಇದಲ್ಲದೆ ಪರಮೇಶ್ವರನೇ ಈ ಜಗತ್ತನ್ನು ಸೃಷ್ಟಿಸಿರುವನು ಎಂದು ಹೇಳಿದರೆ ಅವನಲ್ಲಿ ಪಕ್ಷಪಾತ ಮತ್ತು ದಯಾಶೂನ್ಯತ್ವ ಮುಂತಾದ ದೋಷಗಳನ್ನು ಹೇಳಬೇಕಾಗುತ್ತದೆ. ಏಕೆಂದರೆ ಪರಮೇಶ್ವರನು ಸಮದೃಷ್ಟಿಯುಳ್ಳವನಲ್ಲ. ಹಾಗೆ ಅವನು ಸಮದೃಷ್ಟಿಯುಳ್ಳವನಾಗಿದ್ದ ಪಕ್ಷದಲ್ಲಿ ಕೆಲವು ಪ್ರಾಣಿಗಳನ್ನು ಸುಖಿಗಳನ್ನಾಗಿಯೂ ಕೆಲವು ಪ್ರಾಣಿಗಳನ್ನು ಅತಿ ದುಃಖಿಗಳನ್ನಾಗಿಯೂ ಮಾಡುತ್ತಿರಲಿಲ್ಲ. ಜಗತ್ತನ್ನು ಹೀಗೆ ವಿಷಮವಾಗಿ ಮಾಡಿರುವುದು ನಿಷ್ಪಕ್ಷಪಾತಿಗಳಾದ ಕೃಪಾಶೀಲರ ಕರ್ತವ್ಯವಲ್ಲವಷ್ಟೆ; ಹೀಗೆ ದಯೆಯಿಲ್ಲದೆ ವಿಷಮಸೃಷ್ಟಿಯನ್ನು ಮಾಡಿದವನಿಗೆ ಈಶ್ವರನೆಂದು ಕರೆಯುವುದಾದರೂ ಹೇಗೆ? ಆದುದರಿಂದ ಈಶ್ವರನನ್ನು ಒಪ್ಪುವುದರಿಂದ ಪ್ರಯೋಜನವೇ ಇಲ್ಲ.

ಒಂದು ಪಕ್ಷ ಜಡಕರ್ಮಗಳಿಗೆ ಫಲವನ್ನು ಕೊಡುವುದಕ್ಕೆ ಶಕ್ತಿಯಿಲ್ಲದಿರುವುದರಿಂದಲೂ ಜೀವರು ಕಿಂಚಿಜ್ಞರಾಗಿರುವುದರಿಂದಲೂ ಇವರಿಗೂ ಸಹ ಫಲದಾತೃತ್ವ

CC-0. Jangamwadi Math Collection. Digitized by eGangotri

ಶಕ್ತಿಯಿರುವುದಿಲ್ಲ. ಇವರಿಗಿಂತಲೂ ಭಿನ್ನನಾದ ಸರ್ವಜ್ಞನಾದ ಈಶ್ವರನನ್ನು ಸ್ವೀಕರಿಸಬೇಕು.

ಏಕೆಂದರೆ ಈ ಕಾಣುವ ಜಗತ್ತು ತನ್ನಿಂದ ತಾನೇ ಹುಟ್ಟಲಾರದು. ಒಂದು ಘಟವು ಹುಟ್ಟಬೇಕಾದರೆ ಅದಕ್ಕೊಬ್ಬ ಕರ್ತನಿದ್ದೇ ತೀರಬೇಕು. ಆದ್ದರಿಂದ ಈ ಕಾರ್ಯ ರೂಪವಾದ ಜಗತ್ತು ಹುಟ್ಟಬೇಕಾದರೆ ಇದಕ್ಕೆ ನಮಗಿಂತಲೂ ವಿಲಕ್ಷಣನಾದ ಸರ್ವಜ್ಞಮೂರ್ತಿಯು ಇದ್ದೇ ತೀರಬೇಕು. ಅಂತಹ ಸರ್ವಜ್ಞಮೂರ್ತಿಗೆ ಶಿವನೆಂದು ಹೇಳುವೆವು. ಆ ಶಿವನನ್ನೇ ಬ್ರಹ್ಮವೆಂದು ಕರೆಯುವೆವು. "ಆತ್ಮಾವಾ ಇದಮಗ್ರ ಆಸೀತ್" (ಐತ. ೧. ೧. ೧) "ಬ್ರಹ್ಮ ವಾ ಇದಮಗ್ರ ಆಸೀತ್" (ಬೃ. ೧-೪-೧೦) "ಹಿರಣ್ಯಗರ್ಭಃ ಸಮವರ್ತತಾಗ್ರೇ" (ತೈ. ಸಂ. ೪-೧-೮) "ಓಮಿತ್ಯೇಕಾಕ್ಷರಂ ಬ್ರಹ್ಮ" (ಗೀ. ೮-೧೯) "ಅಸಾವಾದಿತ್ಯೋ ಬ್ರಹ್ಮ" (ತೈ. ಆ. ೨-೨) "ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ" (ತೈ. ಶಿಕ್ಷಾ. ೧) "ಗಣಾನಾಂ ತ್ವಾ ಗಣಪತಿಂ" (ತೈ. ಸಂ. ೨-೩-೧೪) "ವಿಶ್ವಸ್ಮಾದಿಂದ್ರ ಉತ್ತರಃ" (ಋ. ೮-೪-೧) "ಏಕೋ ಹ ವೈ ನಾರಾಯಣ ಆಸ್ಮೀತ್" (ಮಹೋ. ೧-೧) "ಮನೋ ವೈ ಬ್ರಹ್ಮೇತಿ ಚಕ್ಷುರ್ವೈಬ್ರಹ್ಮೇತಿ, ಶ್ರೋತ್ರಂ ವೈ ಬ್ರಹ್ಮೇತಿ" "ಪ್ರಾಣೋಬ್ರಹ್ಮ ಕಂ ಬ್ರಹ್ಮ" (ಛಾಂ. ೪-೧೦-೪) "ಅನ್ನಂ ಬ್ರಹ್ಮ" (ತೈ.ಭೃ. ೨) ಮುಂತಾದ ಶ್ರುತಿಗಳಲ್ಲಿ ಆತ್ಮ ಚತುರ್ಮುಖ, ಮೂಲಪ್ರಣವ, ಆದಿತ್ಯ, ವಾಯು, ಗಣಪತಿ, ಇಂದ್ರ, ನಾರಾಯಣ, ಮನಸ್ಸು, ಶ್ರೋತ್ರ, ಆಕಾಶ, ಪೃಥಿವೀ ಮತ್ತು ಅನ್ನ ಇವುಗಳೆಲ್ಲಕ್ಕೂ ಬ್ರಹ್ಮವೆಂದು ಪ್ರತಿಪಾದಿಸಿರುವುದರಿಂದ ಶಿವನೊಬ್ಬನೇ ಬ್ರಹ್ಮವೆಂದು ಹೇಗೆ ಹೇಳುವಿರಿ ? ಇವೆಲ್ಲವೂ ಬ್ರಹ್ಮವೆಂದು ಹೇಳುವಲ್ಲಿ ಬಾಧಕವೇನು ? ಶಿವನೊಬ್ಬನೇ ಬ್ರಹ್ಮವೆಂದು ಹೇಳುವಲ್ಲಿ ಸಾಧಕ ಪ್ರಮಾಣವೇನು ? ಎಂಬ ಆ ಶಂಕೆಗೆ ಭಾಷ್ಯಕಾರರು ಹೀಗೆ ಉತ್ತರಿಸಿದ್ದಾರೆ. "ಅಗ್ನೀಷೋಮೀಯಂ ಪಶುಮಾಲಭೇತ" ಎಂಬ ಶ್ರುತಿಯಿಂದ ಅಗ್ನಿಷ್ಟೋಮ ಯಾಗದಲ್ಲಿ ಪಶ್ವಾಲಂಭನವು ಪ್ರಾಪ್ತವಾಗಲು "ದ್ವಿಪದಾಶ್ಚತುಷ್ಪದಾಶ್ಚ ಪಶವಃ" ಎಂಬ ಶ್ರುತಿಯಿಂದ ಎರಡು ಪಾದಗಳುಳ್ಳ ಮನುಷ್ಯನೂ ನಾಲ್ಕು ಪಾದಗಳುಳ್ಳ ಗೋ ಮಹಿಷಾದಿಗಳೂ ಪಶು ಶಬ್ದವಾಚ್ಯಗಳಾವುವೆಂದು ಕಂಡುಬರುವುದರಿಂದ ಸಂಶಯವು ಉತ್ಪನ್ನವಾಗುತ್ತದೆ. ಹೇಗೆಂದರೆ ಎರಡು ಕಾಲುಗಳುಳ್ಳ ಪಶುವನ್ನು ಹವನಮಾಡಬೇಕೋ ಅಥವಾ ನಾಲ್ಕು ಕಾಲುಳ್ಳ ಪಶುವನ್ನು ಹವನಮಾಡಬೇಕೋ ಎಂದು ಸಂಶಯವು ಹುಟ್ಟಲು "ಛಾಗಸ್ಯವಪಾಯಾ ಮೇದಸೋಽನುಬ್ರೂಹಿ" (ತೈ. ಬ್ರಾ. ೩-೬-೮) ಎಂಬ ಬೇರೆ ಶ್ರುತಿಯಲ್ಲಿ "ಛಾಗರೂಪ ಪಶು" ಎಂದು ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ನಿರ್ಣಯಿಸಿರುವಂತೆ ಶಿವನಿಗೆ ಬ್ರಹ್ಮತ್ವವು ನಿರ್ಣಯಿಸಲ್ಪಡುತ್ತದೆ.

"ಯತೋವಾ" (ತೈ. ಭೃ. ೧) ಇತ್ಯಾದಿ ಶ್ರುತಿಗಳಲ್ಲಿ ಜಗತ್ತಿನ ಉತ್ಪತ್ತಿ,

CC-0. Jangamwadi Math Collection. Digitized by eGangotri

ಸ್ಥಿತಿ, ಲಯ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳನ್ನು ಮಾಡುವವನೇ ಬ್ರಹ್ಮನೆಂದೂ ಈ ಪಂಚಕೃತ್ಯಗಳನ್ನು ಮಾಡುವವನು ಪರಮೇಶ್ವರ ಶಬ್ದವಾಚ್ಯ ವಾದ ಶಿವನಲ್ಲದೆ ಮತ್ತಾರೂ ಅಲ್ಲವೆಂದೂ ಸತ್ವ, ರಜಸ್ತಮೋಗುಣಗಳಿಂದ ಕೂಡಿದ ಹಿರಣ್ಯಗರ್ಭ, ನಾರಾಯಣ, ಕಾಲರುದ್ರ ಮೊದಲಾದವರಿಗೆ ಒಂದೊಂದು ಕೃತ್ಯ ವನ್ನು ಮಾಡುವ ಕರ್ತೃತ್ವವಿದ್ದರೂ ಐದೂ ಕೃತ್ಯಗಳನ್ನು ಮಾಡುವ ಶಕ್ತಿಯಿಲ್ಲ ದಿರುವುದರಿಂದ ಅವರು ಬ್ರಹ್ಮಪದವಾಚ್ಯರಾಗುವುದಿಲ್ಲವೆಂದೂ ಸಿದ್ಧವಾಗುವುದು. ಆದುದರಿಂದಲೇ "ಜನ್ಮಾದ್ಯಸ್ಯ ಯತಃ" ಎಂದು ವ್ಯಾಸಮಹರ್ಷಿಗಳು ಸೂತ್ರಿಸಿರುವರು. ಯಾರಿಂದ ಈ ಪಂಚಕೃತ್ಯಗಳು ಆಗುವುವೋ ಅವನೇ ಬ್ರಹ್ಮವೆಂದು ಅವರ ಅಭಿ ಪ್ರಾಯವಾಗಿದೆ. ಯಾವನ ಅಪ್ಪಣೆಯಿಂದ ಚತುರ್ಮುಖನು ಸೃಷ್ಟಿಸುವನೋ ಅಂತಹ ಶಿವನಿಗೆ ನಮಸ್ಕಾರವೆಂದು ಬ್ರಹ್ಮೋತ್ತರ ಖಂಡದಲ್ಲಿ ಹೇಳಿರುವುದರಿಂದಲೂ "ಮಾಯಾಂ ತು ಪ್ರಕೃತಿಂ ವಿದ್ಯಾತ್" (ಶ್ವೇ. ೪-೧೦) ಎಂಬ ಶ್ರುತಿಯಲ್ಲಿ ಪರಮೇಶ್ವರನಿಗೆ ಮಾಯೆಯು ಅಧೀನವಾಗಿರುವುದೆಂದು ಕಂಡುಬರುವುದರಿಂದ ಶಿವನೇ ಸರ್ವಸ್ವತಂತ್ರನಲ್ಲದೆ ಮತ್ತಾರೂ ಸ್ವತಂತ್ರರಲ್ಲ. "ದೇವಾ ಹ ವೈಸ್ವರ್ಗಂ ಲೋಕಮಗಮನ್" (ಅರ್ಥವಶಿರ ೧) ಎಂಬ ಶ್ರುತಿಯಿಂದ ಶಿವನೊಬ್ಬನೇ ನಿತ್ಯನೂ ಸರ್ವಾಂತರ್ಯಾಮಿಯೂ ಸರ್ವಕಾರಣನೂ, ಸರ್ವಶಬ್ದಾಭಿಧೇಯನೂ, ಸರ್ವೇಶ್ವರನೂ, ಸರ್ವಾತ್ಮಕನೂ, ಬ್ರಹ್ಮಪದವಾಚ್ಯನೂ ಆಗಿರುವನೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿರು ವುದು. "ಯಃ ಪೃಥಿವ್ಯಾಂತಿಷ್ಠನ್" ಇತ್ಯಾದಿ ಶ್ರುತಿಯಿಂದ ಪೃಥಿವ್ಯಾದ್ಯಷ್ಟ ಮೂರ್ತಿ ಸ್ವರೂಪನಾದ ಶಿವನಿಗೆ ಮಾತ್ರ ಬ್ರಹ್ಮತ್ವವನ್ನು ಪ್ರತಿಪಾದಿಸಿರುವು ದರಿಂದ ಆ ಶಿವನಿಗೆ ಇತರವಾದ ಶಂಖ, ಚಕ್ರ, ಗದಾಧಾರಿಯಾದ ದೇವತೆಗೆ ಭೂತ ಭೌತಿಕ (ಘಟಾದಿ) ಸೃಷ್ಟಿ ಸಾಮರ್ಥ್ಯವಿಲ್ಲದಿರುವುದರಿಂದ ಬ್ರಹ್ಮತ್ವವನ್ನು ಪ್ರತಿ ಪಾದಿಸಲಾಗುವುದಿಲ್ಲ.

ಶಂಕೆ—ವಿಷ್ಣು ಶಬ್ದದ ಅವಯವಶಕ್ತಿಯಿಂದ ವಿಷ್ಣುಶಬ್ದವಾಚ್ಯನಾದ ಶಂಖ, ಚಕ್ರಧಾರಿಯಾದ ದೇವತೆಯೂ ಕೂಡ ವ್ಯಾಪಕವೆಂದು ಸಿದ್ಧವಾಗುವುದರಿಂದ ಪೃಥಿ ವ್ಯಾದಿ ಶರೀರವುಳ್ಳತನವನ್ನೂ ಅಂತರ್ಯಾಮಿತ್ವವನ್ನೂ ವಿಷ್ಣು ದೇವತೆಗೆ ಹೇಳ ಬಹುದಲ್ಲವೆ.

ಸಮಾಧಾನ—ಹೇಳಲಾಗುವುದಿಲ್ಲ. ಏಕೆಂದರೆ ಶಿವನೊಬ್ಬನಿಗೆ ಮಾತ್ರ ಅಷ್ಟ ಮೂರ್ತಿತ್ವವು ಪ್ರಸಿದ್ಧವಾಗಿರುವುದರಿಂದ ಅಂತರ್ಯಾಮಿತ್ವವನ್ನು ಶಿವೇತರದೇವತೆಗೆ ಹೇಳುವುದು ಅಪ್ರಸಿದ್ಧ. ಶಿವಕೇಶವರಿಬ್ಬರಿಗೂ ಅಂತರ್ಯಾಮಿತ್ವವನ್ನಾಗಲಿ, ಅಷ್ಟ ಮೂರ್ತಿತ್ವವನ್ನಾಗಲಿ ಹೇಳಲಿಕ್ಕೆ ಬರುವುದೇ ಇಲ್ಲ. ಅವರಿಬ್ಬರಿಗೂ ಕೂಡಿ ಒಂದು ಶರೀರವಂತೂ ಇಲ್ಲವೇ ಇಲ್ಲ. ಪರಸ್ಪರ ಭಿನ್ನರಾದ ಸ್ವತಂತ್ರರಾದ ಅವರಿಬ್ಬರನ್ನೂ

CC-0. Jangamwadi Math Collection. Digitized by eGangotri

ಜಗನ್ನಿಯಾಮಕರೆಂದು ಹೇಳಿದರೆ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ ಇವುಗಳು ಯುಗಪತ್ ಸಂಭವಿಸಿ ಯಾವುದೊಂದು ಕೃತ್ಯವೂ ಆಗದೇ ಹೋಗಬೇಕಾಗುವುದು. "ಸೋಽಂತರಾದಂತರಂ ಪ್ರಾವಿಶತ್" (ಅಥರ್ವಶಿರ ೧) "ಯೋ ರುದ್ರೋಽಗ್ನೌ" (ತೈ. ಸಂ. ೫-೫-೯) ಮುಂತಾದ ಶ್ರುತಿಶತಗಳಲ್ಲಿ ಶಿವನೋರ್ವನೇ ಸರ್ವಾತ್ಮನೂ, ಸರ್ವಾಂತರ್ಯಾಮಿಯೂ ಎಂದು ಕಂಡುಬರುವುದರಿಂದಲೂ "ಯೋ ವೇದಾದೌ ಸ್ವರಃ ಪ್ರೋಕ್ತಃ" (ಮಹಾನಾ. ಅನು. ೧೦) ಎಂಬ ಶ್ರುತಿಯಿಂದ ಅಕಾರ ಉಕಾರ ಮಕಾರಗಳಿಂದ ವಾಚ್ಯರಾದ ಬ್ರಹ್ಮ ವಿಷ್ಣು ಕಾಲರುದ್ರರಿಗೆ ಮಹೇಶನಲ್ಲಿ ವಿಲಯವು ಪ್ರತಿಪಾದಿಸಲ್ಪಡುವುದರಿಂದಲೂ ಶಿವನಲ್ಲದೆ ಇತರ ದೇವತೆಗಳು ಬ್ರಹ್ಮಪದ ವಾಚ್ಯರಲ್ಲ! ಹಾಗೂ "ಈಶಾನಃ ಸರ್ವವಿದ್ಯಾನಾಂ" ಎಂದಾರಂಭಿಸಿ "ಸದಾಶಿವೋಂ" (ಮಹಾ. ನಾ. ಅನು. ೨೧) ವರೆಗೆ ಇರುವ ಶ್ರುತಿಯಿಂದ ಶಿವನಿಗೆ ಮಾತ್ರ ಬ್ರಹ್ಮತ್ವವೂ ಪ್ರಣವಪ್ರತಿಪಾದ್ಯತ್ವವೂ ಉಕ್ತವಾಗಿದೆಯಲ್ಲದೆ ಇತರ ದೇವತೆಗಳಿಗೆ ಉಕ್ತವಾಗಿಲ್ಲ! "ತಮೀಶ್ವರಾಣಾಂ ಪರಮಂ ಮಹೇಶ್ವರಂ" (ಶ್ವೇ. ೬-೭) ಎಂಬ ಶ್ರುತಿಯಲ್ಲಿ ಬ್ರಹ್ಮ ವಿಷ್ಣು ಕಾಲರುದ್ರಾದಿಗಳಿಗೆ ಮಹೇಶ್ವರನು ನಿಯಾಮಕನೆಂದು ತಿಳಿಯುವುದಲ್ಲದೆ ಅನ್ಯಥಾ ತಿಳಿಯುವುದಿಲ್ಲವೆಂದು ನಿರ್ಣಯಿಸಲ್ಪಟ್ಟಿರುವುದು.

"ಸೋಮಃ ಪವತೇ ಜನಿತಾ ಮತೀನಾಂ" (೭-೪-೬) ಎಂಬ ಶ್ರುತಿಯಲ್ಲಿ ಬುದ್ಧ್ಯಾದಿವಿಷ್ಣ್ವಂತವಾಗಿ ಜಗತ್ತಿಗೆ ಶಿವನೇ ಕಾರಣನೆಂದು ಸ್ಪಷ್ಟವಾಗಿ ಉಪಪಾದಿಸಲ್ಪಟ್ಟಿರುವುದು. "ಸೋಮಃ ಪವತೇ ಜನಿತಾ ಮತೀನಾಂ" ಎಂಬ ಋಗ್ವೇದ ವಾಕ್ಯವು ಸೋಮಯಾಗ ಪ್ರಕರಣದಲ್ಲಿ ಪಠಿತವಾಗಿರುವುದರಿಂದ ಸೋಮಲತಾ ಪರವಾಗಿರುವುದೆಂದು ಹೇಳಲು ಅವಕಾಶವೇ ಇಲ್ಲ. ಏಕೆಂದರೆ ಸೋಮಲತೆಯು ಅಚೇತನವಾಗಿರುವುದರಿಂದ ಅದಕ್ಕೆ ಸರ್ವಕಾರಣತ್ವವನ್ನು ಹೇಳುವುದು ಯುಕ್ತವಲ್ಲ. ಅಥರ್ವಣ ಶಿಖೆಯಲ್ಲಿ "ಧ್ಯಾಯಿತೀಶಾನಂ ಪ್ರಧ್ಯಾಯಿತವ್ಯಂ ಸರ್ವಮಿದಂ ಬ್ರಹ್ಮ ವಿಷ್ಣು ರುದ್ರೇಂದ್ರಾಸ್ತೇ ಸಂಪ್ರಸೂಯಂತೇ। ಸರ್ವಾಣಿ ಚೇಂದ್ರಿಯಾಣಿ ಸಹ ಭೂತೈರ್ನಕಾರಣಂ ಕಾರಣಾನಾಂ ಧ್ಯಾತಾ ಕಾರಣಂ ತು ಧ್ಯೇಯಃ। ಸರ್ವೈಶ್ವರ್ಯ ಸಂಪನ್ನಃ ಸರ್ವೇಶ್ವರಃ ಶಂಭುರಾಕಾಶಮಧ್ಯೇ ಧ್ರುವಂ ಸರ್ವಾಧಿಕಂ" ಇದು ಮೊದಲುಗೊಂಡು "ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ" (ಅಥರ್ವಶಿಖಾ ೩) ಇದು ಅಂತವಾಗಿ ಉಳ್ಳ ವಾಕ್ಯದಿಂದ ಮುಮುಕ್ಷುಗಳಿಗೆ ಶಿವೋಪಾಸನೆಯು ಮಾತ್ರ ಹೇಳಲ್ಪಟ್ಟಿರುವುದಲ್ಲದೆ ಇತರೋಪಾಸನೆಯು ಹೇಳಲ್ಪಟ್ಟಿರುವುದಿಲ್ಲ. "ಉತಾಮೃತತ್ವಸ್ಯೇಶಾನಃ" (ತೈ. ಆರ. ೩-೧೨) "ಸರ್ವಮಿದಂ ಶಿವ ಏವ ವಿಜಾನೀಮಹಿ। "ಶುದ್ಧೋ ನಿರಂಜನೋ ವಿಭುರದ್ವಯಂ ಶಿವಮೇಕಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ ಶಿವೋಽದ್ವೈತಃ" "ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥುಃ" (ಶ್ವೇ. ೩-೨) "ನ ಸನ್ನ ಚಾ ಸಚ್ಛಿವ ಏವ ಕೇವಲಃ" (ಶ್ವೇ.

CC-0. Jangamwadi Math Collection. Digitized by eGangotri

೪-೧೫) "ವಿಶ್ವಾಧಿಕೋ ರುದ್ರೋ ಮಹರ್ಷಿಃ" (ಮಹಾ. ನಾ. ಅನು. ೧೦) ಇತ್ಯಾದಿ ಶ್ರುತಿಗಳಿಂದ ಶಿವನಿಗೆ ಅದ್ವಿತೀಯತ್ವವು ಪ್ರತಿಪಾದಿಸಲ್ಪಡುವುದರಿಂದ ಶಿವನೊಬ್ಬನೇ ಪರಬ್ರಹ್ಮನೆಂದು ನಿಶ್ಚಯಿಸಲ್ಪಡುವುದು. ಇದಲ್ಲದೆ "ಉಮಾಸಹಾಯಂ (ಕೈವಲ್ಯ ೧-೭) ಎಂದು ಆರಂಭ ಮಾಡಿ "ಸ ಬ್ರಹ್ಮಾ ಸ ಶಿವಸ್ಸಹರಿಸ್ಸೋಽಕ್ಷರಃ ಪರಮಃ ಸ್ವರಾಟ್" (ಮಹಾ ನಾ. ಅನು. ೧೧) ಎಂದು ಕಡೆಯಾಗಿರುವ ಶ್ರುತಿಯಲ್ಲಿ ಶಿವನೊಬ್ಬನೇ ಸರ್ವಕಾರಣನೆಂಬ ಉಪದೇಶವಿರುವುದರಿಂದ ಅವನೇ ಪರಬ್ರಹ್ಮವು. ಇತರ ದೇವತೆಗಳಾರೂ ಬ್ರಹ್ಮಶಬ್ದ ವಾಚ್ಯರಲ್ಲ.

ಶಂಕೆ—"ಹಿರಣ್ಯಗರ್ಭಃ ಸಮವರ್ತತಾಗ್ರೇ" "ಏಕೋ ಹ ವೈ ನಾರಾಯಣ ಆಸೀತ್" ಇತ್ಯಾದಿ ಪೂರ್ವೋಕ್ತ ಶ್ರುತಿಗಳು ಬ್ರಹ್ಮ ವಿಷ್ಣ್ವಾದಿಗಳನ್ನೂ ಕೂಡ ಬ್ರಹ್ಮವೆಂದು ಹೇಳುವವಲ್ಲ ! ಇವುಗಳ ಗತಿಯೇನು ?

ಸಮಾಧಾನ :—ಈ ಶಂಕೆಗೆ ಅವಕಾಶವಿಲ್ಲ. ಏಕಂದರೆ ಅವುಗಳು "ಅನ್ನಂ ಬ್ರಹ್ಮ" ಎಂಬ ಶ್ರುತಿಯು ಹೇಗೆ ಸ್ತುತಿಪರವಾಗಿರುವುದೋ ಹಾಗೆ ಸ್ತುತಿಪರಗಳಾಗಿ ರುವವು. ಹಾಗೂ "ಸರ್ವೋ ವೈ ರುದ್ರಃ" (ಮಹಾ. ನಾ. ಅನು. ೧೬) "ಸರ್ವಂ ಖಲ್ವಿದಂ ಬ್ರಹ್ಮ" (ಛಾಂ. ೩-೧೪-೧) "ತ್ರಿಷು ಧಾಮಸು" ಹೀಗೆ ಆರಂಭಿಸಿ "ತದ್ಬ್ರಹ್ಮಾದ್ವಯಮಸ್ಮ್ಯಹಂ" (ಕೈವಲ್ಯ ೧-೧೮) ಇತ್ಯಂತವಾಗಿರುವ ಕೈವಲ್ಯ ಶ್ರುತಿಯಿಂದ ಹಸ್ತಕರಾದಿ ಶಬ್ದಗಳಂತೆ ಬ್ರಹ್ಮ-ಆತ್ಮ-ಶಿವ ಶಬ್ದಗಳು ಪರ್ಯಾಯ ನಾಮಗಳೆಂದು ತಿಳಿದುಬರುವುದರಿಂದ ಬ್ರಹ್ಮಾತ್ಮಪರಗಳಾದ ಸೃಷ್ಟ್ಯಾದಿ ವಾಕ್ಯಗಳು ಶಿವಪರಂಪರೆಗಳೆಂದೇ ತಿಳಿಯಬೇಕು.

ಮಂಡೂಕ್ಯೋಪನಿಷತ್ತಿನ ಉಪಕ್ರಮದಲ್ಲಿ "ಸರ್ವಂ ಹ್ಯೇತದ್ಬ್ರಹ್ಮಾಯ ಮಾತ್ಮಾ ಬ್ರಹ್ಮಸೋಽಯಮಾತ್ಮಾ" ಎಂದೂ "ಶಿವಮದ್ವೈತಂ ಚತುರ್ಥಂ ಮನ್ಯಂತೆ ಸ ಆತ್ಮಾಸ ವಿಜ್ಞೇಯಃ" (ಮಾಂಡೂಕ್ಯ ೧-೭) ಎಂದೂ ಹೇಳಿರುವುದರಿಂದ ಅದ್ವಿತೀಯ ಬ್ರಹ್ಮಪ್ರಕರಣದಲ್ಲಿ ಉಪಕ್ರಮ ವಾಕ್ಯಕ್ಕೂ ಏಕಾರ್ಥವನ್ನು ಹೇಳುವುದು ಆವಶ್ಯಕವಾಗಿರುವುದರಿಂದಲೂ ಉಪಕ್ರಮ ವಾಕ್ಯ ಪಠಿತವಾಗಿರುವ ಅದ್ವೈತ ರೂಪನಾದ ಶಿವನಿಗೂ ಅಭೇದೋಪದೇಶವಿರುವುದರಿಂದಲೂ ಜಗಜ್ಜನ್ಮಾದಿ ಕಾರಣತ್ವವು ಶಿವನಿಗೆ ಮಾತ್ರ ಸಿದ್ಧಿಸುವುದಲ್ಲದೆ ಇನ್ನಾರಿಗೂ ಸಿದ್ಧಿಸುವುದಿಲ್ಲವೆಂದು ಹೇಳಲೇಬೇಕು ಇಲ್ಲವಾದರೆ ಶಿವ-ಬ್ರಹ್ಮಾತ್ಮಾದಿಗಳಿಗೆ ಶ್ರುತಿಯು ಜಗತ್ಕಾರಣತ್ವವನ್ನು ಪ್ರತಿಪಾದಿಸುವುದರಿಂದ ಪ್ರತ್ಯೇಕವಾಗಿ ಅವರಿಗೆ ಬ್ರಹ್ಮತ್ವ (ಈಶ್ವರತ್ವ) ವನ್ನು ಹೇಳುವ ಪಕ್ಷದಲ್ಲಿ ಅನೇಕ ಈಶ್ವರರನ್ನು ಸ್ವೀಕರಿಸಬೇಕಾಗುವುದು. ಹೀಗೆ ಸ್ವೀಕರಿಸಿದ ಪಕ್ಷದಲ್ಲಿ ಸಕಲಮತ ವಿರೋಧವೂ, ಸಕಲಶ್ರುತಿ ವಿರೋಧವೂ ಸಂಭವಿಸುವುದು. ಆದುದರಿಂದ

CC-0. Jangamwadi Math Collection. Digitized by eGangotri

ಶಿವನೊರ್ವನೇ ಬ್ರಹ್ಮಾತ್ಮ ಶಬ್ದವಾಚ್ಯನೂ ಜಗತ್ಕಾರಣನೂ ಆಗಿರುವನು ಎಂದು ತಿಳಿಯಬೇಕು.

ಇದರಂತೆ ಸಕಲ ವೇದಾಂತಾರ್ಥಾಭಿಜ್ಞರಾದ ಜೈಮಿನ್ಯಾಚಾರ್ಯರು ತಮ್ಮ ವೇದ ಪಾದಸ್ತವದಲ್ಲಿ ಸಕಲ ವೇದವಾಕ್ಯಗಳಿಗೆ ಶಿವಪರತ್ವವನ್ನೇ ಹೇಳಿರುವರು. ಇದರಂತೆ ನಾಲ್ಕು ವೇದಪಾರಂಗತರಾದ ಜ್ಯೋತಿರ್ನಾಥ, ಘಂಟಾನಾಥ, ಭೀಮನಾಥ, ಭಟ್ಟ ಭಾಸ್ಕರಾದಿ ವೈದಿಕರು ವೇದಮಾರ್ಗಪ್ರತಿಷ್ಠಾಪನಾಚಾರ್ಯರೆಂದು ಲೋಕವಿಖ್ಯಾತ ರಾಗಿರುವವರೂ ಕೂಡ ಪಾಷಂಡ, ಪಾಂಚರಾತ್ರ, ಬುದ್ಧಾದ್ವೈತಾದಿ ದುರ್ಮತ ನಿರಾ ಕಾರಣ ಮಾಡಿದಮೇಲೆ

"ಮಹಾದೇವೋ ದೇವಸ್ಸಕಲ ಜಗದಾರಾಧ್ಯ ಚರಣ
ಸ್ತ್ರಯೀ ಮಾರ್ಗೋ ಮಾರ್ಗಃ ಕುಮತಿ ಮತವೃತ್ತಿಪ್ರಮಥನಃ ।
ತಯೊರ್ಬ್ಯೋ ಬ್ರೂತೇ ವೃಜಿನಮನಯೋಸ್ತಸ್ಯನಿದಧೇ
ಶಿರಸ್ಯಂಘ್ರಿಂ ವಾದಿಪ್ರಳಯದಹನೋಽಹಂ ನೃಪಸಭೇ" ॥

ಇತ್ಯಾದಿಯಾಗಿ ಹೇಳಿ ಶಿವನಿಗೆ ಮಾತ್ರ ಪರಬ್ರಹ್ಮವೆಂದು ಹೇಳಿರು ವರು ಆದುದರಿಂದ "ಅಥಾತೋ ಬ್ರಹ್ಮ ಜಿಜ್ಞಾಸಾ" ಎಂಬ ವೇದಾಂತ ಶಾಸ್ತ್ರದ ಪ್ರಥಮ ಸೂತ್ರದಲ್ಲಿ ಪಠಿತವಾದ "ಬ್ರಹ್ಮ ಜಿಜ್ಞಾಸಾ" ಶಬ್ದಕ್ಕೆ ಶಿವಸ್ವರೂಪವಿಚಾರ ವೆಂಬ ಅರ್ಥವೇ ಬಾದರಾಯಣಾಚಾರ್ಯರಿಂದ ತೋರಿಸಲ್ಪಟ್ಟಿದೆ. ಆದಕಾರಣ ಬ್ರಹ್ಮ ವೆಂದು ಪ್ರಸಿದ್ಧನಾದ ಶಿವನಿಗೆ ಜಗತ್ಕಾರಣತ್ವವು ಸಿದ್ಧವಾಯಿತು. ಆದರೆ ಸೂತ್ರ ಸಂದರ್ಭರೂಪವಾದ ಶಾಸ್ತ್ರದಲ್ಲಿ ಶಿವನಿಗೇನೇ ಬ್ರಹ್ಮವೆಂಬ ವ್ಯವಹಾರವುಂಟು. ಇದರಂತೆಯೇ ಶ್ರುತಿಯಲ್ಲಿಯೂ 'ಬ್ರಹ್ಮ ವಿದಾಪ್ನೋತಿ ಪರಂ" (ತೈ. ಆನಂ. ೧) "ಬ್ರಹ್ಮವೇದ ಬ್ರಹ್ಮೈವ ಭವತಿ" (ಮುಂಡಕ ೩-೨-೯) ಎಂಬುದಾಗಿ ಬ್ರಹ್ಮ ವ್ಯವ ಹಾರವೂ "ಶಿವ ಏಕೋ ಧ್ಯೇಯಃ ಶಿವಂಕರಸ್ಸರ್ವಮನ್ಯತ್ಪರಿತ್ಯಜ್ಯ" (ಅಥರ್ವಶಿಖಾ ೩) ಎಂಬುದಾಗಿ ಶಿವ ವ್ಯವಹಾರವಾದರೂ ಇದ್ದೇ ಇರುವುದು. "ಶಿವಂಕರ" ಎಂಬಲ್ಲಿ "ಶಿವಂ ಶಿವತ್ವಂ ಕರೋತೀತಿ ಶಿವಂಕರಃ" ಎಂದು ಭಾವಪ್ರಧಾನವಾದ ನಿರ್ದೇಶವೆಂದು ತಿಳಿಯಬೇಕು. ಆದುದರಿಂದ ಆತ್ಯಂತಿಕ ಪಾಶ ನಿವೃತ್ತಿಪೂರ್ವಕ ಶಿವತ್ವಪ್ರಾಪ್ತಿಯೇ ಮೋಕ್ಷವೆಂದು ಉಪದೇಶಿಸಲ್ಪಡುವುದು.

ಶಂಕೆ :—ಈ ಶಿವತ್ವಪ್ರಾಪ್ತಿಯೆಂಬ ಮೋಕ್ಷವು ಆಗಂತುಕವಾಗಿ ಅನಿತ್ಯವಾ ಗಿರುವುದರಿಂದ ಅದು ಮೋಕ್ಷವೆನಿಸಲಾರದು.

ಸಮಾಧಾನ :—ಹಾಗಲ್ಲ; ಜೀವಭಾವವು (ಪಾಶ ಬದ್ಧತ್ವವು) ಸ್ವಾಭಾವಿಕ

CC-0. Jangamwadi Math Collection. Digitized by eGangotri

ವಾಗಿದ್ದರೂ ಅದರ ನಿವೃತ್ತಿ (ಲಯ) ಯಾಗುವುದು. ಆಮೇಲೆ ಶಿವಭಾವವು ಪ್ರಾಪ್ತ ನಾಗುವುದು. ಹೇಗೆಂದರೆ ಕೀಟವಲ್ಲಿ ಸ್ವಾಭಾವಿಕವಾದ ಕೀಟತ್ವವು ನಿವೃತ್ತಿಯಾಗಿ ಭ್ರಮರತ್ವವು ಉಂಟಾಗುವುದಿಲ್ಲವೆ? ಮತ್ತು ಸತ್ಯವಾದ ಜಲದ ಸ್ವಭಾವವು ನಿವೃತ್ತವಾಗಿ ಆ ಜಲಕ್ಕೆ ಮೌಕ್ತಿಕಭಾವವು ಪ್ರಾಪ್ತವಾಗುವುದಲ್ಲವೆ? ಇಲ್ಲಿ ಕೀಟಸ್ವಭಾವವಾಗಲಿ ಜಲಸ್ವಭಾವವಾಗಲಿ ಮಿಥ್ಯೆಯಾಗಿರದೆ ಸತ್ಯಗಳೇ ಆಗಿರುವವು. ಆದರೂ ಈ ಪ್ರಥಮ ಸ್ವಭಾವಗಳು ಕೀಟವು ಭ್ರಮರವಾದ ಕಾಲದಲ್ಲಿ ಹಾಗು ಜಲವು ಮುತ್ತಾದ ಕಾಲದಲ್ಲಿ ನಿವೃತ್ತಿಯನ್ನು ಹೊಂದುವುದು ಲೋಕಾನುಭವ ಸಿದ್ಧವೇ ಆಗಿದೆ. ಅದರಂತೆ ಜೀವಭಾವ (ಆಣವಾದಿ ಮಲತ್ರಯವು) ಸತ್ಯವಾದು ದಾದರೂ ಇದರ ನಿವೃತ್ತಿಯಾಗಿ ಶಿವತ್ವವು ಪ್ರಾಪ್ತಿಯಾಗುವುದು. ಶುದ್ಧ ಶಿವಾಂಶ ರೂಪನಾದ ಆತ್ಮನು ಸ್ವರೂಪತಃ ಶಿವರೂಪನೇ ಆಗಿರುವನು. ಇವನು ಮಲತ್ರಯಾ ವರಣದಿಂದ ಮಾತ್ರ ಶಿವನಿಗೆ ವಿರೂಪ (ಭಿನ್ನ) ನಾಗುವನು. ಅಂದರೆ ನಾನು ಶಿವ ನಲ್ಲವೆನ್ನುವನು. ದೀಕ್ಷಾತ್ರಯದಿಂದ ಈ ಮಲತ್ರಯವೆಂಬ ಬಂಧವು ಲಯವಾಗಲು ತನ್ನ ಸಂಕುಚಿತವಾದ ಚಿತ್ತದ ವಿಕಾಸವಾಗಿ ಶಿವನೇ ಆಗುವನು. ಅಂದರೆ ಶಿವತ್ವ ಪ್ರಾಪ್ತಿರೂಪ ಮೋಕ್ಷವನ್ನು ಹೊಂದುವನು. ಅಂದಮೇಲೆ ಮಲತ್ರಯವೆಂಬ ಬಂಧ ಕ್ಕಾದರೂ ಅಸತ್ಯ (ಮಿಥ್ಯೆ) ವೆಂದು ಹೇಳುವಲ್ಲಿ ಪ್ರಯೋಜನವೇನು? ಏನೂ ಪ್ರಯೋಜನವಿಲ್ಲ. ಶಿವಾಂಶರೂಪನಾದ ಆತ್ಮನ ಜೀವಭಾವವೆಂಬ ಬಂಧನಿವೃತ್ತಿಯಾಗಿ ಶಿವಭಾವವು ಪ್ರಾಪ್ತವಾದಮೇಲೆ ಪುನಃ ಜೀವಭಾವವು ಉಂಟಾಗುವುದಿಲ್ಲ. ಕೀಟವು ಭ್ರಮರವಾದಾಗ ಪುನಃ ಕೀಟಭಾವವು ಅದಕ್ಕೆ ಬರುವುದಿಲ್ಲವಷ್ಟೆ. ಜಲವು ಮುತ್ತಾ ದಾಗ ಪುನಃ ಅದಕ್ಕೆ ಜಲಭಾವವು ಬರುವುದಿಲ್ಲವಷ್ಟೆ. ಕ್ಷೀರವು ದಧಿಘೃತವಾದಮೇಲೆ ಪುನಃ ಅದಕ್ಕೆ ಕ್ಷೀರಭಾವವು ಬರುವುದಿಲ್ಲವಷ್ಟೆ. ಇದಲ್ಲದೆ ಮುಕ್ತನು ಪುನಃ ಬದ್ಧ ನಾಗದಿರುವಲ್ಲಿ ಈಶ್ವರೇಚ್ಛೆಯೇ ನಿಯಾಮಿಕೆಯಾಗಿರುವುದು. ಈ ತತ್ವವನ್ನು ತೋರಿಸುವುದಕ್ಕಾಗಿಯೇ ಭಾಷ್ಯಕಾರರು "ಕಿಮರ್ಥಂ ಬಂಧಮಿಥ್ಯಾತ್ವಕಲ್ಪನಂ" ಎಂದು ಉಲ್ಲೇಖಿಸಿರುವರು. ಇದರಿಂದ ಅದ್ವೈತಿಗಳು ಮಿಥ್ಯೆಯೆಂದು ಹೇಳುವ ಅಜ್ಞಾನಾ (ಆಣವಾ) ದಿ ಬಂಧಕ್ಕೂ ಕೂಡ ಸತ್ಯತ್ವವನ್ನೇ ಹೇಳಬೇಕೆಂಬ ಅಭಿಪ್ರಾ ಯವು ವ್ಯಕ್ತವಾಯಿತು.

ಇಲ್ಲಿ ಸ್ವಲ್ಪ ವಿಸ್ತರಿಸಬೇಕಾದುದು ಆವಶ್ಯಕ. ಇಲ್ಲಿ ಶಿವಸ್ವರೂಪವನ್ನು ಜೀವ ಸ್ವರೂಪವನ್ನು ವಿಸ್ತರಿಸಬೇಕಾಗಿದೆ. "ಅಂಡರಸ ನ್ಯಾಯ"ದಂತೆ ಸರ್ವ ಚರಾಚರ ಪ್ರಪಂಚವನ್ನೂ ತನ್ನಲ್ಲಿ ಸೂಕ್ಷ್ಮವಾಗಿರಿಸಿಕೊಂಡ ಜ್ಞಾನ ಕ್ರಿಯಾಶಕ್ತಿಗಳನ್ನೊಳ ಗೊಂಡ ಚಿಚ್ಛಕ್ತಿವಿಶಿಷ್ಟತ್ವವೇ ಶಿವಸ್ವರೂಪವಾಗಿರುವುದು. "ಚಿತಿರೇವ ಚೇತನ ಪದಾದವರೂಢಾ ಚೈತ್ಯ ಸಂಕೋಚನೀ ಚಿತ್ತಂ" ಎಂಬ ಶಕ್ತಿಸೂತ್ರಾನುಸಾರವಾಗಿ ಆ ಶಿವನ ಚಿಚ್ಛಕ್ತಿಯೇ ಘೃತಕಾಠಿನ್ಯನ್ಯಾಯದಿಂದ ಸಂಕೋಚವನ್ನು ಹೊಂದಲು

CC-0. Jangamwadi Math Collection. Digitized by eGangotri

ಅದರೊಳಗಿರುವ ಜ್ಞಾನ ಕ್ರಿಯಾಶಕ್ತಿಗಳು ಪರಸ್ಪರ ಭಿನ್ನಗಳಾಗುವವು. ಆಗ "ಜ್ಞಾನಂ ಬಂಧಃ" ಎಂಬ ಶಿವಸೂತ್ರಾನುಸಾರವಾಗಿ ಭೇದ ಬುದ್ಧಿಯೆಂಬ ಜಡವಾದ ಮಾಯೆಯು ಉದಯಿಸುವುದು. ಸತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿಗೆ ಪ್ರಧಾನವೆಂದೂ ಚಿತ್ತವೆಂದೂ ಪರ್ಯಾಯನಾಮಗಳಿರುವುವು. ಆತ್ಮನು ಚಿತ್ತ ಶಕ್ತಿ ವಿಶಿಷ್ಟನಾಗಲು ಜೀವನೆನಿಸುವನು. ಪುನಃ ಈ ಜೀವನು ದೀಕ್ಷೆಯಿಂದ ಶುದ್ಧನಾಗಿ ಗುರುಮುಖದಿಂದ ಉಪಾಯುಗಳನ್ನು ತಿಳಿದು ಆಚರಿಸಿ ಚಿತ್ತವನ್ನು ವಿಕಾಸಗೊಳಿಸಿ ಕಾರ್ಮಿಕ ಮಾಯಿಾಯ ಆಣವಮಲಗಳನ್ನು ಲಯಗೊಳಿಸಿದರೆ "ಚಿತ್ತಮೇವ ಚೇತನ ಪದಾವರೋಹಾಚ್ಚಿತಿಃ" ಎಂಬ ಶಕ್ತಿ ಸೂತ್ರಾನುಸಾರವಾಗಿ ಆ ಚಿತ್ತವೇ ಪುನಃ ಚಿಚ್ಛಕ್ತಿರೂಪವಾಗುವುದು. ಆಗ ಜೀವಭಾವವಡಗಿ ಶಿವಭಾವವೇ ಆವಿರ್ಭವಿಸುವುದು. ಚೇತನ ಪುರುಷನಿಂದ ಲೋಮ ನಖಾದಿ ಜಡವಸ್ತುಗಳು ಹುಟ್ಟುವಂತೆ ಚೇತನ ಶಿವನಿಂದಲೇ ಜಡವಾದ ಮಾಯೆಯು ಹುಟ್ಟುವುದು. ಲೋಮ ನಖಾದಿಗಳು ಚೇತನ ಶರೀರಕ್ಕೆ ಭಿನ್ನವಾಗಿರುವಂತೆ ಜಡಮಾಯೆಯು ಶಿವನಿಗೆ ಭಿನ್ನವಾಗಿರುವುದು. ಆದುದರಿಂದ ಮಾಯಾತತ್ವ ಮೊದಲುಗೊಂಡು ಪೃಥಿವೀತತ್ವದವರೆಗಿರುವ ಮೂರು ಮಲಗಳ ಸಬಂಧವೇ ಶಿವನಿಗಿರುವುದಿಲ್ಲ. ಆದರೆ ಸ್ವಶಕ್ತಿಕ್ಷೋಭೆಯಿಂದ ತನ್ನಿಂದ ಹೊರಟ ಆತ್ಮನೆನಿಸುವ ಶಿವನ ಅಂಶಕ್ಕೆ ಮಾತ್ರ ಸಂಬಂಧವುಂಟು. ವಾಯುಚಲನೆಯಿಂದ ಪುಷ್ಪಾಣುಗಳು ಹೊರಹೊರಡುವವು. ಆಗ ಇವು "ಚಿದ್ವಚ್ಛಕ್ತಿ ಸಂಕೋಚಾತ್ ಮಲಾವೃತಃ ಸಂಸಾರೀ" ಎಂಬ ಶಿವಸೂತ್ರಾನುಸಾರವಾಗಿ ಸಂಸಾರಬದ್ಧಗಳಾಗುವವು. ಅಜ್ಞಾನ ಅಥವಾ ಭೇದಬುದ್ಧಿಯೆನಿಸುವ ಮಾಯೆಯು ಆಗಂತುಕವಲ್ಲ. ಸುವರ್ಣದಲ್ಲಿ ಮೊದಲಿದ್ದ ಕಾಲಿಮೆಯೇ ಅಗ್ನಿಸಂಪರ್ಕದಿಂದ ಹೊರಗೆ ಕಾಣಿಸಿಕೊಂಡರೆ ಅದಕ್ಕೆ ಆಗಂತುಕವೆಂದೂ ಹೊಸದಾಗಿ ಹುಟ್ಟಿತೆಂದೂ ಅನ್ನಲಿಕ್ಕೆ ಬರುವುದಿಲ್ಲ. ಅದರಂತೆ ಶಿವನಲ್ಲಿ ತಾದಾತ್ಮ್ಯದಿಂದ ಅಜಡರೂಪದಿಂದ ಸೂಕ್ಷ್ಮವಾಗಿದ್ದ ಮಾಯೆಯು ಸ್ವತಂತ್ರವಾದ ಶಿವನಿಂದ ಹೊರ ಹೊರಟು ಅವನಿಂದ ಭಿನ್ನವಾಗಿ ಜಡವಾಗಿ ಕಾಣಿಸಿಕೊಂಡರೆ ಅದಕ್ಕೆ ಮೊದಲಿಲ್ಲದ್ದು ಹೊಸದಾಗಿ ಹುಟ್ಟಆಗಂತುಕವಾಗಿರುವುದೆಂದು ಹೇಳಲು ಬರುವುದಿಲ್ಲ. ಈ ಭೇದಬುದ್ಧಿಯೆಂಬ ಮಾಯೆಯೇ ಮೊದಲಿನ ಬಂಧವು. ಇದರಿಂದ ಹುಟ್ಟಿದ ಸೂಕ್ಷ್ಮಶರೀರವೇ ಎರಡನೇ ಬಂಧವು. ಇದರಿಂದ ಹುಟ್ಟಿದ ಸ್ಥೂಲಶರೀರವೇ ಮೂರನೇ ಬಂಧವು. ಈ ಕಾರಣ, ಸೂಕ್ಷ್ಮ, ಸ್ಥೂಲ ಶರೀರಗಳಿಗೇ ಆಣವಾದಿ ಮಲತ್ರಯವೆಂದು ಶಾಸ್ತ್ರದಲ್ಲಿ ವ್ಯವಹಾರವುಂಟು. ಇಂತಹ ಬಂಧಕ್ಕೆ ಮಿಥ್ಯಾತ್ವವನ್ನು ಹೇಳುವುದು ಅಯುಕ್ತವೂ ಅಪ್ರಯೋಜಕವೂ ಆಗಿರುವುದೆಂಬುದೇ ಭಾಷ್ಯಕಾರರ ಭಾವವು.

ಶಂಕೆ :—ಮರುಮರೀಚಿಕೆಯಲ್ಲಿ ತೋರುವ ಅಸತ್ಯತೋಯ (ಜಲ) ಜ್ಞಾನವು ಸತ್ಯವಾದ ಮರೀಚಿಕಾ (ಬಿಸಿಲುಕುದುರೆ) ಜ್ಞಾನದಿಂದ ನಿವೃತ್ತಿಯಾಗುವುದಲ್ಲದೆ

CC-0. Jangamwadi Math Collection. Digitized by eGangotri

ಸತ್ಯಜ್ಞಾನವು ನಿವೃತ್ತಿಯಾಗುವುದಿಲ್ಲ. ಇದರಂತೆ ಭೇದಬುದ್ಧಿ ರೂಪವಾದ ಬಂಧವು ಅಸತ್ಯವಾದರೇನೇ ಅದರ ನಿವೃತ್ತಿಯು ಸತ್ಯಬ್ರಹ್ಮಾತ್ಮೈಕ್ಯಜ್ಞಾನದಿಂದ ಆಗ ಬಹುದು. ಇಲ್ಲವಾದರೆ ಆಗಲಾರದು. ಇದರಂತೆ ಶುಕ್ತಿರಜತ ಸ್ಥಲದಲ್ಲಿಯೂ ರಜ್ಜು ಸರ್ಪಸ್ಥಲದಲ್ಲಿಯೂ ತಿಳಿಯಬೇಕು. ಒಟ್ಟಿನಮೇಲೆ ಸತ್ಯಜ್ಞಾನದಿಂದ ನಿವರ್ತ್ಯವಾ ದುದಾವುದೊ ಅದು ಮಿಥ್ಯೆಯಾಗಿರಬೇಕು. ಅಂದಮೇಲೆ ಜ್ಞಾನನಿವರ್ತ್ಯವಾದ ಬಂಧಕ್ಕೆ (ಆಣವಾದಿ ಮಲತ್ರಯಕ್ಕೆ) ಸತ್ಯತ್ವವನ್ನು ಹೇಳುವುದು ಲೋಕಾನುಭವವಿರೋಧ ವಲ್ಲವೆ.

ಸಮಾಧಾನ :—ಸತ್ಯಜ್ಞಾನ ನಿವರ್ತ್ಯವಾದುದೆಲ್ಲವೂ ಅಸತ್ಯವೆಂದು ಹೇಳಲು ಬರುವುದಿಲ್ಲ. ಹೇಗೆಂದರೆ ಪ್ರಥಮ ಕ್ಷಣೋತ್ಪನ್ನವಾದ ಘಟಜ್ಞಾನವು ದ್ವಿತೀಯ ಕ್ಷಣೋತ್ಪನ್ನವಾದ ಘಟಜ್ಞಾನದಿಂದ ನಿವರ್ತ್ಯವಾಗಿದ್ದರೂ ಆ ಘಟವಾಗಲಿ ಆ ಘಟ ಜ್ಞಾನವಾಗಲಿ ಮಿಥ್ಯೆಯಾಗಿಲ್ಲ. ಹಾಗೂ ಸ್ಮೃತಿರೂಪವಾದ ಜ್ಞಾನದಿಂದ ಸಂಸ್ಕಾ ರವು ನಿವರ್ತ್ಯವಾಗಿದ್ದರೂ ಅದು ಮಿಥ್ಯೆಯಾಗಿಲ್ಲ. ಮತ್ತು ಶಿವಸ್ಮರಣದಿಂದ ಪಾಪವೂ ಪ್ರಿಯಸ್ಮರಣದಿಂದ ದುಃಖವೂ, ಇನ್ನು ಶಾಸ್ತ್ರದಲ್ಲಿ ಮುಂದಿನ ಅಧಿಕರಣದಿಂದ ಹಿಂದಿನ ಅಧಿಕರಣವೂ, ಪೂರ್ವಪಕ್ಷ ನಿರ್ಣಯದಿಂದ ಸಂಶಯವೂ, ಸಿದ್ಧಾಂತದಿಂದ ಪೂರ್ವಪಕ್ಷವೂ ನಿವರ್ತ್ಯಗಳಾಗಿದ್ದರೂ ಅವು ಮಿಥ್ಯೆಗಳೆಂದು ಯಾರೂ ಅನ್ನುವುದಿಲ್ಲ. ಅಂದಮೇಲೆ ಸತ್ಯಜ್ಞಾನದಿಂದ ಅಸತ್ಯಜ್ಞಾನಕ್ಕೆ ಮಾತ್ರ ನಿವೃತ್ತಿಯೆಂಬ ನಿಯಮ ವನ್ನು ಮಾಡಲು ಬರುವುದಿಲ್ಲವಷ್ಟೆ. ಆದುದರಿಂದ ಬಂಧವು ಮಿಥ್ಯೆಯಾಗಿರದೆ ಸತ್ಯ ವಾಗಿದ್ದರೂ ಅದರ ನಿವೃತ್ತಿಯು ಸತ್ಯಶಿವಾದ್ವೈತಜ್ಞಾನದಿಂದಾಗುವಲ್ಲಿ ಬಾಧಕ ವಾವುದೂ ಇರುವುದಿಲ್ಲ. ಆದ್ದರಿಂದಲೇ ಶ್ರೀ ರೇಣುಕ ಭಗವತ್ಪಾದರೂ ಕೂಡ "ಪತ್ರ ಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ । ತಥಾ ಭೂಮ್ಯಾದಿ ರೂಪೇಣ ಶಿವ ಏಕೋ ವಿರಾಜತೇ" ಎಂದು ಶಿವಜಗನ್ಮಯಸ್ಥಲದಲ್ಲಿ ಉಪದೇಶಿಸಿರುವರು.

ಆದುದರಿಂದ ಭೂಮ್ಯಾದಿ ಸರ್ವಜಗತ್ತಿಗೂ ಪರಶಿವಬ್ರಹ್ಮವೇ ಅಭಿನ್ನ ನಿಮಿತ್ತೋ ಪಾದಾನ ಕಾರಣವಾಗಿರುವುದಲ್ಲದೆ ಮತ್ತಾವ ದೇವತೆಯೂ ಕಾರಣವಾಗಿಲ್ಲ.

ಶಂಕೆ:—"ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ" (ಮಹಾ. ನಾ. ಅನು. ೧೦) ಇತ್ಯಾದಿ ಶ್ರುತಿಯಲ್ಲಿ ಪ್ರಧಾನವೇ (ಪ್ರಕೃತಿ) ಜಗತ್ಕಾರಣವೆಂದು ಕಂಡುಬರುವು ದರಿಂದಲೂ ಪರಶಿವಬ್ರಹ್ಮವೇ ಜಗತ್ಕಾರಣವೆಂದು ಹೇಳಿರುವುದರಿಂದಲೂ ಜಗತ್ಕಾರಣ ತ್ವವನ್ನು ಬ್ರಹ್ಮಕ್ಕೆ ಹೇಳಿದರೆ ಆಗ ಅದಕ್ಕೆ ವಿಕಾರಿತ್ವಾದಿ ದೋಷಪ್ರಸಂಗವು ಬರುವು ದರಿಂದಲೂ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಸೂತ್ರಕ್ಕೆ "ಅಥ ಅತಃ ಅಬ್ರಹ್ಮ ಜಿಜ್ಞಾಸಾ" ಎಂದು ಪದವಿಭಾಗ ಮಾಡಿದರೆ ಅಬ್ರಹ್ಮ ಪದಕ್ಕೆ ಪ್ರಧಾನವೆಂದು ಅರ್ಥ

CC-0. Jangamwadi Math Collection. Digitized by eGangotri

ವಾಗುವುದಾದುದರಿಂದಲೂ ಜಿಜ್ಞಾಸ್ಯವಾದ ಪ್ರಧಾನಕ್ಕೆ ಜಗತ್ಕಾರಣತ್ವವನ್ನು ಹೇಳಬಹುದಲ್ಲವೆ ?

ಸಮಾಧಾನ :—ಹಾಗೆ ಹೇಳಲಾಗುವುದಿಲ್ಲ. ಏಕೆಂದರೆ ಅಂಥ ಪ್ರಧಾನ ಜಿಜ್ಞಾಸಾ (ವಿಚಾರ) ವಿಧಾಯಕ ಶ್ರುತಿಗಳೇ ಇರುವುದಿಲ್ಲ. ಹಾಗೂ "ನೋಪಾಸ್ಯೌ ಪ್ರಕೃತಿಜೀವೌ" ಎಂಬ ಶ್ರುತಿಯಲ್ಲಂತೂ ಪ್ರಧಾನ–ಜೀವರುಗಳನ್ನು ಉಪಾಸಿಸ ಕೂಡದು. ಎಂಬ ಬಲವಾದ ಶಾಸನವೂ ಇದೆ. ಆದ್ದರಿಂದ ಪ್ರಧಾನವು ಜಗತ್ಕಾರಣವಲ್ಲ. ಏಕೆಂದರೆ ಆ ಮಾಯೆಯು ನಿರಂಶವೂ ನಿರ್ಗುಣವೂ ಆದ ಬ್ರಹ್ಮದಲ್ಲಿರಲಾರದು. ಅಂದಮೇಲೆ ಅದು ಅಧಿಷ್ಠಾನರಹಿತವಾಗಿದ್ದು ಜಗತ್ತನ್ನು ಮಾಡಲಾರದು. ಅದು ಸ್ವತಂತ್ರವಾಗಿದ್ದು ಮಾಡುವುದೆಂದರೆ ಅದ್ವೈತಕ್ಕೆ ಹಾನಿಯು ತಟ್ಟುವುದು. ಆದ್ದರಿಂದ ಅದರ ಅಸ್ತಿತ್ವವೇ ಇಲ್ಲವೆಂದಮೇಲೆ ಅದಕ್ಕೆ ಜಗತ್ಕಾರಣವಂತೂ ದೂರವೇ ಉಳಿಯಿತು ! ಈ ಅಭಿಪ್ರಾಯದಿಂದಲೇ ಭಾಷ್ಯಕಾರರು "ನಿರಧಿಷ್ಠಾನಶಕ್ತೇರಭಾವಾಚ್ಚ" ಎಂದು ಹೇಳುವರು.

ಶಂಕೆ :—ಹಾಗಾದರೆ ಪ್ರಧಾನಕ್ಕೆ ಜಗತ್ಕಾರಣವನ್ನು ಹೇಳುವ "ಅಜಾಮೇಕಾಂ" ಎಂಬ ಶ್ರುತಿಯ ಗತಿಯೇನು ?

ಸಮಾಧಾನ :—"ಶಸ್ತ್ರಂ ಛಿನತ್ತಿ" "ಶ್ರೋತ್ರಂ ಶೃಣೋತಿ"-ಎಂಬ ವಾಕ್ಯಗಳು ಶ್ರೋತ್ರ ಮತ್ತು ಶಸ್ತ್ರಗಳಿಗೆ ಭಿನ್ನವಾದ ಪುರುಷ ಕರ್ತೃಕಗಳಾಗಿರುವಂತೆ. ಪ್ರಧಾನಕ್ಕೆ ಜಗತ್ಕಾರಣತ್ವವನ್ನು ಆ ವಾಕ್ಯವಾದರೂ ಪ್ರಧಾನಭಿನ್ನ ಪರಮಪುರುಷ (ಶಿವ) ಕರ್ತೃಕವಾಗಿರುವುದೆಂಬ ಅರ್ಥವನ್ನು ಸೂಚಿಸುತ್ತದೆ. ಇಲ್ಲವಾದರೆ ಜಡವಸ್ತುವಿಗೆ ಜಗತ್ಕಾರಣವನ್ನು ಹೇಳುವ ಪ್ರಸಂಗ ಬರುವುದು. ಜಡಕ್ಕಂತೂ ಜಗತ್ಕಾರಣತ್ವವೇ ಸಂಭವಿಸುವುದಿಲ್ಲ. ಚೇತನ ಪುರುಷನಿಲ್ಲದೆ ಲೋಕದಲ್ಲಿ ಯಾವ ಪದಾರ್ಥವೂ ಹುಟ್ಟುವುದಿಲ್ಲ. ಕೇವಲ ಜಡವಾದ ಮಣ್ಣಿನಿಂದಲೇ ಘಟವು ಹುಟ್ಟುವುದಿಲ್ಲ. ಅದಕ್ಕೆ ಚೇತನ ಕುಲಾಲನು ಬೇಕೇಬೇಕು. ಆದ್ದರಿಂದ ಪ್ರಧಾನವಾದರೂ ಸ್ವತಂತ್ರವಾಗಿ ಜಗತ್ತನ್ನು ರಚಿಸಲಾರದು. ಅದಕ್ಕೊಬ್ಬ ಸ್ವತಂತ್ರ ಪುರುಷನು ಬೇಕು. "ಮಾಯಾಂ ತು ಪ್ರಕೃತಿಂ ವಿಂದ್ಯಾತ್ ಮಾಯಿನಂತು ಮಹೇಶ್ವರಂ" (ಶ್ವೇ. ೪–೧೦) ಇತ್ಯಾದಿ ಶ್ರುತಿಯಲ್ಲಿ ಮಾಯೆಯು ಶಿವಾಧೀನವಾಗಿರುವುದೆಂಬ ವಿಷಯವು ವ್ಯಕ್ತವಾಗಿರುವುದು. ಅಂದಮೇಲೆ ಜಡಮಾಯಾ (ಪ್ರಧಾನ) ಶಬ್ದದಿಂದ ಹೇಳಿಸಿಕೊಳ್ಳುವ ಪ್ರಕೃತಿಗೆ ಜಗತ್ಕಾರಣತ್ವವನ್ನು ಹೇಳುವ ಸಾಂಖ್ಯಮತವೂ ಕೂಡ ಅಸಂಗತವೇ ಸರಿ. ಹಾಗಾದರೆ ಈ ಶ್ರುತಿಯಲ್ಲಿ ಮಾಯೆಯು ಪ್ರಕೃತಿ(ಮೂಲಕಾರಣ)ಯೆಂದು ಶ್ರುತಿಯು ಏಕೆ ಹೇಳುವುದು ? ಅಂದರೆ ಈ ಶ್ರುತಿಯು ಜಡಮಾಯಾಪರವಾದುದಲ್ಲ. ಕಿಂತು ಅಜಡ ಊರ್ಧ್ವ ಮಾಯಾಪರವಾದುದಾಗಿದೆ. "ಮಂ ಶಿವಂ ಅಯತಿ ಗಚ್ಛತಿ ಅವಿನಾಭಾವ

CC-0. Jangamwadi Math Collection. Digitized by eGangotri

ಸಂಬಂಧೇನ ವರ್ತತೇ ಇತಿ ಮಾಯಾ" ಎಂದು ಮುಂದೆ ಭಾಷ್ಯಕಾರರೇ ಮಾಯಾ ಶಬ್ದ ವ್ಯುತ್ಪತ್ತಿಯನ್ನು ತೋರಿಸಿರುವರು. ಆದ್ದರಿಂದ ಮಾಯಾಶಬ್ದಕ್ಕೆ ಸಾಂಖ್ಯರು ಹೇಳುವ ಜಡ ಪ್ರಕೃತಿಯೆಂದಾಗಲಿ ಅದ್ವೈತಿಗಳು ಹೇಳುವ ಮಿಥ್ಯಾ ಮಾಯೆ ಯೆಂದಾಗಲಿ ಅರ್ಥವಲ್ಲ. ಕಿಂತು ಚಿಚ್ಛಕ್ತಿ (ವಿಮರ್ಶಶಕ್ತಿ) ಯೆಂದರ್ಥವು.

ಜನ್ಮಾದ್ಯಧಿಕರಣ

"ಲಕ್ಷಣ ಪ್ರಮಾಣಾಧೀನಾ ಹಿ ವಸ್ತು ಸಿದ್ಧಿಃ" ಎಂಬ ನ್ಯಾಯಾನುಸಾರವಾಗಿ ಯಾವುದೊಂದು ವಸ್ತು ಸಿದ್ಧಿಯಾಗಬೇಕಾದರೆ ಅದರ ಲಕ್ಷಣವೂ ಮತ್ತು ಅದರಲ್ಲಿ ಪ್ರಮಾಣವೂ ಬೇಕಾಗುವುವು. ಲಕ್ಷಣ ಪ್ರಮಾಣಗಳಿಲ್ಲದೆ ವಸ್ತುಸಿದ್ಧಿಯೇ ಆಗುವು ದಿಲ್ಲ. ಪ್ರಥಮ ಸೂತ್ರದಲ್ಲಿಯಂತು ಪ್ರಧಾನವಾಗಿ ಬ್ರಹ್ಮವೇ ಜಿಜ್ಞಾಸ್ಯವೆಂದು ತೋರಿಸಲ್ಪಟ್ಟಿತೇ ಹೊರತು ಅದರ ಲಕ್ಷಣವು ತೋರಿಸಲ್ಪಡಲಿಲ್ಲ. ಆದುದರಿಂದ ಬ್ರಹ್ಮವು ಸವಿಶೇಷವೋ ಅಥವಾ ನಿರ್ವಿಶೇಷವೋ ಎಂಬ ಸಂಶಯ ನಿರಾಕಾರಣಕ್ಕಾಗಿ ಯೂ ಹಾಗೂ ಬ್ರಹ್ಮ ಸವಿಶೇಷವಲ್ಲ ಕಿಂತು ನಿರ್ವಿಶೇಷವೆಂಬ ವಿಪರ್ಯಯ (ಭ್ರಾಂತಿ) ನಿರಾಕರಣಕ್ಕಾಗಿಯೂ ಆ ಪ್ರಥಮ ಸೂತ್ರದಲ್ಲಿ ಉದ್ದಿಷ್ಟವಾದ ಜಿಜ್ಞಾಸ್ಯ ಬ್ರಹ್ಮಕ್ಕೆ ಲಕ್ಷಣವನ್ನು ಹೇಳುತ್ತಾರೆ.

ಜನ್ಮಾದ್ಯಸ್ಯ ಯತಃ (೧-೧-೨)

ಈ ಚರಾಚರ ಪ್ರಪಂಚಕ್ಕೆ ಯಾವ ವಸ್ತುವಿನಿಂದ ಉತ್ಪತ್ತಿ, ಸ್ಥಿತಿ, ಲಯ ತಿರೋಧಾನ ಅನುಗ್ರಹಗಳೆಂಬ ಪಂಚಕೃತ್ಯಗಳು ಉಂಟಾಗುವವೋ ಆ ವಸ್ತುವೆ ಬ್ರಹ್ಮವೆಂದು ಸೂತ್ರಾರ್ಥವು. ಈ ಅರ್ಥವುಳ್ಳ ಸೂತ್ರಕ್ಕೆ "ಯತೋ ವಾ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ, ತದ್ವಿಜಿಜ್ಞಾಸಸ್ವ, ತದ್ಬ್ರಹ್ಮ" (ತೈ. ಭೃ. ೧) ಎಂಬ ಶ್ರುತಿಯು ವಿಷಯ. ಈ ಶ್ರುತಿಯಲ್ಲಿಯೂ ಸೃಷ್ಟ್ಯಾದಿ ಪಂಚಕೃತ್ಯಗಳು ಹೇಳಲ್ಪಡುತ್ತವೆ. "ಜಾಯಂತೆ" ಎಂಬುದರಿಂದ ಸೃಷ್ಟಿಯೂ "ಜೀವಂತಿ" ಎಂಬುದರಿಂದ ಸ್ಥಿತಿಯೂ "ಪ್ರಯಂತಿ" (ಮ್ರಿಯಮಾಣಾನಿ ಸಂತಿ) ವಿಲಯವನ್ನು ಹೊಂದುವವುಗಳಾಗಿ ಎಂಬುದರಿಂದ ಲಯವೂ "ಅಭಿಸಂವಿಶಂತಿ" ಎಂಬುದರಿಂದ ತಿರೋಧಾನ (ಬಂಧ), ಅನುಗ್ರಹ (ಮೋಕ್ಷ) ಗಳೂ ಸೂಚಿಸಲ್ಪಡುವವು. ಇಲ್ಲಿ ಪೂರ್ವಾಧಿಕರಣದಲ್ಲಿ ಬ್ರಹ್ಮವು ಸಂಶಯಾಸ್ಪದವಾಗಿರುವುದರಿಂದ ವಿಚಾರಾರ್ಹವಾಗಿರುವುದು ಎಂದು ಹೇಳಬೇಕಾದರೆ ಬ್ರಹ್ಮವು ಲಕ್ಷಣದಿಂದ ಮೊದಲು ಸಿದ್ಧವಾಗಿರಬೇಕು. ಅಂದರೆ ಅದರ ವಿಚಾರವು ಸಂಭವಿಸುವುದು. ಬ್ರಹ್ಮವೇ ಸಿದ್ಧವಾಗದಿರುವಾಗ ಅದರ ವಿಚಾರವೆಲ್ಲಿಯದು ಎಂಬ ಆಕ್ಷೇಪ ಸಂಗತಿಯೂ, ಹೇಗೆ ಸಂದಿಗ್ಧ ಬ್ರಹ್ಮವು ವಿಚಾರ್ಯವೋ ಹಾಗೆ ಜನ್ಮಾದಿಗಳು

CC-0. Jangamwadi Math Collection. Digitized by eGangotri

ಜಗನ್ನಿಷ್ಠಗಳಾಗಿರುವುದರಿಂದ ಬ್ರಹ್ಮಕ್ಕೆ ಲಕ್ಷಣವೇ ಅಲ್ಲವೆನ್ನುವ ದೃಷ್ಟಾಂತಸಂಗತಿಯೂ, ಬ್ರಹ್ಮಕ್ಕೆ ಆ ಜನ್ಮಾದಿ ಜನಕತ್ವವು ತಟಸ್ಥ ಲಕ್ಷಣವಾಗಿರುವುದರಿಂದ ಲಕ್ಷಣವೇ ಸಂಭವಿಸುವುದಿಲ್ಲವೆಂದು ಹೇಳಲಾಗುವುದಿಲ್ಲವೆನ್ನುವ ಪ್ರತ್ಯುದಾಹರಣ ಸಂಗತಿಯೂ ಹೇಳಲ್ಪಡುತ್ತದೆ.

"ಜನ್ಮ ಆದಿರಸ್ಯ ಸ್ಥಿತ್ಯಾದಿ ಚತುಷ್ಟಯಸ್ಯ" (ಸ್ಥಿತ್ಯಾದಿ ಯಾವ ನಾಲ್ಕು ಕೃತ್ಯಗಳ ಸಮೂಹಕ್ಕೆ ಜನ್ಮವು ಆದಿಯಾಗಿದೆಯೋ ಸಮೂಹವು ಜನ್ಮವು ಆದಿಯಾಗಿವುಳ್ಳದಾಗಿದೆ) ಎಂದು ತದ್ಗುಣಸಂವಿಜ್ಞಾನ ಬಹುವ್ರೀಹಿ ಸಮಾಸವನ್ನೇ ಮಾಡಬೇಕು. "ಜನ್ಮ ಆದಿರ್ಯೇಷಾಂತೇ ಜನ್ಮಾದಯಃ" ಎಂದು ಸಮಾಸವನ್ನು ಮಾಡಿದರೆ "ಜನ್ಮಾದಯೋಽಸ್ಯ ಯತಃ" ಎಂದು ಸೂತ್ರರಚನಾಪತ್ತಿಯುಂಟಾಗಿ ಗೌರವ ದೋಷವುಂಟಾಗುವುದು. ಲಿಂಗವಿಶೇಷ ಲಿಂಗಸಾಮಾನ್ಯ ವಿವಕ್ಷೆಯಲ್ಲಿಯಾದರೂ "ಜನ್ಮಾದೀನಿ ಅಸ್ಯಯತಃ" ಎಂದು ಸೂತ್ರ ನಿರ್ದೇಶವಿರಬೇಕು. ಈ ನಿರ್ದೇಶದಲ್ಲಿಯೂ ವರ್ಣಾಂತರಾಧಿಕ್ಯ ಗೌರವದೋಷವೇ ಬರುವುದು. ಆದ್ದರಿಂದ ಸೂತ್ರಕಾರರು ನಪುಂಸಕೈಕವಚನ ನಿರ್ದೇಶವನ್ನು ಮಾಡಿದರು.

ಈ ಸೂತ್ರದಲ್ಲಿ "ಬ್ರಹ್ಮ" ಎಂಬ ಪದವು ಹಿಂದಿನ ಸೂತ್ರದಿಂದ ಅನುವರ್ತಿಸುವುದು. ತತ್‌ಎಂಬ ಶಬ್ದಕ್ಕೆ ಅಧ್ಯಾಹಾರವನ್ನು ಮಾಡಿಕೊಳ್ಳಬೇಕು. "ಜನ್ಮಾದಿ ಅಸ್ಯ ಯತಃ" ಎಂದು ಪದ ವಿಭಾಗ. ಜನ್ಮಾದಿಯೆಂದರೆ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹಗಳೆಂಬ ಪಂಚಕೃತ್ಯಗಳ ಸಮುದಾಯವೆಂದರ್ಥ. "ಅಸ್ಯ" ಎಂಬ ಪದಕ್ಕೆ ಈ ಚೇತನಾಚೇತನ ಪ್ರಪಂಚಕ್ಕೆ ಎಂದರ್ಥ. "ಯತಃ" ಯಾವ ಸ್ವಾಭಾವಿಕಾನಂತ ಶಕ್ತಿವಿಶಿಷ್ಟಬ್ರಹ್ಮದ ದೆಶೆಯಿಂದ ಉಂಟಾಗುವುದೊ ಅದು ಬ್ರಹ್ಮವೆಂದು ತಿಳಿಯಬೇಕು. ಅರ್ಥಾತ್ ಯಾವ ಸಹಜಸಿದ್ಧವಾದ ಅನಂತ ಶಕ್ತಿ ವಿಶಿಷ್ಟ ಬ್ರಹ್ಮದಿಂದ ಈ ಪರಿದೃಶ್ಯಮಾನವಾದ ಚೇತನಾಚೇತನಪ್ರಪಂಚಕ್ಕೆ ಸೃಷ್ಟ್ಯಾದಿ ಪಂಚಕೃತ್ಯಗಳು ಸಂಭವಿಸುವುವೋ ಅದೇ ಬ್ರಹ್ಮವೆಂದು ಸೃಷ್ಟ್ಯಾದಿ ಪಂಚಕೃತ್ಯಕಾರಣತ್ವವು ಬ್ರಹ್ಮಲಕ್ಷಣವೆಂದು ಸ್ಪಷ್ಟವಾಯಿತು. "ಅಸ್ಯ" ಎಂಬ ಪದದಿಂದ ಪ್ರಪಂಚವು ಕಾರ್ಯವೆಂದೂ "ಯತಃ" ಎಂಬ ಪದದಿಂದ ಬ್ರಹ್ಮಕ್ಕೆ ಜಗಜ್ಜನ್ಮಾದಿ ಪಂಚಕೃತ್ಯ ಕಾರಣತ್ವವೂ ಸೂಚಿಸಲ್ಪಟ್ಟಿತು. ಈ ಪಂಚಕೃತ್ಯಗಳು ಪರಶಿವಬ್ರಹ್ಮಕ್ಕೆ ಶ್ರುತಿಸಿದ್ಧಗಳಾಗಿರುವುದರಿಂದ ಜೀವರಿಗೆ ಆ ಬ್ರಹ್ಮೋಪಾಸಕತ್ವವು ವಿಧಿಸಲ್ಪಡುತ್ತದೆ. ಕಾರಣರೂಪವಾದ ಬ್ರಹ್ಮವು ಸ್ವತಂತ್ರವಾಗಿರುವುದರಿಂದ ಕಾರ್ಯವನ್ನು ಮಾಡುವುದಕ್ಕೂ ಮಾಡದಿರುವುದಕ್ಕೂ ಬೇರೆ ರೀತಿಯಾಗಿ ಮಾಡುವುದಕ್ಕೂ ಶಕ್ಯವೇ ಆಗಿರುವುದು. "ಅತ್ರ ಯತೋವಾ" ಎಂಬ ಶ್ರುತಿಯಲ್ಲಿ "ಅಭಿಸಂವಿಶಂತಿ" ಎಂಬುದರಿಂದ ತಿರೋಧಾನ ಅನುಗ್ರಹ ಕೃತ್ಯಗಳು ಸೂಚಿಸಲ್ಪಟ್ಟಿರುವುವು. ಈ ಮೇಲೆ ಹೇಳಿದ ಲಕ್ಷಣವು ಉದ್ದಿಷ್ಟವಾದ

CC-0. Jangamwadi Math Collection. Digitized by eGangotri

ಬ್ರಹ್ಮಜ್ಞಾನಕ್ಕಾಗಿಯಲ್ಲವೆ? ಮೊದಲೇ ಬ್ರಹ್ಮಜ್ಞಾನವಿದ್ದರೆ ಅದಕ್ಕೆ ಲಕ್ಷಣವು ಬೇಕಿಲ್ಲ. ಬ್ರಹ್ಮಜ್ಞಾನವೆಳ್ಳಷ್ಟೂ ಇಲ್ಲದಿದ್ದರೆ ಬ್ರಹ್ಮವನ್ನು ತಿಳಿಯಲು ಪ್ರವೃತ್ತಿಯೇ ಹುಟ್ಟುವುದಿಲ್ಲ. ಎಂದಮೇಲೆ ಲಕ್ಷಣಲಕ್ಷ್ಯ ವಿಚಾರದಲ್ಲಿ ಪ್ರವೃತ್ತಿಯು ಹೇಗೆ ಸಂಭವಿಸುವುದು? ಎಂದು ಆಶಂಕಿಸಲು ಅವಕಾಶವಿಲ್ಲ. ಶಾಂಭವದೀಕ್ಷಾ ಸಂಪನ್ನನಾದ ಶಿಷ್ಯನಿಗೆ ಗುರೂಪದಿಷ್ಟವಾದ ಆಪಾತ (ಸಾಮಾನ್ಯ) ಜ್ಞಾನವಿರುವುದು. ಈ ಜ್ಞಾನದ ದೃಢನಿಶ್ಚಯಕ್ಕಾಗಿ ಲಕ್ಷ್ಯಲಕ್ಷಣಪ್ರವೃತ್ತಿಯುಂಟಾಗುವುದರಿಂದ ವಿರೋಧವಿಲ್ಲ.

ಆ ಬ್ರಹ್ಮಕ್ಕೆ ಜಗದ್ವಿಲಕ್ಷಣತನದಿಂದ ಕಾರಣತ್ವವೋ? ಜಗದಂತರ್ಯಾಮಿತ್ವದಿಂದ ಕಾರಣತ್ವವೋ? ಸಾಕಾರಕ್ಕೋ ಅಥವಾ ನಿರಾಕಾರಕ್ಕೋ? ಕಾರಣತ್ವವನ್ನು ಹೇಳುವಿರೊ?

ಸರ್ವಾಧಿಷ್ಠಾನವಾದ ಬ್ರಹ್ಮಕ್ಕೆ ಅಥವಾ ಅಲ್ಲಿ ಆರೋಪಿತವಾದ ಸತ್ವಗುಣ ಪ್ರಧಾನವಾದ ಮಾಯಾಪ್ರತಿಬಿಂಬಿತ ಈಶ್ವರನಿಗೆ ಜಗತ್ಕಾರಣತ್ವವನ್ನು ಹೇಳುವುದಾದರೆ ಸರ್ವಾಧಿಷ್ಠಾನವಾದ ಬ್ರಹ್ಮವು ಗುಣರಹಿತವೂ ನಿತ್ಯವೂ ಆಗಿರುವುದರಿಂದ ಅದರಲ್ಲಿ ಕಾರಣತ್ವವು ಸಂಭವಿಸುವುದಿಲ್ಲ. ಇನ್ನು ಅವಯವಸಹಿತವಾದ ಮಿಥ್ಯಾಭೂತವಾದ ಕಲ್ಪಿತೇಶ್ವರನಲ್ಲಿಯಂತೂ ಸಂಭವಿಸುವುದೇ ಇಲ್ಲ. ದರ್ಪಣ ಪ್ರತಿಬಿಂಬಿತವಾದ ಮುಖದಲ್ಲಿ ಯಾವ ಕಾರಣತ್ವವೂ ಸಂಭವಿಸುವುದಿಲ್ಲವಷ್ಟೆ! ಇದಲ್ಲದೆ "ಜ್ಞಾಜ್ಞೌ ದ್ವಾವಜಾವೀಶಾನೀಶೌ" (ಶ್ವೇ. ೧-೯) "ನಕದಾಚಿದನೀದೃಶಂ ಜಗತ್" ಇತ್ಯಾದಿ ಶ್ರುತಿಗಳಿಂದ ಜಗತ್ತು ಹಾಗೂ ಜೀವ ಇವುಗಳು ಉತ್ಪತ್ತಿರಹಿತಗಳೆಂದೂ ನಿತ್ಯಗಳೆಂದೂ ತಿಳಿದುಬರುವುದರಿಂದ ಪರಮೇಶ್ವರನಿಗೆ ಜಗತ್ಕಾರಣತ್ವವು ಸಂಭವಿಸುವುದಿಲ್ಲ. ಒಂದುಪಕ್ಷದಲ್ಲಿ ಬ್ರಹ್ಮವು ಜಗತ್ಕಾರಣವೆಂದು ಹೇಳುವುದಾದರೆ "ಉತ್ಪತ್ತ್ಯಸಂಭವಾತ್" ಎಂಬ ಸೂತ್ರದಲ್ಲಿ ಸೂತ್ರಕಾರರು ಶ್ರುತಿ-ಸ್ಮೃತಿವಿರುದ್ಧವಾಗಿರುವ ಜೀವೋತ್ಪತ್ತಿಯನ್ನು ಮಾನಿಸುವ ವೈಷ್ಣವಮತವನ್ನು ನಿರಾಕರಿಸಿರುವುದರಿಂದ ಅದು ಸಂಭವಿಸುವುದಿಲ್ಲ. ಇನ್ನು ಬ್ರಹ್ಮವು ಜಗತ್ತಿಗೆ ಕಾರಣವಲ್ಲವೆಂದು ಹೇಳುವುದಾದರೆ "ಯತೋ ವಾ" (ತೈ. ಭೃ. ೧) "ಅಸದ್ವಾ" (ತೈ. ಅನು. ೭) "ಸದೇವ ಸೌಮ್ಯೇದಮಗ್ರಆಸೀತ್" (ಛಾಂ. ೬. ೨. ೧) "ನ ಸನ್ನಚಾ ಸಚ್ಛಿವ ಏವ ಕೇವಲಃ" (ಶ್ವೇ. ೪-೧೮) ಎಂಬ ಶ್ರುತಿಗಳಿಗೆ ವಿರುದ್ಧವಾಗುವುದಲ್ಲದೆ ಅಸತ್ತಿಗೆ ಕಾರಣತ್ವ; ಸದ್ವಸ್ತುವಿಗೆ ಕಾರಣತ್ವ, ಇವೆರಡಕ್ಕೂ ಅತಿರಿಕ್ತವಾದ ಪರಶಿವನಿಗೆ ಕಾರಣತ್ವವು ಕಂಡುಬರುವುದರಿಂದ ಬಹುವಿಧ ವಿವಾದಗಳಿಗೆ ಆಸ್ಪದವಾಗುವುದು.

ಪೂರ್ವಪಕ್ಷ :—ಪರಮೇಶ್ವರನು ನಿರ್ಗುಣನಾಗಿರುವುದರಿಂದ ಅವನಿಗೆ ಜಗತ್ಕಾರಣತ್ವವು ಸಂಭವಿಸುವುದಿಲ್ಲ. ಅವನು ಜಗತ್ಕಾರಣನೆಂದು ಹೇಳುವುದಾದರೆ ಜಗತ್ತಿಗೆ ಭಿನ್ನನಾಗಿದ್ದು ಕಾರಣನಾಗುವನೋ ಅಥವಾ ಜಗದಂತರ್ಯಾಮಿಯಾಗಿ

CC-0. Jangamwadi Math Collection. Digitized by eGangotri

R6634.5x1,1:9 33K8

ಕಾರಣನಾಗುವನೋ ? ಜಗತ್ತಿಗೆ ಭಿನ್ನವಾಗಿದ್ದು ಕಾರಣನಾಗುವನೆಂದು ಹೇಳಿದರೆ ಅವನ ಸರ್ವವ್ಯಾಪಕತ್ವಕ್ಕೆ ಭಂಗವಾಗುವುದು. ಏಕೆಂದರೆ ಆ ಜಗದ್ವಿಲಕ್ಷಣನಾದ ಪರಮೇಶ್ವರನು ಕುಲಾಲ, ಕುವಿಂದಾ (ಕುಂಬಾರ, ಜಾಡ) ದಿಗಳು ನಿರಾಧಾರ ನಿರುಪಾಧಿಕರಾಗಿದ್ದು ಘಟ ಪಟಾದಿಗಳನ್ನು ಮಾಡದಿರುವಂತೆ ಉಪಾಧಿರಹಿತವಾದುದಾಗಿಯೂ ಆಧಾರರಹಿತವಾದುದಾಗಿಯೂ ಇರುವುದರಿಂದ ಯಾವ ಕಾರ್ಯವನ್ನೂ ಮಾಡಲಾರನಷ್ಟೆ! ಇನ್ನು ಜಗದಂತರ್ಯಾಮಿಯಾಗಿ ಜಗತ್ತನ್ನು ಮಾಡುವನೆಂದರೆ ಪರಮೇಶ್ವರನು ಪರಿಚ್ಛಿನ್ನನೆನಿಸಬೇಕಾಗುವುದಲ್ಲದೆ ಘಟಪಟಾದಿಗಳಂತೆ ಆಧೇಯನೆನಿಸಬೇಕಾಗುವುದು. ಇನ್ನು ಸಾವಯವನಾದ ಪರಮೇಶ್ವರನೇ ಕಾರಣನೆಂದರೆ ಸಾವಯವನಾದ ಪರಮೇಶ್ವರನು ನಿರವಯವವಾದ ಆಕಾಶಾದಿಗಳನ್ನುಂಟುಮಾಡಲಾರನಲ್ಲದೆ ಪೂರ್ವದಂತೆ ಪರಿಚ್ಛಿನ್ನನೆಂದೂ ಹೇಳಬೇಕಾಗುವುದು. ನಿರಾಕಾರ (ನಿರಯವ) ನಾದ ಪರಮೇಶ್ವರನೇ ಜಗತ್ಕಾರಣನೆಂದು ಹೇಳುವುದಾದರೆ ಇದೂ ಸಂಭವಿಸುವುದಿಲ್ಲ. ಏಕೆಂದರೆ ಅವಯವರಹಿತನಾಗಿ ಅವಯವ ಸಹಿತವಾದ ಪ್ರಪಂಚಕ್ಕೆ ಕಾರಣನಾಗಲಾರನಷ್ಟೆ! ನಿರಯುವ ಬ್ರಹ್ಮಕ್ಕೆ ಕಾರಣತ್ವವನ್ನು ಹೇಳುವುದಿಲ್ಲ. ಕಿಂತು ಸಾವಯವ ಬ್ರಹ್ಮಕ್ಕೇನೇ ಸಾವಯುವ ಪ್ರಪಂಚ ಕಾರಣತ್ವವನ್ನು ಹೇಳುವೆವೆಂದರೆ "ನಿಷ್ಕ್ರಿಯಂ ನಿಷ್ಕಲಂ ಶಾಂತಂ ನಿರವದ್ಯಂ ನಿರಂಜನಂ" (ಶ್ವೇ. ೬–೧೯) ಇತ್ಯಾದಿ ಶ್ರುತಿಗಳಿಗೂ ವಿರೋಧವಾಗುವುದು.

ಇದಲ್ಲದೆ ಸಚ್ಚಿದಾನಂದ ಪರಶಿವಜನ್ಯವೇ ಜಗತ್ತೆಂದು ಹೇಳಿದರೆ ಜಗತ್ತು ಕೂಡ ಸಚ್ಚಿದಾನಂದರೂಪವೇ ಆಗಬೇಕಾಗುವುದು. ಸಚ್ಚಿದಾನಂದರೂಪವೇ ಆಗಲಿ ಬಾಧಕವೇನು ? ಎಂದರೆ ಜಗತ್ತಿಗೆ ಜನ್ಮಾದಿಗಳೂ, ಅನಿತ್ಯತ್ವವೂ, ಜಡತ್ವವೂ, ದುಃಖಾತ್ಮಕತ್ವವೂ ಇಲ್ಲವೆಂದು ಹೇಳಬೇಕಾಗುವುದು. ಘಟ ಚೈತ್ರೋಪಲಕ್ಷಿತವಾದ ಈ ಜಗತ್ತು ಉತ್ಪತ್ತ್ಯಾದಿಗಳಿಲ್ಲದ್ದೆನ್ನುವುದು ಅನುಭವ ವಿರೋಧವಲ್ಲವೆ ?

ಇದೂ ಅಲ್ಲದೆ ಮಣ್ಣು ಮಡಕೆಗೆ ಕಾರಣವಾದಂತೆ ಜಗತ್ತಿಗೆ ಸಚ್ಚಿದಾನಂದ ಬ್ರಹ್ಮವು ಕಾರಣವೆಂದು ಹೇಳಿದರೆ ಮಣ್ಣು ವಿಕಾರಿಯೆನಿಸುವಂತೆ ಬ್ರಹ್ಮವೂ ಕೂಡ ವಿಕಾರಿಯಾಗಬೇಕಾಗುವುದು. ಮತ್ತು ಜಗತ್ತಿಗೆ ಬ್ರಹ್ಮವು ಕಾರಣವೆಂದು ಹೇಳುವುದಾದರೆ (೧) ನಿಮಿತ್ತಕಾರಣವೆಂದು ಹೇಳುವಿರೋ ? (೨) ಉಪಾದಾನ ಕಾರಣವೆಂದು ಹೇಳುವಿರೋ ? (೩) ನಿಮಿತ್ತೋಪಾದಾನೋಭಯಕಾರಣವೆಂದು ಹೇಳುವಿರೋ ? (೪) ಆ ಉಭಯಕಾರಣತ್ವವನ್ನು ಬ್ರಹ್ಮಕ್ಕೆ ಹೇಳುವಿರೋ ಅಥವಾ ಪ್ರಧಾನಕ್ಕೆ ಹೇಳುವಿರೋ ?

ಮೊದಲನೆಯದಲ್ಲ; ಏಕೆಂದರೆ ಕೇವಲ ನಿಮಿತ್ತಕಾರಣವೆಂದು ಹೇಳುವುದಾದರೆ ಸಂಗತವಾಗುವುದಿಲ್ಲ. ಏಕೆಂದರೆ ಘಟವೆಂಬ ಕಾರ್ಯಕ್ಕೆ ಕುಲಾಲ ಮತ್ತು ದಂಡಗಳು

CC-0. Jangamwadi Math Collection. Digitized by eGangotri

ನಿಮಿತ್ತಕಾರಣವಾಗಿರುವುವು. ಇವು ಕಾರ್ಯಕ್ಕಿಂತಲೂ ಅತ್ಯಂತ ಭಿನ್ನಗಳಾಗಿರುವುವು. ಇದರಂತೆ ಜಗದ್ರೂಪಕಾರ್ಯಕ್ಕೆ ಬ್ರಹ್ಮವು ನಿಮಿತ್ತಕಾರಣವಾದ ಪಕ್ಷದಲ್ಲಿ ಕಾರ್ಯಕ್ಕಿಂತಲೂ ಬ್ರಹ್ಮವು ಅತ್ಯಂತ ಭಿನ್ನವಾಗಲೇಬೇಕು. ಹೀಗೆ ಭೇದವನ್ನು ಒಪ್ಪುವುದಾದರೆ "ಸರ್ವಂ ಖಲ್ವಿದಂ ಬ್ರಹ್ಮ" (ಛಾಂ. ೩-೧೪-೧) "ಸರ್ವೋವೈ ರುದ್ರಃ" (ಮಹಾ. ನಾ. ಅ. ೧೬) ಇತ್ಯಾದ್ಯದ್ವೈತಪರ ಶ್ರುತಿ ಭಂಗವಾಗುವುದು.

ಎರಡನೆಯದೂ ಅಲ್ಲ :—ಏಕೆಂದರೆ ಬ್ರಹ್ಮವು ಜಗತ್ತಿಗೆ ಉಪಾದಾನಕಾರಣವೆನ್ನುವುದಾದರೆ ಘಟೋಪಾದನಕಾರಣವಾದ ಮಣ್ಣಿಗೆ ಮತ್ತೊಬ್ಬ ಅಧಿಷ್ಠಾತೃವೆನಿಸುವ ಕುಲಾಲನಿರುವಂತೆ ಜಗದುಪಾದಾನವಾದ ಬ್ರಹ್ಮಕ್ಕೂ ಮತ್ತೊಂದು ಅಧಿಷ್ಠಾತೃವಿರಬೇಕಾಗುವುದು. ಹೀಗೆ ಒಪ್ಪಿದರೆ "ಏಕ ಏವ ರುದ್ರೋ ನ ದ್ವಿತೀಯಾಯತಸ್ಥುಃ" (ಶ್ವೇ. ೩-೨) "ಏಕಮೇವಾದ್ವಿತೀಯಂ ಬ್ರಹ್ಮ" (ಛಾಂ. ೬-೨-೧) ಇತ್ಯಾದಿ ಶ್ರುತಿಸಿದ್ಧವಾದ ಅಧಿಷ್ಠಾತ್ರಂತರ ನಿರಾಸವು ಸಂಗತವಾಗಲಾರದು.

ಮೂರನೆಯದೂ ಅಲ್ಲ. ಉಭಯವಿಧ ಕಾರಣತ್ವವನ್ನು ಹೇಳುವೆವೆಂದರೆ ಯುಕ್ತವಲ್ಲ. ಏಕೆಂದರೆ ತಮಃ ಪ್ರಕಾಶಗಳಂತೆ ಪರಸ್ಪರ ವಿರುದ್ಧ ಧರ್ಮಗಳು ಕೂಡಿ ಒಂದರಲ್ಲಿರಲಾರವಷ್ಟೆ.

ನಾಲ್ಕನೆಯದೂ ಅಲ್ಲ. ಪ್ರಧಾನಕ್ಕೆ ಈ ಉಭಯವಿಧ ಕಾರಣತ್ವವನ್ನು ಹೇಳುವೆವೆಂದರೆ ಇದೂ ಯುಕ್ತವಲ್ಲ. ಏಕೆಂದರೆ ಪ್ರಧಾನವು ಅಚೇತನವೂ, ಅಸತ್ತೂ ಆಗಿರುವುದರಿಂದ ಕುಲಾಲಮೃತ್ತಿಕೆಗಳಂತೆ. ನಿಮಿತ್ತೋಪಾದಾನ ಕಾರಣವಾಗಲಾರದು. ಹಾಗೂ ನಿಮಿತ್ತೋಪಾದಾನತ್ವೋಭಯ ಧರ್ಮಗಳು ಪರಸ್ಪರ ವಿರುದ್ಧಗಳಾಗಿರುವುದರಿಂದ ಅವು ಪ್ರಧಾನದಲ್ಲಿರಲಾರವು.

ಇದಲ್ಲದೆ "ಆನಂದೋ ಬ್ರಹ್ಮೇತಿ ವ್ಯಜಾನಾತ್ । ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೆ" (ತೈ. ಭೃ. ೬) "ಸದೇವ ಸೌಮ್ಯೇದಮಗ್ರ ಆಸೀತ್" (ಛಾಂ. ೬-೨೧) "ನ ಸನ್ನಚಾ ಸಚ್ಛಿವ ಏವ ಕೇವಲಃ" (ಶ್ವೇ. ೪-೧೮) ಇತ್ಯಾದಿ ಶ್ರುತಿ ಸಿದ್ಧಾನಂದಾದಿಗಳು ಬ್ರಹ್ಮವೆಂದು ತಿಳಿಯುವುದರಿಂದ ಆನಂದ, ಸತ್ತು, ಅಸತ್ತು ಸದಸತ್ತುಗಳಿಗೆ ಅತಿರಿಕ್ತನಾದ ಶಿವನು ಇವುಗಳೆಲ್ಲವೂ ಬ್ರಹ್ಮವೋ ? ಅಥವಾ ಇವುಗಳಲ್ಲಿ ಯಾವುದಾದರೊಂದು ಬ್ರಹ್ಮವೊ ? ಎಂದು ಶಂಕೆ ಹುಟ್ಟುವುದು. ಯಾವುದಾದರೊಂದು ಬ್ರಹ್ಮವೆಂದು ಹೇಳಿದರೆ "ಕೃತಹಾನಾಕೃತಾಭ್ಯಾಗಮ"ವೆಂಬ ದೋಷವು ಬರುವುದು. ಹೇಗೆಂದರೆ ಮನುಷ್ಯರು ಆಚರಿಸುವ ಶುಭಾಶುಭ ಕರ್ಮಗಳಿಗೆ ತಕ್ಕ ಫಲವನ್ನು ಕೊಡತಕ್ಕ ಬ್ರಹ್ಮ (ಈಶ್ವರ) ವು ಯಾವುದು ? ಆನಂದವೊ ? ಸತ್ತೊ ? ಅಸತ್ತೊ ? ಶಿವನೋ ? ಈ ನಾಲ್ಕು ಬ್ರಹ್ಮಗಳು ಅನೇಕ ರಾಜರಂತೆ

JNANA SIMHASAN JNANAMANDIR
LIBRARY
Jangamwadi Math, VARANASI,
Acc. No. 1413

CC-0. Jangamwadi Math Collection. Digitized by eGangotri

ಅನೇಕ (ಭಿನ್ನ) ಅಭಿಪ್ರಾಯವುಳ್ಳವುಗಳಾಗಿರುವುದರಿಂದ ಕೃತ (ಆಚರಿಸಲ್ಪಟ್ಟ) ಶುಭ ಕರ್ಮದ ಫಲವನ್ನು ಕೊಡದೇ ಇರಬಹುದು. ಅಥವಾ ಆಚರಿಸಲ್ಪಡದಿರುವ ಕರ್ಮಫಲ ವನ್ನು ಕೊಡಲೂ ಬಹುದು. ಹೀಗಲ್ಲದೆ ಆನಂದರೂಪವಾದ ಬ್ರಹ್ಮವು ಕರ್ಮಫಲವನ್ನು ಕೊಡುವಾಗ ಮತ್ತೊಂದು ಸದ್ರೂಪ ಬ್ರಹ್ಮವಾಗಲಿ ಶಿವರೂಪವಾದ ಬ್ರಹ್ಮವಾಗಲಿ ವಿರೋಧಿಸದೇ ವ್ಯವಸ್ಥಿತಗಳಾಗಿರುವುವೆಂದರೆ ಅನೇಕ ಬ್ರಹ್ಮಗಳನ್ನು ಸ್ವೀಕರಿಸ ಬೇಕಾಗುವುದು. ಹೀಗೆ ಸ್ವೀಕರಿಸಿದರೆ ಭಿನ್ನಮತವುಳ್ಳ ಅನೇಕ ಜನ ಯಜಮಾನರು ಕೂಡಿ ಒಂದು ಮನೆಯನ್ನೂ ಮಾಡದಿರುವಂತೆ ಈ ಜಗತ್ತೆಂಬ ಮನೆಯನ್ನು ಮಾಡ ಲಾರವು. ಈ ಆನಂದ, ಸತ್ತು ಅಸತ್ತು, ಶಿವ ಇವರುಗಳ ಸಮೂಹವೇ ಬ್ರಹ್ಮವೆಂದು ಹೇಳಲಿಕ್ಕೂ ಬರುವುದಿಲ್ಲ. ಏಕೆಂದರೆ ಆ ಆನಂದಾದಿಗಳು ಧರ್ಮಸ್ವರೂಪಗಳಾಗಿರುವು ದರಿಂದ ಅವುಗಳಲ್ಲಿ ಜಗಜ್ಜನ್ಮಾದಿ ಕಾರಣತ್ವವು ಬರುವುದಿಲ್ಲ. ಮೃತ್ತಿಕೆಯೆಂಬ ಧರ್ಮಿ ಯಲ್ಲಿ ಘಟಕಾರಣತ್ವವು ಬರುವುದಲ್ಲದೆ ಮೃತ್ತಿಕೆಯ ಧರ್ಮ (ಮೃತ್ತಿಕಾತ್ವ) ದಲ್ಲಿ ಬರುವುದಿಲ್ಲವಷ್ಟೆ!

ಆನಂದಾದಿ ಧರ್ಮವುಳ್ಳ ಬ್ರಹ್ಮವು ಕ್ಷೀರಾದಿಗಳಂತೆ. ಆರಂಭೋಪಾದಾನಕಾರಣ ವಾಗುವುದೆಂದು ಹೇಳಿದರೆ ಬ್ರಹ್ಮನಿಷ್ಠಾನಂದಾದಿಗಳಿಗೆ ಭಂಗವಾಗುವುದು. ಕ್ಷೀರತ್ವ ಧರ್ಮವುಳ್ಳ ಕ್ಷೀರವು ದಧ್ಯಾದ್ಯಾರಂಭಕವಾಗಲು ಕ್ಷೀರನಿಷ್ಠ ಕ್ಷೀರತ್ವಧರ್ಮವು ಲೋಪ ವಾಗಿ ದಧಿತ್ವಾದಿಗಳು ತೋರುವುದು ಅನುಭವ ಸಿದ್ಧವಷ್ಟೆ! ಇನ್ನು ಸುವರ್ಣ ಕುಂಡಲ ನ್ಯಾಯೇನ ಜಗತ್ತೆಂಬ ಪರಿಣಾಮಕ್ಕೆ ಕಾರಣವಾಗುವುದೆಂದರೆ ಪೂರ್ವದಂತೆ ಬ್ರಹ್ಮಕ್ಕೆ ಪರಿಣಾಮಿತ್ವ ಪ್ರಸಂಗವು ಬರುವುದು. ಕುಂಡಲಾಕಾರವಾಗಿ ಪರಿಣತವಾದ ಸುವರ್ಣವು ಬೇರೆಯಾಗಿ ಉಳಿಯದಿರುವಂತೆ ಬ್ರಹ್ಮವು ಜಗತ್ತಿಗಿಂತಲೂ ಬೇರೆಯಾಗಿ ಉಳಿಯದೇ ಹೋಗಬೇಕು. ಆಗ ಯಜಮಾನನಿಲ್ಲದ ಮನೆಯಂತೆ ಜಗತ್ತು ಅವ್ಯವ ಸ್ಥಿತವಾಗಬೇಕು. ಪ್ರಾಕ್ (ಮೊದಲು) ಶಶಶೃಂಗಾದಿಗಳಂತೆ ಅಸದ್ರೂಪವಾದ ಪ್ರಪಂಚವು ಆ ಬ್ರಹ್ಮದ ವಿವರ್ತವಾಗಿರುವುದು. ಹಗ್ಗದಲ್ಲಿ ತೋರುವ ಹಾವು ಆ ಹಗ್ಗದ ವಿವರ್ತವಾಗುವುದು. ಈ ವಿವರ್ತಕ್ಕೆ ಹಗ್ಗವು ಕಾರಣವಾಗುವಂತೆ ಜಗತ್ತೆಂಬ ವಿವರ್ತಕ್ಕೆ ಬ್ರಹ್ಮವು ಕಾರಣವೆಂದರೆ ಅತಿ ತುಚ್ಛವಾದ ಶಶಶೃಂಗಾದಿಗಳೂ ಬ್ರಹ್ಮದ ವಿವರ್ತವೆನಿಸಬೇಕು. ಘಟಪಟಾದಿಗಳಂತೆ ಶಶಶೃಂಗಾದಿಗಳಲ್ಲವೆನ್ನುವುದು ಅನುಭವ ಸಿದ್ಧವು.

ಘಟ ಚೈತ್ರೋಪಲಕ್ಷಿತ ಸಮಸ್ತ ಪ್ರಪಂಚವೂ ಶಶಶೃಂಗಾದಿ ಅಸತ್ (ತುಚ್ಛ) ಪದಾರ್ಥಗಳೂ ಬ್ರಹ್ಮದ ವಿವರ್ತಗಳೇ ಆಗಲಿ ಬಾಧಕವೇನು ? ಅಂದರೆ ಘಟಪಟಾದಿ ಗಳಲ್ಲಿ ಪ್ರವೃತ್ತಿ ಹುಟ್ಟುವಂತೆ ಶಶಶೃಂಗಾದಿಗಳಲ್ಲಿ ಜನಗಳ ಪ್ರವೃತ್ತಿ ಹುಟ್ಟದಿರು ವುದೇ ಬಾಧಕವೆಂದು ತಿಳಿಯಬೇಕು. ಆದರೂ "ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚತೆ" ಎಂಬ ಪೂರ್ವಾಚಾರ್ಯರ ನ್ಯಾಯವನ್ನನುಸರಿಸಿ ಶಿಷ್ಯ

CC-0. Jangamwadi Math Collection. Digitized by eGangotri

ಬೋಧೆಗಾಗಿಯೂ ವೇದಪ್ರಾಮಾಣ್ಯ ಸಿದ್ಧಿಗಾಗಿಯೂ ಅಚೇತನವಾದ ಮಾಯೆಗೆ ಜಗದುಪಾದಾನಕಾರಣತ್ವವನ್ನು ಹೇಳಬೇಕು. ಇಲ್ಲವಾದರೆ "ಅಜಾಮೇಕಾಂ ಲೋಹಿತ ಕೃಷ್ಣ ಶುಕ್ಲ ವರ್ಣಾಂ" (ಶ್ವೇ.೪-೫) ಇತ್ಯಾದಿ ಶೃತಿಗಳಿಗೆ ಅಪ್ರಾಮಾಣ್ಯವೇ ಪ್ರಾಪ್ತವಾದೀತು. ಅಥವಾ ಪ್ರಕೃತಿಯ ಸತ್ವಗುಣ ಪ್ರಧಾನವಾದ ಮಾಯೆಯಲ್ಲಿ ಪ್ರತಿಬಿಂಬಿತವಾದ ಬ್ರಹ್ಮಕ್ಕೆ (ಈಶ್ವರನಿಗೆ) ಜಗದುಪಾದಾನಕಾರಣತ್ವವನ್ನು ಹೇಳಬಹುದು.

ಸಿದ್ಧಾಂತ :—ಹೇಗೆಂದರೆ ಸರ್ವಾಧಿಷ್ಠಾನವೂ ಸಚ್ಚಿದಾನಂದ ರೂಪವೂ ಆಗಿರುವ ವೀರಶೈವ ಶಾಸ್ತ್ರಪ್ರಸಿದ್ಧ ಷಟ್‌ಸ್ಥಲ ಪರಶಿವಬ್ರಹ್ಮವೇ ಜಗಜ್ಜನ್ಮಾದಿ ಕಾರಣವಲ್ಲದೆ ಉಳಿದ ಮಿಥ್ಯಾಮಾಯಾದಿಗಳು ಕಾರಣವಲ್ಲ. ಹಾಗಾದರೆ ನಿರವಯವವಾದ ಷಟ್‌ಸ್ಥಲಬ್ರಹ್ಮವು ಸಾವಯವ ಪ್ರಪಂಚಕ್ಕೆ ಕಾರಣವಾಗಲಾರದೆಂಬ ಶಂಕೆಗೆ ಉತ್ತರವೇನು ; "ಅಪಾಣಿ ಪಾದೋಽಹ ಮಚಿಂತ್ಯಶಕ್ತಿಃ" "ಆಕಾಶ ಶರೀರಂ ಬ್ರಹ್ಮ" "ಸತ್ಯಾತ್ಮಪ್ರಾಣಾರಾಮಂ" "ಸರ್ವಾಣಿ ಹವಾ ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯಂತೆ" "ಆಕಾಶೋ ಹವೈ ನಾಮರೂಪಯೋರ್ನಿರ್ವಹಿತಾ" ಇತ್ಯಾದಿ ಶ್ರುತಿಗಳು ಬ್ರಹ್ಮವು ನಿರವಯವವಾದರೂ ಜಗಜ್ಜನ್ಮಾದಿಗಳಿಗೆ ಕಾರಣವಾಗುವುದೆಂದು ಹೇಳುವುದೇ ಉತ್ತರವಾಗಿದೆಯೆಂದು ತಿಳಿಯಬೇಕು. ಏಕೆಂದರೆ ಅನೇಕ ಶ್ರುತಿಗಳು ನಿರವಯವ ಬ್ರಹ್ಮವು ಬಾಹ್ಯಕರಣಾಪೇಕ್ಷೆಯಿಲ್ಲದೆ ಜಗಜ್ಜನ್ಮಾದಿಗಳಿಗೆ ಕಾರಣವಾಗುವುದೆಂದು ಪ್ರತಿಪಾದಿಸುತ್ತವಷ್ಟೆ ! ಕೇವಲ ಯುಕ್ತಿಯನ್ನೇ ಸ್ವೀಕರಿಸುವುದಾದರೆ ಈ ಪೂರ್ವೋಕ್ತಶ್ರುತಿಗಳೆಲ್ಲವೂ ಅಪ್ರಮಾಣಗಳೆನಿಸಬೇಕಾದೀತು. ಆದ್ದರಿಂದ ಅಚಿಂತ್ಯ ಶಕ್ತಿಯುಳ್ಳ ಬ್ರಹ್ಮವು ನಿರವಯವವಾಗಿದ್ದರೂ ಕಾರಣವಾಗುವುದೆಂದು ಒಪ್ಪಿಕೊಳ್ಳಲೇಬೇಕು.

"ಆಕಾಶ ಶರೀರಂ ಬ್ರಹ್ಮ" ಎಂಬ ಶ್ರುತಿಯಲ್ಲಿ ಆಕಾಶ ಶಬ್ದದಿಂದ ಪರಶಿವ ಬ್ರಹ್ಮದ ಸ್ವಾಭಾವಿಕವಾದ ಚಿಚ್ಛಕ್ತಿಯು ಹೇಳಲ್ಪಡುವುದಲ್ಲದೆ ಭೂತಾಕಾಶವು ಹೇಳಲ್ಪಡುವುದಿಲ್ಲ. ಏಕೆಂದರೆ ಜಡವಾದ ಭೂತಾಕಾಶಕ್ಕೆ ಜಗಜ್ಜನ್ಮಾದಿ ಕಾರಣತ್ವವು ಸಂಭವಿಸುವುದಿಲ್ಲವಷ್ಟೆ ! "ಸತ್ಯಾತ್ಮ ಪ್ರಾಣಾರಾಮಂ" ಎಂಬ ಶ್ರುತಿಯಲ್ಲಿ "ಸತ್ಯಾತ್ಮಾ" ಎಂದರೆ ಸತ್ಯಸ್ವರೂಪನೆಂದು ಹೇಳಲ್ಪಡುತ್ತದೆ. "ಋತಂ ಸತ್ಯಂ" ಎಂದು ಶ್ರುತಿ ಇರುವುದಷ್ಟೆ! ಪ್ರಾಣಶಬ್ದದಿಂದ ಸಕಲ ಜಗದಧಿಷ್ಠಾನವಾದ ಚಿಚ್ಛಕ್ತಿಯು ಹೇಳಲ್ಪಡುವುದು. ಈ ಚಿಚ್ಛಕ್ತಿಯಲ್ಲಿ ಕ್ರೀಡಿಸುತ್ತಿರುವವನೇ ಪ್ರಾಣಾರಾಮನೆಂದು ಹೇಳಿಸಿಕೊಳ್ಳುವನು. ಮನಶ್ಶಬ್ದದಿಂದ ಪರಾಶಕ್ತಿಯು ಹೇಳಲ್ಪಡುವುದು. ಈ ಶಕ್ತಿಯಲ್ಲಿ ಆನಂದವುಳ್ಳವನೇ ಮನ ಆನಂದನೆಂದು ಹೇಳಿಸಿಕೊಳ್ಳುವನು. ಇದರಿಂದ ಬಾಹ್ಯಕರಣ ನಿರಪೇಕ್ಷೆಯು ಸೂಚಿಸಲ್ಪಟ್ಟಿತು. ಇನ್ನು ನಿರವಯವದಿಂದ ಸಾವಯವ ಪ್ರಪಂಚವು ಹುಟ್ಟುವುದೆಂಬಲ್ಲಿ ದೃಷ್ಟಾಂತವನ್ನು ತೋರಿಸಿರುತ್ತಾರೆ.

CC-0. Jangamwadi Math Collection. Digitized by eGangotri

ನಿರವಯವ ವಾಯುವಿನಲ್ಲಿ ವೃಕ್ಷಾದಿಗಳನ್ನು ಕಂಪಿಸುವ (ನಡಗಿಸುವ) ಶಕ್ತಿಯಿರುವಂತೆಯೂ ನಿರವಯವ ಜೀವನದಲ್ಲಿ ಸ್ವಾಪ್ನಿಕ ಪ್ರಪಂಚಾನುಕೂಲ ಶಕ್ತಿಯಿರುವಂತೆಯೂ ನಿರವಯವ ಬ್ರಹ್ಮದಲ್ಲಿ ಸಾವಯವ ಪ್ರಪಂಚಾನುಕೂಲ ಶಕ್ತಿಯಿರುವಲ್ಲಿ ಆಶ್ಚರ್ಯವೇನು ; ಅಘಟಿತಘಟನಾಸಮರ್ಥನಾದ ಎಲ್ಲವನ್ನೂ ಮಾಡುವುದಕ್ಕೂ ಮಾಡದಿರುವುದಕ್ಕೂ ಬೇರೆ ಪ್ರಕಾರಮಾಡುವುದಕ್ಕೂ ಸ್ವತಂತ್ರನೇ ಇರುವನು. ಮೂರ್ತ (ಪರಿಚ್ಛಿನ್ನ) ನಾದ ಸೂರ್ಯನಿಂದ ಅಮೂರ್ತವಾದ ಕಾಲದ ಕಲ್ಪನೆಯು ಕಂಡುಬರುವಂತೆ ಭಕ್ತಾನುಗ್ರಹಕ್ಕಾಗಿ ಘೃತಕಾಠಿಣ್ಯ ನ್ಯಾಯದಂತೆ ದಿವ್ಯಮಂಗಲ ವಿಗ್ರಹಧಾರಿಯಾದ ಮಹೇಶ್ವರನಿಂದ ಮೂರ್ತಾಮೂರ್ತ ಜಗಜ್ಜನ್ಮಾದಿಗಳನ್ನು ಹೇಳುವಲ್ಲಿ ಯಾವ ದೋಷವೂ ಇಲ್ಲ. "ಸರ್ವಂ ಖಲ್ವಿದಂ ಬ್ರಹ್ಮತಜ್ಜಲಾನಿತಿ ಶಾಂತ ಉಪಾಸೀತ" ಎಂಬ ಶ್ರುತಿಯಲ್ಲಿ ಸಮುದ್ರದಿಂದ ಹುಟ್ಟಿ ಅಲ್ಲಿಯೇ ಲೀನಗಳಾಗುವ ಫೇನ (ಬುರುಗು) ತರಂಗಾ (ತೆರೆ) ದಿಗಳು ಆ ಸಮುದ್ರಕ್ಕೆ ಅಭಿನ್ನಗಳಾಗಿರುವಂತೆ ಮಹೇಶ್ವರನಿಂದ ಹುಟ್ಟಿದ್ದು ಮಹೇಶ್ವರನಲ್ಲಿಯೇ ಲಯವನ್ನು ಹೊಂದುವ ಸಮಸ್ತ ಜಗತ್ತಿಗೂ ಆ ಮಹೇಶ್ವರನ ಅಭೇದವು ಹೇಳಲ್ಪಡುತ್ತದೆ.

ಜಗದುಪಾದಾನವಾದ ಪರಮೇಶ್ವರ ಶಕ್ತಿಯು ಆ ಪರಮೇಶ್ವರನ ಕಿಂಚಿದಂಶದಲ್ಲಿರುವುದೆನ್ನುವುದು "ಪಾದೋಽಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ" ಎಂಬ ಶ್ರುತಿಯಿಂದ ತಿಳಿದುಬರುತ್ತದೆ. "ಶಕ್ತಿಶ್ಚ ಶಕ್ತಿಮಾಂಶ್ಚೇತಿ ಪದಾರ್ಥದ್ವಯಮಿಷ್ಯತೆ । ಶಕ್ತಯಶ್ಚ ಜಗತ್ಸರ್ವಂ ಶಕ್ತಿಮಾಂಸ್ತು ಮಹೇಶ್ವರಃ ॥" ಎಂಬ ಶಿವಾಗಮ ವಾಕ್ಯದಂತೆ ಶಿವಶಕ್ತಿ ವಿಕಾಸರೂಪವಾದ ಸಮಸ್ತ ಜಗತ್ತು ಪರಮೇಶ್ವರಾಂತರ್ಭೂತವಾಗಿರುವುದರಿಂದ ಸಮಸ್ತ ಜಗತ್ತಿಗೂ ಪರಮೇಶ್ವರನೇ ಕಾರಣನಾಗಿರುವನು. ಭೂತಾಕಾಶಾಂತರ್ಭೂತಗಳಾದ ಪವನಾದಿಗಳಿಗೆ ಆ ಭೂತಾಕಾಶವೇ ಕಾರಣವಾಗಿರುವುದಷ್ಟೆ ; ಇದರಂತೆ ಸಮಸ್ತ ಜಗತ್ತಿಗೂ ಪರಮೇಶ್ವರನೇ ಕಾರಣನು. ಸಮಸ್ತ ಜಗತ್ತು ಪರಮೇಶಾಂತರ್ಭೂತವಾಗಿರುವುದೆಂಬ ವಿಷಯದಲ್ಲಿ "ಲಿಂಗಮಧ್ಯೇ ಜಗತ್ಸರ್ವಂ.... .... ಲಿಂಗಬಾಹ್ಯಾತ್ಪರಂ ನಹಿ" ಎಂಬ ಶ್ರುತಿಯು ಪ್ರಮಾಣವಾಗಿದೆ. "ಯತೋ ವಾ ಇಮಾನಿ ಭೂತಾನಿ ಜಾಯಂತೆ" ಎಂಬ ಶ್ರುತಿಯಿಂದ ಪರಶಿವಬ್ರಹ್ಮವು ನಿಮಿತ್ತಕಾರಣವೆಂದೂ "ಯತ್ಪ್ರಯಂತಿ" ಎಂಬುದರಿಂದ ಉಪಾದಾನಕಾರಣವೆಂದೂ ತಿಳಿದುಬರುವುದರಿಂದ ಆ ಬ್ರಹ್ಮಕ್ಕೆ ಅಭಿನ್ನ ನಿಮಿತ್ತೋಪಾದಾನ ಕಾರಣತ್ವವು ಸಿದ್ಧಿಸುವುದಲ್ಲದೆ ಏಕಕಾರಣತ್ವವು ಸಿದ್ಧಿಸುವುದಿಲ್ಲ. "ಪಾದೋಽಸ್ಯ ವಿಶ್ವಾಭೂತಾನಿ" ಎಂಬ ಶ್ರುತಿಯಿಂದ ಶಕ್ತಿವಿಕಾಸರೂಪ ಪ್ರಪಂಚವು ಪರಶಿವಬ್ರಹ್ಮದ ಏಕದೇಶವೃತ್ತಿಯಾಗಿರುವುದೆಂದು ಸಿದ್ಧವಾಗುವುದರಿಂದ ರಜ್ಜುವಿನಲ್ಲಿ ಸರ್ಪದ ಅಧ್ಯಾರೋಪದಂತೆ ಬ್ರಹ್ಮದಲ್ಲಿ ಜಗದಧ್ಯಾರೋಪವು ಸಂಭವಿಸುವುದಿಲ್ಲ. ಹಾಗೂ ರಜ್ಜು (ಹಗ್ಗ) ವಿನಲ್ಲಿ ಸರ್ಪಭ್ರಾಂತಿಯುಂಟಾಗಿ ಸರ್ಪಕ್ಕೆ ಮಿಥ್ಯಾತ್ವವುಂಟಾಗುವಂತೆ ಶಕ್ತಿ

CC-0. Jangamwadi Math Collection. Digitized by eGangotri

ರೂಪ ಜಗತ್ತಿಗೆ ಮಿಥ್ಯಾತ್ವವುಂಟಾಗುವುದಿಲ್ಲ. "ಜ್ಞಾಜ್ಞೌ ದ್ವಾವಜಾವೀಶಾನೀಶೌ" ಎಂಬ ಶ್ರುತಿಯಿಂದ ಚೇತನ (ಜೀವ) ಜಗತ್ತು ಅಜಾತ (ಉತ್ಪತ್ತಿಯಿಲ್ಲದ್ದು) ವೆಂದು ತಿಳಿಯಲ್ಪಡುವುದರಿಂದ "ಯತೋ ವಾ ಇಮಾನಿ ಭೂತಾನಿ ಜಾಯಂತೇ" ಎಂಬ ಶ್ರುತಿಯಿಂದ ಆಕಾಶಾದಿ ಪಂಚಮಹಾಭೂತಕಾರಣತ್ವವೇ ಬ್ರಹ್ಮಕ್ಕೆ ಹೇಳಬೇಕಲ್ಲದೆ ಸಮಸ್ತ ಜಗತ್ಕಾರಣತ್ವವನ್ನು ಹೇಳಕೂಡದೆಂಬ ಆಕ್ಷೇಪವನ್ನು ಭಾಷ್ಯಕಾರರು "ಸೃಷ್ಟೇಃ ಪ್ರಾಕ್" ಇತ್ಯಾದಿ ಪಂಕ್ತಿಗಳಿಂದ ಪರಿಹರಿಸುತ್ತಾರೆ.

ಸಮಾಧಾನ :—ಸೃಷ್ಟಿಗಿಂತಲೂ ಪೂರ್ವದಲ್ಲಿ ಕುಸೂಲ (ಓಡೆ) ಸದೃಶವಾದ ಚಿಚ್ಛಕ್ತಿಯಲ್ಲಿ ಧಾನ್ಯ (ನವಣೆ ಮೊದಲಾದ ಧಾನ್ಯ) ಸದೃಶರಾದ ಜೀವರ ಆವಿರ್ಭಾವ (ಜನ್ಮ) ಕರ್ತೃತ್ವವು ಪರಶಿವಬ್ರಹ್ಮಕ್ಕೆ ಸಂಭವಿಸುವುದು. ಕುಸೂಲದೊಳಗಿನ ಧಾನ್ಯಗಳ ಬಹಿರ್ನಿರ್ಗಮನ (ಆವಿರ್ಭಾವ) ಕರ್ತೃತ್ವವು ಯಜಮಾನನಿಗೆ ಸಂಭವಿಸುತ್ತದಷ್ಟೆ. ಆದುದರಿಂದ ಜೀವರು ಅಜನ್ಯರೆಂದು ಹೇಳುವ "ಜ್ಞಾಜ್ಞೌ ದ್ವಾವಜಾವೀಶಾನೀಶೌ" ಇತ್ಯಾದಿ ಶ್ರುತಿಗಳಿಗೂ ವಿರೋಧವಿಲ್ಲ. ಶಿವನ ಚಿಚ್ಛಕ್ತಿಯು ಶಿವಾಭಿನ್ನವಾಗಿರುವುದರಿಂದ ಜೀವರು ಚಿಚ್ಛಕ್ತಿಯ ಅಂಶಗಳೆಂದರೆ ಶಿವಾಂಶಗಳೇ ಜೀವಾತ್ಮರೆಂದು ಹೇಳಬೇಕಾಗುವುದು. ಅಂದಮೇಲೆ ಪರಶಿವಬ್ರಹ್ಮಕ್ಕೆ ಅಂಶಗಳನ್ನು (ಅವಯವಗಳನ್ನು) ಒಪ್ಪಿಕೊಳ್ಳಬೇಕಾಗುವುದು. ಹೀಗೆ ಒಪ್ಪಿಕೊಂಡರೆ ನಿರವಯವಶ್ರುತಿಗಳಿಗೆ ವಿರೋಧವಾಗುವುದೆಂದು ಆಶಂಕಿಸಕೂಡದು. ಆ ನಿರವಯವ ಶ್ರುತಿಗಳು ಬ್ರಹ್ಮಕ್ಕೆ ಹೇಯ (ಪ್ರಾಕೃತ) ಅಂಶಗಳಿಲ್ಲವೆಂದು ಹೇಳುತ್ತವೆಂದೇ ತಿಳಿಯಬೇಕು. ಇಲ್ಲವಾದರೆ "ಮಾಯಾಂತು ಪ್ರಕೃತಿಂ ವಿದ್ಯಾತ್ | ಮಾಯಿನಂ ತು ಮಹೇಶ್ವರಂ ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್" (ಶ್ವೇ. ೪.೧೦) "ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ" (ಭ. ಗೀ. ೧೫-೭) ಇತ್ಯಾದಿ ಶ್ರುತಿ-ಸ್ಮೃತಿಗಳು ಜೀವಾತ್ಮರು ಶಿವಾಂಶರೂಪರೆಂದು ಹೇಳಲಾರವು. ಜಗದ್ರೂಪವಾಗಿ ವಿಸ್ತರಿಸಿದ ತನ್ನ ಶಕ್ತಿಯನ್ನು ಸಂಕೋಚಗೊಳಿಸಿಕೊಂಡಿರುವುದರಿಂದ ಸೃಷ್ಟಿಗಿಂತಲೂ ಪೂರ್ವದಲ್ಲಿ ಪರಮೇಶ್ವರನು ನಿರ್ಗುಣನೆನಿಸುವನು. ಅಂದರೆ ಪ್ರಾಕೃತ ಗುಣರಹಿತನೆಂದೆನಿಸುವನೆಂದರ್ಥವು. ಆದುದರಿಂದ "(ನಿರ್ಗುಣಂ) ನಿಷ್ಕಲಂ ನಿಷ್ಕ್ರಿಯಂ ಶಾಂತಂ" (ಶ್ವೇ. ೬-೧೯) ಇತ್ಯಾದಿ ನಿರ್ಗುಣ ಶ್ರುತಿಗಳು ಸೃಷ್ಟಿಪೂರ್ವಕಾಲಪರಗಳೆಂದೂ "ಸ ಈಕ್ಷಾಂ ಚಕ್ರೇ" (ಪ್ರಶ್ನ. ೬-೩) ಇತ್ಯಾದಿ ಸಗುಣಶ್ರುತಿಗಳು ಸೃಷ್ಟ್ಯುನ್ಮುಖನಾದ ಪರಮೇಶ್ವರನ ಶಕ್ತಿವಿಕಾಸ ಕಾಲಪರಗಳೆಂದೂ ತಿಳಿಯಬೇಕು. ಸತ್ಯಜ್ಞಾನಾನಂದಸ್ವರೂಪವಾದ ಪರಶಿವಬ್ರಹ್ಮಕ್ಕೆ ಜಗತ್‌ಕಾರಣತ್ವವನ್ನು ಹೇಳಿದರೆ ಮೃತ್ತಿಕಾದಿಗಳಂತೆ ವಿಕಾರಿತ್ವವು ಪ್ರಾಪ್ತವಾಗುವುದಿಲ್ಲ ಏಕೆಂದರೆ "ಮಾಯಾಂತು ಪ್ರಕೃತಿಂ ವಿಂದ್ಯಾತ್" (ಶ್ವೇ. ೪-೧೦) ಇತ್ಯಾದಿ ಸರ್ವಶ್ರುತಿಗಳಲ್ಲಿ ಮಾಯೆಗೆ ಉಪಾದಾನಕಾರಣವೆಂದೂ ಪರಮೇಶ್ವರನಿಗೆ ನಿಮಿತ್ತಕಾರಣವೆಂದೂ ಹೇಳಿರುವುದರಿಂದ ಪರಮೇಶ್ವರನಿಗೆ ವಿಕಾರಿತ್ವದೋಷವು ಪ್ರಾಪ್ತವಾಗುವುದಿಲ್ಲ.

CC-0. Jangamwadi Math Collection. Digitized by eGangotri

ಶಂಕಾ :—ಚಿದ್ರೂಪ ಪರಶಿವನಲ್ಲಿ ಅಚಿದ್ರೂಪವಾದ ಈ ಪ್ರಪಂಚ ಕಲ್ಪನೆಯು ಹೇಗೆ ಉಂಟಾಗುವುದು ?

ಸಮಾಧಾನ:—"ಯಥೋರ್ಣನಾಭಿಸ್ಸೃಜತೇಗೃಹ್ಣತೇ ಚ" (ಮುಂ. ೧-೧-೭) ಇತ್ಯಾದಿ ಶ್ರುತಿಗಳಲ್ಲಿ ಚೇತನರ್ನೋರ್ಣನಾಭಿ (ಜೇಡರಹುಳ) ಯಿಂದ ಅಚೇತನ ತಂತುಗಳ ಉತ್ಪತ್ತಿಯು ಕಂಡುಬರುವಂತೆ ಚೇತನ ಪರಶಿವನಿಂದ ಅಚೇತನ (ಜಡ) ಪ್ರಪಂಚವು ಉಂಟಾಗುವುದೆಂದು ಹೇಳಿದ್ದಾರೆ. ಅಘಡಿತ ಘಟನಾಶಕ್ತಿ ವಿಶಿಷ್ಟನಾದ ಪರಮೇಶ್ವರನಿಂದ ಪ್ರಪಂಚವು ಹುಟ್ಟುವುದೆಂಬ ವಿಷಯದಲ್ಲಿ ಆಶ್ಚರ್ಯವೇನು ? ಆದ್ದರಿಂದ ಜಡಚೇತನರೂಪಗಳಾದ ಪ್ರಪಂಚ-ಪರಶಿವಬ್ರಹ್ಮಗಳಿಗೆ ಕಾರ್ಯಕಾರಣಭಾವವೂ ಅಭೇದವೂ ಕೂಡ ಸಿದ್ಧಿಸುತ್ತದೆ. "ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನೀತಿ ಶಾಂತ ಉಪಾಸೀತ" (ಛಾಂ. ೩-೧೪-೧) ಇತ್ಯಾದಿ ಶ್ರುತಿಗಳಿಂದ ಕಾರ್ಯಕಾರಣಗಳಿಗೆ ಅಭೇದವು ಹೇಳಲ್ಪಡುತ್ತದೆ. ಪರಶಿವಬ್ರಹ್ಮವೆಂದೇ ತನ್ನ ಶಕ್ತಿಯ ಪ್ರಾಧಾನ್ಯದಿಂದ ಉಪಾದಾನಕಾರಣವಾಗಿಯೂ ತಾನೇ ಪ್ರಧಾನವಾಗಿ ನಿಮಿತ್ತಕಾರಣವಾಗಿಯೂ ಇರುವುದೆಂಬುದೇ ಘಂಟಾಘೋಷರೂಪವಾದ ವೈದಿಕ ಸಿದ್ಧಾಂತವು.

ಅಧ್ಯಾರೋಪ ಅಪವಾದಗಳನ್ನು ಸ್ವೀಕರಿಸಿದರೆ "ಸದೇವ ಸೌಮ್ಯೇದಮಗ್ರ ಆಸೀತ್ । ಏಕಮೇವಾದ್ವಿತೀಯಂ ಬ್ರಹ್ಮ" (ಛಾಂ. ೬-೨-೧) "ತದೈಕ್ಷತ ಬಹುಸ್ಯಾಂ ಪ್ರಜಾಯೇ ಯೇತಿ" (ಛಾಂ. ೬-೨-೩) "ಏಕೋಽಹಂ ಬಹುಸ್ಯಾಂ ಪ್ರಜಾಯೇಯ । ದ್ಯಾವಾ ಪೃಥಿವೀ ಜನಯನ್ ದೇವ ಏಕಃ" (ಮಹಾ. ನಾ. ಅನು. ೧) "ದ್ವಾ ಸುಪರ್ಣಾ ಸಯುಜಾ ಸಖಾಯಾ" (ಶ್ವೇ. ೪-೬) "ಪ್ರಧಾನ ಕ್ಷೇತ್ರಜ್ಞ ಪತಿರ್ಗುಣೇಶಃ ಸಂಸಾರ ಮೋಕ್ಷಸ್ಥಿತಿ ಬಂಧಹೇತುಃ" (ಶ್ವೇ. ೬-೧೬) "ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ" (ಮುಂ. ೩-೨-೮) "ಸರ್ವೋ ವೈ ರುದ್ರಃ" (ಮಹಾ. ನಾ. ಅನು. ೧೦) ಇತ್ಯಾದಿ ಸರ್ವಶ್ರುತಿ ವಿರೋಧವಾಗಿ ಬೌದ್ಧಾದಿ ಮತಗಳಂತೆ ವೇದಬಾಹ್ಯಮತ ಪ್ರವೇಶವಾಗುವುದು.

ಮಿಥ್ಯಾವಾದಖಂಡನ

ಜಡಾಜಡಗಳಿಗೆ ಏಕತ್ವವು ಸಂಭವಿಸುವುದಿಲ್ಲವಾದ್ದರಿಂದ ಪ್ರಪಂಚವು ಅಧ್ಯಾಸ ಕಲ್ಪಿತವಾಗಿ ಮಿಥ್ಯೆಯಾಗಿರುವುದೆಂದು ಹೇಳುವುದು ಅತಿ ತುಚ್ಛವಾಗಿದೆ. ಹೇಗೆಂದರೆ ಒಂದು ವಸ್ತುವಿನಲ್ಲಿ ಮತ್ತೊಂದು ವಸ್ತುವಿನ ಧರ್ಮವನ್ನು ಆರೋಪಿಸುವುದು ಅಧ್ಯಾಸವಾಗಿರುವುದಷ್ಟೆ. ಆತ್ಮನಲ್ಲಿ ಅನಾತ್ಮರೂಪವಾದ ಪ್ರಪಂಚದ ಆರೋಪಕ್ಕೆ ಅಧ್ಯಾಸವೆನ್ನುವರೋ ? ಅಥವಾ ಅನಾತ್ಮರೂಪವಾದ ಪ್ರಪಂಚದಲ್ಲಿ ಆತ್ಮನ ಆರೋ.

CC-0. Jangamwadi Math Collection. Digitized by eGangotri

ಪಕ್ಷೆ ಅಧ್ಯಾಸವೆನ್ನುವರೋ ? ಎಂದು ವಿಕಲ್ಪಗಳುಂಟಾಗುತ್ತವೆ. ಮೊದಲನೆಯ ವಿಕಲ್ಪವು ಸರಿಹೋಗುವುದಿಲ್ಲ. ಏಕೆಂದರೆ ಒಂದರಲ್ಲಿ ಮತ್ತೊಂದು ಪದಾರ್ಥದ ಆರೋಪವಾಗಬೇಕಾದರೆ ಎರಡೂ ವಸ್ತುಗಳು ಸತ್ಯಗಳೇ ಆಗಿರಬೇಕು. ರಜ್ಜುವಿನಲ್ಲಿ ಸರ್ಪದ ಆರೋಪ (ಭ್ರಾಂತಿ) ವಾಗುತ್ತದೆ. ಆ ರಜ್ಜು ಸರ್ಪಗಳೆರಡೂ ಸತ್ಯಗಳಾಗಿಯೇ ಇರುವುವು. ಪೂರ್ವದಲ್ಲಿ ನೋಡಿದ ಸರ್ಪದ ವಾಸನೆಯಲ್ಲಿ ಸರ್ಪಭ್ರಾಂತಿಯು ಯುಕ್ತವಾಗುವುದು. ಇದರಂತೆ ಆತ್ಮಾತಿರಿಕ್ತವಾಗಿ ಸತ್ಯಪ್ರಪಂಚವನ್ನೇ ನೀವು ಅಂಗೀಕರಿಸದಿರುವುದರಿಂದಲೂ ಆತ್ಮಾತಿರಿಕ್ತ ಪ್ರದೇಶವೇ ಇಲ್ಲದಿರುವುದರಿಂದಲೂ ಆತ್ಮನಲ್ಲಿ ಅನಾತ್ಮ (ಪ್ರಪಂಚಾ) ರೋಪವು ಯುಕ್ತವಾಗುವುದಿಲ್ಲ. ಇನ್ನು ಎರಡನೇ ವಿಕಲ್ಪವೂ ಕೂಡ ಮಿಥ್ಯೆಯೆನಿಸಬೇಕಾಗುವುದು. ಹೇಗೆಂದರೆ ಸತ್ಯವಾದ ರಜ್ಜುವಿನಲ್ಲಿ ಸರ್ಪಾರೋಪವಾಗುವುದರಿಂದ ಆರೋಪ (ಭ್ರಾಂತಿ) ಕ್ಕೆ ವಿಷಯವಾದ ಸರ್ಪವು ಮಿಥ್ಯೆಯೆನಿಸುವುದಷ್ಟೆ. ಜ್ಞಾನಕ್ಕೆ ವಿಷಯವಾದುದೆಲ್ಲವೂ ಜಡವೆಂದು ಹೇಳುವ ನೀವು ಭ್ರಾಂತಿ ರೂಪಜ್ಞಾನಕ್ಕೆ ವಿಷಯದಾದ ಬ್ರಹ್ಮಕ್ಕಾದರೂ ಜಡವೆಂದು ಹೇಳುವ ಪ್ರಸಂಗವು ಬರುವುದಲ್ಲದೆ ಬಹು ದೋಷಗಳಿಗವಕಾಶವಾಗುವುದು.

ಶಂಕಾ :—ಪೂರ್ವದೃಷ್ಟ ಸತ್ಯಸರ್ಪ ಸಂಸ್ಕಾರದಿಂದ ಸರ್ಪಭ್ರಾಂತಿಯುಂಟಾಗುವುದೆಂಬಲ್ಲಿ ನಿಯಮವಿಲ್ಲ. ಏಕೆಂದರೆ ಪೂರ್ವಭ್ರಾಂತಿಗಳು ಉತ್ತರೋತ್ತರ ಭ್ರಾಂತಿಗಳಿಗೆ ಕಾರಣಗಳಾಗಿರುವುದರಿಂದ ಅನಾತ್ಮ ಪ್ರಪಂಚದಲ್ಲಿ ಆತ್ಮಾಧ್ಯಾಸವೂ ಆತ್ಮನಲ್ಲಿ ಅನಾತ್ಮಾಧ್ಯಾಸ (ಭ್ರಾಂತ) ವೂ ಸಂಭವಿಸುತ್ತವೆಂದು ಒಪ್ಪಿಕೊಳ್ಳಲೇಬೇಕಷ್ಟೆ.

ಸಮಾಧಾನ :—ಹೀಗೆ ಒಪ್ಪಿಕೊಂಡರೆ ಅನವಸ್ಥಾ ದೋಷವೇ ಪ್ರಾಪ್ತವಾಗುವುದು. ಉತ್ತರೋತ್ತರಾಧ್ಯಾಸಗಳಿಗೆ ಕಾರಣಗಳಾದ ಪೂರ್ವ ಪೂರ್ವ ಅಧ್ಯಾಸಗಳಿಗೆ ನಿಲುಕಡೆಯೇ ಇಲ್ಲವಷ್ಟೆ; ಇದಲ್ಲದೆ ಬ್ರಹ್ಮದಲ್ಲಿಯೇ ತೋರಿದ ಪ್ರಪಂಚದ ಆರೋಪವು ಆ ಬ್ರಹ್ಮದಲ್ಲಿ ಆಗಲಾರದು. ಯಾವುದು ಎಲ್ಲಿ ತೋರುವುದೋ ಅಲ್ಲಿ ಅದರ ಅಧ್ಯಾಸವು ಆಗುವುದಿಲ್ಲವೆಂಬ ನಿಯಮವು ಸರ್ವಾನುಭವ ಸಿದ್ಧವು. ಸರ್ಪದಲ್ಲಿ ತೋರಿದ ಸರ್ಪತ್ವದ ಅಧ್ಯಾಸವು ಆ ಸರ್ಪದಲ್ಲಿಯೇ ಆಗುವುದಿಲ್ಲವಾದ್ದರಿಂದ ಬ್ರಹ್ಮದಲ್ಲಿ ಪ್ರಪಂಚಾಧ್ಯಾಸಕ್ಕೆ ಕಾರಣವಾದ ಮತ್ತೊಂದು ತತ್ಪೂರ್ವಾಧ್ಯಾಸವನ್ನು ಹೇಳಬೇಕು. ಅದಕ್ಕೆ ಮತ್ತೊಂದನ್ನು ಅದಕ್ಕೆ ಮತ್ತೊಂದನ್ನು ಹೀಗೆ ಹೇಳುತ್ತ ಹೋದರೆ ಅನವಸ್ಥಾ ದೋಷವೇ ಬರುವುದೆಂದು ತಿಳಿದು ಬ್ರಹ್ಮ ಪ್ರಪಂಚಗಳು ಅನಾದಿಗಳಾಗಿರುವುದರಿಂದ ಅವುಗಳ ಅಧ್ಯಾಸವೂ ಕೂಡ ಅನಾದಿಯಾಗಿಯೇ ಇರುವುದಾದ್ದರಿಂದ ಅಧ್ಯಾಸ ಪರಂಪರೆಗೆ ನಿಲುಕಡೆಯೇ ಇಲ್ಲವೆಂದು ಹೇಳುವುದಾದರೆ "ಯತೋ ವಾ ಇಮಾನಿ ಭೂತಾನಿ ಜಾಯಂತೆ" (ತೈ. ಭೃ. ೧) ಇತ್ಯಾದಿ ಬಹು ಶ್ರುತಿಗಳಿಗೆ ವಿರೋಧವಾಗು

CC-0. Jangamwadi Math Collection. Digitized by eGangotri

ವುದು. ಅನೇಕ ಶ್ರುತಿಗಳು ಪ್ರಪಂಚಕ್ಕೆ ಅನಾದಿತ್ವವನ್ನು ಹೇಳದೆ ಸಾದಿತ್ವ (ಉತ್ಪತ್ತಿ) ವನ್ನು ಹೇಳುತ್ತವೆ. ಶ್ರುತಿಗಳು ಬ್ರಹ್ಮ ಪ್ರಪಂಚಗಳಿಗೆ ಕಾರ್ಯಕಾರಣ ಭಾವವನ್ನು ಹೇಳುತ್ತವೆ. ಕಾರ್ಯಕ್ಕಿಂತಲೂ ಕಾರಣವು ಪೂರ್ವಭಾವಿಯಾಗಿಯೂ ಕಾರ್ಯವು ಉತ್ತರಭಾವಿಯಾಗಿಯೂ ಇರುವುದು ಲೋಕಾನುಭವ ಸಿದ್ಧವಾದ ನಿಯಮವೇ ಆಗಿರುವುದು. ಕಾರ್ಯವೆನಿಸಿದ ಪ್ರಪಂಚಕ್ಕೂ ಕಾರಣವೆನಿಸಿರುವ ಬ್ರಹ್ಮಕ್ಕೂ ಪೌರ್ವಾಪರ್ಯ ನಿಯಮಕ್ಕೆ ಭಂಗಪ್ರಸಂಗ ಬರುವದಾದಕಾರಣ ಪ್ರಪಂಚಕ್ಕೆ ಅನಾದಿಯೆಂದು ಹೇಳಕೂಡದು.

ಶಂಕೆ :—ಯಾವುದು ದೃಶ್ಯವಾಗಿರುವುದೋ ಅದು ಮಿಥ್ಯೆಯಾಗಿರುವುದು. ಪ್ರಪಂಚವು ದೃಶ್ಯವಾದ್ದರಿಂದದು ಪ್ರಪಂಚಕ್ಕೆ ಅನಾದಿಯೆಂದು ಹೇಳಕೂಡದು.

ಸಮಾಧಾನ :—ಬ್ರಹ್ಮವೂ ಕೂಡ ಮಿಥ್ಯೆಯನಿಸಬೇಕಾಗುವುದು. ಅದೂ ಕೂಡ ದೃಶ್ಯವಾಗಿರುವುದು. ಬ್ರಹ್ಮಕ್ಕೆ ದೃಶ್ಯತ್ವವನ್ನಂಗೀಕರಿಸದಿದ್ದರೆ ಲೋಕದಲ್ಲಿ ಯಾರಿಗೂ ಬ್ರಹ್ಮಾನುಭವವೇ ಆಗದೇ ಹೋಗಬೇಕು. ನಿಮ್ಮ ಆಚಾರ್ಯರೂ ಕೂಡ ನಾನು ಎಂಬ ಜ್ಞಾನಕ್ಕೆ ವಿಷಯವಾಗಿರುವುದರಿಂದ ಅಪರೋಕ್ಷ ವಿಷಯವಾಗಿರುವತನದಿಂದ ಪ್ರತ್ಯಗಾತ್ಮ ಪ್ರಸಿದ್ಧಿಯನ್ನು ಒಪ್ಪಿಕೊಂಡಿರುವರು. ಇವರ ಭಾಷ್ಯಕ್ಕೂ ವಿರೋಧವಾಗುವುದು. ಅಹಂ (ನಾನು) ಎಂಬ ಪ್ರತ್ಯಯಕ್ಕೆ ಬ್ರಹ್ಮವು ವಿಷಯವೇ ಅಲ್ಲ. ಕಿಂತು ಜೀವಾತ್ಮನು ವಿಷಯವೆಂದರೆ ಜೀವ ಬ್ರಹ್ಮರಿಗೆ ಭೇದವನ್ನು ಒಪ್ಪಿಕೊಳ್ಳಬೇಕಾಗುವುದು. ಹೀಗೆ ಭೇದವನ್ನು ಒಪ್ಪಿಕೊಳ್ಳುವುದಾದರೆ "ಜೀವೋ ಬ್ರಹ್ಮೈವ ನಾಪರಃ"ಎಂಬ ನಿಮ್ಮವರ ವಾಕ್ಯಕ್ಕೆ ವಿರೋಧವಾಗುವುದು. "ಕಶ್ಚಿದ್ಧೀರಃ ಪ್ರತ್ಯಗಾತ್ಮಾನ ಮೈಕ್ಷತ್ (ಕಠ. ೨–೧–೧) "ತರತಿ ಶೋಕಮಾತ್ಮವಿತ್" (ಛಾಂ ೭-೧-೩) "ಆತ್ಮಾ ವಾ ಅರೇ ದ್ರಷ್ಟವ್ಯಃ" (ಬೃ ಹ. ೪–೪–೫) "ದೃಶ್ಯತೇತ್ವಗ್ರ್ಯಯಾ ಬುದ್ಧ್ಯಾ" (ಕಠ. ೧–೩–೧೨) "ಪಶ್ಯಮೇ ಯೋಗ ಮೈಶ್ವರಂ" (ಗೀತಾ ೯–೫) "ಶಿವಾತ್ಮಕಮಿದಂ ಸರ್ವಂ ಸದಾ ಪಶ್ಯಂತಿ ಸೂರಯಃ" ಇತ್ಯಾದ್ಯನಂತ ಶ್ರುತಿಗಳೂ, ಸ್ಮೃತಿಗಳೂ ಪುರಾಣಗಳೂ ಬ್ರಹ್ಮಕ್ಕೆ ದೃಶ್ಯತ್ವವನ್ನು ಘಂಟಾ ಘೋಷವಾಗಿ ಪ್ರತಿಪಾದಿಸುತ್ತವೆ. ಆದುದರಿಂದ ದೃಶ್ಯವಾದುದೆಲ್ಲವೂ ಮಿಥ್ಯೆಯಾಗಿರಲಾರದು. ಲೌಕಿಕ ವೈದಿಕ ವ್ಯವಹಾರಗಳೆಲ್ಲವೂ ಅವಿದ್ಯಾತ್ಮಕಗಳಾಗಿರುವುದರಿಂದ ಆ ಅವಿದ್ಯಾ (ಭ್ರಾಂತಿ) ಕೃತವಾದ ವ್ಯಾವಹಾರಿಕವಾದ ದೃಶ್ಯತ್ವವೂ ಬ್ರಹ್ಮದಲ್ಲಿರುವುದಿಲ್ಲ. ಇದಕ್ಕೆ ಕಾರಣವಾದ ಅವಿದ್ಯೆಯೂ ಬ್ರಹ್ಮದಲ್ಲಿರುವುದೆಂದರೆ ಆ ಅವಿದ್ಯೆಗೆ ಬ್ರಹ್ಮವೇ ಅಧಿಷ್ಠಾನವಾಗಿರುವುದೆಂದರೆ ಬ್ರಹ್ಮವು ಅವಿದ್ಯಾರೂಪ ದೋಷವುಳ್ಳದ್ದಾಗಿ ದುಷ್ಟವೆನಿಸಬೇಕಾಗುವುದು. ಆ ಅವಿದ್ಯೆ ಎಂಬ ದೋಷಕ್ಕೆ ಬ್ರಹ್ಮವು ಅಧಿಷ್ಠಾನವೇ ಅಲ್ಲವೆಂದರೆ ನಿರಧಿಷ್ಠಾನ ಭ್ರಮ ಪ್ರಸಂಗವು ಬರುವುದು. ಭ್ರಮವು ಅಧಿಷ್ಠಾನರಹಿತ

CC-0. Jangamwadi Math Collection. Digitized by eGangotri

ವಾಗಿರಲಾರದು. ಇರುತ್ತದೆಂದರೆ ಅದೂ ಕೂಡ ಸ್ವತಂತ್ರವಾಗಿ ಸತ್ತಾವುಳ್ಳದ್ದಾಗ ಬೇಕು. ಹೀಗೆ ಅವಿದ್ಯೆಗೆ ಸ್ವತಂತ್ರ ಸತ್ತೆಯನ್ನು ಮಾನಿಸಿದರೆ ಅದ್ವೈತಕ್ಕೆ ಹಾನಿಯೇ ಪ್ರಾಪ್ತವಾಗುವುದು.

ಶಂಕಾ :—ಆದುದರಿಂದ ಅಧ್ಯಾಸವು ಉಪಪನ್ನವಾಗುವುದಿಲ್ಲ. "ಮಾಯಾ ಭಾಸೇನ ಜೀವೇಶೌ ಕರೋತಿ" ಎಂಬ ಕಲ್ಪಿತ ಶ್ರುತಿಯಿಂದ ಜಗತ್ತಿಗೆ ಮಿಥ್ಯಾತ್ವವು ಯುಕ್ತವಾಗುತ್ತದೆಂದು ಹೇಳಲವಕಾಶವಿಲ್ಲ.

ಸಮಾಧಾನ :—ಏಕೆಂದರೆ "ಜ್ಞಾ ಜ್ಞೌ ದ್ವಾವಜಾವೀಶಾನೀಶೌ (ಶ್ವೇ. ೧-೯) "ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ" (ಗೀತಾ. ೧೫-೭) ಇತ್ಯಾದಿ ಶ್ರುತಿ ಸ್ಮೃತಿಗಳಿಗೆ ವಿರೋಧವಾಗುವುದು. ನೀವು ಆ ಕಲ್ಪಿತ ಶ್ರುತಿಯಿಂದ ಮಾಯೆಯೇ ಜೀವೇಶ್ವರರನ್ನು ಹುಟ್ಟಿಸುತ್ತದೆಂದು ಹೇಳುವುದಾದರೆ ಜೀವೇಶರು "ಅಜೌ" ಹುಟ್ಟಿಲ್ಲದವರೆಂದು ಹೇಳುವ ಶ್ರುತಿಗೂ "ಸನಾತನಃ" ಜೀವನು ನಿತ್ಯನು ಎಂದು ಹೇಳುವ ಸ್ಮೃತಿಗೂ ವಿರೋಧವಾಗುವುದು. ಇದಲ್ಲದೆ ಅಚೇತನವಾದ ಮಾಯೆ (ಪ್ರಧಾನ) ಯು ಚೇತನ ಜೀವೇಶ್ವರರನ್ನುಂಟುಮಾಡಲಾರದು. ಬಲಾತ್ಕಾರ ದಿಂದ ಉಂಟುಮಾಡುವುದೆಂದರೆ "ಅಂತವತ್ವಮಸರ್ವಜ್ಞತಾವಾ" (ಬ್ರ. ಸೂ. ೨-೨-೪೧) ಎಂಬ ಸೂತ್ರಕ್ಕೂ ವಿರೋಧವಾಗುವುದು. ಜೀವೇಶ್ವರರು ಮಾಯಾಜನ್ಯ ರೆಂದರೆ ಜೀವೇಶ್ವರರಿಗೆ ನಾಶವೂ ಹಾಗೂ ಈಶ್ವರನಿಗೆ ಅಸರ್ವಜ್ಞತ್ವವೂ ಪ್ರಾಪ್ತವಾಗ ಬೇಕು. ಆಗಲಿ ಬಾಧಕವೇನು ? ಅಂದರೆ ಕೃತನಾಶಾಕೃತಾಭ್ಯಾಗಮ ದೋಷವು ಬರುವುದು. ಜೀವನ ಕರ್ಮಗಳಿಗೆ ತಕ್ಕ ಫಲವನ್ನು ಕೊಡುವ ಒಬ್ಬ ಸರ್ವಜ್ಞೇಶ್ವರನೇ ಇಲ್ಲವಾದ ಪ್ರಯುಕ್ತ ಜೀವಕೃತ ಕರ್ಮಗಳಿಗೆ ಫಲವಿಲ್ಲದೆ ಜೀವನಿಂದ ಅಕೃತ ಕರ್ಮ ಗಳ ಫಲಪ್ರಾಪ್ತಿಯಾಗಬೇಕು. ಆದ್ದರಿಂದ ಮಾಯಾ (ಪ್ರಧಾನ) ಜಗತ್ಕಾರಣವಲ್ಲ.

ಶಂಕಾ :—ಪರಮೇಶ್ವರ ಸತ್ತಾವಶದಿಂದ ಪ್ರಧಾನವೇ ಜಗತ್ಕಾರಣವೆಂದು ಹೇಳಲು ಅವಕಾಶವಿಲ್ಲ.

ಸಮಾಧಾನ :—ಏಕೆಂದರೆ ಈಕ್ಷತ್ಯಧಿಕರಣದಲ್ಲಿ ಪ್ರಧಾನಕ್ಕೆ ಜಗತ್ಕಾರಣತ್ವವು ಖಂಡಿಸಲ್ಪಟ್ಟಿರುವುದಷ್ಟೆ !

ಇದಲ್ಲದೆ ಜಗತ್ತು ಮಿಥ್ಯೆಯೆನ್ನುವ ನೀವು ಮಿಥ್ಯಾತ್ವವೆಂದರೇನೆಂದು ಅರ್ಥ ಮಾಡುವಿರಿ ? ಅಸತ್ಯವೋ ? ಅನಿರ್ವಚನೀಯತ್ವವೋ ? ಅಥವಾ ಬಾಧ್ಯತ್ವವೋ ? ಅಸತ್ಯವೆಂದರೆ ಜಗದಂತಃಪಾತಿಯಾದ ವೇದವೂ ಕೂಡ ಅಸತ್ಯ (ಅಪ್ರಮಾಣ)

CC-0. Jangamwadi Math Collection. Digitized by eGangotri

ವೆನಿಸಬೇಕಾಗುವುದು. ಅನಿರ್ವಚನೀಯವೆಂದರೆ ಜಗದ್ವ್ಯವಹಾರವೇ ನಿಂತುಹೋಗಿ ಮೌನವೂ ಮೂಕವೂ ಆಗಬೇಕು. ಇನ್ನು ಬಾಧ್ಯತ್ವವೆಂದರೇನು ? ತ್ರೈಕಾಲಿಕ ನಿಷೇಧ ಪ್ರತಿಯೋಗಿತ್ವವೋ ? ಅಥವಾ ಜ್ಞಾನ ನಿವರ್ತ್ಯತ್ವವೋ? ಭೂತ, ಭವಿಷ್ಯತ್ ವರ್ತಮಾನ ಕಾಲಗಳಲ್ಲಿ ಜಗತ್ತಿಲ್ಲವೆಂದು ಹೇಳಲಾಗುವುದಿಲ್ಲ. ಪ್ರಪಂಚವು ಸೃಷ್ಟಿಗೆ ಮೊದಲು ಸೂಕ್ಷ್ಮರೂಪವಾಗಿದ್ದುದೇ ಸ್ಥೂಲಾಕಾರದಿಂದ ಬಹಿರಾವಿರ್ಭವಿಸಿರುವುದರಿಂದ ಭೂತಕಾಲದಲ್ಲಿ ಜಗತ್ತಿದ್ದಿಲ್ಲವೆಂದು ಜಗತ್ತಿಗೆ ಭೂತಕಾಲದಲ್ಲಿ ನಿಷೇಧವಿಲ್ಲ. ಅರ್ಥಸಿದ್ಧಿ ಕ್ರಿಯಾಸಿದ್ಧಿಗಳು ತೋರುವುದರಿಂದಲೂ ಈ ಕಾಲದಲ್ಲಿ ಅನುಭವಿಸಲ್ಪಡುವುದರಿಂದಲೂ ವರ್ತಮಾನಕಾಲದಲ್ಲಿ ಜಗತ್ತಿಗೆ ನಿಷೇಧವಿಲ್ಲ. ಸಂಕೋಚ ರೂಪದಿಂದ ವೇದರಾಶಿಯು ಪ್ರಲಯದಲ್ಲಿ ಪರಮೇಶ್ವರನಲ್ಲಿರುವುದರಿಂದ ಭವಿಷತ್ಕಾಲದಲ್ಲಿಯೂ ಜಗತ್ತಿಗೆ ನಿಷೇಧವಿಲ್ಲ. ಇನ್ನು ಜ್ಞಾನ ನಿವರ್ತ್ಯತ್ವವೆಂಬ ಮಿಥ್ಯಾತ್ವವನ್ನಾದರೂ ಪ್ರಪಂಚಕ್ಕೆ ಹೇಳಲಾಗುವುದಿಲ್ಲ. ಏಕೆಂದರೆ ತತ್ವಜ್ಞಾನಿಗಳಲ್ಲಿಯೂ ಪೂರ್ವದಂತೆ ಪ್ರಪಂಚವು ತೋರುತ್ತಲೇ ಇರುವುದಲ್ಲದೆ ಆ ತತ್ವಜ್ಞಾನಿಗಳಿಗೂಕೂಡ ಕ್ಷುತ್ಪಿಪಾಸಾದಿಗಳು ಕಂಡುಬರುವವಷ್ಟೆ ? ಆ ಜ್ಞಾನಿಗಳಾದ ಜೀವನ್ಮುಕ್ತರಲ್ಲಿ ದಗ್ಧಪಟದಂತೆ ದೇಹೇಂದ್ರಿಯಾದಿಗಳೂ, ಕ್ಷುತ್ಪಿಪಾಸಾದಿಗಳೂ ಕಂಡುಬರುವವಲ್ಲದೆ ಅವು ಅವರಲ್ಲಿ ವಾಸ್ತವವಾಗಿರುವುದಿಲ್ಲ. ಹೇಗೆಂದರೆ ಮರುಮರೀಚಿಕೆಯಲ್ಲಿ ಜಲಭ್ರಾಂತಿಯು ನಾಶವಾದರೂ ಪುನಃ ನೋಡಲು ಜಲದ ತೋರಿಕೆಯುಂಟಷ್ಟೆ ! ಇದರಂತೆ ದಗ್ಧಪಟವೂ ಕೂಡ ಪಟದಂತೆ ತೋರಿಯೇ ತೋರುವುದು. ಇದರಂತೆ ಜ್ಞಾನಿಗಳಲ್ಲಿ ಭೇದಜ್ಞಾನವು ನಷ್ಟವಾದರೂ ಪುನಃ ದೇಹೇಂದ್ರಿಯಾದಿಗಳ ಹಾಗೂ ಕ್ಷುತ್ಪಿಪಾಸಾದಿಗಳ ಭೇದಜ್ಞಾನಸಂಬಂಧವಿದ್ದುಕೊಳ್ಳಲಿ ಅದರಿಂದ ಬಾಧಕವಿಲ್ಲೆಂದೆನ್ನಕೂಡದು. ಏಕೆಂದರೆ ಮರುಮರೀಚಿಕೆಯು ಜಲದಂತೆ ಮತ್ತೆ ತೋರಿದರೂ ಅದರಲ್ಲಿ ಪಿಪಾಸಾಶಾಂತ್ಯಾದಿ ಧರ್ಮಗಳಿಲ್ಲ. ದಗ್ಧಪಟವು ಪಟದಂತೆ ತೋರಿದರೂ ಅದರಲ್ಲಿ ಶೀತನಿವಾರಣಕ್ರಿಯೆಯಿಲ್ಲ. ಇದರಂತೆ ಜೀವನ್ಮುಕ್ತರಲ್ಲಿ ಭೇದಜ್ಞಾನವು ನಷ್ಟವಾದರೂ ಅವರಲ್ಲಿ ಶರೀರಕಂಪನ ಕ್ಷುತ್ಪಿಪಾಸಾದಿಕ್ರಿಯೆಗಳಿಲ್ಲದೆ ಹೋಗಬೇಕು. ದಂಡನಾಶವಾದರೂ ತಜ್ಜನ್ಯಭ್ರಮಣವಿರುವಂತೆ ಅವಿದ್ಯಾನಾಶವಾದರೂ ತಜ್ಜನ್ಯಪ್ರಾರಬ್ಧವಿರುವತನಕ ಶರೀರಕ್ರಿಯೆಗಳಿರುವುವೆಂದು ಹೇಳಲಿಕ್ಕೂ ಅವಕಾಶವಿಲ್ಲ. ಏಕೆಂದರೆ ತಂತುಗಳು ನಷ್ಟವಾದರೆ ತತ್ಕಾರ್ಯಪಟವಿಲ್ಲದಿರುವಂತೆ ಅವಿದ್ಯೆಯೆಂಬ ಉಪಾದಾನಕಾರಣ ನಾಶವಾಗಲು ತತ್ಕಾರ್ಯರೂಪ ಪ್ರಾರಬ್ಧಾದಿಗಳಿರಲಾರವಷ್ಟೆ. ಆದ್ದರಿಂದ ದಂಡಭ್ರಮಣ ದೃಷ್ಟಾಂತವು ಸಂಗತವಾಗುವುದಿಲ್ಲ. ತಂತುಪಟಗಳಂತೆ ಅವಿದ್ಯೆಗೂ ಪ್ರಾರಬ್ಧಕರ್ಮಾದಿಗಳಿಗೂ ಉಪಾದಾನೋಪಾದೇಯ ಭಾವವಿರುವುದು. ದಂಡಭ್ರಮಣಗಳಿಗೆ ಉಪಾದಾನೋಪಾದೇಯ ಭಾವವಿಲ್ಲ. ಆದ್ದರಿಂದ ಮಾಯಾದಿಗಳಿಗೆ ಜಗತ್ಕಾರಣತ್ವವನ್ನು ಹೇಳುವ ಈ ಮಿಥ್ಯಾಮಾಯಾದಿಗಳ ಮತವು ವೈದಿಕವಲ್ಲ. ಆದ್ದರಿಂದಲೇ ದುರ್ವಾಸೀಯುವೆಂಬ ಗ್ರಂಥದಲ್ಲಿ "ಅನಾದ್ಯವಿದ್ಯಯಾ ಬದ್ಧಂ" ಇತ್ಯಾದಿ ಭಾಷ್ಯೋದಾ

CC-0. Jangamwadi Math Collection. Digitized by eGangotri

ಹೃತಗಳಾದ ಶ್ಲೋಕಗಳಿಂದ ಈ ಅದ್ವೈತಶಾಸ್ತ್ರವು ವಂಚಕಶಾಸ್ತ್ರವೆಂದೂ ಶಿವ ಭಕ್ತರು ಅದನ್ನು ಆಚರಿಸಕೂಡದೆಂದೂ ಶ್ರುತಿ-ಸ್ಮೃತಿ ವಿರುದ್ಧವೆಂದೂ ಮೊದಲಾಗಿ ಹೇಳಲ್ಪಟ್ಟಿರುವುದಲ್ಲದೆ ವೈದಿಕಸಿದ್ಧಾಂತವಲ್ಲವೆಂದು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿರುವುದು.

ಪ್ರತಿಬಿಂಬವಾದಖಂಡನ

ಭಾಷ್ಯಕಾರರು ಇನ್ನುಮೇಲೆ ಪ್ರತಿಬಿಂಬವಾದವನ್ನು "ಅವಿದ್ಯಾ ಮಾಯಾ ಪ್ರತಿಬಿಂಬಿತಜೀವೇಶ್ವರವಾದೋ ನ ಯುಕ್ತಃ" ಎಂದು ಖಂಡಿಸಲುದ್ಯುಕ್ತರಾಗಿರುವರು. ಹೇಗೆಂದರೆ 'ನಾನು' ಎಂಬ ಪ್ರತೀತಿಗೆ ವಿಷಯವಾದ ಜೀವನಿಗೆ ಅವಿದ್ಯೆಯಲ್ಲಿ ಬ್ರಹ್ಮ ಪ್ರತಿಬಿಂಬವೆಂದು ಹೇಳುವಿರೋ? ಅಥವಾ ಅಂತಃಕರಣದಲ್ಲಿ ಪ್ರತಿಬಿಂಬವೆಂದು ಹೇಳುವಿರೋ? ಅವಿದ್ಯಾವಚ್ಛಿನ್ನಚೈತನ್ಯವೆಂದು ಹೇಳುವಿರೊ? ಅಥವಾ ಅಂತಃಕರಣಾವಚ್ಛಿನ್ನಚೈತನ್ಯವೆಂದು ಹೇಳುವಿರೋ? ಎಂದು ಜೀವಸ್ವರೂಪದಲ್ಲಿ ನಾಲ್ಕು ವಿಕಲ್ಪಗಳನ್ನು ಮಾಡಿಕೊಂಡು ಈಶ್ವರಸ್ವರೂಪ ವಿಷಯದಲ್ಲಿ ಮಾಯೆಯಲ್ಲಿ ಬ್ರಹ್ಮಪ್ರತಿಬಿಂಬಕ್ಕೆ ಈಶ್ವರನೆಂದು ಹೇಳುವಿರೊ? ಅಥವಾ ಮಾಯಾವಚ್ಛಿನ್ನ ಚೈತನ್ಯಕ್ಕೆ ಈಶ್ವರನೆಂದು ಹೇಳುವಿರೋ? ಎಂದು ಎರಡು ವಿಕಲ್ಪಗಳನ್ನು ಮಾಡಿಕೊಂಡು ಆ ಜೀವೇಶ್ವರರಿಬ್ಬರಿಗೂ ಸ್ವಾಭಾವಿಕತ್ವವನ್ನು ಹೇಳುವಿರೋ? ಅಥವಾ ಔಪಾಧಿಕತ್ವವನ್ನು ಹೇಳುವಿರೋ? ಎಂದು ಎರಡು ವಿಕಲ್ಪಗಳನ್ನು ಮಾಡಿಕೊಂಡಿರುವುದಲ್ಲದೆ ಆ ಜೀವೇಶ್ವರರ ಉಪಾಧಿಯು ಮಾಯೆಯೋ? ಅವಿದ್ಯೆಯೊ? ಅಂತಃಕರಣವೊ? ಎಂದು ಮೂರು ವಿಕಲ್ಪಗಳನ್ನು ಮಾಡಿಕೊಂಡು ಖಂಡಿಸುತ್ತಿರುವರು. ಯಾವುದೇ ಉಪಾಧಿಯಾಗಲಿ ಅದು ಸ್ಥೂಲವಾಗಿರದೆ ಸೂಕ್ಷ್ಮವಾಗಿರಬೇಕಾಗುವುದು. ಏಕೆಂದರೆ ಸ್ಥೂಲೋಪಾಧಿಯುಳ್ಳವರಿಗೆ ಪರಲೋಕ ಗಮನಾಗಮನಗಳು ಯುಕ್ತಗಳಾಗುವುದಿಲ್ಲವಷ್ಟೆ. ಆದುದರಿಂದ "ಕಾರ್ಯೋಪಾಧಿರಯಂ ಜೀವಃ ಕಾರಣೋಪಾಧಿರೀಶ್ವರಃ" ಎಂಬ ಅದ್ವೈತಿಗಳ ಉಕ್ತಿಯು ಅಯುಕ್ತವಾಗಿದೆ. ಏಕೆಂದರೆ ಕಾರ್ಯ (ಸ್ಥೂಲ) ಉಪಾಧಿಯುಳ್ಳ ಜೀವನಿಗೆ ಪರಲೋಕ ಗಮನಾಗಮನಗಳು ಉಪಪನ್ನಗಳಾಗುವುದಿಲ್ಲವಷ್ಟೆ. ಮಾಯೆಯಲ್ಲಿಯಾಗಲಿ ಅಥವಾ ಅವಿದ್ಯೆಯಲ್ಲಿಯಾಗಲಿ ಅಥವಾ ಅಂತಃಕರಣದಲ್ಲಿಯಾಗಲಿ ಬ್ರಹ್ಮವು ರೂಪರಹಿತವಾಗಿರುವದರಿಂದ ಪ್ರತಿಬಿಂಬವು ಸಂಭವಿಸುವುದಿಲ್ಲ. ಇದಲ್ಲದೆ ಮಾಯಾವಿದ್ಯಾದಿಗಳು ಇದ್ದರಲ್ಲವೆ ಅವುಗಳಲ್ಲಿ ಪ್ರತಿಬಿಂಬವು ಸಂಭವಿಸಬೇಕು. ಮಾಯಾವಿದ್ಯಾದಿಗಳು ಗಗನ ಪುಷ್ಪದಂತೆ ಅಸತ್ ಪದಾರ್ಥಗಳಾಗಿರುವುದರಿಂದ ಅವುಗಳಲ್ಲಿ ಬ್ರಹ್ಮ ಪ್ರತಿಬಿಂಬವನ್ನು ಹೇಳುವುದು ಹಾಸ್ಯಾಸ್ಪದವಾಗುತ್ತದೆ.

ಜಲದಲ್ಲಿ ರೂಪರಹಿತವಾದ ಆಕಾಶದ ಪ್ರತಿಬಿಂಬದಂತೆ ನೀರೂಪವಾದ ಬ್ರಹ್ಮದ

CC-0. Jangamwadi Math Collection. Digitized by eGangotri

ಪ್ರತಿಬಿಂಬವನ್ನು ಹೇಳುತ್ತೇವೆಂದರೆ "ದೃಷ್ಟಾನುಸಾರಿಣೀ ಕಲ್ಪನಾ" ಎಂಬ ನ್ಯಾಯದಂತೆ ರೂಪರಹಿತವಾದ ಆಕಾಶಕ್ಕೆ ಪ್ರತಿಬಿಂಬವೇ ಸಂಭವಿಸುವುದಿಲ್ಲವೆಂದಮೇಲೆ ಆಕಾಶ ಪ್ರತಿಬಿಂಬ ದೃಷ್ಟಾಂತವು ಸಂಗತವಾಗುವುದಿಲ್ಲ. ಜಲದಲ್ಲಿ ಆಕಾಶ ಪ್ರತಿಬಿಂಬದ ಪ್ರತೀತಿಯು ಅಯಥಾರ್ಥವಲ್ಲದೆ ಯಥಾರ್ಥವಲ್ಲ. ಜಲದಲ್ಲಿ ಆ ತೋರಿಕೆಯು ಸೂರ್ಯಾದಿಗಳ ಪ್ರತಿಬಿಂಬದ ತೋರಿಕೆಯೇ ಹೊರ್ತು ಆಕಾಶ ಪ್ರತಿಬಿಂಬದ ತೋರಿಕೆಯಲ್ಲ. ರೂಪರಹಿತವಾದ ಆಕಾಶ ಪ್ರತಿಬಿಂಬದ ತೋರಿಕೆಯೇ ಎಂದೆನ್ನುವುದಾದರೆ ರೂಪರಹಿತವಾದ ವಾಯುವಿಗೆ ಪ್ರತಿಬಿಂಬವನ್ನು ಹೇಳಬೇಕಾಗುವುದು. ಆದ್ದರಿಂದ ರೂಪರಹಿತವಾದ ಆಕಾಶ ಪ್ರತಿಬಿಂಬದ ದೃಷ್ಟಾಂತವು ಯುಕ್ತವಾಗುವುದಿಲ್ಲ. ಇದಲ್ಲದೆ ಯಾವುದು ಎಲ್ಲಿರುವುದೋ ಅದು ಅಲ್ಲಿ ಪ್ರತಿಬಿಂಬಿಸುವುದಿಲ್ಲ. ದರ್ಪಣರೇಖೆಯು ದರ್ಪಣದಲ್ಲಿ ಪ್ರತಿಬಿಂಬಿಸುವುದಿಲ್ಲವಾದ್ದರಿಂದ ಮಾಯೆಯಲ್ಲಿರುವ ಬ್ರಹ್ಮವು ಆ ಮಾಯೆಯಲ್ಲಿ ಪ್ರತಿಬಿಂಬಿಸಲಾರದು. ಮಾಯಾ ಬ್ರಹ್ಮಗಳೆರಡೂ ನಿತ್ಯ ಸಂಯುಕ್ತಗಳಾಗಿರುವ ಕಾರಣ ಅವುಗಳು ಒಂದರಲ್ಲೊಂದು ಇಲ್ಲದಿರುವುದರಿಂದ ಅವುಗಳಿಗೆ ಬಿಂಬಪ್ರತಿಬಿಂಬ ಭಾವವು ಯುಕ್ತವಾಗಿದೆಯೆಂದು ಹೇಳಕೂಡದು. ದರ್ಪಣ ಸಂಯುಕ್ತವಾಗಿರುವ ಪ್ರಭಾಮಂಡಲದ ಪ್ರತಿಬಿಂಬವು ಆ ದರ್ಪಣದಲ್ಲಿ ಕಂಡು ಬರುವುದಷ್ಟೆ !

"ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ" (ಕಠ. ೧-೩-೧) ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್" (ಬ್ರ. ಸೂ. ೧-೨-೧೧) ಇತ್ಯಾದಿ ಶ್ರುತಿ ಸೂತ್ರಗಳಿಂದ ಜೀವೇಶ್ವರರಿಗೆ ಏಕತ್ರಸ್ಥಿತಿಯು ಸಂಭವಿಸುವುದಿಲ್ಲವಾದ್ದರಿಂದಲೂ ಲೋಕಾನುಭವ ವಿರುದ್ಧವಾಗಿರುವುದರಿಂದಲೂ ಈಶ್ವರ ಜೀವರುಗಳಿಗೆ ಬಿಂಬ ಪ್ರತಿಬಿಂಬ ಭಾವವು ಹೇಳುವುದು ಅಯುಕ್ತವಾಗಿದೆ. ಮಾಯೆ ಹಾಗೂ ಅವಿದ್ಯಾ ಇವುಗಳಲ್ಲಿ ಬ್ರಹ್ಮದ ಪ್ರತಿಬಿಂಬಗಳು ಈಶ್ವರ ಮತ್ತು ಜೀವರೆಂದು ಹೇಳುವವರು ಮಾಯಾವಿದ್ಯಾರೂಪಗಳಾದ ಉಪಾಧಿಗಳ ನಾಶವೇ ಆ ಜೀವೇಶ್ವರರ ಮೋಕ್ಷವೆಂದು ಹೇಳಬೇಕಲ್ಲದೆ ಹೀಗೆ ಹೇಳಿದರೆ ಆ ಜೀವೇಶ್ವರರ ನಾಶವೇ ಮೋಕ್ಷವೆಂದಂತಾಗುವುದು. ಆಗ ಪಾಷಂಡ ಬೌದ್ಧಮತ ಪ್ರವೇಶವಾಗುವುದಲ್ಲದೆ "ಆತ್ಮಹನನಮಪುರುಷಾರ್ಥಃ" ಎಂಬಂತೆ ಮೋಕ್ಷಕ್ಕೆ ಅಪುರುಷಾರ್ಥವೆಂದು ಹೇಳಬೇಕಾಗುವುದು. ಜೀವೇಶ್ವರರಿಬ್ಬರೂ ಮಿಥ್ಯಾಭೂತರೇ ಆಗಬೇಕಾಗುವುದು. ಹೀಗೆ ಇವರಿಬ್ಬರೂ ಅಸತ್ಯ (ಸುಳ್ಳು) ರಾದರೆ ಪಾರಲೌಕಿಕ ಪ್ರಯತ್ನವನ್ನು ಯಾರು ಮಾಡಬೇಕು ? ಯಾರೂ ಮಾಡಬಾರದಾದೀತು. ಮುಮುಕ್ಷುವು ಮೋಕ್ಷಕ್ಕಾಗಿ ಯತ್ನವನ್ನೇ ಮಾಡಬಾರದಾದೀತು. ಸರ್ವರಿಗೂ ಐಹಿಕಪ್ರವೃತ್ತಿಯೇ ಉಂಟಾಗಿ ನಿವೃತ್ತಿಮಾರ್ಗದಲ್ಲಿ ಯಾರೂ ಪ್ರವರ್ತಿಸಬಾರದಾದೀತು. ಸರ್ವರಿಗೂ ವಿಹಿತ ನಿಷಿದ್ಧ ಕರ್ಮಗಳಲ್ಲಿ ವ್ಯತ್ಯಾಸವಿಲ್ಲವಾಗಿ ಸನ್ಮಾರ್ಗೋಚ್ಛೇದವೇ ಆಗಬೇಕು. ಜೀವನು ಪ್ರತಿಬಿಂಬಸ್ವರೂಪನಾದುದರಿಂದ ಅಸತ್ಯನಾಗಿ

CC-0. Jangamwadi Math Collection. Digitized by eGangotri

ರುವನಾದುದರಿಂದ ಇವನಿಗೆ ತತ್ತ್ವಂ ಪದಾರ್ಥಗಳನ್ನು ನಿರೂಪಿಸಿ ಅಪೇಕ್ಷಿ ರುವನಾದುದರಿಂದ ಶ್ರುತಿಯು "ನ ತತ್ತ್ವಮಸಿ" ಎಂದು ಹೇಳಬೇಕು. ಹೀಗೆ ಶ್ರುತಿಯು ಹೇಳದಿರುವುದ ರಿಂದ ಜೀವನು ಪ್ರತಿಬಿಂಬಸ್ವರೂಪನಲ್ಲ.

ಇದಲ್ಲದೆ ದರ್ಪಣದಲ್ಲಿ ಪ್ರತಿಬಿಂಬಿಸಿದ ಅಗ್ನಿಯಿಂದ ದಾಹಾದಿಕ್ರಿಯೆಗಳಾಗದಿರು ವಂತೆ ಪ್ರತಿಬಿಂಬರೂಪನಾದ ಜೀವನಿಂದ ಯಾವ ಅರ್ಥವಾಗಲಿ ಕ್ರಿಯೆಯಾಗಲಿ ಆಗದೆಹೋಗಬೇಕು. ಇದಲ್ಲದೆ "ಯೋ ವಿಜ್ಞಾನೇ ತಿಷ್ಠನ್" (ಬೃಹ. ೫-೭-೨೨) ಇತ್ಯಾದಿ ಅಂತರ್ಯಾಮಿ ಬ್ರಾಹ್ಮಣ ವಿರೋಧವೂ ಆಗುವುದು. ಹೇಗೆಂದರೆ ವಿಜ್ಞಾನ ಪದ ವಾಚ್ಯನಾದ ಜೀವನಿದ್ದರಲ್ಲವೆ ಅವನಲ್ಲಿದ್ದು ಅವನನ್ನು ಪ್ರೇರೇಪಿಸುವುದು. ಅವನು ಪ್ರತಿಬಿಂಬರೂಪವಾಗಿ ಮಿಥ್ಯೆಯಾಗಿರುವುದರಿಂದ ಅಂತರ್ಯಾಮಿ ಬ್ರಾಹ್ಮಣ ವಾಕ್ಯಗಳಿಗೆ ಸುತರಾಂ ವಿರೋಧವೇ ಆಗುವುದು. ಹಾಗೂ ನಿಖಿಲ ಉಪಾಧಿಗಳಲ್ಲಿ ಬ್ರಹ್ಮಪ್ರತಿಬಿಂಬವು ಏಕರೂಪವಾಗಿರುವುದರಿಂದ ಆ ಪ್ರತಿಬಿಂಬ ರೂಪ ಜೀವರೂ ಕೂಡ ಏಕರೂಪರೇ ಆಗುವರು. ಅಂದಮೇಲೆ ಬಂಧ ಮೋಕ್ಷವ್ಯವಸ್ಥೆಯೇ ಆಗುವುದಿಲ್ಲ. ಅಂದರೆ ಒಬ್ಬ ಜೀವನು ಬದ್ಧನಾದರೆ ಎಲ್ಲ ಜೀವರೂ ಬದ್ಧರೇ ಆಗಬೇಕು. ಹಾಗೂ ಸುಖದುಃಖ ವ್ಯವಸ್ಥೆಯೂ ಆಗುವುದಿಲ್ಲ. ಅಂದರೆ ಒಂದು ವಿಷಯ ಪ್ರಾಪ್ತಿಯಿಂದ ಒಬ್ಬನಿಗೆ ಸುಖವಾದರೆ ಎಲ್ಲರಿಗೂ ಸುಖವಾಗಬೇಕು. ಒಬ್ಬನಿಗೆ ದುಃಖವಾದರೆ ಎಲ್ಲ ರಿಗೂ ದುಃಖವಾಗಬೇಕು. ಆದ್ದರಿಂದ ಪ್ರತಿಬಿಂಬ ವಾದವು ಯುಕ್ತವಲ್ಲ.

ಅವಚ್ಛಿನ್ನವಾದಖಂಡನ

ಭಾಷ್ಯಕಾರರು ಪ್ರತಿಬಿಂಬ ವಾದವನ್ನು ಖಂಡಿಸಿ ಅವಚ್ಛಿನ್ನವಾದವನ್ನು ಖಂಡಿಸಲುದ್ಯುಕ್ತರಾಗಿರುವರು. ಹೇಗೆಂದರೆ ಜಡಾಂತಃಕರಣಾವಚ್ಛಿನ್ನ ಚೈತನ್ಯ ವನ್ನು ಜೀವನೆಂದು ಒಪ್ಪಿದರೆ ಘಟಾಪಟಾವಚ್ಛಿನ್ನ ಚೈತನ್ಯಕ್ಕೂ ಸಹ ಜೀವತ್ವವು ಸಂಭವಿಸುತ್ತದೆ. ಅಂದರೆ ಅಂತಃಕರಣಾವಚ್ಛಿನ್ನ ಚೈತನ್ಯಕ್ಕೆ (ಜೀವನಿಗೆ) ಸುಖ ದುಃಖಾನುಭವವುಂಟೆಂಬುದು ಬೇರೆಯವರಿಗೆ ತಿಳಿದುಬರುವಂತೆ ಘಟಪಟಾವಚ್ಛಿನ್ನ ಚೈತನ್ಯಕ್ಕೂ (ಘಟಪಟಗಳಿಗೂ) ಸುಖದುಃಖಾನುಭವವುಂಟೆಂಬುದು ತಿಳಿದುಬರ ಬೇಕು. ಹೀಗೆ ತಿಳಿದುಬರದೇಇರುವುದರಿಂದ ಅವುಗಳಿಗೆ ಜೀವ ವ್ಯವಹಾರವಿಲ್ಲ. ಆದ್ದರಿಂದ ಅವಚ್ಛಿನ್ನಪಕ್ಷವೂ ಕೂಡ ಪೂರ್ವೋಕ್ತ ದೂಷಣಗಳಿಂದ ಯುಕ್ತವಾಗಿರು ವುದರಿಂದ ಖಂಡಿಸಲ್ಪಟ್ಟಿತು. ಹಾಗಾದರೆ "ಏಕಧಾ ಬಹುಧಾ ಚೈವ ದೃಶ್ಯತೇ ಜಲ ಚಂದ್ರವತ್" (ಬ್ರಹ್ಮಬಿಂದು ೧೨) ಇಂತೆಂಬ ಶ್ರುತಿಯು ಜಲದಲ್ಲಿ ಚಂದ್ರನ ಪ್ರತಿ ಬಿಂಬದಂತೆ ಅಂತಃಕರಣದಲ್ಲಿ ಬ್ರಹ್ಮದ ಪ್ರತಿಬಿಂಬವೇ ಜೀವನೆನಿಸುವನೆಂದು ಏಕೆ ಹೇಳುತ್ತದೆ? ಈ ಶ್ರುತಿಯು ಸಾಧುವಾದುದಲ್ಲವೆಂದೇ ಹೇಳಬೇಕಾಗುತ್ತದೆ. ಏಕೆಂದರೆ ಪೂರ್ವೋಕ್ತ "ಜ್ಞಾಜ್ಞೌ ದ್ವಾವಜಾವೀಶಾನೀಶೌ" ಇತ್ಯಾದಿ ಶ್ರುತಿಗಳು

CC-0. Jangamwadi Math Collection. Digitized by eGangotri

ಬಲಿಷ್ಠಗಳಾಗಿರುವವು. ಅಥವಾ "ನಹಿ ದೃಷ್ಟಾಂತೇ ಸರ್ವಸಂಭವಃ" ಎಂಬ ನ್ಯಾಯವಿರುವುದರಿಂದ ಬ್ರಹ್ಮವು ಸರ್ವವ್ಯಾಪಕವೆಂಬುದರಲ್ಲಿ ಆ ಜಲಚಂದ್ರನ ದೃಷ್ಟಾಂತವೆಂದು ತಿಳಿಯಬೇಕು. ಇನ್ನು "ಮಾಯಾಭಾಸೇನ ಜೀವೇಶೌ ಕರೋತಿ" ಎಂಬ ಶ್ರುತಿಯೂ ಕೂಡ ಪ್ರತಿಬಿಂಬವಾದವನ್ನು ಸಮರ್ಥಿಸುವುದರಿಂದ ಜೀವೇಶ್ವರರು ಕಲ್ಪಿತರೆಂದು ಹೇಳುವುದಿಲ್ಲ. ಯಾಕೆಂದರೆ ಕಲ್ಪಿತರೆಂದು ಹೇಳಿದರೆ "ಜ್ಞಾಜ್ಞಾ ದ್ವಾವಜಾವೀಶಾನೀಶೌ" ಇತ್ಯಾದಿ ಬಹು ಶ್ರುತಿಗಳಿಗೆ ವಿರೋಧವಾಗುವುದು.

"ಮಾಯಾ ಭಾಸೇನ" ಎಂಬ ಶ್ರುತಿಗೆ ಸ್ವಸಿದ್ಧಾಂತಪರತ್ವಸಾಧನ

ಹಾಗಾದರೆ "ಮಾಯಾ ಭಾಸೇನ ಜೀವೇಶೌ ಕರೋತಿ" ಎಂಬ ಶ್ರುತ್ಯರ್ಥವೇನು ? ಅಂದರೆ "ಅಯಪಯ ಗತೌ" ಎಂಬ ಧಾತುವಿಗೆ ಪ್ರಾಪ್ತಿಯೆಂದು ಅರ್ಥವಾಗುವುದರಿಂದ "ಮಂ ಶಿವಂ ಆಯತೀತಿ ಮಾಯಾ" ಎಂಬ ವ್ಯುತ್ಪತ್ತಿಯಿಂದ ಮಾಯಾ ಅಂದರೆ ಪರಶಿವ ಶಕ್ತಿಯೆಂದು ಅರ್ಥವಾಗುತ್ತದಲ್ಲದೆ "ಯಾ ಮಾ ಸಾ ಮಾಯಾ" ಎಂಬುದರಿಂದ ಮಿಥ್ಯಾಭೂತವಾದ ಮಾಯೆಯೆಂದು ಅರ್ಥವಾಗುವುದಿಲ್ಲ. "ಆಭಾಸೇನ" ಅಂದರೆ ಪರಮೇಶ್ವರನ ಸಮಗ್ರ ಪ್ರಕಾಶದಿಂದ ಎಂದು ಅರ್ಥಮಾಡಬೇಕಲ್ಲದೆ ಬ್ರಹ್ಮಪ್ರತಿಬಿಂಬದಿಂದ ಎಂದು ಅರ್ಥಮಾಡಬಾರದು. ಇನ್ನು ಮಕಾರಕ್ಕೆ ಶಿವನೆಂಬರ್ಥದಲ್ಲಿ "ಮಶ್ಶಂಭೌ ಧಾತರಿ ಚಂದ್ರೇ" ಎಂಬ ನಿಘಂಟೂ "ಅಕಾರೋ ಬ್ರಹ್ಮಾ ಉಕಾರೋ ವಿಷ್ಣುರ್ಮಕಾರೋ ರುದ್ರಃ" ಎಂಬ ಶ್ರುತಿಯೂ ಪ್ರಮಾಣಗಳಾಗಿವೆ. ಆದ್ದರಿಂದ ಶಿವಶಕ್ತಿಯು ಜೀವೇಶರನ್ನು ಆವಿರ್ಭಾವಗೊಳಿಸದೆಂಬುದೇ ಆ ಶ್ರುತ್ಯರ್ಥವಾಗಿದೆ. ಹೀಗೆ ಹೇಳದೆ ಪ್ರತಿಬಿಂಬವಾದ ಪರವಾಗಿ ಹೇಳಿದರೆ ಅನೇಕ ಶ್ರುತಿಗಳಿಗೆ ಭಂಗವುಂಟಾಗುವುದು.

ಇನ್ನು ಪೂರ್ವೋಕ್ತ ಸತ್ಯಾನಂದಾದಿಗಳು ಜಗತ್ಕಾರಣಗಳೆನ್ನುವಲ್ಲಿ ಯಾವ ದೋಷವೂ ಇಲ್ಲ. ಅವು ಅಗ್ನಿಯ ಉಷ್ಣ, ಪ್ರಕಾಶಾದಿಗಳಂತೆ ಪರಮೇಶ್ವರನ ಸ್ವರೂಪಗಳೂ, ಪರಮೇಶ್ವರನ ಧರ್ಮರೂಪಗಳೂ ಆಗಿರುವುವು. ಆದ್ದರಿಂದ ಘಟಾದಿಗಳು ಕರ್ತೃಜನ್ಯಗಳಾಗಿರುವಂತೆ ಪ್ರಪಂಚವು ಕರ್ತೃಜನ್ಯವಾಗಿರುವುದೆಂದು ಹೇಳುವಲ್ಲಿ ಬಾಧಕವಿಲ್ಲ.

ಪರಬ್ರಹ್ಮದ ತಟಸ್ಥಲಕ್ಷಣ

ಯದ್ಯಪಿ ಜಗಜ್ಜನ್ಮಾದಿಗಳು ಜಗನ್ನಿಷ್ಠಗಳಾಗಿರುವವು. ಇವು ಬ್ರಹ್ಮದಲ್ಲಿಲ್ಲದಿರುವುದರಿಂದ ಬ್ರಹ್ಮಕ್ಕೆ ಸ್ವರೂಪಲಕ್ಷಣವಲ್ಲವಾದರೂ ಅವನ್ನು ತಟಸ್ಥಲಕ್ಷಣವೆಂದು ಹೇಳಬಹುದು. ಎಂದರೆ ಅನೇಕ ಶ್ರುತಿಗಳು ಬ್ರಹ್ಮವು ಜಗತ್ಕಾರಣವೆಂದು ಉಪದೇಶಿಸುತ್ತಿರುವುವು. ಸ್ವರೂಪಕ್ಕೆ ಭಿನ್ನವಾಗಿ ಚಂದ್ರ ತಾರಾನಕ್ಷತ್ರಾದಿಗಳಿಗೆ ಭೇದಕವೂ

CC-0. Jangamwadi Math Collection. Digitized by eGangotri

ಆಗಿರುವುದು. ಹಾಗೂ ಶಾಖಾಗ್ರವನ್ನು ಬಿಟ್ಟು ಚಂದ್ರನು ದೂರ ಸರಿದರೆ ಶಾಖಾಗ್ರವರ್ತಿತ್ವವು ಚಂದ್ರಸ್ವರೂಪಕ್ಕೆ ಭಿನ್ನವೂ ಆಗಿರುವುದು. ಇದರಂತೆ ಕಾರ್ಯವಿದ್ದಾಗ ಜಗದ್ರೂಪ ಕಾರ್ಯಕಾರಣತ್ವವು ಬ್ರಹ್ಮದಲ್ಲಿ ಬರುವುದು ; ಇಲ್ಲದಾಗ ಇಲ್ಲವಾದ್ದರಿಂದ ಜಗತ್ಕಾರಣತ್ವವು ಬ್ರಹ್ಮಸ್ವರೂಪಕ್ಕೆ ಭಿನ್ನವೂ ಬ್ರಹ್ಮೇತರ ಚತುರ್ಮುಖಾದಿಗಳಿಗೆ ವ್ಯಾವರ್ತಕವೂ ಆಗಿರುವುದು. "ಜನ್ಮಾದ್ಯಸ್ಯ ಯತಃ" ಎಂಬ ಸೂತ್ರದಿಂದ ಜಗಜ್ಜನ್ಮ ಸ್ಥಿತಿ ಲಯ ಕಾರಣತ್ವವು ಬ್ರಹ್ಮ ಲಕ್ಷಣವೆಂದು ಸೂತ್ರಕಾರರು ನಿರೂಪಿಸಿದರಷ್ಟೆ! ಇಲ್ಲಿ ಕೇವಲ ಜಗದುತ್ಪತ್ತಿಕಾರಣತ್ವವು (ಜಗತ್ತಿನ ಜನ್ಮಕ್ಕೆ ಕಾರಣತ್ವವು) ಬ್ರಹ್ಮ ಲಕ್ಷಣವೆಂದು ಹೇಳುವುದು ಲಾಘವವಲ್ಲವೆ ? ಉತ್ಪತ್ತಿ ಸ್ಥಿತಿ ಲಯ ಗ್ರಹಣವೇತಕ್ಕೆ? ಅಂದರೆ ಅಷ್ಟೇ ಹೇಳಿದರೂ ವ್ಯಭಿಚಾರ (ಅತಿ ವ್ಯಾಪ್ತಿ) ದೋಷವಿಲ್ಲವಾದರೂ ಕೇವಲ ಜಗಜ್ಜನ್ಮಕಾರಣತ್ವವು ನಿಮಿತ್ತಕಾರಣದಲ್ಲಿಯೂ ಇರುವುದರಿಂದ ಬ್ರಹ್ಮವು ಕೇವಲ ನಿಮಿತ್ತಕಾರಣವೇ ಎಂದು ತಿಳಿಯಬಹುದು. ಹೀಗೆ ತಿಳಿಯಬಾರದು. ಉಪಾದಾನ ಕಾರಣವೂ ಆಗಿರುವುದೆಂದು ತಿಳಿಯಲಿ ಎಂಬ ಅಭಿಪ್ರಾಯದಿಂದ ಸ್ಥಿತಿ ಲಯ ಗ್ರಹಣ ಮಾಡಿರುವರು. ಕೇವಲ ಲಯ ಗ್ರಹಣದಿಂದಲೇ ಬ್ರಹ್ಮಕ್ಕೆ ಉಪಾದಾನತ್ವದ ಲಾಭವಾಗುತ್ತದಲ್ಲವೆ ? ನಿಮಿತ್ತಕಾರಣದಲ್ಲಿಂತೂ ಯಾವಾಗಲೂ ಲಯವೇ ಸಂಭವಿಸುವುದಿಲ್ಲವೆಂದಮೇಲೆ ಉತ್ಪತ್ತಿ ಸ್ಥಿತಿ ಗ್ರಹಣವೇತಕ್ಕೆ ಅಂದರೆ ಬ್ರಹ್ಮಕ್ಕೆ ಉಪಾದಾನತ್ವವು ಸಕಲ ಧರ್ಮವುಕ್ತತನದಿಂದ ಹೇಳಲ್ಪಡುವುದಿಲ್ಲ ಅಂದರೆ ಉತ್ಪತ್ತಿ ಜನಕತ್ವ, ಲಯ ಜನಕತ್ವ, ಧರ್ಮಗಳಿಂದ ಹೇಳಲ್ಪಡುವುದಿಲ್ಲ. ಕಿಂತು ಪ್ರಕೃತಿ ನ್ಯಾಯದಿಂದ ಹೇಳಲ್ಪಡುತ್ತದೆ. ಹಾಗೂ ಕಾರ್ಯಕಾರಣಗಳ ಅಭೇದಜ್ಞಾನಕ್ಕಾಗಿಯೂ ಹೇಳಲ್ಪಡುವುದಿಲ್ಲ. ಹಾಗಾದರೆ ಲಯಜನಕತ್ವವೇ ಬ್ರಹ್ಮಲಕ್ಷಣವೆಂದು ಹೇಳಿದರೂ ಬ್ರಹ್ಮವು ಜಗದುಪಾದಾನಕಾರಣವೆಂಬುವುದು ಸ್ಪಷ್ಟವಾಗುತ್ತಿದ್ದರೂ ಉತ್ಪತ್ತಿ ಸ್ಥಿತಿ ಗ್ರಹಣವು ವ್ಯರ್ಥವಲ್ಲವೆ?ಅಂದರೆ ಘಟಕ್ಕೆ ಭಿನ್ನನೂ ನಿಮಿತ್ತಕಾರಣನೂ ಆದ ಕುಲಾಲನು ಘಟದ ಉತ್ಪತ್ತಿ ಸ್ಥಿತಿಗಳಿಗೆ ಅಧಿಷ್ಠಾತೃವಾಗಿರುವಂತೆಯೂ ರಾಜ್ಯದ ಉತ್ಪತ್ತಿಸ್ಥಿತಿ (ಪಾಲನ) ಗಳಿಗೆ ಭಿನ್ನವಾದ ರಾಜನು ಅಧಿಷ್ಠಾತೃವಾಗಿರುವಂತೆಯೂ ಜಗದುತ್ಪತ್ತಿ ಸ್ಥಿತಿಗಳಿಗೆ ಜಗತ್ತಿಗೆ ಭಿನ್ನವಾದ ವಸ್ತುವೇ ಅಧಿಷ್ಠಾತೃವೆನಿಸಬೇಕಾಗುವುದಾದ್ದರಿಂದ ಉತ್ಪತ್ತಿಸ್ಥಿತಿಗ್ರಹಣ ಮಾಡಿರುವರು. ಅಂದರೆ ಜಗದುಪಾದಾನ ಕಾರಣವಾದ ಬ್ರಹ್ಮವೇ ಜಗದುತ್ಪತ್ತಿ ಸ್ಥಿತಿಗಳಿಗೂ ಅಧಿಷ್ಠಾತೃವಾಗಿರುವುದೆಂದು ಪ್ರಶಂಸಿಸುವುದಕ್ಕಾಗಿಯೇ ಉತ್ಪತ್ತಿ ಸ್ಥಿತಿ ಗ್ರಹಣವಲ್ಲದೆ ಬ್ರಹ್ಮಕ್ಕೆ ಉಪಾದಾನತ್ವದ ಲಾಭಕ್ಕಾಗಿ ಅಲ್ಲವೆಂದು ತಿಳಿಯಬೇಕು.

ಪರಬ್ರಹ್ಮದ ಸ್ವರೂಪಲಕ್ಷಣ

ಇನ್ನು ಬ್ರಹ್ಮದ ಸ್ವರೂಪಲಕ್ಷಣವಾವುದೆನ್ನುವುದನ್ನು ಭಾಷ್ಯಕಾರರು ಹೇಳುತ್ತಾರೆ. "ಸತ್ಯಂ ಜ್ಞಾನಮನಂತಂ ಬ್ರಹ್ಮ" (ತೈ. ಆನಂ. ೧) ಇತ್ಯಾದಿ ಶ್ರುತಿಯಿಂದ

CC-0. Jangamwadi Math Collection. Digitized by eGangotri

ಪ್ರತಿಪಾದಿಸಲ್ಪಡುವ ಸತ್ಯಾದಿಸ್ವರೂಪವೇ ಸ್ವರೂಪಲಕ್ಷಣವಾಗಿರುವುದಲ್ಲದೆ ಸತ್ಯಾದಿಗಳು ಸ್ವರೂಪಲಕ್ಷಣವಲ್ಲ. ಸತ್ಯಾದಿಗಳು ಪರಶಿವನ ಅಭೇದದಿಂದ ಸ್ವರೂಪ ಲಕ್ಷಣವಾಗಿವೆ. ಅಭೇದವಲ್ಲಿ ವಾಕ್ಯಾರ್ಥಸಿದ್ಧಿಯು. ವಿಶೇಷಣವಿಶೇಷ್ಯಭಾವಾಪನ್ನ ಪದಾರ್ಥಸಂಬಂಧವೇ ಎಲ್ಲ ಕಡೆಯಲ್ಲಿ ವಾಕ್ಯಾರ್ಥವಾಗಿರುವುದರಿಂದ ಸತ್ಯಾದಿಗಳು ಬ್ರಹ್ಮಕ್ಕೆ ಅಭಿನ್ನಗಳೆಂದರೆ ಅದು ಹೇಗೆ ವಾಕ್ಯಾರ್ಥವು ಸಿದ್ಧಿಸುವುದೆಂದು ಆಕ್ಷೇಪಿಸ ಕೂಡದು. ಏಕೆಂದರೆ ಯಾವ ಸ್ಥಳದಲ್ಲಿ ಪದಾರ್ಥಪ್ರಮಿತಿಯೋ ಅಲ್ಲಿ ಪದಾರ್ಥಗಳ ಸಂಸರ್ಗವೇ ವಾಕ್ಯಾರ್ಥವಾಗಿದೆ. ಎಲ್ಲಿ ಪದಾರ್ಥ ಪ್ರಮಿತಿಪರವಾದ ಪದಸಂದರ್ಭವೊ ಅಲ್ಲಿ ಅಖಂಡ ಪದಾರ್ಥವೇ ವಾಕ್ಯಪ್ರತಿಪಾದ್ಯವಾಗಿರುವುದು. ಹೇಗೆಂದರೆ ಈ ಜ್ಯೋತಿರ್ಮಂಡಲದಲ್ಲಿ ಚಂದ್ರನಾರು ? ಎಂದು ಪ್ರಶ್ನೆ ಮಾಡಲು ಪ್ರಕೃಷ್ಟ (ಅಧಿಕ) ವಾದ ಪ್ರಕಾಶಸ್ವರೂಪನೇ ಚಂದ್ರನೆಂಬ ವಾಕ್ಯವು ಅಖಂಡ ಚಂದ್ರಸ್ವರೂಪಜ್ಞಾನಜನಕವಾಗಿದೆ. ಪ್ರಕೃಷ್ಟಪ್ರಕಾಶದಿಂದ ವಿಶಿಷ್ಟತ್ವವು ಬೇರೆ ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾಗಿರುವುದರಿಂದ ವಾಕ್ಯಪ್ರತಿಪಾದ್ಯವಾದ ಪ್ರಮೇಯವಲ್ಲ. ಚಂದ್ರತ್ವ ವೈಶಿಷ್ಟ್ಯವು ಕೂಡ ವಾಕ್ಯಾರ್ಥವಲ್ಲ. ಏಕೆಂದರೆ ಏಕವ್ಯಕ್ತಿವೃತ್ತಿಯಾಗಿರುವುದರಿಂದ ಚಂದ್ರತ್ವ ಜಾತಿಯೇ ಸಿದ್ಧಿಸುವುದಿಲ್ಲವಷ್ಟೆ. ಹಾಗೂ "ಪ್ರಕೃಷ್ಟ ಪ್ರಕಾಶಶ್ಚಂದ್ರ" ಚಂದ್ರಶಬ್ದ ವಾಚ್ಯತ್ವ ವೈಶಿಷ್ಟ್ಯವೇ ಅರ್ಥವೆಂದು ಹೇಳಲಾಗುವುದಿಲ್ಲ. ಚಂದ್ರಶಬ್ದವಾಚ್ಯತ್ವವೂ ಎಲ್ಲಿರುವುದೆಂಬುದೇ ಈವರೆಗೂ ಕಂಡಿಲ್ಲ. ಇವನೇ ಚಂದ್ರನೆಂದು ನಿಶ್ಚಯವಾದ ಮೇಲಲ್ಲವೆ ಚಂದ್ರಶಬ್ದವಾಚ್ಯನು ಚಂದ್ರನೆಂದು ತಿಳಿಯಬೇಕು. ವಸ್ತುತಃ ಚಂದ್ರಸ್ವರೂಪವೇನೆಂಬ ಪ್ರಶ್ನೆಗೆ ಚಂದ್ರಸ್ವರೂಪವನ್ನು ಹೇಳುವುದನ್ನು ಬಿಟ್ಟು ಚಂದ್ರಶಬ್ದ ವಾಚ್ಯತ್ವ ವೈಶಿಷ್ಟ್ಯವನ್ನು ಹೇಳುವುದು ಉಚಿತವಲ್ಲ. ಹಾಗೂ ವಾಕ್ಯಗಳಿಗೆ ತನ್ನ ಪ್ರಾಮಾಣ್ಯ, ಪದಾರ್ಥ ಇವುಗಳ ಸಂಸರ್ಗ ಪರತ್ವ (ಪ್ರತಿಪಾದಕತ್ವ)ದ ವಿಷಯದಲ್ಲಿ ಹೇಳಬೇಕು.. ಈ ಪದಾರ್ಥ ನಿಷ್ಠತ್ವವಾದರೂ ಲಕ್ಷಣಾವೃತ್ತಿಯಿಂದಲೇ ಹೇಳಬೇಕಾಗುವುದು. ಲೋಕದಲ್ಲಿ ಪದಾರ್ಥಗಳಾದರೊ ವಿಶಿಷ್ಟ ಪದಾರ್ಥಗಳಲ್ಲಿಯೇ ಶಕ್ತ. ಶಕ್ತಿವಿಶಿಷ್ಟಗಳಾದುದರಿಂದ ಸರ್ವಪದಾರ್ಥವೂ ಸಖಂಡವೇ ಆಗಿರುವುದಲ್ಲದೆ ಅಖಂಡವಾವುದೂ ಇಲ್ಲ. "ಪ್ರಕೃಷ್ಟ ಪ್ರಕಾಶಶ್ಚಂದ್ರ" ಎಂಬ ವಾಕ್ಯವು ಅಖಂಡ ಚಂದ್ರಸ್ವರೂಪ ಪ್ರತಿಪತ್ತಿ (ಜ್ಞಾನ) ಪರವೆಂದು ಹೇಳುವುದು ಅಸಂಗತವಾದುದರಿಂದ ಈ ದೃಷ್ಟಾಂತವು ಸಿದ್ಧಿಸುವುದಿಲ್ಲ. ಆದರೂ ಆ ದೃಷ್ಟಾಂತವು ಪದಾರ್ಥ ಮಾತ್ರ ನಿಷ್ಠತ್ವವಿಷಯದಲ್ಲಿರುವುದೆಂದು ತಿಳಿಯಬೇಕು. ಇದರಂತೆ ಸತ್ಯಾದಿ ಪದಗಳು ಏಕ ಬ್ರಹ್ಮ ಪದಾರ್ಥನಿಷ್ಠಗಳಾಗಿರುವುವು. ಬ್ರಹ್ಮ ಪದಾರ್ಥವಾದರೂ ಅಖಂಡವಲ್ಲದೆ ಸಖಂಡವಲ್ಲ. ಏಕೆಂದರೆ "ಏಕಮೇವಾದ್ವಿತೀಯಂ ಬ್ರಹ್ಮ" ಇತ್ಯಾದಿ ಅಗಣಿತ ಶ್ರುತಿಗಳು ಬ್ರಹ್ಮಕ್ಕೆ ಅಭಿನ್ನತ್ವವನ್ನೇ ಹೇಳುತ್ತವಲ್ಲದೆ ಭಿನ್ನತ್ವವನ್ನು ಹೇಳುವುದಿಲ್ಲ. ವಿಶಿಷ್ಟ ವಾಚಕಗಳಾದ ಸತ್ಯಾದಿಪದಗಳಿಂದ ಅದು ಹೇಗೆ ಅಖಂಡಬ್ರಹ್ಮಬೋಧವಾಗುವುದೆಂದು ಆಶಂಕಿಸಕೂಡದು. ಏಕೆಂದರೆ ಸತ್ಯಾದಿ ಪದಗಳಿಗೆ ಶಕ್ತಿವೃತ್ತಿ

CC-0. Jangamwadi Math Collection. Digitized by eGangotri

ಯಿಂದ ಅಖಂಡ ಬೋಧವನ್ನು ಹೇಳದೆ ಲಕ್ಷಣಾವೃತ್ತಿಯಿಂದ ಅಖಂಡ ಬೋಧವನ್ನು ಹೇಳುತ್ತೇವೆ. ಈ ವಿಷಯವು ಶಿವಾದ್ವೈತ ಪ್ರಕಾಶಿಕೆಯಲ್ಲಿ "ಉಪಾಯಸ್ತು ವೈಶಿಷ್ಟ್ಯಮಖಂಡಚಂದ್ರಪ್ರತಿಪತ್ತೌ, ತಚ್ಚ ವಿರೋಧಾಚ್ಚಂದ್ರೇ ನ ಜ್ಞಾಯತೇ ಸತ್ಯಾದಿ ವಾಕ್ಯೇತ್ವನಂತಾದಿ ಪದೈ ರ್ವೈಶಿಷ್ಟ್ಯಂ ಬಾಧ್ಯತೇ" ಇತ್ಯೇತೇನ ಸೇನಾವನಾದಿ ಲಕ್ಷಣಸ್ಯ ನಾಖಂಡಾರ್ಥಕತ್ವಂ ಸೇನಾವನಾದೀನಾಂ ಸಮುದಾಯ ರೂಪತ್ವೇನಾಖಂಡಾರ್ಥತ್ವಾಭಾವಾತ್" ಎಂದು ಹೇಳಲ್ಪಟ್ಟಿದೆ. ಎಂದರೆ ಅಖಂಡ ಚಂದ್ರಜ್ಞಾನದಲ್ಲಿ ವೈಶಿಷ್ಟ್ಯವು ವಿರೋಧವಾಗುವುದರಿಂದ ಪ್ರಕೃಷ್ಟ ಪ್ರಕಾಶ ವೈಶಿಷ್ಟ್ಯವು ಚಂದ್ರನಲ್ಲಿ ಆಗುವುದಿಲ್ಲ. ಸತ್ಯಾದಿ ವಾಕ್ಯದಲ್ಲಾದರೊ ಅನಂತಾದಿ ಪದಗಳಿಂದ ವೈಶಿಷ್ಟ್ಯವು ಬಾಧಿತವಾಗಿದೆ ಎಂಬುದರಿಂದ ಸೇನಾವನಾದಿ ಸ್ಥಲದಲ್ಲಿ ಲಕ್ಷಣಾವೃತ್ತಿಯಿಂದ ಅಖಂಡಾರ್ಥಬೋಧವಾಗುವುದಿಲ್ಲ. ಏಕೆಂದರೆ ಸೇನಾವನಾದಿಗಳು ಸಮುದಾಯ ರೂಪಗಳಾಗಿರುವುದರಿಂದ ಅಖಂಡಾರ್ಥವುಳ್ಳವುಗಳಲ್ಲವಷ್ಟೆ ! ಇದರಿಂದ ಲಕ್ಷಣಾವೃತ್ತಿ ಮಾತ್ರಕ್ಕೇನೇ ಅಖಂಡಾರ್ಥವೆನ್ನುವುದು ಖಂಡಿಸಲ್ಪಟ್ಟಿತು. ಆ ಸೇನಾವನಾದಿ ಸ್ಥಲವಲ್ಲಿಯೂ ಪದಾರ್ಥ ಮಾತ್ರ ನಿಷ್ಠತ್ವ ವಿಷಯದಲ್ಲಿ ವಿವಾದವೇ ಇಲ್ಲ.

ಶಂಕಾ :—ಲಕ್ಷಣಾವೃತ್ತಿಯಿಂದ ಸತ್ಯಾದಿಪದಗಳು ಅಖಂಡ ಏಕಬ್ರಹ್ಮಪರ (ಪ್ರತಿಪಾದಕ) ಗಳೆಂದು ಹೇಳಿದರೆ ಆ ಅಖಂಡ ಏಕಬ್ರಹ್ಮರೂಪವಾದ ಅರ್ಥವು ಒಂದೊಂದೇ (ಸತ್ಯ, ಜ್ಞಾನ, ಅನಂತ) ಪದಗಳಿಂದ ಬೋಧವಾಗುತ್ತಿರಲು ಬೇರೆ ಪದಗಳು ವ್ಯರ್ಥವಾಗುವುದಿಲ್ಲವೆ ?

ಸಮಾಧಾನ :—ಹೀಗೆ ಆಶಂಕಿಸಕೂಡದು. ಏಕೆಂದರೆ ಅವು ವ್ಯರ್ಥಗಳಾಗುವುದಿಲ್ಲ. ಸತ್ಯ ಪದದಿಂದ ಅಸತ್ಯ ಪದಾರ್ಥಗಳ ವ್ಯಾವೃತ್ತಿ ರೂಪ ಪ್ರಯೋಜನವೂ ಜ್ಞಾನಪದದಿಂದ ಘಟಪಟಾದಿ ಜಡಪದಾರ್ಥಗಳ ವ್ಯಾವೃತ್ತಿರೂಪ ಪ್ರಯೋಜನವೂ ಅನಂತ ಪದದಿಂದ ಪರಿಚ್ಛಿನ್ನ ಪದಾರ್ಥಗಳ ವ್ಯಾವೃತ್ತಿರೂಪ ಪ್ರಯೋಜನವೂ ಇರುವುದರಿಂದ ಸತ್ಯಾದಿ ಮೂರು ಪದಗಳೂ ಸಾರ್ಥಕಗಳಾಗಿರುವುವಲ್ಲದೆ ಪುನರುಕ್ತಿ ದೋಷವುಳ್ಳವುಗಳು ಆಗಿರುವುದಿಲ್ಲ.

ಶಂಕಾ :—ಒಳ್ಳೆಯದು ವ್ಯಾವೃತ್ತಿಗಳು (ಬೇಧಗಳು) ಬ್ರಹ್ಮಕ್ಕೆ ಭಿನ್ನಗಳೊ ? ಅಥವಾ ಅಭಿನ್ನಗಳೊ ? ಬ್ರಹ್ಮಕ್ಕೆ ಭಿನ್ನಗಳೆಂದರೆ "ಏಕಮೇವಾದ್ವಿತೀಯಂ ಬ್ರಹ್ಮ" ಇತ್ಯಾದಿ ಐಕ್ಯಶ್ರುತಿಗಳಿಗೆ ಅನುಪಪತ್ತಿ ದೋಷವು ಬರುವುದು. ಇನ್ನು ಅಭಿನ್ನಗಳೆಂದರೆ ಅದೇ ಪದಾಂತರ ವೈಯ್ಯರ್ಥ್ಯ ದೋಷವು ಬರುವುದು. ಎಂದು ಆಶಂಕಿಸಲವಕಾಶವಿಲ್ಲ.

ಸಮಾಧಾನ :—ಏಕೆಂದರೆ ಒಂದೇ ಒಂದು ಪದಾರ್ಥದಲ್ಲಿ ಪ್ರತಿಯೋಗಿ, ಅನು

CC-0. Jangamwadi Math Collection. Digitized by eGangotri

ಯೋಗಿ, ಕಾರಣ, ವ್ಯಾಪಕ, ಶಬ್ದ ಪದಗಳಿಗೆ ವೈಯರ್ಥ್ಯವು ಯುಕ್ತವೇ ಆಗಿರು
ವುದು: ಕಾರಣತ್ವಾದಿಗಳು ಕಾರಣಕ್ಕಿಂತಲೂ ಅತಿರಿಕ್ತಗಳಾದ ಧರ್ಮಾಂತರಗಳಲ್ಲ
ವಷ್ಟೆ ; ಇದರಂತೆ ವ್ಯಾವೃತ್ತಿಗಳೂ ಬ್ರಹ್ಮಾಭಿನ್ನಗಳಾದರೂ ಪ್ರತಿಯೋಗಿ ಘಟಾದಿ
ಗಳು ಭಿನ್ನಗಳಾಗಿರುವುದರಿಂದ ಸತ್ಯಾದಿ ಪದಗಳು ವ್ಯರ್ಥವಾಗುವುದಿಲ್ಲ. ಈ ಅಭಿ
ಪ್ರಾಯದಿಂದಲೇ ಶಿವಾದ್ವೈತ ಪ್ರಕಾಶಕದಲ್ಲಿ "ಅವಿಶಿಷ್ಟವೂ ಪರ್ಯಾಯ ನಾಮ
ಗಳಾಗದಿರುವ ಅನೇಕ ಶಬ್ದಗಳಿಂದ ಪ್ರಕಾಶಿತವೂ ಸತ್ಯಾದಿ ವೇದಾಂತ ಶಬ್ದಗಳಿಂದ
ಬೋಧಿತವೂ ಆಗಿರುವ ಅಖಂಡಬ್ರಹ್ಮವನ್ನು ತಿಳಿದಿರು" ಎಂದು . ಹೇಳಲ್ಪಟ್ಟಿರುವುದ
ರಿಂದ ಸತ್ಯ, ಜ್ಞಾನ, ಅನಂತಗಳು ಸ್ವರೂಪಲಕ್ಷಣವೆಂದು ಸಿದ್ಧವಾಯಿತು.

ದ್ವಿತೀಯವರ್ಣಕ

ಪೂರ್ವಪಕ್ಷ :—"ಜನ್ಮಾದ್ಯಸ್ಯ ಯತಃ" ಎಂಬ ಸೂತ್ರಕ್ಕೆ ವೈಷ್ಣವರು
ಮಾಡುವ ಅರ್ಥವನ್ನು ನಿರಾಕರಿಸಲುದ್ಯುಕ್ತರಾಗಿ ಭಾಷ್ಯಕಾರರು "ನನು" ಎಂದು
ಶಂಕಿಸುತ್ತಾರೆ. ಆದ್ಯನಾದ ಚತುರ್ಮುಖ ಬ್ರಹ್ಮನ ಜನ್ಮವು ಯಾವ ವಿಷ್ಣುವಿನಿಂದಾಗಿ
ದೆಯೋ ? ಆ ವಿಷ್ಣುವೇ ಬ್ರಹ್ಮನೆಂದು ಸೂತ್ರಾರ್ಥವಾಗುತ್ತಿರಲು ಪರಶಿವಬ್ರಹ್ಮಪರ
ವಾಗಿ ಅರ್ಥವನ್ನು ಮಾಡುವುದು ಯೋಗ್ಯವಲ್ಲೆಂದು ಶಂಕಿಸಕೂಡದು. ಈ ಸೂತ್ರಕ್ಕೆ
ವಿಷ್ಣುಪರವಾಗಿ ಮಾಡುವ ಅರ್ಥವು ಶ್ರುತಿಯುಕ್ತ್ಯನುಭವ ವಿರುದ್ಧವಾಗುವುದು.
ಹೇಗೆಂದರೆ ಚತುರ್ಮುಖನಿಗೆ ಆದ್ಯತ್ವವು ಸರ್ವಕಾರ್ಯಕ್ಕಿಂತಲೂ ಪ್ರಾಥಮ್ಯವೊ ?
ಸರ್ವಚೇತನಗಳಿಗಿಂತಲೂ ಪ್ರಾಥಮ್ಯವೊ ? "ಆತ್ಮನಃ ಆಕಾಶಃ" ಎಂಬ ಶ್ರುತಿ
ಯಿಂದ ಪಂಚಭೂತಗಳ ಸೃಷ್ಟಿಯು ಪ್ರಥಮದಲ್ಲಿ ಹೇಳಲ್ಪಟ್ಟಿರುವುದರಿಂದ ಸರ್ವ
ಕಾರ್ಯಕ್ಕಿಂತಲೂ ಚತುರ್ಮುಖನ ಸೃಷ್ಟಿಯು ಪ್ರಥಮವೆಂದು ಹೇಳಲವಕಾಶವಿಲ್ಲ.
ಹಾಗೂ ಸಮಷ್ಟಿ, ಲಿಂಗ, ಶರೀರಾಭಿಮಾನಿಯಾದ ಹಿರಣ್ಯಗರ್ಭನ ಸೃಷ್ಟಿಯು ಭೂತ
ಸೃಷ್ಟ್ಯನಂತರದಲ್ಲಿಯೇ ಹೇಳುವುದು ಆವಶ್ಯಕವಾಗಿರುವುದರಿಂದ ಹಿರಣ್ಯಗರ್ಭ
(ಚತುರ್ಮುಖ) ನ ಸೃಷ್ಟ್ಯನಂತರದಲ್ಲಿಯೇ ಭೂತಸೃಷ್ಟಿಯೆಂದು ಹೇಳುವುದು ಯುಕ್ತ
ವೂ ಅಲ್ಲ. ಹಾಗೂ ಪ್ರಮಾಣವೂ ಇಲ್ಲ. ಹಾಗಾದರೂ ಚತುರ್ಮುಖನ ಜನಕತ್ವವನ್ನು
ನಾರಾಯಣನಿಗೆ ಹೇಳುವೆವೆಂದರೆ ಜಿಜ್ಞಾಸ್ಯವಾದ ಬ್ರಹ್ಮಲಕ್ಷಣವೇ ವಿಷ್ಣುವಿನಲ್ಲಿ
ಸಿದ್ಧಿಸುವುದಿಲ್ಲ. ರಾಮಕೃಷ್ಣಾದಿಗಳಿಗೆ ಜನಕರಾದ ದಶರಥ ವಸುದೇವಾದಿಗಳಂತೆ
ಚತುರ್ಮುಖ ಜನಕತ್ವವನ್ನು ಹೇಳಿದರೆ ವಿಷ್ಣುವಿಗೆ ಸರ್ವಜ್ಞತ್ವವು ಸಿದ್ಧಿಸುವುದಿಲ್ಲ.
ಹಾಗೂ ದಶರಥ ವಸುದೇವಾದಿಗಳಿಗಿಂತಲೂ ರಾಮಕೃಷ್ಣಾದಿಗಳಿಗೇನೇ ಉತ್ಕೃಷ್ಟತ್ವ
ವಿರುವಂತೆ ಜನಕನಾದ ವಿಷ್ಣುವಿಗಿಂತಲೂ ಚತುರ್ಮುಖನೇ ಉತ್ಕೃಷ್ಟನಾಗಬೇಕು.
ಹಾಗೂ ವಿಷ್ಣುವಿನಿಂದಲೇ ಚತುರ್ಮುಖನ ಉತ್ಪತ್ತಿಯೆಂಬುವಲ್ಲಿ ವಿನಿಗಮಕವೂ
ಇಲ್ಲ. "ಯೋ ದೇವಾನಾಂ ಪ್ರಥಮಂ" "ಹಿರಣ್ಯಗರ್ಭಂ ಪಶ್ಯನ್ ಜಾಯಮಾನಂ"

CC-0. Jangamwadi Math Collection. Digitized by eGangotri

(ಮಹಾನಾರಾಯಣ ಅನು. ೧೦) ಎಂಬ ಶ್ರುತಿಗಳು ರುದ್ರನು ಇಂದ್ರಾದಿ ದೇವತೆಗಳಿಗಿಂತಲೂ ಪ್ರಥಮದಲ್ಲಿ ಚತುರ್ಮುಖನನ್ನು ಸ್ವಸಂಕಲ್ಪದಿಂದ ಹುಟ್ಟಿಸಿದನೆಂದು ಹೇಳುವುದರಿಂದ ಚತುರ್ಮುಖಜನಕನು ಶಿವನಲ್ಲದೆ ನಾರಾಯಣನಲ್ಲವೆಂದು ಸ್ಪಷ್ಟವಾಗುವುದು.

"ಯೋ ದೇವಾನಾಂ ಪ್ರಥಮಂ ಪುರಸ್ತಾತ್ ವಿಶ್ವಾಧಿಕೋ ರುದ್ರೋ ಮಹರ್ಷಿಃ ಹಿರಣ್ಯಗರ್ಭಂ ಪಶ್ಯನ್ ಜಾಯಮಾನಂ ಸನೋ ದೇವಃ ಶುಭಯಾ ಸ್ಮೃತ್ಯಾ ಸಂಯುನಕ್ತು" ಎಂಬ ಶ್ರುತ್ಯರ್ಥವನ್ನು ಭಾಷ್ಯಕಾರರು ಈ ರೀತಿಯಾಗಿ ತೋರಿಸುವರು. "ಮಹರ್ಷಿ" ವೇದಕರ್ತೃವಾದ "ಯಃ" ಯಾವ ಸರ್ವಜ್ಞತ್ವಾದಿ ಶಕ್ತಿಗಳಿಂದ "ವಿಶ್ವಸ್ಮಾತ್" ಚಿದಚಿತ್ಪ್ರಪಂಚಕ್ಕಿಂತಲೂ "ಅಧಿಕಃ" ಉತ್ಕೃಷ್ಟನಾದ "ರುದ್ರಃ" ಭಕ್ತರ ದುಃಖವನ್ನು ಪರಿಹರಿಸುವ ಪರಶಿವನು "ಪುರಸ್ತಾತ್" ಪೂರ್ವದಲ್ಲಿ "ದೇವಾನಾಂ" ಇಂದ್ರಾದಿ ದೇವತೆಗಳಿಗಿಂತಲೂ "ಪ್ರಥಮಂ" ಪ್ರಾಥಮಿಕನಾದ "ಹಿರಣ್ಯಗರ್ಭಂ" ಚತುರ್ಮುಖನನ್ನು ಪ್ರಕೃತಿರೂಪವಾದ ಸ್ವಸಂಕಲ್ಪದಿಂದ "ಜಾಯಮಾನಂ" ಹುಟ್ಟಿದವನನ್ನು ಸಕಲ ವೇದೋಪದೇಶಕ್ಕಾಗಿ "ಪಶ್ಯನ್" ಅನುಗ್ರಹ ದೃಷ್ಟಿಯಿಂದ ನೋಡುವಂಥ "ಸಃ" ಆ ಶಿವನು "ನಃ" ನಮ್ಮಗಳನ್ನೂ ಕೂಡ "ಶುಭಯಾ" ವೇದವೇದಾಂತ ಸಿದ್ಧವಾದ, ಪರಮಾನಂದರೂಪವಾದ ಸಂಸಾರಪಾಶಮೋಚಕವಾದ "ಸ್ಮೃತ್ಯಾ"ದೀಕ್ಷೆಯಿಂದ "ಸಂಯುನಕ್ತು" ಸಂಯೋಜನಗೊಳಿಸಲಿ. "ಯೋ ದೇವಾನಾಂ ಪ್ರಥಮಶ್ಚೋದ್ಭವಶ್ಚ""ಹಿರಣ್ಯಗರ್ಭಂ ಜನಯಾಮಾಸಪೂರ್ವಂ" ಇತ್ಯಾದಿ ಶ್ರುತಿಗಳಿಂದಲೂ ಚತುರ್ಮುಖನು ಮಹೇಶ್ವರನಿಂದಲೇ ಉತ್ಪನ್ನನಾದನೆಂದು ತಿಳಿದುಬರುವುದರಿಂದ ನಾರಾಯಣನಿಂದ ಅವನ ಉತ್ಪತ್ತಿಯನ್ನು ಹೇಳುವುದು ವಿಹಿತವಲ್ಲ. ಹಾಗಾದರೆ "ಏಕೋ ಹವೈ ನಾರಾಯಣ ಆಸೀತ್ ನ ಬ್ರಹ್ಮಾನೇಶಾನೋ ನಾಗ್ನೀಷೋಮೌ ನೇಮೇ ದ್ಯಾವಾ ಪೃಥಿವೀ" ಎಂಬ ಮಹೋಪನಿಷತ್ತಿನಲ್ಲಿ ನಾರಾಯಣನೇ ಸರ್ವಶ್ರೇಷ್ಠನೆಂದು ಸೃಷ್ಟಿಗಿಂತ ಪೂರ್ವದಲ್ಲಿರುವವನೆಂದೂ "ಅಥ ಕಸ್ಮಾದುಚ್ಯತೆ ಬ್ರಹ್ಮಬೃಹಂತೋಹ್ಯಸ್ಮಿನ್ ಗುಣಾಃ" ಎಂಬುದರಿಂದ ನಾರಾಯಣನೇ ಪೂರ್ಣ ಗುಣಸಂಪನ್ನನೆಂದೂ "ಅಂತಃ ಸಮುದ್ರೇ" ಎಂಬುದರಿಂದ ನಾರಾಯಣನೇ ಸಮುದ್ರ ಶಾಯಿತ್ವಾದಿ ಧರ್ಮಗಳುಳ್ಳವನೆಂದೂ ಹೇಳಲ್ಪಡುವುದು ಅಸಂಗತವೋ ? ವಿದ್ವದ್ರೂಢಿಯಿಂದ ಸಮುದ್ರ ಶಾಯಿತ್ವಾದಿ ಧರ್ಮಗಳು ನಾರಾಯಣನಿಗೆ ಮುಖ್ಯಗಳಾಗಿರುವವಲ್ಲದೆ ಇತರರಿಗೆ ಮುಖ್ಯಗಳಾಗಿರುವುದಿಲ್ಲ. ಇನ್ನು "ಸನ್ನ ಚಾಸಚ್ಛಿವಏವ ಕೇವಲಃ" (ಶ್ವೇ. ೪-೧೯) "ಬ್ರಹ್ಮವಿಷ್ಣು ರುದ್ರೇಂದ್ರಾಸ್ತೇ ಸಂಪ್ರಸೂಯಂತೇ" (ಅಥರ್ವ ೧) ಇತ್ಯಾದಿ ವಾಕ್ಯಗಳು "ಛಾಗ ಪಶುನ್ಯಾಯ",ದಿಂದ ಸಾಮಾನ್ಯ ವಿಶೇಷ ಪದಾರ್ಥಗಳಿಗೆ ಏಕತ್ವಸಿದ್ಧಿಯಂತೆ ನಾರಾಯಣ ಪರಗಳೆಂದೇ ಹೇಳಬೇಕು. "ಗಚ್ಛತೀತಿ ಗಾಃ" ಎಂಬ ವ್ಯುತ್ಪತ್ತಿಯಿಂದ ಗೋಶಬ್ದವು ಅನೇಕಾರ್ಥ ಬೋಧಕವಾಗಿದ್ದರೂ

CC-0. Jangamwadi Math Collection. Digitized by eGangotri

ಗೋ (ಆಕಳು, ಎತ್ತು) ರೂಪ ಅರ್ಥದಲ್ಲಿಯೇ ರೂಢವಾಗಿರುವಂತೆ "ಬ್ರಹ್ಮನ್" ಶಬ್ದವೂ ಕೂಡ ಚತುರ್ಮುಖ, ಪ್ರಣವ, ಬ್ರಾಹ್ಮಣಾದಿ ಬೋಧಕವಾಗಿದ್ದರೂ ಅನಂತ ಕಲ್ಯಾಣಗುಣ ವಿಶಿಷ್ಟನಾದ ನಾರಾಯಣನಿಗೆ ಮಾತ್ರ ಯೋಗರೂಢಿಯಿಂದ ಪ್ರಸಿದ್ಧವೇ ಆಗಿದೆ. ಆದುದರಿಂದ ಜಗಜ್ಜನ್ಮಾದಿಕಾರಣತ್ವವೆಂಬ ಲಕ್ಷಣವು ನಾರಾಯಣನಿಗೆ ಯುಕ್ತವಾಗಿದೆಯೆಂದು ಪೂರ್ವಪಕ್ಷವಾಗಲು ಭಾಷ್ಯಕಾರರು "ಇತಿ ಚೇನ್ನೂ ನಃ" ಎಂದು ಸಿದ್ಧಾಂತ ಪಕ್ಷವನ್ನು ಸ್ಥಾಪಿಸುತ್ತಾರೆ.

"ವಿಷ್ಣುರಿತ್ಥಾ" ಎಂಬಲ್ಲಿ ವಿಷ್ಣುಪದಕ್ಕೆ ವಿಷ್ಣೂತ್ಪತ್ತಿಪರತ್ವಕಥನ

ಸಿದ್ಧಾಂತ :—ವಿಷ್ಣುವು ಜಗತ್ಕಾರಣನಾದರೂ ಆ ಜಗತ್ಕಾರಣತ್ವವು ಬ್ರಹ್ಮಲಕ್ಷಣವೆನಿಸುವುದಿಲ್ಲ. ಏಕೆಂದರೆ ಸೂಕ್ಷ್ಮಸೃಷ್ಟಿಯಾದನಂತರ ದೇವತೆಗಳ ಸೃಷ್ಟಿಯು ಈ ದೇವತೆಗಳ ಸೃಷ್ಟಿಗಿಂತಲೂ ಪೂರ್ವದಲ್ಲಿ ನಾರಾಯಣ ಸೃಷ್ಟಿಯು (ಉತ್ಪತ್ತಿಯು) ಕಂಡುಬರುವುದರಿಂದ ಉತ್ಪತ್ತಿಯುಳ್ಳದ್ದಲ್ಲವೂ ಜಗಚ್ಛಬ್ದದಿಂದ ಗ್ರಹಿಸಲ್ಪಡುವುದು. ಜಗದಂತಃಪಾತಿಯಾದ ವಿಷ್ಣುವಿಗೆ ವಿಷ್ಣುಜನ್ಮಜನಕತ್ವವು ಬರಲಾರದು. ಲೋಕದಲ್ಲಿ ತನ್ನಿಂದತಾನು ಹುಟ್ಟತಕ್ಕ ಯಾವವಸ್ತುವೂಇಲ್ಲ. ಅಂದಮೇಲೆ "ಜನ್ಮಾದ್ಯಸ್ಯಯತಃ" ಎಂಬ ಸೂತ್ರ ಪ್ರತಿಪಾದಿತವಾದ ಬ್ರಹ್ಮಲಕ್ಷಣವು ವಿಷ್ಣುವಿನಲ್ಲಿ ಸಂಗತವಾಗುವುದಿಲ್ಲ. ವಿಷ್ಣುವಿನ ಉತ್ಪತ್ತಿಯು ಋಗ್ವೇದದಲ್ಲಿ ಹೇಳಲ್ಪಡುವುದು. "ವಿಷ್ಣುರಿತ್ಥಾ ಪರಮಸ್ಯ ವಿದ್ವಾನ್ ಜಾತೋ ಬೃಹನ್ನಭಿಪಾತಿ ತೃತೀಯಂ" (ಋ ೭.೪-೫) ಈ ಋಗ್ವೇದ ವಾಕ್ಯದ ಅರ್ಥವೇನೆಂದರೆ "ಪರಮೇಶ್ವರನನ್ನು ತಿಳಿದವನೂ ಅವನಿಂದ ಹುಟ್ಟಿದವನೂ ಆದ ವಿಷ್ಣುವು ಮೂರನೇ ಕೈಲಾಸವನ್ನು (ಶಿವಲೋಕವನ್ನು) ಕಾಯುತ್ತಿರುತ್ತಾನೆ. ಶ್ರುತಿಯಲ್ಲಿರುವ ಬೃಹಚ್ಛಬ್ದದಿಂದ ಆದಿವಿಷ್ಣುವಿನ ಗ್ರಹಣವಾಗುತ್ತದೆಂದು "ನಮೋ ವಿಷ್ಣವೇ ಬೃಹತೇ ಕರೋಮಿ" (ತೈ. ಆರ. ೧-೧೨) "ಬೃಹತ್ತೇ ವಿಷ್ಣೋಃ ಸುಮತಿಂ ಭಜಾಮಹೇ" (ತೈ. ಬ್ರಾ. ೨-೪-೩) ಇತ್ಯಾದಿಗಳಿಂದ ತಿಳಿಯಲ್ಪಡುವುದು. ಎಂದೆಂದೂ ಹುಟ್ಟುಸಾವುಗಳಿಲ್ಲದ ಪರಮೇಶ್ವರನಿಂದ ಜಾತನಾದವನೂ ಉಪಸ್ಥಿತನೂ ಆದ ವಿಷ್ಣುವನ್ನು ಬಿಟ್ಟು ಅನುಪಸ್ಥಿತನಾದ ಯಾವನೋ ಒಬ್ಬನು ಹುಟ್ಟಿದನೆಂದು ಹೇಳುವಲ್ಲಿ ಪ್ರಮಾಣವಿಲ್ಲ. "ಅಜಾತ ಇತ್ಯೇವಂ ಕಶ್ಚಿದ್ಭೀರುಃ ಪ್ರಪದ್ಯತೆ ರುದ್ರಯತ್ತೆ ದಕ್ಷಿಣಂ ಮುಖಂ ತೇನ ಮಾಂ ಪಾಹಿ ನಿತ್ಯಂ" (ಶ್ವೇ. ೪-೨೧) ಎಂಬ ಶ್ವೇತಾಶ್ವತರ ಶ್ರುತಿ ವಾಕ್ಯವು ಶಿವನೇ ಅಜಾತನೆಂದು ಸಾರುತ್ತದೆ. ಆದುದರಿಂದ ಶಂಭುವಿಗೆ ಆದಿ ವಿಷ್ಣುಜನಕತ್ವವು ಯುಕ್ತವೇ ಆಗಿದೆ. "ಜನಿತೋತ ವಿಷ್ಣೋಃ" (ಋ. ೭-೪-೬) ಋಗ್ವೇದ ವಾಕ್ಯವೂ ಕೂಡ ವಿಷ್ಣುವಿನ ಉತ್ಪತ್ತಿಯನ್ನು ಸಾರುತ್ತದೆ. "ಧ್ಯಾಯೀತೇಶಾನಂ ಪ್ರಧ್ಯಾಯಿತವ್ಯಂ ಸರ್ವಮಿದಂ ಬ್ರಹ್ಮವಿಷ್ಣುರುದ್ರೇಂದ್ರಾಸ್ತೇಸಂಪ್ರಸೂಯಂತೆ" (ಅಥರ್ವ ೩) ಎಂಬ ಅಥರ್ವ ಶಿರೋವಾಕ್ಯದಿಂದ ಶಿವನಿಗೆ ಸರ್ವಕಾರಣತ್ವವು ಸಿದ್ಧವಾಗುವುದು. "ಶಿವ ಏವ ಕೇವಲಃ" ಎಂಬ ಶ್ವೇತಾಶ್ವತರ ವಾಕ್ಯವು ಸನಾತನ

CC-0. Jangamwadi Math Collection. Digitized by eGangotri

ಸೃಷ್ಟಿಪರವಾದುದು. "ನಾರಾಯಣಾದ್ಬ್ರಹ್ಮಾ" ಎಂಬ ನಾರಾಯಣೋಪನಿಷದ್ವಾಕ್ಯವು ಅವಾಂತರ ಸೃಷ್ಟಿಪರವಾದುದು. ಈ ವಿಷಯವು ಶಿವಪುರಾಣ ವಾಯುವೀಯ ಸಂಹಿತೆಯಲ್ಲಿ ಉಕ್ತವಾಗಿದೆ. ಸಾಕ್ಷಾನ್ಮಹೇಶ್ವರನಿಂದ ಮೂರುಜನ ಕಾರಣ ಪುರುಷರು ಹುಟ್ಟಿ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳಲ್ಲಿ ಕ್ರಮವಾಗಿ ಚತುರ್ಮುಖ, ವಿಷ್ಣು, ರುದ್ರರುಗಳು ತಂದೆಯಾದ ಶಿವನಿಂದ ನಿಯಮಿಸಲ್ಪಟ್ಟರು. ಆದರೂ ಅನ್ಯೋನ್ಯ ಮಾತ್ಸರ್ಯದಿಂದ ನಾನು ಹೆಚ್ಚು ತಾನು ಹೆಚ್ಚು ಎಂದು ಈ ಮೂವರೂ ವಿವಾದಿಸುತ್ತಾ ಕಡೆಗೆ ಇದರ ನಿರ್ಣಯವನ್ನು ನಮ್ಮ ಮೂವರಿಗೂ ಜನಕನಾದ ಶಿವನೇ ಮಾಡತಕ್ಕವನೆಂದು ಅವನನ್ನು ತಪಸ್ಸಿನಿಂದ ಸಂತೋಷಪಡಿಸಿದರು. ಆಗ ಶಿವನು ಒಂದು ಕಲ್ಪದಲ್ಲಿ ರುದ್ರನು ಬ್ರಹ್ಮ ನಾರಾಯಣರನ್ನು ಮತ್ತೊಂದು ಕಲ್ಪದಲ್ಲಿ ಬ್ರಹ್ಮನು ವಿಷ್ಣು ರುದ್ರರನ್ನು ಮುಗದೊಂದು ಕಲ್ಪದಲ್ಲಿ ಅದರಂತೆ ವಿಷ್ಣುವು ಬ್ರಹ್ಮನನ್ನು ಮತ್ತೊಮ್ಮೆ ಬ್ರಹ್ಮನು ವಿಷ್ಣುವನ್ನು ಸೃಜಿಸಿದರೆಂದು ಹೇಳಿ ವಿವಾದವನ್ನು ಬಗೆಹರಿಸಿದನೆಂದೂ ಹೇಳಲ್ಪಟ್ಟಿದೆ. ಇದರಿಂದ ಪರಶಿವಬ್ರಹ್ಮವು ತ್ರಿಮೂರ್ತ್ಯತೀತವೆಂದು ಸ್ಪಷ್ಟವಾಯಿತು.

ಮೂರ್ತಿತ್ರಯಾತೀತನಾದ ಶಿವನೇ ಪರಬ್ರಹ್ಮ

"ಸ ಬ್ರಹ್ಮಾ ಸ ಶಿವಃ ಸ್ಸೇಂದ್ರಸ್ಸೋಽಕ್ಷರಃ ಪರಮಸ್ಸ್ವರಾಟ್" (ಮಹಾನಾ. ೧೦) ಇತ್ಯಾದ್ಯನೇಕ ಶ್ರುತಿಗಳಿಂದ ಮೂರ್ತಿ (ಗುಣಮೂರ್ತಿ) ಗಳಿಗೆ ಅತಿರಿಕ್ತವಾದುದೇ ಪರಬ್ರಹ್ಮವೆಂದು ಹೇಳಲ್ಪಡುವುದರಿಂದಲೂ ನಾರಾಯಣಾದ್ಯುಪನಿಷತ್ತುಗಳಲ್ಲಿ ನಾರಾಯಣನಿಗೆ ಮೂರ್ತಿತ್ರಯಕ್ಕಿಂತಲೂ ಭಿನ್ನನೆಂದು ಹೇಳುವುದಿಲ್ಲವಾದುದರಿಂದ ನಾರಾಯಣನು ಬ್ರಹ್ಮಪದವಾಚ್ಯನಲ್ಲ. ಕಿಂತು "ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೆ ಸ ಆತ್ಮಾ ಸ ವಿಜ್ಞೇಯಃ ಶಿವೋದ್ವೈತಃ" ಎಂಬ ಮಾಂಡೂಕ್ಯದಲ್ಲಿಯೂ "ಧ್ಯಾಯೀತೇಶಾನಂ" ಇತ್ಯಾದ್ಯಥರ್ವಶಿರಸ್ಸಿನಲ್ಲಿಯೂ ಶಿವನೇ ತ್ರಿಮೂರ್ತಿಗಳಿಗೆ ಅತಿರಿಕ್ತನೆಂದು ಸ್ಪಷ್ಟವಾಗುವುದರಿಂದ ಅವನೇ ಪರಬ್ರಹ್ಮವಾಗಿರುವನು. ಈ ವಿಷಯವು ಅನುಶಾಸನ ಪರ್ವದಲ್ಲಿ ಈಶ್ವರನು ತನ್ನ ದಕ್ಷಿಣಭಾಗದಿಂದ ಚತುರ್ಮುಖನನ್ನೂ ವಾಮಭಾಗದಿಂದ ವಿಷ್ಣುವನ್ನೂ ಹೃದಯದಿಂದ ಕಾಲರುದ್ರನನ್ನೂ ಸೃಜಿಸಿದನೆಂದು ಹೇಳಲ್ಪಟ್ಟಿರುವುದು. ರುದ್ರನ ಉತ್ಪತ್ತಿಯು ಕಾಲರುದ್ರನ ಉತ್ಪತ್ತಿಯೆಂದು ತಿಳಿಯಬೇಕು. ಇಲ್ಲದಿದ್ದರೆ "ಅಜಾತ ಇತ್ಯೇವಂ ಕಶ್ಚಿದ್ಭೀರುಃ ಪ್ರಪದ್ಯತೆ" ಎಂಬ ಶ್ರುತಿ ವಿರೋಧವಾಗುವುದು.

ನಾರಾಯಣವಾಚಕ ಪದಗಳಿಗೆ ಶಿವಪರತ್ವಪ್ರತಿಪಾದನ

"ವಿಷ್ಣುರಿತ್ಥಾ" ಎಂಬ ಶ್ರುತಿಗೆ ವಿರೋಧವಾಗುವುದರಿಂದ ವಿಷ್ಣುವಿನ ಉತ್ಪ

CC-0. Jangamwadi Math Collection. Digitized by eGangotri

ತ್ರಿಯು ಅವತಾರಪರವಾದುದಲ್ಲ. ಕಿಂತು ಆದಿ ವಿಷ್ಣು ಪರವಾದುದೆಂದು ಹೇಳಬೇಕು. ಹಾಗೂ "ಅಕಾರಣಂ ಕಾರಣಾನಾಂ ಧ್ಯಾತಾ ಕಾರಣಂ ತು ಧ್ಯೇಯಃ" ಎಂಬ ಅಥರ್ವ ಶಿರೋವಾಕ್ಯದಲ್ಲಿ ತು ಎಂಬ ಶಬ್ದದಿಂದ ಪೂರ್ವೋಕ್ತ ವಿಷ್ಣ್ವಾದಿಗಳ ವೈಲಕ್ಷಣ್ಯ ವನ್ನು ಪ್ರತಿಪಾದಿಸಿ ಶಂಭುವಿಗೆ ಪರಮ ಕಾರಣತ್ವವನ್ನು ಉಪದೇಶಿಸುತ್ತಿರುವುದ ರಿಂದ ನಾರಾಯಣನಿಗೆ ಜಗಜ್ಜನ್ಮಾದಿ ಕಾರಣತ್ವವು ಸಿದ್ಧಿಸುವುದಿಲ್ಲ. ಹಾಗಾದರೆ "ನಾರಾಯಣ ಆಸೀತ್" ಎಂಬ ಭವನಕ್ರಿಯಾವಾದಿಯಾದ ಲಜ್ ಲಕಾರಕ್ಕೆ ಗತಿ ಯೇನು ? ಅಂದರೆ ಇದರಿಂದ ನಾರಾಯಣನ ಪ್ರಥಮೋತ್ಪತ್ತಿ ಮಾತ್ರವೇ ಪ್ರತಿಪಾದಿ ಸಲ್ಪಡುವುದಲ್ಲದೆ ಉತ್ಪತ್ತಿರಾಹಿತ್ಯವು ಪ್ರತಿಪಾದಿಸಲ್ಪಡುವುದಿಲ್ಲ. "ಶಕ್ತೇರಾಸೀತ್ಪ ರಾತ್ಪರಃ" ಎಂಬಲ್ಲಿ "ಆಸೀತ್" ಎಂಬ ಕ್ರಿಯೆಗೆ ಉತ್ಪತ್ತಿ ಪರತ್ವವು ಪ್ರಸಿದ್ಧವೇ ಆಗಿದೆಯಷ್ಟೆ ; ಭಾಗಪಶು ನ್ಯಾಯದಿಂದ ಸದಾತ್ಮಾದಿ ಶಬ್ದಗಳಿಗೂ ನಾರಾಯಣಾದಿ ಶಬ್ದಗಳಿಗೂ ಶಿವಪರತ್ವವನ್ನೇ ಹೇಳಬೇಕು. "ಸರ್ವೋವೈ ರುದ್ರಃ" "ಸ ಏವ ವಿಷ್ಣುಃ" "ಅಹಮೇಕಂ ಪ್ರಥಮಮಾಸಂ" ಎಂಬ ಅನಂತ ಶ್ರುತಿಗಳಿಂದಲೂ "ಯಾನಿ ನಾಮಾನಿ ಗೋವಿಂದ ತವಲೋಕೇ ಮಹೀಯತೆ। ತಾನ್ಯೇವ ಮಮ ನಾಮಾನಿ ನಾತ್ರಕಾರ್ಯಾ ವಿಚಾರಣಾ" ಎಂಬುದಾಗಿ ಹರಿವಂಶದಲ್ಲಿ ಕೃಷ್ಣನನ್ನು ಕುರಿತು ಶಿವ ವಚನದಿಂದಲೂ ಜೈಮಿನಿ, ಭಟ್ಟಭಾಸ್ಕರಾದಿ ವೈದಿಕ ಪೂರ್ವಾಚಾರ್ಯರು ವೇದಗಳಿಗೆ ಅನುಸಾರವಾಗಿ ಶಿವನಿಗೆ ಮಾತ್ರ ಪರಬ್ರಹ್ಮವೆಂದು ವ್ಯವಸ್ಥೆಗೊಳಿಸಿರುವುದರಿಂದಲೂ ಭಗವಾನ್ ವ್ಯಾಸನೂ ಕೂಡ ಸೂತ ಸಂಹಿತೆಯಲ್ಲಿ ಸರ್ವವೇದಾಂತಗಳ ತಾತ್ಪರ್ಯಾನು ಸಾರವಾಗಿ ಶಿವನಲ್ಲಿ ಮಾತ್ರ ಪರಬ್ರಹ್ಮತ್ವವನ್ನು ಸ್ಥಿರಪಡಿಸಿರುವುದರಿಂದಲೂ ಜಗ ಜ್ಜನ್ಮಾದಿ ಕಾರಣತ್ವವೆಂಬ ಬ್ರಹ್ಮಲಕ್ಷಣವು ಶಿವನಲ್ಲಿ ಮಾತ್ರ ಪ್ರತಿಬಂಧರಹಿತ ವಾಗಿರುವುದು. ಮತ್ತು "ಧ್ಯಾಯೀತೇಶಾನಂ ಪ್ರಧ್ಯಾಯಿತವ್ಯಂ ಬ್ರಹ್ಮ ವಿಷ್ಣು ರುದ್ರೇಂದ್ರಾಸ್ತೇ ಸಂಪ್ರಸೂಯಂತೆ" "ಸೋಮಃ ಪವತೆ ಜನಿತಾ ಮತೀನಾಂ" "ಕ್ಷರಂ ಪ್ರಧಾನಮಮೃತಾಕ್ಷರಂ ಹರಃ ಕ್ಷರಾತ್ಮಾನಾ ವೀಶತೇ ದೇವ ಏಕಃ" "ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮ ಣೋಽಧಿಪತಿರ್ಬ್ರಹ್ಮಾ ಶಿವೋ ಮೇಽಸ್ತು ಸದಾಶಿವೋಂ" "ಏಕ ಏವ ರುದ್ರೋಃ ದ್ವಿತೀಯಾಯತಸ್ಥುಃ ಯ ಇಮಾನ್ ಲೋಕಾನೀಶತೆ ಈಶನೀಯುರ್ಜನನೀಯುಃ.... ..... "ಯಃ ಸರ್ವಾನ್ ಲೋಕಾನೀಶತೇ ಈಶನೀಭಿಃ ಪರಮಶಕ್ತಿಭಿಃ" "ಏಷಾಮೀಶೇ ಪಶುಪತಿಃ ಪಶೂನಾಂ ಚತುಷ್ಪದಾಮುತ ದ್ವಿಪದಾಂ" "ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೆ" "ನಿಧನ ಪತಯೇ ನಮಃ" "ಸರ್ವ ಭೂತದಮನಾಯ ನಮೋ ಮನೋನ್ಮನಾಯ ನಮಃ" ಇತ್ಯಾದ್ಯನೇಕ ಶ್ರುತಿಗಳಿಂದ ಪರಶಿವನಿಗೆ ಮಾತ್ರ ಜಗಜ್ಜನ್ಮಾದಿ ಹೇತುತ್ವವು ಹೇಳಲ್ಪಡುವುದು. ಸ್ವಶಕ್ತ್ಯವಚ್ಛಿನ್ನ (ತನ್ನ ಶಕ್ತಿಯಿಂದ ಕೂಡಿದ) ರಜೋಗುಣ ವಿಶಿಷ್ಟನಾದ ಭವ ನಾಮಕನಾದ ಶಿವನು ಜಗನ್ನಿರ್ಮಾಣ (ಉತ್ಪತ್ತಿ) ವನ್ನೂ ಸಾತ್ವಿಕ ಗುಣಾಸ್ಪದನಾದ

CC-0. Jangamwadi Math Collection. Digitized by eGangotri

ಮೃಡನಾಮಕನಾದ ಶಿವನು ಜಗತ್ಪಾಲನ (ಸ್ಥಿತಿ) ವನ್ನೂ ತಮೋಗುಣ ವಿಶಿಷ್ಟನಾದ ಹರನಾಮಕನಾದ ಶಿವನು ಜಗತ್ಸಂಹಾರವನ್ನು ಮಾಡುವವನಾಗಿ ತ್ರಿಗುಣಾತ್ಮಕವಾದ ಪ್ರಕೃತಿಯನ್ನು ತನ್ನ ಚಿಚ್ಛಕ್ತಿಯಲ್ಲಿ ಲಯಗೊಳಿಸಿ ತಾನು ಸ್ವಾಭಾವಿಕವಾದ ಚಿಚ್ಛಕ್ತಿಯಿಂದ ವಿಶಿಷ್ಟನಾಗಿ ಅದ್ವಿತೀಯನಾಗಿ ಪ್ರಕಾಶಿಸುತ್ತಾನೆ. ಈ ವಿಷಯವು ಮಹಿಮ್ನ ಸ್ತೋತ್ರದಲ್ಲಿಯೂ "ವಿಶ್ವೋತ್ಪತ್ತೌ ಭವಾಯ ನಮೋ ನಮಃ" ಎಂದು ಉಕ್ತವಾಗಿದೆ. ಆದುದರಿಂದಲೇ ಶಿವಾಗಮದಲ್ಲಿ "ಸರ್ವಜ್ಞತಾ ತೃಪ್ತಿರನಾದಿಬೋಧಃ ಸ್ವತಂತ್ರತಾ ನಿತ್ಯಮಲುಪ್ತಶಕ್ತಿರನಂತ ಶಕ್ತಿಶ್ಚ ವಿಭೋರ್ವಿಧಿಜ್ಞಾಃ ಷಡಾಹುರಂಗಾನಿ ಮಹೇಶ್ವರಸ್ಯ" "ಯದ್ಭಕ್ತಸ್ಥಲ ಮಿತ್ಯಾಹುಸ್ತತ್ಸರ್ವಜ್ಞತ್ವಮುಚ್ಯತೇ। ಯನ್ಮಾಹೇಶ್ವರಕಂ ನಾಮ ತತ್ತೃಪ್ತಿ ರಭಿಧೀಯತೇ॥ ಯತ್ಪ್ರಸಾದಾಭಿಧಂ ಸ್ಥಾನಂ ತದ್ಬೋಧೋಮೇ ನಿರಂಕುಶಃ। ಯತ್ಪ್ರಾಣಲಿಂಗಕಂ ನಾಮ ತತ್ಸ್ವತಂತ್ರ್ಯಮುದಾಹೃತಂ। ಯದಸ್ತಿ ಶರಣಂ ನಾಮಹ್ಯಲುಪ್ತಾಶಕ್ತಿರುಚ್ಯತೇ। ಯದೈಕ್ಯಸ್ಥಾನ ಮೂರ್ಧ್ವಸ್ಥಂ ಹ್ಯನಂತಾ ಶಕ್ತಿರುಚ್ಯತೇ॥ ಏತದಂಗಸ್ಥಲಂ ದೇವಿ ಗುಹ್ಯಾದ್ಗುಹ್ಯತಮಂ ಪರಂ" ಇಂತೆಂದು ಹೇಳುವುದರಿಂದ ಸರ್ವಜ್ಞತ್ವಾದಿ ಧರ್ಮಗಳು ಶಿವನಿಗೆ ಮಾತ್ರ ಸಂಭವಿಸುತ್ತವೆ. ಆದುದರಿಂದ ಶಿವೇತರ ವಿಷ್ಣ್ವಾದಿ ದೇವತೆಗಳಿಗೆ ಬ್ರಹ್ಮಲಕ್ಷಣವೆನಿಸುವ ಜಗಜ್ಜನ್ಮಾದಿ ಕಾರಣತ್ವವು ಸಿದ್ಧಿಸುವುದಿಲ್ಲ. ಕಿಂತು ಶಿವನಿಗೇನೇ ಸಿದ್ಧಿಸುತ್ತದೆ.

ಶಾಸ್ತ್ರಯೋನಿತ್ವಾಧಿಕರಣ

ಶಾಸ್ತ್ರಯೋನಿತ್ವಾತ್ (೧-೧-೩)

ಸೂತ್ರಕಾರರು ವಿಚಾರ ಯೋಗ್ಯವಾದ ಬ್ರಹ್ಮದ ಲಕ್ಷಣವನ್ನು ಹೇಳಿ ಆ ಬ್ರಹ್ಮಸದ್ಭಾವದಲ್ಲಿ ಪ್ರಮಾಣವನ್ನು ಹೇಳುತ್ತಾರೆ :—

"ಶಾಸ್ತ್ರಯೋನಿತ್ವಾತ್" ಎಂಬ ಸೂತ್ರಕ್ಕೆ "ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ದೃಗ್ವೇದೋ ಯಜುರ್ವೇದಃ ಸಾಮವೇದಃ" (ಬೃ. ೨-೪-೧೧) ಈ ವಾಕ್ಯವು ವಿಷಯವಾಗಿದೆ. "ಶಿವೋ ನಾಮೇವ ಪಿತರಃ" ಎಂಬ ಶ್ರುತಿಯಿಂದ ಋಗ್ವೇದಾದಿ ಶಾಸ್ತ್ರಕ್ಕೆ ಶಿವನೇ ಕಾರಣನೆಂದು ತಿಳಿದುಬರುತ್ತದೆ. ಶಿವನೆಂಬ ಪರಮಾಪ್ತನಿಂದ ಜನ್ಯಗಳಾದುದರಿಂದಲೇ ವೇದಗಳಿಗೆ ಪ್ರಾಮಾಣ್ಯವು ಸಿದ್ಧವಾಗುತ್ತದೆ. ಆದ್ದರಿಂದ ಜಗಜ್ಜನ್ಮಾದಿ ಕಾರಣನು ಶಿವನೇ ಆಗಿರುವನು.

ಸಂದೇಹಪ್ರದರ್ಶನ ;—ಮೇಲೆ ಹೇಳಿದ "ಶಿವೋನಾಮೇವ ಪಿತರಃ" ಎಂಬ ಶ್ರುತಿಯಿಂದ ಶಿವನೇ ವೇದಜನಕನೆಂದೂ "ವಾಚಾ ವಿರೂಪ ನಿತ್ಯಯಾ" ಎಂಬ ಶ್ರುತಿಯಿಂದ ವೇದಜನಕನಾವನೂ ಇಲ್ಲವೆಂದು ಅವು ನಿತ್ಯಗಳೆಂದೂ ಕಂಡುಬರುವುದ

CC-0. Jangamwadi Math Collection. Digitized by eGangotri

ರಿಂದ ಶಿವನು ನಿಗಮಾಗಮಗಳಿಗೆ ಕಾರಣನೋ ಅಲ್ಲವೋ? ಎಂದು ಸಂದೇಹ ವುಂಟಾಗುವುದು.

ಪೂರ್ವಪಕ್ಷ :—ಇನ್ನು "ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ" ಎಂಬ ಸ್ಮೃತಿಯಿಂದ ವೇದವು ನಿತ್ಯವೆಂದು ಕಂಡುಬರುವುದರಿಂದಲೂ ಪರಮೇಶ್ವರನಿಂದ ಅವುಗಳಿಗೆ ಜನ್ಯತ್ವವನ್ನು ಹೇಳಿದರೆ ವೇದಗಳು ಪೌರುಷೇಯಗಳಾಗುವುದರಿಂದ ಅವುಗಳಿಗೆ ಅಪ್ರಾಮಾಣ್ಯವು ಪ್ರಾಪ್ತವಾದೀತು. ಹಾಗೂ ಅನಿತ್ಯತ್ವವೂ ಉಂಟಾದೀತು. ಆದ್ದರಿಂದ ಶಿವನಂತೆ ವೇದಗಳೂ ತ್ರೈಕಾಲಿಕಾಬಾಧ್ಯಗಳೇ ಆಗಿರುವುವು.

ಸಿದ್ಧಾಂತ :—ಹೀಗೆ ಪೂರ್ವಪಕ್ಷವುಂಟಾಗಲು ಭಾಷ್ಯಕಾರರು ಸಿದ್ಧಾಂತ ಪಕ್ಷವನ್ನು "ಭ್ರೂಮ್ಯಃ" ಎಂದು ಸ್ಥಾಪಿಸುತ್ತಾರೆ. ವೇದಗಳು ಸ್ವಯಂಭುವಗಳು ಎಂದು ಹೇಳಿದರೆ "ಶಿವೋಮಾಮೇವ ಪಿತರಃ" ಎಂಬ ಶ್ರುತಿ ವಿರೋಧವಾಗುವುದು. ಹಾಗೂ ಸಾಮ ಶಾಖಾಂತರ್ಗತ ಚರಣವ್ಯೂಹದಲ್ಲಿ ವೇದಗಳ ಶರೀರ, ಗೋತ್ರ, ವರ್ಣಾದಿಗಳ ನಿರೂಪಣವೂ ಉಂಟು. ವೇದಗಳು ಶಬ್ದ, ಗುಣರೂಪಗಳಾಗಿರುವುದರಿಂದಲೂ ಶಬ್ದಗಳು ಆಕಾಶದಿಂದ ಜನ್ಯಗಳಾಗಿರುವುದರಿಂದಲೂ ಆಕಾಶವು "ಆತ್ಮನಃ ಆಕಾಶಃ ಸಂಭೂತಃ" ಎಂಬ ಶ್ರುತಿಯಂತೆ ಶಿವಜನ್ಯವಾಗಿರುವುದರಿಂದಲೂ ವೇದಗಳು ಸ್ವಯಂಭುವಗಳೆಂದು ಹೇಳುವುದು ಯುಕ್ತವಲ್ಲ. ಈ ವಿಷಯದಲ್ಲಿ ಸ್ಮೃತಿಯು "ಅಷ್ಟಾದಶಾನಾಮೇತಾಸಾಂ ವಿದ್ಯಾನಾಂ ಭಿನ್ನವರ್ತ್ಮನಾಂ। ಆದಿಕರ್ತಾ ಶಿವಃ ಸಾಕ್ಷಾಚ್ಛೂಲಪಾಣಿರಿತಿ ಶ್ರುತಿಃ" ಇತ್ಯಾದಿಯಾಗಿ ಹದಿನೆಂಟು ಭಿನ್ನಮಾರ್ಗರೂಪ ವಿದ್ಯೆಗಳಿಗೆ ಪ್ರಥಮದಲ್ಲಿ ಶಿವನೇ ಕರ್ತನಾಗಿರುವನೆಂದೂ ಸದ್ಯೋಜಾತ ಮುಖದಿಂದ ಋಗ್ವೇದವನ್ನೂ ವಾಮದೇವ ಮುಖದಿಂದ ಯಜುರ್ವೇದವನ್ನೂ ಅಘೋರ ಮುಖದಿಂದ ಸಾಮವೇದವನ್ನೂ ತತ್ಪುರುಷ ಮುಖದಿಂದ ಅಥರ್ವಣವೇದವನ್ನೂ ಈಶಾನ ಮುಖದಿಂದ ಇಪ್ಪತ್ತೆಂಟು ಕಾಮಿಕಾದಿ ಶಿವಾಗಮಗಳನ್ನೂ ನಿರ್ಮಿಸಿದನೆಂದೂ ವಿಮರ್ಶ ಶಕ್ತಿಯೇ ನಿಗಮಾಗಮ ರೂಪವಾಗಿರುವುದೆಂದೂ ಆದುದರಿಂದ ನಿಗಮಾಗಮಗಳಲ್ಲಿ ಭೇದಭಾವನೆಯನ್ನು ಮಾಡತಕ್ಕವನು ತನ್ನ ಸಹಸ್ರ ಕುಲದವರೊಡನೆ ದೃಢವಾಗಿ ನರಕಯಾತನೆಯನ್ನನುಭವಿಸುವನೆಂದೂ ಉದ್ಘೋಷಿಸುತ್ತಿರುವುದರಿಂದ ಶಿವನೇ ಸರ್ವವಿದ್ಯಾಕರ್ತನೆಂದು ಸಿದ್ಧಾಂತವು. ಸೃಷ್ಟಿಗಿಂತಲೂ ಪೂರ್ವದಲ್ಲಿ ತನ್ನ ಚಿಚ್ಛಕ್ತಿಯಲ್ಲಿ ವಿಲೀನಗಳಾದ ವೇದಾಗಮಗಳನ್ನು ನಿಶ್ವಸಿತ (ವಿಶ್ವಾಸ) ದಿಂದ ಅನಾಯಾಸವಾಗಿ ಪೂರ್ವಸೃಷ್ಟಿಯಲ್ಲಿದ್ದಂತೆ ವರ್ಣವ್ಯತ್ಯಾಸವಿಲ್ಲದಂತೆ ಪುನಃ ಸೃಷ್ಟಿಯಲ್ಲಿ ವೇದಾಗಮಗಳನ್ನು ರಚಿಸುವವನಾಗಿ ಆವಿರ್ಭಾವಗೊಳಿಸುತ್ತಾನೆಂದು ಸ್ವೀಕರಿಸಬೇಕು. ಆದುದರಿಂದ ವೇದಾಗಮಗಳಿಗೆ ಅಪೌರುಷೇಯತ್ವವೂ ಈಶ್ವರ ಜನ್ಯತ್ವವೂ ಸಿದ್ಧಿಸುವುದರಿಂದ ಜನ್ಯತ್ವಾಜನ್ಯತ್ವವನ್ನು ಹೇಳುವ ಶ್ರುತಿಗಳು ಪರಸ್ಪರ ವಿರುದ್ಧಗಳಾಗುವುದಿಲ್ಲ.

CC-0. Jangamwadi Math Collection. Digitized by eGangotri

ಶಂಕಾ:—"ನ ಸನ್ನ ಚಾ ಸಚ್ಛಿವ ಏವ ಕೇವಲಃ" "ನಾನ್ಯತ್ಕಿಂಚನ ಮಿಷತ್" "ನೇಹನಾಸ್ತಿ ಕಿಂಚನ" "ನ ತು ತದ್ವಿತೀಯಮಸ್ತಿ" ಇತ್ಯಾದಿ ಶ್ರುತಿಗಳಲ್ಲಿ ದ್ವಿತೀಯ ವಸ್ತುಗಳ ನಿಷೇಧವು ಕಂಡುಬರುವುದರಿಂದ ವೇದಗಳು ನಿತ್ಯಗಳೆಂದು ಹೇಳುವುದು ಯುಕ್ತವಲ್ಲವೆಂದು ಆಶಂಕಿಸಕೂಡದು.

ಸಮಾಧಾನ:—"ಸರ್ವಂ ಖಲ್ವಿದಂ ಬ್ರಹ್ಮ" "ಸರ್ವೋ ವೈ ರುದ್ರಃ" ಇತ್ಯಾದಿ ಶ್ರುತಿಗಳಲ್ಲಿ ಚರಾಚರ ಪ್ರಪಂಚವು ಉಪಾದಾನಕಾರಣ ಬ್ರಹ್ಮಜನ್ಯವಾದುದರಿಂದ ಬ್ರಹ್ಮರೂಪವೇ ಆಗಿರುವುದೆಂದು ಹೇಳುವುದರಿಂದ ಜಗತ್ತು ಮಿಥ್ಯೆಯಲ್ಲವೆಂದು ಸ್ಪಷ್ಟವಾಗುವುದು. ಸೃಷ್ಟಿಗಿಂತಲೂ ಪೂರ್ವದಲ್ಲಿ ಬೀಜದಲ್ಲಿ ಅಂಕುರದಂತೆ ನಿಗಮಾತ್ಮಕವಾದ ಚಿಚ್ಛಕ್ತಿಯು ಪರಮೇಶ್ವರನಲ್ಲಿ ವಿಲೀನವಾಗಿರುತ್ತದೆ. ಶಕ್ತಿ ಶಕ್ತಿಮತ್ಸ್ವರ ಶಿವರುಗಳಿಗೆ ಅಭೇದವಿರುವುದರಿಂದ "ಶಿವ ಏವ ಕೇವಲಃ" ಇತ್ಯಾದಿ ಪೂರ್ವೋಕ್ತ ಶ್ರುತಿಗಳಿಗೆ ವಿರೋಧವಿಲ್ಲ.

"ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ ಬಲಕ್ರಿಯಾ ಚ" (ಶ್ವೇ. ೬-೮) ಎಂಬ ಶ್ರುತಿಯು ಶಿವಶಕ್ತಿಯು ಸ್ವಾಭಾವಿಕ (ನಿತ್ಯ) ವೆಂದು ಸಾರುವುದರಿಂದ ಆ ಶಕ್ತಿಜನ್ಯವಾದ ಜಗತ್ತು ಕೂಡ ಸತ್ಯವೇ ಆಗಿರುವುದು. ಜಗತ್ತು ಮಿಥ್ಯೆಯೆನ್ನುವಲ್ಲಿ ಯಾವ ಶ್ರುತ್ಯಾದಿ ಪ್ರಮಾಣವೇ ಇಲ್ಲವಾದ್ದರಿಂದ ಜಗನ್ಮಿಥ್ಯಾತ್ವವಾದವು ಅಯುಕ್ತವಾಗಿದೆ.

ಶಂಕಾ :—ಶಬ್ದ, ಬುದ್ಧಿ, ಕರ್ಮಗಳು ತ್ರಿಕ್ಷಣಾವಸ್ಥಾಯಿ (ಮೂರು ಕ್ಷಣದವರೆಗೂ ಇರುವ) ಗಳಾಗಿರುವುದರಿಂದ ಶಬ್ದರೂಪವಾದ ವೇದಕ್ಕೆ ನಿತ್ಯತ್ವವನ್ನು ಹೇಳುವುದು ಅಸಂಗತವಲ್ಲವೆ ?

ಸಮಾಧಾನ :—ವೇದಕಾರಣವಾದ ವಿಮರ್ಶಶಕ್ತಿಯು ಸತ್ಯವಾಗಿರುವುದರಿಂದ ಕಾರ್ಯವಾದ ವೇದಕ್ಕೂ ಸತ್ಯತ್ವವನ್ನು ಒಪ್ಪಲೇಬೇಕು. ಕಾರಣವು ಸತ್ಯವಾಗಲು ಕಾರ್ಯವೂ ಸತ್ಯವಾಗುವುದು ಎಂಬ ನ್ಯಾಯವಿರುವುದಷ್ಟೆ. ಇನ್ನು ನಿತ್ಯ ಶುದ್ಧ, ಬುದ್ಧ ಮುಕ್ತ ಸ್ವಭಾವವುಳ್ಳ ಮಹೇಶ್ವರನು ಪರಮಾಪ್ತನಾಗಿರುವುದರಿಂದ ಅವನ ವಚನವೆಂಬ ವೇದವು ಸ್ವತಃ ಪ್ರಮಾಣವೇ ಆಗಿರುವುದು. ಯಾವುದು ಪೌರುಷೇಯವೋ ಅದು ಅಪ್ರಮಾಣವೆನ್ನುವ ನಿಯಮವು ಶಿವನ ವಿಷಯದಲ್ಲಿ ಅಲ್ಲ. ಕಿಂತು ರಾಗ ದ್ವೇಷಾದಿ ಪಾಶಬದ್ಧವಾದ ಜೀವರ ವಿಷಯದಲ್ಲಿಯೇ ಎಂದು ತಿಳಿಯಬೇಕು. ವೇದಗಳಾದರೋ ಶಾಂಭವ (ಲಿಂಗಧಾರಣ) ದೀಕ್ಷೆಯನ್ನು ಹೊಂದಿ ಶಿವಾನುಗ್ರಹಬಲದಿಂದ ಪರಮೇಶ್ವರನ ಅನಂತಕಲ್ಯಾಣಗುಣಗಳನ್ನು ಸ್ತುತಿಪಾಠಕರಾದ ಕವಿಗಳಂತೆ ವಿಧಿಲಕ್ಷಣಗಳಿಂದ ಸ್ತುತಿಸುತ್ತವೆ. ಇದಲ್ಲದೆ ವೇದಗಳಿಗೆ ಭಸ್ಮಧಾರಣವು "ತ್ರಿಯಾ

CC-0. Jangamwadi Math Collection. Digitized by eGangotri

ಯುಷಂ" ಎಂಬುಕ್ತಿಯಿಂದ ಸ್ಪಷ್ಟವಾಗಿದೆ. ಹಾಗೂ "ತಾನಿ ವಾ ಏತಾನಿ ರುದ್ರಾಣಿ" ಇತ್ಯಾದಿಯಾಗಿ ಬೋಧಾಯನ ಶಾಖೆಯಲ್ಲಿ ರುದ್ರಾಕ್ಷಧಾರಣವು ಕಂಡುಬರುತ್ತದೆ. ಮತ್ತು "ಅಯಂ ಮೇ ಹಸ್ತೋ ಭಗವಾನ್" ಇತ್ಯಾದಿಯಾಗಿ ಯಜುರ್ವೇದದಲ್ಲಿಯೂ ವೇದಪುರುಷರಿಗೆ ಲಿಂಗಧಾರಣವು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗೂ "ಜಗತಾಂ ಪತಯೇ ನಮಃ । ನಮೋ ಹಿರಣ್ಯಬಾಹವೇ ನಮಃ" ಇತ್ಯಾದಿಯಾಗಿ ಪಶುಪತಿಯ ಸ್ತುತಿಯನ್ನೂ ಮಾಡುತ್ತವೆ. ವೇದಕರ್ತೃಪರಮೇಶ್ವರನೇ ಆದುದರಿಂದ ವೇದಗಳು ಪರಮೇಶ್ವರನ ವಿಮರ್ಶಶಕ್ತಿರೂಪಗಳಾಗಿರುವುದರಿಂದ ಪರಶಿವಬ್ರಹ್ಮ ಸದ್ಭಾವದಲ್ಲಿ ಮುಖ್ಯ ಪ್ರಮಾಣಗಳಿವೆ.

ಶಂಕಾ :—"ಷಡ್ಢೋತಾ ವೈ ಭೂತ್ವಾ ಪ್ರಜಾಪತಿರಿದಂ ಸರ್ವಮಸೃಜತ ಋಚೋ ಯಜೂಂಷಿ ಸಾಮಾನಿ" ಇತ್ಯಾದಿ ಶ್ರುತಿಯಿಂದ ಚತುರ್ಮುಖನಿಗೂ ಕೂಡ ವೇದಕರ್ತೃತ್ವವು ಕಂಡುಬರುವುದರಿಂದ ಮಹೇಶ್ವರನಿಗೆ ಅದನ್ನು ಹೇಗೆ ಹೇಳುವಿರಿ ?

ಸಮಾಧಾನ :—"ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" (ಶ್ವೇ. ೬-೧೮) ಇತ್ಯಾದಿ ಶ್ರುತಿಯಲ್ಲಿ ಹಿರಣ್ಯಗರ್ಭೋತ್ಪತ್ತಿಗಿಂತಲೂ ಪೂರ್ವದಲ್ಲಿಯೇ ವೇದಗಳು ಇದ್ದವೆಂದೂ ಅವುಗಳೆಲ್ಲವನ್ನೂ ಚತುರ್ಮುಖನಿಗೆ ಉಪದೇಶಿಸಿದನೆಂದೂ ಕಂಡುಬರುವುದರಿಂದ ಶಿವನೇ ಸರ್ವಾಧಿಕನು. "ಯೋ ದೇವಾನಾಂ ಪ್ರಥಮಂ ಪುರಸ್ತಾತ್ ವಿಶ್ವಾಧಿಕೋ ರುದ್ರೋ ಮಹರ್ಷಿಃ" "ಹಿರಣ್ಯಗರ್ಭಂ ಪಶ್ಯತ ಜಾಯಮಾನಂ" ಇತ್ಯಾದಿ ಶ್ರುತಿಯಿಂದ ಶಿವನೇ ಚಿದಚಿತ್ಪ್ರಪಂಚಾಧಿಕನೆಂದೂ ಹಿರಣ್ಯಗರ್ಭ ಜನಕನೆಂದೂ ಕಂಡುಬರುವುದರಿಂದ ಶಿವನೇ ಸರ್ವೋತ್ತಮನಲ್ಲದೆ ಇತರರಾರೂ ಅಲ್ಲ.

ಶಂಕಾ :—ಸಕಲ ವೇದವೇದಾಂತ ಶಾಸ್ತ್ರೋಕ್ತ ಪದಾರ್ಥಗಳ ಜ್ಞಾನವೇ ಸರ್ವಜ್ಞತ್ವವಲ್ಲವೆ ; ಈ ಸರ್ವಜ್ಞತ್ವವು ಉಪಮನ್ಯು, ದಧೀಚಿ, ಗೌತಮ, ದೂರ್ವಾಸ, ರೇಣುಕ, ದಾರುಕ, ಶಂಕುಕರ್ಣ, ಗೋಕರ್ಣಾದಿಗಳಲ್ಲಿಯೂ ಕಂಡುಬರುವುದರಿಂದ ಪರಮೇಶ್ವರನೊಬ್ಬನಲ್ಲಿಯೇ ಹೇಳುವುದು ಹೇಗೆ ಯುಕ್ತವಾಗುವುದು.

ಸಮಾಧಾನ :—ಪರಮೇಶ್ವರನ ಉಪಾಸನಾಬಲದಿಂದ ಅವನ ಕೃಪೆಯಿಂದ ಯತ್ಕಿಂಚಿತ್ ಸರ್ವಜ್ಞತ್ವವನ್ನು ಆ ಉಪಮನ್ಯು ಮೊದಲಾದವರಲ್ಲಿ ಹೇಳುವುದರಿಂದ ವಿರೋಧವಿಲ್ಲ. ಹೇಗೆಂದರೆ ಖದ್ಯೋತ (ದೀಪದಹುಳು) ಸೂರ್ಯ ಇವರಿಗೆ ತೇಜಸ್ತ್ವಧರ್ಮದಿಂದ ಏಕತ್ವವಿದ್ದರೂ ಪ್ರಕಾಶನ ವೈಲಕ್ಷಣ್ಯವಿರುವಂತೆ ಉಪಮನ್ಯು ಮೊದಲಾದವರಿಗೆ ಜ್ಞಾನವೈಲಕ್ಷಣ್ಯವನ್ನು ಹೇಳಬೇಕು. ಸಕಲವಸ್ತುಪ್ರಕಾಶಗಳಾದ ವೇದಗಳಿಗೆ ಕರ್ತನಾದ ಪರಮೇಶ್ವರನಿಗೆ ಸರ್ವಾಧಿಕಜ್ಞಾನವನ್ನು ಹೇಳುವುದೆ ಯುಕ್ತ

CC-0. Jangamwadi Math Collection. Digitized by eGangotri

ವಾಗಿದೆ. ಯಾಕೆಂದರೆ ಲೋಕದಲ್ಲಿ ಶಾಸ್ತ್ರ ಪ್ರವರ್ತಕರಿಗಿಂತಲೂ ಶಾಸ್ತ್ರಕರ್ತೃಗಳಲ್ಲಿ ವಿಶೇಷ ಜ್ಞಾನವಿರುವುದು ಲೋಕಾನುಭವಸಿದ್ಧವೇ ಆಗಿರುವುದು. ಇದಲ್ಲದೆ ಸರ್ವಾಂತರ್ಯಾಮಿಯಾದುದರಿಂದ ಸರ್ವಜ್ಞಾನವು ಶಿವನಿಗಲ್ಲದೆ ಮತ್ತಾರಿಗೂ ಯುಕ್ತವಲ್ಲ. ಸರ್ವಜ್ಞತ್ವಾದಿ ಷಡ್ವಿಧ ಧರ್ಮಗಳು ಶಿವನಿಗೆ ಮಾತ್ರ ಅಸಾಧಾರಣ ಧರ್ಮಗಳಾಗಿವೆ.

ಶಂಕಾ :—"ಜನ್ಮಾದ್ಯಸ್ಯ ಯತಃ" ಎಂಬ ಪೂರ್ವ ಸೂತ್ರದಿಂದ ಶಿವನಿಗೆ ಜಗಜ್ಜನ್ಮಾದಿ ಕಾರಣತ್ವವನ್ನು ಹೇಳಿದ್ದರಿಂದ ಅದರಿಂದಲೇ ಶಾಸ್ತ್ರ ಕಾರಣತ್ವ ಸರ್ವಜ್ಞತ್ವಾದಿಗಳು ಶಿವನಿಗೆ ಸಿದ್ಧಗಳೇ ಆಗಿರುವುವು. ಅಂದಮೇಲೆ ಪುನಃ "ಶಾಸ್ತ್ರಯೋನಿತ್ವಾತ್" ಎಂಬ ಸೂತ್ರದಿಂದ ಶಿವನಿಗೆ ಶಾಸ್ತ್ರಕಾರಣತ್ವವನ್ನು ಹೇಳುವುದು ನಿರರ್ಥಕವಲ್ಲವೆ? ಎಂದು ಆಶಂಕೆಯಾಗಲು ಸೂತ್ರಕಾರರು "ಪೂರ್ವಸೂತ್ರೇ" ಎಂದು ವಾರಣಮಾಡುತ್ತಾರೆ.

ಸಮಾಧಾನ :—ಪೂರ್ವಸೂತ್ರದಲ್ಲಿ "ಕ್ಷಿತ್ಯಂಕುರಾದಿಕಂ ಸಕರ್ತೃಕಂ ಕಾರ್ಯತ್ವಾತ್ ಘಟವತ್" ಎಂಬ ಅನುಮಾನವು ಕೂಡ ಬ್ರಹ್ಮಸದ್ಭಾವದಲ್ಲಿ ಪ್ರಮಾಣವೆನಿಸುವದೆಂಬುದಾಗಿ ತೋರುತ್ತದೆ. ಆದ್ದರಿಂದ ಬ್ರಹ್ಮದ ಸತ್ತೆಯಲ್ಲಿ ಶಾಸ್ತ್ರವೇ ಪ್ರಮಾಣವಲ್ಲವೆ ಅನುಮಾನ ಪ್ರಮಾಣವು ಪ್ರಮಾಣವಲ್ಲವೆಂದು ತೋರಿಸುವುದಕ್ಕಾಗಿ ಭಗವಾನ್ ವ್ಯಾಸಮಹರ್ಷಿಯಿಂದ ಶಾಸ್ತ್ರಯೋನಿತ್ವಾಧಿಕರಣವು ತೋರಿಸಲ್ಪಟ್ಟಿರುವುದು. "ಶಾಸ್ತ್ರಂ" ನಿಗಮಾಗಮಾತ್ಮಕವಾದ ಶಾಸ್ತ್ರವು "ಯೋನಿಃ" ಪ್ರಮಾಣವು (ಯಸ್ಯ) ಯಾವ ಬ್ರಹ್ಮಕ್ಕೆ ಆಗಿರುವುದೋ ; ಆ ಬ್ರಹ್ಮವು ಶಾಸ್ತ್ರವೇ ಪ್ರಮಾಣವುಳ್ಳದ್ದಾಗಿರುವುದು ಎಂದು ಸೂತ್ರಾರ್ಥವು.

ದ್ವಿತೀಯವರ್ಣಕ

ಸೂತ್ರವು ಸೂಚನಾತ್ಮಕವಾಗಿರುವುದರಿಂದ ಶ್ಲೇಷಕಾವ್ಯದಂತೆ ಅದರಲ್ಲಿ ಅನೇಕ ಅರ್ಥಗಳು ಪ್ರತಿಪಾದಿತವಾಗಿವೆ. ಆದ್ದರಿಂದ ವಾಕ್ಯಭೇದಾದಿ ದೋಷಗಳಿಗೆ ಅವಕಾಶವಿಲ್ಲವಾದ್ದರಿಂದ ಪುನರಧಿಕರಣಾಂತರವು ಯುಕ್ತವೇ ಆಗಿದೆ. ಈ ಸೂತ್ರಕ್ಕೆ "ತಂ ತ್ವಾಪನಿಷದಂ ಪುರುಷಂ ಪೃಚ್ಛಾಮಿ" (ಬೃ. ೩–೯–೨೬) "ನಾ ವೇದವಿನ್ಮನುತೇ ತಂ ಬೃಹಂತಂ" (ತೈ.ಬ್ರಾ. ೩-೧೨-೯) "ನೈಷಾ ತರ್ಕೇಣ ಮತಿರಾಪನೇಯಾ" (ಕಠ. ೯) "ಋತಂ ಸತ್ಯಂ ಪರಂ ಬ್ರಹ್ಮಪುರುಷಂ ಕೃಷ್ಣಪಿಂಗಲಂ ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮಃ" "ಪ್ರಧಾನ ಕ್ಷೇತ್ರಜ್ಞ ಪತಿರ್ಗುಣೇಶಃ ಸಂಸಾರ ಮೋಕ್ಷ ಸ್ಥಿತಿಬಂಧ ಹೇತುಃ" "ಸತ್ಯಜ್ಞಾನಮನಂತಂ ಬ್ರಹ್ಮ" ಇತ್ಯಾದಿ ವಾಕ್ಯಗಳು ವಿಷಯಗಳಾಗಿವೆ.

ಸಂಶಯ :—"ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ" (ಮುಂ. ೩–೧–೮)

CC-0. Jangamwadi Math Collection. Digitized by eGangotri

"ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" ಇತ್ಯಾದಿ ಶ್ರುತಿಗಳು ಬ್ರಹ್ಮದಲ್ಲಿ ವೇದಾಂತಶಾಸ್ತ್ರ ವಿಷಯತ್ವವನ್ನೂ ಹಾಗೂ ಅವಿಷಯತ್ವವನ್ನೂ ಪ್ರತಿಪಾದಿಸುವುದರಿಂದ ಬ್ರಹ್ಮವು ಶಾಸ್ತ್ರವಿಷಯವೊ ಅಲ್ಲವೊ ಎಂಬುದಾಗಿ ಸಂಶಯ ಪ್ರಾಪ್ತವಾಗುವುದು.

ಪೂರ್ವಪಕ್ಷ :—"ನಾಪಿ ವಾಚಾ" "ಯನ್ಮನಸಾ ನ ಮನುತೇ" "ಯತೋ ವಾಚೋ ನಿವರ್ತಂತೆ" ಇತ್ಯಾದಿ ಶ್ರುತಿಗಳು ಬ್ರಹ್ಮವು ಶಾಸ್ತ್ರವಿಷಯವಲ್ಲವೆಂದು ಹೇಳುವುದರಿಂದಲೂ ಪ್ರಪಂಚವು ಘಟದಂತೆ ಕಾರ್ಯವಾಗಿರುವುದರಿಂದ ಅನುಮಾನ ಪ್ರಮಾಣದಿಂದಲೇ ಸರ್ವಜ್ಞತ್ವಾದಿ ಷಡ್ವಿಧಧರ್ಮಗಳುಳ್ಳ ಶಿವನು ಸಾಧಿಸಲ್ಪಡುತ್ತಿರುವುದರಿಂದ ಕೇವಲ ವೇದಾಂತಶಾಸ್ತ್ರವೇದ್ಯತ್ವವನ್ನು ಮಾತ್ರ ಹೇಳುವುದು ಯುಕ್ತವಲ್ಲವೆಂದು ಪೂರ್ವಪಕ್ಷವುಂಟಾಗಲು ಭಾಷ್ಯಕಾರರು "ಬ್ರೂಮಃ" ಎಂದು ಸಿದ್ಧಾಂತ ಪಕ್ಷವನ್ನು ಸ್ಥಾಪಿಸುತ್ತಾರೆ.

ಸಿದ್ಧಾಂತ :—ಜಗಜ್ಜನ್ಮಾದಿಕಾರಣವಾದ ಪರಶಿವಬ್ರಹ್ಮವು ಉಪನಿಷಚ್ಛಾಸ್ತ್ರದಿಂದ ಪ್ರತಿಪಾದ್ಯವೇ ಆಗಿರುವುದು. ಏಕೆಂದರೆ "ನಾ ವೇದವಿನ್ಮನುತೇ ತಂ ಬೃಹಂತಂ" (ತೈ. ಬ್ರಾ. ೩–೧೨–೯–೭) "ನೈಷಾ ತರ್ಕೇಣ ಮತಿರಾಪನೇಯಾ" (ಕಠ. ೩–೯) "ತಂತ್ವೌಪನಿಷದಂ ಪುರುಷಂ ಪೃಚ್ಛಾಮಿ" (ಬೃ. ೩–೯–೨೬) ಇತ್ಯಾದಿ ಶ್ರುತಿಗಳು ಪರಶಿವಬ್ರಹ್ಮವು ಉಪನಿಷತ್ಪ್ರಮಾಣದಿಂದ ವೇದ್ಯವಲ್ಲದೆ ಮತ್ತಾವ ಪ್ರಮಾಣದಿಂದಲೂ ವೇದ್ಯವೇ ಅಲ್ಲವೆಂದು ಸ್ಪಷ್ಟವಾಗಿ ಸಾರುತ್ತವೆ. ವೇದಾಂತ ಶಾಸ್ತ್ರಾನುಕೂಲವಾಗಿಯೇ ತರ್ಕಾನುಮಾನಗಳಿಗೆ ಪ್ರಾಮಾಣ್ಯವಲ್ಲದೆ ಸ್ವತಂತ್ರವಾಗಿ ಪ್ರಮಾಣ್ಯವಿಲ್ಲ. ರಥಗೋಪುರಾದಿ ಕರ್ತೃಗಳು ನಾನಾ ಜನಗಳಿರುವುದರಿಂದ ಇವುಗಳ ದೃಷ್ಟಾಂತವು ಒಬ್ಬನೇ ಜಗತ್ಕರ್ತನೆನ್ನುವಲ್ಲಿ ಯುಕ್ತವಲ್ಲ; ಹಾಗೂ ಅನುಮಾನ ಪ್ರಮಾಣದಿಂದ ಬೃಹನ್ನಿಷ್ಠಗಳಾದ ಸತ್ಯಸಂಕಲ್ಪ, ಸತ್ಯಜ್ಞಾನ ಅಪರಿಚ್ಛಿನ್ನತ್ವ ಮೊದಲಾದ ಧರ್ಮಜ್ಞಾನವೂ ಸಂಭವಿಸುವುದಿಲ್ಲವಲ್ಲದೆ ಜಗದುಭಯ (ನಿಮಿತ್ತೋಪಾದಾನ) ಕಾರಣತ್ವವೂ ಸಂಭವಿಸುವುದಿಲ್ಲವಾದ್ದರಿಂದ ಬ್ರಹ್ಮವು ವೇದಾಂತ ಪ್ರಮಾಣ ವೇದ್ಯವಲ್ಲದೆ ಅನುಮಾನಪ್ರಮಾಣ ವೇದ್ಯವಲ್ಲ. ಇನ್ನು "ಯತೋ ವಾಚೋ ನಿವರ್ತಂತೇ" (ತೈ. ಆ. ೪) ಎಂಬ ವಾಕ್ಯವು ಆ ಪರಶಿವಬ್ರಹ್ಮದ ಮಹಾತ್ಮ್ಯ ಜ್ಞಾಪನಾರ್ಥವಾಗಿ ವಿವಕ್ಷಿತವಾಗಿದೆಯೆಂದು ಒಪ್ಪಲೇಬೇಕು. ಇಲ್ಲವಾದರೆ "ಬ್ರಹ್ಮವಿದಾಪ್ನೋತಿ ಪರಂ" (ತೈ. ಆ. ೧) ಇತ್ಯಾದಿ ವಾಕ್ಯಗಳು ವಿರುದ್ಧಗಳಾಗುವುವು.

ಶೈವಪುರಾಣಗಳು ತಾಮಸವಲ್ಲ; ಸಾತ್ವಿಕ

"ಅಗ್ನೇಃ ಶಿವಸ್ಯ" ಇತ್ಯಾದಿ ಭಾಷ್ಯೋಕ್ತ ಮಾತ್ಸ್ಯದಲ್ಲಿ ಶಿವಪುರಾಣ ವಾಕ್ಯ

CC-0. Jangamwadi Math Collection. Digitized by eGangotri

ಗಳು ತಾಮಸಗಳೆಂದೂ "ಸತ್ವಾತ್ಸಂಜಾಯತೇ ಜ್ಞಾನಂ" (ಭ. ಗೀ. ೧೪-೧೭) ಎಂದು ಆರಂಭವಾಗಿ "ಬಂಧಮೋಕ್ಷಂ ಚ ಯಾ ವೇತ್ತಿ ಬುದ್ಧಿಃ ಸಾ ಪಾರ್ಥ ಸಾತ್ವಿಕೀ" (ಭ. ಗೀ. ೧೮-೩೦) ಎಂಬ ಗೀತಾವಾಕ್ಯದಿಂದ ಸಾತ್ವಿಕ ಬುದ್ಧಿಯೇ ಮುಕ್ತಿ ಹೇತು ವೆಂದೂ "ಅಗ್ನೇಃ ಶಿವಸ್ಯ ಮಾಹಾತ್ಮ್ಯಂ ತಾಮಸಂ ಮೋಹಕಾರಕಂ" ಇತ್ಯಾದಿ ಪಾಂಚರಾತ್ರಾಗಮ ವಚನದಿಂದ ಶಿವಪ್ರತಿಪಾದಕ ಪುರಾಣಗಳು ತಾಮಸಗಳೆಂದೂ ಸಿದ್ಧವಾಗುವುದರಿಂದ ಶಿವ ಪ್ರತಿಪಾದಕ ಪುರಾಣಗಳು ಅಪ್ರಮಾಣಗಳಾಗಿರುವುದ ರಿಂದ ಈ ಅಪ್ರಮಾಣ ಪುರಾಣಗಳಿಂದ ಪ್ರತಿಪಾದಿಸಲ್ಪಡುವ ಶಿವನಿಗೆ ಅದು ಹೇಗೆ ವೇದಾಂತಶಾಸ್ತ್ರ ಪ್ರತಿಪಾದ್ಯತ್ವವನ್ನು ಹೇಳುವುದು ? ಹೇಳಲಾಗುವುದಿಲ್ಲವೆಂದು ಆಶಂಕಿಸಕೂಡದು. ಏಕೆಂದರೆ ಶಿವ ಪ್ರತಿಪಾದಕ ಪುರಾಣಗಳು ತಾಮಸಗಳೆನ್ನುವಲ್ಲಿ ಪ್ರಾತ್ಯಕ್ಷಿಕಗಳಾದ ಯಾವ ಶ್ರುತಿಪ್ರಮಾಣಗಳೂ ಇಲ್ಲ. ಕಲ್ಪಿತಗಳಾದ ಪ್ರಚ್ಛನ್ನ ಬೌದ್ಧ ವಾಕ್ಯಗಳು ಪ್ರಮಾಣಗಳಲ್ಲ. ಆಗಲಿ, ಶಿವಪುರಾಣಗಳು ತಮೋಗುಣ ವಿಶಿಷ್ಟ ದೇವತೆಗಳನ್ನು ಹೇಳುತ್ತವೆಂದು ತಾಮಸಗಳನ್ನು ಹೇಳುವಿರೋ ? ಅಥವಾ ತಮೋಗುಣ ವಿಶಿಷ್ಟನಾದ ವ್ಯಾಸಋಷಿಯು ಮಾಡಿದ್ದರಿಂದ ತಾಮಸಗಳೆಂದು ಹೇಳು ವಿರೋ ? ಅಥವಾ ತಮೋಗುಣವಿದ್ದ ಕಾಲದಲ್ಲಿ ಜನ್ಯಗಳಾದ್ದರಿಂದ ತಾಮಸಗಳೆಂದು ಹೇಳುವಿರೋ ?

ಪ್ರಥಮ ವಿಕಲ್ಪವು ಯುಕ್ತವಾದುದಲ್ಲ. ಏಕೆಂದರೆ ಋಗ್ವೇದಾದಿ ವೇದ ವೇದಾಂತಾದಿಗಳೂ ಕೂಡ ನಿಮ್ಮಂತೆ ತಮೋಗುಣವುಳ್ಳ ರುದ್ರಾಗ್ನಿಯನ್ನು ಪ್ರತಿ ಪಾದಿಸುತ್ತಿರುವುದರಿಂದ ಋಗಾದಿ ಆ ಶಾಸ್ತ್ರಗಳೂ ತಾಮಸಗಳಾಗಿ ಅಪ್ರಮಾಣಗಳೆ ನಿಸಬೇಕಾಗುವುದಲ್ಲದೆ ಇವುಗಳೂ ಬೌದ್ಧಾಗಮಗಳೂ ಒಂದೇರೀತಿಯುಳ್ಳವುಗಳೆಂದೂ ಹೇಳಬೇಕಾಗುವುದು. ಎರಡನೇ ವಿಕಲ್ಪವೂ ಕೂಡ ಯುಕ್ತವಲ್ಲ. ಏಕೆಂದರೆ ವಿಷ್ಣು ಪುರಾಣಗಳೂ ಕೂಡ ತಮೋಗುಣ ವಿಶಿಷ್ಟನಾದ ವ್ಯಾಸನಿಂದಲೇ ರಚಿತ ಗಳಾಗಿರುವುದರಿಂದ ಅವೂ ತಾಮಸಗಳಾಗಿ ಅಪ್ರಮಾಣಗಳೆನಿಸಬೇಕು. ಇನ್ನು ಮೂರನೇ ವಿಕಲ್ಪವೂ ಕೂಡ ಯುಕ್ತವಲ್ಲ. ಏಕೆಂದರೆ ತಮೋಗುಣವುಳ್ಳ ಸಮಯ ದಲ್ಲಿ ಶಿವಪುರಾಣಗಳನ್ನೂ ಸತ್ವಗುಣವಿದ್ದ ಸಮಯದಲ್ಲಿ ವಿಷ್ಣುಪುರಾಣಗಳನ್ನೂ ರಚಿಸಿದನೆಂಬುವಲ್ಲಿ ಯಾವ ಪ್ರಮಾಣವೂ ಇಲ್ಲ. ಸರ್ವ ವೇದವೇದಾಂತ ಸಾರವನ್ನೇ ಶ್ರೀ ವ್ಯಾಸರು ಪುರಾಣರೂಪದಿಂದ ಹೇಳಿರುವರು.

ಶಂಕಾ :—"ಮಾತ್ಸ್ಯಂ ಕೌರ್ಮಂ ತಥಾ ಲೈಂಗಂ ಶೈವಂ ಸ್ಕಾಂದಂ ತಥೈವಚ ಆಗ್ನೇಯಂ ಚ ಷಡೇತಾನಿ ತಾಮಸಾನಿ ನಿಬೋಧ ಮೇ" ಇತ್ಯಾದಿ ಭಾಷ್ಯೋಕ್ತ ಗಳಾದ ಮಾತ್ಸ್ಯ, ಹರಿತಸ್ಮೃತಿ, ಪಾಂಚರಾತ್ರಾಗಮಾದಿ ವಾಕ್ಯಗಳಿಂದ ಶಿವ ಪುರಾಣಗಳು ತಾಮಸಗಳೆಂದು ಸ್ಪಷ್ಟವಾಗಿ ಉಲ್ಲೇಖವಿರುವುದರಿಂದ ಅದು ಹೇಗೆ

CC-0. Jangamwadi Math Collection. Digitized by eGangotri

ಆ ತಾಮಸಪುರಾಣ ಪ್ರತಿಪಾದ್ಯನಾದ ಶಿವನಿಗೆ ಬ್ರಹ್ಮವೆಂದು ಹೇಳುವಿರಿ ? ಶಾಸ್ತ್ರ ಲೋಕ ಪ್ರಸಿದ್ಧವಾದ ಸಂಹಾರವು ರುದ್ರನ ಕಾರ್ಯವಾಗಿರುವುದರಿಂದ ಶಿವನು ತಾಮಸನೆಂದು ಹೇಳುವಲ್ಲಿ ಯಾವ ಪ್ರತಿಬಂಧಕವೂ ಇರುವುದಿಲ್ಲ. ಈ ರೀತಿಯಾಗಿ ಶಂಕೆಯಾಗಲು ಭಾಷ್ಯಕಾರರು ಪರಿಹರಿಸುತ್ತಾರೆ.

ಸಮಾಧಾನ :—ಹೇಗೆಂದರೆ "ಅಗ್ನೇಃ ಶಿವಸ್ಯ" ಇತ್ಯಾದಿ ವಾಕ್ಯವು ಮತ್ಸ್ಯ ಪುರಾಣದಲ್ಲಿರುವುದರಿಂದಲೂ ಮತ್ಸ್ಯಪುರಾಣವಾದರೋ ತಾಮಸ ಪುರಾಣಗಳ ಪ್ರಕರಣದಲ್ಲಿಯೇ ಪಠಿತವಾಗಿರುವುದರಿಂದ ಆ ವಾಕ್ಯವು ಅಪ್ರಮಾಣವೇ ಆಯಿತು. ಇನ್ನು "ಬ್ರಹ್ಮೇಂದ್ರ ಸೂರ್ಯಚಂದ್ರಾಗ್ನಿಪರಾ ರಾಜಸಂಭವಾಃ" ಇತ್ಯಾದಿ ಪಾಂಚರಾತ್ರಾಗಮದಲ್ಲಿ ಅಗ್ನಿಯು ರಾಜಸನೆಂದು ನಿರೂಪಿಸಿರುವುದರಿಂದ ಮಾತ್ಸ್ಯ ಪಾಂಚರಾತ್ರಾಗಮ ವಾಕ್ಯಗಳು ಪರಸ್ಪರ ವಿರುದ್ಧಗಳಾಗಿ ಉಭಯ ವಾಕ್ಯಗಳು ಅಪ್ರಮಾಣಗಳೆಂದು ಸಿದ್ಧವಾಗುವುದು.

ಇದಲ್ಲದೆ "ಬ್ರಾಹ್ಮಣಾನಾಮಗ್ನಿರಗ್ರೇ ಪ್ರಥಮೋ ದೇವತಾನಾಂ" "ಯಾವಜ್ಜೀವಮಗ್ನಿಹೋತ್ರಂ ಜುಹುಯಾತ್" "ಅರ್ಚತ ಪ್ರಾರ್ಚತ" "ತ್ರಿಯಂಬಕಂ ಯಜಾಮಹೇ" "ಅಂತರಿಚ್ಛಂತಿತಂ ಜನೆ" "ರುದ್ರಂ ಪರೋಮನೀಷಯಾ ಗೃಭ್ಣಂತಿ ಜಿಹ್ವಯಾಸಸಂ" "ಯೋ ವೈ ಸ್ವಾಂ ದೇವತಾಮತಿಯಜತೆ" ಇತ್ಯಾದಿ ವಾಕ್ಯಗಳಲ್ಲಿ ರುದ್ರ ವೈಶ್ವಾನರೋಪಾಸನೆಯೇ ಕರ್ತವ್ಯವೆಂದು ವಿಧಿಯು ಕಂಡುಬರುವುದರಿಂದಲೂ ರುದ್ರ ವೈಶ್ವಾನರೋಪಾಸನೆಯನ್ನು ಮಾಡದಿದ್ದರೆ ಪ್ರತ್ಯವಾಯ (ಪಾಪ) ವು ಉಕ್ತವಾಗಿರುವುದರಿಂದಲೂ "ತ್ವಂ ದೇವಾನಾಂ ಬ್ರಾಹ್ಮಣಾನಾಮಧಿಪತಿರ್ವಿಷ್ಣುಃ ಕ್ಷತ್ರಿಯಾಣಾಮಧಿಪತಿಃ" ಇತ್ಯಾದಿ ವಾಕ್ಯಗಳಿಂದ ಸ್ವದೇವತಾ ಪರಿತ್ಯಾಗ ಮಾಡಲು ನರಕ ಪ್ರಾಪ್ತಿಯೆಂದು ಉಪದೇಶವಿರುವುದರಿಂದಲೂ ರುದ್ರ ವೈಶ್ವಾನರೋಪಾಸನಾ ಪರಿತ್ಯಾಗವಾಗಲು ವರ್ಣಚತುಷ್ಟಯಾತೀತ ಪ್ರಸಂಗವು ಬರುವುದರಿಂದಲೂ ವೈಷ್ಣವಾದಿ ಕಲ್ಪಿತವಾಕ್ಯಗಳು ವೇದವಿರುದ್ಧಗಳಾಗಿರುವುದರಿಂದ ವೈದಿಕರು ಅವುಗಳನ್ನು ತಿರಸ್ಕರಿಸತಕ್ಕದ್ದು. "ಅತ್ತಾ ಚರಾಚರ ಗ್ರಹಣಾತ್" "ಯಸ್ಯ ಬ್ರಹ್ಮಚ ಕ್ಷತ್ರಂಚ ಉಭೇ ಭವತ ಓದನಃ" ಇತ್ಯಾದಿ ಶ್ರುತಿ ಸೂತ್ರಗಳಿಂದ ಸಂಹಾರವು ಪರಬ್ರಹ್ಮ ಧರ್ಮವೆಂದು ಸಿದ್ಧವಾಗುವುದರಿಂದಲೂ ವಿಷ್ಣುವಿಗೆ ಸಂಹಾರ ಕೃತ್ಯವಿಲ್ಲೆಂದು ಪ್ರಸಿದ್ಧವೇ ಇರುವುದರಿಂದ ವಿಷ್ಣುವು ಪರಬ್ರಹ್ಮವಲ್ಲೆಂದು ಸಿದ್ಧಾಂತವು. "ರುದ್ರೋ ವಾ ಏಷಃ" "ಅಘೋರೇಭ್ಯೋಽಥ ಘೋರೇಭ್ಯಃ" ಇತ್ಯಾದಿ ಶ್ರುತಿಗಳಿಂದ ಪರಶಿವಬ್ರಹ್ಮವು ಅಘೋರ ಮುಖದಿಂದ ಸೃಷ್ಟಿ ಸ್ಥಿತಿಗಳನ್ನೂ ಘೋರ ಮುಖದಿಂದ ಸಂಹಾರವನ್ನೂ ಮಾಡುತ್ತದೆಂದು ಉಪದೇಶವಿರುವುದರಿಂದ ಶಿವನೇ ಜಗಜ್ಜನ್ಮಾದಿ ಕಾರಣವಾಗಿರುವುದರಿಂದ ಶಿವನೇ ಪರಬ್ರಹ್ಮವಲ್ಲದೆ ವಿಷ್ಣುವಲ್ಲ.

CC-0. Jangamwadi Math Collection. Digitized by eGangotri

ಇವಲ್ಲದೆ "ಯಾತೇ ರುದ್ರ ಶಿವಾತನೂ ಘೋರಪಾಪಕಾಶಿನೀ" ಎಂಬ ಶ್ರುತಿಯಿಂದ ಮುಮುಕ್ಷುವು ಶಿವನ ಶುದ್ಧ ಸಾತ್ವಿಕ ಶಿವಶರೀರವನ್ನು ಪ್ರಾರ್ಥಿಸುವುದರಿಂದಲೂ "ಪ್ರಪಂಚೋಪಶಮಂ ಶಾಂತಂ" "ನೀಲಕಂಠಂ ಪ್ರಶಾಂತಂ" ಇತ್ಯಾದಿ ಶ್ರುತಿಗಳಿಂದ ಶಿವನೇ ಪರಮಶಾಂತನಲ್ಲದೆ ವಿಷ್ಣ್ವಾದಿಗಳಲ್ಲವೆಂದು ಸ್ಪಷ್ಟೋಪದೇಶವಿರುವುದರಿಂದ ರುದ್ರನು ಕೇವಲ ತಾಮಸನೆಂದು ಹೇಳುವ ವಾಕ್ಯಗಳು ಕಾಲರುದ್ರಪರಗಳೆಂದು ತಿಳಿಯಬೇಕು. ಕಾಲರುದ್ರನಾದರೂ ಶಿವಾಂಶನಾಗಿರುವುದರಿಂದ ವಿಷ್ಣುವಿಗಧಿಕನೆಂಬುವುದು ವೇದಶಾಸ್ತ್ರಗಳಲ್ಲಿ ಪ್ರಸಿದ್ಧವು. ಈ ವಿಷಯದಲ್ಲಿ "ಪರಾತ್ಪರಂ ಬ್ರಹ್ಮ" "ಅಜಾಮೇಕಾಂ" ಇತ್ಯಾದಿ ಶ್ರುತಿಗಳಲ್ಲಿ ಪರಶಿವನ ಪ್ರಾಕೃತಶಕ್ತಿಯು ಗುಣತ್ರಯರೂಪವೆಂದು ತೋರಿಸಲ್ಪಟ್ಟಿರುವುದರಿಂದ ಸತ್ವಗುಣಾವಲಂಬನದಿಂದ ನಾರಾಯಣನು ಬ್ರಹ್ಮವೆನ್ನುವುದು ಯುಕ್ತವಲ್ಲ. ಹಾಗೂ ಬ್ರಹ್ಮವು ಅಪ್ರಾಕೃತವೆಂದು ಹೇಳುವ ಸರ್ವ ವೈದಿಕಶಾಸ್ತ್ರಗಳ ಭಂಗವೇ ಆಗಬೇಕು. "ಶುಕ್ಲಧ್ಯಾನಪರಾಯಣಃ" ಎಂಬ ಶ್ರುತಿಯಲ್ಲಿ ಶುಕ್ಲ ಶರೀರವುಳ್ಳ ಶಿವಧ್ಯಾನವೇ ಮುಮುಕ್ಷುಗಳಿಗೆ ವಿಧಿಸಲ್ಪಟ್ಟಿದೆಯಲ್ಲದೆ ಕೃಷ್ಣಧ್ಯಾನವು ವಿಧಿಸಲ್ಪಟ್ಟಿಲ್ಲ. ಸೂತ ಸಂಹಿತೆಯಲ್ಲಿ ಸೂತಗೀತೆಯಲ್ಲಿ ರುದ್ರನಿಗೆ ಅಂತಃ ಸತ್ವಗುಣವೂ ಬಹಿಸ್ತಮೋಗುಣವೂ ವಿಷ್ಣುವಿಗೆ ಅಂತಸ್ತಮೋಗುಣವೂ ಬಾಹ್ಯದಲ್ಲಿ ಸತ್ವಗುಣವೂ ಚತುರ್ಮುಖನಿಗೆ ಅಂತರ್ಬಹಿ (ಒಳಹೊರಗೆ) ರಜೋಗುಣವೂ ಇರುವುದೆಂದೂ ಶಂಕರನು ಶುದ್ಧ ಸಾತ್ವಿಕನೆಂದೂ ವಿಷ್ಣುವು ಶುದ್ಧ ತಾಮಸನೆಂದೂ ಶಿವಧರ್ಮ ಶಾಸ್ತ್ರದಲ್ಲಿ ಹೇಳಿರುವುದರಿಂದ ಶಿವನೇ ಬ್ರಹ್ಮ ವಿಷ್ಣ್ವಾದಿಗಳಿಗಿಂತಲೂ ಅಧಿಕನೆಂಬುದು ಸಿದ್ಧವು.

ಶಂಕರ ಸಂಹಿತೆಯ ಶಿವರಹಸ್ಯ ಖಂಡದಲ್ಲಿ "ದಶಶೈವ ಪುರಾಣಾನಿ ಸಾತ್ವಿಕಾನಿ ವಿದುರ್ಬುಧಾಃ" ಇತ್ಯಾದಿಯಾಗಿ ಕೇವಲ ಶೈವಪುರಾಣಗಳೇ ಸಾತ್ವಿಕಗಳೆಂದು ನಿರ್ದೇಶವಿರುವುದರಿಂದ ಆ ಶೈವಪುರಾಣ ಪ್ರತಿಪಾದ್ಯವಾದ ಶಿವನು ಸಾತ್ವಿಕನೆಂಬುವುದು ಘಂಟಾಘೋಷವು. ಈ ಶೈವ ಪುರಾಣಗಳಿಗೆ ಸಾತ್ವಿಕತ್ವದ ಕಥನವು ಕಲ್ಪಾಂತರ ವಿಷಯಕವಲ್ಲದೆ ಈ ಕಲ್ಪದ ವಿಷಯಕವಲ್ಲವೆಂದು (ಶಂಕಿಸಕೂಡದು. ಮಾತ್ಸ್ಯಪುರಾಣದಲ್ಲಿ ಸರ್ವಶಾಸ್ತ್ರಗಳಿಗಿಂತಲೂ ಪ್ರಥಮದಲ್ಲಿ ಚತುರ್ಮುಖನು ಪುರಾಣ ರಚಿಸಿದನೆಂದೂ ಅನಂತರ ತನ್ನ ಮುಖಗಳಿಂದ ವೇದಗಳನ್ನು ಹೇಳಿದನೆಂದೂ ಮೊದಲೊಂದೇ ಒಂದು ಪುರಾಣವು ಶತಕೋಟಿ ಶ್ಲೋಕಗಳುಳ್ಳದ್ದಾಗಿತ್ತೆಂದೂ ಹೇಳಲ್ಪಡುವದರಿಂದ ಚತುರ್ಮುಖನಿಂದ ಉಕ್ತವಾದ ಬ್ರಾಹ್ಮ ಪುರಾಣವನ್ನೇ ವೇದವ್ಯಾಸರು ದ್ವಾಪರಾಂತ್ಯದಲ್ಲಿ ನಾಲ್ಕುಲಕ್ಷ ಶ್ಲೋಕಗಳುಳ್ಳದ್ದನ್ನಾಗಿ ಸಂಕೋಚಗೊಳಿಸಿರುವರು. ಧರ್ಮಸಂಹಿತೆಯಲ್ಲಿ ಶ್ರುತಿಸಮ್ಮತವಾದ ಬ್ರಾಹ್ಮಪುರಾಣವನ್ನೇ ಕೋಟಿ ಶ್ಲೋಕವುಳ್ಳ ೧೮ ಪ್ರಕಾರ ಪುರಾಣರೂಪವಾಗಿ ವಿಭಾಗಮಾಡಿದರು ಎಂದು ಕಂಡುಬರುವುದರಿಂದ ಶೈವಪುರಾಣಗಳು ಕಲ್ಪಾಂತರದಲ್ಲಿದ್ದವೆಂದೂ ಈ ಕಲ್ಪದಲ್ಲಿ ಅವು ಪ್ರಮಾಣಗಳಲ್ಲವೆಂದೂ ಹೇಳಲವಕಾಶವಿಲ್ಲ.

CC-0. Jangamwadi Math Collection. Digitized by eGangotri

ಸರ್ವರಿಗೂ ಏಕಾದಶೀವ್ರತದ ಅವಶ್ಯಕತೆ

ನಾರಾಯಣನೇ ಮತ್ಸ್ಯ, ಕೂರ್ಮ, ವರಹಾವತಾರವನ್ನೆತ್ತಿ ಸಕಲ ಭೂಭಾರವನ್ನು ನಿವೃತ್ತಿಗೊಳಿಸಿರುವುದರಿಂದ ಅವನೇ ಪರಮ ಸಾತ್ವಿಕನಲ್ಲದೆ ಶಿವನಲ್ಲವೆಂದು ಸ್ಪಷ್ಟವಾಗುತ್ತಿರಲು ಶಿವನಿಗೆ ಪರಮ ಸಾತ್ವಿಕನೆಂದು ಹೇಳುವುದು ಅಸಂಗತವೆಂದು ಹೇಳಕೂಡದು. ಏಕೆಂದರೆ ಕೂರ್ಮ ಪುರಾಣದಲ್ಲಿ ಮಾಘಮಾಸದ ಏಕಾದಶೀ ಮಧ್ಯಾಹ್ನದಲ್ಲಿ ಮಹಾನಟನಾದ ಶಿವನು ಜಗದ್ಧಿತಕ್ಕಾಗಿ ವಿಷಪಾನ ಮಾಡಿ ಆ ರಾತ್ರಿಯಲ್ಲಿ ಶಿವಯೋಗದಿಂದಿರುವಾಗ ಪಾದಸೇವಕರಾದ ಉಪೋಷಿತರಾದ ಆ ವಿಷ್ಣ್ವಾದಿ ದೇವತೆಗಳನ್ನು ನೋಡಿ ಸಮುದ್ರಮಥನೋದ್ಭೂತವಾದ ಅಮೃತ ಪಾನಮಾಡಲು ಆಜ್ಞಾಪಿಸಿದನು ಎಂಬುದಾದಿಯಾಗಿರುವ ಶ್ಲೋಕಗಳಿಂದ ಅನ್ಯರಿಂದ ಆಗದಿರುವ ಕಾಲಕೂಟ ಭಕ್ಷಣ, ಅಂಧಕಾಸುರ, ಜಲಂಧರಾಸುರ, ತ್ರಿಪುರಾಸುರ, ವ್ಯಾಘ್ರಾಸುರ, ಗಜಾಸುರ, ಶೂರಪದ್ಮಾಸುರಾದಿ ಮಹಾ ದಾನವರನ್ನು ಸಂಹರಿಸಿ ಸಕಲ ಭೂಭಾರವನ್ನು ನಿವೃತ್ತಿಗೊಳಿಸಿದನೆಂದೂ ಹೇಳುವುದರಿಂದ ಶಿವನೇ ಪರಮ ಸಾತ್ವಿಕನಲ್ಲದೆ ವಿಷ್ಣುವಲ್ಲ. ಏಕಾದಶೀ ನಿರೂಪಣದಲ್ಲಿ ಶೈವ ವೈಷ್ಣವರಿಬ್ಬರಿಗೂ ಆ ಕಾರಣದಿಂದಲೇ ಏಕಾದಶೀ ವ್ರತಾವಶ್ಯಕತ್ವವು ಕಂಡುಬರುತ್ತದೆ. ಈ ವಿಷಯವು ಶಿವಧರ್ಮಶಾಸ್ತ್ರದಲ್ಲಿ ಶೈವ ವೈಷ್ಣವರು ಏಕಾದಶಿಯಲ್ಲಿ ಉಪೋಷಣವನ್ನು ಆಚರಿಸಬೇಕೆಂದೂ ನಂದೀಶ ವಿಷ್ಣು ಮೊದಲಾದವರು ಇದನ್ನು ಆಚರಿಸಿದರೆಂದೂ ಸ್ಮಾರ್ತರು ಪ್ರದೋಷ ಕಾಲವನ್ನು ಬಿಟ್ಟು ಬೇರೆ ಕಾಲದಲ್ಲಿ ಆಚರಿಸಬೇಕೆಂದೂ ಹೇಳಲ್ಪಟ್ಟಿರುವುದು. ಹಾಗೂ ವೀರಾಗಮದಲ್ಲಿ ಸರ್ವವೀರಶೈವರು ಏಕಾದಶೀ ವ್ರತವನ್ನು ಸಾಯಂಕಾಲದಲ್ಲಿ ಪ್ರಧಾನವನ್ನಾಗಿ ಆಚರಿಸಬೇಕೆಂದೂ ಎಲ್ಲ ಶೈವ ವ್ರತಗಳು ಸಾಯಂಕಾಲ ಪ್ರಧಾನವಾದವುಗಳೆಂದೂ ಹೀಗೆ ಆಚರಿಸದಿದ್ದರೆ ಪ್ರತ್ಯವಾಯುವು ಪ್ರಾಪ್ತವಾಗುವುದೆಂದೂ ಹೇಳಲ್ಪಟ್ಟದೆ.

ಇದಲ್ಲದೆ ಪದ್ಮಪುರಾಣಾದಿಗಳು ವಿಷ್ಣುಪ್ರಧಾನಗಳಾಗಿದ್ದರೂ ಶಿವಮಹತ್ವ ಪ್ರತಿಪಾದಕಗಳಾಗಿರುವುದರಿಂದ ಅವುಗಳೂ ತಾಮಸಗಳೇ ಎಂದು ಏಕೆ ಹೇಳಬಾರದು? "ತ್ರೈಗುಣ್ಯ ವಿಷಯಾ ವೇದಾನಿಸ್ತ್ರೈಗುಣ್ಯೋ ಭವಾರ್ಜುನ" ಎಂಬ ಗೀತಾವಾಕ್ಯದಿಂದ ವೇದಗಳೂ ಕೂಡ ತ್ರಿಗುಣಾತ್ಮಕಗಳೆಂದು ಕಂಡುಬರುವುದರಿಂದ ತ್ರಿಮೂರ್ತಿಗಳನ್ನು ಪ್ರತಿಪಾದಿಸುವ ಶ್ರುತಿಗಳು ಗುಣತ್ರಯ ರೂಪಗಳೆಂದು ಹೇಳುವುದು ಯುಕ್ತವು ಎಂದು ಆಶಂಕಿಸಕೂಡದು. "ವಾಚಾ ನಿತ್ಯಯಾ" ಎಂದು ಶ್ರುತಿಯಿರುವುದರಿಂದ ನಿತ್ಯವಾದ ವೇದಕ್ಕೆ ತ್ರಿಗುಣಾತ್ಮಕವೆಂದು ಹೇಳುವುದು ಯುಕ್ತವಲ್ಲ. ಶ್ರೌತವಿಧಿಯು ಬಲಿಷ್ಠವಾಗಿರುವುದು. "ಶಿವಂ ಪ್ರಶಾಂತಮಮೃತಂ ಬ್ರಹ್ಮಯೋನಿಂ" (ಕೈವಲ್ಯ. ೧–೬) ಇತ್ಯಾದಿಯಿಂದ ವೇದದಲ್ಲಿ ಶಿವನೇ ಪರಮ ಸಾತ್ವಿಕನೆಂದು ಹೇಳುತ್ತಿರುವುದರಿಂದ ವೇದಗಳು ತ್ರಿಗುಣರೂಪಗಳೆನ್ನುವುದು ಅಧಿಕಾರಿ ಭೇದದಿಂದ ಪರ

CC-0. Jangamwadi Math Collection. Digitized by eGangotri

ಮೇಶ್ವರನ ಸ್ಥೂಲ ಸೂಕ್ಷ್ಮಕಾರಣ ಸ್ವರೂಪದ ಉಪಾಸನಾಪರವೆಂದು ತಿಳಿಯಬೇಕು. ಈ ವಿಷಯವು ಸಾಂಖ್ಯಯೋಗ ಶಾಸ್ತ್ರಗಳಲ್ಲಿ ವಿವಕ್ಷಿತವಾಗಿರುವುದು. ಆದುದರಿಂದ ವೇದಗಳಿಗೆ ತ್ರಿಗುಣಾತ್ಮಕತ್ವವು ಯುಕ್ತವಲ್ಲ.

ತಾಮಸತ್ವ ವಿಚಾರ

ತಾಮಸತ್ವವೆಂದರೇನು ? ತಮೋಗುಣ ಜನ್ಯವಾದುದು ತಾಮಸವೆಂದು ಹೇಳುವಿರೋ ? ಅಥವಾ ಸ್ವೇತರ (ತಮೋಗುಣೇತರ) ಸತ್ವರಜೋಗುಣಗಳಿಂದ ಮಿಶ್ರಿತವಾಗದಿರುವ ತಮೋಗುಣ ಜನ್ಯವಾದುದೇ ತಾಮಸವೆಂದು ಹೇಳುವಿರೋ ? ಅಥವಾ ತನಗಿತರಗಳಾದ ಗುಣಗಳಿಂದ ಅಭಿಭೂತ (ತಿರಸ್ಕೃತ) ವಾಗದಿರುವ ತಮೋಗುಣ ವಿಶಿಷ್ಟವಾದುದೇ ತಾಮಸವೆಂದು ಹೇಳುವಿರೋ ? ಅಥವಾ ತಮೋಗುಣ ವಿಶಿಷ್ಟ ಪುರುಷನೇ ಕರ್ತೃವಾಗಿವುಳ್ಳುದೇ ತಾಮಸವೆಂದು ಹೇಳುವಿರೋ ? ಇಲ್ಲವೆ, ತಮೋಗುಣ ವಿಶಿಷ್ಟ ಪುರಾಣಾದಿಗಳಿಂದ ಪ್ರತಿಪಾದ್ಯವೇ ತಾಮಸವೆಂದು ಹೇಳುವಿರೋ ? ಅಥವಾ ಮತ್ತಾವುದಕ್ಕಾದರೂ ತಾಮಸವೆಂದು ಹೇಳುವಿರೋ ? ಎಂದು ಆಳು ವಿಕಲ್ಪಗಳುಂಟಾಗಲು "ನಾದ್ಯಃ" ಎಂದು ಖಂಡಿಸುತ್ತಿರುವರು. ವೇದಗಳು ತಾಮಸಗಳೆಂದರೆ ಅವುಗಳು ಗುಣತ್ರಯಾತೀತ ಪರಮೇಶ್ವರನ ನಿಶ್ವಸಿತ ರೂಪಗಳಾಗದೆ ಅನಿತ್ಯಗಳೂ ಮೋಹಕಗಳೂ ಪೌರುಷೇಯಗಳೂ ಆಗಬೇಕು. ಆದ್ದರಿಂದ ತಮೋಗುಣ ಜನ್ಯ (ತಾಮಸ) ಗಳು ವೇದಗಳಲ್ಲ. ಇದಲ್ಲದೆ ಸರ್ವಚರಚರಾತ್ಮಕ ಪ್ರಪಂಚವು ಗುಣತ್ರಯರೂಪ ಪ್ರಕೃತಿ ಜನ್ಯವಾಗಿರುವುದರಿಂದ ಪ್ರಪಂಚಾಂತರ್ಗತ ವಿಷ್ಣು ಪುರಾಣಗಳೂ ತಾಮಸಗಳೆಂದು ಹೇಳಬೇಕು. ಕೇವಲ ತಮೋಗುಣ ಜನ್ಯವಾದುದೇ ತಾಮಸವೆಂದು ಹೇಳುವುದರಿಂದ ವಿಷ್ಣುಪುರಾಣಗಳು ತಾಮಸಗಳಲ್ಲವೆನ್ನಕೂಡದು ಕೇವಲ ತಮೋಗುಣದಿಂದ ಯಾವುದೂ ಹುಟ್ಟಲಾರದಾದ್ದರಿಂದ ಅಸಿದ್ಧಿ ದೋಷವು ಬರುವುದು.

ಇನ್ನು ಇತರ ಗುಣಾಸಂಸೃಷ್ಟ (ಅಯುಕ್ತ) ತಮೋಗುಣ ಜನ್ಯವಾದುದು ತಾಮಸವೆನ್ನುವ ದ್ವಿತೀಯ ವಿಕಲ್ಪವೂ ಸಂಗತವಲ್ಲ. ಸರ್ವಗುಣವೂ ಗುಣಾಂತರದಿಂದ ಯುಕ್ತವಾಗಿಯೇ ಕಾಣುತ್ತದಷ್ಟೆ.

ಇನ್ನು ಇತರಾನಭಿಭೂತ ತಮೋಗುಣಜನ್ಯವಾದುದೇ ತಾಮಸವೆಂಬ ಮೂರನೆಯ ವಿಕಲ್ಪವೂ ಸರಿಯಲ್ಲ. ಏಕೆಂದರೆ "ಯದಾ ತಮಸ್ತನ್ನ ದಿವಾ ನ ರಾತ್ರಿರ್ನ ಸನ್ನಚಾ ಸಚ್ಛಿವ ಏವ ಕೇವಲಃ" ಇಂತೆಂಬ ಶ್ರುತಿಯಿಂದ ಶಿವನು ನಿತ್ಯ ಶುದ್ಧನೆಂದೂ ಪ್ರಕೃತಿ ಸಂಬಂಧ ರಹಿತನೆಂದೂ ಕಂಡುಬರುವುದರಿಂದ ಅವನಿಂದ ಜನ್ಯಗಳಾದ ವೇದಾದಿಗಳಿಗೆ ತಾಮಸಗಳೆನ್ನುವುದು ಅಯುಕ್ತವಷ್ಟೆ !

CC-0. Jangamwadi Math Collection. Digitized by eGangotri

ಇನ್ನು ತಮೋಗುಣಜನ್ಯ ವಿಶಿಷ್ಟವಾದುದೇ ತಾಮಸವೆನ್ನುವ ನಾಲ್ಕನೆಯ ವಿಕಲ್ಪವೂ ಕೂಡ ಸಂಗತವಲ್ಲ. ಏಕೆಂದರೆ "ಅಷ್ಟಾದಶ ಪುರಾಣಾನಾಂ ಕರ್ತಾ ಸತ್ಯವತೀ ಸುತಃ" ಇತ್ಯಾದಿ ವಿಷ್ಣುಪುರಾಣ ವಾಕ್ಯದಿಂದ ವ್ಯಾಸಕೃತ ಸರ್ವ ಪುರಾಣಗಳೂ ತಾಮಸಗಳಲ್ಲವೆಂದೂ, ತಾಮಸಗಳೆಂದರೆ ವಿಷ್ಣುಪುರಾಣಗಳೂ ತಾಮಸಗಳಾಗ ಬೇಕಾಗುವುದೆಂದೂ ಕಂಡುಬರುವುದಷ್ಟೆ !

ಇನ್ನು ಐದನೇ ತಮೋಗುಣ ವಿಶಿಷ್ಟ ಕರ್ತೃಜನ್ಯವಾದವುಗಳೇ ತಾಮಸಗಳೆನ್ನುವ ವಿಕಲ್ಪವೂ ಸಂಗತವಲ್ಲ. ಏಕೆಂದರೆ ಪುರಾಣ ಕರ್ತೃಗಳಾದ ವ್ಯಾಸನಾಗಲಿ ಚತುರ್ಮುಖನಾಗಲಿ ತಮೋಗುಣ ವಿಶಿಷ್ಟರೆಂದು ಹೇಳಲಿಕ್ಕಾಗುವುದಿಲ್ಲ. ಸಂಹಾರವು ತಮೋಗುಣದ ಕಾರ್ಯವೆಂದೂ ಈ ತಮೋಗುಣವುಳ್ಳವನು ರುದ್ರನೆಂದೂ ಸರ್ವಶಾಸ್ತ್ರ ಪ್ರಸಿದ್ಧವಾಗಿರುವುದಷ್ಟೆ ! ಆ ಸಂಹಾರ ಕಾರ್ಯವು ವಿಷ್ಣುವಿಗಿಲ್ಲದಿರುವುದರಿಂದ ಅವನು ಈಶ್ವರ ಪದವಾಚ್ಯನಾಗಲಾರನು. ವಿಷ್ಣುವಾದರೂ ರುದ್ರಶರೀರಾಕಾರದಿಂದ ಸಂಹಾರವನ್ನು ಮಾಡುವನಾದುದರಿಂದ ಈಶ್ವರನೆನಿಸುವನೆಂದರೆ ವಿಷ್ಣುವೂ ತಾಮಸನೆಂದು ಹೇಳಬೇಕಾಗುವುದು. "ಯಾತೇ ರುದ್ರ ಶಿವಾ ತನೂಃ" (ತೈ. ಸಂ. ೪–೫–೧–೧) ಇಂತೆಂಬ ಶ್ರುತಿಯಿಂದ ಶಿವಶರೀರಕ್ಕೆ ತಾಮಸತ್ವದ ನಿಷೇಧವಿರುವುದರಿಂದ ವಿಷ್ಣುವು ಸ್ವತಃ ಸಾತ್ವಿಕನಿದ್ದು ರುದ್ರನ ತಾಮಸ ಶರೀರದಿಂದ ಸಂಹಾರಕೃತ್ಯವನ್ನು ಮಾಡುವುದರಿಂದ ಈಶ್ವರ ಪದವಾಚ್ಯನಾಗುವನೆಂದು ಹೇಳುವುದು ಯುಕ್ತವಲ್ಲ. ಆದುದರಿಂದ "ತ್ರೈಗುಣ್ಯ ವಿಷಯಾ ವೇದಾ" (ಭ. ಗೀ. ೨–೪೫) ಇಂತೆಂಬ ವಾಕ್ಯದಿಂದ ಶ್ರುತಿಗಳು ತ್ರಿಗುಣಾತ್ಮಕ ಪ್ರಕೃತಿ ಧರ್ಮ ಪ್ರತಿಪಾದಕಗಳಾಗಿರುವುದರಿಂದ ವೇದಗಳು ತ್ರಿಗುಣಾತ್ಮಕಗಳಾಗಿರುವುವು. ಆದ್ದರಿಂದ ವೇದ ಪ್ರತಿಪಾದ್ಯನಾದ ಶಿವನಿಗೆ ಗುಣ ವಿಶಿಷ್ಟತ್ವವನ್ನು ಹೇಳುವೆವೆನ್ನುವುದು ಯುಕ್ತವಲ್ಲ.

ಇನ್ನು ತಮೋಗುಣ ಪ್ರಚುರಗಳಾದ ಕಲ್ಪಗಳಲ್ಲಿ ತಮೋಗುಣ ವಿಶಿಷ್ಟನಾದ ಬ್ರಹ್ಮನಿಂದ ಮಾಡಲ್ಪಟ್ಟ ಪುರಾಣಗಳು ತಾಮಸಗಳಾಗಿರುವುವು. ಈ ತಾಮಸ ಪುರಾಣ ಪ್ರತಿಪಾದ್ಯನಾದುದರಿಂದಲೇ ಶಿವನೂ ತಾಮನಾಗಿರುವನೆಂದೂ ಆಶಂಕಿಸಲವಕಾಶವಿಲ್ಲ. ಏಕೆಂದರೆ ತಾಮಸ ಕಲ್ಪಗಳಲ್ಲಿ ಚತುರ್ಮುಖ ಕೃತ ಪುರಾಣಗಳು ಈ ವರ್ತಮಾನವಾದ ಶ್ವೇತ ವರಹಾಕಲ್ಪದಲ್ಲಿ ಅನುವರ್ತಿಸುವವೆನ್ನುವಲ್ಲಿ ಪ್ರಮಾಣವಿಲ್ಲವಷ್ಟೆ ? ಈ ಕಲ್ಪದಲ್ಲಿಯೂ ೨೮ನೇ ವ್ಯಾಸನು ಪುರಾಣವನ್ನು ರಚಿಸಿರುವನೆಂಬುವುದು ವಿಷ್ಣುಪುರಾಣದಲ್ಲಿ "ವೈವಸ್ವತಾಂತರೇ ತಸ್ಮಿನ್ ದ್ವಾಪರೇಷು ಪುನಃ ಪುನಃ ವೇದವ್ಯಾಸ ವ್ಯತೀತಾಯಾಮಷ್ಟಾವಿಂಶತಿ ಸತ್ತಮಃ" ಎಂಬುದರಿಂದ ಹೇಳಲ್ಪಟ್ಟಿದೆ. ಹಾಗೂ ವರ್ತಮಾನವಾದ ಪರಾಶರಪುತ್ರನಾದ ವ್ಯಾಸನೇ ಈಗಿರುವ ಸರ್ವಪುರಾಣಗಳನ್ನೂ ರಚಿಸಿದನೆಂಬುವುದು ಅದೇ ವಿಷ್ಣುಪುರಾಣದಲ್ಲಿಯೇ "ಪುರಾಣ ಸಂಹಿತಾಂ

CC-0. Jangamwadi Math Collection. Digitized by eGangotri

ಚಕ್ರೇ ಪುರಾಣಾರ್ಥವಿಶಾರದಃ” ಇಂತೆಂಬುದರಿಂದ ಹೇಳಲ್ಪಟ್ಟಿದೆ. ಆ ಅಷ್ಟಾದಶ ಪುರಾಣಗಳನ್ನು ಉತ್ಪತ್ತಿ ಕ್ರಮದಲ್ಲಿ ವ್ಯತ್ಯಾಸಗೊಳಿಸಿ ಮೊದಲಿನ ಕಲ್ಪದಲ್ಲಿದ್ದ ವಿಷಯವನ್ನೇ ಈ ಕಲ್ಪದಲ್ಲಿ ಪುನಃ ೧೮ ಪುರಾಣಗಳನ್ನು ರಚಿಸಿದನೆಂದು “ಏತದ್ವೈಷ್ಣವ” ಎಂಬುದರಿಂದ ಸ್ಪಷ್ಟವಾಗುತ್ತದೆ. ರಘುವಂಶ ಸಂಭೂತಗಳಾದ ರಾಮ ಕೃಷ್ಣಾದ್ಯವತಾರಗಳು ದಕ್ಷಾಧ್ವರಧ್ವಂಸಾದಿಗಳೂ ಈ ಕಲ್ಪದ ಮಧ್ಯಸ್ಥಗಳೇ ಆಗಿರುವುವು. ೨೮ನೇ ಈ ಕಲ್ಪದಲ್ಲಿ ಹುಟ್ಟಿದ ವ್ಯಾಸನಿಂದ ರಚಿತಗಳಾದ ಶೈವ ವೈಷ್ಣವ ಪುರಾಣಗಳಲ್ಲಿ ಪ್ರಬಲ ದುರ್ಬಲ ವಿಚಾರದ ಪ್ರಸಕ್ತಿಯುಂಟಾಗಲು ಬಹುಕಾಲ ವ್ಯಹಿತಗಳಾದ ಪುರಾಣಗಳಿಗೆ ತಾಮಸಾದಿ ಬ್ರಹ್ಮ ಕಲ್ಪನೆಯನ್ನು ಮಾಡುವುದು ವ್ಯರ್ಥವು. ಪುರಾಣಕಾರರಾದ ಆಯಾಯ ಕಲ್ಪಸ್ಥರಾದ ವ್ಯಾಸರು ಬ್ರಹ್ಮನಿಂದ ಪುರಾಣಾರ್ಥವನ್ನು ತಿಳಿದುಕೊಂಡು ಪುರಾಣಗಳನ್ನು ರಚಿಸಿದರೆಂದು ಹೇಳುವುದರಿಂದ ತಾಮಸ ಬ್ರಹ್ಮಕನುಸೋಪನ್ಯಾಸವು ವ್ಯರ್ಥವಲ್ಲ. ಹಾಗಾದರೆ ಅತೀತ ಕಲ್ಪಸ್ಥಗಳಾದ ಪುರಾಣಾರ್ಥಗಳು ಬ್ರಹ್ಮನಿಂದಾಗಲಿ ಪುರಾಣಕಾರರಿಂದಾಗಲಿ ಈ ಕಲ್ಪದಲ್ಲಿಯೂ ಹಾಗೆಯೇ ಹೇಳಲ್ಪಟ್ಟವೆಂದು ತಿಳಿಯಬೇಕು. ಹೇಗೆಂದರೆ ಪದ್ಮಕಲ್ಪದಲ್ಲಿ ಆದ ಮಾರ್ಕಂಡೇಯನಿಗೆ ಪರಮೇಶ್ವರಾನುಗ್ರಹವು ಈ ಕಲ್ಪದಲ್ಲಿಯೂ ಹೇಳಲ್ಪಡುವುದು.

ಇದಲ್ಲದೆ ರಾಮ, ಕೃಷ್ಣ ವರಾಹವತಾರಗಳೂ ಕಾಲಕೂಟ ಭಕ್ಷಣ ದಕ್ಷಾಧ್ವರ ಧ್ವಂಸಾದಿಗಳೂ ಈ ಕಲ್ಪಸ್ಥಗಳೆಂತಲೇ ಬ್ರಹ್ಮನಿಂದ ಉಪದೇಶಿಸಲ್ಪಡುತ್ತವೆ. ಪುರಾಣಕಾರರಾದರೂ ಹಾಗೆಯೇ ಹೇಳುತ್ತಾರೆ. ಹೀಗಿದ್ದು ಆ ಪುರಾಣಗಳಿಗೆ ಪರಸ್ಪರ ವಿರೋಧವಿದ್ದರೆ ವಿಷ್ಣುಪುರಾಣಗಳಿಗೂ ಶಿವಪುರಾಣಗಳಿಗೂ ಆಧಿಕ್ಯವು ಬರುವುದಿಲ್ಲ. ಪ್ರತ್ಯುತ ಎರಡೂ ಅಪ್ರಮಾಣಗಳೇ ಆಗುವುವು. ಆದ್ದರಿಂದ ಬಹುಕಾಲ ವ್ಯವಹಿತಗಳಾದ ಕಲ್ಪಗಳಿಗೆ ಸಾತ್ವಿಕತ್ವ, ತಾಮಸತ್ವ ಕಲ್ಪನೆಯು ಎಷ್ಟೂ ಸಂಗತವಲ್ಲ.

ಇನ್ನು ತಮೋಗುಣ ವಿಶಿಷ್ಟ ರುದ್ರನು ಯಾವ ಪುರಾಣಗಳಲ್ಲಿ ಪ್ರತಿಪಾದ್ಯನಾಗಿರುವನೋ; ಆ ಶಿವಪುರಾಣಗಳು ತಾಮಸಗಳೆನ್ನುವ ಆರನೆಯ ವಿಕಲ್ಪವೂ ಸಂಗತವಲ್ಲ. ಏಕೆಂದರೆ ರುದ್ರನ ಘೋರ ಶರೀರವು ತಮೋಗುಣ ವಿಶಿಷ್ಟವಾಗಿದ್ದರೂ ಆ ಶರೀರವುಳ್ಳ ಪರಮೇಶ್ವರನು ತಮೋಗುಣಾತೀತನಾಗಿರುವನು. ಇಂತಹ ಪರಮೇಶ್ವರನು ಶಿವಪುರಾಣಗಳಲ್ಲಿ ಪ್ರತಿಪಾದ್ಯನಾಗಿರುವುದರಿಂದ ಶಿವಪುರಾಣಗಳು ತಾಮಸಗಳಲ್ಲ. ಕೈವಲ್ಯಶ್ರುತಿಯು “ತಮಸಃ ಪರಸ್ತಾತ್” (ಕೈ. ೧–೭) ಎಂದು ಅಂದಿದೆ. ತಮೋಗುಣದಿಂದ ವಿರಹಿತನೆಂದೂ ಉಮಾಸಹಾಯನೆಂದೂ ಪರಮೇಶ್ವರನೆಂದೂ ಪ್ರಭುವೆಂದೂ ತ್ರಿಲೋಚನನೆಂದೂ ನೀಲಕಂಠನೆಂದೂ ಪ್ರಶಾಂತನೆಂದೂ ಸಮಸ್ತಕ್ಕೂ

CC-0. Jangamwadi Math Collection. Digitized by eGangotri

ಸಾಕ್ಷಿಯೆಂದೂ ಭೂತಯೋನಿ (ಕಾರಣ) ಯೆಂದೂ ಶಿವನಿಗೆ ಕೈವಲ್ಯಶ್ರುತಿಯು ಹೇಳು ವುದರಿಂದ ಶಿವನು ತಾಮಸನೆಂದು ಹೇಳುವುದು ಶ್ರುತಿ ವಿರುದ್ಧವು. ಯದ್ಯಪಿ ತಮೋ ಗುಣ ಪ್ರಧಾನ ಶರೀರಾದಿ ವಿಶಿಷ್ಟರಾದ ದೇವದತ್ತಾದಿಗಳಲ್ಲಿ ತಾಮಸತ್ವ ವ್ಯವಹಾರವು ಕಂಡುಬಂದರೂ ತಮೋಗುಣ ವಿಶಿಷ್ಟ ಶರೀರಮಾತ್ರದಿಂದ ಶಿವಸಂಬಂಧಿಗಳಾದ ತಮೋ ಗುಣಾತೀತಗಳಾದ ಅಲೌಕಿಕ ಪ್ರಕಾಶಸ್ವರೂಪಗಳಾದ ಅನೇಕ ಶಿವಶರೀರಗಳು ಪ್ರಮಾಣ ಸಿದ್ಧಗಳಾಗಿರಲು ಆ ಎಲ್ಲ ಶರೀರಗಳೂ ಸಾತ್ವಿಕಗಳಾಗಿರಲು ಶಿವನಿಗೆ ತಾಮಸತ್ವವನ್ನು ಹೇಳಲಾಗುವುದಿಲ್ಲ. ಶಿವನಿಗೆ ಅನೇಕ ವಿಗ್ರಹಗಳೆಂಬುವಲ್ಲಿಯೂ ಆ ವಿಗ್ರಹಗಳು ಸಾತ್ವಿಕಗಳೆಂಬುವಲ್ಲಿಯೂ "ಸ್ಥಿರೈರಂಗೈಃ ಪುರುರೂಪ ಉಗ್ರೋ ಬಭ್ರುಃ ಶುಕ್ಲೇಭಿಃ" ಎಂಬ ಶ್ರುತಿಯು ಪ್ರಮಾಣವಾಗಿದೆ. "ಶುಕ್ಲೇಭಿಃ" ಎಂಬ ಪದವು ಶಿವವಿಗ್ರಹಗಳು ಸತ್ವಮಯಗಳೆಂದು ಬೋಧಿಸುತ್ತದೆ. ಆದುದರಿಂದ ಶಿವನು ಸಾತ್ವಿ ಕನು ಇವನನ್ನು ಪ್ರತಿಪಾದಿಸುವ ಶಿವಪುರಾಣಗಳು ಸಾತ್ವಿಕಗಳಾಗಿವೆ. ಕೇವಲ ತಮೋ ಗುಣವುಳ್ಳ ರುದ್ರ ಶರೀರ ವಿಶಿಷ್ಟತ್ವದಿಂದ ಶಿವನಿಗೆ ತಾಮಸನೆಂದು ಹೇಳುವುದಾದರೆ ವಿಷ್ಣುವೂ ಕೂಡ ತಾಮಸನೆಂದು ಹೇಳಬೇಕು. ವಿಷ್ಣುವು ತಾಮಸನಾಗದಿದ್ದ ಪಕ್ಷದಲ್ಲಿ ಅವನು ಭೂಭಾರವನ್ನು ನಾಶಗೊಳಿಸುವುದಕ್ಕಾಗಿ ಯಾದವ, ಕೌರವ ದೈತ್ಯಾದಿಗಳನ್ನು ಸಂಹರಿಸಲಾರನಷ್ಟೆ ! ಸಂಹಾರವು ತಮೋಗುಣದ ಕಾರ್ಯವಲ್ಲವೆ ?

ಇದಲ್ಲದೆ ಅವನು ತಾಮಸನಾಗದಿದ್ದಲ್ಲಿ ದೈತ್ಯರ ವ್ಯಾಮೋಹಕ್ಕಾಗಿ ಮಹಾ ಮೋಹನಾಮಕ ಪುರುಷನಿಂದ ಬೌದ್ಧ ಜೈನಾದಿ ಶಾಸ್ತ್ರಕರ್ತನಾಗಲಾರನಷ್ಟೆ ! ವಿಷ್ಣು ಪುರಾಣದಲ್ಲಿ ಬೌದ್ಧಾದಿ ವ್ಯಾಮೋಹಕ ಶಾಸ್ತ್ರ ರಚನೆಯನ್ನು ಮಾಡಿದನೆಂದು ಸ್ಪಷ್ಟ ವಾಗಿದೆ. ವಿಷ್ಣುವು ತಾನು ತಾಮಸನಾಗದಿದ್ದರೆ ಮಹಾ ಮೋಹರೂಪಧಾರಣವು ಸಂಭವಿಸುವುದಿಲ್ಲ. ಹಾಗೂ ತನ್ನ ಮೋಹಿನೀ ಶರೀರವು ತಾಮಸವೆಂಬುವುದು ಲೋಕ ಪ್ರಸಿದ್ಧವಾದುವೇ ಆಗಿದೆ. ಕಾರ್ಯಾರ್ಥವಾಗಿ ವಿಷ್ಣುವು ತಮೋಗುಣವುಳ್ಳವನಾದರೂ ಅದು ಸತ್ವಗುಣದಿಂದ ಅಭಿಭೂತವಾಗಿರುವುದರಿಂದ ವಿಷ್ಣುವು ತಮೋಗುಣ ಪ್ರಧಾನ ನಲ್ಲ. ರುದ್ರನಾದರೋ ತಮೋಗುಣಪ್ರಧಾನನು. ಆದುದರಿಂದಲೇ ಅವನು ಸಂಹಾರ ಕೃತ್ಯವುಳ್ಳವನಾಗಿರುವನು. ಇಂತಹ ತಮೋಗುಣ ಪ್ರಧಾನನಾದ ರುದ್ರನನ್ನು ಪ್ರತಿಪಾದಿಸುವ ಶಿವಪುರಾಣಗಳು ತಾಮಸಗಳಾಗಿರುವುವೆಂಬುವ ೭ನೇ ವಿಕಲ್ಪವು ಸಂಗತನಾಗಿವೆಯೆನ್ನುವುದಾದರೂ ಯುಕ್ತವಲ್ಲ. ಶತ್ರುಸಂಹಾರವೆಂಬ ಪ್ರಯೋಜನ ದಲ್ಲಿ ಪ್ರವರ್ತಿಸುವ ನೃಸಿಂಹಾದ್ಯವತಾರಗಳಾದರೂ ತಮೋಗುಣ ಪ್ರಧಾನಗಳಾಗಿರುವು ದರಿಂದ ಇಂತಹ ಅವತಾರ ಪ್ರತಿಪಾದಕ ವೈಷ್ಣವ ಪುರಾಣಗಳೂ ತಾಮಸಗಳೇ ಆಗುವವಲ್ಲವೆ ; ರುದ್ರ (ಶಿವ) ನಲ್ಲಿಯಾದರೋ ತಮೋಗುಣ ಲೇಶವೂ ಇಲ್ಲದಿರುವುದ ರಿಂದ ಇವನು ಶುದ್ಧ ಸಾತ್ವಿಕನಲ್ಲದೆ ತಾಮಸನಲ್ಲ.

CC-0. Jangamwadi Math Collection. Digitized by eGangotri

ಇನ್ನು ಕಡೆಯದಾದ ಏಳನೆಯ ವಿಕಲ್ಪವೂ ಸಂಗತವಲ್ಲ. ಏಕೆಂದರೆ ಯಾವನು ಸಂಹಾರಕರ್ತನೋ ಅವನು ತಾಮಸನೆಂದು ಹೇಳುವುದಾದರೆ ಇಂತಹ ತಾಮಸನಿಗೆ ಯಾವನಾದರೊಬ್ಬ ಸಂಹಾರಕರ್ತನಿರುವನೊ ; ಅಥವಾ ಇಲ್ಲವೊ ; ಇರುವನೆಂದರೆ ಅವನು ತಾಮಸನಾಗಿದ್ದರೂ ಅವನೇ ಸರ್ವಾಧಿಕನೆಂದು ಹೇಳಬೇಕಾಗುವುದು. ಸರ್ವಸಂಹಾರದಲ್ಲಿ ಸ್ವತಂತ್ರನಾಗಿರುವನಷ್ಟೆ ; ಇಲ್ಲವೆಂದರೆ ಈ ಪ್ರಥಮ ಸಂಹಾರಕರ್ತನೇ ತಾಮಸನಾದರೂ ಸರ್ವಾಧಿಕನಾಗುವನು. ಎಲ್ಲಿ ಸಂಹಾರಕತ್ವವೊ ಅಲ್ಲಿ ಸರ್ವಾಧಿಕತ್ವವೆಂಬ ನಿಯಮವೇ ಇರುವುದು. ಹೇಗೆಂದರೆ "ರುದ್ರಃ ಸರ್ವಾಧಿಕಃ ಸರ್ವ ಸಂಹರ್ತೃತ್ವಾತ್ ಯನ್ನೈವಂತನ್ನೈವಂ ಯಥಾ ಜೀವಃ" ಅಂದರೆ ಜೀವನು ಸರ್ವಸಂಹಾರಕನಾಗದಿರುವುದರಿಂದ ಅವನು ಸರ್ವಾಧಿಕನಲ್ಲ. ರುದ್ರನು ಸರ್ವಸಂಹಾರಕನಾಗಿರುವುದರಿಂದ ಅವನು ಸರ್ವಾಧಿಕನಾಗಿರುವನು. ಪ್ರಬಲ ದುರ್ಬಲ ಭಾವವಿಲ್ಲದೆ ಬಾಧ್ಯ ಬಾಧಕಭಾವವೇ ಸಂಭವಿಸುವುದಿಲ್ಲ. ರುದ್ರನು ಪ್ರಬಲನಾದ್ದರಿಂದ ಸರ್ವ ವಿಷ್ಣ್ವಾದಿ ದುರ್ಬಲರಿಗೆ ಬಾಧಕ (ಸಂಹಾರಕ) ನಾಗಿರುವನು. ವಿಷ್ಣುವು ಸಾತ್ವಿಕನಾಗಿದ್ದರೆ ಇವನೇ ಬಾಧ್ಯನಾಗುವನು. ರುದ್ರನು ಬಾಧಕನಾಗುವನು. ವಿಷ್ಣುವಿಗೆ ಸಂಹಾರ ಕಾರ್ಯವಿಲ್ಲದಿರುವುದರಿಂದ ಇವನು ಬಾಧಕನಾಗಿರದೆ ಬಾಧ್ಯನೇ ಆಗಿರುವನು. "ಮೃದುಃ ಸರ್ವತ್ರ ಬಾಧ್ಯತೆ" ಎಂಬ ನ್ಯಾಯಾನುಸಾರವಾಗಿ ಮೃದುವಾದ ಸತ್ವಗುಣ ಪ್ರಧಾನನಾದ ವಿಷ್ಣುವು ಬಾಧ್ಯನೇ ಆಗುವನು. ಆದ್ದರಿಂದ ತ್ರಿಮೂರ್ತಿಗಳಲ್ಲಿ ಪರಗಣಿತ ಕಾಲರುದ್ರನಾದರೂ ಬ್ರಹ್ಮ ವಿಷ್ಣ್ವಾದಿಗಳಿಗಿಂತಲೂ ಅಧಿಕನೇ ಆಗಿರುವನೆಂಬುವುದು ಸಿದ್ಧವು. "ರುದ್ರಃ ಸರ್ವಾಧಿಕಃ ಸರ್ವಸಂಹರ್ತೃತ್ವಾತ್" ಎಂಬಲ್ಲಿ ಸಾಧ್ಯ ಪ್ರಸಿದ್ಧಿ ದೋಷವಿಲ್ಲ. ಏಕೆಂದರೆ "ವಿಶ್ವಾಧಿಕೋ ರುದ್ರಃ" ಎಂಬ ಶ್ರುತಿಯಿಂದ ಸಾಧ್ಯವೂ ಪಕ್ಷವೂ ಪ್ರಸಿದ್ಧಗಳೇ ಆಗಿರುವವಷ್ಟೆ ; ಮೇಲಿನ ಅನುಮಾನಕ್ಕೆ ಅನುಗ್ರಾಹಕವಾಗಿರುವ ಸಿದ್ಧ ಸಾಧನತ್ವ ದೋಷವೂ ಇಲ್ಲ. ಈ ಪ್ರಕಾರವಾಗಿ ವಿಷ್ಣುವು ಸಾತ್ವಿಕನೆಂಬ ವಿಷಯವನ್ನು ದೂಷಿಸತಕ್ಕದ್ದು.

ಇನ್ನು ವಿಷ್ಣ್ವಾಧಿಕ್ಯವನ್ನು ಪ್ರತಿಪಾದಿಸುವ ಶಿವಪುರಾಣವೆನಿಸಿರುವ ಮಾರ್ಕಂಡೇಯಾದಿ ಪುರಾಣಗಳು ಸಾತ್ವಿಕಗಳಾಗಬೇಕು. ಇನ್ನು ರುದ್ರಾಧಿಕ್ಯ ಪ್ರತಿಪಾದಕಗಳಾದ ವಿಷ್ಣುಪುರಾಣವೆನಿಸಿರುವ ಪದ್ಮಪುರಾಣಾದಿಗಳು ತಾಮಸಗಳಾಗಬೇಕು. ಏಕೆಂದರೆ ವಿಷ್ಣ್ವಾಧಿಕ್ಯ ಪ್ರತಿಪಾದಕ ಪುರಾಣಗಳು ಸಾತ್ವಿಕಗಳೆಂದೂ ರುದ್ರಾಧಿಕ್ಯ ಪ್ರತಿಪಾದಕ ಪುರಾಣಗಳು ತಾಮಸಗಳೆಂದೂ ವೈಷ್ಣವನಾದ ನೀನೇ ಒಪ್ಪಿರುವೆಯಲ್ಲವೆ ? ಅಥವಾ ಪದ್ಮಪುರಾಣದಲ್ಲಿ ಪೂರ್ವಖಂಡದಲ್ಲಿ ಹರಿಯ ಆಧಿಕ್ಯವೂ ಉತ್ತರ ಖಂಡದಲ್ಲಿ ಹರನ ಆಧಿಕ್ಯವೂ ವರ್ಣಿಸಲ್ಪಡುವುದರಿಂದ ಹರಾಧಿಕ್ಯವನ್ನು ಪ್ರತಿಪಾದಿಸುವ ಪದ್ಮಪುರಾಣದ ಉತ್ತರ ಖಂಡಾಂಶದಲ್ಲಿ ತಾಮಸತ್ವವಿದ್ದುಕೊಳ್ಳಲಿ ಅದು ನಮಗೆ ಇಷ್ಟವೇ ಆಗಿರುವುದೆಂದರೆ ರಾಮಾಯಣ ಭಾಗವತಾದಿಗಳಲ್ಲಿ ರುದ್ರಾಧಿಕ್ಯ

CC-0. Jangamwadi Math Collection. Digitized by eGangotri

ವನ್ನು ಪ್ರತಿಪಾದಿಸುವ ಅಂಶದಲ್ಲಿಯಾದರೂ ತಾಮಸತ್ವವನ್ನು ಒಪ್ಪಿಕೊಳ್ಳಬೇಕಾಗುವುದು. ರಾಮಾಯಣ ಬಾಲಕಾಂಡದಲ್ಲಿ "ತ್ವಾಂ ಸ್ವೈ ಧಾರಯಿತುಂ ವೀರ ನಾನ್ಯಂ ಪಶ್ಯಾಮಿ ಶೂಲಿನಃ" ಎಂದೂ "ಉಮಾಪತಿಃ ಪಶುಪತಿಃ ಸರ್ವಲೋಕ ನಮಸ್ಕೃತಃ" ಎಂದೂ ಉತ್ತರಕಾಂಡದಲ್ಲಿ "ಏತದಸ್ತ್ರಂಬಲಂ ಘೋರಂ ಮಮ ವಾ ತ್ರ್ಯಂಬಕಸ್ಯವಾ" ಎಂದೂ ಕೈಲಾಸಯಾತ್ರಾ ರಾವಣನಿಗ್ರಹ ಇಂದ್ರಜಿತ್ತುವಿನ ಅನುಗ್ರಹ ರೂಪವಾದ ರುದ್ರಾಧಿಕ್ಯ ವರ್ಣನವು ಬಹುತರವಾಗಿರುವುದು. ಇದಲ್ಲದೆ. ರಾವಣನ ವಿನಾಶಾರ್ಥವಾಗಿ ರುದ್ರಾಗ್ನಿ ವರ್ಣನವೂ ವಿಶೇಷವಾಗಿರುವುದರಿಂದ ರಾಮಾಯಣ ಭಾಗವತಾದಿಗಳೂ ತಾಮಸಗಳೇ ಎಂದು ಹೇಳಬೇಕಾಗುವುದಾದ ಕಾರಣ ರುದ್ರಾಧಿಕ್ಯ ಪ್ರತಿಪಾದಕ ಶಿವಪುರಾಣಗಳು ತಾಮಸಗಳಲ್ಲ. ಇವುಗಳಿಗೆ ತಾಮಸತ್ವವನ್ನು ಹೇಳಿದರೆ ವೇದಬಾಹ್ಯ ಬೌದ್ಧರಾಗಬೇಕಾಗುವುದು. ಏಕೆಂದರೆ ವೇದಗಳಲ್ಲಿ ಶಿವನು ಶುದ್ಧಸಾತ್ವಿಕನೆಂದು ಘಂಟಾಘೋಷವಾಗಿ ಸಾರಲ್ಪಡುವುದಲ್ಲವೆ ; ಆದ್ದರಿಂದ ಈ ವಿಷಯದಲ್ಲಿ ಹೆಚ್ಚು ಹೇಳುವದನಶ್ಯವು.

ಈ ಪ್ರಥಮ ಜಿಜ್ಞಾಸಾಧಿಕರಣದಲ್ಲಿ "ಜಿಜ್ಞಾಸಾ" ಪದದಿಂದ ಶಿವ (ಲಿಂಗ) ದೀಕ್ಷಾ ಸಂಪನ್ನರೂ ಪರಶಿವನಲ್ಲಿ ಪಾತಿವ್ರತ್ಯ ಭಕ್ತಿಸಂಪನ್ನರೂ ಆಗಿರುವ ಜೀವ (ಶುದ್ಧ ಜೀವ) ರಿಗೂ ಬ್ರಹ್ಮ (ಲಿಂಗ) ಕ್ಕೂ ಭೇದಾಭೇದಗಳು ನಿರೂಪಿಸಲ್ಪಟ್ಟವು. ಈ ನಿರೂಪಣವಾದರೂ "ಬ್ರಹ್ಮ ವಿದ್ಬ್ರಹ್ಮೈವ ಭವತಿ" (ಮುಂ. ೩–೨–೯) "ಈಶಂ ಜ್ಞಾತ್ವಾ ತತ್ರೈಕೀ ಭವಂತಿ" ಇವೇ ಮೊದಲಾದ ಉಪಾಸ್ಯೋಪಾಸಕರಿಗೆ ಅಭೇದವನ್ನು ಹೇಳುವ ಶ್ರುತಿಗಳನುಸಾರವಾಗಿ ಮಾಡಲ್ಪಟ್ಟಿರುವುದು. ಇನ್ನು ದ್ವಿತೀಯಾಧಿಕರಣದಲ್ಲಿ ಬ್ರಹ್ಮವು ಸವಿಶೇಷವೆಂದೂ ಜಗತ್ತಿಗೂ ಬ್ರಹ್ಮಕ್ಕೂ ಸೃಷ್ಟಿ ಸ್ಥಿತಿ ಸಮಯದಲ್ಲಿ ಭೇದವೂ ಲಯಾವಸ್ಥೆಯಲ್ಲಿ ನದೀ ಸಮುದ್ರಗಳಂತೆ ಅಭೇದವೂ ನಿರೂಪಿಸಲ್ಪಟ್ಟಿತು. ತೃತೀಯಾಧಿಕರಣದಲ್ಲಿ ಪರಮೇಶ್ವರನಿಂದ ಆವಿರ್ಭವಿಸಿದ ಭೇದಾಭೇದ ಬೋಧಕವಾದ ವೇದ ವೇದಾಂತಾಗಮ ಶಾಸ್ತ್ರವೇ ಬ್ರಹ್ಮ ಸದ್ಭಾವದಲ್ಲಿ ಪ್ರಮಾಣವಾಗಿರುವುದೆಂಬ ವಿಷಯವು ನಿರೂಪಿಸಲ್ಪಟ್ಟಿತು.

ಸಮನ್ವಯಾಧಿಕರಣ

ಷಟ್‌ಸ್ಥಲ ಪರಶಿವ ಬ್ರಹ್ಮಾವಿರ್ಭೂತ ವೇದ ವೇದಾಂತಾದಿ ಶಾಸ್ತ್ರವು ಇಂದ್ರೋಪೇಂದ್ರ ದಿನೇಂದ್ರ ಚಂದ್ರಾದಿ ನಾನಾ ದೇವತಾ ಪ್ರತಿಪಾದಕವಾಗಿರುವುದಲ್ಲದೆ ಪರಶಿವ ಬ್ರಹ್ಮ ಪ್ರತಿಪಾದಕವಾಗಿರುವುದಿಲ್ಲವೆಂಬ ಶಂಕೆಯಾಗಲು ಈ ಶಂಕಾ ವಾರಣಕ್ಕಾಗಿ ಎಲ್ಲವೂ ನದಿಗಳು ಸಮುದ್ರದಲ್ಲಿ ಅಂತರ್ಗತವಾಗುವಂತೆ ಪರಶಿವ ಬ್ರಹ್ಮದಲ್ಲಿಯೇ ಸಮನ್ವಿತವಾಗಿ ಹೋಗುವುದರಿಂದ ಯಾವ ದೋಷವೂ ಬರುವುದಿಲ್ಲವೆಂದು ನಿರೂಪಿಸುವ ಚತುರ್ಥ ಸಮನ್ವಯಾಧಿಕರಣವು ನಿರೂಪಿಸಲ್ಪಡುತ್ತದೆ.

CC-0. Jangamwadi Math Collection. Digitized by eGangotri

ತತ್ತು ಸಮನ್ವಯಾತ್ (೧-೧-೪)

ಈ ಸೂತ್ರದಲ್ಲಿರುವ "ತತ್" ಎಂಬ ಶಬ್ದದಿಂದ ಸರ್ವಾಧಿಷ್ಠಾನನೂ ಸರ್ವ ಕಾರಣನೂ ವೇದ ವೇದಾಂತವೇದ್ಯನೂ ಪೂರ್ವ ಸೂತ್ರಗಳಿಂದ ಪ್ರತಿಪಾದಿಸಲ್ಪಟ್ಟವನೂ ಆಗಿರುವ ಷಟ್‌ಸ್ಥಲ ಬ್ರಹ್ಮರೂಪ ಪರಶಿವನು ಪ್ರತಿಪಾದಿಸಲ್ಪಡುತ್ತಾನೆ. "ತು" ಎಂಬ ಶಬ್ದದಿಂದ ಈ ಪರಶಿವ ಬ್ರಹ್ಮದಲ್ಲಿ ಶಬ್ದಪ್ರಮಾಣವೊಂದೇ ಅಲ್ಲದೆ ಇತರ ಪ್ರತ್ಯಕ್ಷಾದಿ ಪ್ರಮಾಣಗಳಿಲ್ಲವೆಂದು ಹೇಳಲ್ಪಡುತ್ತದೆ. ಇನ್ನು "ಸಮನ್ವಯ" ಶಬ್ದದಿಂದ ಆ ಪರಶಿವ ಬ್ರಹ್ಮಾಂಶರೂಪವಾದ ಇಂದ್ರ, ಚಂದ್ರ, ಉಪೇಂದ್ರ (ವಿಷ್ಣು) ದಿನೇಂದ್ರ (ಸೂರ್ಯ) ಮೊದಲಾದ ದೇವತಾ ಪ್ರತಿಪಾದಕ ವಾಕ್ಯಗಳು "ಸ್ಥೂಲಾರುಂಧತೀನ್ಯಾಯ" ದಿಂದ ಉಪಕ್ರಮ (ಆರಂಭ) ಉಪಸಂಹಾರಾದಿ (ಸಮಾಪ್ತಿ) ಷಡ್ವಿಧಲಿಂಗ (ಹೇತು) ಗಳಿಂದ ಷಟ್‌ಸ್ಥಲ ಪರಶಿವ ಬ್ರಹ್ಮದಲ್ಲಿಯೇ ತಾತ್ಪರ್ಯವುಳ್ಳವುಗಳಾಗಿವೆಯೆಂದು ಪ್ರತಿಪಾದಿಸಲ್ಪಡುತ್ತದೆ.

ಈ ಪ್ರಕಾರ ಸಂಕ್ಷೇಪವಾಗಿ ಸೂತ್ರಾರ್ಥವನ್ನು ತೋರಿಸಿ ಈ ಸೂತ್ರಕ್ಕೆ ವಿಷಯ ವಾಕ್ಯಗಳನ್ನು ತೋರಿಸುತ್ತಾರೆ. ವೇದ ವೇದಾಂತಾಗಮ ವಾಕ್ಯಗಳೆಲ್ಲವೂ ಇದಕ್ಕೆ ವಿಷಯಗಳಾಗಿವೆ. "ಸದೇವ ಸೌಮ್ಯೇದಮಗ್ರ ಆಸೀತ್ । ಅಸಂಖ್ಯಾತಾಃ ಸಹಸ್ರಾಣಿ" (ತೈ. ಆ. ೧–೧೨) "ಏಕಮೇವಾದ್ವಿತೀಯಂ ಬ್ರಹ್ಮ" (ಛಾಂ. ೬-೨-೧) "ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ" (ಶ್ವೇತಾ. ೩–೨) "ದೇವಾ ಹ ವೈ ಸ್ವರ್ಗಂ ಲೋಕಮಗಮನ್ । ತೇ ದೇವಾ ರುದ್ರಮಪೃಚ್ಛನ್ । ಕೋ ಭವಾನಿತಿ ಸೋಽಬ್ರವೀತ್। ಅಹಮೇಕಃ ಪ್ರಥಮ ಮಾಸಂ। ವರ್ತಾಮಿ ಚ ಭವಿಷ್ಯಾಮಿ ಚ। ನಾನ್ಯಃ ಕಶ್ಚಿನ್ಮತ್ತೋ ವ್ಯತಿರಿಕ್ತಃ" "ಸೋಽಯಮಂತರಾದಂತಂ ಪ್ರಾವಿಶತ್" (ಅಥರ್ವ ಶಿರ. ೧) "ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣ ಪಿಂಗಲಂ। ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮೋ ನಮಃ" (ಮಹಾನಾರಾಯಣ ಅನು. ೧೨) "ಸರ್ವೇ ವೇದಾ ಯತ್ಪದಮಾಮನಂತಿ" (ಕಠ. ೧–೨–೧೫) ಇಂತೆಂಬ ಭೇದಾಭೇದ ಬೋಧಕ ವಾಕ್ಯಗಳು ಸರ್ವ ಜಗದುಭಯ ಕಾರಣವಾದ ಷಟ್‌ಸ್ಥಲ ಪರಶಿವಬ್ರಹ್ಮವನ್ನು ಪ್ರತಿಪಾದಿಸುವವೋ ? ಅಥವಾ ಕರ್ಮಾಂಗ ಭೂತಗಳಾದ ಇಂದ್ರೋಪೇಂದ್ರ ಚಂದ್ರ ದಿನೇಂದ್ರಾದಿ ನಾನಾ ದೇವತೆಗಳನ್ನು ಪ್ರತಿಪಾದಿಸುವವೋ? ಅಥವಾ ಸರ್ವ ಜಗತ್ತಿಗೆ ಉಪಾದಾನ ರೂಪವಾದ ಪ್ರಧಾನ (ಪ್ರಕೃತಿ) ವನ್ನು ಪ್ರತಿಪಾದಿಸುವವೋ ? ಎಂದು ಬಹು ಪ್ರಕಾರವಾಗಿ ಸಂಶಯವು ಉತ್ಪನ್ನವಾಗುತ್ತದೆ. ಹೀಗೆ ಭಾಷ್ಯಕಾರರು ಸಂಶಯವನ್ನು ತೋರಿಸಿ ಪೂರ್ವಪಕ್ಷವನ್ನು ತೋರಿಸುತ್ತಾರೆ.

ಪೂರ್ವಪಕ್ಷ :—ಪರಶಿವ ಬ್ರಹ್ಮವು ಯಾವ ರೀತಿಯಿಂದಲೂ ಸರ್ವ ವೇದಾಂತ ಪ್ರತಿಪಾದ್ಯವಲ್ಲವು. ಏಕೆಂದರೆ ಆ ವೇದಾಂತಗಳು ಕರ್ಮವಿಧಿಯನ್ನು ಪ್ರತಿಪಾದಿಸು

CC-0. Jangamwadi Math Collection. Digitized by eGangotri

ತ್ತವೆ. ಆ ವಾಕ್ಯಗಳು ಬ್ರಹ್ಮಪರ(ಪ್ರತಿಪಾದಕ) ಗಳೂ ಕರ್ಮವಿಧಿ ಪರಗಳೂ ಆಗಿರುವ ವೆಂದರೆ ಆ ವಾಕ್ಯಗಳು ಭಿನ್ನಭಿನ್ನಗಳಾಗಿರಬೇಕು. ಹಾಗಿಲ್ಲದ್ದರಿಂದ ಕರ್ಮವಿಧಿ ಪರಗಳೆಂದೇ ಹೇಳಬೇಕು. ಹಾಗೂ ವೇದಾಂತ ಪ್ರಮಾಣದಿಂದಲೇ ಬ್ರಹ್ಮಸಿದ್ಧಿಯನ್ನು ಏಕೆ ಹೇಳಬೇಕು ? ಜಗತ್ತು ಬ್ರಹ್ಮಗಳಿಗೆ ಕಾರ್ಯಕಾರಣ ಭಾವವು ಕಂಡುಬರುವುದ ರಿಂದ ಕಾರ್ಯತ್ವ ಹೇತುಕವಾದ ಅನುಮಾನ ಪ್ರಮಾಣದಿಂದಲೂ ಬ್ರಹ್ಮಸಿದ್ಧಿಯು ಉಪಪನ್ನ (ಯುಕ್ತ) ವಾಗುವುದಷ್ಟೆ ? ಆದ್ದರಿಂದ ಬ್ರಹ್ಮದ ಅಸ್ತಿತ್ವದಲ್ಲಿ ಕೇವಲ ವೇದಾಂತಗಳೇ ಪ್ರಮಾಣವೆನ್ನುವುದು ಯುಕ್ತವಲ್ಲ. ಇದಲ್ಲದೆ ನಾನಾ ದೇವತೋ ಪಾಸನಪರಗಳೆಂತಲೂ ಹೇಳಲು ಬಾಧಕವಿಲ್ಲ. "ಅಗ್ನಿರಗ್ನೇ ಪ್ರಥಮೋ ದೇವತಾನಾಂ" "ಆದಿತ್ಯೋ ಬ್ರಹ್ಮ" "ತದ್ವಿಷ್ಣೋರೇಕಮುತ್ತಮಂ" "ನಾರಾಯಣ ಪರಂ ಬ್ರಹ್ಮ" ಇತ್ಯಾದಿ ಶ್ರುತಿಗಳಲ್ಲಿ ಅಗ್ನಿ, ಆದಿತ್ಯ, ವಿಷ್ಣು ಮುಂತಾದ ದೇವತೆಗಳ ಉಪಾಸನವು ವಿಧಿಸಲ್ಪಡುತ್ತವೆ. ಹಾಗೂ "ನೈಷಾ ವಿಚಿತ್ರಾ ಸುಧೃಥಾ ಬಹ್ವಂ ಪುರಾ" "ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ" (ಶ್ವೇ. ೪–೫) ಇತ್ಯಾದಿ ವಾಕ್ಯಗಳಲ್ಲಿ ಸರ್ವದೇವತಾಸ್ವರೂಪವೂ ಸರ್ವಕಾರಣತ್ವವೂ ಪ್ರಧಾನಕ್ಕೆ ಹೇಳಲ್ಪ ಡುವುದರಿಂದ ಆ ಎಲ್ಲ ವೇದಾಂತ ವಾಕ್ಯಗಳು ಪ್ರಧಾನಪರಗಳೆಂದು ಹೇಳುವುದಾದರೂ ಯುಕ್ತವೇ ಆಗಿದೆ. ಇದಲ್ಲದೆ ಆ ವಾಕ್ಯಗಳು ಸಮಸ್ತೋಪದ್ರವ ಶೂನ್ಯನೂ ಸರ್ವ ಮಂಗಲಾಧಾರನೂ ಸ್ವಯಂಸಿದ್ಧನೂ ಆಗಿರುವ ಪರಶಿವ ಬ್ರಹ್ಮವನ್ನೇ ಪ್ರತಿಪಾದಿ ಸುತ್ತವೆಂದರೆ ಆ ವಾಕ್ಯಗಳು ಯಾವುದನ್ನು ಸಾಧನಮಾಡಿದಂತಾಯಿತು.

ಮೊದಲೇ ಸಿದ್ಧವಾಗಿದ್ದ ಬ್ರಹ್ಮಸಿದ್ಧಿಯನ್ನು ಮಾಡಿದಂತಾಗಲಿಲ್ಲವಾದ್ದರಿಂದ ನಿಷ್ಫಲಗಳೇ ಆದವಲ್ಲದೆ ಲೋಕದಲ್ಲಿ "ಇದು ಘಟವು" "ಇದು ಪಟವು" ಎಂಬ ಎಲ್ಲ ವ್ಯವಹಾರವೂ ಪರಂಪರಾವೃದ್ಧವ್ಯವಹಾರವನ್ನೇ ಅಪೇಕ್ಷಿಸುವಂತೆ ವೇದಾಂತವಾಕ್ಯ ವ್ಯವಹಾರವಾದರೂ ಮತ್ತೊಂದು ವ್ಯವಹಾರವನ್ನು ಅಪೇಕ್ಷಿಸಲೇಬೇಕು. ಇಲ್ಲದಿದ್ದರೆ ಶಾಬ್ದಬೋಧವೇ ಆಗುವದಿಲ್ಲವಾದ್ದರಿಂದ ವೇದಾಂತ ವಾಕ್ಯಗಳಿಗೆ ಅನ್ಯಸಾಪೇಕ್ಷ ತ್ವವು ಪ್ರಾಪ್ತವಾಗಿ ಅವು ಸ್ವತಂತ್ರ ಪ್ರಮಾಣಗಳೇ ಆಗಲಾರವು. ಆದ್ದರಿಂದ ಈ ದೋಷವಾರಣಕ್ಕಾಗಿ ದೇವತೋಪಾಸನ ವಿಧಿಪರಗಳೆಂದೇ ಹೇಳಬೇಕು. ಅಥವಾ ಕರ್ತೃ ದೇವತಾಪ್ರತಿಪಾದನವನ್ನು ಮಾಡುವುದರಿಂದ ಕರ್ಮಪರಗಳೆಂದೂ ಹೇಳಬಹು ದೆಂಬ ಪೂರ್ವಪಕ್ಷವಾಗಲು ಭಾಷ್ಯಕಾರರು "ಬ್ರೂಮಃ" ಎಂದು ಸಿದ್ಧಾಂತಪಕ್ಷವನ್ನು ಸ್ಥಾಪಿಸುತ್ತಾರೆ.

ಸಿದ್ಧಾಂತ :—ವೇದಾಂತಗಳು ಬ್ರಹ್ಮಪ್ರತಿಪಾದಕಗಳೂ ಬ್ರಹ್ಮಧ್ಯಾನ ವಿಧಿ ಪ್ರತಿಪಾದಕಗಳೂ ಆಗಿರುವವೆನ್ನುವವೇ ಯುಕ್ತವಾಗಿದೆ. ಬ್ರಹ್ಮ, ಬ್ರಹ್ಮಧ್ಯಾನ ವಿಧಿ ಗಳೆರಡೂ ಕಂಡುಬರುವುದರಿಂದ ವಾಕ್ಯಭೇದ ದೋಷವೂ ಕಂಡುಬರುವುದಿಲ್ಲ. ಹೇಗೆಂ

CC-0. Jangamwadi Math Collection. Digitized by eGangotri

ದರೆ ಶ್ರುತಿ ವಾಕ್ಯಗಳ ತಾತ್ಪರ್ಯಗ್ರಾಹಕಗಳಾದ ಉಪಕ್ರಮಾದಿ ಷಡ್ವಿಧ ಹೇತುಗಳಿಂದ "ಸತ್ಯಂ ಜ್ಞಾನಮನಂತಂ ಬ್ರಹ್ಮ" "ಏಕಮೇವಾದ್ವಿತೀಯಂ ಬ್ರಹ್ಮ" ಇತ್ಯಾದಿ ವಾಕ್ಯಗಳು ಬ್ರಹ್ಮಪ್ರತಿಪಾದಕಗಳಾಗಿವೆ. ಇನ್ನು "ಆತ್ಮಾ ವಾಽರೆ ದ್ರಷ್ಟವ್ಯಃ" (ಬೃಹ. ೨-೪-೫) ಇತ್ಯಾದಿ ವಾಕ್ಯಗಳು ಬ್ರಹ್ಮಜ್ಞಾನ ವಿಧಿ ಪ್ರತಿಪಾದಕಗಳಾಗಿವೆ.

ಷಡ್ವಿಧ ತಾತ್ಪರ್ಯಲಿಂಗಗಳಿಂದ ವೇದಾಂತ ತಾತ್ಪರ್ಯನಿರ್ಣಯ

"ಉಪಕ್ರಮೋಪಸಂಹಾರಾವಭ್ಯಾಸೋಽಪೂರ್ವತಾಫಲಂ | ಅರ್ಥವಾದೋಪತ್ತೀಚ ಲಿಂಗಂ ತಾತ್ಪರ್ಯ ನಿರ್ಣಯೇ" ಇಂತೆಂಬ ಸ್ಮೃತ್ಯುಕ್ತವಾದ ಉಪಕ್ರಮೋಪಸಂಹಾರಾದಿ ಷಡ್ವಿಧಲಿಂಗಗಳಿಂದ ವೇದಾಂತ ತಾತ್ಪರ್ಯ ನಿರ್ಣಯವೇ ಶ್ರವಣವೆಂದು ಹೇಳಲ್ಪಡುತ್ತದೆ. ಈ ವಿಷಯದಲ್ಲಿ "ಶ್ರವಣಂ ನಾಮವಾಕ್ಯನಾಂ ವೈದಿಕಾನಾಂ ಪರಾತ್ಪರೇ | ಉಪಕ್ರಮಾದಿಭಿರ್ಲಿಂಗೈಃ ಕೃತತಾತ್ಪರ್ಯ ನಿಶ್ಚಯಃ" ಎಂಬ ಶ್ಲೋಕವು ಪ್ರಮಾಣವಾಗಿದೆ. ಉಪಕ್ರಮ (ಆರಂಭ) ಉಪಸಂಹಾರ (ಸಮಾಪ್ತಿ) ಗಳೆರಡೂ ಕೂಡಿ ಒಂದು ಲಿಂಗವು "ಸದೇವ ಸೌಮ್ಯೇದಮಗ್ರ ಆಸೀತ್" (ಛಾಂ. ೬-೨-೧) ಇಂತೆಂಬುದು ಉಪಕ್ರಮ ವಾಕ್ಯವು "ಸ ಏಷೋಽಣು(ಣಿಮೈ) ರೈತದಾತ್ಮ್ಯಮಿದಂ ಸರ್ವಂ ಸ ಆತ್ಮಾ ತತ್ವಮಸಿ" (ಛಾಂ. ೬-೯-೪) ಇಂತೆಂಬ ವಾಕ್ಯವು ಉಪಸಂಹಾರ ವಾಕ್ಯವಾಗಿದೆ. "ತತ್ವಮಸಿ" ಎಂದು ಪುನಃ ಪುನರುಕ್ತಿಯು ಅಭ್ಯಾಸವೆನಿಸುವುದು. "ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" (ಬೃ. ೩-೯-೨೭) ಎಂಬ ವಾಕ್ಯವು ಬ್ರಹ್ಮವು ಮಾನಾಂತರಾಗಮ್ಯವೆಂದು ಹೇಳುವುದರಿಂದ ಅಪೂರ್ವತ್ವವೆನಿಸುವುದು. "ಯೇನಾಶ್ರುತಂ ಶ್ರುತಂ ಭವತಿ" (ಛಾಂ. ೬-೧-೩) ಇತ್ಯಾದಿ ವಾಕ್ಯವು ಏಕ ವಿಜ್ಞಾನದಿಂದ ಸರ್ವಜ್ಞಾನವನ್ನು ಹೇಳುವುದರಿಂದ ಫಲವೆನಿಸಿರುವುದು. "ಸೇಯಂ ದೇವತೈಕ್ಷತ ಹಂತಾಹಮಿಮಾಸ್ತಿಸ್ರೋ ದೇವತಾಃ | ಅನೇನ ಜೀವೇನಾತ್ಮನಾನು ಪ್ರವಿಶ್ಯ ನಾಮರೂಪೇ ವ್ಯಾಕರವಾಣಿ" (ಛಾಂ. ೬-೩-೨) ಇತ್ಯಾದಿಯಿಂದ ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ರೂಪ ಪಂಚಕೃತ್ಯಗಳನ್ನು ಹೇಳುವ ವಾಕ್ಯಗಳು ಅರ್ಥವಾದಗಳು. "ಯಥಾ ಸೌಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್" (ಛಾಂ. ೬-೧-೪) ಇಂತೆಂಬ ಮೃದಾದಿ ದೃಷ್ಟಾಂತ ಬೋಧ ವಾಕ್ಯಗಳು ಉಪಪತ್ತಿ ವಾಕ್ಯಗಳೆನಿಸುವುವು. ಇದರಂತೆ ಬೇರೆ ಉಪನಿಷತ್ತುಗಳಲ್ಲಿಯೂ ತಿಳಿಯಬೇಕು. ನಾರಾಯಣೋಪನಿಷತ್ತಿನಲ್ಲಿ "ಅಣೋರಣೀಯಾ ಯನ್ಮಹತೋ ಮಹೀಯಾನ್" (ಮಹಾನಾ. ಅನು. ೧೦) ಎಂಬುದು ಉಪಕ್ರಮ ವಾಕ್ಯವು "ಸರ್ವೋಹ್ಯೇಷರುದ್ರಃ" (ಮಹಾನಾ. ಅನು.೧೬) ಎಂಬುದು ಉಪಸಂಹಾರವಾಕ್ಯವು. "ಯಃ ಪರಸ್ಸ ಮಹೇಶ್ವರಃ" (ಮಹಾನಾ. ಅನು. ೧೧) "ಅಂಬಿಕಾಪತಯೇ ಉಮಾಪತಯೇ ಪಶುಪತಯೇ ನಮೋ ನಮಃ". (ಮಹಾನಾ. ಅನು. ೧೮) ಎಂಬುದು

CC-0. Jangamwadi Math Collection. Digitized by eGangotri

ಅಭ್ಯಾಸಕ್ರಮವು. "ವಿಶ್ವಾಧಿಕೋ ರುದ್ರೋ ಮಹರ್ಷಿಃ" (ಮಹಾ. ನಾ. ಅನು. ೧೦) ಇತ್ಯಾದಿ ವಾಕ್ಯದಲ್ಲಿ ರುದ್ರನು ವಿಶ್ವಾಧಿಕ (ಸರ್ವಶ್ರೇಷ್ಠ) ನೆಂಬ ವಿಷಯವು ವೇದಾಂತ ಪ್ರಮಾಣ ವೇದ್ಯವಲ್ಲದೆ ಬೇರೆ ಪ್ರತ್ಯಕ್ಷಾದಿ ಪ್ರಮಾಣ ವೇದ್ಯವಾಗಿಲ್ಲವಾದ್ದರಿಂದ ಈ ವಾಕ್ಯವು ಅಪೂರ್ವತ್ವ ವಾಕ್ಯವು. "ಪರಾಮೃತಾತ್ಪರಿ ಮುಚ್ಯಂತಿ ಸರ್ವೇ" (ಮಹಾ. ನಾ. ಅನು. ೧೦) ಎಂಬ ಪರಮ ಮುಕ್ತಿರೂಪ ಫಲಬೋಧಕ ವಾಕ್ಯವು ಫಲವಾಕ್ಯವಾಗಿರುವುದು. "ಸಹಸ್ರ ಶೀರ್ಷಂ" (ಮಹಾನಾ. ಅನು. ೧೧) ಎಂಬುದು ಅರ್ಥವಾದ ವಾಕ್ಯವು. "ಯಸ್ಮಾತ್ಪರಂ ನಾಪರಮಸ್ತಿ ಕಿಂಚಿತ್" (ಮಹಾನಾ. ಅನು. ೧೦) ಎಂಬುದು ಉಪಪತ್ತಿ ವಾಕ್ಯವು. ಹೀಗೆಯೇ ಎಲ್ಲ ಉಪನಿಷತ್ತುಗಳಲ್ಲಿಯೂ ತಿಳಿಯ ತಕ್ಕದ್ದು. ನೀಲಾದಿರೂಪ ವಿಷಯಕವಾದ ಪ್ರತ್ಯಕ್ಷಕ್ಕೆ ಕಾರಣವಾದ ನೇತ್ರದಿಂದ ದ್ರವ್ಯಸಿದ್ಧಿ (ಪ್ರತ್ಯಕ್ಷಜ್ಞಾನ) ಯಾಗುವಂತೆ ಬ್ರಹ್ಮಧ್ಯಾನ ಪ್ರತಿಪಾದಕವಾದ ವೇದಾಂತಗಳಿಂದ ಬ್ರಹ್ಮಸಿದ್ಧಿಯೂ ಉಂಟಾಗುವುದರಿಂದ ವೇದಾಂತಗಳು ಉಭಯ ಪರವೆನ್ನುವಲ್ಲಿ ವಿರೋಧವಿಲ್ಲ. "ನೈಷಾ ತರ್ಕೇಣ ಮತಿರಾಪನೇಯಾ" (ಕಠ.೧-೨-೯) ಎಂಬ ಶ್ರುತಿಯಿಂದ ಬ್ರಹ್ಮ ಸಿದ್ಧಿಯಲ್ಲಿ ಅನುಮಾನಕ್ಕೆ ಶಕ್ತಿಯಿಲ್ಲವೆಂದು ಹೇಳಲ್ಪಡುವುದು. ಹಾಗೂ ಜಗತ್ಕರ್ತನು ಒಬ್ಬನೆಂಬ ವಿಷಯವು ಅನುಮಾನದಿಂದ ಸಿದ್ಧವೇ ಆಗುವುದಿಲ್ಲ. ಆದ್ದರಿಂದ ಬ್ರಹ್ಮ ಸದ್ಭಾವದಲ್ಲಿ ಅನುಮಾನವು ಪ್ರಮಾಣವಲ್ಲ. ಕಿಂತು ವೇದಾಂತಗಳೇ ಪ್ರಮಾಣಗಳು. "ವಿಶ್ವಂ ಭೂತಂ ಭುವನಂ ಚಿತ್ರಂ ಬಹುಧಾ ಜಾತಂ ಜಾಯಮಾನಂ ಚ ಯತ್ ಸರ್ವೋಹ್ಯೇಷ ರುದ್ರಃ । ತಸ್ಮೈ ರುದ್ರಾಯ ನಮೋ ಅಸ್ತು" (ಮಹಾನಾ. ಅನು. ೧೬) ಇತ್ಯಾದಿ ಶ್ರುತಿಯಿಂದ ಶಿವನು ಸರ್ವಜಗತ್ತಿಗೆ ಉಪಾದಾನಕಾರಣವಾಗಿರುವುದರಿಂದ ಸರ್ವ ಜಗನ್ಮಯನೆಂದೂ "ಉಮಾ ಸಹಾಯಂ ಪರಮೇಶ್ವರಂ ಪ್ರಭುಂ" ಇತ್ಯಾದಿಯಾಗಿ "ಸ ಏವ ವಿಷ್ಣುಃ ಸ ಪ್ರಾಣಃ ಸಕಾಲೋಗ್ನಿಃ ಸ ಚಂದ್ರಮಾಃ ಸ ಏವ ಸರ್ವಂ ಯದ್ಭೂತಂ ಯಚ್ಚ ಭವ್ಯಂ ಸನಾತನಂ । ಧ್ಯಾತ್ವಾ ತನ್ಮೃತ್ಯುಮತ್ಯೇತಿ ನಾನ್ಯಃ ಪಂಥಾ ವಿಮುಕ್ತಯೇ" (ಕೈವಲ್ಯ. ೧-೯) ಇತ್ಯದಿ ಶ್ರುತಿಯಿಂದ ಪರಶಿವ ಬ್ರಹ್ಮವು ಸರ್ವ ದೇವತಾಸ್ವರೂಪವೆಂದೂ ಆ ಪರಶಿವ ಬ್ರಹ್ಮೋಪಾಸನವೇ ಮುಕ್ತಿಗೆ ಕಾರಣವೆಂದೂ ಕಂಡುಬರುವುದರಿಂದ ಪರಶಿವ ಬ್ರಹ್ಮೇತರ ದೇವತೋಪಾಸನವು ಮುಕ್ತಿ ಮೂಲವಲ್ಲ. ಇದಲ್ಲದೆ "ಯೋ ರುದ್ರೋಽಗ್ನೌ" (ತೈ. ಸಂ. ೫-೫-೯) ಇತ್ಯಾದಿ ಶ್ರುತಿಯಿಂದ ಶಿವನೇ ಸರ್ವಾಂತರ್ಯಾಮಿಯಾಗಿರುವುದರಿಂದ ಸರ್ವದೇವತಾಸ್ವರೂಪನೂ ಆಗಿರುವನೆಂದು ಸಿದ್ಧವೇ ಆಗುವುದಾದುದರಿಂದ ಉತ್ತಮ, ಮಧ್ಯಮ, ಅಧಮಾಧಿಕಾರಿ ಭೇದದಿಂದ ನಾನಾ ದೇವತೋಪಾಸನವು ವಿರುದ್ಧವಾಗುವುದಿಲ್ಲ.

ಇನ್ನು "ಭೇದಾಭೇದಾತ್ಮಿಕಾ ಶಕ್ತಿರ್ಬ್ರಹ್ಮ ನಿಷ್ಠಾ ಸನಾತನೀ" ಎಂಬ ಸ್ಮೃತಿಯಲ್ಲಿ ವಹ್ನಿ ಶಕ್ತಿಗೆ ವಹ್ನಿಯೇ ಅಧಿಷ್ಠಾನವಾಗಿರುವಂತೆ ಶಿವಶಕ್ತಿಗೆ ಶಿವನೇ ಅಧಿ

CC-0. Jangamwadi Math Collection. Digitized by eGangotri

ಷ್ಠಾನವಾಗಿರುವನೆಂದು ಕಂಡುಬರುವುದರಿಂದಲೂ ನಿರಧಿಷ್ಠಾನ ಶಕ್ತಿಯು ಇಲ್ಲದಿರುವುದರಿಂದಲೂ ಶಕ್ತಿ ಶಕ್ತಿಮತ್ಪದಾರ್ಥಗಳಿಗೆ ಅಭೇದವಿರುವುದರಿಂದಲೂ ಆ ಶಕ್ತಿನಿಷ್ಠ ಕರ್ತೃತ್ವವು ಆ ಶಕ್ತಿಗೆ ಅಭಿನ್ನನಾದ ಶಿವನಿಗೆ ಯುಕ್ತವಾಗುವುದರಿಂದಲೂ ಪ್ರಧಾನಕ್ಕೆ ಸರ್ವಕರ್ತೃತ್ವವು ಸಿದ್ಧಿಸುವುದಿಲ್ಲ. ಕಿಂತು ಶಿವನಿಗೇನೇ ಸಿದ್ಧಿಸುತ್ತದೆ. ಇನ್ನು ಪುತ್ರಾದಿ ಸಿದ್ಧವಸ್ತುಗಳ ಕುಶಲ ವಾರ್ತಾಜನ್ಯ ಜ್ಞಾನದಿಂದ ಜನತಾದಿಗಳಿಗೆ ಪ್ರವೃತ್ತಿಯು ಕಂಡುಬರುವಂತೆ ಸಿದ್ಧ ಬ್ರಹ್ಮ ಜ್ಞಾನದಿಂದಲೂ ಪ್ರವೃತ್ತಿಯುಂಟಾಗುವುದರಿಂದ ಕೇವಲ ವೃದ್ಧವ್ಯಾಪಾರದಿಂದಲೇ ಪ್ರವೃತ್ತಿಯುಂಟಾಗುವುದೆಂದು ಹೇಳಲವಕಾಶವಿಲ್ಲ. ಇದಲ್ಲದೆ ಬಾಲಕರಿಗೆ ಮಾತಾಪಿತೃಗಳು "ಇದು ಘಟವು" "ಇದು ಪಟವು" ಎಂದು ನಿರ್ದೇಶನಮಾಡಿ ತೋರಿಸಲು ಆಗ ಸಿದ್ಧ ಘಟಪಟಾದಿಗಳ ಜ್ಞಾನವುಂಟಾಗುತ್ತದೆ. ಹಾಗೂ ಕಾವ್ಯಾಲಂಕಾರಜ್ಞರು ತಮ್ಮ ಶಿಷ್ಯರಿಗೆ ಆ ಕಾವ್ಯಾಲಂಕಾರಗಳನ್ನುಪದೇಶಿಸಲು ಅವುಗಳ ಜ್ಞಾನವುಂಟಾಗುತ್ತದೆ. ಆದ್ದರಿಂದ ಕೇವಲ ವೃದ್ಧ ವ್ಯಾಪಾರದಿಂದಲೇ ಸಿದ್ಧವಸ್ತು ಜ್ಞಾನವೆಂದು ಹೇಳುವುದು ಯುಕ್ತವಲ್ಲ. ಆದ್ದರಿಂದ ವೇದಾಂತ ವಾಕ್ಯಗಳು ಸಿದ್ಧ ಬ್ರಹ್ಮ ಜ್ಞಾನವನ್ನುಂಟುಮಾಡಿಕೊಂಡಿರುವುದರಿಂದ ಬ್ರಹ್ಮದ ವಿಷಯದಲ್ಲಿ ಅವು ಪ್ರಮಾಣಗಳಾಗಿರುವುವು.

ಶಂಕಾ:—ಮೊದಲೇ ಸಿದ್ಧವಾಗಿರುವ ಬ್ರಹ್ಮ ವಿಷಯದಲ್ಲಿ ವೇದಾಂತ ಶಾಸ್ತ್ರಕ್ಕೆ ಪ್ರಯೋಜನವಿಲ್ಲದಿರುವುದರಿಂದ ವೇದಾಂತ ಶಾಸ್ತ್ರವು ಕರ್ಮಾಂಗವೇ ಆಗುವುದೆಂದು ಹೇಳುವುದು ಯುಕ್ತವಲ್ಲವೆ? ವೇದಾಂತ ಶಾಸ್ತ್ರಕ್ಕೆ ಪ್ರಯೋಜನವಾವುದು? ಪಾಶ ನಿವೃತ್ತಿಯೇ ಪ್ರಯೋಜನವಲ್ಲವೆ? ಮೊದಲನೆಯದಲ್ಲ. ಆ ಪಾಶ ನಿವೃತ್ತಿ (ಮುಕ್ತಿ) ಯು ಸಂಭವಿಸುವುದೇ ಇಲ್ಲ. ಏಕೆಂದರೆ ಪಾಶವಾದರೂ ನಿಮ್ಮ ಶಿವಾದ್ವೈತ ಸಿದ್ಧಾಂತದಲ್ಲಿ ಶಿವನಿಗೆ ಭಿನ್ನವಾಗಿರಲಾರದು. ಭಿನ್ನವಾಗಿರುವುದೆಂದರೆ ಶಕ್ತಿ ವಿಶಿಷ್ಟ ಶಿವಾದ್ವೈತಕ್ಕೇನೇ ಹಾನಿಯಾಗುವುದು.

ಇನ್ನು ಎರಡನೆಯದೂ ಅಲ್ಲ. ಏಕೆಂದರೆ ಶಿವನಿಗೆ ಅಭಿನ್ನವಾಗಿರವುದೆಂದು ಮಾಯಾಪಾಶವೂ ಕೂಡ ಶಿವನಂತೆ ಸತ್ಯವಾಗುವುದರಿಂದ ಸರ್ವದಾ ಸಂಸಾರ (ಬಂಧ) ಪ್ರಾಪ್ತಿಯಾಗುವುದು. ಮುಕ್ತಿಯು ಸಂಭವಿಸುವುದೇ ಇಲ್ಲ. ಹೀಗಾದಮೇಲೆ ಆ ಮಾಯಾಪಾಶ ನಿವೃತ್ತಿ (ಮುಕ್ತಿ) ಯಲ್ಲಿ ಯಾರೂ ಪ್ರಯತ್ನವನ್ನೇ ಮಾಡಬಾರದಾಗುವುದು. ಇದಲ್ಲದೆ ಆ ಮಾಯಾ ಪಾಶವು ನಿತ್ಯವೆಂದರೂ ಮಿಥ್ಯೆಯೆಂದರೂ ದೋಷವೇ ಬರುವುದು. ಹೇಗೆಂದರೆ ಪರಮೇಶ್ವರನೊಬ್ಬನೇ ನಿತ್ಯ ಸಿದ್ಧನೆಂದೂ ಅವನ ಧ್ಯಾನಧಾರಣಾದಿಗಳಿಂದ ತಾನೂ ನಿತ್ಯಸಿದ್ಧನಾಗಬೇಕೆಂದೂ ಆ ಪರಮೇಶ್ವರನಲ್ಲಿ ಭಕ್ತರು ಪ್ರವೃತ್ತರಾಗುತ್ತಾರಷ್ಟೆ? ಈಗ ಮಾಯಾ ಪಾಶವು ನಿತ್ಯವಾದ ಮೇಲೆ ಅದು ಯಾವ ಧ್ಯಾನಧಾರಣಗಳಿಂದಲೂ ನಾಶಹೊಂದುವುದಿಲ್ಲವೆಂದಮೇಲೆ ಅವನಲ್ಲಿ

CC-0. Jangamwadi Math Collection. Digitized by eGangotri

ಪ್ರವೃತ್ತವಾಗಲಾರದಷ್ಟೆ ? ಇನ್ನು ಮಾಯಾ ಪಾಶವು ಮಿಥ್ಯೆಯಾದರೆ ಬಂಧ ಮೋಕ್ಷ ವ್ಯವಸ್ಥೆಯೇ ಆಗಲಾರದು. ಆದರಿಂದ ಸರ್ವಥಾ ವೇದಾಂತ ಶಾಸ್ತ್ರ ಪ್ರವೃತ್ತಿಯೇ ಸಂಭವಿಸಲಾರದು ಎಂದು ಆಶಂಕೆಯಾಗಲು ಭಾಷ್ಯಕಾರರು ಪರಿಹರಿಸುತ್ತಾರೆ.

ಗುಣತ್ರಯರೂಪ ಮಾಯಾಪಾಶವಾದರೋ ಶಿವನಿಗೆ ಭಿನ್ನವೇ ಆಗಿರುವುದಾದರೆ ಶಿವಾದ್ವೈತಕ್ಕೆ ಹಾನಿಯಾಗುವುದಿಲ್ಲ. ಹಾಗೂ ಅದು ಸತ್ಯವಾದರೂ ಯಾವಾಗಲೂ ಯಾರಿಗೂ ಮುಕ್ತಿಯೇ ಸಂಭವಿಸಲಾರದೆಂದು ಹೇಳಲಿಕ್ಕೂ ಅವಕಾಶವಿಲ್ಲ. ಏಕೆಂದರೆ ನಾವು ದ್ವೈತಾದ್ವೈತಮತವಾದಿಗಳಲ್ಲವೆ ? ಬದ್ಧ ದೆಸೆಯಲ್ಲಿ ಭೇದವನ್ನೂ ಮುಕ್ತದೆಸೆಯಲ್ಲಿ ಅಭೇದವನ್ನೂ ಹೇಳುವೆವು. ಮಾಯಾಪಾಶವು ಸತ್ಯವಾದರೂ ಅದರ ನಿವೃತ್ತಿಯು ಸಂಭವಿಸುತ್ತದೆ. ನಿವೃತ್ತಿಯೆಂದರೆ ತನ್ನ ಕಾರಣವಾದ ಚಿಚ್ಛಕ್ತಿಯಲ್ಲಿ ಲಯವೆಂದು ತಿಳಿಯಬೇಕು. "ನಿವೃತ್ತಿರ್ನಾಮ ಕಾರಣಲಯಃ" ಎಂಬ ನ್ಯಾಯಾನುಸಾರವಾಗಿ ಕಾರಣಸ್ವರೂಪವಾಗುವಿಕೆಗೇನೇ ಲಯವೆಂದು ಹೇಳುವೆವು. ನಿನ್ನ ದ್ವೈತಾದ್ವೈತಮತದಲ್ಲಿ ಪ್ರಮಾಣವೇನು ಅಂದರೆ "ಬ್ರಹ್ಮವೇದ ಬ್ರಹ್ಮೈವ ಭವತಿ" (ಮುಂ. ೩-೨-೯) "ಬ್ರಹ್ಮ ಭವನ ಕಾಮೋ ಬ್ರಹ್ಮವೇದನಂ ಕುರ್ಯಾತ್" ಇತ್ಯಾದಿ ಶ್ರುತಿಗಳೇ ಪ್ರಮಾಣಗಳಾಗಿವೆ. ಜಡವಾದ ತ್ರಿಗುಣಾತ್ಮಕವಾದ ಮಾಯಾಪಾಶವು ಚಿಚ್ಛಕ್ತಿಗೆ ಭಿನ್ನವಾಗಿರುವುದರಿಂದ ಅದರ ನಿವೃತ್ತಿಯು ಶಿವೋಪಾಸನದಿಂದ ಸಂಭವಿಸುವುದು. "ಅನೀಶಯಾ ಶೋಚತಿ ಮುಹ್ಯಮಾನಃ" (ಶ್ವೇ. ೪-೭) ಎಂಬ ಶ್ರುತಿಯಿಂದ ಬಂಧವೂ "ಬ್ರಹ್ಮ ವೇದ ಬ್ರಹ್ಮೈವ ಭವತಿ" (ಮುಂ. ೩-೨-೯) "ನ ಸ ಪುನರಾವರ್ತತೆ ನ ಸ ಪುನರಾವರ್ತತೆ" (ಛಾಂ. ೮-೧೫) ಇತ್ಯಾದಿ ಶ್ರುತಿಗಳಿಂದ ಮೋಕ್ಷವೂ ಹೇಳಲ್ಪಡುವುದರಿಂದ ಮೇಲೆ ಹೇಳಿದಂತೆ ಬಂಧ ಮೋಕ್ಷಗಳನ್ನು ಒಪ್ಪಲೇಬೇಕು.

ಶಂಕಾ :—ಕೇವಲ ಬ್ರಹ್ಮವಾಚಕ ಪದದಿಂದಲೇ ಬ್ರಹ್ಮಜ್ಞಾನವು ಸಂಭವಿಸುತ್ತಿರಲು ಬ್ರಹ್ಮಧ್ಯಾನ ಧಾರಣ ವಿಧಿಯಿಂದ ಪ್ರಯೋಜನವೇನು ? ಎಂದು ಆಶಂಕಿಸಕೂಡದು.

ಸಮಾಧಾನ :—ಮಂತ್ರಾಧ್ಯಯನದಿಂದಲೇ ಹೋಮ ಯೋಗ್ಯ ದ್ರವ್ಯ ದೇವತಾಜ್ಞಾನವು ಸಿದ್ಧವಾಗಿದ್ದರೂ ಆ ಹೋಮ ಸಮಯದಲ್ಲಿ ಮಂತ್ರಗಳಿಂದ ಪುನಃ ಅನುಸರಣವನ್ನು ಮಾಡಬೇಕೆಂದು ಪ್ರಯೋಗವಿಧಿಯು ಕಂಡುಬರುವಂತೆ ಕೇವಲ ಬ್ರಹ್ಮವಾಚಕ ಶಬ್ದದಿಂದ ಬ್ರಹ್ಮಜ್ಞಾನವು ಸಿದ್ಧಿಸಿದರೂ ವೇದಾಂತ ವಾಕ್ಯ ವಿಧಿಯು ವಿರುದ್ಧವಾಗುವುದಿಲ್ಲ.

CC-0. Jangamwadi Math Collection. Digitized by eGangotri

ಶಂಕಾ :—ಹಾಗಾದರೆ ಪರಶಿವ ಬ್ರಹ್ಮ ವಿಷಯದಲ್ಲಿ ಉತ್ಪತ್ತಿ, ವಿನಿಯೋಗ, ಅಧಿಕಾರ ವಿಧಿಗಳು ಕಂಡುಬಾರದೇ ಇರುವುದರಿಂದ ಪ್ರಯೋಗ ವಿಧಿಯಾದರೂ ಸಂಭವಿಸಲಾರದೆಂದು ಆಶಂಕಿಸಕೂಡದು.

ಸಮಾಧಾನ :—ಏಕೆಂದರೆ "ಅಮೃತಸ್ಯ ದೇವಧಾರಣೋ ಭೂಯಾಸಂ" (ತೈ. ಶಿಕ್ಷಾ. ೪) ಇತ್ಯಾದಿ ವಾಕ್ಯದಲ್ಲಿ ಲಿಂಗಧಾರಣ ಪ್ರಕರಣದಿಂದ ಲಿಂಗಧಾರಣೋತ್ಪತ್ತಿ ವಿಧಿಯು ಅಪರಿಹಾರ್ಯವಾಗಿ ಸಿದ್ಧವಾಗುವುದರಿಂದ ಪರಶಿವ ಲಿಂಗಧಾರಣ ದೀಕ್ಷಾ ಸಂಪನ್ನನಾಗಿ "ಪರಮಾತ್ಮನಂ ಪಶ್ಯೇತ್" (ಪರಶಿವ ಬ್ರಹ್ಮವನ್ನು ಸಾಕ್ಷಾತ್ಕರಿಸ ಬೇಕು.) ಎಂಬ ವಿನಿಯೋಗ ವಿಧಿಯು ಯುಕ್ತವಾಗುತ್ತದೆ. ಇದಲ್ಲದೆ "ತಸ್ಯಾಭಿ ಧ್ಯಾನಾದ್ಯೋಜನಾತ್ತತ್ತ್ವಭಾವಾದ್ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿಃ" (ಶ್ವೇ. ೧–೧೦) "ಜ್ಞಾತ್ವಾ ದೇವಂ ಮುಚ್ಯತೇ ಸರ್ವ ಪಾಶೈಃ" (ಶ್ವೇ. ೧–೮) ಇತ್ಯಾದಿ ಶ್ರುತಿಗಳಲ್ಲಿ ಪರಶಿವ ಧ್ಯಾನಧಾರಣ ಯುಕ್ತನಾದವನೇ ಮೋಕ್ಷಾಧಿಕಾರಿಯೆಂದು ವಿಧಿಸಲ್ಪಡುತ್ತದೆ. ಆದ್ದರಿಂದ ಮೋಕ್ಷ ಕಾಮಿಯು ಭಸ್ಮ, ರುದ್ರಾಕ್ಷ, ಶಿವಲಿಂಗ ಧಾರಣ ರೂಪವಾದ ಶಾಂಭವ ದೀಕ್ಷೆಯನ್ನು ಪಡೆದು ಷಟ್‌ಸ್ಥಲ ಪರಶಿವ ಬ್ರಹ್ಮ ಜ್ಞಾನವನ್ನು ಪಡೆದುಕೊಳ್ಳಬೇಕು ಎಂದು ರಾತ್ರಿಸತ್ರನ್ಯಾಯದಿಂದ ಪ್ರಯೋಗ ವಿಧಿಯು ಯುಕ್ತವಾಗುತ್ತದೆ.

"ಆತ್ಮಾವಾಽರೇ ದ್ರಷ್ಟವ್ಯಃ" ಎಂಬಲ್ಲಿ ಬ್ರಹ್ಮಜ್ಞಾನ ವಿಧಿಯು ಸಂಭವಿಸುವುದಿಲ್ಲ. ಏಕೆಂದರೆ ಬ್ರಹ್ಮವು ನಿರ್ವಿಕಾರವಾಗಿರುವುದರಿಂದ ಅದಕ್ಕೆ ಕರ್ಮಕಾರಕತ್ವವು ಸಂಭವಿಸಲಾರದಷ್ಟೆ? ಅಥವಾ ಅದಕ್ಕೆ ವಿಧಿ ವಿಷಯತ್ವವನ್ನು ಹೇಳಿದರೆ ಬ್ರಹ್ಮವು ಉತ್ಪಾದ್ಯವೂ, ವಿಕಾರ್ಯವೂ, ಸಂಸ್ಕಾರ್ಯವೂ ಆಗಬೇಕಾಗುವುದು. ಇದಲ್ಲದೆ "ಸಕ್ತು ನ್ಯಾಯ" ದಿಂದ ಸ್ವತಂತ್ರ ಫಲಕ್ಕಾಗಿ "ಸಕ್ತುನಾ ಜುಹೋತಿ" ಎಂಬಲ್ಲಿ ಸಕ್ತು ಕಾರಣತ್ವ ಪರಿಣಾಮದಿಂದ ಹೋಮಾನುಷ್ಠಾನವು ಹೇಗೋ ಹಾಗೆ "ಆತ್ಮನಾ ಪಶ್ಯೇತ್" ಎಂದು ಆತ್ಮಕರಣತ್ವ ಪರಿಣಾಮದಿಂದ ಆತ್ಮದರ್ಶನವನ್ನು ಹೇಳಲಾಗುವುದಿಲ್ಲ. ಏಕೆಂದರೆ ಆತ್ಮವಸ್ತು ಬ್ರಹ್ಮವು ನಿರ್ವಿಕಾರವಾಗಿರುವುದರಿಂದ ವಿಷಮವೂ ಭಿನ್ನ-ಭಿನ್ನವೂ ಆಗಿಲ್ಲವಷ್ಟೆ? ಆತ್ಮ ಪದಾರ್ಥವು ಒಂದೇ ಒಂದಾಗಿರುವುದರಿಂದ ಆತ್ಮ ಕರಣತ್ವವೂ ಆತ್ಮ ಕರ್ತೃಕತ್ವವೂ ಆತ್ಮದರ್ಶನದಲ್ಲಿ ಸಂಗತವಾಗುವುದಿಲ್ಲವೆಂದು ಭಾವವು. ಆದ್ದರಿಂದ ಬ್ರಹ್ಮಜ್ಞಾನವಿಧಿ ಯುಕ್ತವಾಗುವುದಿಲ್ಲ ಎಂದು ಆಶಂಕಿಸ ಕೂಡದು. ಏಕೆಂದರೆ ಸರ್ವಾಧಿಷ್ಠಾನವಾಗಿರುವ ಪರಮಾತ್ಮನಿಗೆ ಉತ್ಪತ್ತಿ, ವಿನಿಯೋಗ, ಅಧಿಕಾರಗಳೆಂಬ ಮೂರು ವಿಧ ವಿಧಿಗಳು ಸಂಭವಿಸದಿದ್ದರೂ ಮುಮುಕ್ಷು ವಿನ ಮೋಕ್ಷಫಲಕ್ಕಾಗಿ ವಿಧಿಯು ವಿರುದ್ಧವಾಗುವುದಿಲ್ಲ. ಇಲ್ಲಿ ಯಾವ ವಿಧಿಯನ್ನು ಆಶ್ರಯಿಸಬೇಕೆಂದರೆ ಮೂರು ವಿಧಿಗಳನ್ನೂ ಊಹಿಸಬಹುದು.

CC-0. Jangamwadi Math Collection. Digitized by eGangotri

ರೂಪ ಪ್ರತ್ಯಕ್ಷಕ್ಕೆ ಜನಕವಾದ ಚಕ್ಷುರಿಂದ್ರಿಯದಿಂದ ಘಟದ್ರವ್ಯ ಸಿದ್ಧಿಯಾಗುವಂತೆ ವೇದಾಂತಿಗಳಿಗೆ ಬ್ರಹ್ಮಜ್ಞಾನತ್ವವೂ ಬ್ರಹ್ಮಸಿದ್ಧಿಯೂ ಆಗಲಾರದು. ಮತ್ತೊಂದರ ಅಪೇಕ್ಷೆಯಿಲ್ಲದೆ ಕೇವಲ ಚಕ್ಷುಸ್ಸಂಯೋಗದಿಂದ ಇದು ಘಟವು ಎಂಬ ಜ್ಞಾನವು ಯುಕ್ತವಾಗುತ್ತದೆ. ವೇದಾಂತ ವಾಕ್ಯಗಳಿಗಾದರೋ ಈ ತಾತ್ಪರ್ಯಾನುಕೂಲವಾಗಿಯೇ ಪ್ರಾಣವಲ್ಲದೆ ಚಕ್ಷುರಿಂದ್ರಿಯದಂತೆ ಸ್ವತಂತ್ರ ಪ್ರಾಮಾಣ್ಯವಿಲ್ಲವಾದ್ದರಿಂದ ವೇದಾಂತ ವಾಕ್ಯಗಳು ಬ್ರಹ್ಮಜ್ಞಾನ ವಿಧಾಯಕಗಳೂ ಬ್ರಹ್ಮಸದ್ಭಾವದಲ್ಲಿ ಪ್ರಮಾಣಗಳೂ ಮೋಕ್ಷೋಪಕಾರಕವಾದ ಬ್ರಹ್ಮಜ್ಞಾನ ವಿಷಯದಲ್ಲಿ ವಿಧಾಯಕಗಳೂ ಆಗಿರುತ್ತವೆ.

ಉಪಾಸನಾತ್ಮಕ ಮೋಕ್ಷಫಲಕಾರಣ ಜ್ಞಾನಕ್ಕೆ ವಿಧ್ಯುಕ್ತತ್ವಪ್ರದರ್ಶನ

ಕೇವಲ ವೇದಾಂತ ವಾಕ್ಯದಿಂದಲೇ ಬ್ರಹ್ಮಜ್ಞಾನ ವಿಧಿಯಿಂದಾಗತಕ್ಕ ಪ್ರಯೋಜನವು ಸಿದ್ಧವಾಗುವುದರಿಂದ ಆ ಬ್ರಹ್ಮಜ್ಞಾನ ವಿಧಿಯಿಂದ ಪ್ರಯೋಜನವೇನು ? ಯಾವ ಪ್ರಯೋಜನವೂ ಇಲ್ಲವಷ್ಟೆ ಎಂದು ಆಶಂಕೆಯಾಗಲು ಭಾಷ್ಯಕಾರರು "ಇತಿ ಚೇನ್ನ" ಎಂದು ಪರಿಹರಿಸುತ್ತಾರೆ. ವೇದಾಂತವಾಕ್ಯಗಳಿಂದ ಪರೋಕ್ಷವಾದ ಬ್ರಹ್ಮಜ್ಞಾನವು ಸಿದ್ಧಿಸಿದರೂ ಅಪರೋಕ್ಷ (ಪ್ರತ್ಯಕ್ಷ) ಜ್ಞಾನವು ಸಿದ್ಧಿಸುವುದಿಲ್ಲವಾದ್ದರಿಂದ ಆ ಸಾಕ್ಷಾತ್ಕಾರಕ್ಕಾಗಿ ಬ್ರಹ್ಮಜ್ಞಾನ ವಿಧಿಯು ಯುಕ್ತವಾಗುತ್ತದೆ. ಕೇವಲ ವೇದಾಂತ ಶಬ್ದಜನ್ಯ ಜ್ಞಾನದಿಂದ ಬ್ರಹ್ಮಸಾಕ್ಷಾತ್ಕಾರವು ವಿಧಿಸಲ್ಪಡುವುದಿಲ್ಲ. ಕಿಂತು ಸದ್ಗುರು ಕರುಣಾಕಟಾಕ್ಷದಿಂದ ಪ್ರಾಪ್ತವಾದ ಆ ಬ್ರಹ್ಮೋಪಾಸನ ಜ್ಞಾನದಿಂದ ಬ್ರಹ್ಮಸಾಕ್ಷಾತ್ಕಾರವು ವಿಧಿಸಲ್ಪಡುತ್ತದೆ ಎಂಬುವದೇ ಶ್ರೌತ ಮಾರ್ಗವು. ಈ ವಿಷಯದಲ್ಲಿ "ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ" ಕೈ. (೧-೭) "ತಸ್ಯಾಭಿಧ್ಯಾನಾತ್" (ಶ್ವೇ. ೧-೧೦) "ಶ್ರದ್ಧಾಭಕ್ತಿ" (ಕೈ. ೧-೨) "ಬ್ರಹ್ಮವೇದ" (ಮುಂ. ೨-೨-೯) "ಧ್ಯಾನ ನಿರ್ಮಥನಾಭ್ಯಾಸಾತ್" (ಕೈ. ೧-೨-೮) "ಜ್ಞಾತ್ವಾ ದೇವಂ" (ಶ್ವೇ. ೧-೧೮) "ಈಶಂ ತಂ ಜ್ಞಾತ್ವಾ" (ಶ್ವೇ. ೩-೨) ,"ಆತ್ಮನ್ಯೇವಾತ್ಮಾನಂ" (ಅಥರ್ವಶಿರ. ೩) "ತಜ್ಜಲಾನಿ" (ಛಾಂ. ೩-೧೪-೧) "ಪ್ರಾಚೀನಯೋಗ್ಯೋಪಾಸ್ವ" (ತೈ. ಶಿಕ್ಷಾ. ೬) ಇತ್ಯಾದ್ಯನಂತ ಶ್ರುತಿ ವಾಕ್ಯಗಳು ಪ್ರಮಾಣಗಳಾಗಿವೆ. ಅಲ್ಲದೆ "ಶ್ರೋತವ್ಯಃ ಶ್ರುತಿ ವಾಕ್ಯೇಭ್ಯಃ" ಎಂಬ ಸ್ಮೃತಿಯೂ ಪ್ರಮಾಣವಾಗಿದೆ. ಈ ಸ್ಮೃತಿ ವಾಕ್ಯದಲ್ಲಿಯೂ ಶ್ರವಣ, ಮನನ, ನಿದಿಧ್ಯಾಸನ (ಧ್ಯಾನ) ಗಳು ಬ್ರಹ್ಮಸಾಕ್ಷಾತ್ಕಾರಕ್ಕೆ ಹೇತುಗಳೆಂದೂ, ಕ್ರಿಮಿಯು ಭೃಂಗಚಿಂತನದಿಂದ ಭ್ರಮರವೇ ಆಗುವಂತೆ ಜೀವನು ಶಿವನ ಚಿಂತನದಿಂದ ಶಿವನೇ ಆಗುವನೆಂದೂ ಹೇಳುವುದರಿಂದ.ಶ್ರವಣ ಮನನ ವಿಶಿಷ್ಟವಾದ ಜ್ಞಾನಾನುಗತವಾದ ನಿಧಿಧ್ಯಾಸವೇ ಷಟ್‌ಸ್ಥಲ ಪರಶಿವ ಸಾಕ್ಷಾತ್ಕಾರದಲ್ಲಿಯೂ ಆ ಪರಶಿವಾಭೇದದಲ್ಲಿಯೂ ಮುಖ್ಯಕಾರಣವೆಂದು ತಿಳಿದು ಬರುತ್ತದೆ.

CC-0. Jangamwadi Math Collection. Digitized by eGangotri

ಆದ್ದರಿಂದ ಸರ್ವ ಕಾಮ್ಯ ಕರ್ಮಗಳನ್ನು ಬಿಟ್ಟು ಪರಶಿವ ಸುಖದಿಂದ ಆವಿರ್ಭವಿಸಿದ ನಿಗಮಾಗಮೋಭಯ ವೇದಾಂತ ವಿಹಿತಗಳೂ ತಮ್ಮ ತಮ್ಮ ವರ್ಣಾಶ್ರಮಗಳಿಗೆ ಯೋಗ್ಯಗಳೂ ಶಿವಾರ್ಪಣ ಬುದ್ಧಿಯಿಂದ ಆಚರಿಸಲ್ಪಡುವವೂ ಆಗಿರುವ ಕರ್ಮಗಳ ಆಚರಣೆಯಿಂದ ಶುದ್ಧವಾದ ಚಿತ್ತದಲ್ಲಿ ಪ್ರಕಟವಾಗುವ ಶಿವೈಕ್ಯ ಭಕ್ತಿಯಿಂದ ಪ್ರಾಪ್ತವಾದ ಶಾಂಭವ ದೀಕ್ಷಾಸಂಪನ್ನರಾದ ಮುಮುಕ್ಷುಗಳಿಗೆ ಮಾತ್ರ ಸರ್ವೋಪನಿಷತ್ಪ್ರತಿಪಾದ್ಯವಾದ ಷಟ್‌ಸ್ಥಲ ಪರಶಿವೋಪಾಸನೆಯು ವಿಹಿತವಾಗಿರುವುದರಿಂದ "ತದುಪಾಸ್ಯ" (ಅಥರ್ವ ಶಿಖಾ. ೩) ಎಂದು ಮೊದಲಾಗಿ ಹೇಳಲ್ಪಡುವ ಜ್ಞಾನೋಪಾಸನಾ ವಿಧಿಯು ಲಿಂಗಧಾರಣದೀಕ್ಷಾ ಸಂಪನ್ನರಿಂದ ಮಾತ್ರ ಗ್ರಾಹ್ಯವಾಗಿದೆ. ಇವಲ್ಲದೆ "ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ" (ಅಥರ್ವ ಶಿಖಾ. ೩) ಎಂಬ ಅಥರ್ವಣ ಶಿಖೆಯಲ್ಲಿ ಮೋಕ್ಷಾಪೇಕ್ಷಿಗಳಾದವರು ಶಿವಾತಿರಿಕ್ತೋಪಾಸನೆಯನ್ನು ಮಾಡದೆ ಶಿವೋಪಾಸನೆಯನ್ನೇ ಮಾಡಬೇಕೆಂದು ವಿಧಿಸಲ್ಪಡುತ್ತದೆ. ಆದ್ದರಿಂದ ಶಿವೋಪಾಸನೆಯಿಂದಲೇ ಸಂಸಾರ ಮಾಯಾಪಾಶ ನಿವೃತ್ತಿಯೆಂದು "ಕ್ಷರಂ ಪ್ರಧಾನಮಮೃತಾಕ್ಷರಂ ಹರಃ" "ತಸ್ಯಾಭಿಧ್ಯಾನಾತ್" (ಶ್ವೇ. ೬–೨೦) "ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ । ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ" (ಶ್ವೇ. ೬–೨೦) ಇತ್ಯಾದಿ ಶ್ರುತಿಗಳು ಶಿವಧ್ಯಾನ ಧಾರಣ ಜ್ಞಾನಗಳಿಂದಲೇ ಮೋಕ್ಷವೆಂದು ವಿಧಿಸುತ್ತವೆ. ಆದ್ದರಿಂದ ಮುಮುಕ್ಷುಗಳು ಪರಶಿವ ಬ್ರಹ್ಮವನ್ನೇ ವಿಚಾರಿಸಿ ಮನನಮಾಡಿ ಧ್ಯಾನಿಸಿ ಧರಿಸಿ ತಿಳಿದುಕೊಂಡು ಅರ್ಚಿಸಬೇಕೆಂಬುವುದೇ ಸಿದ್ಧಾಂತವು. ಆದ್ದರಿಂದ ತಾತ್ಪರ್ಯ ಗ್ರಾಹಕ-ಷಡ್ವಿಧ ಲಿಂಗಗಳಿಂದ ವೇದಾಂತಗಳು ಬ್ರಹ್ಮಪರಗಳೂ ಪರಶಿವ ಬ್ರಹ್ಮೋಪಾಸನಾಪರಗಳೂ ಆಗಿರುವುವೆಂಬುದೇ ನಿಶ್ಚಿತವಾದ ಸಿದ್ಧಾಂತವು.

ಜಗನ್ಮಿಥ್ಯಾತ್ವವಾದಖಂಡನ

"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ" ಎಂಬ ನ್ಯಾಯಾನುಸಾರವಾಗಿ ಸರ್ವ ವೇದಾಂತ ವಾಕ್ಯವಿಚಾರದಿಂದ ಪ್ರಾಪ್ತವಾದ ಜಗನ್ಮಿಥ್ಯಾತ್ವ ಪೂರ್ವಕ ಸ್ವಸ್ವರೂಪ ಜ್ಞಾನವೇ ಮುಕ್ತಿಯೆಂದು ಹೇಳಲು ಅವಕಾಶವಿಲ್ಲ. ಏಕೆಂದರೆ ಜಗನ್ಮಿಥ್ಯಾತ್ವವು ಯಾವ ವೇದಾಂತ ವಾಕ್ಯಗಳಿಂದಲೂ ಹೇಳಲ್ಪಡುವುದಿಲ್ಲ. ಆದ್ದರಿಂದ ಜಗನ್ಮಿಥ್ಯಾತ್ವವಾದಿಗಳು ಸರ್ವವೇದ ವೇದಾಂತ ಬಾಹ್ಯರೆನಿಸಬೇಕಾಗುವುದು.

ಜಗನ್ಮಿಥ್ಯಾತ್ವವೆಂದರೇನು ? ಬ್ರಹ್ಮಜ್ಞಾನದಿಂದ ಬಾಧ್ಯವಾಗುವುದೇ ಜಗನ್ಮಿಥ್ಯಾತ್ವವೆಂದು ಹೇಳುವಿರೋ ಮೂರು ಕಾಲದಲ್ಲಿಲ್ಲದಿರುವುದಕ್ಕೆ ಜಗನ್ಮಿಥ್ಯಾತ್ವವನ್ನು ಹೇಳುವಿರೋ ? ಮೊದಲದಲ್ಲ:—ಏಕೆಂದರೆ ಬಾಧ್ಯಬಾಧಕ ಭಾವವೇ ಸಂಭವಿಸುವುದಿಲ್ಲ. ಬಾಧಕವು ಬ್ರಹ್ಮಜ್ಞಾನವು ಬಾಧ್ಯವು ಜಗತ್ತು ಆದರೆ ಬಾಧಕಭಾವವು ಸಂಭವಿಸು

CC-0. Jangamwadi Math Collection. Digitized by eGangotri

ತ್ತದೆ. ಬ್ರಹ್ಮಜ್ಞಾನದಿಂದ ಪ್ರಪಂಚದ ಬಾಧವು ಯಾವ ವೇದಾಂತ ವಾಕ್ಯದಿಂದಲೂ ವಿಧಿಸಲ್ಪಡುವುದಿಲ್ಲ. ಆದರೆ "ಸರ್ವೋ ವೈ ರುದ್ರಃ" (ಮಹಾನಾ. ಅನು. ೧೬) "ಸರ್ವಂ ಖಲ್ವಿದಂ ಬ್ರಹ್ಮ" (ಛಾಂ. ೩-೧೪-೧) ಇತ್ಯಾದಿ ವಾಕ್ಯಗಳಿಂದ ಸರ್ವ ಪ್ರಪಂಚವು ಶಿವಸ್ವರೂಪವೆಂದು ಉಪದೇಶಿಸಲ್ಪಡುತ್ತದೆ. "ನಾನ್ಯತ್ಪಶ್ಯತಿ" "ನಾನ್ಯಚ್ಛೃಣೋತಿ" (ಛಾಂ. ೭-೧೪-೧) ಇತ್ಯಾದಿ ಶ್ರುತಿಗಳಿಂದ ಇದು ಘಟವು ಇದು ಪಟವು ಎಂಬ ವ್ಯವಹಾರಕ್ಕೆ ವಿಷಯವಾದ ಘಟತ್ವ ರೂಪವಾದ ಮಾಯಾ ಪಾಶವೇ ಸರ್ವ ಶಿವಾತ್ಮಕಜ್ಞಾನದಿಂದ ತಿರೋಭೂತವಾಗುತ್ತದಲ್ಲದೆ ಘಟಪಟಾದಿ ಪ್ರಪಂಚವು ಬಾಧಿತವಾಗುವುದಿಲ್ಲ.

"ಶಿವೋ ದಾತಾ ಶಿವೋ ಭೋಕ್ತಾ ಶಿವಸ್ಸರ್ವಮಿದಂ ಜಗತ್" ಇತ್ಯಾದಿ ಶಾಸ್ತ್ರೋಕ್ತವಾದ ಸರ್ವ ಶಿವಮಯ ಸಂಪೂರ್ಣಜ್ಞಾನದಿಂದ ಘಟಪಟಾದಿಗಳಲ್ಲಿ ಘಟತ್ವ ಪಟತ್ವ ಬುದ್ಧಿಯ ನಿವೃತ್ತಿಯಾಗುವುದಲ್ಲದೆ ಶಿವಮಯ ಘಟಪಟಾದಿ ಪ್ರಪಂಚದ ನಿವೃತ್ತಿಯಾಗುವುದಿಲ್ಲ. ಆದ್ದರಿಂದ ಪರಶಿವಬ್ರಹ್ಮಜ್ಞಾನದಿಂದ ಪ್ರಪಂಚವು ಬಾಧ್ಯವೆನ್ನುವುದು ಅಯುಕ್ತವು. ಇದಲ್ಲದೆ ಜಗತ್ತಿನ ಮಿಥ್ಯಾತ್ವವು ಬ್ರಹ್ಮಜ್ಞಾನ ಬಾಧ್ಯತ್ವವೆನ್ನುವುದಾದರೆ ಏಕ ವಿಜ್ಞಾನದಿಂದ ಸರ್ವವಿಜ್ಞಾನವನ್ನು ಹೇಳುವ ಪ್ರತಿಜ್ಞಾ ಶ್ರುತಿಗೆ ತಿಲಾಂಜಲಿಯನ್ನು ಕೊಡುವ ಪ್ರಸಂಗವೇ ಬರುವುದು. ಏಕೆಂದರೆ ಪ್ರಪಂಚಕ್ಕೆ ಬ್ರಹ್ಮವು ಉಪಾದಾನಕಾರಣವೆಂದು ಹೇಳಿದರೆ ಏಕ ವಿಜ್ಞಾನದಿಂದ ಸರ್ವ ವಿಜ್ಞಾನ ಪ್ರತಿಪಾದಕ ಶ್ರುತಿಯು ಸಂಗತವಾಗುತ್ತದೆ. ಕಾರ್ಯರೂಪವಾದ ಪ್ರಪಂಚವೆ ಮಿಥ್ಯೆಯಾಗಲು (ಇಲ್ಲದಿರಲು) ಬ್ರಹ್ಮವು ಯಾವುದಕ್ಕೆ ಉಪಾದಾನಕಾರಣವಾಗಬೇಕು. ಯಾವುದಕ್ಕೂ ಆಗಲಾರದು. ಆಗ ಪ್ರತಿಜ್ಞಾ ಶ್ರುತಿಯು ವ್ಯರ್ಥವಾಗುವುದಲ್ಲವೆ; ಉಪಾದಾನವಾದ ಬ್ರಹ್ಮಕ್ಕೂ ಉಪಾದೇಯವಾದ ಪ್ರಪಂಚಕ್ಕೂ ಅಭೇದವಿರುವುದರಿಂದ ಬ್ರಹ್ಮಜ್ಞಾನವಾಗಲು ಪ್ರಪಂಚಜ್ಞಾನವಾಗುವುದು. ಈ ಕಾರಣದಿಂದಲೇ "ಸರ್ವಂ ಖಲ್ವಿದಂ ಬ್ರಹ್ಮ" "ಐತದಾತ್ಮ್ಯಮಿದಂ ಸರ್ವಂ" "ಸರ್ವೋ ವೈ ರುದ್ರಃ" ಇತ್ಯಾದಿ ಶ್ರುತಿಗಳೂ ಸರ್ವ ಪ್ರಪಂಚವೂ ಶಿವಮಯವೆಂದು ಉಪದೇಶಿಸುತ್ತವೆ. ಆದುದರಿಂದ ಬ್ರಹ್ಮಜ್ಞಾನದಿಂದ ಪ್ರಪಂಚ ಬಾಧೆಯನ್ನು ಹೇಳುವುದು ಅಯುಕ್ತವು. ಜನಕಾದಿ ಬ್ರಹ್ಮಜ್ಞಾನಿಗಳಿಗೆ ಪೂರ್ವದಂತೆ ಪ್ರಪಂಚ ವ್ಯವಹಾರವು ಕಂಡುಬರುವುದಲ್ಲವೆ ? ಅವರಿಗೆ ಬ್ರಹ್ಮಜ್ಞಾನವಾಗಿಯೇ ಜೀವನ್ಮುಕ್ತರಾಗಿಲ್ಲವೆ ? ಅವರಿಗೆ ಪ್ರಪಂಚ ಬಾಧೆಯೇ ಆಗಿಹೋಗಿದ್ದರೆ ಮತ್ತೇಕೆ ಪ್ರಪಂಚ ವ್ಯವಹಾರವು ಕಂಡುಬರುವುದು ? ಹಾಗೂ ಶರೀರಧಾರಣವೂ ಕ್ಷುತ್ಪಿಪಾಸಾದಿ ವ್ಯವಹಾರವೂ ಕಂಡುಬರುವುದು. ಇವು ಜ್ಞಾನಿಗಳಿಗೆ ಕಂಡುಬರುವುದರಿಂದ ಜ್ಞಾನದಿಂದ ಪ್ರಪಂಚ ಬಾಧೆಯಾಗುವುದಿಲ್ಲೆಂದು ಸ್ಪಷ್ಟವಾಗಿ ಅನುಭವಕ್ಕೆ ಬರುವುದು. ಆದ್ದರಿಂದಲೇ "ಜ್ಞಾನಾದ್ವಿಕಲ್ಪ ಬುದ್ಧಿಸ್ತು ಲೀಯತೆ ನ ಸ್ವರೂಪತಃ। ಭಿನ್ನತ್ವಂ ನೈವ ಯುಂಜೀತ

CC-0. Jangamwadi Math Collection. Digitized by eGangotri

ಬ್ರಹ್ಮೋಪಾದಾನತಃ ಕ್ವಚಿತ್" ಎಂಬ ವಾಕ್ಯವು ಜ್ಞಾನದಿಂದ ಭೇದ ಬುದ್ಧಿಯು ಲಯವಲ್ಲದೆ ಪ್ರಪಂಚದ ಲಯವಾಗುವುದಿಲ್ಲವೆಂದೂ "ತಸ್ಮಾದ ವಿದ್ಯಾಮಾತ್ರತ್ವ ಕಥನಂ ಮೋಹನಾಯ ಹಿ" ಎಂಬ ವಾಕ್ಯವು ಪ್ರಪಂಚವು ಕೇವಲ ಭ್ರಾಂತಿ ವಿಷಯ ವೆಂದು ಹೇಳಿ ರಜತ ಭ್ರಾಂತಿಗೆ ವಿಷಯವಾದ ರಜತವು ಮಿಥ್ಯೆಯಾಗಿರುವಂತೆ ಪ್ರಪಂಚವು ಮಿಥ್ಯೆಯೆಂದು ಹೇಳುವುದು ಜನಗಳನ್ನು ಮೋಹಗೊಳಿಸುವುದಕ್ಕಲ್ಲದೆ ಬೇರೆ ಯಾವ ಪ್ರಯೋಜನವೂ ಇಲ್ಲವೆಂದು ಜಗನ್ಮಿಥ್ಯಾತ್ವ ವಾದಿಗಳಿಗೆ ನಿಂದೆಯನ್ನು ಹೇಳಿರುವುದು.

ಇನ್ನು ಗೀತೆಯಲ್ಲಿಯೂ "ಅಸತ್ಯಮಪ್ರತಿಷ್ಠಂತೆ" ಎಂಬ ವಾಕ್ಯವೂ ಜಗನ್ಮಿಥ್ಯಾತ್ವ ವಾದಿಗಳನ್ನು ನಿಂದಿಸುತ್ತದೆ. ಆದ್ದರಿಂದ ಜ್ಞಾನ ಬಾಧ್ಯತ್ವ ರೂಪವಾದ ಮಿಥ್ಯಾತ್ವವು ಅಯುಕ್ತವೆಂದು ಪ್ರಥಮ ವಿಕಲ್ಪವನ್ನು ಖಂಡಿಸಿ "ನ ದ್ವಿತೀಯಂ" ಎಂದು ದ್ವಿತೀಯ ವಿಕಲ್ಪವನ್ನು ಖಂಡಿಸುತ್ತಾರೆ. ಮೂರು ಕಾಲಗಳಲ್ಲಿ ಯಾವುದಿಲ್ಲವೋ ಅವೇ ಮಿಥ್ಯೆಯೆನ್ನುವುದಾದರೆ "ಅನೂಲಮನಾಧಾರಮಿಮಾಃ ಪ್ರಜಾಃ ಪ್ರಜಾಯಂತೆ" ಇತ್ಯಾದಿ ಶ್ರುತಿಗಳು ಪ್ರಪಂಚಕ್ಕೆ ಅನಾದಿಯೆಂದು ಏಕೆ ಹೇಳುವವು? ಆದ್ದರಿಂದ ಪ್ರಪಂಚಕ್ಕೆ ತ್ರೈಕಾಲಿಕ ಸತ್ಯತ್ವವನ್ನು ಹೇಳಬೇಕಲ್ಲದೆ ಮಿಥ್ಯಾತ್ವವನ್ನು ಹೇಳಕೂಡದು.

"ಅಸದ್ವಾ ಇದಮಗ್ರ ಆಸೀತ್ ತತೋವೈ ಸದ ಜಾಯತ" "ಸದೇವ ಸೌಮ್ಯೇದಮಗ್ರ ಆಸೀತ್" "ಏಕಮೇವಾದ್ವಿತೀಯಂ ಬ್ರಹ್ಮ" ಇತ್ಯಾದಿ ಶ್ರುತಿಗಳಿಂದ ಪ್ರಪಂಚಕ್ಕೆ ಸೃಷ್ಟಿ ಪೂರ್ವದಲ್ಲಿ ಅಸತ್ಯತ್ವವನ್ನು ಹೇಳುವುದರಿಂದ ಅದು ಹೇಗೆ ತ್ರೈಕಾಲಿಕ ಸತ್ಯತ್ವವನ್ನು ಹೇಳುವಿರಿ ? ಎಂದು ಆಕ್ಷೇಪಿಸಕೂಡದು. "ಅಸದ್ವಾ ಇದಮಗ್ರ ಆಸೀತ್" ಎಂಬ ಶ್ರುತಿಯು "ಅಸತ್" ಪದದಿಂದ ಪ್ರಪಂಚವು ನಾಮ ರೂಪಗಳ ವಿಭಾಗವಿಲ್ಲದೆ ಸೃಷ್ಟಿ ಪೂರ್ವದಲ್ಲಿ ಬ್ರಹ್ಮದೊಳಗೆ ಸೂಕ್ಷ್ಮರೂಪದಿಂದಿತ್ತೆಂದು ಬೋಧಿಸುತ್ತದೆ. "ತತೋ ವೈ ಸದಜಾಯತ" ಎಂಬ ಶ್ರುತಿಯು ಪ್ರಪಂಚವು ನಾಮ ರೂಪ ವಿಭಾಗ ಯೋಗ್ಯವಾಗಿ ಆವಿರ್ಭವಿಸಿತೆಂದು ಬೋಧಿಸುತ್ತದೆ. ಆದ್ದರಿಂದ ಈ ಶ್ರುತಿಗಳು ಪ್ರಪಂಚಕ್ಕೆ ಮಿಥ್ಯಾತ್ವವನ್ನೇ ಬೋಧಿಸುವುದಿಲ್ಲ. "ಅಸದ್ವಾ" ಎಂಬ ಅಸತ್ಪದದಿಂದ ಗಗನಾರವಿಂದಂತೆ ಮೂರು ಕಾಲದಲ್ಲಿಲ್ಲದ ಮೂಲಾಧ್ಯಾಸ (ಅವಿದ್ಯಾ) ದಿಂದ ಪ್ರಪಂಚವು ಹುಟ್ಟಿತೆಂದು ಹೇಳುವುದಾದರೆ ಮೂರು ಕಾಲದಲ್ಲಿಲ್ಲದ ವಂಧ್ಯಾ ಪುತ್ರಾದಿಗಳಿಂದಲೂ ಪ್ರಪಂಚವು ಹುಟ್ಟಿತೆಂದು ಹೇಳಬೇಕಾಗುವುದು. ಆದ್ದರಿಂದ "ಅಸತ್" ಪದದಿಂದ ಸೂಕ್ಷ್ಮವೆಂದು ಅರ್ಥವನ್ನು ಮಾಡಬೇಕು. ಇನ್ನು "ಸದೇವ" ಇಂತೆಂಬ ಅವಧಾರಣದಿಂದ ಅಸತ್ ಎಂಬ ಮೂಲಾಧ್ಯಾಸಕ್ಕೆ ಕಾರಣತ್ವದ ನಿಷೇಧವಾಗುತ್ತದಲ್ಲದೆ ಬ್ರಹ್ಮದಲ್ಲಿ ಸವಿಶೇಷತ್ವದ ನಿಷೇಧವಾಗುವುದಿಲ್ಲ. ಇದಲ್ಲದೆ "ಸದೇವ"

CC-0. Jangamwadi Math Collection. Digitized by eGangotri

ಎಂಬಲ್ಲಿರುವ ಅವಧಾರಣದಿಂದ ಸವಿಶೇಷತ್ವದ ನಿಷೇಧವನ್ನು ಹೇಳಲಿಕ್ಕೆ ಬರುವುದೇ ಇಲ್ಲ. ಏಕೆಂದರೆ "ಸದೇವ ಸೌಮ್ಯೇದಮಗ್ರ ಆಸೀತ್" ಎಂಬಲ್ಲಿ "ಅಗ್ರೆ" (ಸೃಷ್ಟಿಗಿಂತಲೂ ಪೂರ್ವಕಾಲದಲ್ಲಿ) ಎಂಬ ಕಾಲವಿಶೇಷವು "ಆಸೀತ್" (ಇತ್ತು) ಎಂಬ ಕ್ರಿಯಾವಿಶೇಷವು ಕಂಡುಬರುತ್ತದಷ್ಟೆ ; ಕ್ರಿಯಾವಿಶೇಷವು ಸೃಷ್ಟಿಗಿಂತ ಪೂರ್ವದಲ್ಲಿ ಕಂಡುಬರುವುದರಿಂದ ಆಗ ಬ್ರಹ್ಮದಲ್ಲಿ ವಿಶೇಷವಿದ್ದಿಲ್ಲವೆಂದು ಹೇಳಲಿಕ್ಕೆ ಬರುವುದಿಲ್ಲ. ಆದ್ದರಿಂದ ಬ್ರಹ್ಮವು ನಿರ್ವಿಶೇಷವಲ್ಲ. "ಏಕಮೇವ" ಎಂಬಲ್ಲಿಯ ಅವಧಾರಣದಿಂದ ಜಗದಧಿಷ್ಠಾನವು ಬ್ರಹ್ಮವಲ್ಲದೆ ಮತ್ತೊಂದಲ್ಲವೆಂದು ಅಧಿಷ್ಠಾತ್ರಂತರ ನಿಷೇಧವು ಹೇಳಲ್ಪಡುವುದು.

ಇನ್ನು "ಅದ್ವಿತೀಯ" ಪದದಿಂದ ಜಗದುಪಾದಾನ ಕಾರಣವೂ ಜಗನ್ನಿಮಿತ್ತ ಕಾರಣವೂ ಪರಶಿವಬ್ರಹ್ಮವೊಂದಲ್ಲದೆ ಮತ್ತೊಂದಿಲ್ಲವೆಂದು ವಿಧಿಸಲ್ಪಡುವುದು. ಜೇಡರಹುಳುವು ಜಾಲಕ್ಕೆ ಸ್ವಪ್ರಧಾನ್ಯದಿಂದ ನಿಮಿತ್ತಕಾರಣವೂ ಸ್ವಶರೀರ ಪ್ರಾಧಾನ್ಯದಿಂದ ಉಪಾದಾನಕಾರಣವೂ ಆಗಿರುವಂತೆ ಪರಶಿವಬ್ರಹ್ಮವು ಸ್ವಪ್ರಧಾನ್ಯದಿಂದ ನಿಮಿತ್ತಕಾರಣವೂ ಸ್ವಶಕ್ತಿ ಪ್ರಧಾನ್ಯದಿಂದ ಉಪಾದಾನಕಾರಣವೂ ಆಗಿರುವುದೆಂದು ವಿಧಿಸಲ್ಪಡುವುದೆಂದು ಭಾವವು. "ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೆ" ಎಂಬ ಶ್ರುತಿಯಲ್ಲಿಯೂ "ಏಕ ಏವ" ಎಂಬ ಅವಧಾರಣ ಪದದಿಂದ ಅಧಿಷ್ಠಾತ್ರಂತರ ನಿಷೇಧವೂ "ನದ್ವಿತೀಯಾಯ" ಎಂಬ ನಕಾರದಿಂದ ಕೂಡಿದ ದ್ವಿತೀಯ ಪದದಿಂದ ಬ್ರಹ್ಮವು ಜಗದುಭಯ ಕಾರಣವಾಗುವುದೆಂದು ತಿಳಿಯಬೇಕು. "ದ್ವಿತೀಯಾಯ" ಎಂದು ಪ್ರಥಮಾವಿಭಕ್ತ್ಯರ್ಥದಲ್ಲಿ ಚತುರ್ಥೀವಿಭಕ್ತಿಯು ಹೇಳಲ್ಪಡುವುದು. ಪರಶಿವ ಬ್ರಹ್ಮವು ಕುಲಾಲನಂತೆ ಮತ್ತೊಂದನ್ನು (ಮತ್ತೊಂದು ಸಾಮಗ್ರಿಯನ್ನು) ಅಪೇಕ್ಷಿಸದೆ ತಾನೇ ಸ್ವತಂತ್ರವಾಗಿ ಜಗದುಭಯಕಾರಣವಾಗಿ ಸಮಾಧಿಕ ಶೂನ್ಯವಾಗಿರುವುದರಿಂದಲೇ "ವಿಶ್ವಾಧಿಕೋ ರುದ್ರೋ ಮಹರ್ಷಿಃ" ಎಂದೂ "ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೆ" ಎಂದೂ ಶ್ರುತಿಯು ಉದ್ಘೋಷಿಸುತ್ತದೆ.

ಜಗದ್ವ್ಯಾವಹಾರಿಕತ್ವಖಂಡನಂ

ಜಗತ್ತು ಸತ್ಯವಾಗಿದ್ದರೆ ಅದಕ್ಕೆ ಬ್ರಹ್ಮವು ಉಭಯಕಾರಣವಾಗುವುದು. ಅದು ಮೂರು ಕಾಲದಲ್ಲಿಲ್ಲದಿದ್ದರೆ ಕಾರಣವಾಗಲಾರದಾದ್ದರಿಂದ ತ್ರೈಕಾಲಿಕ ನಿಷೇಧವೇ ಮಿಥ್ಯಾತ್ವವೆಂಬ ಎರಡನೇ ವಿಕಲ್ಪವೂ ಕೂಡ ಯುಕ್ತವಲ್ಲ ಎಂದು ಜಗನ್ಮಿಥ್ಯಾತ್ವವಾದವನ್ನು ಖಂಡಿಸಿ ಜಗದ್ವ್ಯಾವಹಾರಿಕತ್ವವನ್ನು ಖಂಡಿಸುತ್ತಿದ್ದಾರೆ.

ಪ್ರಪಂಚಕ್ಕೆ ವ್ಯಾವಹಾರಿಕ ಸತ್ಯತ್ವವನ್ನು ನಾವು ಹೇಳುವುದರಿಂದ ಪರಶಿವ

CC-0. Jangamwadi Math Collection. Digitized by eGangotri

ಬ್ರಹ್ಮವು ಅದಕ್ಕೆ ಉಪಾದಾನಕಾರಣವಾಗುವುದು. ಆದ್ದರಿಂದ ಏಕ ವಿಜ್ಞಾನದಿಂದ ಸರ್ವವಿಜ್ಞಾನವನ್ನು ಹೇಳುವ ಪ್ರತಿಜ್ಞಾ ಶ್ರುತಿಯು ಸಾರ್ಥಕವಾಗುತ್ತದೆ ಎಂಬ ಶುದ್ಧಾದ್ವೈತಿಯ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಭಾಷ್ಯಕಾರರು "ಕಿಮಿದಂ ವ್ಯಾವಹಾರಿಕ ಸತ್ಯತ್ವಂ" ಎಂದು ಖಂಡಿಸಲುದ್ಯುಕ್ತವಾಗಿರುವರು. ವ್ಯಾವಹಾರಿಕ ಸತ್ಯತ್ವವೆಂದರೆ (೧) ವ್ಯವಹಾರಮಾತ್ರ ಗಮ್ಯವಾದುದೋ? ಅಥವಾ (೨) ಬಾಧಿತ ವ್ಯವಹಾರ ಗಮ್ಯವಾದುದೋ? (೩) ಅಥವಾ ಮೂರು ನಾಲ್ಕು ಕಕ್ಷ್ಯ (ಯುಕ್ತಿ) ಗಳಿಂದ ಅಬಾಧ್ಯವಾದುದೋ? ಅಥವಾ (೪) ತತ್ವಾವೇದಕ ಪ್ರಮಾಣ ವಿರುದ್ಧವಾದುದೋ? ಅಥವಾ (೫) ಅರ್ಥಕ್ರಿಯಾಶೂನ್ಯ ಪ್ರತೀತಿಗೆ ವಿಷಯವಾದುದೋ? ಅಥವಾ (೬) ಕಾರಣ ದೋಷದಿಂದ ರಹಿತವಾದ ಜ್ಞಾನಕ್ಕೆ ವಿಷಯವಾದುದೋ? ಎಂದು ಆರು ವಿಕಲ್ಪಗಳುಂಟಾಗುತ್ತವೆ.

ಇವುಗಳಲ್ಲಿ ವ್ಯವಹಾರ ಮಾತ್ರ ಗಮ್ಯವಾದುದೇ ವ್ಯಾವಹಾರಿಕ ಸತ್ಯವೆನಿಸುವುದೆಂಬ ಪ್ರಥಮ ವಿಕಲ್ಪವು ಯುಕ್ತವಲ್ಲ. ಏಕೆಂದರೆ ಬ್ರಹ್ಮವೂ ಕೂಡ ಗುರು ಶಿಷ್ಯರ ವ್ಯವಹಾರಕ್ಕೇನೇ ವಿಷಯವಾಗಿದೆ. ಬ್ರಹ್ಮವು ಗುರು-ಶಿಷ್ಯರ ವ್ಯವಹಾರಕ್ಕೆ ವಿಷಯವಾಗಿಲ್ಲವೆಂದರೆ ಅವರಿಗೆ ಮೌನ ಮೌಢ್ಯಗಳು ಪ್ರಾಪ್ತಗಳಾಗಬೇಕಾಗುವುದು. ಆದ್ದರಿಂದ ಬ್ರಹ್ಮಕ್ಕೆ ವ್ಯವಹಾರ ಮಾತ್ರ ಗಮ್ಯತ್ವವನ್ನು ಒಪ್ಪಲೇಬೇಕು. ಒಪ್ಪಿದರೆ ಲಕ್ಷ್ಯವಾದ ಪ್ರಪಂಚದಲ್ಲಿ ಅಲ್ಲದೆ ಅಲಕ್ಷ್ಯವಾದ ಬ್ರಹ್ಮದಲ್ಲಿ ಲಕ್ಷಣವು ಕಂಡುಬರುವುದರಿಂದ "ಅತಿ ವ್ಯಾಪ್ತಿ" ದೋಷವು ಬರುವುದು. ಇನ್ನು ಹಠಾತ್ತಾಗಿ ಬ್ರಹ್ಮವು ವ್ಯವಹಾರ ಗಮ್ಯವೇ ಅಲ್ಲವೆನ್ನಲು ಬರುವುದೇ ಇಲ್ಲ. ಏಕೆಂದರೆ "ಸದೇವ ಸೌಮ್ಯೇದಮಗ್ರ ಆಸೀತ್" (ಛಾಂ. ೬-೨-೧) "ಸತ್ಯಂ ಜ್ಞಾನಮನಂತಂ ಬ್ರಹ್ಮ" (ತೈ. ಆನಂ. ೧) "ಅಥಾತೋ ಬ್ರಹ್ಮ ಜಿಜ್ಞಾಸಾ" (ಬ್ರ. ಸೂ. ೧-೧-೧) ಇತ್ಯಾದಿ ಶಾಸ್ತ್ರೀಯ ವ್ಯವಹಾರ ಗಮ್ಯತ್ವವನ್ನು ಬ್ರಹ್ಮದಲ್ಲಿ ಅಂಗೀಕರಿಸಿಯೇ ತೀರಬೇಕು. ಇಲ್ಲವಾದರೆ ಆ ವ್ಯವಹಾರವು ಭಿತ್ತಿ (ಗೋಡೆ) ಇಲ್ಲದ ಚಿತ್ರಕರ್ಮದಂತಾಗುವುದು. ಅಂದರೆ ಆಧಾರವಿಲ್ಲದೆ ಚಿತ್ರಕರ್ಮವು ಸಂಭವಿಸದಿರುವಂತೆ ಆ ಶಾಸ್ತ್ರ ವ್ಯವಹಾರವು ಸಂಭವಿಸಲಾರದೆಂದು ಭಾವವು. ಆದ್ದರಿಂದ ಬ್ರಹ್ಮವು ವ್ಯವಹಾರಗಮ್ಯವೆಂದು ಒಪ್ಪಿಕೊಳ್ಳಲೇಬೇಕು. ಯಾವ ವ್ಯವಹಾರಕ್ಕಾದರೂ ಸವಿಶೇಷ ಬ್ರಹ್ಮವೇ ವಿಷಯವಲ್ಲದೆ ನಮ್ಮ ನಿರ್ವಿಶೇಷ ಬ್ರಹ್ಮವು ವಿಷಯವೇ ಅಲ್ಲವೆಂದು ಹೇಳುವುದು ವ್ಯಾಘಾತ ದೋಷಯುಕ್ತವಾಗುತ್ತದೆ. ಏಕೆಂದರೆ ಬ್ರಹ್ಮವು ವಿಷಯವೇ ಅಲ್ಲವೆನ್ನುವ ನಿನ್ನ ವ್ಯವಹಾರಕ್ಕಾದರೂ ವಿಷಯವಾಯಿತಲ್ಲವೆ? ಹಾಗೂ ವೇದಾಂತ ಶಾಸ್ತ್ರಕ್ಕೆ ನಮ್ಮ ನಿರ್ವಿಶೇಷ ಬ್ರಹ್ಮವು ವಿಷಯವಲ್ಲವೆನ್ನುವುದು ನಮಗೆ ಅನುಕೂಲವೇ ಸರಿ. ಏಕೆಂದರೆ ನಮ್ಮ ಸವಿಶೇಷ ಬ್ರಹ್ಮವು ವಿಷಯವೆಂದು ಒಪ್ಪಿಕೊಂಡಂತಾಯಿತಲ್ಲವೆ? ಆ ಶುದ್ಧಾದ್ವೈತಿಗಳ ನಿರ್ವಿ

CC-0. Jangamwadi Math Collection. Digitized by eGangotri

ಶೇಷ ಬ್ರಹ್ಮವು ವೇದಾಂತ ಶಾಸ್ತ್ರಕ್ಕೆ ವಿಷಯವೇ ಅಲ್ಲವೆಂದಮೇಲೆ ಇನ್ನಾವ ಶಾಸ್ತ್ರಕ್ಕೆ ವಿಷಯವಾಗುವುದು ? ವೇದ ಬಾಹ್ಯ ಶಾಸ್ತ್ರಕ್ಕೆ ವಿಷಯವಾಗಬಹುದಲ್ಲವೆ ?

ಬಾಧಿತ ವ್ಯವಹಾರಗಮ್ಯವೆಂಬ ದ್ವಿತೀಯ ವಿಕಲ್ಪವನ್ನು ಒಪ್ಪುವುದ ಕ್ಕಾಗುವುದಿಲ್ಲ. ಏಕೆಂದರೆ ಬಾಧಿತ ವಿಷಯ ವ್ಯವಹಾರವಾದುದೇ ವ್ಯಾವಹಾರಿಕ ಸತ್ಯ ವೆನ್ನುವುದಾದರೆ ಬ್ರಹ್ಮವೂಕೂಡ ಬಾಧಿತ ವ್ಯವಹಾರಕ್ಕೆ ವಿಷಯವೇ ಆಗುವುದರಿಂದ ಬ್ರಹ್ಮದಲ್ಲಿಯೂ ವ್ಯಾವಹಾರಿಕ ಸತ್ಯತ್ವವನ್ನು ಹೇಳಬೇಕಾಗುವುದು. ಎಲ್ಲ ವ್ಯವ ಹಾರವೂ ಪ್ರಪಂಚಾಂತರ್ಗತವಾಗಿರುವುದರಿಂದ ಯಾವ ವ್ಯವಹಾರಕ್ಕಾದರೂ ವಿಷಯ ವಾಗಿರುವ ಬ್ರಹ್ಮವು ಬಾಧಿತವ್ಯವಹಾರಕ್ಕೆ ವಿಷಯವೇ ಆಗುವುದು. ಬಾಧಿತತ್ವವು ವ್ಯವಹಾರಗಮ್ಯ ಪದಾರ್ಥಕ್ಕೆ ವಿಶೇಷಣವಾಗಿರುವುದರಿಂದಲೂ ವ್ಯವಹಾರ ಗಮ್ಯ ವಾದ ಬ್ರಹ್ಮದಲ್ಲಿ ಬಾಧಿತತ್ವವಿಲ್ಲದಿರುವುದರಿಂದಲೂ ದೋಷವಿಲ್ಲೆಂದು ಆಶಂಕಿಸ ಕೂಡದು. ಏಕೆಂದರೆ ಬಾಧಿತತ್ವವೇ ವ್ಯಾವಹಾರಿಕ ಸತ್ಯವೆಂದರೆ ಸಾಕು ಮುಂದಿನ ವ್ಯವಹಾರ ಗಮ್ಯತ್ವದಲವೇ ವ್ಯರ್ಥವಾಗುವುದು. ಕೇವಲ ಬಾಧಿತತ್ವ ಮಾತ್ರವೇ ಲಕ್ಷಣವು ಇರಲಿ ಎಂದರೆ ಪ್ರಾತಿಭಾಸಿಕ ಪದಾರ್ಥಗಳಲ್ಲಿ ಅತಿವ್ಯಾಪ್ತಿ ದೋಷವು ಬರುವುದು. ವ್ಯಾವಹಾರಿಕ ಘಟಪಟಾದಿ ಪ್ರಪಂಚದಲ್ಲಿ ಅಲ್ಲದೆ ಭ್ರಾಂತಿಗೆ ವಿಷಯ ಗಳಾದ ರಜತಾದಿ ಪ್ರಾತಿಭಾಸಿಕ ಪದಾರ್ಥಗಳಲ್ಲಿಯೂ ಬಾಧಿತತ್ವವಿರುವುದರಿಂದ ದೋಷವು ಬರುವುದು.

ಇನ್ನು ಬ್ರಹ್ಮಾತಿರಿಕ್ತ ವಿಷಯಕವಾದ ಯಾವ ಜ್ಞಾನವಿರುವುದೋ ಅಂತಹ ಜ್ಞಾನದಿಂದ ಅಬಾಧಿತವಾಗಿ ಬ್ರಹ್ಮಜ್ಞಾನದಿಂದ ಬಾಧಿತವಾದುದೇ ವ್ಯಾವಹಾರಿಕ ಸತ್ಯವೆಂದು ಲಕ್ಷಣವನ್ನು ಪರಿಷ್ಕರಿಸಿದರೆ ಪ್ರಾತಿಭಾಸಿಕ ಪದಾರ್ಥಗಳಲ್ಲಿ ಅತಿ ವ್ಯಾಪ್ತಿ ದೋಷವು ವಾರಣವಾಗುವುದು. ಏಕೆಂದರೆ ಪ್ರಾತಿಭಾಸಿಕ ರಜತಾದಿ ಪದಾರ್ಥಗಳು ಬ್ರಹ್ಮಾತಿರಿಕ್ತವಾದ ಶುಕ್ತ್ಯಾದಿ ಜ್ಞಾನದಿಂದ ಬಾಧಿತಗಳಾಗಿರುವವಷ್ಟೆ.

ಹೀಗೆ ಪರಿಷ್ಕೃತ ಲಕ್ಷಣವನ್ನು ಮಾಡಿದರೂ ವ್ಯಾವಹಾರಿಕ ಸತ್ಯ ಪದಾರ್ಥೈಕ ದೇಶದಲ್ಲಿ ಲಕ್ಷಣವು ಬಾರದಿರುವುದರಿಂದ ಅವ್ಯಾಪ್ತಿ ದೋಷವು ಬರುವುದು. ಹೇಗೆಂದರೆ ಬ್ರಹ್ಮಾತಿರಿಕ್ತ ವಿಷಯಕ ಜ್ಞಾನಾಬಾಧಿತತ್ವವೆಂದರೆ ತಾದೃಶ ಜ್ಞಾನಜನ್ಯ (ಅಂತಹ ಜ್ಞಾನದಿಂದುಂಟಾದ) ಯಾವ ಧ್ವಂಸವಿದೆಯೋ ಅಂತಹ ಧ್ವಂಸಕ್ಕೆ ಅಪ್ರತಿಯೋಗಿತ್ವ ರೂಪವೆನ್ನುವ ಪಕ್ಷದಲ್ಲಿ ಬ್ರಹ್ಮಾತಿರಿಕ್ತ ವಿಷಯವೆಂದರೆ ಘಟವು. ಇದು ವಿಷಯವಾಗಿ ವುಳ್ಳ ಜ್ಞಾನವು ಘಟಜ್ಞಾನವು. ಈ ಜ್ಞಾನವು ತನಗೆ ಉತ್ತರಕ್ಷಣದಲ್ಲಿ ಉಂಟಾಗುವ ಘಟಜ್ಞಾನದಿಂದ ಬಾಧಿತ (ಧ್ವಂಸ ಪ್ರತಿಯೋಗಿ) ವೇ ಆಗುವುದರಿಂದ ಬ್ರಹ್ಮಾತಿರಿಕ್ತ ವಿಷಯಕ ಜ್ಞಾನಾಬಾಧಿತ್ವ ವಿಶಿಷ್ಟವಾದ ಬಾಧಿತ್ವ ಲಕ್ಷಣವು ಪೂರ್ವಜ್ಞಾನಗಳಲ್ಲಿ

CC-0. Jangamwadi Math Collection. Digitized by eGangotri

ಬರಲಿಲ್ಲವಾದ್ದರಿಂದ ಅವ್ಯಾಪ್ತಿ ದೋಷವು ಬರುವುದು. ಅವ್ಯಾಪ್ತಿಯೆಂದರೆ ಲಕ್ಷ್ಯದ ಏಕದೇಶದಲ್ಲಿ ಲಕ್ಷಣದ ಅಸತ್ವವು (ಬಾರದಿರುವಿಕೆಯು) ಘಟಪಟಗಳಾಗಲಿ ಅವುಗಳ ಜ್ಞಾನವಾಗಲಿ ಲಕ್ಷ್ಯಭೂತವಾಗಿರುವ ವ್ಯಾವಹಾರಿಕ ಪದಾರ್ಥದ ಏಕ ದೇಶಗಳೇ ಆಗಿರುವುವು. ಆದ್ದರಿಂದ ಉತ್ತರ ಜ್ಞಾನಬಾಧಿತಗಳಾದ ಪೂರ್ವಜ್ಞಾನಗಳಾದರೂ ಲಕ್ಷ್ಯೈಕದೇಶಗಳಾಗಿರುವುವು.

ಇನ್ನು ಬ್ರಹ್ಮಾತಿರಿಕ್ತ ವಿಷಯಕ ಜ್ಞಾನಾಬಾಧಿತ್ವವೆಂದರೆ ತಾದೃಶ ಜ್ಞಾನಾನ ಪಹೃತಧೀವಿಷಯ ಸ್ವರೂಪವೆನ್ನುವ ಪಕ್ಷದಲ್ಲಿಯಾದರೂ ಅವ್ಯಾಪ್ತಿ ದೋಷವೇ ಬರುವುದು. ಹೇಗೆಂದರೆ ಘಟಜ್ಞಾನವು ಘಟವಿಲ್ಲವೆಂಬ ಜ್ಞಾನದಿಂದ ಅಪಹೃತ (ನಷ್ಟ) ವಾಗಿರುವುದು. ಪಟಜ್ಞಾನವು ಪಟವಿಲ್ಲವೆಂಬ ಜ್ಞಾನದಿಂದ ನಷ್ಟವಾಗಿರುವುದು. ಹೀಗೆ ಘಟಾಬಾವ ಪಟಾಭಾವಜ್ಞಾನ (ಧೀ) ಗಳಿಂದ ನಷ್ಟಗಳಾದ ಘಟಜ್ಞಾನ ಪಟ ಜ್ಞಾನಗಳಿಗೆ ವಿಷಯಗಳಾದ ಘಟಪಟಗಳಲ್ಲಿ ತಾದೃಶ ಜ್ಞಾನಾನಪಹೃತ (ಅನಷ್ಟ) ಧೀ (ಜ್ಞಾನ) ವಿಷಯತ್ವವು ಬಾರದಿರುವುದರಿಂದ ಲಕ್ಷ್ಯೈಕ ದೇಶಗಳಾದ ಘಟ ಪಟಾದಿಗಳಲ್ಲಿ ಅವ್ಯಾಪ್ತಿಯು. ಆದ್ದರಿಂದ ಪಟಾದಿ ಪ್ರಪಂಚಕ್ಕೆ ವ್ಯಾವಹಾರಿಕ ಸತ್ಯತ್ವವೆಂತಲೂ ಬ್ರಹ್ಮಕ್ಕೆ ಪಾರಮಾರ್ಥಿಕ ಸತ್ಯತ್ವ (ಸತ್ತಾ) ವೆಂತಲೂ ಭ್ರಾಂತಿ ಸ್ವಪ್ನಾದಿಗಳಿಗೆ ವಿಷಯವಾದ ಪ್ರಪಂಚಕ್ಕೆ ಪ್ರಾತಿಭಾಸಿಕ ಸತ್ಯತ್ವವೆಂತಲೂ ಸ್ವಕ ಪೋಲ ಕಲ್ಪಿತವಾಗಿ ಮಾಡಿರುವ ಶುದ್ಧಾದ್ವೈತಿಗಳ ವ್ಯವಸ್ಥೆಯು ಅವ್ಯವಸ್ಥೆಯೇ ಸರಿ. ಭಾಷ್ಯಕಾರರು ಇನ್ನೂ ಇವರ ವ್ಯವಸ್ಥೆಯನ್ನು ಮುಂದೆ ವಿಸ್ತಾರವಾಗಿ ನಿರಾ ಕರಿಸುವೆವು ಎಂದು ಹೇಳುವುದರಿಂದ ಇಲ್ಲಿ ಸಂಕ್ಷೇಪವಾಗಿ ನಿರಾಕರಿಸಲುದ್ಯುಕ್ತ ರಾಗಿವರೆನ್ನುವುದು ಸ್ಪಷ್ಟವಾಗುವುದು.

ಇದಲ್ಲದೆ ಬ್ರಹ್ಮಾತಿರಿಕ್ತ ವಿಷಯಕ ಜ್ಞಾನದಿಂದ ಬಾಧಿಸಲ್ಪಡದೆ ಇರುವುದು ಬ್ರಹ್ಮಜ್ಞಾನದಿಂದ ಬಾಧಿಸಲ್ಪಡುವುದೂ ಯಾವುದೋ; ಅದೇ ವ್ಯಾವಹಾರಿಕ ಪದಾರ್ಥವೆನ್ನುವ ಪರಿಷ್ಕಾರದಲ್ಲಿ ಮೇಲೆ ತೋರಿಸಿದ ರೀತಿಯಿಂದ ಅವ್ಯಾಪ್ತಿ ದೋಷ ವಿಷ್ಟೇ ಅಲ್ಲ. ಕಿಂತು ಅತಿವ್ಯಾಪ್ತಿದೋಷವೂ ಬರುವುದು. ಹೇಗೆಂದರೆ ಶುಕ್ತಿ ರಜತ ಸ್ಥಲದಲ್ಲಿ ರಜತಭ್ರಮಾನಂತರದಲ್ಲಿ ಶುಕ್ತಿಯು ನೀಲಪೃಷ್ಠತ್ವ ವಿಶಿಷ್ಟವಾಗಿರುವುದು ಎಂಬ ಯಥಾರ್ಥ ಜ್ಞಾನವಾಗಲು ಈ ಜ್ಞಾನದಿಂದ ಬಾಧ್ಯಗಳಾದ ರಜತಾದಿಗಳಲ್ಲಿ ಅತಿವ್ಯಾಪ್ತಿದೋಷವುಂಟಾಗುವುದು. ಈ ಜ್ಞಾನವು ಬ್ರಹ್ಮಾತಿರಿಕ್ತ ವಿಷಯಕ ವಾಗಿರದೆ ಬ್ರಹ್ಮ ವಿಷಯಕವೇ ಆಗಿರುವುದು. ಯಾವ ಘಟಪಟ ಜ್ಞಾನವು ಬ್ರಹ್ಮಾತಿ ರಿಕ್ತ ವಿಷಯವಾಗಿರುವುದೊ ; ಆದರಿಂದ ಅಬಾಧಿತವೂ ಬ್ರಹ್ಮಜ್ಞಾನದಿಂದ ಬಾಧಿತ ವೂ ಆಗಿರುವುದರಿಂದ ಸಂಪೂರ್ಣ ಲಕ್ಷಣವು "ನೀಲ ಪೃಷ್ಠತ್ವಾದಿ ವಿಶಿಷ್ಟ ಶುಕ್ತಿಃ ಸತೀ" ಎಂಬ ಸದ್ರೂಪ ಬ್ರಹ್ಮಜ್ಞಾನದಿಂದ ಬಾಧ್ಯವಾದ ರಜತಾದಿ ಜ್ಞಾನವಿಷಯ

CC-0. Jangamwadi Math Collection. Digitized by eGangotri

ಗಳಾದ ರಜತಾದಿಗಳಲ್ಲಿ ಬಂದುದರಿಂದ ಅಲಕ್ಷ್ಯವಾದ ಪ್ರಾತಿಭಾಸಿಕ ಪದಾರ್ಥದಲ್ಲಿ ಅತಿ ವ್ಯಾಪ್ತಿಯೆಂದು ತಿಳಿಯಬೇಕು. ಸತ್ತೆಯು ಬ್ರಹ್ಮರೂಪವೇ ಆಗಿರುವುದಷ್ಟೆ? ನೀಲಪೃಷ್ಠತ್ವಾದಿ ವಿಶಿಷ್ಟ ಶುಕ್ತಿಗತ ಸತ್ತೆಯು ಬ್ರಹ್ಮಸ್ವರೂಪವಾಗಿದ್ದರೂ ನೀಲ ಪೃಷ್ಠತ್ವಾದಿಗಳು ಬ್ರಹ್ಮರೂಪಗಳಾಗಿಲ್ಲವಾದ್ದರಿಂದ ನೀಲಪೃಷ್ಠತ್ವಾದಿ ವಿಷಯಕ ಜ್ಞಾನನಿಂದ ರಜತಜ್ಞಾನವು ಬಾಧಿತವಾಗಿರುವ ಪ್ರಯುಕ್ತ ಅದಕ್ಕೆ ವಿಷಯವಾದ ರಜತದಲ್ಲಿ ಅತಿವ್ಯಾಪ್ತಿ ದೋಷವಿಲ್ಲ ಎಂದು ಆಕ್ಷೇಪಿಸಕೂಡದು. ಶುಕ್ತಿಯಲ್ಲಿ ತೋರುವ ನೀಲಪೃಷ್ಠತ್ವಾದಿಗಳು ಬ್ರಹ್ಮರೂಪಗಳಲ್ಲ. ಬ್ರಹ್ಮಾತಿರಿಕ್ತಗಳೆಂದರೆ ಬ್ರಹ್ಮದಲ್ಲಿ ತೋರುವ ನಿರ್ವಿಶೇಷತ್ವ ಜಗನ್ಮಿಥ್ಯಾತ್ವಾದಿಗಳೂ ಸಹ ಬ್ರಹ್ಮರೂಪಗಳಲ್ಲ ಬ್ರಹ್ಮಾತಿರಿಕ್ತಗಳೇ ಆಗಿರುವವೆಂದು ಹೇಳಬೇಕು. ಹೀಗೆ ಹೇಳಿದರೆ ಲಕ್ಷ್ಯ ಮಾತ್ರ (ವ್ಯಾವಹಾರಿಕ ಮಾತ್ರ) ದಲ್ಲಿಯೇ ಲಕ್ಷಣವು ಬಾರದಿರುವುದರಿಂದ ಅಸಂಭವ ದೋಷವೇ ಬರುವುದು. "ಲಕ್ಷ್ಯಮಾತ್ರ ಲಕ್ಷಣಾಸತ್ವಂ ಅಸಂಭವಃ" ಹೇಗೇದರೆ ಬ್ರಹ್ಮಾತಿರಿಕ್ತಗಳಾದ ಯಾವ ನಿರ್ವಿಶೇಷತ್ವ ಜಗನ್ಮಿಥ್ಯಾತ್ವಗಳೋ ಇವುಗಳೇ ವಿಷಯವಾಗಿವುಳ್ಳ ಯಾವ ಜ್ಞಾನವೋ; ಇದರಿಂದಲೇ ಪ್ರಪಂಚವು ಬಾಧಿತವಾಗಿರುವುದರಿಂದ ಘಟಪಟಾದಿ ವ್ಯಾವಹಾರಿಕ ಪ್ರಪಂಚದಲ್ಲಿ ಬ್ರಹ್ಮಾತಿರಿಕ್ತ ವಿಷಯಕ ಜ್ಞಾನದಿಂದ ಅಬಾಧಿತತ್ವವೆಂಬ ಪ್ರಥಮ ದಲವೇ ಬರಲಿಲ್ಲಾದ್ದರಿಂದ ಅಸಂಭವ ದೋಷವುಂಟಾಯಿತು.

ನಿರ್ವಿಶೇಷತ್ವ ಜಗನ್ಮಿಥ್ಯಾತ್ವಾದಿಗಳು ಬ್ರಹ್ಮಾತಿರಿಕ್ತಗಳಾಗಿರದೆ ಬ್ರಹ್ಮ ಸ್ವರೂಪವೇ ಆಗಿರುವುದರಿಂದ ಅಸಂಭವ ದೋಷವಾರಣವಾಗುವುದೆಂದು ಆಕ್ಷೇಪಿಸ ಕೂಡದು. ಏಕೆಂದರೆ ನಿರ್ವಿಶೇಷತ್ವ, ಜಗನ್ಮಿಥ್ಯಾತ್ವಗಳು ಅಭಾವರೂಪಗಳಾಗಿರುವುದರಿಂದ "ಯಸ್ಯಾಭಾವಃ ಸ ಪ್ರತಿಯೋಗೀ" ಎಂಬುಕ್ತಿಯಂತೆ ಸಪ್ರತಿಯೋಗಿಕವಾಗಿ ರುವುವು. ಬ್ರಹ್ಮವಾದರೋ ಭಾವರೂಪವಾಗಿರುವುದರಿಂದ ನಿಷ್ಪ್ರತಿಯೋಗಿಕವಾಗಿರುವುದು. ಆದ್ದರಿಂದ ನಿರ್ವಿಶೇಷತ್ವ ಜಗನ್ಮಿಥ್ಯಾತ್ವಗಳು ಬ್ರಹ್ಮಸ್ವರೂಪ ಮಾತ್ರವೆಂದು ಹೇಳುವುದು. ಸಾಧ್ಯವಲ್ಲಾದ್ದರಿಂದ ಅಸಂಭವ ದೋಷವು ವಾರಣವಾಗಲಿಲ್ಲ.

ಇದಲ್ಲದೆ ಬ್ರಹ್ಮಾತಿರಿಕ್ತ ವಿಷಯಕ ಜ್ಞಾನಾಬಾಧಿತವೂ ಬ್ರಹ್ಮಜ್ಞಾನ ಬಾಧಿತವೂ ಆಗಿರುವುದೇ ವ್ಯಾವಹಾರಿಕ ಪ್ರಪಂಚವೆನ್ನುವಲ್ಲಿ ಬ್ರಹ್ಮಜ್ಞಾನವು ಬಾಧಕವು. ಪ್ರಪಂಚವು ಬಾಧ್ಯವು. "ಅಹಂ ಬ್ರಹ್ಮಾಸ್ಮಿ ನದೇಹಾದಿ ಪ್ರಪಂಚಃ" ಎಂಬ ಬ್ರಹ್ಮಾತ್ಮೈಕ್ಯ ಜ್ಞಾನವೇ ಬ್ರಹ್ಮಜ್ಞಾನವಲ್ಲವೆ; ಈ ಜ್ಞಾನವು "ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ" ಎಂಬ ಶ್ರುತ್ಯುಕ್ತ ಬ್ರಹ್ಮಸ್ವರೂಪ ಮಾತ್ರವಾಗಿರುವುದರಿಂದ ಇದಕ್ಕೆ ಪ್ರಪಂಚ ನಿವರ್ತಕತ್ವವೇ ಸಂಭವಿಸುವುದಿಲ್ಲಾರಿಂದ ಅಸಂಭವವು. ಸ್ವರೂಪಜ್ಞಾನವು ಅಧ್ಯಾಸ ವಿಶಿಷ್ಟವಾಗಿದ್ದರೂ ಸ್ವಪ್ರಕಾಶ ಬ್ರಹ್ಮವೇ ವಿಷಯವಾಗಿ

CC-0. Jangamwadi Math Collection. Digitized by eGangotri

ರುವುದರಿಂದ ಪ್ರಪಂಚನಿಷ್ಠ ಬಾಧ್ಯತಾ ನಿರೂಪಿತ ಬಾಧಕತ್ವ (ನಿವರ್ತಕತ್ವ) ವು ಸಂಭವಿಸುವುದರಿಂದ ಜ್ಞಾನಬಾಧ್ಯತ್ವ (ಬಾಧಿತತ್ವ) ವೆಂಬ ಎರಡನೆ ದಲವೂ ವ್ಯಾವಹಾರಿಕ ಮಾತ್ರದಲ್ಲಿ ಲಕ್ಷಣ ಸಮನ್ವಯವಾಗುವುದರಿಂದ ಅಸಂಭವ ದೋಷವಿಲ್ಲವೆನ್ನಕೂಡದು. ಏಕೆಂದರೆ ಅಧ್ಯಾಸವಿಶಿಷ್ಟಜ್ಞಾನವು ಬ್ರಹ್ಮರೂಪವಾಗಿರದೆ ವೃತ್ತಿರೂಪವಾಗಿರುವುದು. ಪ್ರಪಂಚನಿಷ್ಠ ನಿವರ್ತ್ಯತಾನಿರೂಪಿತ ನಿವರ್ತಕತಾವಚ್ಛೇದಕವು ವೃತ್ತಿತ್ವವಾಯಿತು.

ಹೀಗೆ ಹೇಳಿದರೆ ಜಡವಾದ ವೃತ್ತಿಯ ದೆಶೆಯಿಂದ ಪ್ರಪಂಚಕ್ಕೆ ನಿವರ್ತ್ಯತ್ವವನ್ನು ಹೇಳಬೇಕು. ಹೀಗೆ ಹೇಳುವುದಾದರೆ ಜಡದಿಂದಲೇ ಜಡಪ್ರಪಂಚದ ಬಾಧ್ಯತ್ವವನ್ನು ಹೇಳುವುದನ್ನು ಬಿಟ್ಟು ಜ್ಞಾನ ಬಾಧ್ಯತ್ವವನ್ನು ಹೇಳುವುದೇಕೆ ? ನಿಮ್ಮ ಮತದಲ್ಲಿರುವ ಜ್ಞಾನಬಾಧ್ಯತ್ವ ಸಿದ್ಧಾಂತದ ವ್ಯಾಹತಿಯಾಗುವುದಲ್ಲವೆ ? ಕಥಂಚಿತ್ ಅಧ್ಯಾಸವೃತ್ತಿ ರೂಪಜ್ಞಾನದಲ್ಲಿ ಜ್ಞಾನತ್ವವನ್ನು ಅಂಗೀಕರಿಸಿದರೂ ಆ ವೃತ್ತಿಯು ಜಡವಾದ್ದರಿಂದ ಅದರಲ್ಲಿ ಪ್ರಪಂಚವನ್ನು ಬಾಧಿಸುವ ಶಕ್ತಿಯಿಲ್ಲದ್ದರಿಂದ ಅದು ನಿವರ್ತಕವೂ ಅಲ್ಲ. ತದ್ಗತ ವೃತ್ತಿತ್ವ ರೂಪಜ್ಞಾನತ್ವವು ನಿವರ್ತಕತಾವಚ್ಛೇದಕವೂ ಅಲ್ಲವಾದ್ದರಿಂದ ಜ್ಞಾನಬಾಧಿತತ್ವವೆಂಬ ಎರಡನೆ ದಲವೂ ವ್ಯಾವಹಾರಿಕ ಮಾತ್ರದಲ್ಲಿಲ್ಲವಾದ್ದರಿಂದ ಅಸಂಭವ ದೋಷವು ಪ್ರಾಪ್ತವಾಯಿತು. ಆದ್ದರಿಂದ ಪ್ರಪಂಚಕ್ಕೆ ವ್ಯಾವಹಾರಿಕತ್ವವು ಅಪಸಿದ್ಧಾಂತವೇ ಸರಿ.

ಇನ್ನು **ಮೂರನೇ ತ್ರಿಚತುರ** ಕಕ್ಷ್ಯಗಳಲ್ಲಿ ಅಬಾಧ್ಯವಾದುದೇ ವ್ಯಾವಹಾರಿಕ ಪ್ರಪಂಚವೆನ್ನುವ ವಿಕಲ್ಪವನ್ನು ಖಂಡಿಸುತ್ತಾರೆ. ಹೇಗೆಂದರೆ ಬ್ರಹ್ಮವು ಯಾವಾಗಲೂ ಅಬಾಧ್ಯವೇ ಆಗಿರುವುದರಿಂದ ತ್ರಿಚತುರ ಕಕ್ಷ್ಯಗಳಲ್ಲಿಯೂ ಅಬಾಧ್ಯವೇ ಆಗುವುದು. ಆದುದರಿಂದ ಅಲಕ್ಷ್ಯವಾದ ಬ್ರಹ್ಮದಲ್ಲಿ ಲಕ್ಷಣವು ಬಂದುದರಿಂದ ಅತಿ ವ್ಯಾಪ್ತಿದೋಷವುಂಟಾಯಿತು. ಇನ್ನು ತ್ರಿಚತುರ ಕಕ್ಷ್ಯಗಳಲ್ಲಿ ಅಬಾಧ್ಯವು ಬಾಧ್ಯವೂ ಆದುದೇ ವ್ಯಾವಹಾರಿಕ ಪ್ರಪಂಚವೆನ್ನುವುದಾದರೆ ಬ್ರಹ್ಮವು ಬಾಧ್ಯವಲ್ಲದುದರಿಂದ ಬ್ರಹ್ಮದಲ್ಲಿ ಅತಿವ್ಯಾಪ್ತಿದೋಷವು ವಾರಣವಾದರೂ ಅಲಾತ ಚಕ್ರ, ಗಂಧರ್ವನಗರಾದಿ ಪ್ರಾತಿಭಾಸಿಕ ವಿಶೇಷ ಪದಾರ್ಥಗಳಲ್ಲಿ ಅತಿವ್ಯಾಪ್ತಿ ದೋಷವು ಬರುವುದು. ಹೇಗೆಂದರೆ ಅಲಾತಚಕ್ರ, ಗಂಧರ್ವನಗರಾದಿಗಳ ಭ್ರಮವುಂಟಾಗಿ ದೀರ್ಘಕಾಲವು ಕಳೆದ ನಂತರದಲ್ಲಿ ಯಥಾರ್ಥ ಜ್ಞಾನವಾಗಲು ಆ ಯಥಾರ್ಥ ಜ್ಞಾನಕ್ಕಿಂತಲೂ ಪೂರ್ವದಲ್ಲಿ ಆ ಅಲಾತಚಕ್ರ ಗಂಧರ್ವ ನಗರಾದಿಗಳಲ್ಲಿ ತ್ರಿಚತುರ ಕಕ್ಷ್ಯಗಳಲ್ಲಿ ಅಬಾಧ್ಯತ್ವವೂ ಯಥಾರ್ಥ ಜ್ಞಾನಾನಂತರದಲ್ಲಿ ಬಾಧ್ಯವೂ ಬಂದುದರಿಂದ ಅಲಕ್ಷ್ಯಗಳಾದ ಅಲಾತ ಚಕ್ರಾದಿಗಳೆಂಬ ಪ್ರಾತಿಭಾಸಿಕ ವಸ್ತುಗಳಲ್ಲಿ ಅತಿ ವ್ಯಾಪ್ತಿ ದೋಷವುಂಟಾಯಿತು.

CC-0. Jangamwadi Math Collection. Digitized by eGangotri

ಇದಲ್ಲದೆ ಈ ಕಕ್ಷ್ಯಾಶಬ್ದಕ್ಕೆ ಯುಕ್ತಿಯೆಂದರ್ಥವೋ; ಅಥವಾ ಕಾಲವೆಂದರ್ಥ
ವೋ; ಅಥವಾ ವಿಪರೀತ ಪ್ರಮಾ (ಅಯಥಾರ್ಥಜ್ಞಾನ) ಎಂದರ್ಥವೋ? ಯುಕ್ತಿ
ಯೆಂಬರ್ಥವನ್ನು ಹೇಳುವ ಪಕ್ಷದಲ್ಲಿ "ಪ್ರಪಂಚೋ ಮಿಥ್ಯಾ ದೃಶ್ಯತ್ವಾತ್" (ಪ್ರಪಂಚ
ವು ದೃಶ್ಯವಾಗಿರುವುದರಿಂದ ಮಿಥ್ಯೆಯಾಗುವುದು) ಎಂಬ ಒಂದೇ ಒಂದು ಯುಕ್ತಿ
ಯಿಂದ ಪ್ರಪಂಚಕ್ಕೆ ಬಾಧ್ಯತ್ವವು ಬರುವದರಿಂದ ತ್ರಿಚತುರಕಕ್ಷ್ಯಗಳಲ್ಲಿ ಅಬಾಧ್ಯತ್ವ
ವೆಂಬ ಲಕ್ಷಣವು ಯಾವ ಲಕ್ಷ್ಯಮಾತ್ರದಲ್ಲಿಯೂ ಬರಲಿಲ್ಲವಾದ್ದರಿಂದ ಅಸಂಭವ
ದೋಷವೇ ಉಂಟಾಯಿತು. ಇದಲ್ಲದೆ ಪೂರ್ವಾಪರ ವಾಕ್ಯಗಳಲ್ಲಿ ನಿರ್ದಿಷ್ಟವಾದ ಪರ
ವಾಕ್ಯದಿಂದ ಪೂರ್ವವಾಕ್ಯಕ್ಕೆ ಬಾಧೆಯಿರುವುದರಿಂದ ಏಕ ಯುಕ್ತಿಯಿಂದಲೇ ಪ್ರಪಂಚ
ರೂಪ ವಸ್ತುವಿಗೆ ಬಾಧೆ ಬರುವುದರಿಂದ ಅಸಂಭವ ದೋಷವೇ ಬರುವುದು. "ಪೌರ್ವಾ
ಪರ್ಯೇ ಪೂರ್ವ ದೌರ್ಬಲ್ಯಂ" ಎಂಬ ನ್ಯಾಯವಿರುವುದಷ್ಟೆ; ಇನ್ನು ತ್ರಿಚತುರ ಕಾಲ
ಗಳಲ್ಲಿ ಅಬಾಧ್ಯವಾದುದೇ ವ್ಯಾವಹಾರಿಕ ಪ್ರಪಂಚವನ್ನುವ ಎರಡನೇ ವಿಕಲ್ಪವು
ಕೂಡ ಯುಕ್ತವಲ್ಲ. ಏಕೆಂದರೆ ಅಲಾತ ಚಕ್ರ ಗಂಧರ್ವ ನಗರಾದಿಗಳ ಭ್ರಮವುಂಟಾಗಿ
ಆಮೇಲೆ ದೀರ್ಘಕಾಲದವರೆಗೂ ಯಥಾರ್ಥ ಜ್ಞಾನವುಂಟಾಗದಿರಲು ಆ ಪ್ರಾತಿಭಾಸಿಕ
ಅಲಾತಚಕ್ರ ಗಂಧರ್ವ ನಗರಾದಿಗಳಲ್ಲಿ ಅಬಾಧ್ಯತ್ವವೆಂಬ ಲಕ್ಷಣವು ಬಂದುದರಿಂದ
ಅತಿ ವ್ಯಾಪ್ತಿ ದೋಷವುಂಟಾಯಿತು. ಇನ್ನು ಕಕ್ಷ್ಯಾಶಬ್ದವು ವಿಪರೀತ ಪ್ರಮಾಪರ
ವೆಂಬ ಮೂರನೇ ವಿಕಲ್ಪವೂ ಸಂಗತವಲ್ಲ. ಏಕೆಂದರೆ ಯಾವುದು ವಿಪರೀತ ಪ್ರಮಾ
(ಭ್ರಮಾ) ವಿಷಯವಾಗುವದೋ ಅದು ಅಬಾಧಿತವಾಗಿರದೆ ಬಾಧಿತವೇ ಆಗಿರುವುದು
ಹೇಗೆಂದರೆ ಶುಕ್ತಿರಜತ ಸ್ಥಲದಲ್ಲಿ ರಜತವು ವಿಪರೀತ ಪ್ರಮಾವಿಷಯವಾಗಿರುವುದು.
ಅದು ಶುಕ್ತಿಪ್ರಮೆಯಿಂದ ಬಾಧಿತವೇ ಆಗಿರುವುದು. ಆದುದರಿಂದ ವಿಪರೀತ ಪ್ರಮಾ
ವಿಷಯವೂ ಆಗಿ ಅಬಾಧಿತವೂ ಆದುದೇ ವ್ಯಾವಹಾರಿಕ ಪ್ರಪಂಚವೆನ್ನುವ ಮಾತು
ವ್ಯಾಘಾತ ದೋಷವುಳ್ಳದ್ದಾಗುವುದು.

ಇನ್ನು ಅಬಾಧಿತವೆಂಬಲ್ಲಿ ಬಾಧೆಯೆಂದರೆ ಪದಾರ್ಥನಾಶವೆಂದು ಹೇಳಿದರೆ ಶುಕ್ತಿ
ರಜತಸ್ಥಲದಲ್ಲಿ ವ್ಯಾಘಾತ ದೋಷವೇನೋ ವಾರಣವಾಗುವುದು. ಅಲ್ಲಿ ರಜತ ಪದಾ
ರ್ಥದ ನಾಶವಿಲ್ಲವಷ್ಟೆ; ಆದರೂ ಘಟಪಟಾದಿಗಳಲ್ಲಿ ಅವ್ಯಾಪ್ತಿ ದೋಷವು ಬರುವುದು.
ಹೇಗೆಂದರೆ "ಘಟಾಭಾವವದ್ಭೂತಲಂ" ಎಂಬ ಜ್ಞಾನಕ್ಕೆ "ಘಟವದ್ಭೂತಲಂ"
ಎಂಬ ಜ್ಞಾನವು ವಿಪರೀತ ಪ್ರಮೆಯೆನಿಸುವದು. ಇದಕ್ಕೆ ವಿಷಯವಾದ ಘಟದಲ್ಲಿ
ಮುದ್ಗರಜನ್ಯ (ದೊಣ್ಣೆ, ಗುದಿಗೆ) ಬಾಧಿತತ್ವ (ನಾಶವು) ಬಂದುದರಿಂದ ಅಬಾಧಿ
ತತ್ವವು ಬರಲಿಲ್ಲವಾಗಿ ಅವ್ಯಾಪ್ತಿಯುಂಟಾಯಿತು. ಇದಲ್ಲದೆ ಕಕ್ಷ್ಯಾಶಬ್ದವು ಯುಕ್ತಿಪರ
ವೆಂಬ ಪ್ರಥಮ ವಿಕಲ್ಪದಲ್ಲಿ (ತ್ರಿಚತುರಯುಕ್ತ್ಯಬಾಧ್ಯವೂ ಬಾಧ್ಯವೂ ಎಂಬುದರಲ್ಲಿ)
ಬ್ರಹ್ಮದಲ್ಲಿ ಅತಿವ್ಯಾಪ್ತಿದೋಷವು ಬರುವದು. ಹೇಗೆಂದರೆ ಬ್ರಹ್ಮವು ಅಬಾಧ್ಯವೇ ಆಗಿ
ದರಿಂದ ಸಕಲ ಯುಕ್ತಿಗಳಿಂದ ಅಬಾಧ್ಯವೇ ಆಗಿರುವದು. ಇನ್ನು ಆ ಬ್ರಹ್ಮದಲ್ಲಿ

CC-0. Jangamwadi Math Collection. Digitized by eGangotri

ಬಾಧ್ಯತ್ವವೆಂಬ ಎರಡನೇ ದಲವು ಹೇಗೆ ಬರುವದೆಂದರೆ ಬ್ರಹ್ಮವು ದೃಶ್ಯವಾಗಿರುವದ
ರಿಂದ ಮಿಥ್ಯೆಯೆನಿಸುವದು. ಯಾವುದು ಮಿಥ್ಯೆಯೋ ? ಅದು ಬಾಧ್ಯವೇ ಆಗುವದು
ಅಂದಮೇಲೆ ಅತಿ ವ್ಯಾಪ್ತಿ ದೋಷವುಂಟಾಯಿತು. ಬ್ರಹ್ಮವು ದೃಶ್ಯವೇ (ಯಾವ
ಜ್ಞಾನಕ್ಕೂ ವಿಷಯವೇ) ಅಲ್ಲವೆಂದರೆ ಬ್ರಹ್ಮ ವ್ಯವಹಾರ ಮಾತ್ರೋಚ್ಛೇದವೇ ಆಗು
ವದು. ಗುರುಶಿಷ್ಯ ಶಾಸ್ತ್ರಾದಿ ವ್ಯವಹಾರವಾಗಲಾರದು. ಯಾವ ವ್ಯವಹಾರವಾದರೂ
ಜ್ಞಾನದಿಂದಲೇ ಆಗಬೇಕಲ್ಲವೆ ; "ಸರ್ವವ್ಯವಹಾರ ಹೇತುರ್ಬುದ್ಧಿರ್ಜ್ಞಾನಂ" ಎಂದು
ತಾರ್ಕಿಕರೂ ಎಲ್ಲ ವ್ಯವಹಾರಕ್ಕೂ ಜ್ಞಾನವೇ ಕಾರಣವೆಂದು ಒಪ್ಪಿರುವರು. ಬ್ರಹ್ಮವು
ಗುರು-ಶಿಷ್ಯರ ಜ್ಞಾನ ವ್ಯವಹಾರಕ್ಕೂ ವಿಷಯವಾಗದಿದ್ದರೆ ಗುರುಶಿಷ್ಯರು ಮೌನಾ
ವಸ್ಥೆಯಲ್ಲಿರಬೇಕಾಗುವದು. ಇದಲ್ಲದೆ ಅವಿದ್ಯಾ ನಿವೃತ್ತಿಯೂ ಕೂಡ ಆಗಲಾರದು.
"ನಾಹಂ ಬ್ರಹ್ಮ" ಎಂಬುದೇ ಅವಿದ್ಯೆಯಲ್ಲವೆ ; ಇದರ ನಿವೃತ್ತಿಯು ಅಹಂ ಬ್ರಹ್ಮ"
ಜ್ಞಾನದಿಂದಾಗಬೇಕಲ್ಲವೆ ; " ನಾಹಂ ಬ್ರಹ್ಮ " (ನಾನು ಬ್ರಹ್ಮವಲ್ಲ) ಎಂಬ
ಅಜ್ಞಾನವು ಶುದ್ಧಬ್ರಹ್ಮ ವಿಷಯಕವಾದುದಾಗಿದೆ. ನಾನು ಬ್ರಹ್ಮ ಎಂಬ ಜ್ಞಾನವು
ಜೀವ ವಿಷಯಕವಾಗಿದೆ. ಅಂದಮೇಲೆ ಸಮಾನ ವಿಷಯಕ ಜ್ಞಾನವಾಗಲಿಲ್ಲಾದ್ದ
ರಿಂದ ಅಜ್ಞಾನ ನಿವೃತ್ತಿಯಾಗಲಾರದು. ಲೋಕದಲ್ಲಿ ರಜತ ವಿಷಯಕವಾದ
ಅಜ್ಞಾನವು ರಜತವಿಷಯಕವಾದ ಜ್ಞಾನದಿಂದ ನಿವೃತ್ತಿಯಾಗುವದು. ಸರ್ವಾನುಭವ
ಸಿದ್ಧವಾಗಿದೆಯಲ್ಲದೆ ಅಸಮಾನ ವಿಷಯಕವಾದ ಘಟಾದಿಜ್ಞಾನದಿಂದ ನಿವೃತ್ತಿ
ಯಾಗುವದಿಲ್ಲ.

ಇನ್ನು "ಅಹಂ ಬ್ರಹ್ಮಾಸ್ಮಿ" (ನಾನು ಬ್ರಹ್ಮವಾಗಿರುವೆನು) ಎಂಬ ಜ್ಞಾನ
ವಾದರೂ ಜೀವ ವಿಷಯಕವಾಗಿರದೆ ಬ್ರಹ್ಮ ವಿಷಯಕವಾಗಿಯೇ ಇರುವದೆಂದರೆ
ಬ್ರಹ್ಮವು ಅದೃಶ್ಯ (ಯಾವ ಜ್ಞಾನಕ್ಕೂ ವಿಷಯವೇ ಅಲ್ಲ) ವೆನ್ನುವದೇಕೆ ? ಇನ್ನು
ದೃಶ್ಯವೆನ್ನುವದಾದರೆ ಅದಕ್ಕೆ ಮಿಥ್ಯಾತ್ವವು ಬಂದೇ ಬರುವದು. ಯಾವುದು ಮಿಥ್ಯೆ
ಯೋ ? ಅದು ಬಾಧ್ಯವೇ ಆಗುವದಾದುದರಿಂದ ವ್ಯಾವಹಾರಿಕ ಪ್ರಪಂಚದ ಲಕ್ಷಣವು
ಅಲಕ್ಷ್ಯವಾದ ಬ್ರಹ್ಮದಲ್ಲಿ ಬಂದು ಅತಿವ್ಯಾಪ್ತಿ ದೋಷವೇ ಬರುವದು.

ಇನ್ನು "ಅಹಂ ಬ್ರಹ್ಮಾಸ್ಮಿ" ಎಂಬ ಜ್ಞಾನವು ವೃತ್ತಿರೂಪವಾಗಿರುವದು. ಇದ
ರಿಂದಲೇ ಎಲ್ಲ ವ್ಯವಹಾರವೂ ಉಂಟಾಗುವದು. ಇದರಿಂದ ನಾನು ಬ್ರಹ್ಮವಲ್ಲವೆಂಬ
ಅಜ್ಞಾನದ ನಿವೃತ್ತಿಯಾಗುವದೆಂದರೆ ಆ ವೃತ್ತಿರೂಪ ಜ್ಞಾನಕ್ಕೆ ಉಪಾದಾನ
ಕಾರಣವು ಅಜ್ಞಾನವಲ್ಲವೆ ! ಈ ಅಜ್ಞಾನದ ಪರಿಣಾಮರೂಪವಾದ ವೃತ್ತಿಯು
ಅಜ್ಞಾನಸ್ವರೂಪವೇ ಆಗಲಿಲ್ಲವೆ ! ಇಂಥ ಅಜ್ಞಾನವು ಅಜ್ಞಾನವನ್ನು ನಾಶ
ಮಾಡುವದೆಂದರೆ ತನಗೆ ತಾನೇ ನಾಶಕವೆಂದು ಹೇಳಿದಂತಾಗಲಿಲ್ಲವೆ ! ಹಾಗಲ್ಲ
ವೃತ್ತಿಯು ತನ್ನಲ್ಲಿ ಜ್ಞಾನತ್ವ (ಚೈತನ್ಯ) ವನ್ನು ಆರೋಪಿಸಿಕೊಂಡು ಚೈತನ್ಯ

CC-0. Jangamwadi Math Collection. Digitized by eGangotri

ಾಗಬೇಕಾದ ಎಲ್ಲ ಕಾರ್ಯಗಳನ್ನು ಮಾಡಲು ಸಮರ್ಥವಾಗುತ್ತದೆಂದು ಹೇಳು
ವೆಯೆನ್ನುವುದಾದರೆ ಗುಲಗಂಜಿಯು ಗುಂಪು ಅಗ್ನಿಯ ಆರೋಪದಿಂದ ದಾಹ
ವನ್ನು ಮಾಡಬೇಕಾಗುವ ಪ್ರಸಂಗವು ಬರುವುದು. ಅಂತಹ ವೃತ್ತ್ಯವಚ್ಛಿನ್ನ
ತನ್ಯವೇ ಬಾಧಕವೆಂದು ನಾವು ಹೇಳುತ್ತೇವೆಂದರೆ ಅವಚ್ಛೇದ್ಯವು ಚೈತನ್ಯವು ಅವ
ದಕವು ವೃತ್ತಿಯು ಆಗುವುದರಿಂದ ವೃತ್ತಿಯೊಂದು ಬೇರೆ ಪದಾರ್ಥವು ಚೈತನ್ಯ
ವದೊಂದು ಬೇರೆ ಪದಾರ್ಥವು ಆಗುವದರಿಂದ ಜ್ಞಾನಭೇದವನ್ನು ಒಪ್ಪಿದಂತಾಗಿ
ಘಾತ ದೋಷವು ಬರುವುದು. ನಾವು ಬ್ರಹ್ಮವೆಂಬ ಏಕಾಕಾರ ಜ್ಞಾನವೊಂದೇ
ಬುವದಲ್ಲವೆ ಅವಚ್ಛೇದಕರೂಪ ಜ್ಞಾನವೊಂದು ಅವಚ್ಛೇದ್ಯರೂಪ ಜ್ಞಾನವೊಂದು
ಬ ಎರಡು ಜ್ಞಾನಗಳು ಕಂಡುಬರುವುದಿಲ್ಲವಷ್ಟೆ; ಹೇಗೆಂದರೆ "ಘಟವದ್‌ಜ್ಞಾನಂ"
ಜ್ಞಾನವು ಘಟವುಳ್ಳದ್ದು) ಎಂಬಲ್ಲಿ ಅವಚ್ಛೇದ್ಯವಾದ ಜ್ಞಾನಕ್ಕೂ ಅವಚ್ಛೇದಕವಾದ
ಟಕ್ಕೂ ಭೇದವು ಸಿದ್ಧವೇ ಆಗಿರುವುದು.

ಇದಲ್ಲದೆ ವೃತ್ತಿಯು (ಅಂತಃಕರಣ ವೃತ್ತಿಯು) ಜ್ಞಾನಪದಕ್ಕೆ ಮುಖ್ಯಾರ್ಥ
ಆಗುವ ಪಕ್ಷದಲ್ಲಿ ಬ್ರಹ್ಮವು ಜ್ಞಾನಭಿನ್ನವೇ ಆಗಬೇಕು. ಏಕೆಂದರೆ ಅಂತಃಕರಣ
ತ್ತಿಯು ಅಜ್ಞಾನದ ಪರಿಣಾಮವಾಗಿರುವದಷ್ಟೆ; ವೃತ್ತಿ ಬ್ರಹ್ಮ ಇವುಗಳು ಒಂದೇ
ರಬೇಕಾದರೆ ಅವುಗಳೆರಡರಲ್ಲಿಯೂ ಅನುಗತವಾದ ಒಂದೇ ಒಂದು ಪ್ರವೃತ್ತಿ
ಮಿತ್ತ (ಶಕ್ತಿ) ಇರಬೇಕು. ಆ ಒಂದು ಶಕ್ತಿಯಿಲ್ಲದಿರುವುದರಿಂದ ಬ್ರಹ್ಮವು ವೃತ್ತಿ
ಜ್ಞಾನ ಭಿನ್ನವು. ಜ್ಞಾನ ಅಜ್ಞಾನ ಪರಿಣಾಮ (ವೃತ್ತಿ) ಇವುಗಳಲ್ಲಿ ಜ್ಞಾನತ್ವವು
ನುಗತವಾಗಿರುವದೆನ್ನುವದು ಪ್ರಾಮಾಣಿಕವಲ್ಲ. ಏಕೆಂದರೆ ತನಗೆ ವ್ಯಾಪಕವಾದ
ಪ್ರಕಾಶತ್ವವು ಆ ವೃತ್ತಿಯಲ್ಲಿಲ್ಲದಿರುವದರಿಂದ ತಾನೂ ಇರುವದಿಲ್ಲವೆಂದು ಸಿದ್ಧಿ
ತ್ತದಲ್ಲವೆ; ಜ್ಞಾನತ್ವವೆಂಬ ಧರ್ಮವು ಕೇವಲ ಚಿನ್ಮಾತ್ರ ಬ್ರಹ್ಮದಲ್ಲಿಯೇ ಇರುವ
ಲ್ಲದೆ ಅಂತಃಕರಣ ಪರಿಣಾಮರೂಪವಾದ ವೃತ್ತಿಯಲ್ಲಿರುವದಿಲ್ಲೆಂದು ಆಶಂಕಿಸ
ಬಡದು. ಬ್ರಹ್ಮವು ನಿರ್ವಿಶೇಷವಾಗಿರುವದರಿಂದ ಅದರಲ್ಲಿ ಯಾವ ಧರ್ಮ ವಿಶೇಷವೂ
ರುವದಿಲ್ಲಾದ್ದರಿಂದ ವೃತ್ತಿಯಲ್ಲಿಯೇ ಜ್ಞಾನತ್ವ ಧರ್ಮವನ್ನು ಹೇಳಬೇಕು. ಅಂದರೆ
ಬ್ರಹ್ಮಕ್ಕೆ ಅಜ್ಞಾನತ್ವವನ್ನು (ಬ್ರಹ್ಮವು ಅಜ್ಞಾನವೆಂಬುದನ್ನು) ಸ್ವೀಕರಿಸಬೇಕಾ
ಗುವದು. ಬ್ರಹ್ಮದಲ್ಲಿ ಜ್ಞಾನತ್ವ ಧರ್ಮವಿಶೇಷವನ್ನು ಸ್ವೀಕರಿಸದಿದ್ದರೆ ಅವಿದ್ಯಾ
ಅಜ್ಞಾನ) ನಿವರ್ತಕತ್ವ ಧರ್ಮವನ್ನೂ ಸ್ವೀಕರಿಸಕೂಡದು.

ಬ್ರಹ್ಮವು ಯಾವ ವಿಶೇಷ ಧರ್ಮವುಳ್ಳದ್ದೂ ಅಲ್ಲವಷ್ಟೆ ; ಶುದ್ಧಜ್ಞಾನರೂಪ
ಬ್ರಹ್ಮವು ನಿವರ್ತಕವಾಗದಮೇಲೆ ಅಧ್ಯಾಸ (ಅಜ್ಞಾನ) ಯುಕ್ತ ಬ್ರಹ್ಮ (ಜೀವ)
ಅಂತೂ ಪ್ರಪಂಚ ನಿವರ್ತಕವಾಗದಿರುವದರಿಂದ ಪ್ರಪಂಚದಲ್ಲಿ ನಿವರ್ತ್ಯತ್ವ (ಬಾಧ್ಯತ್ವ)
ವೆಂಬ ಎರಡನೇ ದಲವು ಬರಲಿಲ್ಲವಾದ್ದರಿಂದ ಅಸಂಭವ ದೋಷವು ಬರುವದು. ಜ್ಞಾನ

CC-0. Jangamwadi Math Collection. Digitized by eGangotri

ದಲ್ಲಿ ಪ್ರವೃತ್ತಿ ನಿಮಿತ್ತವಾಗಿ ಜ್ಞಾನತ್ವವೇ ಇರುವದು. ಅಜ್ಞಾನದಲ್ಲಿ ನಿವೃತ್ತಿಗೆ ನಿಮಿತ್ತವಾಗಿ ಜ್ಞಾನತ್ವವಿರುವದು. ಆದ್ದರಿಂದ ಜ್ಞಾನಾಜ್ಞಾನಗಳೆರಡರಲ್ಲಿಯೂ ಜ್ಞಾನತ್ವವೇ ಮುಖ್ಯಾರ್ಥ (ವಾಚ್ಯಾರ್ಥ) ವೆನಿಸುವದು ಎಂದು ಆಕ್ಷೇಪಿಸಕೂಡದು. ಏಕೆಂದರೆ ಜ್ಞಾನ (ಬ್ರಹ್ಮ) ಅಜ್ಞಾನ (ವೃತ್ತಿ) ಗಳೆಂದು ಒಂದೇ ಒಂದು ಜ್ಞಾನ ಪದಕ್ಕೆ ಅನೇಕಾರ್ಥಗಳನ್ನು ಕಲ್ಪಿಸುವ ಪ್ರಸಂಗ ಬರುವದು. ಇದಲ್ಲದೆ ಜ್ಞಾನಾಜ್ಞಾನಗಳು ಜ್ಞಾನಪದ ಮುಖ್ಯಾರ್ಥವೆನ್ನುವದಾದರೆ ವೃತ್ತ್ಯವಚ್ಛಿನ್ನ ಚೈತನ್ಯವೇ ಘಟ ಪಟಾದಿ ಜಗತ್ತಿನ ಆಭಾಸ (ತೋರಿಕೆ) ವೆಂಬ ಕಲ್ಪನೆಯು ವ್ಯರ್ಥವಲ್ಲವೆ ; ವೃತ್ತಿಯೆಂದಾಗಲಿ ಚೈತನ್ಯವೆಂದಾಗಲಿ ಜಗತ್ತಿನ ಜ್ಞಾನವೆಂದು ಹೇಳಿದರೆ ಸಾಕು. ಹೀಗೆ ಹೇಳಿದರೆ ಘಟಪಟಾದಿ ಜಗದ್ವಿಷಯಕ ಚೈತನ್ಯ (ಜ್ಞಾನ) ವು ಸವಿಷಯಕವಾದುದರಿಂದ ದೃಶ್ಯವಾಗುವದು. ಹೇಗೆಂದರೆ ಘಟವನ್ನು ನಾನು ತಿಳಿಯುತ್ತೇನೆ. ಎಂಬ ಅನುವ್ಯವಸಾಯರೂಪ ಜ್ಞಾನಕ್ಕೆ ಆ ಘಟ ಚೈತನ್ಯ (ಬ್ರಹ್ಮ)ವು ವಿಷಯವಾಯಿತಲ್ಲವೆ ; ಆದ್ದರಿಂದ ಬ್ರಹ್ಮವು ದೃಶ್ಯವಾಯಿತು. ನಿಮ್ಮ ಮತದಂತೆ ಯಾವುದು ದೃಶ್ಯವೋ ಅದು ಮಿಥ್ಯೆಯಾಗಿರುವದರಿಂದ ಬ್ರಹ್ಮಕ್ಕೆ ಮಿಥ್ಯಾತ್ವವು ವಜ್ರಲೇಪ [ಸೀಮೆ ಅಂಟು] ದಂತೆ ನಿವಾರಿಸಲಶಕ್ಯವಾಯಿತು.

ಜ್ಞಾನಾಜ್ಞಾನಗಳಲ್ಲಿ ಜ್ಞಾನಪದ ಮುಖ್ಯಾರ್ಥತ್ವವನ್ನು ಸಮರ್ಥಿಸುವದಕ್ಕಾಗಿ ಜ್ಞಾನಪದ ಪ್ರವೃತ್ತಿ ನಿವೃತ್ತಿದ್ವಯ ನಿಮಿತ್ತತ್ವವನ್ನು ಕಲ್ಪಿಸುವದಾದರೆ ಘಟಪಟಗಳಲ್ಲಿ ಘಟಪದ ಮುಖ್ಯಾರ್ಥತ್ವವನ್ನು ಹೇಳಬಹುದಲ್ಲವೆ ; ಘಟದಲ್ಲಿ ಘಟಪದ ಪ್ರವೃತ್ತಿ ನಿಮಿತ್ತ [ಶಕ್ತಿಯು] ವು ಪಟದಲ್ಲಿ ಪಟಪದ ನಿವೃತ್ತಿ ನಿಮಿತ್ತ [ಅಶಕ್ತಿಯು] ಇರುವದರಿಂದ ಘಟಪದ ಮುಖ್ಯಾರ್ಥತ್ವವು ಪಟದಲ್ಲಿಯೂ ಬರಬೇಕಾಗುವದು. ಬರುವದೆಂದರೆ ಘಟವು ಪಟಪದದಿಂದ ಬೋಧ್ಯವೆಂದು ವ್ಯವಹಾರವಾಗುವಂತೆ ಪಟವು ಘಟಪದದಿಂದ ಬೋಧ್ಯವೆಂಬ ವ್ಯವಹಾರವಾಗಬೇಕು. ಆಗುವದಿಲ್ಲಾದ್ದರಿಂದ ಜ್ಞಾನ [ಬ್ರಹ್ಮ] ಅಜ್ಞಾನ [ವೃತ್ತಿ] ಇವುಗಳಲ್ಲಿ ಜ್ಞಾನಪದ ಮುಖ್ಯಾರ್ಥತ್ವವಿಲ್ಲ. ವೃತ್ತಿಯಂತು ಅಜ್ಞಾನದ ಪರಿಣಾಮವಾದ ಅಂತಃಕರಣದ ಕಾರ್ಯವಾಗಿರುವದರಿಂದ ಅಜ್ಞಾನರೂಪವೇ ಆಗಿರುವದು. ಇದರಲ್ಲಿ ಜ್ಞಾನತ್ವವಂತೂ ಇಲ್ಲವೇ ಇಲ್ಲ. ಬ್ರಹ್ಮವಾದರೂ ನಿರ್ವಿಷಯಕ ಪ್ರಕಾಶಕ್ಕಾದರೂ ವಿಷಯವಾಗದಿರುವದರಿಂದ ತುಚ್ಛವೆನಿಸುವದು. ಗಗನನೀಯತ್ವ ವಿಶಿಷ್ಟ ಪುಷ್ಪವು ಯಾವ ಜ್ಞಾನಕ್ಕೂ ವಿಷಯಕವಾಗದಿರುವದರಿಂದ ತುಚ್ಛವೆನಿಸಿರುವಷ್ಟೆ.

ಇನ್ನು ದೇವದತ್ತಾದಿ ಚೈತನ್ಯಗಳೂ ಕೂಡ ತಮಗೆ ವಿಷಯವಾಗದಿರುವ ಬ್ರಹ್ಮಕ್ಕೆ ಅಭಿನ್ನಗಳೇ ಆಗುವದರಿಂದ ಅವುಗಳಿಗೆ ಪರಸ್ಪರ ವ್ಯವಹಾರವೇ ಅಯುಕ್ತವಾಗುವದು. ಹೇಗೆಂದರೆ ಚೈತ್ರನು ಸುಖಿಯು ಮೈತ್ರನು ದುಃಖಿಯು ದೇವದತ್ತನ

CC-0. Jangamwadi Math Collection. Digitized by eGangotri

ಸುಖಿಯು. ರಾಮನು ದುಃಖಿಯು ಎಂಬ ವ್ಯವಹಾರವಾಗಬೇಕಾದರೆ ದೇವದತ್ತಾದಿ ಚೈತನ್ಯಗಳು (ಜೀವಗಳು) ಪರಸ್ಪರ ಭಿನ್ನಗಳಾಗಿರಬೇಕಲ್ಲವೆ; ಚೈತನ್ಯವೆಂಬ ಬ್ರಹ್ಮವು ಎಲ್ಲ ದೇವದತ್ತಾದಿಗಳಲ್ಲಿ ಒಂದೇ ಒಂದಾಗಿರುವುದರಿಂದ ಸುಖದುಃಖಾದಿ ಭೇದ ವ್ಯವಹಾರವು ಯುಕ್ತವಾಗಲಾರದೆಂದು ಭಾವವು.

ಇನ್ನು "ಅಹಂ ಬ್ರಹ್ಮಾಸ್ಮಿ" ಎಂಬ ಅಖಂಡಾಕಾರಕಾರಿತ ವೃತ್ತಿಯೇ ಜ್ಞಾನ ಪದ ಮುಖ್ಯಾರ್ಥವೆಂದು ಹೇಳಿದೆ. "ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ" ಎಂಬ ಶ್ರುತ್ಯುಕ್ತವಾದ ಜ್ಞಾನರೂಪೀ ಬ್ರಹ್ಮವೆಂದು ಹೇಳಿದರೆ ಆ ವೃತ್ತಿಯು ಸ್ವಪ್ರಕಾಶ ರೂಪವಾದ ಬ್ರಹ್ಮ ವಿಷಯಕವಾಗಿರುವುದರಿಂದ ಆ ವೃತ್ತಿರೂಪ ದೃಗ್ವಿಷಯವಾದ ಬ್ರಹ್ಮವು ದೃಶ್ಯವೆನಿಸಿ ಮಿಥ್ಯೆಯಾಗುವುದು. ಇನ್ನು ದೇವದತ್ತಾದಿ ಚೈತನ್ಯಗಳಿಗೆ ಕಲ್ಪಿತ ಬೇಧವನ್ನು ಸ್ವೀಕರಿಸಿ ಸುಖದುಃಖಾದಿ ವ್ಯವಹಾರವನ್ನು ವ್ಯವಸ್ಥೆಗೊಳಿಸಿದರೂ ಕೂಡ 'ದೇವದತ್ತನನ್ನು ಸುಖಿಯನ್ನಾಗಿ ತಿಳಿಯುವೆನು' ಎಂದು ಮೈತ್ರನೂ 'ಮೈತ್ರನನ್ನು ದುಃಖಿಯನ್ನಾಗಿ ತಿಳಿಯುವೆ'ನೆಂದು ದೇವದತ್ತನೂ ವ್ಯವಹರಿಸುವಾಗ ಪ್ರಮಾತೃ ಚೈತನ್ಯಗಳಿಗೆ ಆ ಬ್ರಹ್ಮರೂಪ ಚೈತನ್ಯಗಳೇ ವಿಷಯಗಳಾಗುವದರಿಂದ ಬ್ರಹ್ಮಕ್ಕೆ ಮಿಥ್ಯಾತ್ವವೇ ಪ್ರಾಪ್ತವಾಗುವುದು. ಯಾವುದು ಚೈತನ್ಯ (ಜ್ಞಾನ) ಕ್ಕೆ ವಿಷಯವೋ ಅದು ದೃಶ್ಯವು. ಯಾವುದು ದೃಶ್ಯವೋ ಅದು ಮಿಥ್ಯೆಯೆಂದು ನಿಮ್ಮ ಸಿದ್ಧಾಂತವಲ್ಲವೆ! ಪ್ರಪಂಚವು ದೃಶ್ಯವಾಗಿರುವುದರಿಂದಲ್ಲವೆ ಅದು ನಿಮ್ಮ ಮತದಲ್ಲಿ ಮಿಥ್ಯೆಯೆನಿಸಿರುವುದು. ದೇವದತ್ತಾದಿ ಚೈತನ್ಯಗಳಲ್ಲಿ ಮಿಥ್ಯಾಭೂತ ಭೇದವುಳ್ಳ ಚೈತನ್ಯ ವಿಷಯತ್ವವಿರುವುದರಿಂದ ಆ ಚೈತನ್ಯ ವಿಷಯತ್ವವೆಂಬ ದೃಶ್ಯತ್ವವು ಮಿಥ್ಯಾತ್ವಕ್ಕೆ ಸಾಧಕವಾಗುವುದಿಲ್ಲವೆಂದು ಆಕ್ಷೇಪಿಸಕೂಡದು. ಏಕೆಂದರೆ ಪ್ರಪಂಚದಲ್ಲಿಯೂ ಕೂಡ ಮಿಥ್ಯಾಭೂತ ಭೇದವಚ್ಚೈತನ್ಯ ವಿಷಯತ್ವವೆಂಬ ದೃಶ್ಯತ್ವವೇ ಇರುವುದರಿಂದ ಈ ದೃಶ್ಯತ್ವವೂ ಕೂಡ ಪ್ರಪಂಚ ಮಿಥ್ಯಾತ್ವಕ್ಕೆ ಸಾಧಕವಾಗಲಾರದು. ಜೀವ (ಪ್ರಮಾತೃ) ಚೈತನ್ಯಕ್ಕೆ ವಿಶಿಷ್ಟ (ಅವಿದ್ಯಾ ಅಥವಾ ಅಂತಃಕರಣಾವಚ್ಛಿನ್ನತ್ವ) ರೂಪದಿಂದ ಮಿಥ್ಯಾತ್ವವು ನಮಗಿಷ್ಟವೇ ಆಗಿದೆ. ನಿಷ್ಕೃಷ್ಟ (ಶುದ್ಧ) ಬ್ರಹ್ಮರೂಪವಾದರೂ ಜ್ಞಾನಕ್ಕೆ ವಿಷಯವೇ ಅಲ್ಲವಾದ್ದರಿಂದ ದೃಗ್ವಿಷಯತ್ವವೆಂಬ ದೃಶ್ಯತ್ವ ಹೇತುವು ಪಕ್ಷವೆಂಬ ಬ್ರಹ್ಮದಲ್ಲಿ ಬರಲಿಲ್ಲವಾದ್ದರಿಂದ ಬ್ರಹ್ಮಕ್ಕೆ ಮಿಥ್ಯಾತ್ವವು ಸಿದ್ಧಿಸುವುದಿಲ್ಲ. ಅಂದರೆ ವೃತ್ತಿ ವಿಶಿಷ್ಟ (ವೃತ್ತ್ಯವಚ್ಛಿನ್ನ) ಜ್ಞಾನವಾದರೂ ಮಿಥ್ಯಾಭೂತವೇ ಆಗುವುದರಿಂದ ಅದೂ ಕೂಡ ಮುಖ್ಯವಾದ (ದೃಕ್) ಜ್ಞಾನವಲ್ಲ. ಏತಾದೃಶ ದೃಗ್ವಿಷಯತ್ವವೆಂಬ ದೃಶ್ಯತ್ವವಾದರೂ ಪ್ರಪಂಚದಲ್ಲಿಲ್ಲದಿರುವುದರಿಂದ ಪ್ರಪಂಚವೆಂಬ ಪಕ್ಷದಲ್ಲಿಯೂ ಮಿಥ್ಯಾತ್ವವು ಸಿದ್ಧಿಸದೆ ಸತ್ಯತ್ವವೇ ಸಿದ್ಧವಾಗುವುದರಿಂದ ನಮಗೆ ಜಯವಾಯಿತು. ಪ್ರಪಂಚ ಮಿಥ್ಯಾತ್ವವಾದಿಗಳಾದ ನಿಮಗೆ ಅಪಜಯವಾಯಿತು.

CC-0. Jangamwadi Math Collection. Digitized by eGangotri

ಇನ್ನು ವೃತ್ತ್ಯವಚ್ಛಿನ್ನ ಚೈತನ್ಯವು ಶುದ್ಧ ಚೈತನ್ಯ (ಬ್ರಹ್ಮ) ಕ್ಕಿಂತಲೂ ಭಿನ್ನ ವಾಗಿರುವುದೆಂದು ಹೇಳಿದರೂ ಆ ಶುದ್ಧ ಬ್ರಹ್ಮವೂ ಕೂಡ ವೃತ್ತಿಗೆ ವಿಷಯವೇ ಆಗಿರುವುದರಿಂದ ಮಿಥ್ಯಾಭೂತವೇ ಆಗುವುದು. ಆ ವಿಶಿಷ್ಟ (ಅವಚ್ಛಿನ್ನ) ಚೈತನ್ಯವು ಶುದ್ಧ ಚೈತನ್ಯಕ್ಕೆ ಅಭಿನ್ನವೆಂದು ಹೇಳಿದರೆ ವಿಶಿಷ್ಟ ರೂಪವು ಮಿಥ್ಯಾಭೂತವಾಗಿರುವುದರಿಂದಲೂ ಅದು ಶುದ್ಧಕ್ಕೆ ಅಭಿನ್ನವಾಗಿರುವುದರಿಂದಲೂ ಪ್ರಪಂಚಕ್ಕೆ ಸತ್ಯತ್ವವೂ ಬ್ರಹ್ಮಕ್ಕೆ ಮಿಥ್ಯಾತ್ವವೂ ಉಂಟಾಗಿ ವಿಪರೀತ ಜ್ಞಾನವೇ ಆಗಬೇಕು. ಇದಲ್ಲದೆ ನಿರ್ವಿಶೇಷ ಬ್ರಹ್ಮವು ಇದೆಯೆಂದು ಹೇಳುವಿರೋ ? ಅಥವಾ ಇರುವುದಿಲ್ಲವೆಂಬ ಹೇಳುವಿರೋ ? ಇರುವುದಿಲ್ಲವೆಂದು ಹೇಳಿದರೆ ನಾಸ್ತಿಕಮತ ಪ್ರವೇಶವಾಗುವದು. ಇರುವುದೆಂದು ಹೇಳಿದರೆ "ಬ್ರಹ್ಮಾಸ್ಮೀತಿ ಪ್ರತಿಜ್ಞಾಯಾಂ" ಬ್ರಹ್ಮವು ಇರುತ್ತದೆಯೆಂಬ ಪ್ರತಿಜ್ಞೆಯಲ್ಲಿ (ವ್ಯವಹಾರದಲ್ಲಿ) ಬ್ರಹ್ಮಕ್ಕೆ ಬ್ರಹ್ಮಪದ ಶಕ್ಯತ್ವವನ್ನೂ ಅಸ್ತಿಪದ ಶಕ್ಯತ್ವವನ್ನೂ ವ್ಯವಹಾರ ವಿಷಯತ್ವವನ್ನೂ ಒಪ್ಪಲೇಬೇಕಾಗಬರುವುದರಿಂದ ನಿಮ್ಮ ನಿರ್ವಿಶೇಷತ್ವದ ಭಂಗವಾಗುವುದು. ಹೇಗೆಂದರೆ ನಿರ್ವಿಶೇಷವೆಂದರೆ ಯಾವುದೊಂದರ ಭೇದವಿಲ್ಲದ್ದೆಂದು ಅರ್ಥವಲ್ಲವೆ ? "ಬ್ರಹ್ಮಾಸ್ತಿ" ಎಂಬ ವ್ಯವಹಾರದಲ್ಲಿ ಬ್ರಹ್ಮಪದ ಶಕ್ತಿ ವಿಶೇಷವನ್ನೂ "ಅಸ್ತಿ" ಪದ ಶಕ್ತಿ ವಿಶೇಷವನ್ನೂ ವ್ಯವಹಾರ ವಿಷಯತ್ವ ವಿಶೇಷವನ್ನೂ ಬ್ರಹ್ಮದಲ್ಲಿ ಒಪ್ಪಿದರೆ ಆ ಬ್ರಹ್ಮವು ನಿರ್ವಿಶೇಷವೆಂದು ಹೇಳುವುದು ವ್ಯಾಹತಹಲ್ಲವೆ ; (ಶಂಕೆ) ವ್ಯವಹಾರ ವಿಷಯತ್ವ ಶಬ್ದಶಕ್ಯತ್ವ ವಿಶೇಷಗಳು ಕಲ್ಪಿತಗಳೆಂದು ನಾವು ಹೇಳುವುದರಿಂದಲೂ ವಸ್ತುತಃ ಅವು ಬ್ರಹ್ಮದಲ್ಲಿಲ್ಲದಿರುವುದರಿಂದಲೂ ನಿರ್ವಿಶೇಷತ್ವಕ್ಕೆ ವ್ಯಾಹತಿಯಿಲ್ಲ. (ಪರಿಹಾರ) "ನಿರ್ವಿಶೇಷಂ ಬ್ರಹ್ಮಾಸ್ತಿ" ಎಂಬ ವ್ಯವಹಾರಕ್ಕೆ ಸವಿಶೇಷ ಬ್ರಹ್ಮವು ವಿಷಯವಲ್ಲ. ಕಿಂತು ನಿರ್ವಿಶೇಷ ಬ್ರಹ್ಮವೇ ವಿಷಯವೆಂದು ಹೇಳುವುದು "ಹುಚ್ಚು ಬಿಟ್ಟಿತು. ವನಕೆ ತಾ ಕುಟ್ಟುವುದಕ್ಕೆ" ಎಂದೆನ್ನುವ ಉನ್ಮತ್ತಪ್ರಲಾಪ ಸದೃಶವೇ ಆಗುವುದು. ಹಾಗೂ "ಅಸ್ತಿ" ಶಬ್ದ ಶಕ್ಯಾರ್ಥವಾದ ಸತ್ತೆಯು ನಿಮ್ಮ ಮತದಲ್ಲಿ ಮಿಥ್ಯೆಯಾಗಿರದೆ ಸತ್ಯವೇ ಆಗಿರುವುದು. ಬ್ರಹ್ಮದಲ್ಲಿ ಸತ್ಯವಾದ ಸತ್ತಾರೂಪ ಧರ್ಮವಿಶೇಷವನ್ನು ಹೇಳಿದರೆ ಬ್ರಹ್ಮವು ನಿರ್ವಿಶೇಷವಾಗಲಾರದಷ್ಟೆ ; ಇದಲ್ಲದೆ ಸದ್ರೂಪ ಬ್ರಹ್ಮತ್ವ ಧರ್ಮವಿಶೇಷವು ಕಲ್ಪಿತವೇ ಎಂದು ಹೇಳಿದರೆ ನಿರ್ವಿಶೇಷವು ಬ್ರಹ್ಮವಲ್ಲವೆಂದು ನೀವೇ ಒಪ್ಪಿಕೊಂಡಂತಾಗುವುದು. ಯಾವಲ್ಲಿ ಬ್ರಹ್ಮತ್ವವು ಕಲ್ಪಿತ (ಮಿಥ್ಯಾಭೂತ) ವೋ ; ಅದೇ ಬ್ರಹ್ಮವೆನ್ನುವ ಮಾತಂತೂ ಪಂಚಪಾಂಡವರು ಮಂಚದಕಾಲಿನಂತೆ ಮೂವರೆಂದು ನುಡಿಯುವವನ ಮಾತಿನಂತೆ ಸ್ವವಾಕ್ಯ ವಿರುದ್ಧವೇ ಆಗುವುದು.

ಶಂಕಾ :—ಬ್ರಹ್ಮದಲ್ಲಿ ಅವಿದ್ಯಾಕಲ್ಪಿತ ಸಂಬಂಧದಿಂದ ಬ್ರಹ್ಮತ್ವವಾಗಲಿ ಸತ್ತೆಯಾಗಲಿ ಇರುವುದೆಂದು ನಾವು ಹೇಳುವುದರಿಂದ ವಿರೋಧವಿಲ್ಲ.

CC-0. Jangamwadi Math Collection. Digitized by eGangotri

ಸಮಾಧಾನ :—ನಿರ್ವಿಶೇಷ (ವಿಶೇಷವಿಲ್ಲದ್ದು) ದಲ್ಲಿ ಅವಿದ್ಯಾಕಲ್ಪಿತ ಸಂಬಂಧ ವಿಶೇಷವಾದರೂ ಇರಲಾರದು. ಇರುವುದೆಂದರೆ ನಿರ್ವಿಶೇಷತ್ವ ವ್ಯಾಹತಿಯೇ ಆಗುವುದು.

ಶಂಕಾ :—"ನಿರ್ವಿಶೇಷಂ ಬ್ರಹ್ಮಾಸ್ತಿ" ಎಂಬಲ್ಲಿ ನಿರ್ವಿಶೇಷ ಪದಕ್ಕೂ 'ಬ್ರಹ್ಮ' ಪದಕ್ಕೂ, 'ಅಸ್ತಿ' ಪದಕ್ಕೂ ಶಕ್ತಿಯ ಅಭೇದವನ್ನೇ ಸ್ವೀಕರಿಸಿ ತಾತ್ಪರ್ಯ ಶಕ್ಯಾಶ್ರಯ ಪದಾರ್ಥ ಭೇದವನ್ನೇ ಬ್ರಹ್ಮದಲ್ಲಿ ಹೇಳುವುದರಿಂದ ನಿರ್ವಿಶೇಷತ್ವಕ್ಕೆ ವ್ಯಾಹತಿಯಾಗುವುದಿಲ್ಲ.

ಸಮಾಧಾನ :—ಭಿನ್ನಪ್ರವೃತ್ತಿ ನಿಮಿತ್ತ ಶಬ್ದಗಳಿಗೆ (ಶಕ್ಯಾಶ್ರಯ ಪದಾರ್ಥಗಳು ಯಾವ ಶಬ್ದಗಳಿಗೆ ಭಿನ್ನ ಭಿನ್ನಗಳಾಗಿರುವವೋ ಆ ಶಬ್ದಗಳಿಗೆ) ಸಾಮಾನಾಧಿಕರಣ್ಯ "ನಿರ್ವಿಶೇಷಂ ಬ್ರಹ್ಮಾಸ್ತಿ" ಎಂಬ ಪ್ರಯೋಗವು ಸಂಭವಿಸುವುದಲ್ಲದೆ ಶಕ್ಯಾರ್ಥಗಳು ಅಭಿನ್ನಗಳಾಗಿದ್ದರೆ ಸಾಮಾನಾಧಿಕರಣ್ಯ ಪ್ರಯೋಗವೇ ಸಂಭವಿಸುವುದಿಲ್ಲವೆಂದು ವೃದ್ಧರು ಹೇಳುವುದರಿಂದ ಅಭಿನ್ನಗಳಾದ ಅರ್ಥವುಳ್ಳ ನಿರ್ವಿಶೇಷ, ಬ್ರಹ್ಮ, ಅಸ್ತಿ ಶಬ್ದಗಳಿಗೆ ಸಾಮಾನಾಧಿಕರಣ್ಯ (ನಿರ್ವಿಶೇಷಂ ಬ್ರಹ್ಮಾಸ್ತಿ) ಪ್ರಯೋಗವನ್ನು ಹೇಳಲವಕಾಶವಿಲ್ಲವಾದ್ದರಿಂದ ಅಭಿನ್ನಪ್ರವೃತ್ತಿ ನಿಮಿತ್ತ ಶಬ್ದಗಳಿಗೆ ಬ್ರಹ್ಮವೆಂಬ ಒಂದರ್ಥದಲ್ಲಿ ವೃತ್ತಿಯನ್ನು ಹೇಳಕೂಡದು.

ಶಂಕಾ :—ನಿರ್ವಿಶೇಷವೆಂದರೆ ವಿಶೇಷಾಭಾವ (ಶಕ್ತಿವಿಶೇಷ, ಭೇದವಿಶೇಷ, ಗುಣವಿಶೇಷ, ಧರ್ಮವಿಶೇಷ ಇವುಗಳ ಅಭಾವ) ವೆಂದು ನಾವು ಹೇಳುವುದರಿಂದಲೂ ಆ ಅಭಾವಗಳು ಅಧಿಕರಣರೂಪವಾದ ಬ್ರಹ್ಮಸ್ವರೂಪಗಳೇ ಆಗಿರುವುದರಿಂದಲೂ ಯಾವ ದೋಷಕ್ಕೂ ಅವಕಾಶವಿಲ್ಲ.

ಸಮಾಧಾನ:—ಆ ವಿಶೇಷಾಭಾವಾದಿಗಳು (ಗುಣಾಭಾವ, ಧರ್ಮಾಭಾವ, ಭೇದಾಭಾವಾದಿಗಳು) ಬ್ರಹ್ಮಸ್ವರೂಪಕ್ಕೆ ಅನತಿರಿಕ್ತ (ಅಭಿನ್ನ) ಗಳೆಂದರೆ ನಿಮ್ಮ ಅದ್ವೈತ ಸಿದ್ಧಾಂತಕ್ಕೆ ಹಾನಿಯಾಗುವುದು. ಈ ವಿಚಾರದಿಂದ ನಿರ್ವಿಶೇಷ ಬ್ರಹ್ಮವು ಪ್ರತಿಜ್ಞಾದಿಗಳಿಗೆ ವಿಷಯವಾಗದಿದ್ದರೂ ಸ್ವತಃ ಸಿದ್ಧಿಸುವುದೆನ್ನುವುದಾದರೂ ನಿರಾಕರಿಸಲ್ಪಟ್ಟಿತು. ತಮ್ಮ ನಿರ್ವಿಶೇಷವೆಂಬ ಬ್ರಹ್ಮವನ್ನು ಸಾಧಿಸುವುದು ದುಃಸಾಧ್ಯವಾಗಲು ಸ್ವತಸಿದ್ಧಿಯನ್ನು ಹೇಳಬೇಬೇಕಲ್ಲವೆ ! ಇನ್ನು ಪ್ರಕೃತಿ, ಪ್ರತ್ಯಯ ಭೇದ ಭಿನ್ನವಾದ ಶ್ರುತಿಯೂ ಆ ನಿರ್ವಿಶೇಷಬ್ರಹ್ಮ ಸದ್ಭಾವದಲ್ಲಿ ಪ್ರಮಾಣವಾಗದಿರುವುದರಿಂದ ನಿರ್ವಿಶೇಷಬ್ರಹ್ಮವು ಶ್ರುತಿಸಿದ್ಧವೆನ್ನುವುದೂ ಕೂಡ ಖಂಡಿಸಲ್ಪಟ್ಟಿತು. ಇನ್ನು ನಿರ್ವಿಶೇಷ ಬ್ರಹ್ಮವು ಶ್ರುತಿ ಸಿದ್ಧ (ಶ್ರುತಿ ಜ್ಞಾನಕ್ಕೆ ವಿಷಯು) ವೆಂದು ಹೇಳಿದರೆ ಆ ಶ್ರುತಿಜನ್ಯ

CC-0. Jangamwadi Math Collection. Digitized by eGangotri

ಜ್ಞಾನವೆಂಬ ದೃಕ್ಕಿಗೆ ವಿಷಯವಾಗುವುದರಿಂದ ಮಿಥ್ಯಾಭೂತವಾಗುವುದು. ಇದಲ್ಲದೆ "ಬ್ರಹ್ಮ ಸತ್ಯಂ ಜಗನ್ಮಿಥ್ಯಾ" ಎಂದು ಹೇಳುವ ಮಿಥ್ಯಾಭೂತವಾದ ಪ್ರಪಂಚಕ್ಕೂ ಸತ್ಯವಾದ ಬ್ರಹ್ಮಕ್ಕೂ ಭೇದವನ್ನೇ ಹೇಳಬೇಕಲ್ಲವೆ ? ನೀವು ಹೇಳುವ ಆ ಪ್ರಪಂಚ ಬ್ರಹ್ಮಗಳ ಭೇದವು ಸತ್ಯವೊ ? ಅಥವಾ ಅಸತ್ಯವೊ ? ಸತ್ಯವೆನ್ನುವುದಾದರೆ ಭೇದಕ್ಕೆ ಸತ್ಯತ್ವವನ್ನು ಸ್ವೀಕರಿಸಿದಂತಾಗಿ ನಿಮ್ಮ ಅಭೇದ (ಅದ್ವೈತ) ಸಿದ್ಧಾಂತಕ್ಕೆ ಹಾನಿಯಾಗುವುದು.

ಇನ್ನು ಅಭೇದವು ಅಸತ್ಯವೆನ್ನುವುದಾದರೆ ಸತ್ಯವಾದ ಬ್ರಹ್ಮಕ್ಕೂ ಕೂಡ ಮಿಥ್ಯಾತ್ವವುಂಟಾಗುವುದರಿಂದ ಆ ಮಿಥ್ಯಾತ್ವವನ್ನು ನಿವೇ ಏಕೆ ಚತುರ್ಮುಖ ಬ್ರಹ್ಮನೂ ಕೂಡ ವಾರಣಮಾಡಲಾರನು. ಏಕೆಂದರೆ ಯಾವ ಎರಡು ಪದಾರ್ಥಗಳ ಭೇದವು ಅಸತ್ಯವಾಗಿರುವುದೋ ; ಅವೆರಡಕ್ಕೂ ಐಕ್ಯವೆನ್ನುವ ನಿಯಮವುಂಟಲ್ಲವೆ ; ಘಟಕ್ಕೆ ತನ್ನಿಂದ ಭೇದವು ಅಸತ್ಯವಾಗಿರುವುದರಿಂದ ಅಭೇದ (ಐಕ್ಯ) ವು ಸರ್ವಾನುಭವ ಸಿದ್ಧವೇ ಆಗಿರುವುದಷ್ಟೆ. ಆದ್ದರಿಂದ ಪ್ರಪಂಚ ಬ್ರಹ್ಮಗಳ ಭೇದವು ಅಸತ್ಯವಾಗಿರುವ ಪಕ್ಷದಲ್ಲಿ ಪ್ರಪಂಚ ಬ್ರಹ್ಮಗಳಿಗೆ ಅಭೇದವುಂಟಾಗಿ ಮಿಥ್ಯೆಯಾಗಿರುವ ಪ್ರಪಂಚಕ್ಕೆ ಅಭಿನ್ನವಾಗಿರುವ ಬ್ರಹ್ಮಕ್ಕೂ ಮಿಥ್ಯಾತ್ವವನ್ನು ಒಪ್ಪಲೇಬೇಕು. ಅಥವಾ ಬ್ರಹ್ಮಾಭಿನ್ನವಾದ ಪ್ರಪಂಚಕ್ಕಾದರೂ ಬ್ರಹ್ಮದಂತೆ ಸತ್ಯತ್ವವನ್ನಾದರೂ ಒಪ್ಪಿಕೊಂಡೇ ತೀರಬೇಕು.

ಶಂಕಾ :—ಪ್ರಪಂಚ ಬ್ರಹ್ಮಗಳ ಭೇದವಾಗಲಿ ಅಥವಾ ಅಭೇದವಾಗಲಿ ಅವೆರಡೂ ಮಿಥ್ಯೆಗಳೇ ಆಗಿರುವುದರಿಂದ ಯಾವ ದೋಷಕ್ಕೂ ಅವಕಾಶವಿಲ್ಲ.

ಸಮಾಧಾನ :—ಆ ಭೇದಾಭೇದಗಳಿಗೆ ಪರಸ್ಪರ ಅವಿರೋಧವು ಸಮೀಚೀನವಾಗಿರುವಾಗ ಪ್ರಕಾರಾಂತರದಿಂದ (ಮಿಥ್ಯಾತ್ವದಿಂದ) ಅವೆರಡಕ್ಕೆ ಸ್ಥಿತಿಯನ್ನು ಹೇಳಲಾಗುವುದಿಲ್ಲ. ಒಂದು ಪಕ್ಷದಲ್ಲಿ ಭೇದಾಭೇದಗಳೆರಡಕ್ಕೂ ಮಿಥ್ಯಾತ್ವವನ್ನೇ ಹೇಳುವ ನೀವು ನಿಷ್ಪಕ್ಷಪಾತಿಗಳಲ್ಲವೆ ; ಪ್ರಪಂಚ ಬ್ರಹ್ಮಗಳ ಭೇದಾಭೇದಗಳಿಗೆ ಮಿಥ್ಯಾತ್ವವನ್ನು ಹೇಳಿ ನಿಷ್ಪಕ್ಷಪಾತಿಗಳೆಂದು ಖ್ಯಾತಿಗೊಂಡಂತೆ ಜೀವ ಬ್ರಹ್ಮಗಳ ಭೇದಾಭೇದಗಳಿಗೂ ಕೂಡ ಮಿಥ್ಯಾತ್ವವನ್ನೇ ಹೇಳಿ ಆ ಖ್ಯಾತಿಯನ್ನು ಏಕೆ ಉಳಿಸಿಕೊಳ್ಳಬಾರದು. ಭೇದಕ್ಕೆ ಮಾತ್ರ ಮಿಥ್ಯಾತ್ವವನ್ನೂ ಅಭೇದಕ್ಕೆ ಸತ್ಯತ್ವವನ್ನು ಹೇಳುವುದು ಪಕ್ಷಪಾತವಾಗಲಿಲ್ಲವೆ?

ಶಂಕಾ :—ಜೀವಬ್ರಹ್ಮಗಳ ಅಭೇದಕ್ಕೆ ಶ್ರುತಿಗಳು ಸತ್ಯತ್ವವನ್ನು ಹೇಳುವುದರಿಂದ ಆ ಅನೇಕ ಪ್ರಬಲ ಶ್ರುತಿಗಳಿಗನುಸಾರವಾಗಿ ಅಭೇದಕ್ಕೆ ಮಾತ್ರ ಸತ್ಯತ್ವವನ್ನು ಹೇಳುವ ನಮಗೆ ಪಕ್ಷಪಾತ ದೋಷವಿಲ್ಲ.

CC-0. Jangamwadi Math Collection. Digitized by eGangotri

ಸಮಾಧಾನ:—ಹಾಗಾದರೆ "ಸರ್ವಂ ಖಲ್ವಿದಂ ಬ್ರಹ್ಮ" "ಸರ್ವೋ ವೈ ರುದ್ರಃ" ಇತ್ಯಾದ್ಯನೇಕ ಪ್ರಬಲ ಶ್ರುತಿಗಳಿಗನುಸಾರವಾಗಿ ಪ್ರಪಂಚ ಬ್ರಹ್ಮಗಳ ಅಭೇದಕ್ಕಾದರೂ ಸತ್ಯತ್ವವನ್ನು ಹೇಳುವುದಿಲ್ಲವೇಕೆ ? ಪ್ರಪಂಚ ಬ್ರಹ್ಮಗಳ ಅಭೇದಕ್ಕೂ ನೀವು ಸತ್ಯತ್ವವನ್ನು ಹೇಳುವುವಾದರೆ ನಿಮಗೆ ಪಕ್ಷಪಾತ ದೋಷವಿಲ್ಲೆಂದು ಹೇಳಬಹುದು. ಆ ಭೇದಕ್ಕೆ ನೀವು ಮಿಥ್ಯಾತ್ವವನ್ನು ಹೇಳುವುದರಿಂದ ನಿಮಗೆ ಪಕ್ಷಪಾತ ದೋಷವು ಪ್ರಾಪ್ತವಾಯಿತು.

ಇದಲ್ಲದೆ ನಿಮ್ಮ ನಿರ್ವಿಶೇಷಬ್ರಹ್ಮವು ಜ್ಞಾನವೋ, ಅಥವಾ ಅಜ್ಞಾನವೋ ನೀವು ಬ್ರಹ್ಮವು ಅಜ್ಞಾನಸ್ವರೂಪವೆಂದು ಹೇಳಲಾಗುವುದಿಲ್ಲ. ಏಕೆಂದರೆ ನಿರ್ವಿಶೇಷ ಬ್ರಹ್ಮವು ಜ್ಞಾನಸ್ವರೂಪವೆನ್ನುವುದು ನಿಮ್ಮ ಸಿದ್ಧಾಂತವಲ್ಲವೆ? ಹೀಗಿದ್ದೂ ಅಜ್ಞಾನ ಸ್ವರೂಪವೆಂದು ಹೇಳಿದರೆ ನಿಮಗೆ ಅಪಸಿದ್ಧಾಂತವಾಗುವುದು. ಇನ್ನು ಬ್ರಹ್ಮವು ಅಜ್ಞಾನಸ್ವರೂಪವಲ್ಲ. ಜ್ಞಾನಸ್ವರೂಪವೇ ಆಗಿರುವುದೆಂದು ಹೇಳುವ ಪಕ್ಷದಲ್ಲಿ ಬ್ರಹ್ಮ ರೂಪವಾದ ಜ್ಞಾನವು ಸವಿಷಯವೋ ; ಅಥವಾ ನಿರ್ವಿಷಯವೊ ; ನಿರ್ವಿಷಯವೆಂದರೆ ನಿಮಗಭಿಮತವಾದ ಜ್ಞಾನತ್ವಕ್ಕೆ ವ್ಯಾಘಾತವಾಗುವುದು. ಯಾವ ಯಾವುದು ಜ್ಞಾನವೋ ಅದು ಸವಿಷಯವೇ ಆಗಿರಬೇಕು. ವಿಷಯರಹಿತವಾದುದು ಜ್ಞಾನವೇ ಅಲ್ಲವೆಂಬ ನಿಯಮವುಂಟು.

ಇನ್ನು ಸವಿಷಯವೆಂದು ಹೇಳಿದರೆ ಆ ಜ್ಞಾನಕ್ಕೆ ವಿಷಯವಾವುದೋ ಅದು ನಿತ್ಯವಾಗಿರಲಿಕ್ಕೇಬೇಕು. ನಿತ್ಯಜ್ಞಾನಕ್ಕೆ ವಿಷಯವಾದುದೂ ಅವಶ್ಯವಾಗಿ ನಿತ್ಯವೇ ಆಗಬೇಕಲ್ಲವೆ ; ಹೀಗೆ ವಿಷಯರೂಪ ಪ್ರಪಂಚಕ್ಕೆ ನಿತ್ಯತ್ವವನ್ನು ಒಪ್ಪುವುದಾದರೆ ಮುಕ್ತಿಯೂ ಕೂಡ ಪ್ರಪಂಚ ಸಹಿತವಾಗಬೇಕು. ಏಕೆಂದರೆ ನಿಮ್ಮ ಮತದ ಜ್ಞಾನರೂಪ ಬ್ರಹ್ಮಸ್ವರೂಪವೇ ಮುಕ್ತಿಯಷ್ಟೆ !

ಶಂಕಾ:—ಮುಕ್ತಿಯ ದೆಶೆಯಲ್ಲಿ ವಿಷಯಗಳೆಲ್ಲವೂ ನಿವೃತ್ತಗಳಾಗಿ ಹೋಗಿರುವುದರಿಂದ ಮುಕ್ತಿಯು ಬ್ರಹ್ಮರೂಪ ಜ್ಞಾನವಾಗಿದ್ದರೂ ಅದು ನಿರ್ವಿಷಯವೇ ಆಗಿರುವುದು. ಆದುದರಿಂದ ಮುಕ್ತಿಯು ಪ್ರಪಂಚ ಸಹಿತವಲ್ಲ.

ಸಮಾಧಾನ :—ಹಾಗಾದರೆ ಆ ಮುಕ್ತಿರೂಪ ಜ್ಞಾನವೆಂಬ ಬ್ರಹ್ಮಕ್ಕೆ ಜ್ಞಾನತ್ವವೇ ಸಿದ್ಧಿಸಲಾರದು. ನಿರ್ವಿಷಯತ್ವ ಜ್ಞಾನತ್ವಗಳಿಗೆ ಪರಸ್ಪರ ವ್ಯಾಘಾತವುಂಟು. ಅಂದರೆ ನಿರ್ವಿಷಯತ್ವದಲ್ಲಿ ಜ್ಞಾನತ್ವವೂ ಜ್ಞಾನತ್ವವಿದ್ದಲ್ಲಿ ನಿರ್ವಿಷಯತ್ವವೂ ಇರಲಾರವೆಂದು ಭಾವವು.

ಶಂಕಾ :—ಅತೀತ ವಿಷಯಕಜ್ಞಾನ (ಸ್ಮೃತಿ) ದಲ್ಲಿ ವಿಷಯವಾಗಿದ್ದ ಘಟ

CC-0. Jangamwadi Math Collection. Digitized by eGangotri

ಪಟಾದಿಗಳು ನಷ್ಟವಾಗಿದ್ದರೂ ಆ ಜ್ಞಾನಕ್ಕೆ ಜ್ಞಾನತ್ವವಿರುವಂತೆ (ಅದು ಜ್ಞಾನವೆನಿಸಿರುವಂತೆ) ಮುಕ್ತಿರೂಪ ಜ್ಞಾನದಲ್ಲಿ ವಿಷಯಗಳು ನಿವೃತ್ತಗಳಾಗಿದ್ದರೂ ಅದಕ್ಕೆ ಜ್ಞಾನತ್ವವು ಸಿದ್ಧಿಸುವುದು. (ಅದು ಜ್ಞಾನವೆನಿಸುವುದು) ಆದ್ದರಿಂದ ನಿರ್ವಿಷಯತ್ವವಿದ್ದಲ್ಲಿ ಜ್ಞಾನತ್ವವೂ ಜ್ಞಾನತ್ವವಿದ್ದಲ್ಲಿ ನಿರ್ವಿಷಯತ್ವವೂ ಇರುವುದಿಲ್ಲವೆನ್ನುವ ನಿಮ್ಮ ನಿಯಮವು ಯುಕ್ತವಲ್ಲ.

ಸಮಾಧಾನ :—ಅತೀತ ವಿಷಯಕ ಜ್ಞಾನದಲ್ಲಿ ಅತೀತತ್ವಾದಿ ಕಿಂಚಿತ್ಪ್ರಕಾರಕತ್ವವನ್ನಾಗಲಿ ಕಿಂಚಿದಾಲಂಬನತ್ವವನ್ನಾಗಲಿ ಹೇಳಲೇಬೇಕು. ಅತೀತತ್ವಾದಿ ಕಿಂಚಿದ್ವಿಷಯಕತ್ವವನ್ನು ಆ ಅತೀತ ಜ್ಞಾನದಲ್ಲಿ ಹೇಳುವಂತೆ ನಿಮ್ಮ ಮುಕ್ತಿರೂಪ ಜ್ಞಾನದಲ್ಲಿ ಹೇಳಿದರೆ. ನಿರ್ವಿಶೇಷತ್ವಕ್ಕೆ ವ್ಯಾಘಾತವಾಗುವುದು. ಏಕೆಂದರೆ ಅತೀತತ್ವಾದಿ ವಿಷಯವೆಂಬ ವಿಶೇಷವನ್ನೇ ನಿಮ್ಮ ಮುಕ್ತಿರೂಪಜ್ಞಾನ (ಬ್ರಹ್ಮ) ದಲ್ಲಿ ಒಪ್ಪಿಕೊಂಡಂತಾಯಿತಷ್ಟೆ. ನಿತ್ಯಜ್ಞಾನಕ್ಕೆ ನಿತ್ಯವಿಷಯ, ನಿತ್ಯಸಂಬಂಧಗಳು ಅವಶ್ಯವಾಗಿರಬೇಕಾದುದರಿಂದ ಆ ನಿಮ್ಮ ನಿತ್ಯಜ್ಞಾನರೂಪ ಬ್ರಹ್ಮವು ನಿತ್ಯವಾದ ವಿಷಯ. ವಿಶೇಷ ಸಹಿತವೂ ನಿತ್ಯವಾದ ಸಂಬಂಧ ವಿಶೇಷ ಸಹಿತವೂ ಆಗಿರಬೇಕಲ್ಲದೆ, ವಿಶೇಷ ರಹಿತ (ನಿರ್ವಿಶೇಷ) ವಾಗಿರಲಾರದು. ಆದುದರಿಂದ ನಿಮ್ಮ ನಿರ್ವಿಶೇಷಬ್ರಹ್ಮಕ್ಕೆ ನಿರ್ವಿಶೇಷತ್ವಭಂಗವೆಂಬ ದೋಷವೇ ಪ್ರಾಪ್ತವಾಯಿತು. ಲೋಕದಲ್ಲಿ ಯಾವುದು ಜ್ಞಾನವೋ ; ಅದು ವಿಷಯ ರಹಿತವಾಗಿಯೂ ಆಶ್ರಯ ರಹಿತವಾಗಿಯೂ ಎಂದೂ ಇರಲಾರದು. "ಅಯಂ ಘಟಃ" (ಇದು ಘಟವು) "ಘಟಮಹಂ ಜಾನಾಮಿ" (ನಾನು ಘಟವನ್ನು ತಿಳಿಯುತ್ತೇನೆ.) ಎಂಬ ವ್ಯವಸಾಯಾನುವ್ಯವಸಾಯರೂಪ ಜ್ಞಾನಗಳು ವಿಷಯ ಸಹಿತವಾಗಿಯೂ ಆಶ್ರಯ ಸಹಿತವಾಗಿಯೂ ಇರುವವಷ್ಟೆ ; ಆದುದರಿಂದ ನಿರ್ವಿಷಯ (ವಿಷಯ ರಹಿತ) ಆಶ್ರಯರಹಿತವಾದ ಜ್ಞಾನವು ಅನುಭವ ವೇದ್ಯವೆನ್ನುವುದು ತುಚ್ಛವು. ಆದ್ದರಿಂದ ಲೋಕ ವಿರುದ್ಧವಾದ ನಿರ್ವಿಷಯ ನಿರ್ವಿಶೇಷ ಜ್ಞಾನವು ಯಾವ ಕಾಲದಲ್ಲಿ ಗಗನನಿಯತ್ವ ವಿಶಿಷ್ಟವಾದ ಪುಷ್ಪವು ಸಿದ್ಧಿಸುವುದೋ ಆ ಕಾಲದಲ್ಲಿ ಮಾತ್ರ ಸಿದ್ಧಿಸಬಹುದೆಂದು ಬ್ರಹ್ಮಕ್ಕೆ ನಿರ್ವಿಶೇಷತ್ವವನ್ನು ತೃತೀಯವಿಕಲ್ಪ ಖಂಡನದಲ್ಲಿಯೇ ಖಂಡಿಸಿರುವದು.

ಇನ್ನು ನಿರ್ಗುಣತ್ವವನ್ನು ಖಂಡಿಸುತ್ತಿರುವರು:— ಆ ನಿಮ್ಮ ಬ್ರಹ್ಮವು ದ್ರವ್ಯವೋ ? ದ್ರವ್ಯವೆನ್ನುವುದಾದರೆ ಅದು ಅವಶ್ಯವಾಗಿ ಗುಣವುಳ್ಳದ್ದೇ ಆಗಬೇಕು. ಲೋಕದಲ್ಲಿ ಘಟಪಟಾದಿ ದ್ರವ್ಯಗಳು ನೀಲಪೀತಾದಿ ಗುಣವುಳ್ಳವುಗಳೇ ಆಗಿರುವುವು.

ಶಂಕಾ ;—"ಉತ್ಪನ್ನಂ ದ್ರವ್ಯಂ ಕ್ಷಣಮಗುಣಮಕ್ರಿಯಾಕಂ ಚ ತಿಷ್ಠತಿ" ಎಂಬ ನಿಯಮಕ್ಕನುಸಾರವಾಗಿ ಉತ್ಪತ್ತಿ ಕಾಲಾವಚ್ಛಿನ್ನ ಘಟದ್ರವ್ಯವು ಗುಣರಹಿತ

CC-0. Jangamwadi Math Collection. Digitized by eGangotri

ವಾಗಿರುವುದಷ್ಟೆ ; ಆದ್ದರಿಂದ ಯಾವುದು ದ್ರವ್ಯವೊ, ಅದು ಗುಣವುಳ್ಳದ್ದೇ ಆಗಿರಬೇಕೆಂಬ ನಿಯಮವಿಲ್ಲವಾದ್ದರಿಂದ ನಮ್ಮ ಬ್ರಹ್ಮವು ದ್ರವ್ಯವಾಗಿದ್ದರೂ ಗುಣರಹಿತವಾಗಿರುವುದು.

ಸಮಾಧಾನ :—ಯಾವುದು ದ್ರವ್ಯವೊ ಅದು ಗುಣವುಳ್ಳದ್ದೇ ಆಗಿರಬೇಕೆಂಬ ನಿಯಮಕ್ಕೆ ಹಾನಿಯಿಲ್ಲ. ಏಕೆಂದರೆ ಉತ್ಪತ್ತಿ ಕ್ಷಣಾವಚ್ಛಿನ್ನ ಘಟದಲ್ಲಿಯೂ ಆದ್ಯಕ್ಷಣಸಂಯೋಗವೆಂಬ ಗುಣವು ಇದ್ದೇ ಇರುವುದು. ಆದುದರಿಂದಲೇ ಅದು ದ್ರವ್ಯವೆನಿಸಿರುವುದು. ಅದರಂತೆ ಬ್ರಹ್ಮದಲ್ಲಿ ಕದಾಚಿತ್ ಯಾವುದಾದರೊಂದು ಗುಣವನ್ನು ಒಪ್ಪಿಕೊಳ್ಳುವುದಾದರೆ ಬ್ರಹ್ಮಕ್ಕೆ ನಿರ್ಗುಣತ್ವವನ್ನು ಹೇಳುವ ನಿಮ್ಮ ಸಿದ್ಧಾಂತಕ್ಕೆ ಹಾನಿಯಾಗುವುದು.

ಶಂಕಾ :—ಬ್ರಹ್ಮದಲ್ಲಿ ಗುಣಗಳು ಕಲ್ಪಿತಗಳಾಗಿರುವವಲ್ಲದೆ ವಸ್ತುತಃ ಇಲ್ಲ.

ಸಮಾಧಾನ :—ಪುನಃ ನಿರ್ವಿಶೇಷತ್ವಕ್ಕೆ ವ್ಯಾಹತಿಯಾಗುವುದು. ಏಕೆಂದರೆ ಬುದ್ಧಿಯು ಗುಣಗಳನ್ನು ಕಲ್ಪಿಸಬೇಕಾದರೆ ಅದಕ್ಕೆ ಉಪಾದಾನಕಾರಣವಾದ ಅವಿದ್ಯೆಯು ಮೊದಲೇ ಇರಬೇಕಲ್ಲವೆ ; ಆ ಉಪಾದಾನಕಾರಣರೂಪ ವಿಶೇಷವನ್ನು ಬ್ರಹ್ಮದಲ್ಲಿ ಹೇಳಿದರೆ ಅದು ನಿರ್ವಿಶೇಷವೆನಿಸಲಾರದಷ್ಟೆ ; ಇನ್ನು ಬ್ರಹ್ಮವು ಅದ್ರವ್ಯವೆನ್ನುವುದಾದರೆ ಅದು ಮತ್ತೊಂದು ದ್ರವ್ಯವನ್ನು ಆಶ್ರಯಿಸಿಕೊಂಡೇ ಇರಬೇಕು. ಅದ್ರವ್ಯವೆನಿಸಿರುವ ಗುಣಕ್ರಿಯಾದಿಗಳು ಘಟಾದಿ ದ್ರವ್ಯವನ್ನು ಆಶ್ರಯಿಸಿಕೊಂಡೇ ಇರುವವಷ್ಟೆ ; ಬ್ರಹ್ಮವೂ ಕೂಡ ಮತ್ತೊಂದು ದ್ರವ್ಯವನ್ನು ಆಶ್ರಯಿಸಿಕೊಂಡೇ ಇರುವುದೆಂದರೆ "ಸ್ವೇ ಮಹಿಮ್ನಿ" ಇತ್ಯಾದಿ ಶ್ರುತಿ ವಿರೋಧವಾಗುವುದಲ್ಲದೆ ಆಶ್ರಯಸಂಬಂಧ ವಿಶೇಷವನ್ನು ಬ್ರಹ್ಮಕ್ಕೆ ಅವಶ್ಯವಾಗಿ ಹೇಳಬೇಕಾದುದರಿಂದ ನಿರ್ವಿಶೇಷತ್ವದ ಭಂಗವೂ ಪ್ರಾಪ್ತವಾಗುವುದು. ಆದುದರಿಂದ ಈ ಪ್ರಕಾರ ಅನೇಕ ಖಂಡನಯುಕ್ತಿಗಳಿಂದ ಪ್ರಥಮ ದ್ವಿತೀಯ ಕಕ್ಷ್ಯಾಂತರಾಳದಲ್ಲಿ ಬ್ರಹ್ಮಕ್ಕೆ ಅಬಾಧಿತ್ವವಿದ್ದರೂ ತೃತೀಯಾದಿ ಕಕ್ಷ್ಯೆಗಳಲ್ಲಿ ಬ್ರಹ್ಮಕ್ಕೂ ಕೂಡ ಬಾಧಿತ್ವವು ಸಂಭವಿಸುವುದರಿಂದ ತ್ರಿಚತುರ ಕಕ್ಷ್ಯೆಗಳಲ್ಲಿ ಅಬಾಧಿತತ್ವ ಜ್ಞಾನಬಾಧ್ಯತ್ವ ಎಂಬ ಪ್ರಪಂಚ ಲಕ್ಷಣವು ಅಲಕ್ಷ್ಯವಾದ ಬ್ರಹ್ಮದಲ್ಲಿ ಬಂದುದರಿಂದ ಅತಿವ್ಯಾಪ್ತಿ ದೋಷವು ವಾರಣಮಾಡಲಶಕ್ಯವು.

ಇನ್ನು ಭಾಷ್ಯಕಾರರು ನಾಲ್ಕನೆಯ ವಿಕಲ್ಪವನ್ನು ಖಂಡಿಸಲುದ್ಯುಕ್ತರಾಗಿ "ನಾಪಿ ತತ್ತ್ವವೇದಕ ಪ್ರಮಾಣ ವಿರುದ್ಧತ್ವಂ" ಎಂಬುದಾಗಿ ಉದಾಹರಿಸುವರು. ತತ್ತ್ವವೆಂದರೆ ಯಥಾರ್ಥ ಜ್ಞಾನಕ್ಕೆ ವಿಷಯವಾಗಿರುವ ವಸ್ತು. ಇದನ್ನು ಆ ವೇದಕ (ಬೋಧಿಸುವ) ವೇದಾದಿ ಪ್ರಮಾಣಕ್ಕೆ ವಿರುದ್ಧವಾದುದು. ವ್ಯಾವಹಾರಿಕ ಪ್ರಪಂಚವು "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಶ್ರುತಿ ಸಿದ್ಧವಾದ ಬ್ರಹ್ಮವಸ್ತುವೊಂದೇ

CC-0. Jangamwadi Math Collection. Digitized by eGangotri

ತತ್ತ್ವವೆನಿಸುವುದು. ಇದಕ್ಕೆ ಬೋಧಕವಾದ ವೇದಾಂತ ಪ್ರಮಾಣಕ್ಕೆ ಅನಿತ್ಯ ಜಡವಾದ ವ್ಯಾವಹಾರಿಕ ಪ್ರಪಂಚವು ವಿರುದ್ಧವಾಗಿದೆಯಾದುದರಿಂದ ಲಕ್ಷಣ ಸಮನ್ವಯವಾಗುವುದೆಂದು ಅದ್ವೈತಿಯ ಅಭಿಪ್ರಾಯವು. ಈ ಲಕ್ಷಣವೂ ಕೂಡ ಸರ್ವ ವ್ಯಾವಹಾರಿಕ ಪ್ರಪಂಚದಲ್ಲಿ ಬರುವುದಿಲ್ಲ. ಹೇಗೆಂದರೆ ತತ್ತ್ವಾವೇದಕಗಳಾದ "ಏಕಮೇವಾದ್ವಿತೀಯಂ ಬ್ರಹ್ಮ" "ಸತ್ಯಂ ಜ್ಞಾನಮನಂತಂ ಬ್ರಹ್ಮ" ಇತ್ಯಾದಿ ಪ್ರಮಾಣಗಳಿಗೆ ತಾಲು ಹಾಗೂ ಶ್ರೋತ್ರಾದಿಗಳು ವ್ಯಂಜಕ (ಅನುಕೂಲ) ಗಳಾಗಿರುವುದರಿಂದ ವಿರುದ್ಧಗಳಾಗಿಲ್ಲವಾದುದರಿಂದ ತಾದೃಶ ಪ್ರಮಾಣ ವಿರುದ್ಧತ್ವವೆಂಬ ಲಕ್ಷಣವೂ ಕೂಡ ವ್ಯಾವಹಾರಿಕ ಪ್ರಪಂಚಾತರ್ಗತ ಶ್ರೋತ್ರಾದಿಗಳಲ್ಲಿ ಬರಲಿಲ್ಲವಾದ್ದರಿಂದ ಅವ್ಯಾಪ್ತಿದೋಷವುಂಟಾಯಿತು.

ಶಂಕಾ :—ತಾದೃಶ ಪ್ರಮಾಣಜನ್ಯ ಪ್ರಮಿತಿಗೆ ವಿಷಯವಾವುದೊ ಅದಕ್ಕೆ ವಿರುದ್ಧವಾದುದೇ ವ್ಯಾವಹಾರಿಕ ಪ್ರಪಂಚವೆಂದು ನಾವು ಹೇಳುವುದರಿಂದ ಶ್ರೋತ್ರಾದಿಗಳು ತಾದೃಶ ಸತ್ಯಜ್ಞಾನಾನಂತ ಪ್ರಮೇಯವೆಂಬ ಬ್ರಹ್ಮಕ್ಕೆ ಅಸತ್ಯ ಜಡ ಪರಿಚ್ಛಿನ್ನ ಸ್ವರೂಪದಿಂದ ವಿರುದ್ಧಗಳಾಗಿರುವುದರಿಂದ ಶ್ರೋತ್ರಾದಿ ಲಕ್ಷ್ಯೈಕ ದೇಶದಲ್ಲಿಯೂ ಲಕ್ಷಣ ಸಮನ್ವಯವಾಯಿತು.

ಸಮಾಧಾನ :—ಹೀಗೆ ಹೇಳುವುದಾದರೆ "ನೇಹನಾನಾಸ್ತಿ" ಎಂಬ ಪ್ರಮಾಣಜನ್ಯವಾದ ಪ್ರಮಿತಿ ವಿಷಯವಾದ ಪ್ರಪಂಚಾಭಾವವೂ ಕೂಡ "ಯಸ್ಮಿನ್‌ದ್ಯೌಃ" ಇತ್ಯಾದಿ ಪ್ರಮಾಣಗಮ್ಯವಾದ ಆಕಾಶಾದಿ ಪ್ರಪಂಚಕ್ಕೆ ವಿರುದ್ಧವಾಗಿರುವುದರಿಂದ ಪ್ರಪಂಚಾಭಾವವೂ ವ್ಯಾವಹಾರಿಕವೆನಿಸಬೇಕಾಗುವುದು. (ಅತಿವ್ಯಾಪ್ತಿ ದೋಷವು) ಇದಲ್ಲದೆ ಬ್ರಹ್ಮಾತಿರಿಕ್ತವಾದ ಪ್ರಪಂಚಾಭಾವವು ಸತ್ಯವೊ ; ಅಥವಾ ಅಸತ್ಯವೊ ; ಸತ್ಯವೆಂದರೆ ದ್ವೈತ ಪ್ರಸಂಗವು ಪ್ರಾಪ್ತವಾಗುವುದು.

ಇನ್ನು ಮಿಥ್ಯೆಯೆನ್ನುವುದಾದರೆ ಆ ಮಿಥ್ಯಾಭೂತ ಪ್ರಪಂಚಾಭಾವಕ್ಕೆ ಬೋಧಕವಾದ "ನೇಹನಾನಾಸ್ತಿ" ಎಂಬ ಪ್ರಮಾಣಕ್ಕೆ ತತ್ತ್ವಾವೇದಕ (ತತ್ತ್ವಬೋಧಕ) ತ್ವದ ವ್ಯಾಘಾತವಾದ್ದರಿಂದ ತಾದೃಶ ಪ್ರಮಾಣ ವಿರುದ್ಧತ್ವವು ಅಲಕ್ಷ್ಯವಾದ ಬ್ರಹ್ಮದಲ್ಲಿ ಬಂದುದರಿಂದ ಅತಿ ವ್ಯಾಪ್ತಿದೋಷವುಂಟಾಯಿತು. ಏಕೆಂದರೆ ಬ್ರಹ್ಮವು ಸತ್ಯವಾಗಿರುವುದು. ಪ್ರಪಂಚಾಭಾವವು ಮಿಥ್ಯೆಯಾಗಿರುವುದು. ಆದುದರಿಂದ ಪ್ರಪಂಚಾಭಾವವು ಬ್ರಹ್ಮಕ್ಕೆ ಭಿನ್ನವೆಂದು ಅಂಗೀಕರಿಸಲೇಬೇಕು. ಹೀಗೆ ಅಂಗೀಕರಿಸಿದರೆ ಪ್ರಪಂಚಾಭಾವಬೋಧಕವಾದ ಪ್ರಮಾಣಕ್ಕೆ ಬ್ರಹ್ಮವು ವಿರುದ್ಧವಾಯಿತು.

ಇದಲ್ಲದೆ ತತ್ತ್ವಾವೇದಕ (ತತ್ತ್ವಬೋಧಕ) ಪ್ರಮಾಣಕ್ಕೂ ಇದಕ್ಕನ್ಯವಾದ

CC-0. Jangamwadi Math Collection. Digitized by eGangotri

ಅಪ್ರಮಾಣಕ್ಕೂ ಇರುವ ಬೇಧವು ಅಸಿದ್ಧವೋ ; ಅಥವಾ ಸಿದ್ಧವೋ ; ಅಸಿದ್ಧವೆಂದರೆ ಸ್ವವಾಕ್ಯ ವ್ಯಾಘಾತವು ಹೇಗೆಂದರೆ ತತ್ವಾವೇದಕವಾದ ಬ್ರಹ್ಮತತ್ವ ವಿಷಯಕವಾದ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಇತ್ಯಾದಿ ಪ್ರಮಾಣಕ್ಕೆ "ನೇಹನಾನಾಸ್ತಿ" ಇತ್ಯಾದಿ ಪ್ರಪಂಚ ಪ್ರಪಂಚಾಭಾವಗಳಿಗೆ ಮಿಥ್ಯಾತ್ವವನ್ನು ಬೋಧಿಸುವ ಅಪ್ರಮಾಣಗಳು ಭಿನ್ನಗಳಾಗಿದ್ದರೇನೇ ತಾದೃಶಪ್ರಮಾಣ ವಿರುದ್ಧತ್ವವು ಪ್ರಪಂಚ ಪ್ರಪಂಚಾಭಾವದಲ್ಲಿ ಬರಬೇಕು. ಆದ್ದರಿಂದ ಅವುಗಳ ಭೇದವನ್ನು ಒಪ್ಪುವ ನಿಮ್ಮ ವಾಕ್ಯಕ್ಕೆ ಆ ಬೇಧವು ಅಸಿದ್ಧವೆಂದರೆ ವಿರೋಧವಾಗಲಿಲ್ಲವೆ; ಇನ್ನು ಭೇದವು ಸಿದ್ಧವೆನ್ನುವುದಾದರೆ ಅಂತಹ ಪ್ರಮಾಣಕ್ಕೆ ಅನ್ಯವಾದ ಅಪ್ರಮಾಣದಿಂದ ಯಾವ ವಿಷಯವೂ ಸಿದ್ಧವಾಗದೇ ಇರುವುದರಿಂದ ಪ್ರಮಾಣಸಿದ್ಧವಾದ ಭೇದಕ್ಕೆ ಸತ್ಯತ್ವವು ಪ್ರಾಪ್ತವಾಗುವುದರಿಂದ ಆ ಭೇದಾತ್ಮಕವಾದ ಪ್ರಪಂಚಕ್ಕೆ ವ್ಯಾವಹಾರಿಕತ್ವದ ಭಂಗವೇ ಉಂಟಾಯಿತು.

ಇನ್ನು ಆ ಭೇದವು ಅಸತ್ಯವೆನ್ನುವುದಾದರೆ ಅದೇ ಸ್ವವಾಕ್ಯ ವ್ಯಾಘಾತವೇ ಬರುವುದು. ಏಕೆಂದರೆ ತತ್ವಾವೇದಕ ಹಾಗೂ ಅತತ್ವಾವೇದಕಗಳ ಭೇದವು ಅಸತ್ಯವಾದರೆ ಅವುಗಳಿಗೆ ಅಭೇದವು ಸತ್ಯವಾಯಿತು. ಅಂದಮೇಲೆ ತತ್ವಾವೇದಕ ಪ್ರಮಾಣ ವಿರುದ್ಧತ್ವವೆಂಬ ನಿಮ್ಮ ವಾಕ್ಯಕ್ಕೆ ವಿರೋಧವುಂಟಾಯಿತು. ಅತತ್ವಾವೇದಕವಾದ ಅಪ್ರಮಾಣವು ಇದ್ದರಲ್ಲವೆ ; ಆ ನಿಮ್ಮ ತತ್ವಾವೇದಕ ಪ್ರಮಾಣ ವಿರುದ್ಧವಾಗುವುದು. ಪ್ರಪಂಚವೆನ್ನುವ ವಾಕ್ಯವು ಸಂಗತವಾಗಬೇಕು. ಅದು ಅದಕ್ಕೆ ಅಭಿನ್ನವಾಗಿ ಇಲ್ಲದ್ದರಿಂದ ಅಸಂಗತವಾಯಿತು. ಯಾವುದರ ಭೇದಕ್ಕೆ ಮಿಥ್ಯಾತ್ವವೋ ; ಅದರ ಅಭೇದವು ಸತ್ಯವಾಗಿರುವುದೆಂದು ಮೊದಲೇ ಹೇಳಿರುವೆವು. ಘಟದಲ್ಲಿ ಘಟದ ಭೇದವು ಮಿಥ್ಯೆಯಾಗಿರುವುದರಿಂದ ಅಭೇದವು ಸತ್ಯವೆಂದು ದೃಷ್ಟಾಂತವನ್ನು ಈ ಮೊದಲೇ ಹೇಳಿರುವೆವು.

ಇನ್ನು ಅರ್ಥಕ್ರಿಯಾಶೂನ್ಯವಾದುದೂ ಕೇವಲ ಪ್ರತೀತಿಗೆ ವಿಷಯವಾದುದೂ ವ್ಯಾವಹಾರಿಕ ಪ್ರಪಂಚವೆನ್ನುವ ಐದನೆಯ ವಿಕಲ್ಪವನ್ನು ಖಂಡಿಸುತ್ತಾರೆ. ಹೇಗೆಂದರೆ ಶುಕ್ತಿಯೆಂಬ ಅಧಿಷ್ಠಾನದಲ್ಲಿ ತೋರುವ ರಜತದಂತೆ ಅರ್ಥಕ್ರಿಯಾಶೂನ್ಯವಾಗಿ ಬ್ರಹ್ಮವೆಂಬ ಅಧಿಷ್ಠಾನದಲ್ಲಿ ಈ ಪರಿದೃಶ್ಯಮಾನವಾದ ಘಟಪಟಾದಿ ಪ್ರಪಂಚವು ತೋರುವುದರಿಂದ ಆ ತೋರಿಕೆಗೆ ವಿಷಯವಾದುದೇ ವ್ಯಾವಹಾರಿಕ ಪ್ರಪಂಚವಲ್ಲವೆ ; ಹೀಗೆ ಹೇಳಿದರೆ ನಮ್ಮೊಡನೆ ವಾದಮಾಡುವುದಾದರೂ ಆ ವಾದದಲ್ಲಿ ನಿಮಗೆ ಪ್ರವೃತ್ತಿಯೆಂಬ ಕೃತಿಯಾದರೂ ಹಾಗೂ ಆ ಪ್ರವೃತ್ತಿಗೆ ಅನುಕೂಲಗಳಾದ ಲೌಕಿಕ ದೃಷ್ಟಾಂತಗಳಾದರೂ ಹಾಗೂ ಅದಕ್ಕೆ ತಕ್ಕ ವೈದಿಕ ಪ್ರಮಾಣಗಳಾದರೂ ಎಲ್ಲವೂ ಅರ್ಥ (ಪ್ರಯೋಜನ) ಕ್ರಿಯಾಶೂನ್ಯಗಳೇ ಆಗುವುದರಿಂದ ಅರ್ಥಕ್ರಿಯಾಶೂನ್ಯವಾದ

CC-0. Jangamwadi Math Collection. Digitized by eGangotri

ಗಗನೀಯತ್ವ ವಿಶಿಷ್ಟ ಕುಸುಮದಂತೆ ವ್ಯರ್ಥವೂ, ಅಸತ್ಯವೂ, ತುಚ್ಛವೂ ಆಗಿ ಹೋಗುವುದರಿಂದ ನಿಮ್ಮ ಕ್ರಿಯಾ ಹಾಗೂ ನಿಮ್ಮ ವಚನ (ವಾದ) ಗಳಿಗೆ ವ್ಯಾಘಾತ ದೋಷವೇ ಪ್ರಾಪ್ತವಾಯಿತು. ಈ ವ್ಯಾಘಾತವು ದಂಡವು ದುಷ್ಟ ಸರ್ಪವನ್ನು ಹೇಗೋ ಹಾಗೆ ನಿಮ್ಮನ್ನು ನರ್ವೊಡನೆ ಮಾಡುವ ವಾದವೆಂಬ ನರ್ತನ (ಅಭಿನಯ) ದಿಂದ ನಿವೃತ್ತಿಗೊಳಿಸುತ್ತದೆ. ಇಲ್ಲಿಗೆ ನಿಮ್ಮ ವಾದವು ನಿಂತುಹೋಗಿ ಮುಖ ಬಂಧನವಾಗುತ್ತದೆ.

ಶಂಕಾ :—ಹಾಗಲ್ಲ. ನಮ್ಮ ಅಭಿಪ್ರಾಯವು ಕಿಂತು "ಅರ್ಥಕ್ರಿಯಾಭ್ಯಾಂ ಅಶೂನತ್ವ" ಎಂದು ನಞರ್ಅರ್ಥವನ್ನು ಪ್ರಶ್ಲೇಷಮಾಡಿಕೊಂಡು ಅರ್ಥಕ್ರಿಯಾಶೂನ್ಯ ತ್ವಾಭಾವವುಳ್ಳದ್ದೂ ಪ್ರತೀತಿಗೆ ವಿಷಯವಾದುದೂ ಆದ ವ್ಯಾವಹಾರಿಕ ಪ್ರಪಂಚ ವೆನ್ನುತ್ತೇವೆ. ಆದ್ದರಿಂದ ನಮ್ಮ ಮುಖಬಂಧವಿಲ್ಲ.

ಸಮಾಧಾನ :—ಹೀಗೆ ಹೇಳಿದರೆ ಸರ್ವಾರ್ಥಗಳಿಗೂ ಮೂಲಭೂತವಾಗಿರುವ ಬ್ರಹ್ಮದಲ್ಲಿ ಅತಿ ವ್ಯಾಪ್ತಿದೋಷವು ಬರುವದು.

ಶಂಕಾ :—ಅವಿದ್ಯಾವಚ್ಛಿನ್ನ ಚೈತನ್ಯ (ಬ್ರಹ್ಮ) ಕ್ಕೆ ಮಾತ್ರ ಅರ್ಥಕ್ರಿಯಾ ಕಾರಿತ್ವವಲ್ಲದೆ ಶುದ್ಧ ಬ್ರಹ್ಮಕ್ಕೆ ಇಲ್ಲವಾದ್ದರಿಂದ ಅತಿವ್ಯಾಪ್ತಿದೋಷವಿಲ್ಲ. ಅವಿ ದ್ಯಾವಚ್ಛಿನ್ನ (ವಿಶಿಷ್ಟ) ಬ್ರಹ್ಮಕ್ಕೆ ವ್ಯಾವಹಾರಿಕ ಪ್ರಪಂಚಾಂತರ್ಗತತ್ವವು ನಮಗಿಷ್ಟ ವೇ ಆಗಿರುವದು.

ಶಂಕಾ :—ಹಾಗಾದರೆ ವಿಶಿಷ್ಟ ಬ್ರಹ್ಮಕ್ಕೆ ಪ್ರಪಂಚದಂತೆ ಜ್ಞಾನದಿಂದ ನಿವೃತ್ತಿ ಯನ್ನು ಹೇಳಬೇಕಾಗುವುದು. ಅದರಿಂದ ನಮಗಾವ ಕ್ಷತಿಯೂ ಇಲ್ಲ.

ಸಮಾಧಾನ :—"ನ ಹಿ ವಿಶಿಷ್ಟಂ ವಿಶೇಷಣ ವಿಶೇಷ್ಯ ಸಂಬಂಧೇಭ್ಯೋಽತಿ ರಿಚ್ಯತೆ" ಎಂಬ ನಿಯಮಾನುಸಾರವಾಗಿ ವಿಶೇಷ್ಯವೆನಿಸುವ ಶುದ್ಧ ಬ್ರಹ್ಮಕ್ಕೂ ಕೂಡ ನಿವೃತ್ತಿಯು ಸಂಭವಿಸಿ ಶೂನ್ಯವಾದ ಸಾಮ್ರಾಜ್ಯ ಪ್ರಸಂಗವು ಬರುವುದು. "ವಿಶಿಷ್ಟಃ ಶುದ್ಧಾನ್ನಾತಿರಿಚ್ಯತೆ" ಎಂಬುದನ್ನು ತಾರ್ಕಿಕರೂ ಕೂಡ ಒಪ್ಪುತ್ತಾರಲ್ಲವೆ? ಇದಲ್ಲದೆ ಅವಿದ್ಯಾ ನಿವೃತ್ತಿರೂಪವಾದ ಅರ್ಥಕ್ರಿಯೆಗೆ ಹೇತುವಾದ ಯಾವ ಚರಮ (ಕಡೆಯ) ಅಂತಃಕರಣವೃತ್ತಿ (ಅಹಂ ಬ್ರಹ್ಮಾಸ್ಮಿ ಎಂಬ ವೃತ್ತಿ) ಇದೆಯೋ ಅದಕ್ಕೆ ವಿಷಯ ವಾದ ಶುದ್ಧ ಬ್ರಹ್ಮದಲ್ಲಿ ಅತಿ ವ್ಯಾಪ್ತಿದೋಷವು ಬರುವದು. ಏಕೆಂದರೆ ಅವಿದ್ಯಾ ನಿವೃತ್ತಿತ್ವಾವಚ್ಛಿನ್ನ ಪ್ರಕಾಶವೇ ಕಾರಣವು. ಹಾಗೂ ಅನಾತ್ಮ ವಿಷಯಕಾವಿದ್ಯಾ ನಿವೃತ್ತಿತ್ವಾವಚ್ಛಿನ್ನ ತಾದೃಶ ಪ್ರಕಾಶವೇ ಕಾರಣವು. ಎಂಬುದೆ ನಿಮ್ಮ ಕಾರ್ಯ ಕಾರಣಭಾವವು. ಹೀಗೆ ಕಾರ್ಯಕಾರಣಭಾವವನ್ನು ಸ್ವೀಕರಿಸಿ ಬ್ರಹ್ಮದ ಸ್ವರೂಪ

CC-0. Jangamwadi Math Collection. Digitized by eGangotri

ಪ್ರಕಾಶವು ಬ್ರಹ್ಮವನ್ನು ತನಗೆ ವಿಷಯವನ್ನಾಗಿ ಮಾಡಿಕೊಳ್ಳದೆ ಅವಿದ್ಯೆಯನ್ನು ನಿವೃತ್ತಿಗೊಳಿಸುತ್ತದೆಂಬುವುದೇ ನಿಮ್ಮ ಸಿದ್ಧಾಂತವಲ್ಲವೆ! ಆದ್ದರಿಂದ ಬ್ರಹ್ಮದಲ್ಲಿ ಅತಿವ್ಯಾಪ್ತಿ ದೋಷವಲ್ಲದೆ ಪ್ರಾತಿಭಾಸಿಕಗಳಾದ ರಜ್ಜು ಆದಿಗಳೇ ಅದಿಷ್ಠಾನವಾಗಿವುಳ್ಳ. ಸರ್ಪಾದಿಗಳು ಭಯಕಂಪಾದಿ ಅರ್ಥಕ್ರಿಯಾ ಹೇತುಗಳಾದುದರಿಂದ ಪ್ರಾತಿಭಾಸಿಕ ಸರ್ಪಾದಿಗಳಲ್ಲಿಯೂ ಅತಿವ್ಯಾಪ್ತಿ ದೋಷವು ಬರುತ್ತದೆ. ಹಾಗೂ ಆಗಲೇ ಹುಟ್ಟಿ ನಷ್ಟಗಳಾದ (ಹುಟ್ಟುತ್ತಲೇ ನಷ್ಟಗಳಾದ) ಘಟಾದಿಗಳು ಜಲಾನಯನಾದಿ ಅರ್ಥಕ್ರಿಯಾಹೇತುಗಳಾಗದಿರುವದರಿಂದ ಅವುಗಳಲ್ಲಿ ಅರ್ಥಕ್ರಿಯಾ ಶೂನ್ಯತ್ವಾಭಾವ (ಅರ್ಥಕ್ರಿಯಾಕಾರಿತ್ವ) ವು ಬರಲಿಲ್ಲವಾದ್ದರಿಂದ ಲಕ್ಷ್ಯೈಕ ದೇಶಗಳಾದ ಘಟಾದಿಗಳಲ್ಲಿ ಲಕ್ಷಣವು ಬರಲಿಲ್ಲವಾದ್ದರಿಂದ ಅವ್ಯಾಪ್ತಿದೋಷವುಂಟಾಯಿತು. ಹಾಗೂ ಕಾರ್ಯೋತ್ಪತ್ತಿಗಿಂತಲೂ ಅವ್ಯವಹಿತ ಪೂರ್ವಕ್ಷಣಗಳೂ ಅವುಗಳಲ್ಲಿ ಹುಟ್ಟಿದ ಕಾರ್ಯಗಳೂ ಯಾವ ಅರ್ಥಕ್ರಿಯೆಗಳಿಗೂ ಹೇತುಗಳಾಗಿಲ್ಲವಾದ್ದರಿಂದ ಅವುಗಳಲ್ಲಿ ಅವ್ಯಾಪ್ತಿ ದೋಷವು ಬಂದಿತು. ಏಕೆಂದರೆ ಅವುಗಳಲ್ಲಿ ಅರ್ಥಕ್ರಿಯೆಗಳು ಕಂಡುಬರುವದಿಲ್ಲವಷ್ಟೆ! ಇದಲ್ಲದೆ "ಯದಾ ಕರ್ಮಸು ಕಾಮ್ಯೇಷು ಸ್ತ್ರಿಯಂ ಸ್ವಪ್ನೇಷು ಪಶ್ಯತಿ । ಸಮೃದ್ಧಿಂ ತತ್ರ ಜಾನೀಯಾತ್ತಸ್ಮಿನ್ಸ್ವಪ್ನ ನಿದರ್ಶನೇ" (ಛಾಂ. ೫-೨-೮) "ಪುರುಷಂ ಕೃಷ್ಣಂ ಕೃಷ್ಣದಂತಂ ಪಶ್ಯತಿ ಸ ಏನಂ ಹಂತಿ" (ಐ.ಆರ. ೩-೨-೪-೭-೧೭) ಇತ್ಯಾದಿ ಶ್ರುತ್ಯನುಸಾರವಾಗಿ ಸ್ತ್ರೀ ದರ್ಶನಾದಿ ಶುಭ ಸೂಚಕ ಸ್ವಪ್ನವೂ ಕೃಷ್ಣದಂತ ಕೃಷ್ಣಪುರುಷ ದರ್ಶನಾದಿ ಅಶುಭಸೂಚಕ ಸ್ವಪ್ನವೂ ಆ ಸ್ವಪ್ನಕಾಲದಲ್ಲಿ ಉಂಟಾಗುವ ಅರ್ಥಕ್ರಿಯಾ ಹೇತುಗಳಾಗಿರುವುದರಿಂದ ಆ ಶುಭಾಶುಭ ಸೂಚಕ ಸ್ವಪ್ನಗಳಲ್ಲಿ ಅತಿವ್ಯಾಪ್ತಿ ದೋಷವುಂಟಾಯಿತು.

ಇನ್ನು ವ್ಯಾವಹಾರಿಕ ಪ್ರಪಂಚಕ್ಕೆ "ವ್ಯಾವಹಾರಿಕಾರ್ಥ ಕ್ರಿಯಾಕಾರಿತ್ವೇ ಸತಿ ಪ್ರತೀತಿವಿಷಯತ್ವಂ" (ವ್ಯಾವಹಾರಿಕವಾದ ಅರ್ಥಕ್ರಿಯಾ ಹೇತು ಭೂತವೂ ಪ್ರತೀತಿಗೆ ವಿಷಯವಾದುದೂ ವ್ಯಾವಹಾರಿಕ ಪ್ರಪಂಚವು) ಎಂದು ಲಕ್ಷಣವನ್ನು ಮಾಡಿದರೆ ಶುಭಾಶುಭ ಸೂಚಕ ಸ್ವಪ್ನಗಳಲ್ಲಿ ಅತಿವ್ಯಾಪ್ತಿ ದೋಷವೇನೋ ಪರಿಹಾರವಾಗುವದು. ಏಕೆಂದರೆ ಸ್ವಪ್ನಗಳು ಪ್ರಾತಿಭಾಸಿಕಗಳಲ್ಲವೆ ; ಆದರೂ ಆತ್ಮಾಶ್ರಯವಾಗುವದು. ವ್ಯಾವಹಾರಿಕ ಪ್ರಪಂಚ ಸ್ವರೂಪದ ಜ್ಞಾನಕ್ಕಾಗಿ ಅದರ ಲಕ್ಷಣವನ್ನು ಮಾಡಬೇಕಾಗುವದು. ಲಕ್ಷಣದಲ್ಲಿ ವ್ಯಾವಹಾರಿಕ ಪ್ರಪಂಚವು ಸೇರಿದ ಮೇಲೆ ಆತ್ಮಾಶ್ರಯ (ತನ್ನನ್ನು ತಾನು ಆಶ್ರಯ ಮಾಡಿದ) ದೋಷವು.

ಇನ್ನು ಲಕ್ಷಣ ಘಟಿತವಾದ ವ್ಯಾವಹಾರಿಕತ್ವ ಜ್ಞಾನವಾಗದೇ ಲಕ್ಷ್ಯಜ್ಞಾನವಾಗುವ ಹಾಗಿಲ್ಲ. ಲಕ್ಷ್ಯಜ್ಞಾನವಾಗದೆ ಲಕ್ಷಣಜ್ಞಾನವಾಗುವ ಹಾಗಿಲ್ಲವಾದ್ದರಿಂದ ಅನ್ಯೋನ್ಯಾಶ್ರಯಾದಿ ದೋಷಗಳಿಗೂ ಅವಕಾಶವಾಗುವದು. ಅರ್ಥಕ್ರಿಯಾಪದಾರ್ಥ

CC-0. Jangamwadi Math Collection. Digitized by eGangotri

ವೆಂದರೆ ಸ್ವರ್ಣದ ಕಟಕ-ಮುಕುಟಾದಿ ಪರಿಣಾಮದಂತೆ ಪರಿಣಾಮವೆಂದು ಹೇಳುತ್ತೇವೆ. ಅಂದರೂ ದೋಷವು ಪರಿಹಾರವಾಗುವದಿಲ್ಲ. ಸ್ವಪ್ನಗಳಲ್ಲಿ ಅತಿವ್ಯಾಪ್ತಿ ದೋಷವು ಬಂದೇಬರುವದು. ಏಕೆಂದರೆ ಸ್ವಪ್ನ ಪದಾರ್ಥಗಳೂ ಪರಿಣಾಮಸ್ವರೂಪಗಳೇ ಆಗಿರುವವು. ಇದಲ್ಲದೆ ಆಗಲೇ ಹುಟ್ಟಿ ನಷ್ಟಗಳಾದ ಘಟಾದಿಗಳಲ್ಲಿ ಅವ್ಯಾಪ್ತಿ ದೋಷವು ಬರುವದು. ಅವುಗಳಲ್ಲಿ ಯಾವ ಅರ್ಥಕ್ರಿಯಾ ಪರಿಣಾಮವೂ ಇಲ್ಲವಷ್ಟೆ. ಒಂದು ಪಕ್ಷದಲ್ಲಿ ಈ ಅವ್ಯಾಪ್ತಿದೋಷ ಪರಿಹಾರಕ್ಕಾಗಿ "ಅರ್ಥಕ್ರಿಯಾಕಾರಣತಾವಚ್ಛೇದಕ ಜಾತ್ಯಾಶ್ರಯತ್ವೇ ಸತಿ ಪ್ರತೀತಿ ವಿಷಯತ್ವಂ" ಎಂದು ಲಕ್ಷಣ ಮಾಡಿದರೆ ಅರ್ಥಕ್ರಿಯಾಕಾರಣತಾವಚ್ಛೇದಕ ರೂಪವಾದ ಯಾವ ಪೃಥಿವೀತ್ವಾದಿ ಜಾತಿಯೊ; ಆ ಜಾತಿಗೆ ಆಶ್ರಯವು ಉತ್ಪನ್ನಧ್ವಸ್ತ ಘಟಾದಿಗಳು ಆ ಘಟಾದಿಗಳಲ್ಲಿ ಅಂತಹ ಜಾತ್ಯಾಶ್ರಯತ್ವವೂ ಪ್ರತೀತಿವಿಷಯತ್ವವೂ ಬಂದುದರಿಂದ ಲಕ್ಷಣ ಸಮನ್ವಯವಾಗುವದು. ಆದರೂ ಪ್ರಾತಿಭಾಸಿಕ ಶುಕ್ತಿ ರಜತಾದಿಗಳಲ್ಲಿ ಅತಿವ್ಯಾಪ್ತಿದೋಷವು ವಾರಣವಾಗುವದಿಲ್ಲ. ಅವುಗಳಲ್ಲಿ ತಾದೃಶ ರಜತತ್ವಾದಿ ಜಾತ್ಯಾಶ್ರಯತ್ವವೂ ಪ್ರತೀತಿ ವಿಷಯತ್ವವೂ ಇದ್ದೇ ಇರುವದು.

ಶಂಕಾ :—ಪ್ರಾತಿಭಾಸಿಕ ರಜತಾದಿಗಳಲ್ಲಿ ತಾದೃಶಕಾರಣತಾವಚ್ಛೇದಕ ಜಾತ್ಯಾಶ್ರಯತ್ವವು ಇಲ್ಲದಿರುವದರಿಂದ ಅತಿವ್ಯಾಪ್ತಿದೋಷವಿಲ್ಲ. ಆ ಪ್ರಾತಿಭಾಸಿಕ ರಜತಾದಿಗಳಲ್ಲಿ ಅರ್ಥಕ್ರಿಯಾ ಕಾರಣತಾವಚ್ಛೇದಕ ರಜತ್ವಾದಿ ಜಾತ್ಯಾಶ್ರಯತ್ವವು ಇರುವುದಿಲ್ಲವೆನ್ನುವದಾದರೆ

ಸಮಾಧಾನ:—ನಿಮ್ಮ ಶುಕ್ತಿರಜತ, ಪ್ರಾತಿಭಾಸಿಕ ರಜತವೆನ್ನುವ ವ್ಯವಹಾರವು ನಿರ್ನಿಮಿತ್ತವಾಗುವದರಿಂದ ಆ ವ್ಯವಹಾರವೇ ಉಪಪನ್ನವಾಗಲಾರದು. ಇದಲ್ಲದೆ ಸ್ವಪ್ನಪ್ರಪಂಚದಲ್ಲಿ ಅರ್ಥಕ್ರಿಯಾ ಶೂನ್ಯತ್ವ ಪ್ರಸಂಗವು ಬರುವದು. ಏಕೆಂದರೆ ಶುಭಾಶುಭ ಸೂಚಕ ಸ್ತ್ರೀಕಾಲ ಪುರುಷಾದಿಗಳಲ್ಲಿ ಸ್ತ್ರೀತ್ವ, ಪುರುಷತ್ವ, ಜಾತ್ಯಾಶ್ರಯತ್ವವನ್ನು ನೀವು ಒಪ್ಪುವುದಿಲ್ಲವಷ್ಟೆ ?

ಇನ್ನು ಈ ಐದನೆಯ ವಿಕಲ್ಪವನ್ನು ಬೇರೆ ಕಡೆಯಲ್ಲಿ ವಿಸ್ತಾರವಾಗಿ ಖಂಡಿಸುವೆನೆಂಬುದನ್ನು "ಇತ್ಯನ್ಯತ್ರ ವಿಸ್ತರಃ" ಎಂಬ ಭಾಷ್ಯಪಂಕ್ತಿಯಿಂದ ತೋರಿಸಿ ಭಾಷ್ಯಕಾರರು ಆರನೆಯ ವಿಕಲ್ಪವನ್ನು ಖಂಡಿಸಲುದ್ಯುಕ್ತರಾಗಿದ್ದಾರೆ.

ಶಂಕಾ :—ಕರಣದೋಷದಿಂದ ಉಪಹಿತವಾದ ಜ್ಞಾನಕ್ಕೆ ಯಾವುದು ವಿಷಯವೋ; ಅದೇ ವ್ಯಾವಹಾರಿಕ ಪ್ರಪಂಚವೆನ್ನುವದೇ ಆರನೆಯ ವಿಕಲ್ಪವು. ಘಟಪಟಾದಿ ಪ್ರಪಂಚವು ಚಕ್ಷುರಾದಿಕರಣಜನ್ಯ ಜ್ಞಾನಕ್ಕೆ ವಿಷಯವಾಗಿರುವದು. ಹಾಗೂ ಆ

CC-0. Jangamwadi Math Collection. Digitized by eGangotri

ಕರಣಗಳು ಯಾವುದೊಂದು ದೋಷದಿಂದ ಯುಕ್ತಗಳೇ ಆಗಿರುವವಾದುದರಿಂದ ಘಟಪಟಾದಿ ವ್ಯಾವಹಾರಿಕ ಪ್ರಪಂಚದಲ್ಲಿ ಲಕ್ಷಣ ಸಮನ್ವಯವಾಯಿತು.

ಸಮಾಧಾನ :—ಶುಕ್ತಿ ರಜತಗಳಲ್ಲಿ ಅತಿವ್ಯಾಪ್ತಿ ದೋಷವು ಬರುವುದು. ಏಕೆಂದರೆ ಶುಕ್ತಿಯಲ್ಲಿ ಇದು ರಜತವೆನ್ನುವ ಜ್ಞಾನವು ದೂರಸ್ಥತ್ವ, ಅಥವಾ ಮಂದ ಪ್ರಕಾಶ ಇತ್ಯಾದಿ ದೋಷಯುಕ್ತವಾದ ಚಕ್ಷುರಿಂದ್ರಿಯವೆಂಬ ಕರಣಜನ್ಯವಾಗಿರುವುದು. ಈ ಜ್ಞಾನಕ್ಕೆ ವಿಷಯವು ತಾದೃಶ ವಿಷಯತ್ವವು ಶುಕ್ತಿರಜತದಲ್ಲಿ ಬಂದುದರಿಂದ ಅಲಕ್ಷ್ಯವಾದ ಈ ಪ್ರಾತಿಭಾಸಿಕ ರಜತದಲ್ಲಿ ಅತಿವ್ಯಾಪ್ತಿದೋಷವುಂಟಾಯಿತು. ಇದಲ್ಲದೆ ಅಬಾಧಿತವೂ ಅದುಷ್ಟೇಂದ್ರಿಯ ಜನ್ಯವೂ ಆದ ಸರ್ವಜನ ಜ್ಞಾನಕ್ಕೆ ವಿಷಯಗಳಾದ ಘಟಾದಿ ವ್ಯಾವಹಾರಿಕ ಪ್ರಪಂಚದಲ್ಲಿ ದೋಷಯುಕ್ತ (ದುಷ್ಟ) ಕರಣಜನ್ಯ ಜ್ಞಾನ ವಿಷಯತ್ವವೆಂಬ ಲಕ್ಷಣವು ಬಾರದಿರುವುದರಿಂದ ಅಸಂಭವ ದೋಷವೇ ಬರುವುದು.

ಶಂಕಾ :—ಮನುಷ್ಯರ ಚಕ್ಷುರಾದಿಕರಣಗಳಲ್ಲಿ ಯಾವದಾದರೊಂದು ದೋಷ (ಅಜ್ಞಾನ) ವಿರುವದರಿಂದ ಅವು ಅದುಷ್ಟಗಳಾಗದೇ ದುಷ್ಟಗಳೇ ಆಗುವವಾದ್ದರಿಂದ ಅಸಂಭವ ದೋಷವಿಲ್ಲ.

ಸಮಾಧಾನ :—ಹಾಗಾದರೆ "ಯತೋ ವಾ ಇಮಾನಿ ಭೂತಾನಿ ಜಾಯಂತೆ" "ಆತ್ಮನಃ ಆಕಾಶಃ ಸಂಭೂತಃ" "ಯಸ್ಮಿನ್‌ದ್ಯೌಃ ಪೃಥಿವೀ" ಇತ್ಯಾದಿ ಶ್ರುತಿಗಳೆಂಬ ಕರಣಗಳು ಅದುಷ್ಟಗಳಾಗಿರುವದರಿಂದ ಇಂತಹ ದೋಷರಹಿತ ಶ್ರುತಿ ಜನ್ಯ ಜ್ಞಾನ ವಿಷಯತ್ವವೇ ಆಕಾಶಾದಿ ಸರ್ವ ಪ್ರಪಂಚದಲ್ಲಿ ಬಂದು ನಿಮ್ಮ ಆ ಲಕ್ಷಣವು ಬಾರದಿರುವದರಿಂದ ಅಸಂಭವ ದೋಷವೇ ಪ್ರಾಪ್ತವಾಯಿತು.

ಶಂಕಾ :—ಶ್ರುತಿಗಳು ದೋಷರಹಿತಗಳೆಂದು ನೀವು ತಿಳಿದಿರುವದು ತಪ್ಪು. ಏಕೆಂದರೆ ಶ್ರುತಿಗಳೂ ಸಹ ಅವಿದ್ಯೆಯೆಂಬ ದೋಷವುಳ್ಳವುಗಳೇ ಆಗಿರುವದರಿಂದ ಆ ದೋಷಯುಕ್ತ ಶ್ರುತಿಜನ್ಯಜ್ಞಾನ ವಿಷಯತ್ವವು ಸರ್ವಪ್ರಪಂಚದಲ್ಲಿ ಬಂದುದರಿಂದ ಅಸಂಭವ ದೋಷವಿಲ್ಲ.

ಸಮಾಧಾನ :—ಹೀಗೆ ನೀವು ತಿಳಿಯುವದು ತಪ್ಪಾಗದಿದ್ದರೆ ಅಂತಹ ಶ್ರುತಿಗಳಿಂದ ಜನ್ಯವಾದ ಜ್ಞಾನಕ್ಕೆ ಅಲಕ್ಷ್ಯವಾದ ಬ್ರಹ್ಮವು ವಿಷಯವಾಗಿ ಅದರಲ್ಲಿ ತಾದೃಶ (ಅಂತಹ) ವಿಷಯತ್ವವು ಬಂದುದರಿಂದ ಅತಿವ್ಯಾಪ್ತಿದೋಷವು ಬರುವದು.

ಶಂಕಾ :—ಬ್ರಹ್ಮವು ಪ್ರಮಾಣಾಂತರದಿಂದ ಬಾಧಿಸಲ್ಪಡದಿರುವದರಿಂದ ಆ ಬ್ರಹ್ಮ ವಿಷಯಕಗಳಾದ "ಸತ್ಯಂ ಜ್ಞಾನಮನಂತಂ ಬ್ರಹ್ಮ" "ಏಕಮೇವಾದ್ವಿತೀಯಂ

CC-0. Jangamwadi Math Collection. Digitized by eGangotri

ಬ್ರಹ್ಮ" ಇತ್ಯಾದಿ ಶ್ರುತಿಗಳಿಂದ ಜನ್ಯವಾದ ಜ್ಞಾನವು ಕರಣದೋಷೋಪಹಿತವಾಗಿಲ್ಲ ವಾದ್ದರಿಂದ ತಾದೃಶ ಲಕ್ಷಣವು ಬರಲಿಲ್ಲವು. ಆದುದರಿಂದ ಅತಿವ್ಯಾಪ್ತಿ ದೋಷವಿಲ್ಲ.

ಸಮಾಧಾನ :—"ಅಥಾತ ಆದೇಶೋನೇತಿ" "ನಾ ಸದಾಸೀನ್ನೋಸದಾಸೀತ್ತದಾನೀಂ" "ಪುರಸ್ತಾನ್ನ ಸನ್ನಾಸನ್ನ ಸದಸತ್" ಇತ್ಯಾದಿ ಶ್ರುತಿಗಳಿಂದಲೂ ಪೂರ್ವೋದಾಹೃತಗಳಾದ "ಯತೋ ವಾ ಇಮಾನಿ ಭೂತಾನಿ ಜಾಯಂತೇ" "ಆತ್ಮನ ಆಕಾಶಃ ಸಂಭೂತಃ" "ಯಸ್ಮಿನ್ದ್ಯೌಃ ಪೃಥಿವೀ" ಇತ್ಯಾದಿ ಶ್ರುತಿಗಳಿಂದಲೂ ಬ್ರಹ್ಮಕ್ಕೂ ಕೂಡ ಬಾಧೆಯಿರುವದರಿಂದ ಬ್ರಹ್ಮವಿಷಯಕ ಶ್ರುತಿಜನ್ಯ ಜ್ಞಾನವೂ ಕರಣದೋಷೋಪಹಿತವೇ ಆಗಿರುವದಾದುದರಿಂದ ಬ್ರಹ್ಮದಲ್ಲಿ ಅತಿವ್ಯಾಪ್ತಿ ದೋಷವು ಬಂದಿತು. ಇನ್ನು ಶ್ರುತಿಗಳಿಗೆ ಬ್ರಹ್ಮ ನಿಷೇಧವಿಲ್ಲವೆ ಅರ್ಥಾಂತರವನ್ನು ವರ್ಣಿಸುವದಾದರೆ ಪ್ರಪಂಚ ನಿಷೇಧವಿಲ್ಲವೆ ಅರ್ಥಾಂತರವನ್ನು ವರ್ಣಿಸಲಿಕ್ಕೆ ಬಂದೇ ಬರುವದಾದುದರಿಂದ ಆ ಅರ್ಥಾಂತರ ವರ್ಣನದಿಂದ ಪ್ರಯೋಜನವಿಲ್ಲ. ಇದಲ್ಲದೆ ಅಧಿಷ್ಠಾನ ಸತ್ತಾರೂಪವಾದುದೂ "ಘಟಸ್ಸನ್ ಪಟಸ್ಸನ್" ಇತ್ಯಾದಿ ಸರ್ವಪ್ರತೀತಿಗೆ ವಿಷಯವಾದುದೂ ಆದ ಬ್ರಹ್ಮದಲ್ಲಿ ಅತಿವ್ಯಾಪ್ತಿ ದೋಷವು ಬರುವದು.

ಶಂಕಾ :—ತಾದೃಶ (ಅಂತಹ) ಜ್ಞಾನವಿಷಯತ್ವವೆಂದರೆ ಪ್ರಕಾರತಾಖ್ಯ ವಿಷಯತ್ವವೆಂದು ನಾವು ಹೇಳುವದರಿಂದ ಬ್ರಹ್ಮದಲ್ಲಿ ಅತಿವ್ಯಾಪ್ತಿ ದೋಷವಿಲ್ಲ. ಏಕೆಂದರೆ ಬ್ರಹ್ಮವು ಜ್ಞಾನಕ್ಕೆ ಪ್ರಕಾರ (ವಿಶೇಷಣ) ವಾಗಿಲ್ಲವಷ್ಟೆ.

ಸಮಾಧಾನ :—ಘಟಾದಿಗಳಲ್ಲಿ ಅವ್ಯಾಪ್ತಿದೋಷವು ಬರುವದು. "ಸತ್ತಾವಾನ್ ಘಟಃ" ಇತ್ಯಾಕಾರಕ ಜ್ಞಾನದಲ್ಲಿ ಘಟಾದಿಗಳು ವಿಶೇಷ್ಯಗಳಾಗಿರುವದರಿಂದ ಆ ಘಟಾದಿಗಳಲ್ಲಿ ತಾದೃಶ ಜ್ಞಾನೀಯ ಪ್ರಕಾರತಾಖ್ಯ ವಿಷಯತ್ವವು ಬರಲಿಲ್ಲವಷ್ಟೆ; "ವಿಶೇಷ್ಯ ವಿಶೇಷಣ ಭಾವೇ ವಿನಿಗಮನಾ ವಿರಹಾತ್" "ಘಟಸ್ಸನ್" ಎಂಬ ಜ್ಞಾನದಲ್ಲಿ ಸದ್ರೂಪ ಬ್ರಹ್ಮಪ್ರಕಾರಿ (ವಿಶೇಷ್ಯ) ಯಾಗಿಯೂ "ಬ್ರಹ್ಮಣಿ ಪ್ರಪಂಚಃ" ಎಂಬ ಜ್ಞಾನದಲ್ಲಿ ಪ್ರಕಾರ (ವಿಶೇಷಣ) ವಾಗಿಯೂ ಇರುವದರಿಂದ ತಾದೃಶ ವಿಷಯತ್ವ ವೈಲಕ್ಷಣ್ಯದಿಂದ ಅತಿವ್ಯಾಪ್ತಿ ದೋಷವು ವಾರಣವಾಗುವದಿಲ್ಲ.

ಶಂಕಾ :—ಕರಣದೋಷೋಪಹಿತ ಜ್ಞಾನವಿಷಯದಲ್ಲಿ ಅಧ್ಯಸ್ತತ್ವವೆಂಬ ವಿಶೇಷಣವನ್ನು ಸೇರಿಸುವದರಿಂದ ಬ್ರಹ್ಮದಲ್ಲಿ ಅತಿವ್ಯಾಪ್ತಿ ದೋಷವಿಲ್ಲ. ಬ್ರಹ್ಮವು ಅಧ್ಯಸ್ತ (ಅಧ್ಯಾಸಕ್ಕೆ ವಿಷಯ) ವಾಗಿಲ್ಲವಷ್ಟೆ.

ಸಮಾಧಾನ:—ಹಾಗಾದರೆ ಅಧ್ಯಸ್ತವಾದುದೇ ವ್ಯಾವಹಾರಿಕ ಪ್ರಪಂಚವೆಂದರೆ ಸಾಕು. "ತಾದೃಶ ಜ್ಞಾನ ವಿಷಯತ್ವೇ ಸತಿ ಅಧ್ಯಸ್ತತ್ವಂ" ಎಂದು ಹೇಳುವದು ವ್ಯರ್ಥವು. ಈ ವೈಯರ್ಥ್ಯ ದೋಷವಲ್ಲದೆ ಪ್ರಾತಿಭಾಸಿಕ ರಜತಾದಿ ಪದಾರ್ಥಗಳಲ್ಲಿ

CC-0. Jangamwadi Math Collection. Digitized by eGangotri

ಅತಿವ್ಯಾಪ್ತಿ ದೋಷವೂ ಬರುವದು. ಆ ಪ್ರಾತಿಭಾಸಿಕ ರಜತಾದಿ ಪದಾರ್ಥಗಳು ತಾದೃಶ ಜ್ಞಾನ ವಿಷಯುವೂ ಅಧ್ಯಸ್ತ (ಭ್ರಾಂತಿ ವಿಷಯ) ವೂ ಆಗಿರುವವಷ್ಟೆ ; ಆದುದರಿಂದ ಪ್ರಪಂಚಕ್ಕೆ ಕೇವಲ ವ್ಯಾವಹಾರಿಕ ಸತ್ಯತ್ವವಲ್ಲದೆ ಪಾರಮಾರ್ಥಿಕ ಸತ್ಯತ್ವವಿಲ್ಲೆನ್ನುವದು ಶ್ರುತಿ, ಯುಕ್ತಿ, ಅನುಭವ ವಿರುದ್ಧವಾಗಿರುವದರಿಂದ ಪ್ರಚ್ಛನ್ನ ಬೌದ್ಧ ಮಾಯಾವಾದವಾಗುವದು. ಶೈವ ಮತವೇ ವೈದಿಕವೆನ್ನುವದು ಘಂಟಾದೋಷವು. ಹಾಗೂ ನೀವು "ತತ್ವಮಸಿ" ಇತ್ಯಾದಿ ಮಹಾವಾಕ್ಯಗಳಲ್ಲಿ ನಿರ್ವಿಶೇಷ ಬ್ರಹ್ಮೈಕ್ಯವೇ ಉಪದೇಶಿಸಲ್ಪಡುವದೆಂದು ಹೇಳುವದು ತಪ್ಪು. ಏಕೆಂದರೆ ಆ ಮಹಾ ವಾಕ್ಯ ಘಟಕಗಳಾದ "ತತ್‌ತ್ವಂ" ಪದಗಳಿಂದ ಸವಿಶೇಷ ಜೀವ ಬ್ರಹ್ಮಗಳು ಪ್ರತಿಪಾದಿಸಲ್ಪಡುತ್ತವಲ್ಲದೆ ನಿರ್ವಿಶೇಷವು ಪ್ರತಿಪಾದಿಸಲ್ಪಡುವದಿಲ್ಲ. ಇದಲ್ಲದೆ "ತದೈಕ್ಷತ ಬಹುಸ್ಯಾಂ" ಇತ್ಯಾದಿ ಶ್ರುತಿಗಳಲ್ಲಿ ತಚ್ಛಬ್ದವಾಚ್ಯವಾದ ಜಗತ್ಕಾರಣವಾದ ಪರಶಿವಬ್ರಹ್ಮಕ್ಕೆ ಸವಿಶೇಷತ್ವವೇ ಉಪದೇಶಿಸಲ್ಪಡುವದು.

ಶಂಕಾ :—ಮಾಯಾವಚ್ಛಿನ್ನ ಚೈತನ್ಯವೇ ಈಶ್ವರನು. ಅವಿದ್ಯಾವಚ್ಛಿನ್ನ ಚೈತನ್ಯವೇ ಜೀವನು. ಈ ಈಶ್ವರನು ಸರ್ವಜ್ಞನು. ಈ ಜೀವನು ಕಿಂಚಿಜ್ಞನು. ತತ್ಪದ ವಾಚ್ಯನು ಈಶ್ವರನು. ತ್ವಂ ಪದವಾಚ್ಯನು ಜೀವನು. ಇವರಿಬ್ಬರಿಗೆ ಗೋ-ಶ್ವಾನ (ಆಕಳ, ನಾಯಿ) ಗಳಂತೆ ಐಕ್ಯವು ಸಂಭವಿಸುವುದಿಲ್ಲವಾದುದರಿಂದ ತತ್ಪದ ವಾಚ್ಯಾರ್ಥವೆನಿಸಿದ ಸರ್ವಜ್ಞತ್ವ ವಿಶಿಷ್ಟ ಚೈತನ್ಯದ ಸರ್ವಜ್ಞತ್ವವೆಂಬ ಭಾಗವನ್ನು ಪರಿತ್ಯಜಿಸಿ ಕೇವಲ ಚೈತನ್ಯದಲ್ಲಿ ತ್ವಂ ಪದದ ಲಕ್ಷಣಾವೃತ್ತಿಯನ್ನು ಸ್ವೀಕರಿಸಬೇಕು. ಹೀಗೆ ಭಾಗತ್ಯಾಗಲಕ್ಷಣಾವೃತ್ತಿಯನ್ನು ಸ್ವೀಕರಿಸಿದರೆ "ತತ್ವಮಸಿ" ಎಂಬ ಮಹಾವಾಕ್ಯಪ್ರತಿಪಾದಿತವಾದ ಅಬೇಧವು ಸಿದ್ಧಿಸುತ್ತದೆ. ಹೇಗೆಂದರೆ ತತ್ಪದ ಲಕ್ಷ್ಯಾರ್ಥವು ಕೇವಲ ಚೈತನ್ಯವೇ ಆಯಿತು. ಚೈತನ್ಯವೆಂಬ ಬ್ರಹ್ಮವು ನಿರ್ವಿಶೇಷವಾಗಿರುವುದರಿಂದ ನಿರ್ವಿಶೇಷ ಬ್ರಹ್ಮೈಕ್ಯವು ಮಹಾ ವಾಕ್ಯಾರ್ಥವಾಗಿದೆ. ಇದಕ್ಕೆ ದೃಷ್ಟಾಂತವೇನೆಂದರೆ "ಸೋಽಯಂ ದೇವದತ್ತಃ" ಎಂಬ ವಾಕ್ಯದಲ್ಲಿ ತತ್ಪದಾರ್ಥಕ್ಕೂ ಏತತ್ಪದಾರ್ಥಕ್ಕೂ ಅಬೇಧವು ಹೇಳಲ್ಪಡುತ್ತದಷ್ಟೆ ! ಈ ಬೇಧವು ತತ್ಪದ ಹಾಗೂ ಏತತ್ಪದದ ವಾಚ್ಯಾರ್ಥಗಳನ್ನೇ ಗ್ರಹಿಸಿದರೆ ಸಂಗತವಾಗುವದಿಲ್ಲ. ಏಕೆಂದರೆ ತತ್ಪದ ವಾಚ್ಯಾರ್ಥವು ತದ್ದೇಶ ತತ್ಕಾಲ ವೃತ್ತಿತ್ವ ವಿಶಿಷ್ಟ ದೇವದತ್ತನು ಏತತ್ಪದದ ವಾಚ್ಯಾರ್ಥವು ಏತದ್ದೇಶ ಏತತ್ಕಾಲ ವೃತ್ತಿತ್ವ ದೇವದತ್ತನು. ಈ ವಾಚ್ಯಾರ್ಥಗಳಲ್ಲಿ ತದ್ದೇಶ ತತ್ಕಾಲಗಳೂ ಏತದ್ದೇಶ ಏತತ್ಕಾಲಗಳು ಪರಸ್ಪರ ವಿರುದ್ಧಗಳಾಗಿರುವದರಿಂದ ವಾಚ್ಯಾರ್ಥಗಳಿಗೆ ಅಭೇದವು ಸಂಭವಿಸುವದಿಲ್ಲವಾದ್ದರಿಂದ ಆ ವಿರುದ್ಧ ವಾಚ್ಯಾರ್ಥ ಭಾಗವನ್ನು ಪರಿತ್ಯಜಿಸಿ ಉಳಿದ ದೇವದತ್ತ ಭಾಗದಲ್ಲಿ ತತ್ಪದಏತತ್ಪದಗಳ ಲಕ್ಷಣಾವೃತ್ತಿಯನ್ನು ಅಂಗೀಕರಿಸಿ ಅಭೇದವನ್ನು ನಿರ್ವಾಹಮಾಡುವಂತೆ "ತತ್ವಮಸಿ" ಎಂಬ ಮಹಾ ವಾಕ್ಯದಲ್ಲಿಯೂ ಮಾಡಿದರೆ ನಿರ್ವಿ

CC-0. Jangamwadi Math Collection. Digitized by eGangotri

ಶೇಷ ಬ್ರಹ್ಮರೂಪ ಅಧಿಷ್ಠಾನೈಕ್ಯವೇ ಮಹಾ ವಾಕ್ಯಾರ್ಥವಾಗುತ್ತದೆ. ಆದುದರಿಂದ ಅವಶ್ಯವಾಗಿ ಲಕ್ಷಣಾವೃತ್ತಿಯನ್ನು ಅಂಗೀಕರಿಸಲೇಬೇಕು. ಹೀಗೆ ಅಂಗೀಕರಿಸದಿದ್ದಲ್ಲಿ "ತತ್ವಂ" ಪದಗಳ ವಾಚ್ಯಾರ್ಥಗಳು ಪರಸ್ಪರ ವಿರುದ್ಧಗಳಾಗಿ ಜೀವ ಬ್ರಹ್ಮರ ಅಭೇದವು ಉಪಪನ್ನವಾಗದೇ ಆ ಅಭೇದಕ್ಕೆ ಪ್ರತಿಪಾದಕವಾದ "ತತ್ವಮಸಿ" ಎಂಬ ಮಹಾವಾಕ್ಯವೇ ಅಪ್ರಮಾಣವಾಗಬೇಕಾಗುವದರಿಂದ ಭಾಗತ್ಯಾಗ ಲಕ್ಷಣಾವೃತ್ತಿಯು ಅವಶ್ಯಕವಾಗಿದೆ.

ಸಮಾಧಾನ :—" ಬ್ರಹ್ಮ ವೇದ ಬ್ರಹ್ಮೈವ ಭವತಿ " (ಮುಂ. ೩–೨–೯) "ಬ್ರಹ್ಮಕಾಮೋ ಬ್ರಹ್ಮವೇದನಂ ಕುರ್ಯಾತ್" "ದಿವ್ಯಂ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೆ" (ಛಾಂ. ೮–೧೨–೨) "ಶಿವ ಏಕೋ ಧ್ಯೇಯಃ ಶಿವಂಕರಸ್ಸರ್ವಮನ್ಯತ್ಪರಿತ್ಯಜ್ಯ" (ಅ. ಶಿಖಾ. ೩) "ಧ್ಯಾತ್ವಾ ಮುನಿರ್ಗಚ್ಛತಿ ಭೂತ ಯೋನಿಂ ಸಮಸ್ತ ಸಾಕ್ಷಿಂ ತಮಸಃ ಪರಸ್ತಾತ್" "ಶ್ರದ್ಧಾ ಭಕ್ತಿಧ್ಯಾನ ಯೋಗಾದ ವೇಹಿ" (ಕೈವಲ್ಯ) ಇತ್ಯಾದಿ ಶ್ರುತಿಗಳಲ್ಲಿ ಕೀಟವು ಭ್ರಮರಯೋಗ (ಧ್ಯಾನ) ದಿಂದ ಭ್ರಮರವೇ ಆಗಿಬಿಡುವಂತೆ ಜೀವನು ಶಿವಯೋಗದಿಂದ ಶಿವನೇ ಆಗಿಬಿಡುವನೆಂದು ಜೀವನಿಗೆ ಶಿವತ್ವಪ್ರಾಪ್ತಿಯ ಉಪದೇಶವಿರುವದರಿಂದ ಭಾಗತ್ಯಾಗ ಲಕ್ಷಣಾಸ್ವೀಕಾರಕ್ಕೆ ಪ್ರಯೋಜನವಿಲ್ಲ. ಶಿವಯೋಗವು "ಜ್ಞಾನಂ ಶಿವಮಯಂ ಭಕ್ತಿಃ ಶೈವೀ ಧ್ಯಾನಂ ಶಿವಾತ್ಮಕಂ । ಶೈವವ್ರತಂ ಶಿವಾರ್ಚೇತಿ ಶಿವಯೋಗೋಹಿ ಪಂಚಧಾ" ॥ ಎಂಬ ಶಿವಯೋಗ ಪ್ರದೀಪಿಕೆಯ ಶ್ಲೋಕದಂತೆ ಐದು ತೆರನಾಗಿರುವದು. ಜೀವನು ಶಿವಜ್ಞಾನ, ಶಿವಧ್ಯಾನ, ಶಿವಭಕ್ತಿ, ಶಿವವ್ರತ ಶಿವಾರ್ಚನಗಳಿಂದ "ಕೀಟೋ ಭ್ರಮರ ಯೋಗೇನ ಭ್ರಮರೋ ಭವತಿಧ್ರುವಂ । ಮಾನವಃ ಶಿವಯೋಗೇನ ಶಿವೋ ಭವತಿ ಸರ್ವದಾ" ಎಂಬ ಗೌತಮ ಸ್ಮೃತಿ ಶ್ಲೋಕದಂತೆ ಕೀಟವು ಭ್ರಮರಯೋಗದಿಂದ ಭ್ರಮರವಾಗುವಂತೆ ಶಿವನೇ ಆಗುವನೆಂಬ ಭಾವವು. ಅಂದರೆ ಚಿತ್ತಶಕ್ತಿ ವಿಕಾಸ ರೂಪವಾದ ಚಿಚ್ಛಕ್ತಿಯೆಂಬ ಶಿವಮಯ ಜ್ಞಾನವೇ ಅವಿಚ್ಛಿನ್ನ ತೈಲಧಾರೆಯಂತೆ ಅವಿಚ್ಛಿನ್ನವಾಗಿ ಧ್ಯಾನವೆನಿಸಿ ಈ ಧ್ಯಾನವು ಹೇಯ ವಿಷಯಾಕಾರವಾಗದೆ ಧ್ಯೇಯ ಶಿವಾಕಾರವಾಗಿರಲು ಧಾರಣವೆನಿಸಿ "ಸ್ಮೃತಿ ಲಂಭೇ ಸರ್ವಗ್ರಂಥಿನಾಂ ವಿಪ್ರಮೋಕ್ಷಃ" ಎಂಬ ಶ್ರುತಿಯಂತೆ ಧಾರಣವೇ "ಶಿವೋಽಹಮಿತಿ ಭಾವೋ ಹಿ ಶಿವತಾಪತ್ತಿ ಕಾರಣಂ" ಎಂಬ ರೇಣುಕ ಭಗವತ್ಪಾದರ ಉಪದೇಶದಂತೆ ಶಿವಸಾಕ್ಷಾತ್ಕಾರ ರೂಪ ಸಮಾಧಿಯೆನಿಸುವದು. ಈ ಸಮಾಧಿಯೇ ಮುಕ್ತಿ ರೂಪವಾದ ಯೋಗದರ್ಶನದಲ್ಲಿ ಉಕ್ತವಾದ ಎಂಟನೇ ಅಂಗವು. ಇದೇ ಫಲರೂಪವಾದ ಆರನೇ ಐಕ್ಯಸ್ಥಲವು. ಇದಕ್ಕೆ ಹಿಂದಿನ ಐದು ಸ್ಥಲಗಳು ಬಾಧಕಗಳಾಗಿವೆ. ಈ ಐದು ಸ್ಥಲಗಳಲ್ಲಿಯೇ ಯಮಾದಿ ಏಳು ಅಂಗಗಳು ಅಂತರ್ಭೂತಗಳಾಗಿವೆ. ಅರ್ಥಾತ್ ಶಿವಜ್ಞಾನಾದಿ ನಾಲ್ಕು ಅಂಗಗಳಿಂದ ಕೂಡಿದ ಶಿವಾರ್ಚನೆಯೆಂಬ ಶಿವಯೋಗದಿಂದ ಶಿವತ್ವಪ್ರಾಪ್ತಿಯು ಜೀವನಿಗೆ ಶ್ರುತಿ

CC-0. Jangamwadi Math Collection. Digitized by eGangotri

ಸಿದ್ಧವಾಗಿರಲು "ತತ್ವಮಸಿ" ಎಂಬ ಮಹಾ ವಾಕ್ಯದಲ್ಲಿ ಭಾಗತ್ಯಾಗ ಲಕ್ಷಣಾವೃತ್ತಿಯನ್ನು ಕಲ್ಪಿಸಿ ಜೀವನಿಗೆ ಶಿವೈಕ್ಯ (ಶಿವತ್ವಪ್ರಾಪ್ತಿ) ಯನ್ನು ಹೇಳುವುದು ಅನುಚಿತವೂ ಗೌರವ ದೋಷಗ್ರಸ್ತವೂ ಆಗುತ್ತದೆ. "ತತ್ವಮಸಿ" "ಅಹಂ ಬ್ರಹ್ಮಾಸ್ಮಿ" ಇತ್ಯಾದಿ ಮಹಾ ವಾಕ್ಯಗಳು ಭಕ್ತಾದಿ ಸ್ಥಲಾಭ್ಯಾಸದಿಂದ ಶಿವೈಕ್ಯಸ್ಥಲ (ಮುಕ್ತಿ) ವನ್ನು ಏರಿದ ಶಿವಯೋಗಿ ವಿಷಯಕಗಳಾಗಿವೆ. ನಾವು ಮುಕ್ತಿ ದೆಶೆಯಲ್ಲಿ ಶಿವಜೀವರ ಐಕ್ಯವನ್ನು ಹೇಳುವವಾದುದರಿಂದ ಲಕ್ಷಣಾಸ್ವೀಕಾರವೆಂಬ ಗೌರವ ದೋಷವೂ ಇಲ್ಲ. ಬದ್ಧ ದೆಶೆಯಲ್ಲಿ ಕಿಂಚಿಜ್ಞತ್ವವಿರುವುದರಿಂದ ಜೀವನಿಗೆ ಶಿವೈಕ್ಯವು ಸಂಭವಿಸುವುದಿಲ್ಲ. ಮುಕ್ತಿದಶೆಯಲ್ಲಿ ಕಿಂಚಿಜ್ಞತ್ವವು ಲಯವಾಗಿ ಸರ್ವಜ್ಞತ್ವಾದಿ ಷಡಂಗವುಳ್ಳ ಶಿವನೇ ಆಗಿಬಿಡುವುದರಿಂದ ನಮ್ಮ ಮತದಲ್ಲಿ ಲಕ್ಷಣಾಸ್ವೀಕಾರವಿಲ್ಲವಾದ್ದರಿಂದ ಗೌರವ ದೋಷವಿಲ್ಲ. ಸರ್ವಜ್ಞತ್ವಾದಿ ಕಲ್ಯಾಣಗುಣಗಳು ಪರಶಿವಬ್ರಹ್ಮಕ್ಕೆ ಸ್ವಾಭಾವಿಕಗಳಾಗಿರುವವಲ್ಲದೆ ಮಿಥ್ಯಾಮಾಯಾ ಕಲ್ಪಿತಗಳಲ್ಲವಾದ್ದರಿಂದ ಮುಕ್ತನಿಗೆ ಸರ್ವಜ್ಞತ್ವಾದಿ ಷಡಂಗವುಳ್ಳ ಶಿವರೂಪವು ಪ್ರಾಪ್ತವಾಗುವುದು.

ತತ್ತ್ವಮಸ್ಯಾದಿ ಮಹಾವಾಕ್ಯಗಳಲ್ಲಿ ಲಕ್ಷಣಾವೃತ್ತಿಯು ಬೇಕಿಲ್ಲ

ಸರ್ವಜ್ಞತ್ವಾದಿಗಳನ್ನು ನಿರಾಕರಿಸಿ ಭಾಗತ್ಯಾಗ ಲಕ್ಷಣಾವೃತ್ತಿಯನ್ನು ಸ್ವೀಕರಿಸುವುದು ವೀರಶೈವಾಚಾರ್ಯ ಸಮ್ಮತವಲ್ಲವಾದುದರಿಂದಲೇ ಈ ಭಾಷ್ಯಕಾರರು "ತತ್ವಮಸಿ" ಎಂಬ ಮಹಾ ವಾಕ್ಯದಲ್ಲಿ ಭಾಗತ್ಯಾಗ ಲಕ್ಷಣಾವೃತ್ತಿಯನ್ನು ಸ್ವೀಕರಿಸುವುದು ವೇದಾಂತ ತಾತ್ಪರ್ಯವಲ್ಲೆಂದು ಖಂಡಿಸುತ್ತಾರೆ.

ಇದೂ ಅಲ್ಲದೆ "ತತ್ವಮಸಿ" ಎಂಬ ಮಹಾ ವಾಕ್ಯದಲ್ಲಿ ಭಾಗತ್ಯಾಗ ಲಕ್ಷಣಾವೃತ್ತಿಯನ್ನೇ ಸ್ವೀಕರಿಸಿ ನಿರ್ವಿಶೇಷ ಬ್ರಹ್ಮೈಕ್ಯವನ್ನೇ ಒಪ್ಪಿದರೆ ಆ ನಿರ್ವಿಶೇಷ ಬ್ರಹ್ಮದಲ್ಲಿ "ಏಷ ಏವ ಸಾಧುಕರ್ಮ ಕಾರಯತಿ" ಇತ್ಯಾದಿ ಶ್ರುತ್ಯುಕ್ತವಾದ ಸರ್ವ ಕರ್ಮಗಳನ್ನು ಮಾಡಿಸುವ ತನವೂ "ಪ್ರಧಾನ ಕ್ಷೇತ್ರಜ್ಞ ಪತಿರ್ಗುಣೇಶಃ ಸಂಸಾರ ಮೋಕ್ಷ ಸ್ಥಿತಿಬಂಧ ಹೇತುಃ" "ಯತೋ ವಾ ಇಮಾನಿ ಭೂತಾನಿ ಜಾಯಂತೇ" ಇತ್ಯಾದಿ ಶ್ರುತ್ಯುಕ್ತ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ (ಬಂಧ) ಅನುಗ್ರಹ (ಮೋಕ್ಷ) ಗಳನ್ನುಂಟುಮಾಡುವ ತನವೂ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಗಳೆಂಬ ಚತುರ್ವಿಧ ಮುಕ್ತಿ (ಪದವೀ) ಪ್ರದಾಯಕ ತನವೂ ಸಂಭವಿಸಲಾರವು. ಸೃಷ್ಟ್ಯಾದಿ ಪಂಚಕೃತ್ಯಗಳೂ ಸಾಲೋಕ್ಯಾದಿ ಪದವಿಗಳೂ ಮಿಥ್ಯಾಮಾಯಾಕಲ್ಪಿತಗಳೆನ್ನುವಲ್ಲಿ ಪ್ರಮಾಣವಿಲ್ಲ. ಇದಲ್ಲದೆ ವೇದಾಂತ ಪ್ರತಿಪಾದ್ಯವಾದ ಬ್ರಹ್ಮವು ನಿರ್ವಿಶೇಷವೇ ಅಂದರೆ "ತದೈಕ್ಷತ ಬಹುಸ್ಯಾಂ" (ಛಾಂ. ೬-೨-೩) ಇಂತೆಂಬ ಉಪಕ್ರಮ ವಾಕ್ಯವು ವಿರುದ್ಧವಾಗುತ್ತದೆ. ಏಕೆಂದರೆ ಈ ಉಪಕ್ರಮ ವಾಕ್ಯದಿಂದ ಬ್ರಹ್ಮದಲ್ಲಿ ಬಹು ಭವನ ಸಂಕಲ್ಪವು ಹೇಳಲ್ಪಡುತ್ತದಷ್ಟೆ; "ಯಥಾ ಸೌಮ್ಯೇ

CC-0. Jangamwadi Math Collection. Digitized by eGangotri

ಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್" ಯೇನಾಶ್ರುತಂ ಶ್ರುತಂ ಭವತಿ" ಇತ್ಯಾದಿ ಮೃತ್ಪಿಂಡ ದೃಷ್ಟಾಂತ ಪೂರ್ವಕ ಏಕ ವಿಜ್ಞಾನದಿಂದ ಸರ್ವ ಜ್ಞಾನವನ್ನು ಹೇಳುವ ಪ್ರತಿಜ್ಞಾವಾಕ್ಯಕ್ಕೆ ಭಂಗ ಪ್ರಸಂಗವೂ ಬರುವುದು. ಏಕೆಂದರೆ ನಿಮ್ಮ ನಿರ್ವಿಶೇಷ ಬ್ರಹ್ಮವು ಉಪಾದಾನ- ಕಾರಣವೂ ನಿಮಿತ್ತಕಾರಣವೂ ಆಗಿಲ್ಲ ವಷ್ಟೆ.

ಶಂಕಾ :—ಶುದ್ಧ ಸತ್ವಪ್ರಧಾನ ಮಾಯಾವಚ್ಛಿನ್ನಚೈತನ್ಯ (ಈಶ್ವರ) ವು ಉಪಾದಾನಕಾರಣವಾಗಿರುವುದರಿಂದ ಆ ದೃಂಷ್ಟಾಂತ ಪ್ರತಿಜ್ಞಾವಾಕ್ಯಗಳಿಗೆ ಭಂಗ ಪ್ರಸಂಗವಿಲ್ಲ.

ಸಮಾಧಾನ :—ಬ್ರಹ್ಮೇತರವಾದ ನಿಮ್ಮ ಆ ಈಶ್ವರನು ಸತ್ಯವೆಂದು ನೀವು ಹೇಳುವುದಿಲ್ಲ. ಅಸತ್ಯವೆಂದು ಹೇಳುತ್ತೀರಿ. ಅಂದಮೇಲೆ ತಾನೇ ಗಗನಪುಷ್ಪದಂತೆ ಅಸತ್ಯವಾಗಿರುವಾಗ ಅದು ಮತ್ತೊಂದು ಜಗತ್ತನ್ನು ಮಾಡಲಾರದು. ಆದ್ದರಿಂದ ಜಗದುಭಯ ಕಾರಣತ್ವವು ಸಂಭವಿಸುವುದಿಲ್ಲ. ತಾನು ಉಪಾದಾನಕಾರಣವಾದರೆ ದೃಷ್ಟಾಂತ ಪ್ರತಿಜ್ಞಾವಾಕ್ಯಗಳು ಸಂಗತಗಳಾಗುತ್ತಿದ್ದವು. ಆದ್ದರಿಂದ ಪ್ರತಿಜ್ಞಾ ವಾಕ್ಯಕ್ಕೆ ನಿಮ್ಮ ನಿರ್ವಿಶೇಷ ಬ್ರಹ್ಮ ವಾದದಲ್ಲಿ ಭಂಗ ಪ್ರಸಂಗವೇ ಸಿದ್ಧವಾಯಿತು.

ಶಂಕಾ :—ಉಪಾಸನಾವಿಧಿಗೆ ಬ್ರಹ್ಮವು ವಿಷಯವಾಗುವುದರಿಂದ ಉಪಾಸನೆ (ಧ್ಯಾನ) ಯಿಂದಲೇ ಪರಶಿವಬ್ರಹ್ಮ ಸಾಕ್ಷಾತ್ಕಾರ (ಮೋಕ್ಷ) ವನ್ನು ನೀವು ಹೇಳುತ್ತೀ ರಲ್ಲವೆ ? ಹೀಗೆ ಹೇಳಿದರೆ ಸಾಕ್ಷಾತ್ಕಾರ ರೂಪವಾದ ಮೋಕ್ಷವು ದೃಶ್ಯ (ಉಪಾಸನಾ ವಿಷಯ) ವಾಗಲಿಲ್ಲವೆ ?

ಸಮಾಧಾನ:—"ಯದ್ದೃಶ್ಯಂ ತನ್ನಷ್ಟಂ" ಎಂಬ ನಿಯಮದಂತೆ ಆ ಮೋಕ್ಷವು ಅನಿತ್ಯವೆನಿಸುವುದರಿಂದ ಅದಕ್ಕೆ ದೃಶ್ಯವಾದ ಶಿವಯೋಗ (ಧ್ಯಾನ) ವನ್ನು ಆಚರಿಸ ಬೇಕೆ ? ಆ ಧ್ಯಾನವು ವ್ಯರ್ಥವಾಗಬೇಕಾಗುವುದು. ಇದಲ್ಲದೆ ಸರ್ವಜ್ಞತ್ವಾದಿ ಷಡ್ವಿಧ ಧರ್ಮವಿಶಿಷ್ಟ ಪರಶಿವ ಬ್ರಹ್ಮಕ್ಕೆ ಶಿವ, ಶರ್ವ, ಶಂಕರ, ಆನಂದ, ಜ್ಞಾನ, ಅನಂತಾದಿ ನಾಮಗಳು ಹಸ್ತ, ಕರ, ಪಾಣಿ ನಾಮಗಳಂತೆ ಪರ್ಯಾಯ ನಾಮಗಳಾಗಿ ರುವುದರಿಂದ ಪರಶಿವ ಬ್ರಹ್ಮವು ಅಖಂಡ ಜ್ಞಾನಸ್ವರೂಪವೂ ಆಯಿತು. ಇಂತಹ ಅಖಂಡಜ್ಞಾನಸ್ವರೂಪ ಪರಮಶಿವ ಬ್ರಹ್ಮದರ್ಶನದಿಂದ ಶುದ್ಧನಾದ ಜೀವನು ಆ ಬ್ರಹ್ಮಕ್ಕೆ ಭಿನ್ನನಾಗಿರುವನೊ ? ಅಥವಾ ಅಭಿನ್ನನಾಗಿರುವನೊ ? ಭಿನ್ನನಾಗಿರುವ ನೆಂದರೆ ಸೂರ್ಯನಿಗಿಂತ ಭಿನ್ನವಾಗಿರುವ ಘಟಪಟಾದಿ ಪ್ರಪಂಚವು ಸೂರ್ಯ ಪ್ರಕಾಶ ದಿಂದ ಪ್ರಕಾಶಿತವಾಗಿದೆಯಲ್ಲದೆ ತನಗೆ ಪ್ರಕಾಶಕನಾದ ಸೂರ್ಯನು ತನ್ನಿಂದ ಪ್ರಕಾಶಿತ ನಾಗಿಲ್ಲ. ಅಂದರೆ ಘಟಪಟಾದಿ ಪ್ರಪಂಚಕ್ಕೆ ಸೂರ್ಯನನ್ನು ಪ್ರಕಾಶಗೊಳಿಸುವುದು

CC-0. Jangamwadi Math Collection. Digitized by eGangotri

ಅಸಂಭವವಾಗಿರುವಂತೆ ಪರಶಿವ ಬ್ರಹ್ಮಪ್ರಕಾಶ (ಜ್ಞಾನ) ದಿಂದ ಪ್ರಕಾಶಿತನಾದ (ಜ್ಞಾತನಾದ)ಜೀವನಿಗೆ ತನಗೆ ಪ್ರಕಾಶಕವಾದ ಪರಶಿವಬ್ರಹ್ಮ ಪ್ರಕಾಶ(ಸಾಕ್ಷಾತ್ಕಾರ) ವು ಸಂಭವಿಸುವುದಿಲ್ಲ. ಸರ್ವಪ್ರಕಾಶಕವಾದ ಅಖಂಡ ಪ್ರಕಾಶ (ಜ್ಞಾನ) ಸ್ವರೂಪ ಬ್ರಹ್ಮವನ್ನು ಪ್ರಕಾಶಪಡಿಸುವುದು ಜೀವನಿಗೆ ಅಸಂಭವವೇ ಸರಿ. ಜೀವನಿಂದ ಸಾಕ್ಷಾತ್ಕರಿಸಲು ಯೋಗ್ಯವಲ್ಲೆಂದು ಭಾವವು.

ಇನ್ನು ಪರಶಿವಬ್ರಹ್ಮಕ್ಕೆ ಜೀವನು ಅಭಿನ್ನನೆಂದರೆ ಚಕ್ಷುರಿಂದ್ರಿಯಕ್ಕೆ ಅಭಿನ್ನವಾದ ಚಕ್ಷುರಿಂದ್ರಿಯಕ್ಕೆ ಚಕ್ಷುರಿಂದ್ರಿಯ ಸಾಕ್ಷಾತ್ಕಾರವು ಸಂಭವಿಸದಿರುವಂತೆ ಆ ಬ್ರಹ್ಮಸಾಕ್ಷಾತ್ಕಾರವು ಸಂಭವಿಸಲಾರದು.

ಶಂಕಾ :—ಘಟಕ್ಕೆ ಭಿನ್ನವಾದ ಜೀವನಿಗೆ ಘಟಸಾಕ್ಷಾತ್ಕಾರ (ಪ್ರತ್ಯಕ್ಷ) ವು ಸಂಭವಿಸುವಂತೆ ಬ್ರಹ್ಮಕ್ಕೆ ಭಿನ್ನವಾದ ಜ್ಞಾನಸ್ವರೂಪನಾದ ಜೀವನಿಗೆ ಬ್ರಹ್ಮಸಾಕ್ಷಾತ್ಕಾರವು ಸಂಭವಿಸುವುದು.

ಸಮಾಧಾನ :—ಜೀವನಿಗೆ ಬ್ರಹ್ಮ ಭಿನ್ನದಾದ ಜ್ಞಾನಸ್ವರೂಪವುಳ್ಳ ತನವನ್ನು ಹೇಳುವ ನೀವು ಅಖಂಡ ಜ್ಞಾನಸ್ವರೂಪ ಬ್ರಹ್ಮಕ್ಕಿಂತಲೂ ಉತ್ಕೃಷ್ಟವಾದ ಜ್ಞಾನಸ್ವರೂಪವುಳ್ಳತನದಿಂದ ಜೀವನಿಗೆ ಆ ಬ್ರಹ್ಮಸಾಕ್ಷಾತ್ಕಾರವನ್ನು ಹೇಳುವಿರೊ ? ಅಥವಾ ಅದಕ್ಕಿಂತಲೂ ಅಪಕೃಷ್ಟ (ನ್ಯೂನ) ಜ್ಞಾನಸ್ವರೂಪವುಳ್ಳತನದಿಂದ ಆ ಬ್ರಹ್ಮಸಾಕ್ಷಾತ್ಕಾರವನ್ನು ಹೇಳುವಿರೋ ? ಆ ಬ್ರಹ್ಮಕ್ಕಿಂತಲೂ ಉತ್ಕೃಷ್ಟ ಜ್ಞಾನಸ್ವರೂಪವನ್ನಂತೂ ಹೇಳಲು ಬರುವುದಿಲ್ಲ. ಹೇಳಿದರೆ ಅನೇಕ ಶ್ರುತಿ, ಯುಕ್ತಿ, ಅನುಭವ ವಿರುದ್ಧವಾಗುವುದು. "ಯಃ ಸರ್ವಜ್ಞಃ ಸರ್ವವಿತ್" ಇತ್ಯಾದಿ ಶ್ರುತಿಗಳು ಪರಶಿವಬ್ರಹ್ಮಕ್ಕೆ ಮಾತ್ರ ಉತ್ಕೃಷ್ಟ ಜ್ಞಾನವನ್ನು ಹೇಳುತ್ತವಲ್ಲದೆ ಜೀವನಿಗೆ ಹೇಳುವುದಿಲ್ಲ. ಕ್ರಿಮಿಕೀಟ ಪತಂಗಾದಿಗಳಿಗಿಂತಲೂ ಪಶುಗಳಿಗೆ ಉತ್ಕೃಷ್ಟಜ್ಞಾನವು ಅವುಗಳಿಗಿಂತಲೂ ಮನುಷ್ಯರು ಹೀಗೆ ತಾರತಮ್ಯಭಾವವು ಅಂತತಃ ಪರಶಿವಬ್ರಹ್ಮದಲ್ಲಿ ವಿಶ್ರಾಂತಿಯನ್ನು ಹೊಂದುವುದರಿಂದ ಉತ್ಕೃಷ್ಟಜ್ಞಾನಸ್ವರೂಪವನ್ನು ಪರಶಿವಬ್ರಹ್ಮಕ್ಕೆ ಮಾತ್ರ ಹೇಳಬೇಕಲ್ಲದೆ ಜೀವನಿಗೆ ಹೇಳುವುದು ಯುಕ್ತಿ ವಿರುದ್ಧವು.

ಇನ್ನು ಬ್ರಹ್ಮಕ್ಕಿಂತಲೂ ಜೀವನಿಗೆ ಉತ್ಕೃಷ್ಟ ಜ್ಞಾನವಿದ್ದರೆ ಇವನಿಗೆ ದೂರ, ವಿಪ್ರಕೃಷ್ಟ, ವ್ಯವಹಿತ, ಬಾಹ್ಯ, ಅಭ್ಯಂತರ, ಸೂಕ್ಷ್ಮ ಸ್ಥೂಲಗಳಾದ ಸರ್ವ ಪದಾರ್ಥಗಳ ಜ್ಞಾನವಾಗಬೇಕು. ಜ್ಞಾನವಾಗದಿರುವುದರಿಂದ ಪರಶಿವ ಬ್ರಹ್ಮಕ್ಕಿಂತಲೂ ಜೀವನಿಗೆ ಉತ್ಕೃಷ್ಟ ಜ್ಞಾನವನ್ನು ಹೇಳುವುದು ಸರ್ವಾನುಭವ ವಿರುದ್ಧವು.

ಇನ್ನು ಪರಶಿವಬ್ರಹ್ಮ ಸಮಾನವಾದ ಜ್ಞಾನಸ್ವರೂಪವುಳ್ಳತನದಿಂದ ಪರಶಿವ

CC-0. Jangamwadi Math Collection. Digitized by eGangotri

ಬ್ರಹ್ಮ ಸಾಕ್ಷಾತ್ಕಾರವಾಗುವುದೆಂಬ **ಎರಡನೆ ವಿಕಲ್ಪವೂ** ಯುಕ್ತವಲ್ಲ. ಏಕೆಂದರೆ ಜೀವನು ಜ್ಞಾನದಿಂದ ತನಗೆ ಸಮಾನವಾದ ಬ್ರಹ್ಮವನ್ನು ಉಪಾಸನೆ ಮಾಡುವುದು ಅಸಂಭವವಷ್ಟೆ ; ಆದ್ದರಿಂದ ಜೀವನಿಗೆ ಪರಶಿವಬ್ರಹ್ಮೋಪಾಸನೆಯೇ ಸಂಭವಿಸದಿರುವಾಗ ಆ ಉಪಾಸನೆಯಿಂದ ಬ್ರಹ್ಮಸಾಕ್ಷಾತ್ಕಾರವನ್ನು ಹೇಳುವುದು ಅಯುಕ್ತವು. ಲೋಕದಲ್ಲಿ ತನಗಿಂತಲೂ ದೊಡ್ಡವರನ್ನು ಸೇವಿಸುತ್ತಾರಲ್ಲದೆ ತನಗೆ ಸಮಾನರನ್ನೂ ತನಗಿಂತ ಕನಿಷ್ಠರನ್ನೂ ಯಾರೂ ಸೇವಿಸುವುದಿಲ್ಲ. ಇದಲ್ಲದೆ ಜೀವನು ಪರಶಿವ ಬ್ರಹ್ಮಕ್ಕೆ ಭಿನ್ನನೆಂಬ ಎರಡನೆ ವಿಕಲ್ಪದಲ್ಲಿ ತೋರಿಸಿದ ದೋಷಗಳೂ ಬರುವುವು.

ಇನ್ನು ಪರಶಿವಬ್ರಹ್ಮಕ್ಕಿಂತಲೂ ಅಪಕೃಷ್ಟವಾದ ಜ್ಞಾನಸ್ವರೂಪವುಳ್ಳತನದಿಂದ ಆ ಬ್ರಹ್ಮ ಸಾಕ್ಷಾತ್ಕಾರವನ್ನುವ **ಮೂರನೆಯ ವಿಕಲ್ಪವೂ** ಕೂಡ ಯುಕ್ತವಲ್ಲ. ಒಂದು ಪಕ್ಷದಲ್ಲಿ " ಜ್ಞಾಜ್ಞೌದ್ವಾವಜಾವೀಶಾನೀಶೌ " (ಶ್ವೇ. ೧-೯) "ಪ್ರಧಾನ ಕ್ಷೇತ್ರಜ್ಞ ಪತಿರ್ಗುಣೇಶಃ" (ಶ್ವೇ. ೬-೧೬) "ಈಶಾನಃ ಸರ್ವ ವಿದ್ಯಾನಾಮೀಶ್ವರಃ ಸರ್ವಭೂತಾನಾಂ" (ಮಹಾ. ನಾ. ಅ. ೪೭) ಇತ್ಯಾದಿ ಶ್ರುತಿ, ಯುಕ್ತಿ, ಅನುಭವ ಸಿದ್ಧವಾಗಿಯೇ ಜೀವನಿಗೆ ಅಪಕರ್ಷವು ಸಂಭವಿಸುವುದಾದರೂ ಪ್ರಭಾಕರ (ಸೂರ್ಯ) ಪ್ರಭೆಯ ಮಧ್ಯದಲ್ಲಿರುವ ದೀಪಕ್ಕೆ ಪ್ರಭಾಕರ ಪ್ರಕಾಶತ್ವವಿಲ್ಲದಿರುವಂತೆ ಜೀವನಿಗೆ ಬ್ರಹ್ಮಸಾಕ್ಷಾತ್ಕಾರ (ಪ್ರಕಾಶತ್ವ) ವು ಸಂಭವಿಸುವುದಿಲ್ಲವಾದುದರಿಂದ ಉಪಾಸನಾಜ್ಞಾನರೂಪದಿಂದ ಬ್ರಹ್ಮಸಾಕ್ಷಾತ್ಕಾರ (ಮುಕ್ತಿ) ವನ್ನು ಹೇಳುವುದು ಯುಕ್ತವಲ್ಲ.

ಸಮಾಧಾನ :—ಜೀವನಿಗೆ ಬ್ರಹ್ಮಸಾಕ್ಷಾತ್ಕಾರವು ಉಪಾಸನೆಯಿಂದಾಗಲಾರದು ಎಂದಲ್ಲವೆ ನಿಮ್ಮ ಅಭಿಪ್ರಾಯವು. ಜೀವಭಾವ (ಮಲತ್ರಯ) ವುಳ್ಳ ಜೀವನಿಗೆ ಪರಶಿವ ಸಾಕ್ಷಾತ್ಕಾರವಾಗಿ ನದೀ-ಸಮುದ್ರಗಳಂತೆ ಪರಶಿವ ಬ್ರಹ್ಮಸಾಮರಸ್ಯ (ಶಿವತ್ವಪ್ರಾಪ್ತಿ) ವಾಗುವುದೆಂದು ನಾವು ಹೇಳುವುದಿಲ್ಲ. ಕಿಂತು ಗುರುಕೃತ ದೀಕ್ಷಾತ್ರಯದಿಂದ ಮಲತ್ರಯವನ್ನು ನಿವೃತ್ತಿಗೊಳಿಸಿಕೊಂಡ ಶುದ್ಧಾತ್ಮವಾದ ಶಿವಾಂಶಕ್ಕೆ ಮಾತ್ರ ಆ ಪರಶಿವಬ್ರಹ್ಮ ಸಾಕ್ಷಾತ್ಕಾರವಾಗಿ ಶಿವತ್ವಪ್ರಾಪ್ತಿಯಾಗುವುದೆಂದು ಹೇಳುತ್ತೇವೆ. ಹೇಗೆಂದರೆ ಶುದ್ಧ (ನಿರ್ದುಷ್ಟ) ವಾದ ಪ್ರಭಾಕರಾಂಶವಾದ ಚಕ್ಷುರಿಂದ್ರಿಯದಿಂದ ಪ್ರಭಾಕರನ ಸಾಕ್ಷಾತ್ಕಾರವಾಗುತ್ತದೆಂಬುವುದು ಲೋಕಾನುಭವ ಸಿದ್ಧವಾಗಿದೆಯಲ್ಲವೆ !

ಶಂಕಾ :—ಘಟಾಂಶವಾಗದಿರುವ ಚಕ್ಷುರಿಂದ್ರಿಯದಿಂದ ಘಟಸಾಕ್ಷಾತ್ಕಾರವಾಗುವಂತೆ ಪರಶಿವ ಬ್ರಹ್ಮಾಂಶವಾಗದಿದ್ದರೂ ಶುದ್ಧಾತ್ಮನಿಂದ ಪರಶಿವ ಬ್ರಹ್ಮಸಾಕ್ಷಾತ್ಕಾರವಾಗುತ್ತಿರಲು ಆ ಶುದ್ಧಾತ್ಮನಿಗೆ ಸಾಕ್ಷಾತ್ಕಾರವಾಗುವುದರ ಸಲುವಾಗಿ ಪರಶಿವ ಬ್ರಹ್ಮಾಂಶವೆಂದು ಹೇಳುವುದು ಅಯುಕ್ತವಲ್ಲವೆ.

CC-0. Jangamwadi Math Collection. Digitized by eGangotri

ಸಮಾಧಾನ :—ಶುದ್ಧ ಜೀವನು ಪರಶಿವ ಬ್ರಹ್ಮಾಂಶನಾಗದಿದ್ದರೆ ಪರಶಿವ ಬ್ರಹ್ಮಕ್ಕೆ ಅತ್ಯಂತ ಭಿನ್ನವೇ ಆಗುವನು. ಚೈತ್ರನು ಮೈತ್ರನಿಗೆ ಅತ್ಯಂತ ಭಿನ್ನನಾಗಿರುವುದರಿಂದ "ಚೈತ್ರೋಽಹಂ" ನಾನು (ಚೈತ್ರನು) ಎಂದು ಮೈತ್ರನಿಗೂ "ಮೈತ್ರೋಽಹಂ" (ನಾನು ಮೈತ್ರನು) ಎಂದು ಚೈತ್ರನಿಗೂ ಸಾಕ್ಷಾತ್ಕಾರವಾಗದಿರುವಂತೆ "ವಿಶ್ವಾತ್ಮಕಃ ಶಿವೋಽಹಂ (ವಿಶ್ವರೂಪಿ ಶಿವನೇ ನಾನು) ಎಂದು ಜೀವನಿಗೆ ಸಾಕ್ಷಾತ್ಕಾರವಾಗದೆ ಹೋಗಬೇಕಾಗುವುದು. ಆದುದರಿಂದ ಶುದ್ಧ ಜೀವನು ಶಿವಾಂಶವೆಂದು ಹೇಳಬೇಕು. ಹೀಗೆ ಶಿವಾಂಶವೆಂದು ಹೇಳಿದರೆ ಪರಶಿವಬ್ರಹ್ಮಕ್ಕೆ ಅಭಿನ್ನವಾಗುವುದರಿಂದ ಆ ಶುದ್ಧ ಜೀವನಿಗೆ ಪರಶಿವ ಬ್ರಹ್ಮಸಾಕ್ಷಾತ್ಕಾರವು ಸಂಭವಿಸುತ್ತದೆ. ಆ ಶುದ್ಧಾತ್ಮನು ಪರಶಿವಬ್ರಹ್ಮಾಂಶವೆಂಬ ವಿಷಯವನ್ನು "ಯಥಾ ಸುದೀಪ್ತಾತ್ ಪಾವಕಾದ್ವಿಸ್ಫುಲಿಂಗಾಃ" ಎಂದು ಶ್ರುತಿಯೂ "ಅಂಶೋ ನಾನಾ ವ್ಯಪದೇಶಾತ್" ಎಂಬ ಸೂತ್ರವೂ "ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ" ಎಂದು ಭಗವದ್ಗೀತೆಯೂ "ಅನಾದ್ಯವಿದ್ಯಾ ಸಂಬಂಧಾತ್ತದಂಶೋ ಜೀವನಾಮಕಃ" ಎಂದು ಸಿದ್ಧಾಂತ ಶಿಖಾಮಣಿಯೂ "ಶಿವಾಂಶಾ ಬ್ರಹ್ಮವಿಷ್ಣ್ವಾದ್ಯಾ ಅಂಶೀ ದೇವಃ ಶಿವಃ ಸ್ಮೃತಃ" ಎಂದು ಕ್ರಿಯಾಸಾರವೂ ಘಂಟಾಘೋಷವಾಗಿ ಸಾರುತ್ತಿರುವುವು. ಈ ಶುದ್ಧಾತ್ಮನಿಗೆ ಮಾತ್ರ ಪರಶಿವ ಬ್ರಹ್ಮಾಭೇದವು ಸಂಭವಿಸುವುದಲ್ಲದೆ ಅಶುದ್ಧಾತ್ಮ (ಜೀವ) ನಿಗೆ ಸಂಭವಿಸುವುದಿಲ್ಲ.

ಎಲ್ಲಿಯವರೆಗೆ ಜೀವಭಾವವೆಂಬ ಮಲತ್ರಯವು ನಿವೃತ್ತಿಯಾಗುವುದಿಲ್ಲವೊ ; ಅಲ್ಲಿಯವರೆಗೆ ಶಿವತ್ವಪ್ರಾಪ್ತಿಯೇ ಇಲ್ಲ. ಮಾಯೆಯೆಂಬ ಕಾರಣ ಶರೀರವೊಂದೇ ಆಣವಮಲವು. ಈ ಮಾಯಾ ತತ್ವದ ಮುಂದಿನ ಪಂಚಕಂಚುಕವೇ ಸೂಕ್ಷ್ಮ ಶರೀರವೆಂಬ ಮಾಯೀಯ ಮಲವು. ಪ್ರಕೃತಿ ತತ್ವದಿಂದ ಪೃಥವೀತತ್ವದವರೆಗಿನ ೨೪ ತತ್ವಗಳಿಂದ ಕೂಡಿದ ಸ್ಥೂಲಶರೀರವೇ ಕಾರ್ಮಿಕಮಲವು. ಈ ಮಲತ್ರಯವೆಂಬ ಜೀವಭಾವವು ವೇಧಾ, ಮನು, ಕ್ರಿಯಾ ದೀಕ್ಷೆಗಳಿಂದ ನಿವೃತ್ತಿಯನ್ನು ಹೊಂದಲು ಆಗ ಜೀವನು ಶುದ್ಧನಾಗುವನು. ಇಂತಹ ಶುದ್ಧಾತ್ಮನಿಗೆ ಮಾತ್ರ ಶಿವಾನುಗ್ರಹ ಉಂಟಾಗಿ ಶಿವಸಾಕ್ಷಾತ್ಕಾರ (ಶಿವತ್ವಪ್ರಾಪ್ತಿ) ವಾಗುವುದಲ್ಲದೆ ಅಶುದ್ಧ ಜೀವನಿಗೆ ಆಗುವುದಿಲ್ಲವೆಂಬ ತಾತ್ಪರ್ಯವನ್ನು "ಶುದ್ಧ ಜೀವಸ್ಯೈವ" ಎಂಬಲ್ಲಿ "ಏವ" ಕಾರಾರ್ಥದಿಂದ ತೋರಿಸುತ್ತಾರೆ. ಭಾಷ್ಯಕಾರರ ಈ ತಾತ್ಪರ್ಯವು "ಅತಪ್ತತನೂರ್ನತದಾಮೋಽಶ್ನುತೇ" ಎಂಬ ಋಗ್ವೇದ ಮಂತ್ರ ಸಮ್ಮತವೂ ಆಗಿದೆ. ಈ ಗುರುಕೃತ ಲಿಂಗಧಾರಣ ದೀಕ್ಷೆಯಿಲ್ಲದಿದ್ದರೆ ಶಿವತ್ವಪ್ರಾಪ್ತಿರೂಪ ಮೋಕ್ಷವೂ ಇಲ್ಲವೆಂದು ಈ ಋಗ್ವೇದ ಮಂತ್ರವು ವ್ಯತಿರೇಕ ಮುಖದಿಂದ ಆ ದೀಕ್ಷೆಗೆ ಮೋಕ್ಷ ಕಾರಣತ್ವವನ್ನು ಹೇಳುತ್ತ ದಲ್ಲದೆ ; "ಅಮೃತಸ್ಯ ದೇವ ಧಾರಣೋ ಭೂಯಾಸಂ" ಎಂಬ ಮಂತ್ರವು ಅನ್ವಯ ಮುಖದಿಂದ ಮೋಕ್ಷ ಕಾರಣತ್ವವನ್ನು ಹೇಳುತ್ತದೆ. ಆದುದರಿಂದಲೇ ಭಾಷ್ಯಕಾರರು

CC-0. Jangamwadi Math Collection. Digitized by eGangotri

ದೀಕ್ಷಾತ್ರಯದಿಂದ ಶುದ್ಧನಾಗದ ಜೀವನಿಗೆ ಶಿವತ್ವ ಪ್ರಾಪ್ತಿಯಿಲ್ಲವೆಂದು ಅಭಿಪ್ರಾಯ ಪಡುತ್ತಾರೆ.

ಶಂಕಾ :— ಆಣವಾದಿ ಮಲತ್ರಯವು ಸಿದ್ಧವಾದರಲ್ಲವೆ ಅದರ ನಿವೃತ್ತಿಯಾಗಬೇಕು. ಆಗ ದೀಕ್ಷಾತ್ರಯದಿಂದ ಜೀವನು ಶುದ್ಧನಾಗಬೇಕು ; ಮಲತ್ರಯವು ಜಡವಲ್ಲವೆ ; ಈ ಜಡವಾದ ಮಲತ್ರಯವು ಎಲ್ಲಿಂದ ಹುಟ್ಟಿತು. ಪರಶಿವಬ್ರಹ್ಮದಿಂದೆಂದು ಹೇಳುವುದು ಯಕ್ತವಲ್ಲ. ಏಕೆಂದರೆ ಪರಶಿವ ಬ್ರಹ್ಮವು ಚೇತನ (ಅಜಡ) ವಾಗಿರುವುದಷ್ಟೆ !

ಸಮಾಧಾನ:—ಪರಶಿವ ಬ್ರಹ್ಮವು ಚೇತನವಾಗಿದ್ದರೂ ಆದರಲ್ಲಿ ವಿಚಿತ್ರ ಶಕ್ತಿಯಿರುವುದರಿಂದ ಆದರಿಂದ ಜಡವಾದ ಮಲತ್ರಯವು (ಪ್ರಪಂಚವು) ಆವಿರ್ಭವಿಸುವುದು. ಚೇತನ ಪುರುಷನಿಂದ ಅಚೇತನ (ಜಡ) ಲೋಮ (ಕೂದಲು) ನಖದಂತಾದಿಗಳು ಹುಟ್ಟುವುದು ಲೋಕಾನುಭವ ಸಿದ್ಧವಾಗಿದೆಯಲ್ಲವೆ ; ಈ ಅಭಿಪ್ರಾಯವನ್ನೇ ಶ್ರೀ ವ್ಯಾಸಮಹರ್ಷಿಗಳು "ದೃಶ್ಯತೇತು" ||೬|| ಎಂಬ ಸೂತ್ರದಿಂದ ತೋರಿಸಿರುವರು. ಸುವರ್ಣದಲ್ಲಿ ಕಾಳಿಮೆ (ಕಪ್ಪು) ಯು ಆವಿರ್ಭವಿಸುವಂತೆ ಶುದ್ಧಾದ್ವಪ್ರವಿಷ್ಟವಾದ ಶುದ್ಧ ವಿದ್ಯೆಯಿಂದ ಆಣವ ಮಲವೆಂಬ ಮಾಯಾರೂಪ ಕಾರಣ ಶರೀರವೂ ಅದರಿಂದ ಮಾಯೀಯ ಮಲವೆಂಬ ಸೂಕ್ಷ್ಮ ಶರೀರವೂ ಅದರಿಂದ ಕಾರ್ಮಿಕಮಲವೆಂಬ ಸ್ಥೂಲ ಶರೀರವೂ ಆವಿರ್ಭವಿಸಿ ಪುರುಷ ಶುದ್ಧಾತ್ಮರೂಪವಾದಶಿವಾಂಶಕ್ಕೆ ಆವರಿಸಿ ಅವನಿಗೆ ಬಂಧವನ್ನುಂಟುಮಾಡಿ ಅವನ ಶುದ್ಧ ಶಿವಸ್ವರೂಪವನ್ನೇ ವಿಸ್ಮೃತಿಗೊಳಿಸಿ ಬಿಡುವವು. ಕರುಣಾಶಾಲಿಯಾದ ಗುರುಮೂರ್ತಿಯು ಆ ಮಲಗಳನ್ನು ದೀಕ್ಷಾತ್ರಯದಿಂದ ಲಯಗೊಳಿಸಿದಮೇಲೆ ಜೀವನು ಶುದ್ಧಾತ್ಮನಾಗಿ ಶಿವಾಂಶನೆನಿಸುವನು. ಇವನು ಪರಶಿವ ಬ್ರಹ್ಮದಂತೆ ಮಲತ್ರಯ ರಹಿತನಾದುದರಿಂದಲೇ ಇವನಿಗೆ ಓವಾಭೇದವು ಸಿದ್ಧಿಸುವುದು. ಈ ವಿಷಯದಲ್ಲಿ "ಆತ್ಮಾಯಂ ಕೇವಲಃ ಶುದ್ಧಃ ಶಿವಸ್ಯಾಂಶಃ ಸದಾಮಲಃ" ಇಂತೆಂಬ ಅನುಭವ ಸೂತ್ರವು ಪ್ರಮಾಣವಾಗಿದೆ. ಈ ಶುದ್ಧಾತ್ಮನು ಮಲಾವೃತನಾಗಲು ಸಂಸಾರಿ (ಜೀವ) ಯೆನಿಸುವನೆಂಬಲ್ಲಿ "ಚಿದ್ವಚ್ಛಕ್ತಿ ಸಂಕೋಚಾನ್ಮಲಾವೃತಃ ಸಂಸಾರೀ" ಎಂಬ ಶಕ್ತಿಸೂತ್ರವು ಪ್ರಮಾಣವಾಗಿದೆ. ಇನ್ನು ಕಾರಣ (ಪರ) ಶರೀರವು ಆಣವಮಲವೆನ್ನುವಲ್ಲಿಯೂ ಸೂಕ್ಷ್ಮ ಶರೀರವು ಮಾಯೀಯ ಮಲವೆನ್ನುವಲ್ಲಿಯೂ ಸ್ಥೂಲಶರೀರವು ಕಾರ್ಮಿಕಮಲವೆನ್ನುವಲ್ಲಿಯೂ "ಪರಮಾವರಣಂ ಮಲ ಇಹ ಸೂಕ್ಷ್ಮಂ ಮಾಯಾದಿ ಕಂಚುಕಂ ಸ್ಥೂಲಂ। ಬಾಹ್ಯಂ ವಿಗ್ರಹ ರೂಪಂ ಕೋಶತ್ರಯವೇಷ್ಟಿತೋಹ್ಯಾತ್ಮಾ" ಎಂಬ ಪರಮಾರ್ಥಸಾರ ಶ್ಲೋಕವು ಪ್ರಮಾಣವಾಗಿದೆ.

ಈ ರೀತಿಯಾಗಿರುವ ಮಲತ್ರಯವು ತೆಂಗಿನಕಾಯೊಳಗಿರುವ ನೀರಿಗೆ ನದ್ಯಾದಿ ಜಲಗಳಲ್ಲಿ ಸಾಮರಸ್ಯವನ್ನುಂಟುಮಾಡದಂತೆ ಜೀವಾತ್ಮನಿಗೆ ಶಿವನಲ್ಲಿ ಸಾಮರಸ್ಯ

CC-0. Jangamwadi Math Collection. Digitized by eGangotri

ನ್ನುಂಟುಮಾಡಗೊಡುವುದಿಲ್ಲ. ಕುಶಲನು ಆ ನೀರಿಗೆ ಆಚ್ಛಾದಕವಾದ ಮೂರು ದರು (ಕೊಬರಿ, ಚಿಪ್ಪು, ಇವುಗಳ ಮೇಲಿರುವ ದಪ್ಪಸಿಪ್ಪೆ) ಗಳನ್ನು ಆಯುಧ ದಿಂದ ಬೇರ್ಪಡಿಸಲು ಆ ನೀರು ನೀರಿನಲ್ಲಿ ಬೆರೆತು ಏಕಾಕಾರವಾಗುವಗಿತೆ, "ಗುರು ಉಪಾಯಃ" "ಆಚಾರ್ಯಾದ್ಧ್ಯೈವ ಖಲ್ವಿಯಂ ವಿದ್ಯಾ ವಿದಿತಾ ಸಾದಿಷ್ಠಂ ಪ್ರಾಪತ್" ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮ ನಿಷ್ಠಂ" ಇತ್ಯಾದಿ ಶಿವಸೂತ್ರ ಶ್ರುತ್ಯಾದಿಗಳಿಂದ ಪ್ರತಿಪಾದಿಸಲ್ಪಟ್ಟ ಗುರು (ಆಚಾರ್ಯ) ಯ ದೀಕ್ಷೆಯೆಂಬ ಆಯುಧದಿಂದ ಮಲತ್ರಯವನ್ನು ಕತ್ತರಿಸಿ ಷಟ್‌ಸ್ಥಲ ಬ್ರಹ್ಮೋಪದೇಶವಂ ಮಾಡಲು ಉತ್ತಮಾಧಿಕಾರಿಯು ಆಗಲೇ ಶಿವಸಾಕ್ಷಾತ್ಕಾರವನ್ನು ಪಡೆದು ಮುಕ್ತನಾಗುವನು. ಮಧ್ಯಮಾಧಮಾಧಿಕಾರಿಗಳು ಆ ಗುರುವಾಕ್ಯದಂತೆ ಆ ಷಡಂಗಯೋಗಾಭ್ಯಾಸ ದಾರ್ಢ್ಯದಿಂದ ಶಿವಸಾಯುಜ್ಯ ಮುಕ್ತಿ (ಫಲರೂಪಸಾಮರಸ್ಯವ) ಯನ್ನು ಹೊಂದುವರು.

ಅಂತು "ಗುರುಕಾರ್ಯಾಣಿ ಸರ್ವಾಣಿ ದೀಕ್ಷಾದೀನಿ" ಎಂಬ ಕ್ರಿಯಾಸಾರೋಕ್ತಿಯಂತೆ ಮುಖ್ಯ ಉಪಾಯ ಭೂತನಾದ ಗುರುವಿನಿಂದಲೇ ದೀಕ್ಷೆಯನ್ನು ಪಡೆದು ಶುದ್ಧಾತ್ಮನಾಗಿ ಶಿವಸಾಕ್ಷಾತ್ಕಾರರೂಪವಾದ ಮುಕ್ತಿಯನ್ನು ಪಡೆಯಬೇಕು. ಗುರುವಿಲ್ಲದೆ ಜೀವನಿಗೆ ದೀಕ್ಷೆಯಿಲ್ಲ. ದೀಕ್ಷೆಯಿಲ್ಲದೆ ಶುದ್ಧತೆಯಿಲ್ಲ. ಶುದ್ಧತೆಯಿಲ್ಲದೆ ಶಿವಾನುಗ್ರಹವಿಲ್ಲ, ಶಿವಾನುಗ್ರಹವಿಲ್ಲದೆ ಮುಕ್ತಿಯಿಲ್ಲವೆಂಬ ತಾತ್ಪರ್ಯವನ್ನು "ಗುರುದೀಕ್ಷಾಶುದ್ಧ ಜೀವಸ್ಯೈವ ಪರಮೇಶ್ವರಾನುಗ್ರಹಾತ್ ತತ್ಸಾಕ್ಷಾತ್ಕಾರ ಸಿದ್ಧೇಃ" ಎಂಬ ಸಂಕ್ತಿಯಿಂದ ಭಾಷ್ಯಕಾರರು ತೋರಿಸಿದ್ದಾರೆ. ಶುದ್ಧ ಶಿವಾಂಶರೂಪನಾದ ಆತ್ಮನಿಗೆ ಮಾತ್ರ ಪರಮೇಶ್ವರನ ಅನುಗ್ರಹವಿಲ್ಲದೆ ಮತ್ತೊಬ್ಬನಿಗೆ ಅಲ್ಲವೆಂದು ಭಾಷ್ಯಕಾರರು ಹೇಳುವುದರಿಂದ ಲಿಂಗಧಾರಣ ದೀಕ್ಷಾರಹಿತರಿಗೆ ಅನುಗ್ರಹವಿಲ್ಲೆಂದು ಸ್ಪಷ್ಟವಾಗುವುದು. ಪರಮೇಶ್ವರಾನುಗ್ರಹಕ್ಕಾಗಿ ಧ್ಯಾನಾದಿಯುಕ್ತನಾದ ಶಿವಾರ್ಚನೆಯನ್ನು ಮಾಡಬೇಕು. ಆಮೇಲೆ ಶಿವಧ್ಯಾನಾಭ್ಯಾಸದಿಂದ ಧ್ಯಾನಾತ್ಮಕಜ್ಞಾನವೇ ದೃಢವಾಗಿ ಸಾಕ್ಷಾತ್ಕಾರ (ವಿಶ್ವಾತ್ಮಕ ಶಿವೋಽಹಂ) ಎಂದು ಪರಾಹಂತಾಮಯ ಸಾಕ್ಷಾತ್ಕಾರವೆನಿಸುವುದು. ಆಮೇಲೆ "ಆಹಾರ ಶುದ್ಧೌ ಸತ್ವ ಶುದ್ಧಿಃ ಸತ್ವ ಶುದ್ಧೌ ಧ್ರುವಾ ಸ್ಮೃತಿಃ ಸ್ಮೃತಿ ಲಂಭೇ ಸರ್ವಗ್ರಂಥಿನಾಂ ವಿಪ್ರಮೋಕ್ಷಃ" "ಭಿದ್ಯತೇ ಹೃದಯ ಗ್ರಂಥಿರ್ಛಿದ್ಯಂತೇ ಸರ್ವಸಂಶಯಾಃ। ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ" ಇತ್ಯಾದಿ ಶ್ರುತಿಗಳಂತೆ ಚತುರ್ಮುಖ, ವಿಷ್ಣು, ರುದ್ರಾದಿ ಗ್ರಂಥಿಗಳು ಭೇದಿಸಲ್ಪಟ್ಟು ಜೀವದಶೆಯಲ್ಲಿದ್ದ ಚಿತ್ತವು ಪರಾಹಂತಾಮಯ ಚಿಚ್ಛಕ್ತಿರೂಪವಾಗಲು "ಅಸ್ಮಿ, ಪ್ರಕಾಶೇ, ನಂದಾಮಿ" ಎಂದು ಸಚ್ಚಿದಾನಂದಾನುಭವರೂಪ ಸಾಕ್ಷಾತ್ಕಾರವಾಗುವುದು.

ಪರಶಿವಬ್ರಹ್ಮಕ್ಕೆ ಶಿವ ಸಮರಸನಾದ ಮುಕ್ತನು ಅಭಿನ್ನನಾಗಿರುವುದರಿಂದ ಅವನಂತೆ ಇವನಿಗೆ ಅಂತಹ ಸಾಕ್ಷಾತ್ಕಾರವಾಗುವುದು. ಬ್ರಹ್ಮಕ್ಕೆ ತನ್ನ ಸಚ್ಚಿದಾನಂದ

CC-0. Jangamwadi Math Collection. Digitized by eGangotri

ಸ್ವರೂಪಜ್ಞಾನವೇ ಇಲ್ಲವೆನ್ನುವುದಾದರೆ ಅದು ಸ್ವಸ್ವರೂಪಜ್ಞಾನವಿಲ್ಲದ ಸ್ಫಟಿಕಾದಿ ಶಿಲೆಯಂತೆ ಜಡವೆನಿಸಬೇಕಾಗುವುದು. ಹಾಗೂ ಅಂಧನ ರೂಪ ಲಾವಣ್ಯಾದಿಗಳು ಅವನಿಗೆ ವ್ಯರ್ಥಗಳಾಗುವಂತೆ ಪರಶಿವಬ್ರಹ್ಮದ ಸಚ್ಚಿದಾನಂದ ಸ್ವರೂಪಗಳು ವ್ಯರ್ಥಗಳೂ ಆಗಬೇಕಾಗುವುದಾದುದರಿಂದ ಪರಶಿವಬ್ರಹ್ಮಕ್ಕೆ ತನ್ನ ಸ್ವರೂಪಾನುಭವ ರೂಪ ಸಾಕ್ಷಾತ್ಕಾರವನ್ನು ಒಪ್ಪಲೇಬೇಕು. ಹೀಗೆ ಒಪ್ಪಿದರೆ ಮುಕ್ತನಿಗೂ ಪರಶಿವಾಭೇದವಿರುವುದರಿಂದ ಅವನಂತೆ ಇವನಿಗೂ ಸ್ವರೂಪ ಸಾಕ್ಷಾತ್ಕಾರವನ್ನು ಅಂಗೀಕರಿಸಲೇಬೇಕು. ಪರಶಿವಬ್ರಹ್ಮವು ಸ್ವೇತರಾಮೇಯವಾಗಿದ್ದರೂ ಸ್ವಾಮೇಯವಾಗಿಲ್ಲವಷ್ಟೆ. "ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ। ತಥಾ ವಿದ್ವಾನ್‌ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷ ಮುಪೈತಿ ದಿವ್ಯಂ" ಇತ್ಯಾದಿ ಶ್ರುತಿಗಳಂತೆ ಪರಶಿವಬ್ರಹ್ಮದಲ್ಲಿ ಸಮರಸನಾದ ಆತ್ಮನು ಪರಶಿವ ಬ್ರಹ್ಮೇತರನಲ್ಲವಾದ್ದರಿಂದ ಪರಶಿವಬ್ರಹ್ಮ ಸಾಕ್ಷಾತ್ಕಾರವಾಗುತ್ತದೆಂಬುದನ್ನು ತೋರಿಸುವುದಕ್ಕಾಗಿ "ತತ್ಸಾಕ್ಷಾತ್ಕಾರ ಸಿದ್ಧೇಃ" ಎಂದು ಭಾಷ್ಯಕಾರರು ಹೇಳುತ್ತಾರೆ.

ಗುರುಕೃತ ಶಿವದೀಕ್ಷಾಶುದ್ಧನಾದ ಜೀವನಿಗೆ ಪರಶಿವಸಾಕ್ಷಾತ್ಕಾರಸಿದ್ಧಿ

ಉಪಾಸನಾಜ್ಞಾನದಿಂದ ಆತ್ಮನಿಗೆ ಬ್ರಹ್ಮಸಾಕ್ಷಾತ್ಕಾರವನ್ನು ಒಪ್ಪದಿದ್ದರೆ "ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ" (ಶ್ವೇ. ೪–೧೪) "ಬ್ರಹ್ಮವಿದ್ಬ್ರಹ್ಮೈವ ಭವತಿ" (ಮುಂ. ೩–೨–೯) "ಈಶಂ ತಂ ಜ್ಞಾತ್ವಾ ಅಮೃತಾಭವಂತಿ" "ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ" (ಮುಂ. ೩–೧–೯) ಇತ್ಯಾದಿ ಶ್ರುತಿ ಶತಭಂಗ ಪ್ರಸಂಗವು ಬರುವುದು. ಇದಲ್ಲದೆ ಲೋಕದಲ್ಲಿ ಗುರುಶಿಷ್ಯ ಬೋಧ ಪ್ರಚಾರವೂ ವ್ಯರ್ಥವಾಗಬೇಕು. ಶಿಷ್ಯರಿಗೆ ಗುರುವು ಮಾಡತಕ್ಕ ಬ್ರಹ್ಮೋಪದೇಶವು ಬ್ರಹ್ಮ ಸಾಕ್ಷಾತ್ಕಾರಕ್ಕಾಗಿ ಅಲ್ಲವೆ. ಬ್ರಹ್ಮಸಾಕ್ಷಾತ್ಕಾರವೇ ಅಸಿದ್ಧವಾಗಿರಲು ಗುರುಶಿಷ್ಯ ಬೋಧ ಪ್ರಚಾರದಿಂದ ಪ್ರಯೋಜನವೇನು? ಪ್ರಯೋಜನವಿಲ್ಲ. ಆದುದರಿಂದ ತೇಜಃ ಪುಂಜರೂಪವಾದ ಸೂರ್ಯನ ಅಂಶರೂಪ ಚಕ್ಷುರಿಂದ್ರಿಯಕ್ಕೆ ಸೂರ್ಯನ ಸಾಕ್ಷಾತ್ಕಾರವಾಗುವಂತೆ ಪರಶಿವ ಬ್ರಹ್ಮದ ಅಂಶರೂಪವಾದ ಶುದ್ಧ ಆತ್ಮನಿಗೆ ಪರಶಿವಬ್ರಹ್ಮದ ಸಾಕ್ಷಾತ್ಕಾರವಾಗುತ್ತದೆಂದು ಹೇಳುವುದೇ ಸರ್ವ ವೇದಾಂತ ತಾತ್ಪರ್ಯವೆಂಬುದು ಸಿದ್ಧಾಂತವು.

ಸಮನ್ವಯಾಧಿಕರಣವು ಮುಗಿದುದು

ಆಸ್ಥಾನ ವಿದ್ವಾನ್ ಧರ್ಮರತ್ನಂ ಉಮಚಗಿ ಮಳೆ ಮಠಾಧ್ಯಕ್ಷ,
ವೇ॥ ಬ್ರಂ॥ ಶ್ರೀ ಶಂಕರಶಾಸ್ತ್ರಿ ವಿರಚಿತ ಶ್ರೀಕರ ಭಾಷ್ಯ
ಭಾವಪ್ರದೀಪಿಕೆಯಲ್ಲಿ ಚತುಸ್ಸೂತ್ರಿಯು
ಸಮಾಪ್ತವಾದುದು.

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI
Acc No. 4896

CC-0. Jangamwadi Math Collection. Digitized by eGangotri

SRI JAGADGURU VISHWARADHYA
JNANA SIMHASAN JNANAMANDIR
LIBRARY,
Jangamwadi Math, VARANASI,
Acc No. ....
4896

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಶ್ರೀ ಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನ ಜ್ಞಾನಗುರು
ವಿದ್ಯಾಪೀಠದ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ ಗ್ರಂಥಗಳು

೧. ಶಿವಾನುಭವ

೨. ಪಾತಂಜಲ ಯೋಗಸೂತ್ರ

೩. ಶಿಷ್ಯ ಸಂತಾಪಹರಣ

೪. ಬ್ರಹ್ಮೋಪದೇಶವಿಧಿ

೫–೮. ಈಶ, ಕೇನ, ಮುಂಡಕ ಮತ್ತು
ಸಿದ್ಧಾಂತ ಶಿಖೋಪನಿಷತ್ತುಗಳು
(ವೀರಶೈವಭಾಷ್ಯ–ಉಮಚಗಿ ಶಂಕರಶಾಸ್ತ್ರಿ ವಿರಚಿತ)

೯. ಸಿದ್ಧಾಂತ ಸುಧಾಕರ

೧೦. ಸದ್ಧರ್ಮಜ್ಯೋತಿ

೧೧. ಶ್ರೀಕರ ಭಾಷ್ಯ (ಚತುಸ್ಸೂತ್ರೀ)

೧೨. ಆದಿರೇಣುಕ ಚರಿತೆ

ಈ ಗ್ರಂಥಗಳು ದೊರೆಯುವ ಸ್ಥಳ :–

ಶ್ರೀ ಜಗದ್ಗುರು ಸದ್ಧರ್ಮ ಸಿಂಹಾಸನಪೀಠ
ಉಜ್ಜಯಿನಿ ಪೋಸ್ಟು
ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ

CC-0. Jangamwadi Math Collection. Digitized by eGangotri